ಕರ್ನಾಟಕ ಸರ್ಕಾರ

ವಿಜಯನಗರ ಅಧ್ಯಯನ

ಸಂಪುಟ-೧೪

ವಿಜಯನಗರ ವಿಚಾರ ಸಂಕಿರಣ ೨೦೦೮ರಲ್ಲಿ ಮಂಡಿಸಿದ ಪ್ರಬಂಧಗಳು



ಸಂಪಾದಕರು

ಡಾ. ಆರ್. ಗೋಪಾಲ್

ಬಿ.ಎಂ. ಚಿಕ್ಕಮಾರೇಗೌಡ

ಟಿ.ಎಸ್. ಗಂಗಾಧರ

ವಿಜಯನಗರ ಅಧ್ಯಯನ

ಸಂಪುಟ - ೧೪

ಹಂಪಿ ಉತ್ಸವ ೨೦೦೮ರಲ್ಲಿ ಮಂಡಿಸಿದ ಪ್ರಬಂಧಗಳು

ಸಂಪಾದಕರು

ಡಾ.ಆರ್. ಗೋಪಾಲ್

ಬಿ. ಎಂ. ಚಿಕ್ಕಮಾರೇಗೌಡ

ಟಿ. ಎಸ್. ಗಂಗಾಧರ

ಕರ್ನಾಟಕ ಸರ್ಕಾರ

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ

ಮೈಸೂರು

ವಿಜಯನಗರ ಅಧ್ಯಯನ
ಸಂಪುಟ - ೧೪

ಪ್ರಕಾಶಕರು
ನಿರ್ದೇಶಕರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ
ವಸ್ತು ಪ್ರದರ್ಶನ ಆವರಣ, ಮೈಸೂರು - ೫೭೦ ೦೧೦
ದೂರವಾಣಿ : ೦೮೨೧ - ೨೪೨೪೬೭೩ / ೪

ಮೊದಲ ಮುದ್ರಣ : ೨೦೧೦

ಪುಟಗಳು : ೪೪೦

ಬೆಲೆ : ರೂ. ೧೩೦-೦೦

ಅಕ್ಷರ ಜೋಡಣೆ ಮತ್ತು ಮುದ್ರಣ
ಗಣೇಶ್ ಎಂಟರ್‌ಪ್ರೈಸಸ್, ಮೈಸೂರು - ೫೭೦ ೦೦೪

VIJAYANAGARA ADHYAYANA
Vol - 14

Publisher
Director
Directorate of Archaeology and Museums
Exhibition Complex, Mysore - 570 010
Ph: 0821 - 2424673 / 4

First Edition : 2010

Pages :440

Price: Rs.130-00

DTP & Printed at
Ganesh Enterprises
Mysore-570 004

ಬಿ.ಆರ್.ಜಯರಾಮರಾಜೇ ಅರಸ್
ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ಕೊಠಡಿ ಸಂಖ್ಯೆ 2, ನೆಲ ಮಹಡಿ
ವಿಕಾಸಸೌಧ,ಬೆಂಗಳೂರು-560001
ಕರ್ನಾಟಕ, ಭಾರತ
✆:080-22205781,22034002
ಫ್ಯಾಕ್ಸ್:080-22353105
ಇ-ಮೇಲ್:secy_kc@karnataka.gov.in

ಮುನ್ನುಡಿ

ವಿಜಯನಗರ ಈ ವರ್ಷ ಎಲ್ಲಾ ಕನ್ನಡಿಗರ ಬಾಯಲ್ಲೂ ಇರುವುದು ಸಂತೋಷದ ಸಂಗತಿ. ವಿದ್ವಾಂಸರಾಗಲೀ, ಸಾಮಾನ್ಯ ಜನಗಳಾಗಲೀ, ವಿದ್ಯಾರ್ಥಿಗಳಾಗಲೀ ಎಲ್ಲರಿಗೂ ವಿಜಯನಗರ ಒಂದು ಮಹಾಮಂತ್ರವಾಗಿ ಭಾಸವಾಗುತ್ತಿದೆ. ಇದಕ್ಕೆ ವಿಜಯನಗರದ ಅತ್ಯಂತ ಶ್ರೇಷ್ಠ ಚಕ್ರವರ್ತಿ ಶ್ರೀ ಕೃಷ್ಣದೇವರಾಯನೇ ಮುಖ್ಯ ಕಾರಣ. ಏಕೆಂದರೆ ಅವನು ಪಟ್ಟಾಭಿಷಿಕ್ತನಾಗಿ ಐದುನೂರು ವರ್ಷಗಳು ಸಂದಿವೆ. ನಿಜವಾಗಿಯೂ ಇದೊಂದು ಸಂಭ್ರಮದ ಸನ್ನಿವೇಶವೇ ಸರಿ. ಆದುದರಿಂದ ಕರ್ನಾಟಕದ ಎಲ್ಲೆಡೆ ಇದನ್ನು ಒಂದು ಉತ್ಸವವಾಗಿ ಹಾಗೂ ಹಬ್ಬವಾಗಿ ಆಚರಿಸಲಾಗುತ್ತಿದೆ. ಇದೊಂದು ಅತಿಶಯವೇ ಸರಿ.

ನಮ್ಮ ಕರ್ನಾಟಕ ಸರ್ಕಾರ ಇತಿಹಾಸ ಮತ್ತು ಸಂಸ್ಕೃತಿಗಳಿಗೆ ವಿಶೇಷ ಪ್ರೋತ್ಸಾಹ ನೀಡುತ್ತಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಇತ್ತೀಚಿನ ವರ್ಷಗಳಲ್ಲಿ ಕನ್ನಡ ಸಂಸ್ಕೃತಿಯನ್ನು ಬಿಂಬಿಸುವ ಹಾಗೂ ಇದನ್ನು ಜನಸಾಮಾನ್ಯರಲ್ಲಿ ಹಂಚಿಕೊಳ್ಳುವ ನೂರಾರು ಕಾರ್ಯಕ್ರಮಗಳನ್ನು ಸರ್ಕಾರ ಹಮ್ಮಿಕೊಂಡಿದೆ. ಇದಕ್ಕೆ ಜನ ಸಾಮಾನ್ಯರ ಹಾಗೂ ಪರಿಣಿತರ ಪೂರ್ಣ ಸಹಕಾರ ಅಗತ್ಯವೆಂಬುದನ್ನು ನಾನು ಒತ್ತಿ ಹೇಳಲು ಇಷ್ಟಪಡುತ್ತೇನೆ.

ಈ ದೃಷ್ಟಿಯಿಂದ ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಕಳೆದ ಹದಿನೈದು ವರ್ಷಗಳಿಂದ ಹಂಪಿಯ ಉತ್ಸವದ ಸಮಯದಲ್ಲಿ ಒಂದು ವಿಚಾರ ಸಂಕಿರಣವನ್ನು ಏರ್ಪಡಿಸುತ್ತಿದೆ. ದೇಶದ ವಿದ್ವಾಂಸರು ಇದರಲ್ಲಿ ಭಾಗವಹಿಸಿ ತಾವು ವಿಜಯನಗರದ ವಿವಿಧ ವಿಷಯಗಳನ್ನು ಕುರಿತು ನಡೆಸಿರುವ ಸಂಶೋಧನೆಗಳನ್ನು ನಮ್ಮ ಮುಂದೆ ಮಂಡಿಸಿ ವಿಜಯನಗರ ಸಾಮ್ರಾಜ್ಯದ ಸಂಸ್ಕೃತಿಯ ವಿವಿಧ ಮಜಲುಗಳನ್ನು ಶ್ರೀಮಂತಗೊಳಿಸುತ್ತಿರುವುದು ಇನ್ನೊಂದು ವೈಶಿಷ್ಟ್ಯ. ಈ ಎಲ್ಲಾ ಸಂಶೋಧನಾ ಪ್ರಬಂಧಗಳನ್ನು ಸಂಪಾದಿಸಿ ಶೀಘ್ರದಲ್ಲಿ ವಿಜಯನಗರ ಅಧ್ಯಯನ ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಿಸುತ್ತಿರುವುದು ಒಂದು ಹೆಚ್ಚಳವೇ ಸರಿ.

ಸುಂದರವಾಗಿ ಮುದ್ರಿತವಾಗಿರುವ ಈ ಸಂಪುಟದ ಪುಟಗಳನ್ನು ತಿರುವಿ ಹಾಕಿದರೆ ಬಹುಮುಖ ಪ್ರತಿಭೆಯ ವಿಜಯನಗರದ ಇತಿಹಾಸ ಮತ್ತು ಸಂಸ್ಕೃತಿ ನಮ್ಮ ಕಣ್ಣ ಮುಂದೆ ಹಾದುಹೋಗುತ್ತದೆ.ಕೇವಲ ರಾಜಕೀಯ ಇತಿಹಾಸಕ್ಕೆ ಪ್ರಾಮುಖ್ಯ ನೀಡದೆ, ಆ ಕಾಲದ ಶಾಸನ, ವಾಸ್ತುಶಿಲ್ಪ, ಧರ್ಮ, ಆಡಳಿತ, ನಾಣ್ಯಗಳು, ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿ ಮುಂತಾದ ಎಲ್ಲಾ ಸಾಂಸ್ಕೃತಿಕ ವಿಷಯಗಳಿಗೂ ಪ್ರಾತಿನಿಧ್ಯ ನೀಡಿರುವುದು ಸಂತೋಷದ ಸಂಗತಿ, ಇದರಿಂದಾಗಿ ಹತ್ತಾರು ಹೊಸ ವಿಷಯಗಳನ್ನು ವಿದ್ವಾಂಸರು ನಮ್ಮ ಮುಂದೆ ಪ್ರಸ್ತುತ ಪಡಿಸಿದ್ದಾರೆ. ಕರ್ನಾಟಕ ಸಂಸ್ಕೃತಿಯಲ್ಲಿ ಅಸಕ್ತಿ ವಹಿಸಿ, ಇದರ ವಿಷಯದಲ್ಲಿ ಸಂಶೋಧನೆ ನಡೆಸುತ್ತಿರುವ ಈ ಎಲ್ಲ ವಿದ್ವಾಂಸರೂ ಅಭಿನಂದನಾರ್ಹರು.

ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ನಿರ್ದೇಶಕರಾದ ಡಾ. ಆರ್.ಗೋಪಾಲ್ ಅವರು ಈ ಎಲ್ಲಾ ಪ್ರಬಂಧಗಳನ್ನು ಸಂಪಾದಿಸಿ ಸುಂದರವಾಗಿ ಪ್ರಕಟಿಸಿದ್ದಾರೆ. ಅವರಿಗೆ ಸಹಾಯ ಹಸ್ತವನ್ನು ಚಾಚುತ್ತಿರುವ ಅವರ ಎಲ್ಲಾ ಅಧಿಕಾರಿವರ್ಗದವರೂ ಹಾಗೂ ಇತರ ಸಿಬ್ಬಂದಿ ವರ್ಗದವರೂ ಅಭಿನಂದನಾರ್ಹರು. ವಿಜಯನಗರವನ್ನು ಕುರಿತಾದ ವಿಚಾರ ಸಂಕಿರಣ ಹಾಗೂ ವಿಜಯನಗರ ಅಧ್ಯಯನ ಮಾಲಿಕೆ, ಇದೇ ರೀತಿ ಮುಂದುವರಿದುಕೊಂಡು ಹೋಗಲಿ ಎಂದು ನಾನು ಹಾರೈಸುತ್ತೇನೆ. ಪ್ರಸ್ತುತ ಸಂಪುಟವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾನು ಆಶಿಸುತ್ತೇನೆ.

(ಬಿ.ಆರ್.ಜಯರಾಮರಾಜೇ ಅರಸ್)
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ಪ್ರಸ್ತಾವನೆ

ವಿಜಯನಗರ ಸಾಮ್ರಾಜ್ಯದ ವಿಷಯದಲ್ಲಿ ಎಷ್ಟು ಚಿಂತಿಸಿದರೂ ಸಾಲದು; ಎಷ್ಟು ವರ್ಣಿಸಿದರೂ ಸಾಲದು; ಎಷ್ಟು ಬರೆದರೂ ಸಾಲದು. ಈ ಸಾಮ್ರಾಜ್ಯ ತನ್ನ ಸಾಧನೆಗಳಿಂದ ಇಡೀ ಜಾಗತಿಕ ಇತಿಹಾಸದಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. ಈ ಸಾಮ್ರಾಜ್ಯವನ್ನು ಸಂದರ್ಶಿಸಿದ ವಿದೇಶೀಯ ಯಾತ್ರಿಕರು ತಮ್ಮ ಬರವಣಿಗೆಗಳ ಮೂಲಕ ಮಧ್ಯಕಾಲೀನ ಯುಗದಲ್ಲಿ ಇದನ್ನು ಅಮರರಾಗಿಸಿದ್ದಾರೆ. ಒಟ್ಟಿನಲ್ಲಿ ಇದೊಂದು ಮರೆಯಲಾಗದ ಸಾಮ್ರಾಜ್ಯ. ಕನ್ನಡಿಗರಿಗಂತೂ ಇದೊಂದು ಅಭೂತ ಪೂರ್ವ ಸಾಮ್ರಾಜ್ಯ.

ಇದರ ಘನತೆಯನ್ನು ಅರಿತಿರುವ ನಮ್ಮ ಕರ್ನಾಟಕ ಸರ್ಕಾರ ಪ್ರತಿವರ್ಷವೂ ಹಂಪಿ ಉತ್ಸವವನ್ನು ಅದ್ದೂರಿಯಾಗಿ ಆಚರಿಸಿಕೊಂಡು ಬರುತ್ತಿರುವುದು ಶ್ಲಾಘನೀಯ ಕಾರ್ಯವೇ ಸರಿ. ಈ ವರ್ಷ ಹಂಪಿಯಲ್ಲಿ ಇನ್ನೊಂದು ಸಂಭ್ರಮ : ವಿಜಯನಗರ ಚಕ್ರವರ್ತಿ ಶ್ರೀ ಕೃಷ್ಣದೇವರಾಯನು ಪಟ್ಟಾಭಿಷಿಕ್ತನಾಗಿ ಐದುನೂರು ವರ್ಷಗಳು ಸಂದಿರುವುದು ಇನ್ನೊಂದು ವಿಶೇಷ. ಹಂಪಿ ಉತ್ಸವದ ಸಮಯದಲ್ಲಿ ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಈ ಸಮ್ರಾಜ್ಯವನ್ನು ಕುರಿತಾದ ಒಂದು ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳುತ್ತಿರುವುದು ಎಲ್ಲರಿಗೂ ತಿಳಿದಿರುವ ಸಂಗತಿಯೇ ಆಗಿದೆ. ಇದಕ್ಕನುಗುಣವಾಗಿ ದಿನಾಂಕ 2008 ರ ನವೆಂಬರ್ 4 ಮತ್ತು 5 ರಂದು ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು.

ಈ ವಿಚಾರ ಸಂಕಿರಣವನ್ನು ಸನ್ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ಪ್ರವಾಸೋದ್ಯಮ ಹಾಗೂ ಮೂಲಭೂತ ಮತ್ತು ಅಭಿವೃದ್ಧಿ ಸಚಿವರಾದ ಶ್ರೀಯುತ ಜಿ. ಜನಾರ್ಧನ ರೆಡ್ಡಿ ಅವರು ಉದ್ಘಾಟಿಸಿದರು. ಮಾನ್ಯ ಆರೋಗ್ಯ ಸಚಿವರಾದ ಶ್ರೀಯುತ ಶ್ರೀರಾಮುಲು ಅವರು ಉಪಸ್ಥಿತರಿದ್ದು, ಶ್ರೀ ಆನಂದ ಸಿಂಗ್‌ರವರ ಅಧ್ಯಕ್ಷತೆಯಲ್ಲಿ ಉದ್ಘಟನಾ ಸಮಾರಂಭವು ಯಶಸ್ವಿಯಾಗಿ ನೆರವೇರಿತು. ಈ ಸಂದರ್ಭದಲ್ಲಿ ಅವರ ಸಹಕಾರ ಹಾಗೂ ಮಾರ್ಗದರ್ಶನಕ್ಕೆ ಇಲಾಖೆಯ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇನೆ.

ಖ್ಯಾತ ವಿದ್ವಾಂಸರು ಇದರಲ್ಲಿ ಭಾಗವಹಿಸಿ ತಾವು ಮಾಡಿದ ಹೊಸ ಸಂಶೋಧನೆಗಳ ಮೂಲಕ ಪ್ರಬಂಧಗಳನ್ನು ಮಂಡಿಸಿ, ವಿಜಯನಗರ ಸಾಂಸ್ಕೃತಿಕ ಇತಿಹಾಸದ ಮೌಲ್ಯವನ್ನು ಹೆಚ್ಚಿಸಿದರು. ಶಾಸನ, ವಾಸ್ತುಶಿಲ್ಪ, ರಾಜಕೀಯ, ಆಡಳಿತ, ಸಾಹಿತ್ಯ,

ಧರ್ಮ ಮುಂತಾದ ವಿಷಯಗಳನ್ನು ಕುರಿತು ಮಂಡಿಸಲಾದ ಈ ಪ್ರಬಂಧಗಳನ್ನು ಇಲ್ಲಿ ಸಂಪಾದಿಸಲಾಗಿದೆ. ಇವುಗಳನ್ನು ಮಂಡಿಸಿದ ಎಲ್ಲ ವಿದ್ವಾಂಸರಿಗೂ ನಮ್ಮ ಕೃತಜ್ಞತೆಗಳು.

ನಮ್ಮ ಇಲಾಖೆಯ ಎಲ್ಲ ಕಾರ್ಯಗಳಲ್ಲಿಯೂ ನಮಗೆ ಮಾರ್ಗದರ್ಶನ ನೀಡುತ್ತಿರುವ ಹಾಗೂ ನಮ್ಮನ್ನು ಪ್ರೋತ್ಸಾಹಿಸುತ್ತಿರುವ ಸರಕಾರದ ಮಾನ್ಯ ಕಾರ್ಯ ದರ್ಶಿಗಳಾದ ಶ್ರೀ ಜಯರಾಮರಾಜ ಅರಸ್ ಭಾ.ಆ. ಸೇ. ಅವರಿಗೆ ನಮ್ಮ ಕೃತಜ್ಞತೆ ಗಳನ್ನು ಅರ್ಪಿಸುತ್ತೇನೆ.

ಈ ವಿಚಾರ ಸಂಕಿರಣವನ್ನು ಏರ್ಪಡಿಸುವಲ್ಲಿ ನಮ್ಮ ಇಲಾಖೆಯ ಸಹೋದ್ಯೋಗಿ ಗಳು ವಿಶೇಷವಾಗಿ ಸಹಕರಿಸಿದ್ದಾರೆ. ಅವರೆಲ್ಲರನ್ನೂ ನೆನೆಯುವುದು ನನ್ನ ಕರ್ತವ್ಯ. ಈ ಸಂಪುಟದ ಕರಡಚ್ಚು ತಿದ್ದುವುದರಲ್ಲಿ ಸಹಕರಿಸಿದ ಪ್ರೊ. ಎ. ವಿ. ನರಸಿಂಹಮೂರ್ತಿ ಹಾಗೂ ಶ್ರೀ ಎನ್. ಎಸ್. ಶಾರದಾ ಪ್ರಸಾದ್ ಅವರಿಗೆ ನಮ್ಮ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಆಕರ್ಷಕ ಮುಖಪುಟ ವಿನ್ಯಾಸ ಮಾಡಿದ ಶ್ರೀ ಮುರಳೀಧರ್ ಹಾಗೂ ಸುಂದರವಾಗಿ ಮುದ್ರಿಸಿದ ಗಣೇಶ್ ಎಂಟರ್‌ಪ್ರೈಸಸ್ ಅವರಿಗೂ ಧನ್ಯವಾದಗಳು.

ಈ ಹದಿನಾಲ್ಕನೆಯ ಸಂಪುಟವನ್ನು ಕನ್ನಡಿಗರು ಆದರಿಂದ ಬರಮಾಡಿ ಕೊಳ್ಳುತ್ತಾರೆಂದು ನಾನು ಆಶಿಸುತ್ತೇನೆ.

ಮೈಸೂರು (ಡಾ.ಆರ್.ಗೋಪಾಲ್)

01. 01. 2010 ನಿರ್ದೇಶಕರು

ಪರಿವಿಡಿ

ಅಧ್ಯಕ್ಷ ಭಾಷಣ

ಡಾ. ದೇವರ ಕೊಂಡಾರೆಡ್ಡಿ

ಈ 'ವಿಜಯನಗರ ಅಧ್ಯಯನ' ವಿಚಾರ ಸಂಕಿರಣವನ್ನು ಉದ್ಘಾಟಿಸಿದ ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಹಾಗೂ ಮೂಲ ಸೌಲಭ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಜನಾರ್ಧನ ರೆಡ್ಡಿಯವರೇ, ಸಮಾರಂಭದ ಅಧ್ಯಕ್ಷತೆ ವಹಿಸಿರುವ ವಿಜಯನಗರ ಕ್ಷೇತ್ರದ ಶಾಸಕರಾದ ಸನ್ಮಾನ್ಯ ಶ್ರೀ ಆನಂದ ಸಿಂಗ್ ಅವರೇ, ಮುಖ್ಯ ಅತಿಥಿಗಳಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಸನ್ಮಾನ್ಯ ಬಿ. ಶ್ರೀರಾಮುಲು ಅವರೇ, ಕರ್ನಾಟಕ ಸರ್ಕಾರದ ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶಕರಾದ ಡಾ. ಆರ್. ಗೋಪಾಲ್ ಅವರೇ, ಇಲ್ಲಿ ಸೇರಿರುವ ಹಿರಿಯ ಹಾಗೂ ಕಿರಿಯ ವಿದ್ವಜ್ಜನರೇ.

ಕಳೆದ ಒಂದೂ ಕಾಲು ದಶಕದಿಂದ ನಡೆಸುತ್ತಿರುವ 'ವಿಜಯನಗರ ಅಧ್ಯಯನ' ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದ ಅನೇಕ ವಿದ್ವಾಂಸರು ಆರಂಭದಿಂದಲೂ ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ಆಯಾಮಗಳನ್ನು ಕುರಿತು ವಿದ್ವತ್ ಪ್ರಬಂಧಗಳನ್ನು ಮಂಡಿಸಿದ್ದಾರೆ. ಆರಭದಲ್ಲಿ ಚಿಕ್ಕ ಪುಸ್ತಕವಾಗಿ ಪ್ರಕಟಗೊಂಡ ಸಂಶೋಧನಾಲೇಖನಗಳ 'ವಿಜಯನಗರ ಅಧ್ಯಯನ' ಸಂಪುಟ ಇಂದು ಬೃಹತ್ತಾಗಿದೆ. ಇದಕ್ಕೆ ಇಲಾಖೆ ಹಾಗೂ ಸಂಶೋಧಕರಾದ ನೀವು ಕಾರಣರಾಗಿದ್ದೀರಿ. ಈ ಸಂಪುಟಗಳಲ್ಲಿ ವಿಜಯನಗರ ಇತಿಹಾಸದ ಮೇಲೆ ಹೆಚ್ಚಿನ ಬೆಳಕು ಚೆಲ್ಲುವ ಶಾಸನ, ದೇವಾಲಯ, ಕಲೆ, ಸಂಸ್ಕೃತಿಗೆ ಸಂಬಂಧಿಸಿದ ಅನೇಕ ಹೊಸದಾಖಲೆಗಳು, ಹೊಸ ನೋಟಗಳು, ವಿಮರ್ಶೆಗಳು ಹೊರಬಂದಿವೆ.

ದಕ್ಷಿಣ ಭಾರತದಲ್ಲಿ ಬಹು ಹೆಚ್ಚಿಗೆ ದೊರೆಯುವ ಶಾಸನಗಳೆಂದರೆ ವಿಜಯನಗರ ಸಾಮ್ರಾಜ್ಯದವು. ಇವು ಕನ್ನಡ, ತೆಲುಗು, ತಮಿಳು ಹಾಗೂ ಸಂಸ್ಕೃತ ಭಾಷೆಯಲ್ಲಿ ದೊರೆತಿವೆ. ಇಷ್ಟೆಲ್ಲ ಶಾಸನಗಳು ದೊರೆತಿದ್ದರೂ ಅವುಗಳಲ್ಲಿ ಹೆಚ್ಚಿನವು ಕಿರು ಶಾಸನ ಗಳಾಗಿರುವುದರಿಂದ ಅವು ಇತಿಹಾಸದ ಅಧ್ಯಯನಕ್ಕೆ ಮಾತ್ರ ಸೀಮಿತವಾಗಿವೆ. ಸಾಂಸ್ಕೃತಿಕ ಇತಿಹಾಸಕ್ಕೆ ಬೇಕಾಗುವ ಪೂರಕ ಮಾಹಿತಿಗಳು ಕಡಿಮೆ. ಬಹಳಷ್ಟು ತಾಮ್ರಶಾಸನಗಳು ದೀರ್ಘವಾಗಿದ್ದರೂ ನಾಗರಿ ಲಿಪಿಯಲ್ಲಿವೆ. ಕನ್ನಡದಲ್ಲಿರುವುದು ಕಡಿಮೆ. ಇವುಗಳಲ್ಲಿನ ಪಾಠವೂ ಏಕತಾನತೆ ಯಿಂದಿದ್ದು ದಾನದ ಭಾಗ ಮಾತ್ರ ಬದಲಾಗಿರುತ್ತದೆ. ರಾಜಕೀಯ ಇತಿಹಾಸ ರಚನೆಗೆ ಇವು ಪ್ರಮುಖ ಆಕರಗಳಾಗುತ್ತವೆಯೇ ಹೊರತು ಸಾಂಸ್ಕೃತಿಕ ಇತಿಹಾಸ ರಚನೆಗೆ ಪ್ರಯೋಜನವಾಗಲಾರವು. ನಾನು ಇನ್ನು ಮುಂದೆ ವಿಜಯನಗರ

ಸಾಮ್ರಾಜ್ಯದ ಸ್ಥಾಪನೆಗೆ ಪೂರಕವಾದ ಸನ್ನಿವೇಶದ ಬಗ್ಗೆ ತಿಳಿಸಲು ಪ್ರಯತ್ನಿಸುತ್ತೇನೆ. ಕ್ರಿ.ಶ. 1280ರಿಂದ ಕ್ರಿ.ಶ.1336 ರವರೆಗೆ ದಕ್ಷಿಣ ಭಾರತಕ್ಕೆ ಗ್ರಹಣದ ಕಾಲ. ಕಲ್ಯಾಣದಿಂದ ಆಳಿದ ಚಾಳುಕ್ಯರ ರಾಜ್ಯವು ಮುಖ್ಯವಾದ ಮೂರು ಹೋಳಾಗಿ ಉತ್ತರ ಭಾಗವನ್ನು ದೇವಗಿರಿಯ ಯಾದವ ವಂಶದ ಸೇವುಣರು, ಪೂರ್ವದ ಭಾಗವನ್ನು ಓರಂಗಲ್ಲಿನ ಕಾಕತಿಯರು, ದಕ್ಷಿಣ ಭಾಗವನ್ನು ಯಾದವ ವಂಶದ ಹೊಯ್ಸಳರು- ಇವು ಮೂರೂ ರಾಜ್ಯಗಳ ಮಧ್ಯೆ ಒಂದು ಪುಟ್ಟರಾಜ್ಯ ಹೊಸಮಲೆ ದುರ್ಗದ ಅಥವಾ ಕುಮ್ಮಟದ ಅರಸರ ಮಧ್ಯೆ ಹಂಚಿಕೆಯಾಗಿರುತ್ತದೆ. ಇವರು ಪರಸ್ಪರ ತಮ್ಮ ತಮ್ಮ ಕೈ ಮೇಲಾಗಲು ಕಾದಾಡುತ್ತಾ, ಪ್ರತಿ ರಾಜ್ಯದ ಗಡಿಭಾಗಗಳಲ್ಲಿ ಅಸ್ಥಿರತೆಯನ್ನುಂಟುಮಾಡುತ್ತಾ ಇದ್ದರು. ಈ ಸಮಯ ದಲ್ಲಿ ದೆಹಲಿಯ ಸುಲ್ತಾನನ ಕಣ್ಣು ನರ್ಮದೆಯ ದಕ್ಷಿಣ ಭಾಗದತ್ತ ಹೊರಳುತ್ತದೆ. ದಕ್ಷಿಣದ ರಾಜ್ಯಗಳ ಬಗ್ಗೆ ಕೇಳಿದ್ದ ದೆಹಲಿಯ ಮುಸ್ಲಿಂ ಅರಸರು ಈ ರಾಜ್ಯಗಳ ಐಶ್ವರ್ಯವನ್ನು ತಮ್ಮದಾಗಿಸುವ ಕನಸನ್ನು ಹೊತ್ತು ದಕ್ಷಿಣಕ್ಕೆ ಧಾಳಿ ಮಾಡಿ ಮೊದಲು ಸೇವುಣರ ರಾಜಧಾನಿಯಾಗಿದ್ದ ದೇವಗರಿ ಅಥವಾ ದೌಲತಾಬಾದನ್ನು ಹಿಡಿಯುವಲ್ಲಿ ಯಶಸ್ಸು ಸಾಧಿಸುತ್ತಾರೆ. ಮುಂದೆ ದೇವಗಿರಿಯ ಸೇವುಣರ ಹಾಗೂ ದಕ್ಷಿಣದ ಹೊಯ್ಸಳರ ತಿಕ್ಕಾಟವನ್ನು ಗಮನಿಸಿ ದೇವಗರಿಯ ಸೇವುಣರ ಸೈನ್ಯದೊಂದಿಗೆ ದ್ವಾರಸಮುದ್ರವನ್ನಿಡಿದು ಮತ್ತೂ ದಕ್ಷಿಣದತ್ತ ಸಾಗಿ ಮಧುರೆವರೆಗೆ ಮುನ್ನುಗುತ್ತಾರೆ. ಪೂರ್ವದಲ್ಲಿದ್ದು ಓರಂಗಲ್ಲಿನ ಕಾಕತಿಯರನ್ನು ಸೋಲಿಸಿ ತಮ್ಮ ವಶಕ್ಕೆ ಪಡೆಯುತ್ತಾರೆ. ಈ ಮೂರೂ ರಾಜ್ಯಗಳ ಮಧ್ಯೆ ಇದ್ದ ಇನ್ನೊಂದು ಯಾದವ ರಾಜ್ಯ ಕುಮ್ಮಟ ದುರ್ಗದ ಅರಸರನ್ನು ಸೋಲಿಸಿ ಆ ಪ್ರದೇಶವನ್ನು ತಮ್ಮದಾಗಿಸಿಕೊಳ್ಳುತ್ತಾರೆ. ಸೇವುಣ, ಹೊಯ್ಸಳ ಕಾಕತಿಯ ಅರಸರು ಹೆಸರಿಗೆ ಮಾತ್ರ ಇದ್ದು, ಶಕ್ತಿಹೀನರಾಗಿರುತ್ತಾರೆ. ಮುಸಲ್ಮಾನ ಅರಸರು ತಾವು ನಡೆಸಿದ ಯುದ್ಧಗಳಲ್ಲಿ ಶತ್ರುವನ್ನು ಇನ್ನೊಬ್ಬ ಶತ್ರುವಿನ ಮೂಲಕ ಅಥವಾ ನೇತೃತ್ವದಲ್ಲಿ ಸದೆಬಡಿಯುವ ತಂತ್ರವನ್ನು ಅನುಸರಿಸಿದ್ದರು. ದೇವಗಿರಿಯ ಯಾದವರು ಮುಸಲ್ಮಾನರೊಂದಿಗಿನ ತಮ್ಮ ಸೋಲನ್ನು ಗಂಭೀರವಾಗಿ ತೆಗೆದುಕೊಳ್ಳದೆ ಪಾರಂಪರಿಕ ವೈರಿಗಳಾದ ಹೊಯ್ಸಳರನ್ನು ನಾಶಮಾಡಲು ಈ ಧಾಳಿಕೋರ ಸೈನ್ಯದೊಂದಿಗೆ ಅವರಿಗೆ ದಾರಿದೀಪವಾಗಿ ಬರುತ್ತಾರೆ. ದಕ್ಷಿಣ ಭಾರತದಲ್ಲಿ ನಡೆದ ಈ ದಾಳಿಗಳಲ್ಲಿ ಸಣ್ಣಪುಟ್ಟ ಪಾರಂಪರಿಕ ಮಾಂಡಳಿಕ ವಂಶಗಳು ಹೇಳಹೆಸರಿಲ್ಲದಂತಾಗುತ್ತದೆ. ಆನೆಗೊಂದಿಯಲ್ಲಿ ಕರ್ನಾಟಕ ಸಾಮ್ರಾಜ್ಯ ಸ್ಥಾಪನೆಯಾದ ಮೇಲೆಯೂ ಕೆಲವು ವರ್ಷಗಳವರೆಗೆ ಹೊಯ್ಸಳ ವಂಶ ಉಸಿರಾಡುತ್ತಿತ್ತು. ಮುಂದೆ ವಿರೂಪಾಕ್ಷ ಬಲ್ಲಾಳನ ಸಾವಿನೊಂದಿಗೆ ಇದೂ ಕೊನೆಯಾಗುತ್ತದೆ.

ಕರ್ನಾಟಕ ಸಾಮ್ರಾಜ್ಯ ಅಥವಾ ವಿಜಯನಗರ ಸಾಮ್ರಾಜ್ಯದ ಬಗ್ಗೆ ಬರೆಯುವಾಗ/ ಹೇಳುವಾಗ ಹೊಯ್ಸಳರ ಕೊನೆಯ ಅರಸರ ಬಗ್ಗೆಯೂ ಹೇಳಬೇಕಾದ ವಿವರಗಳು ಸಾಕಷ್ಟಿವೆ. ಹೊಯ್ಸಳ ವೀರಬಲ್ಲಾಳನ ಕಾಲದಲ್ಲಿ ತುಂಗಭದ್ರೆಯನ್ನು ದಾಟಿ

ಸೇವುಣರನ್ನು ಸೋಲಿಸಿ ಈಗಿನ ಗದಗಿನ ಪ್ರದೇಶವನ್ನು ತಮ್ಮದಾಗಿಸಿಕೊಂಡಿದ್ದ ಹೊಯ್ಸಳರು, ವೀರಬಲ್ಲಾಳನ ನಂತರ ತುಂಗಭದ್ರಾನದಿಯ ದಕ್ಷಿಣ ಭಾಗಕ್ಕೆ ತೃಪ್ತಿ ಹೊಂದುತ್ತಾರೆ. ಹಂಪೆ, ಬಳ್ಳಾರಿ ಪ್ರದೇಶ, ಹೊಯ್ಸಳರ ವಶದಲ್ಲಿ ಉಳಿಯುತ್ತದೆ. ಹೊಯ್ಸಳರ ಕೊನೆಯ ಅರಸರು ಹಂಪೆಯ ವಿರೂಪಾಕ್ಷನ ಭಕ್ತರಾಗಿದ್ದರು. ಮಹಾಕವಿ ಹರಿಹರನೂ ಹೊಯ್ಸಳರ ಕಾಲದಲ್ಲಿದ್ದ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳುವುದು ಸೂಕ್ತ. ಹೀಗಾಗಿ ಹೊಯ್ಸಳರಿಗೂ ಹಂಪೆಗೂ ಭಕ್ತಿಯ ನಂಟಿತ್ತು. ಹೊಯ್ಸಳರ ಕೊನೆಯ ಅರಸನಿಗೆ ವಿರೂಪಾಕ್ಷ ಬಲ್ಲಾಳನೆಂದು ಹೆಸರಿದ್ದರೂ ಕೆಲವು ಶಾಸನಗಳಲ್ಲಿ ಇವನನ್ನು ಹಂಪೆಯರಸ ಎಂದು ಕರೆದಿರುವುದು ಗಮನಾರ್ಹ. ಹರಿಹರನಂತಹ ಕವಿಯೂ ವಿರೂಪಾಕ್ಷ ದೇವರನ್ನು ಹಂಪೆಯರಸ ಎಂದು ಕರೆದಿದ್ದಾನೆ. ಹೊಯ್ಸಳರು ವಿರೂಪಾಕ್ಷನಿಗೆ ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಗರಜೆ ಗ್ರಾಮವನ್ನು ದಾನವಾಗಿ ನೀಡಿದ್ದರು. ಹೀಗಾಗಿ ಸೇವುಣ, ಕಾಕತೀಯರಿಗಿಂತ ಹೊಯ್ಸಳರು ಈ ಪ್ರದೇಶದ ಮೇಲೆ ಹೆಚ್ಚಿನ ಸಂಬಂಧ ಹೊಂದಿದ್ದರು.

ವಿರೂಪಾಕ್ಷ ಸೀಮೆ, ವಿರೂಪಾಕ್ಷ ಅಂಕಿತ

ಕರ್ನಾಟಕ ಸಾಮ್ರಾಜ್ಯ ಸ್ಥಾಪನೆಗೆ ಮೊದಲು ಹಂಪೆಯಲ್ಲಿದ್ದ ಹರಿಹರ-ರಾಘವಾಂಕರು ಹಂಪೆಯ ಬಗ್ಗೆ ಕೆಲವು ಹೊಸ ವಿಷಯಗಳನ್ನು ತಿಳಿಸಿದ್ದಾರೆ. ಅದೇನೆಂದರೆ ಹಂಪೆಯನ್ನು ವಿರೂಪಾಕ್ಷ ಸೀಮೆಯೆಂದು ಕರೆದಿರುವುದು. ಈ ವಿರೂಪಾಕ್ಷಸೀಮೆಗೆ ಹಂಪೆಯ ದೇವರಾದ ವಿರೂಪಾಕ್ಷನೇ ಒಡೆಯ. ಈ ಕ್ಷೇತ್ರ ಯಾವ ರಾಜನ ಆಳ್ವಿಕೆಗೂ ಒಳಪಟ್ಟಿರಲಿಲ್ಲ. ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ ಹರಿಶ್ಚಂದ್ರನು ವಿಶ್ವಾಮಿತ್ರನಿಗೆ ರಾಜ್ಯವನ್ನು ದಾನಮಾಡಿದ ಮೇಲೆ ವಿಶ್ವಾಮಿತ್ರ ಭೂಮಿಯೆಲ್ಲಾ ನನ್ನದು ನಿನಗೆ ಇರಲು ಸ್ಥಳವೇಯಿಲ್ಲಯೆಂದಾಗ ಹರಿಶ್ಚಂದ್ರನು ಕಾಶಿ ಮತ್ತು ವಿರೂಪಾಕ್ಷ ಕ್ಷೇತ್ರಗಳಲ್ಲಿ ಯಾವ ರಾಜನ ಆಜ್ಞೆಯೂ ನಡೆಯುವುದಿಲ್ಲ. ಅವು ರಾಜಮುಕ್ತ ಪ್ರದೇಶಗಳೆಂದು ಹೇಳುತ್ತಾನೆ. ಬಳ್ಳಾರಿ ಜಿಲ್ಲೆಯಲ್ಲಿದ್ದ ಇದೇ ತರಹದ ಇನ್ನೊಂದು ಕ್ಷೇತ್ರವೆಂದರೆ ಸಂಡೂರಿನ ಕುಮಾರಸ್ವಾಮಿ ದೇವಾಲಯ. ಇಲ್ಲಿಯೂ ರಾಜನ ಒಡೆತನವಿರಲಿಲ್ಲ. ಅಲ್ಲಿಯ ಕ್ಷೇತ್ರದೈವ ಕುಮಾರ ಸ್ವಾಮಿಯೇ ಆ ಪ್ರದೇಶದ ಒಡೆಯ. ಕುಮಾರಸ್ವಾಮಿ ಹೆಸರಿನಲ್ಲಿ ದೇವಾಲಯದಲ್ಲಿದ್ದ ಸ್ಥಾನಾಧಿಪತಿಗಳೇ ಆಡಳಿತ ನಡೆಸುತ್ತಿದ್ದರು. ರಾಜನ ಅಂಕಿತದಿಂದ ಮುಕ್ತವಾಗಿದ್ದ ಈ ಪ್ರದೇಶದಲ್ಲಿ ಸೈನ್ಯವೇನಿದ್ದರೂ ದೇವಾಲಯವನ್ನು ಧಾಳಿಕಾರರಿಂದ ರಕ್ಷಿಸುವುದಾಗಿತ್ತೇ ಹೊರತು ಆ ಪ್ರದೇಶದ ಕಂದಾಯದ ಮೇಲಾಗಲೀ ಭೂಮಿಯ ಮೇಲಾಗಲೀ ರಾಜನಿಗಾಗಲೀ, ಅಧಿಕಾರಿಗಾಗಲೀ ಅಧಿಕಾರವಿರಲಿಲ್ಲ. 1199ರ ಹಂಪೆಯ ಶಾಸನದಲ್ಲಿ ಸಿಂಧರ ಸೈನ್ಯ ಹಂಪೆಯ ರಕ್ಷಣಾರ್ಥವಾಗಿ ಮತಂಗಪರ್ವತದ ಬಳಿ ಬೀಡುಬಿಟ್ಟಿದ್ದಂತೆ ಹೇಳುವುದು ಈ ಕಾರಣದಿಂದಲೇ. ಹಂಪೆಯನ್ನು ಸೈನಿಕ ಚಟುವಟಿಕೆಯಿಂದ ದೂರ ಇರಿಸಿದ್ದರು.

ಹಂಪೆಯ ವಿರೂಪಾಕ್ಷ ಸೀಮೆಯ ವಿಸ್ತಾರ ಎಷ್ಟಿತ್ತೆಂಬ ಬಗ್ಗೆಯೂ ಹರಿಹರನು ಕೆಲವು ವಿವರಗಳನ್ನು ನೀಡಿದ್ದಾನೆ. ಹೂರ್ವಕ್ಕೆ ಕಿನ್ನರೇಶ್ವರ (ಇದೇ ಈಗಿನ ಕಮಲಾಪುರ ಕಂಪ್ಲಿ ರಸ್ತೆಯಲ್ಲಿದೆ) ಪಶ್ಚಿಮಕ್ಕೆ ಸೋಮನಾಥ (ಈಗಿನ ಗಂಗಾವತಿ ತಾಲೂಕಿನ ಶಿವಪುರದ ಬಳಿಯ ಗುಡ್ಡದ ಮೇಲಿನ ಸೋಮೇಶ್ವರ), ಉತ್ತರಕ್ಕೆ ವಾಣಿ ಭದ್ರೇಶ್ವರ (ಗಂಗಾವತಿ ತಾಲೂಕು), ದಕ್ಷಿಣಕ್ಕೆ ಜಂಬುನಾಥ ಅಥವಾ ಈಗಿನ ಹೊಸಪೇಟೆ ಬಳಿಯ ಜಂಬುಲಿಂಗದೇವಾಲಯ- ಈ ಎಲ್ಲೆಗಳು ಈಗಿನ ಹಂಪೆ ಮತ್ತು ರಾಜಧಾನಿಯಾಗಿದ್ದ ವಿಜಯನಗರದ ಎಲ್ಲೆಗಳನ್ನೇ ಸೂಚಿಸುತ್ತವೆ. ವಿರೂಪಾಕ್ಷ ಸೀಮೆಯಾದ ಹಂಪೆಯ ಯಾವ ರಾಜನ ಒಡೆತನಕ್ಕೂ ಸೇರಿಲ್ಲದ ಕಾರಣ ಇಲ್ಲಿ ಹೊಯ್ಸಳರು, ಕುಮ್ಮಟದ ಅರಸರು, ಕುರುಗೋಡಿನ ಸಿಂಧರು ದೇವಾಲಯಗಳನನು ನಿರ್ಮಿಸಿದ್ದಾರೆ. ದಕ್ಷಿಣಕ್ಕೆ ಮುಸಲ್ಮಾನರ ದಾಳಿಯ ನಂತರ ನೂತನ ರಾಜ್ಯ ಸ್ಥಾಪಕರಾದ ಯಾದವವಂಶದ ಸಂಗಮನ ಮಕ್ಕಳಾದ ಹರಿಹರ ಮತ್ತವನ ಸೋದರರಿಗೆ ವಿರೂಪಾಕ್ಷ ಸೀಮೆಯ ಕಲ್ಪನೆಯಿದ್ದದ್ದರಿಂದ ಅವರ ತಮ್ಮ ನೂತನ ರಾಜ್ಯದ ರಾಜಧಾನಿಯನ್ನು ಹಂಪೆಯಲ್ಲಿ ಮಾಡಲಾರದೆ ಸಮೀಪವಿದ್ದ ಆನೆಗೊಂದಿಯನ್ನು ಆಯ್ಕೆ ಮಾಡಿಕೊಂಡಿದ್ದು ಈ ಕಾರಣದಿಂದಲೇ. ಅಲ್ಲಿಂದಲೇ ದಕ್ಷಿಣದ ಪ್ರದೇಶದ ಮೇಲೆ ನಿಯಂತ್ರಣ ಸಾಧಿಸಲು ಪ್ರಯತ್ನಿಸಿದರು. ತಾವು ವಿರೂಪಾಕ್ಷ ಸೀಮೆಯಲ್ಲಿದ್ದೇವೆಂಬ ಕಾರಣಕ್ಕಾಗಿ ತಮ್ಮ ರಾಜ್ಯಕ್ಕೆ ವಿರೂಪಾಕ್ಷನೇ ಒಡೆಯನೆಂದು ಭಾವಿಸಿ ತಮ್ಮ ಶಾಸನಗಳಲ್ಲಿ 'ವಿರೂಪಾಕ್ಷ' ಎಂಬ ಅಂಕಿತವನ್ನು ಹಾಕಿಸಿದರು. ಇದರ ಅರ್ಥ ವಿಜಯನಗರಕ್ಕೆ ನಿಜವಾದ ರಾಜ ದೇವರಾದ ವಿರೂಪಾಕ್ಷ ನಾದರೆ ತಾವು ಅವನ ಪರವಾಗಿ ರಾಜ್ಯಭಾರ ಮಾಡುವವರೆಂಬುದಾಗಿತ್ತು.

ವಿಜಯನಗರ ನಿರ್ಮಾಣ

ಕ್ರಿ.ಶ. 1336ರಲ್ಲಿ ಆನೆಗೊಂದಿಯಿಂದ ಆರಂಭವಾದ ಈ ರಾಜ್ಯ ಕೆಲವೇ ವರ್ಷಗಳಲ್ಲಿ ಪರಕೀಯರ ಧಾಳಿಯಿಂದ ದಿಕ್ಕು ತೋಚದಂತಾಗಿದ್ದ ದಕ್ಷಿಣ ಭಾರತಕ್ಕೆ ಬೆಳಕಾಗಿ ಮೂಡುತ್ತದೆ. ಧಾಳಿಕಾರರಿಂದ ಹಾನಿಗೊಳಗಾಗಿದ್ದ ಕಾಕತಿಯ ಮತ್ತು ಹೊಯ್ಸಳರ ಅಧೀನದಲ್ಲಿದ್ದ ಸಣ್ಣಪುಟ್ಟ ರಾಜರು, ಅಧಿಕಾರಿಗಳು ಕರ್ನಾಟಕ ಸಾಮ್ರಾಜ್ಯದ ಯಾದವ ವಂಶದ ಸಂಗಮ ಸೋದರರ ಆಡಳಿತವನ್ನು ಸ್ವಾಗತಿಸಿ ಅವರಿಗೆ ಬೆಂಬಲವಾಗಿ ನಿಲ್ಲುತ್ತಾರೆ. ಒಂದನೆಯ ಹರಿಹರನ ಕಾಲಕ್ಕೇ ಉತ್ತರದಲ್ಲಿ ಬಾದಾಮಿಯಿಂದ ದಕ್ಷಿಣದಲ್ಲಿ ಮುಳಬಾಗಿಲ ರಾಜ್ಯದವರೆಗೆ ಹೆಚ್ಚಿನ ಪ್ರತಿಭಟನೆಯಿಲ್ಲದೇ ಕರ್ನಾಟಕ ಸಾಮ್ರಾಜ್ಯಕ್ಕೆ ಸೇರಿತ್ತು. ಆರಂಭದ ವರ್ಷಗಳಲ್ಲಿ ಈ ರಾಜ್ಯದ ಅರಸರು ಮಾಡಿದ ಕೆಲಸವೆಂದರೆ ಸ್ಥಿರತೆಯ ಜೊತೆಗೆ ಧಾಳಿಕಾರರಿಂದ ಹಾಳಾಗಿದ್ದ ಕೋಟೆ, ಗುಡಿ-ಗೋಪುರಗಳ ಜೀರ್ಣೋದ್ಧಾರ ಹಾಗೂ ನಿಂತುಹೋಗಿದ್ದ ಪೂಜಾ ವ್ಯವಸ್ಥೆಯನ್ನು

ಪುನರಾರಂಭಿಸಿದ್ದು. ಸಂಗಮ ವಂಶದವರ ಆಳ್ವಿಕೆಯ ಉದ್ದಕ್ಕೂ ಬೆಂಬಲಕ್ಕೆ ನಿಂತದ್ದು ಶೃಂಗೇರಿಯ ಅದ್ವೈತ ಪೀಠ. ಹೀಗಾಗಿ ಸಾಮ್ರಾಜ್ಯದ ಆರಂಭದಿಂದಲೇ ಹಿಂದೂಧರ್ಮಕ್ಕೆ ಒಂದು ರೂಪು ಕೊಡುವ ಕಾರ್ಯ ಈ ಸಂಗಮದಿಂದ ಆರಂಭವಾಗುತ್ತದೆ.

ಕರ್ನಾಟಕ ಸಾಮ್ರಾಜ್ಯದ ಸ್ಥಾಪನೆಯ ಕಾಲದಲ್ಲಿಯೇ ವಿದ್ಯಾರಣ್ಯರಿದ್ದರೆಂಬ ಒಂದು ಗಟ್ಟಿಯಾದ ವಾದವಿದೆ. ಇತ್ತೀಚೆಗೆ ಬೆಳಕು ಕಂಡ ಹಾಲ್ಕವಟಗಿ ಶಾಸನದಲ್ಲಿ ಈ ಸಾಮ್ರಾಜ್ಯವು ಕ್ರಿ.ಶ. 1336ರ ಏಪ್ರಿಲ್ 16ರಂದು ಪ್ರಾರಂಭವಾಯಿತೆಂದು ಉಲ್ಲೇಖಿಸಿದೆ. ನಾಗರಿಲಿಪಿ– ಸಂಸ್ಕೃತ ಮತ್ತು ಕನ್ನಡ ಭಾಷೆಯಲ್ಲಿರುವ ಈ ಶಾಸನದ ನೈಜತೆಯನ್ನು ಮತ್ತೊಮ್ಮೆ ಪರೀಕ್ಷಿಸಬೇಕಾಗಿದೆ. ಯಾವುದೇ ಸಾಮ್ರಾಜ್ಯ ಸ್ಥಾಪನೆಯ ಕಾಲದಲ್ಲಿ ಯಾವ ಯತಿಯೂ ಮುಂಚೂಣಿಯಲ್ಲಿ ನಿಂತ ಉದಾಹರಣೆಗಳಿಲ್ಲ. ಸಾಮ್ರಾಜ್ಯ ಅಥವಾ ರಾಜ್ಯ ಸ್ಥಾಪನೆಯಾದ ಮೇಲೆ ಧರ್ಮಗುರುಗಳು ಅಥವಾ ಯತಿಗಳು ರಾಜಧಾನಿಗೆ ಅಥವಾ ರಾಜನ ಬಳಿ ಬರುತ್ತಾರೆ. ಅಥವಾ ಪಟ್ಟ ಕಟ್ಟಿಸಿಕೊಂಡ ರಾಜ ಅಲ್ಲಿಗೆ ಹೋಗುತ್ತಾನೆ. ಹೀಗಾಗಿ ವಿಜಯನಗರ ಅಥವಾ ಕರ್ನಾಟಕ ಸಾಮ್ರಾಜ್ಯ ಸ್ಥಾಪನೆಯ ಕಾಲಕ್ಕೆ ವಿದ್ಯಾರಣ್ಯರು ಹಂಪೆಯಲ್ಲಿರಲಿಲ್ಲ. ಒಂದನೆಯ ಬುಕ್ಕ ಮತ್ತು ಅವನ ಮಗ ಇಮ್ಮಡಿ ಹರಿಹರನ ಕಾಲಕ್ಕೆ ಹಂಪೆಗೆ ಬಂದರು. ಹೀಗಾಗಿ ಕರ್ನಾಟಕ ಸಾಮ್ರಾಜ್ಯ ಸ್ಥಾಪನೆಯ ಕಾಲಕ್ಕೆ ವಿದ್ಯಾರಣ್ಯರು ಹಂಪೆಯಲ್ಲಿರಲಿಲ್ಲವೆಂಬುದನ್ನು ನಾನು ಪುನರುಚ್ಚರಿಸುತ್ತೇನೆ.

ಆನೆಗೊಂದಿಯಲ್ಲಿ ಕರ್ನಾಟಕ ರಾಜ್ಯ ಆರಂಭವಾದ ಕೆಲವೇ ವರ್ಷಗಳಲ್ಲಿ ಗುಲ್ಬರ್ಗದಲ್ಲಿ ಬಹ್ಮನಿರಾಜ್ಯ ಉದಿಸುತ್ತದೆ. ಎರಡೂ ರಾಜ್ಯಗಳು ನೆರೆಹೊರೆಯಲ್ಲಿದ್ದುದರಿಂದ ಆಗಾಗ್ಗೆ ಯುದ್ಧಗಳು ಸಾಮ್ಯವಾಗಿದ್ದವು. ಆನೆಗೊಂದಿಯ ಮೇಲೆ ಸುಲಭವಾಗಿ ದಾಳಿನಡೆಯುವ ಸಾಧ್ಯತೆ ಹೆಚ್ಚಾಯಿತು. ಈ ಕಾರಣದಿಂದ ವಿಸ್ತಾರಗೊಳ್ಳುತ್ತಿದ್ದ ರಾಜ್ಯಕ್ಕೆ ರಕ್ಷಣೆಯಿಂದ ಕೂಡಿದ ರಾಜಧಾನಿಯೊಂದರ ಅವಶ್ಯಕತೆಯುಂಟಾಯಿತು. ಕುರುಗೋಡು ಸಿಂಧಿರ ಕಾಲದಲ್ಲಿ ಮತಂಗ ಪರ್ವತದ ತಪ್ಪಲಿನಲ್ಲಿ ವಿರೂಪಾಕ್ಷ ಸೀಮೆ ರಕ್ಷಣೆಗಾಗಿ ಸೈನ್ಯ ಬೀಡ ಬಿಟ್ಟಿದ್ದ ಪ್ರದೇಶವನೇ ಹೊಸದಾಗಿ ರಾಜ್ಯ ಸ್ಥಾಪನೆಮಾಡಿದ ಕರ್ನಾಟಕ ಅರಸರು ತಮ್ಮ ರಾಜಧಾನಿಗಾಗಿ ಆಯ್ಕೆ ಮಾಡಿಕೊಂಡರು. ಹಂತಹಂತವಾಗಿ ತಾವು ನಿರ್ಮಿಸಿದ ವಿಜಯನಗರ ಪಟ್ಟಣಕ್ಕೆ ರಾಜಧಾನಿಯನ್ನು ಬದಲಾಯಿಸಿದರು. ತುಂಗಭದ್ರೆಯ ದಕ್ಷಿಣಕ್ಕಿದ್ದ ಈ ಪ್ರದೇಶದ ಮೇಲೆ ಧಾಳಿಕಾರರ ಧಾಳಿ ಸುಲಭ ಸಾಧ್ಯವಾಗಿರಲಿಲ್ಲ. ಸುಮಾರು 200 ವರ್ಷಗಳ ಕಾಲ ಅಂದರೆ ಕ್ರಿ.ಶ.1565ರವರೆಗೆ ವಿಜಯನಗರ ಪಟ್ಟಣದ ಅಂಗುಲ ಅಂಗುಲವೂ ಸಂಪದಭಿವೃದ್ಧಿ ಹೊಂದಿದ ಪಟ್ಟಣವಾಗಿ ಬೆಳೆಯ ತೊಡಗಿತು. ಬೆಟ್ಟಗಳು, ಕೊರಕಲು, ಎಲ್ಲ ಪ್ರದೇಶಗಳಲ್ಲಿಯೂ ಜನವಸತಿ. ಹೀಗಾಗಿ ದಟ್ಟ ವಾದ ಜನವಸತಿಯ ಪ್ರದೇಶವಾಗಿ, ಜಾತಿ ಜಾತಿಯ

ಪೇಟೆಗಳನ್ನು ನಿರ್ಮಿಸಿಕೊಂಡು ಬೆಳೆಯತೊಡಗಿತು. ಎಲ್ಲ ಜಾತಿಯವರೂ ಇಲ್ಲಿ ಬರಲಾರಂಭಿದರು. ಮಿಲಿಟರಿ ಹಾಗೂ ವ್ಯಾಪಾರಿ ವಹಿವಾಟಿನಿಂದ ಆ ಕಾಲಕ್ಕೆ ಪ್ರಪಂಚದ ಗಮನ ಸೆಳೆದ ಪ್ರದೇಶವಾಗಿತ್ತು. ಬರಬರುತ್ತಾ ಕೋಟೆ ಪ್ರದೇಶದಲ್ಲಿ ಅರಸರ ವಾಸದ ಮನೆಗಳೂ ಬಹು ಇಕ್ಕಟ್ಟಾದಾಗ ಕೃಷ್ಣದೇವರಾಯನ ಕಾಲದಲ್ಲಿ ಅವನ ರಾಣಿ ತಿರುಮಲಾದೇವಿಯ ಈಗಿನ ಹೊಸಪೇಟೆಯ ಬಳಿ ತನ್ನ ಹೆಸರಿನಲ್ಲಿ ತಿರುಮಲಾದೇವಿ ಪಟ್ಟಣ ಎಂಬ ಹೆಸರಿನ ಪಟ್ಟಣವನ್ನು ನಿರ್ಮಿಸಿ ಅದನ್ನು ತನ್ನ ವಾಸಕ್ಕೆ ಆರಿಸಿಕೊಂಡಳು. ಈ ರಾಜಧಾನಿ ಪಟ್ಟಣವು ತನ್ನ ಅಂತ್ಯದ 1565ರ ಕಾಲಕ್ಕೆ ದೊಡ್ಡ ಕೊಳಗೇರಿಯಾಗಿತ್ತೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು

ರಾಜಧಾನಿ ಅಂತ್ಯ

ಆನೆಗೊಂದಿಯಲ್ಲಿ ಕರ್ನಾಟಕ ಸಾಮ್ರಾಜ್ಯ ಅಥವಾ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ಮೇಲೆ ರಾಜ್ಯಕ್ಕೆ ಬೇರೆ ಬೇರೆ ಪಂಥದ ಯತಿಗಳು, ಸ್ವಾಮಿಗಳು ಬರಲಾರಂಭಿಸಿದರು. ಹಿಂದೆಯೇ ತಿಳಿಸಿದಂತೆ ಮೊದಲ ಸಂಪರ್ಕ ಅದ್ವೈತದ ಶೃಂಗೇರಿಮಠ. ಇದರ ಕಾರಣಾಗಿ ವಿದ್ಯಾರಣ್ಯರು ಶೈವ ಪಂಥದ ಕ್ರಿಯಾಶಕ್ತಿಗಳು, ಮಾಧ್ವಪಂಥದ ಅಕ್ಷುದನಾಥ ಒಡೆಯ (ಅಕ್ಷೋಭ್ಯತೀರ್ಥ) ಪ್ರಮುಖರಾದವರು ಇಮ್ಮಡಿ ಹರಿಹರ ಇವರನ್ನೆಲ್ಲಾ ಸ್ವಾಗತಿಸಿದನಲ್ಲದೆ ಹಂಪೆಯಲ್ಲಿ ನೆಲೆಸಲು ಉತ್ತೇಜನ ನೀಡಿದ. ಹಿಂದೂ ಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹ ಮತ್ತು ರಕ್ಷಣೆನೀಡಿ ಹಿಂದೂರಾಯ ಸುರತ್ರಾಣ (ಸುಲ್ತಾನ) ಎಂಬ ವಿಶೇಷಣ ಧರಿಸಿದ.ವೇದಗಳಿಗೆ ಭಾಷ್ಯ ಬರೆಯಲು ಸಾಯಣ ಮತ್ತು ಮಾಧವರನ್ನು ಪ್ರೇರೇಪಿಸಿ ಪೋಷಕನಾಗಿ ನಿಂತ ಹರಿಹರ ಹಾಗೂ ಅವನ ಮಗ ಒಂದನೆಯ ದೇವರಾಯನ ಕಾಲದಲ್ಲಿ ನೀರಾವರಿ ಅಭಿವೃದ್ಧಿಗೆ ಕಾರಣನಾದ ಗಾಣಪತ್ಯ ಪಂಥದ ಲಕ್ಷ್ಮೀಧರಾಮಾತ್ಯನು ಮೇಲೆ ಉಲ್ಲೇಖಿಸಿರುವ ಸಾಯಣ ಮತ್ತು ಮಾಧವರ ಸೋದರಳಿಯ. ಹೀಗೆ ಬೇರೆ ಬೇರೆ ಕಡೆಯಿಂದ ಬಂದ ಬೇರೆ ಬೇರೆ ಪಂಥದ ಯತಿಗಳು ತುಂಗಭದ್ರಾನದಿಯ ತಡಿಯುದ್ದಕ್ಕೂ ತಮ್ಮ ತಮ್ಮ ಪಂಥದ ದೇವಾಲಯಗಳನ್ನು ಕಟ್ಟಿಸುತ್ತಾರೆ. ಸ್ವಲ್ಪ ತಡವಾಗಿ ಬಂದವರು ಶ್ರೀ ವೈಷ್ಣವರು. ಈ ವೈಷ್ಣವರು ಅಹೋಬಿಲಮಠಕ್ಕೆ ಸೇರಿದ ತೆಲುಗು ಮಾತನಾಡುತ್ತಿದ್ದ ಶ್ರೀವೈಷ್ಣವರು. ಈ ಕಾರಣದಿಂದ ವಿಠಲ ದೇವಾಲಯ ಹಾಗೂ ಅಚ್ಯುತರಾಯ ದೇವಾಲಯಗಳಲ್ಲಿ ತೆಲುಗು ಶಾಸನಗಳು ಬರಲು ಕಾರಣರಾದರು. ಇವರು ವಿಠಲನನ್ನು ತಮ್ಮ ಆರಾಧ್ಯದೈವ ಮಾಡಿಕೊಂಡು ದೇವಾಲಯ ನಿರ್ಮಿಸಿ ಆ ಪರಿಸರವನ್ನು ಶ್ರೀವೈಷ್ಣವ ಪರಿಸರವನ್ನಾಗಿ ಮಾಡುವಲ್ಲಿ ಯಶಸ್ವಿಯಾದರು. ಒಂದರ್ಥದಲ್ಲಿ ಶೈವರಿಗೆ ಹಾಗೂ ಶ್ರೀವೈಷ್ಣವರಿಗೆ ಪೈಪೋಟಿಯೆಂಬಂತೆ ವಿರೂಪಾಕ್ಷ ಹಾಗೂ ವಿಠಲ ದೇವಾಲಯಗಳ ಬೆಳವಣಿಗೆಯಾಯಿತು.

ರಾಜರು, ಅಧಿಕಾರಿಗಳು, ಹಣವಂತರು ನೀಡಿದ ದಾನ-ದತ್ತಿಗಳಿಂದ ಈ ಎರಡೂ ದೇವಾಲಯಗಳು ಶ್ರೀಮಂತವಾಗಿದ್ದವು. ಉಳಿದಂತೆ ಬಾಲಕೃಷ್ಣ, ರಘುನಾಥ, ತಿರುವೆಂಗಳ, ನರಸಿಂಹ ಮುಂತಾದವು ಈ ಎರಡೂ ದೇವಾಲಯಗಳ ಮುಂದೆ ಮಂಕಾಗುತ್ತವೆ. ಮೇಲೆ ಹೇಳಿದ ಎರಡೂ ದೇವಾಲಯಗಳಲ್ಲಿ ಪೂಜೆಗಿಂತ ಆಡಂಬರ ಜಾಸ್ತಿಯಾಗಿತ್ತು. ಈ ಆಡಂಬರ ಪೂಜೆ ಕೆಲವೊಮ್ಮೆ ಸಾಮಾನ್ಯಜನರ ಕಣ್ಣು ಕುಕ್ಕು ವಂತಿತ್ತು. ಬಹುಶಃ ಪರರಾಜ್ಯಗಳವರ ಕಣ್ಣು ವಿಜಯನಗರದ ಮೇಲೆ ಬೀಳಲು ಈ ಎರಡೂ ದೇವಾಲಯಗಳ ಶ್ರೀಮಂತಿಕೆ ಕಾರಣವಾಯಿತೆಂದರೆ ಅತಿಶಯೋಕ್ತಿಯಲ್ಲ. ಇಲ್ಲಿನ ಪೇಟೆ ಬೀದಿಗಳು ಅದರಲ್ಲಿಯೂ ಪೆದ್ದಂಗಡಿಬೀದಿ ಐಶ್ವರ್ಯದಿಂದ ತುಳುಕು ತಿತ್ತು. ಈ ಬೀದಿಯಲ್ಲಿ ಅನೇಕ ಮಾಂಡಳೀಕರು, ಅಧಿಕಾರಿಗಳು, ಸೇನಾಧಿಪತಿಗಳು, ಹಣವಂತರು, ಪ್ರವಾಸಿಗರು ಓಡಾಡುತ್ತಿದ್ದುದರಿಂದ ಬೆಳ್ಳಿ, ಬಂಗಾರ, ಮುತ್ತುಗಳಂತಹ ಬೆಲೆಬಾಳುವ ವಸ್ತುಗಳ ವ್ಯಾಪಾರ ಜೋರಾಗಿ ನಡೆಯುತ್ತಿತು. ಸದಾ ಜನಜಂಗುಳಿಯಿಂದ ಕೂಡಿರುತ್ತಿದ್ದ ಈ ಬೀದಿಯನ್ನು ನೋಡಿಯೇ ವಿದೇಶಿ ಪ್ರವಾಸಿಗರು ಇಲ್ಲಿ ಮಾರಾಟ ವಾಗುತ್ತಿದ್ದ ವಸ್ತುಗಳ ಬಗ್ಗೆ ಸೋಜಿಗದಿಂದ ಹೇಳಿರುವುದು. ಈ ಸೋಜಿಗದ ಸಂಗತಿಗಳೇ ವಿಜೃಂಭಿಸಿ ಶತ್ರುಗಳಾದ ಬಹಮನಿಗಳ ಪಾಳೆಯದಲ್ಲಿ ರಂಗುರಂಗಾಗಿ ವಿಜಯನಗರ ಪಟ್ಟಣದ ಮೇಲೆ ಈರ್ಷ್ಯೆಪಡಲು ಕಾರಣವಾಯಿತು. ಒಟ್ಟಿನಲ್ಲಿ ರಾಜ್ಯದ, ರಾಷ್ಟ್ರದ ಐಶ್ವರ್ಯ ವಿಜಯನಗರದ ಕಡೆಗೆ ಹರಿದು ಬರುತ್ತಿತ್ತು. ಈ ಸಂಪತ್ತೇ ಅಲ್ಲದೆ ವಿಜಯನಗರದ ಅರಸರು ಪರಸೈನದ ಮೇಲೆ ಧಾಳಿ ಮಾಡಿ ಗೆದ್ದಾಗ ಮಾಡುತ್ತಿದ್ದ ಕೊಳ್ಳೆಯೂ ಕಾರಣವಿರಬಹುದು.

ಇನ್ನೂರು ವರ್ಷಗಳ ಕಾಲ ರಾಜಧಾನಿಯಾಗಿದ್ದ ವಿಜಯನಗರ ಪಟ್ಟಣಕ್ಕೆ ಎಂದೂ ಪರಕೀಯರ ಧಾಳಿಯಾಗಿರಲಿಲ್ಲವೆಂದಲ್ಲ. ದೇವರಾಯನ ಕಾಲದಲ್ಲಿ ಒಮ್ಮೆ ಬಹಮನಿ ಅರಸರು ದಂಡೆತ್ತಿ ಬಂದುಹೋಗಿದ್ದರು. ಆದರೆ ರಾಜಧಾನಿಯಲ್ಲಿ ಅರಸನಿದ್ದ ಕಾರಣ ರಾಜಧಾನಿಗೆ ತೀವ್ರ ಹಾನಿಯಾಗಿರಲಿಲ್ಲ. ಹೀಗಾಗಿ ಧಾಳಿಯಿಂದ ತೀವ್ರವಾಗಿ ಚೇತರಿಸಿಕೊಂಡರು. ಆದರೆ ಕ್ರಿ.ಶ.1565ರಲ್ಲಿ ಆದ ಧಾಳಿ ಬಹು ತೀವ್ರವಾಗಿತ್ತು. ಅಂತಹ ತೀವ್ರತೆಯಲ್ಲೂ ಅದು ಮತ್ತೊಮ್ಮೆ ಚೇತರಿಸಿಕೊಳ್ಳಬಹುದಿತ್ತು. ಆದರೆ ತುಳುವ ಅರಸ ಸದಾಶಿವರಾಯ ಬಂಧನದಲ್ಲಿದ್ದುದರಿಂದ ಯಾವ ತೀರ್ಮಾನವನ್ನೂ ಕೈಗೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಪ್ರಧಾನ ಸೇನಾನಾಯಕ ಹಾಗೂ ಸರ್ವಾಧಿಕಾರಿ ರಾಮರಾಯ ಯುದ್ಧ ದಲ್ಲಿ ಸತ್ತಿದ್ದ. ಅವನ ಕೊಲೆಯಾದೊಡನೆಯೇ ಈ ಸರ್ವಾಧಿಕಾರಿಯ ತಮ್ಮಂದಿರು ಶತ್ರುಗಳನ್ನು ಎದುರಿಸಿ ರಾಜಧಾನಿಯನ್ನು ಉಳಿಸಿಕೊಳ್ಳುವ ಬದಲು ರಾಜಧಾನಿಯಲ್ಲಿದ್ದ ಸಕಲವನ್ನೂ ತೆಗೆದುಕೊಂಡು ಪೆನಗೊಂಡೆಗೆ ಹೋದರು. ಒಡೆಯರೇ ಇಲ್ಲದ ಪಟ್ಟಣ ವಾಯಿತು ರಾಜಧಾನಿ. ಆದರೆ ದೇವಾಲಯದ ಜವಾಬ್ದಾರಿ ಹೊತ್ತಿದ್ದವರಿಗೆ, ಜನಸಾಮಾನ್ಯರಿಗೆ ಶತ್ರುಸೈನ್ಯವಾದ ಬಹಮನಿ ಸೈನ್ಯ ವಾಪಸ್ಸಾದೊಡನೆಯೇ ಮತ್ತೆ

ವಿಜಯನಗರ ಪಟ್ಟಣಕ್ಕೆ ವಾಪಸ್ಸಾಗುವ ಆಸೆಯಿಂದ ಪಟ್ಟಣವನ್ನು ತ್ಯಜಿಸಿದ್ದರು. ದೇವಾಲಯಗಳಲ್ಲಿ ಪೂಜಾವಿಗ್ರಹಗಳನ್ನು ಹೂತಿಟ್ಟಿದ್ದರು. ಆದರೆ ತುಳುವ ಅರಸ ಸದಾಶಿವರಾಯನನ್ನು ಕೊಂದ, ಸರ್ವಾಧಿಕಾರಿ ರಾಮರಾಯನ ತಮ್ಮಂದಿರಾದ ತಿರುಮಲ ಮತ್ತು ವೆಂಕಟಾದ್ರಿ ತಮ್ಮ ರಕ್ತಸಿಕ್ತ ಮುಖಗಳನ್ನು ಹೊತ್ತು ಪೆನಗೊಂಡೆಯಲ್ಲುಳಿದರೇ ಹೊರತು ವಿರೂಪಾಕ್ಷನಾಡಿಗೆ ಬರಲಿಲ್ಲ. ಇಷ್ಟೇ ಅಲ್ಲ ತುಳುವ ಅರಸರ ಕಾಲದವರೆಗೆ ಪ್ರಚಲಿತದಲ್ಲಿದ್ದ ಶಾಸನಗಳ ಅಂಕಿತ 'ವಿರೂಪಾಕ್ಷ' ಎಂಬುದು ಬದಲಾಗಿ 'ವೆಂಕಟೇಶ' ಎಂದು ರೂಢಿಗೆ ಬಂತು. ಮುಂದೆ ಇದೂ ಇಲ್ಲವಾಗಿ 'ಶ್ರೀರಾಮ' ಎಂಬುದು ಬಳಕೆಗೆ ಬಂತು. ಒಂದು ವೇಳೆ ಅರವೀಡು ಸಂತತಿಯವರು ಸೋತು ಓಡು ಹೋಗುವ ಬದಲು ಗೆದ್ದ ಬಹಮನಿ ಬಲದೊಂದಿಗೆ ಸಂಧಾನ ಮಾಡಿಕೊಂಡಿದ್ದರೆ ವಿಜಯನಗರ ಚಿತ್ರಣವೇ ಬದಲಾಗುತ್ತಿತ್ತು. ಇಂದಿನ ಹಾಳು ಪಟ್ಟಣವಾಗುತ್ತಿರಲಿಲ್ಲ. ಇದಕ್ಕೆ ಕೊಲೆಯದ ಸೇನಾನಿ ರಾಮರಾಯನ ತಮ್ಮಂದಿರುವ ದೂರದೃಷ್ಟಿ ಕೊರತೆ ಕಾರಣವಾಗಿತ್ತು. ರಾಯಚೂರಿನ ಬಹಮನಿ ಅರಸರ ಶಾಸನವೊಂದರಲ್ಲಿ ವಿಜಯನಗರದ ಬಲವನ್ನು ನಂಬಿಕೆದ್ರೋಹಿ ಗಳೆಂದು ಕರೆಯಲಾಗಿದೆ. ಈ ಮಾತಿನ ಅರ್ಥವನ್ನು ನಾವು ಇಂದು ವಿಮರ್ಶಿಸಬೇಕಾಗಿದೆ.

ಸಂಶೋಧಕ ಬಂಧುಗಳೇ, ವಿಯನಗರ ಪಟ್ಟಣವನ್ನು ರಾಜಧಾನಿ ಮಾಡಿಕೊಂಡು ಆಳ್ವಿಕೆ ನಡೆಸಿದ ಕರ್ನಾಟಕ ಸಾಮ್ರಾಜ್ಯದ ಬಗ್ಗೆ ಇನ್ನೂ ಬಹಳಷ್ಟು ಅಧ್ಯಯನಗಳಾಗ ಬೇಕಿದೆ. ಮುಖ್ಯವಾಗಿ ಇವರ ಮೂಲದ ಬಗ್ಗೆ 50 ವರ್ಷಗಳ ಹಿಂದೆ ಇದ್ದ ಅಭಿಪ್ರಾಯ ಗಳನ್ನು ಇಂದೂ ಪುನರುಚ್ಚರಿಸುತ್ತಿದ್ದೇವೆ. ಅನೇಕ ಹೊಸ ಶಾಸನಗಳು, ಕಾವ್ಯಗಳು ದೊರೆತಿದ್ದು, ಹೊಸಬೆಳಕನ್ನು ಚೆಲ್ಲುವ ಕಡೆಗೆ ವಿವರವಾದ ಪುನರಧ್ಯಯನ ನಡೆಯ ಬೇಕಿದೆ.

ವಿಜಯನಗರ ಪಟ್ಟಣವನ್ನು ರಾಜಧಾನಿಯನ್ನಾಗಿಸಿಕೊಂಡು ಆಳ್ವಿಕೆ ನಡೆಸಿದ ಸಂಗಮ, ಸಾಳುವ ಮತ್ತು ತುಳುವ ವಂಶಗಳ ಕಾಲದಲ್ಲಿ ವಿಜಯನಗರ ಪಟ್ಟಣ ಹಂತಹಂತವಾಗಿ ಬೆಳೆದ ಬಗ್ಗೆ ಅಧ್ಯಯನ ನಡೆಯಬೇಕಾಗಿದೆ.

ಒಂದು ವಂಶದ ಆಳ್ವಿಕೆ ಅಂತ್ಯವಾಗಿ ಇನ್ನೊಂದು ವಂಶ ಅಧಿಕಾರಕ್ಕೆ ಬಂದಾಗ ವಿಜಯನಗರ ಮಾಂಡಳಿಕರು ಈ ಬದಲಾವಣೆಗಳನ್ನು ಸಾರಾಸಗಟಾಗಿ ಒಪ್ಪಿಕೊಂಡರೆ ಅಥವಾ ಪ್ರತಿಭಟಿಸಿದರೆ ಎಂಬ ಬಗ್ಗೆ ಸೂಕ್ಷ್ಮ ಅಧ್ಯಯನ ನಡೆಯಬೇಕಿದೆ.

ಅಂತಿಮವಾಗಿ ಹಂಪಿ ಉತ್ಸವದ ಅಂಗವಾಗಿ ನಡೆಸವ 'ವಿಜಯನಗರ ಅಧ್ಯಯನ'ದ ಸಮ್ಮೇಳನಕ್ಕೆ ನನ್ನನ್ನು ಸಮ್ಮೇಳನದ ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿ ಗೌರವಿಸಿರುವಿರಿ, ಇಂತಹ ಅವಕಾಶವನ್ನು ಕಲ್ಪಿಸಿದ ರಾಜ್ಯಪುರಾತತ್ವ ಇಲಾಖೆಯ ನಿರ್ದೇಶಕರಾದ ಡಾ. ಆರ್. ಗೋಪಾಲ್ ಅವರಿಗೆ ನನ್ನ ಕೃತಜ್ಞತೆಗಳು. ನನ್ನ ಚಿಂತನೆಯ ಕೆಲವು ಮಾತುಗಳನ್ನು ಆಲಿಸಿದ ತಮಗೂ ಕೃತಜ್ಞತಾ ಪೂರ್ವಕವಾದ ವಂದನೆಗಳು.

೧. ವಿಜಯನಗರ ಕಾಲೀನ ಒಂದು ಹೊಸ ಶಾಸನ

ಡಾ. ಪಿ. ಎನ್. ನರಸಿಂಹಮೂರ್ತಿ

ಕರಾವಳಿ ಕರ್ನಾಟಕದಲ್ಲಿ ವಿಜಯನಗರ ಕಾಲದ ಶಿಲಾಶಾಸನಗಳು ಅಧಿಕ ಸಂಖ್ಯೆಯಲ್ಲಿ ದೊರೆತಿವೆ.[1] ಕೇಂದ್ರ ಶಾಸನ ಇಲಾಖೆಯ ವಾರ್ಷಿಕ ವರದಿಯಲ್ಲಿ ಬಹಳಷ್ಟು ಶಾಸನಗಳು ವರದಿಯಾಗಿವೆ. [2] ಸೌತ್ ಇಂಡಿಯನ್ ಇನ್ ಸ್ಕ್ರಿಪ್ಶನ್ಸ್ ಸಂಪುಟಗಳಲ್ಲಿ ಹಲವಾರು ಶಾಸನಗಳ ಪಾಠಗಳೂ ಪ್ರಕಟವಾಗಿವೆ.[3] ಶಾಸನ ಇಲಾಖೆಯಲ್ಲದೆ ಇಲ್ಲಿಯ ಕೆಲವು ವಿದ್ವಾಂಸರು ಹೊಸ ಶಾಸನಗಳನ್ನು ಪತ್ತೆ ಹಚ್ಚಿದ್ದಾರೆ. [4] ಹಾಗಾಗಿ ಈ ಭಾಗದಲ್ಲಿ ವಿಜಯನಗರ ಕಾಲೀನ ಶಾಸನಗಳ ಸಂಖ್ಯೆ ಬೆಳೆಯುತ್ತಲೇ ಇದೆ. ನನ್ನ ತಿರುಗಾಟದ ಸಮಯದಲ್ಲಿ ದೊರೆತಿರುವ ಹಲವು ಶಾಸನಗಳಲ್ಲಿ ಒಂದನ್ನು ಪ್ರಸ್ತುತ ಅಧ್ಯಯನಕ್ಕಾಗಿ ಆರಿಸಿಕೊಂಡಿದ್ದೇನೆ. [5]

ಈ ಶಾಸನ ದೊರೆತಿರುವುದು ಕಾರ್ಕಳ ತಾಲ್ಲೂಕಿನ ಕಾಂತಾವರಕ್ಕೆ ಅತಿಸಮೀಪ ಇರುವ ಗದ್ದೆಯೊಂದರಲ್ಲಿ [ಈಗ ಇದನ್ನು ತೆಂಗಿನ ತೋಟವನ್ನಾಗಿ ಪರಿವರ್ತಿಸಿದ್ದಾರೆ. ಇದನ್ನು 'ಕಿನ್ನಿಜಾಲು' ಎಂದು ಕರೆಯುತ್ತಾರೆ. ಇದು ಇರುವುದು ಪಾಲಡ್ಕ ಗ್ರಾಮದ ಶೆಟ್ಟಿಬೆಟ್ಟು ಎಂಬಲ್ಲಿ. ಕಾರ್ಕಳ ತಾಲ್ಲೂಕಿಗೆ ಸೇರಿದ್ದ ಈ ಗ್ರಾಮ ಈಗ ಜಿಲ್ಲಾ ಪುನರ್ ರಚನೆ ನಂತರ ಮಂಗಳೂರು ತಾಲ್ಲೂಕಿಗೆ ಸೇರಿದೆ.]

ಇದೊಂದು ಪುಟ್ಟ ಸ್ತಂಭಶಾಸನ, ಆರು ಮುಖಗಳಿರುವ ಈ ಸ್ತಂಭ ಪ್ರಾಚೀನ ಆಳುಪರು ಹಾಕಿಸಿರುವ ಸ್ತಂಭಶಾಸನಗಳಂತಿದೆ. [6] ಮೇಲ್ಭಾಗದಲ್ಲಿ ಶಿವಲಿಂಗ ಮತ್ತು ನಂದಿಯ ಕೆತ್ತನೆ ಇದೆ. ಸ್ತಂಭದ ಐದು ಮುಖಗಳಲ್ಲಿ ಶಾಸನದ ಕೆತ್ತನೆಯಿದ್ದು, ಒಟ್ಟು ೧೨ ಸಾಲುಗಳ ಬರಹ ಇದೆ. ಶಾಸನ ಪಾಠಪೂರ್ಣವಾದಂತೆ ಕಾಣುವುದಿಲ್ಲ. ಆದರೂ ಶಾಸನ ವಿಷಯವನ್ನು ಅರ್ಥೈಸುವಲ್ಲಿ ಯಾವ ತೊಡಕೂ ಇಲ್ಲ.[7]

ಶಾಸನ "ಸ್ವಸ್ತಿ ಶ್ರೀಮತು ಮಹಾರಾಯ ಹರಿಯಪ್ಪ ವೊಡೆಯರು ರಾಜ್ಯಮಂಗೈವುತ್ತಿರಲು" ಎಂದು ಪ್ರಾರಂಭವಾಗುತ್ತದೆ. [8] ಮುಂದೆ "ಪ್ರಧಾನಿ ಹಡಪದ ಗೋಪರಸರು ಮಂಗಲೂರು ರಾಜ್ಯಂಗೈವುತ್ತಿರ್ದ್ದ ಸರ್ವಜಿತು ಸಂವತ್ಸರ ಮೇ ಮಾಸ ೨೦ನೆಯ ಬ್ರಿಹ್ಮಸ್ಪತಿ ಬಾರದಂದು." [9] ಕಾಂತೇಶ್ವರ ದೇವರಿಗೆ ಮಾಡಿದ ದಾನವೊಂದನ್ನು ಇದು ದಾಖಲಿಸಿದೆ.

ಶಾಸನದಲ್ಲಿ ಶಕ ವರ್ಷದ ಉಲ್ಲೇಖ ಇಲ್ಲ. ಹಾಗಾಗಿ ಇಲ್ಲಿರುವ ತೇದಿ ವಿವರವನ್ನು ಕ್ರಿಸ್ತ ವರ್ಷಕ್ಕೆ ಸಮೀಕರಿಸಲು ಇರುವ ಇತರ ಮಾರ್ಗಗಳನ್ನು ಅನುಸರಿಸಬೇಕಾಗಿದೆ. ಹರಿಯಪ್ಪವೊಡೆಯನೊಂದಿಗೆ ಪ್ರಧಾನಿ ಹಡಪದ ಗೋಪರಸನನ್ನು ಇಲ್ಲಿ ಉಲ್ಲೇಖಿಸುತ್ತೆ. ಇದು ಶಕ ವರ್ಷವನ್ನು ನಿರ್ಧರಿಸಲು ಸಹಕಾರಿಯಾಗಿದೆ. ಶಾಸನ ದೊರೆತ ಸ್ಥಳ ಶೆಟ್ಟಿಬೆಟ್ಟಿಗೆ ಅತಿ ಸಮೀಪದಲ್ಲಿದೆ ಕಾಂತಾವರದ ಕಾಂತೇಶ್ವರ ದೇವಾಲಯ. ಇಲ್ಲಿ ದೊರೆತಿರುವ ಹಲವಾರು ಶಾಸನಗಳಲ್ಲಿ 'ಶ್ರೀ ವೀರಹರಿಯಪ್ಪ ವೊಡೆಯ" ಮತ್ತು ಆತನ 'ಪ್ರಧಾನಂ ಹಡದದ ಗೌಪರಸ (ಗೋಪರಸ)' ನನ್ನ ಹೆಸರಿಸುವ ಶಾಸನವೂ ಒಂದು.[10] ಇದರಲ್ಲಿರುವ ತೇದಿ ವಿವರ "ಸರ್ವಧಾರಿ ಸಂವತ್ಸರದ ವ್ರಿಷಭ ಮಾಸ ೪ನೆಯ ಮಂಗಳವಾರ."[11] ಇಲ್ಲೂ ಸಹ ಶಕ ವರ್ಷದ ಉಲ್ಲೇಖ ಇಲ್ಲ. ಆದರೆ ಈರ್ವರು ಹರಿಹರ ರಾಜರ ಆಳ್ವಿಕೆ ಅವಧಿಯ ಆಧಾರದಲ್ಲಿ ಕೆ.ವಿ. ರಮೇಶ್ ಅವರು ಈ ಶಾಸನ ಕಾಲವನ್ನು ಕ್ರಿ.ಶ. ೧೩೪೮ ಏಪ್ರಿಲ್ ೨೯ ಎಂದು ನಿರ್ಧರಿಸಿದ್ದಾರೆ. [12] ಇದು ಒಂದನೆಯ ಹರಿಹರನ ಆಡಳಿತಾವಧಿಗೆ ಸೇರುವುದಾದ್ದರಿಂದ ಶಾಸನದಲ್ಲಿ ಹೆಸರಿಸಿರುವ "ಶ್ರೀ ವೀರ ಹರಿಯಪ್ಪ ವೊಡೆಯ" ನನ್ನು ಒಂದನೆಯ ಹರಿಹರ ಎಂದು ಗುರುತಿಸಿದ್ದಾರೆ. [13] ಈ ಆಧಾರದಲ್ಲಿ ಕಾಂತಾವರದ ಶಾಸನವು ಶಕ ವರ್ಷ ೧೨೭೦ ಕ್ಕೆ ಸೇರಿದ್ದಾಗುತ್ತದೆ.

ಶೆಟ್ಟಿಬೆಟ್ಟಿನ ಕನ್ನಿಜಾಲುಗದ್ದೆಯಲ್ಲಿ ದೊರೆತಿರುವ ಶಾಸನವು ಸರ್ವಜಿತು ಸಂವತ್ಸರಕ್ಕೆ ಸೇರಿದ್ದು ಇಲ್ಲೂ 'ಹರಿಯಪ್ಪ ವೊಡೆಯ' ಮತ್ತು ಆತನ ಪ್ರಧಾನಿ 'ಹಡಪದ ಗೋತರಸ'ರನ್ನು ಹೆಸರಿಸಲಾಗಿದೆ. ಅಂದರೆ ಕಾಂತಾವರ ಶಾಸನಕ್ಕೆ ಒಂದು ವರ್ಷ ಮೊದಲು ಈ ಶಾಸನ ಹುಟ್ಟಿತು. ಸಂವತ್ಸರ ಕ್ರಮಾಂಕದಲ್ಲಿ ಸರ್ವಜಿತು. ನಂತರ ಬರುವುದು ಸರ್ವಧಾರಿ ಸಂವತ್ಸರ. ಅಂದ ಮೇಲೆ ಪ್ರಸಕ್ತ ಶಾಸನವ ಶಕ ವರ್ಷ ೧೨೬೯ಕ್ಕೆ ಸೇರಿದ್ದಾಗುತ್ತದೆ. ಇದು ಕ್ರಿ.ಶ. ೧೩೪೭ ಏಪ್ರಿಲ್ ೧೪ಕ್ಕೆ ಸರಿ ಹೊಂದುತ್ತದೆ. [14] ಶೆಟ್ಟಿ ಬೆಟ್ಟಿನ ಶಾಸನ ಸ್ಥಳವು ಹಿಂದೆ ಕಾಂತೇಶ್ವರನಿಗೆ ದಾನಕೊಟ್ಟಿದ್ದ ಸ್ಥಳವಾಗಿತ್ತೆಂದು ಕಾಣುತ್ತದೆ. ಈ ಭೂಮಿಯ ಮೂಲಿಗರಿಗೆ. ಅಂದರೆ ಅದರ ಮೇಲಿನ ಮೂಲ ಹಕ್ಕನ್ನು ಹೊಂದಿದ್ದವರಿಗೆ ಮಾದಡಹರು ಹೊನ್ನುಕೊಟ್ಟು 'ಮಂಜತ್ತಾಯಂ ಬೆಟ್ಟ ಮನೆ, ಬಾವಿ, ಮಕ್ಕೆ ಮರಡುಲ ಸಹಿತ'ವಾದ ಆ ಬಾಳನ್ನು[14] ತಮ್ಮ ಸುಪರ್ದಿಗೆ ತೆಗೆದುಕೊಂಡರೆಂದು ಶಾಸನ ಹೇಳುತ್ತದೆ. ಯಾಕಾಗಿ ಈ ಹಣ ಕೊಡಬೇಕಾಯಿತು ಮತ್ತು ಎಷ್ಟು ಚಿನ್ನದ ನಾಣ್ಯಗಳನ್ನು ಕೊಡಲಾಯಿತು ಎಂಬುದು ಶಾಸನದಲ್ಲಿಲ್ಲ. ಪ್ರಾಯಶಃ ಹಿಂದೆ ಭೂಮಿಯನ್ನು ದೇವಾಲಯಕ್ಕೆ ದಾನ ಮಾಡಿದಾಗ ಅದರ ಮೇಲಿನ ಮೂಲಹಕ್ಕು ವರ್ಗಾವಣೆ ಆಗಿರಲಿಲ್ಲ. ಕಾಲಕಳೆದಂತೆ ವ್ಯವಹಾರದಲ್ಲಿ ತೊಡಕನ್ನು ತಂದೊಡ್ಡಿರಬೇಕು. ಮಾದಡಹರು ಮೂಲಿಗರಿಗೆ ಹೊನ್ನು ಕೊಡುವ ಮೂಲಕ ಈ ತೊಡಕನ್ನು ನಿವಾರಿಸಿದ್ದಾರೆ. ಇದರಿಂದ ಮಾದಡಹರು ಮಂಜತ್ತಾಯಂ ಬೆಟ್ಟಿನ ಭೂಮಿಗೆ ಒಡೆಯರಾದರು.

ಕಾಂತವರ ಶಾಸನದಲ್ಲಿ ಈ ಭೂಮಿಯನ್ನು ದೇವಸ್ಥಾನದ ದಾನವಾಗಿ ಸ್ಥಿರೀಕರಿಸಿದ ವಿಚಾರ ಇದೆ.

ಉಳಿದಂತೆ ಮಾಮೂಲು ವಿಜಯನಗರ ಶಾಸನಗಳ ಪಾಲಿಗೆ ಸೇರುವ ಶಾಸನ ಇದಾದರೂ ಶೆಟ್ಟಿಬೆಟ್ಟಿನ ಈ ದಾಖಲೆ ಕಾರ್ಕಳ ವಲಯದಲ್ಲಿ ದೊರೆತಿರುವ ಈ ಕಾಲದ ಪ್ರಥಮ ಪ್ರಾಚೀನ ಶಾಸನ. ಇದು ಕಾಂತಾವರ ದೇವಾಲಯದ ಶಾಸನವನ್ನು ಒಂದು ವರ್ಷ ಒಂದಕ್ಕೆ ಹಾಕಿದೆ. ಈ ನಿಟ್ಟಿನಲ್ಲಿ ಕರಾವಳಿಯ ದಕ್ಷಿಣ ಭಾಗದಲ್ಲಿ ಒಂದನೆಯ ಹರಿಹರನ ಕಾಲಕ್ಕೆ ಸೇರುವ ಕೆಲವು ಶಾಸನಗಳತ್ತ ಗಮನ ಹರಿಸುವುದು ಸೂಕ್ತ.

ಮಂಗಳೂರಿನ ಅತ್ತಾವರದಲ್ಲಿ ಸದ್ಯಕ್ಕೆ ಅತ್ಯಂತ ಪ್ರಾಚೀನವೆನ್ನಬಹುದಾದ ವಿಜಯನಗರದ ಶಾಸನ ದೊರೆತಿದೆ. [15] ಇದೊಂದು ದಾನ ಶಾಸನ, ಬಹಳ ತ್ರುಟಿತವಾಗಿದೆ. "ಶ್ರೀ ಮನ್ಮಹಾಮಂಡಲೇಶ್ವರ ಶ್ರೀ ವೀರ ಬುಕ್ಕಣ್ಣ ಒಡೆಯರಿಗೆ ರಾಜ್ಯಾಭ್ಯುದಯ ವಾಗಬೇಕೆಂದು ಮಂಗಲೂರ ರಾಜ್ಯವನಾಳುವ ಸಂಕರದೇವ ಒಡೆಯರ" ಎಂಬಲ್ಲಿಂದ ಮುಂದಕ್ಕೆ ಶಾಸನ ಬರಹ ಅಳಿಸಿ ಹೋಗಿದೆ. ಪ್ರಾಯಶಃ ಇದು ರಾಜ್ಯಪಾಲ ಮಾಡಿದ ದಾನವೊಂದನ್ನು ದಾಖಲಿಸಿತ್ತು. ಶಾಪಾಶಯ ಭಾಗದಿಂದ ಇದು ವೇದ್ಯವಾಗುತ್ತದೆ. ಶಾಸನ ಪ್ರಾರಂಭವಾಗುವುದೇ ತೇದಿ ವಿವರದೊಂದಿಗೆ. ಇದು ಶಕ ವರುಷ ೧೨(೬೭)ನೇ(ಯ ಪಾರ್ಥಿವ) ಸಂವತ್ಸರದ ಮಾಘಮಾಸ (೧೪)ನೆಯ ಸೋ(ಮವಾರ). ಇದು ಕ್ರಿ.ಶ. ೧೩೪೬ ಫೆಬ್ರವರಿ ೪ಕ್ಕೆ ಸರಿ ಹೊಂದುತ್ತದೆ. ಆದರೆ ವಾರದದಿನ ಮಾತ್ರ ಭಾನುವಾರ (ಸೋಮವಾರ ಅಲ್ಲ). ಇದು ಶೆಟ್ಟಿಬೆಟ್ಟು ಶಾಸನಕ್ಕಿಂತ ಹದಿನಾಲ್ಕು ತಿಂಗಳುಗಳಿಗಿಂತ ಹೆಚ್ಚು ಹಿಂದಿನದು. ಹಾಗಾಗಿ ಇದು ವಿಜಯನಗರಕಾಲೀನ ಈ ಭಾಗದ ಶಾಸನಗಳಲ್ಲಿ ಪ್ರಥಮದ್ದು.

ಕೆ.ವಿ. ರಮೇಶ ಅವರು ಈ ಶಾಸನದ ತೇದಿ ವಿವರಗಳನ್ನು ಕ್ರಿ.ಶ. ೧೩೪೫ ಜನವರಿ ೧೭ಕ್ಕೆ ಸಮೀಕರಿಸಿದ್ದಾರೆ. [16] ಹೀಗೆ ಕಾಲವನ್ನು ಒಂದು ವರ್ಷ ಹಿಂದಕ್ಕೆ ಹಾಕಿರುವುದಕ್ಕೆ ಕಾರಣವನ್ನೇನೂ ಅವರು ಕೊಟ್ಟಿಲ್ಲ. ಪಾರ್ಥಿವ ಸಂವತ್ಸರವು ಶಕ ೧೨೬೭ರಲ್ಲಿದ್ದ ಕಾರಣ ಇದರ ತೇದಿ ವಿವರಗಳನ್ನು ಕ್ರಿ.ಶ. ೧೩೪೬ ಫೆಬ್ರವರಿ ೪ಕ್ಕೇ ಸಮೀಕರಿಸ ಬೇಕಾಗುತ್ತದೆ.

ಒಂದನೆಯ ಹರಿಹರನ ಕಾಲದ್ದಾದರೂ ಶಾಸನ ಹೆಸರಿಸಿರುವುದ ಬುಕ್ಕಣ್ಣ ಒಡೆಯನನ್ನು. ವಿಜಯನಗರ ಇತಿಹಾಸದಲ್ಲಿ ಹರಿಹರನು ತನ್ನ ತಮ್ಮ ಬುಕ್ಕನನ್ನು ಕ್ರಿ.ಶ. ೧೩೪೪ ರ ವೇಳೆಗೆ ಯುವಜರಾಜನನ್ನಾಗಿ ಮಾಡಿದ್ದ ವಿಷಯ ತಿಳಿಯುತ್ತಿದೆ. [17] ಇದರಿಂದಾಗಿ ಶಾಸನಗಳಲ್ಲಿ ಬುಕ್ಕ ರಾಯನೂ ಉಲ್ಲೇಖಿತನಾಗಿದ್ದಾರೆ. ಅತ್ತಾವರ ಶಾಸನ ಇದಕ್ಕೊಂದು ಉದಾಹರಣೆ.

ಹರಿಹರನ ಕಾಲದ್ದಾದರೂ ಅವನನ್ನಾಗಲೀ ಅಥವಾ ಬುಕ್ಕನನ್ನಾಗಲೀ ಹೆಸರಿಸದೆ ಬಾರಕೂರಿನ ರಾಜ್ಯಪಾಲನಾಗಿದ್ದ ಮಹಾಪ್ರಧಾನ ಮಲೆದಣ್ಣಾಯಕನನ್ನು ಉಲ್ಲೇಖಿಸಿರುವ ಶಾಸನ ಕುಂದಾಪುರ ತಾಲ್ಲೂಕಿನ ಕೆರೆಗಾಲುವಿನಲ್ಲಿ ದೊರೆತಿದೆ. [18] ಇದು ಕ್ರಿ.ಶ. ೧೩೪೭ ಏಪ್ರಿಲ್ ೩೦ಕ್ಕೆ ಸೇರಿದ್ದು. ಅಂದರೆ ಶೆಟ್ಟಿಬೆಟ್ಟು ಶಾಸನ ಹಾಕಿಸಿದ ಎರಡು ವಾರಗಳ ನಂತರ ಹಾಕಿಸಿದ ಶಾಸನ.

ಈ ಶಾಸನಗಳಿಂದ ತಿಳಿದುಬರುವ ಮುಖ್ಯ ಅಂಶವೆಂದರೆ ಕ್ರಿ.ಶ. ೧೩೪೬ರ ವೇಳೆಗಾಗಲೇ ಇಡೀ ಪಶ್ಚಿಮ ಕರಾವಳಿ ವಿಜಯನಗರದ ಅರಸರ ವಶವಾಗಿದ್ದು, ಅವರು ಇಲ್ಲಿ ದಕ್ಷ ಆಡಳಿತಕ್ಕಾಗಿ ಸೂಕ್ತ ವ್ಯವಸ್ಥೆಯನ್ನು ಮಾಡಿದ್ದರು ಎಂಬುದು. ಕರಾವಳಿಯನ್ನು ಎರಡು ಪ್ರಾಂತಗಳನ್ನಾಗಿ ವಿಂಗಡಿಸಿ ಹಿಂದಿನ ರಾಜಧಾನಿಗಳಾಗಿದ್ದ ಬಾರಕೂರು ಮತ್ತು ಮಂಗಳೂರು ನಗರಗಳನ್ನು ಇವುಗಳ ರಾಜಧಾನಿಯನ್ನಾಗಿ ಮಾಡಿ ಆಡಳಿತ ಮುಖ್ಯರಾದ ರಾಜ್ಯಪಾಲರನ್ನು ನೇಮಿಸಿದ್ದರು. ಈ ಪ್ರಾಂತಗಳು ಶಾಸನಗಳಲ್ಲಿ ಹೆಸರಿಸಿರುವಂತೆ ಬಾರಕೂರು ರಾಜ್ಯ ಮತ್ತು ಮಂಗಳೂರು ರಾಜ್ಯ ಎಂದಾದವು. ಅತ್ತಾವರ ಮತ್ತು ಕಾಂತಾವರ ಶಾಸನಗಳ ಆಧಾರದಲ್ಲಿ ಹೇಳುವುದಾದರೆ ಮಂಗಳೂರು ರಾಜ್ಯಕ್ಕೆ ಆ ವೇಳೆಗಾಗಲೆ ಇಬ್ಬರು ರಾಜ್ಯಪಾಲರಾಗಿದ್ದರು. ಮೊದಲನೆಯವ ಸಂಕರದೇವ, ಎರಡನೆಯವ ಗೌತರಸ (ಗೋತರಸ). ಇದು ಆ ವೇಳೆಗಾಗಲೆ ವಿಜಯನಗರದ ಆಡಳಿತದಲ್ಲಿ ಅಧಿಕಾರಿಗಳ ನೇಮಕ, ಬದಲಾವಣೆ ಮತ್ತು ವರ್ಗಾವಣೆ ನೀತಿ ಆಚರಣೆಗೆ ಬಂದಿತ್ತು ಎಂಬುದನ್ನು ತಿಳಿಸುತ್ತದೆ. ಕರಾವಳಿಯಲ್ಲಿ ರಾಜ್ಯಪಾಲರ ನೇಮಕ ಮತ್ತು ವರ್ಗಾವಣೆ ಬಹಳ ವ್ಯವಸ್ಥಿತವಾಗಿ ನಡೆಯುತ್ತಿದ್ದುದನ್ನು ಇಲ್ಲಿಯ ಶಾಸನಗಳು ತಿಳಿಸುತ್ತವೆ [19] ಕೆಲವೊಮ್ಮೆ ಒಬ್ಬನೇ ಎರಡೂ ರಾಜ್ಯಗಳಿಗೆ (ಪ್ರಾಂತಗಳಿಗೆ) ರಾಜ್ಯಪಾಲನಾಗಿದ್ದ ಉದಾಹರಣೆಗಳೂ ಇವೆ. ಬಾರಕೂರಿನ ರಾಜ್ಯಪಾಲನಾಗಿದ್ದ ಮಹಾ ಪ್ರಧಾನ ಮಲೆಯದಣ್ಣಾಯಕ ಮಾತ್ರ ಇಲ್ಲಿ ಬಹಳ ದೀರ್ಘಕಾಲದವರೆಗೆ ಕಾರ್ಯನಿರ್ವಹಿಸಿದ್ದ. ಪ್ರಾಯಶಃ ಬಾರಕೂರು ರಾಜ್ಯ (ಪ್ರಾಂತ)ದ ರಚನೆಯಾದ ಕಾಲದಿಂದ ಕ್ರಿ.ಶ. ೧೩೬೫ರ ಕೊನೆಯವರೆಗೆ ಈ ಹುದ್ದೆಯಲ್ಲಿ ಇದ್ದ. [20] ಇವನ ಉಲ್ಲೇಖ ಇರುವ ಪ್ರಥಮ ದಾಖಲೆ ಕ್ರಿ.ಶ. ೧೩೪೭ಕ್ಕೆ ಸೇರಿದ್ದು.

ಕ್ರಿ.ಶ. ೧೩೪೬ ರ ಪ್ರಾರಂಭಕ್ಕೆ ವಿಜಯನಗರದ ಅಧಿಕಾರ ಕರಾವಳಿಯ ಮೇಲೆ ಸ್ಥಾಪಿತವಾಗಿದ್ದು ಆಡಳಿತದ ವ್ಯವಸ್ಥಿತ ಏರ್ಪಾಡುಗಳು ಸ್ಥಿರವಾಗಿ ಕಾರ್ಯ ನಿರ್ವಹಿಸಿದ್ದವು ಎನ್ನುವುದು ಮುಖ್ಯವಾಗಿ ಗಮನಿಸಬೇಕಾದ ವಿಷಯ. ಇದನ್ನು ಪುಷ್ಟೀಕರಿಸಲು ದೊರೆತಿರುವ ಶಾಸನಗಳಿರುವುದು ಕುಗ್ರಾಮಗಳಲ್ಲಿ. ಅಂದರೆ ವಿಜಯನಗರದ ಆಡಳಿತ ಕೇವಲ ಹೆಸರಿಗೆ ಸ್ಥಾಪಿತವಾಗಿರದೆ ಅದು ಇಡೀ ಪ್ರದೇಶವನ್ನು ಆವರಿಸಿ ಅದರ ಇರುವಿಕೆಯ ಅನುಭವ ಕೇವಲ ಆಡಳಿತ ವರ್ಗಕ್ಕಲ್ಲದೆ ಜನಸಾಮಾನ್ಯರಿಗೂ ಆಗಿತ್ತು.

ಅಂದರೆ ಆ ವೇಳೆಗಾಗಲೆ ಇಲ್ಲಿಯ ಜನ ಹೊಸ 'ಒಡೆಯರ' ಆಡಳಿತಕ್ಕೆ ಸಹಮತ ವ್ಯಕ್ತಪಡಿಸಿ ಜೀವನ ನಡೆಸಿದ್ದರು. ಕರಾವಳಿಯ ಸೂಕ್ಷ್ಮ ರಾಜಕೀಯ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ನೋಡುವುದಾದರೆ ವಿಜಯನಗರದ ಸಂಗಮ ಸೋದರರು ಕರಾವಳಿಯ ಮೇಲೆ ತಮ್ಮ ಹಿಡಿತವನ್ನು ವಿಸ್ತರಿಸಿದ್ದು ರಾಜಕೀಯ ಮುತ್ಸದ್ದಿತನದ ಒಂದು ಮಹತ್ಸಾಧನೆ. ಕ್ರಿ.ಶ. ೧೩೪೬ ಕ್ಕೂ ಮೊದಲೇ ಈ ಕಾರ್ಯಸಾಧಿಸಿ ಪಶ್ಚಿಮ ಕರಾವಳಿಯನ್ನು ತಮ್ಮ ಭದ್ರನೆಲೆಯನ್ನಾಗಿ ಮಾಡಿಕೊಂಡರು. ಈ ಅಭಿಪ್ರಾಯಕ್ಕೆ ಪುಷ್ಟಿಕೊಡುವಂತಿದೆ ಶೃಂಗೇರಿಯ ಒಂದು ಶಾಸನ.[21]

ಮಲೆನಾಡಿನ ಕೊಪ್ಪ, ಶೃಂಗೇರಿ ಭಾಗಗಳು ಅತ್ಯಂತ ಪ್ರಾಚೀನಕಾಲದಿಂದಲೂ ಆಳುಪ ರಾಜ ವಂಶದ ಆಳ್ವಿಕೆಗೆ ಒಳಪಟ್ಟಿದ್ದವು. ಕಿಗ್ಗದ ದೇವಸ್ಥಾನದಲ್ಲಿ ದೊರೆಯುವ ಎರಡು ಅತ್ಯಂತ ಪ್ರಾಚೀಕ ಆಳುಪ ಶಾಸನಗಳು ಇದಕ್ಕೆ ಸಾಕ್ಷಿಯಾಗಿವೆ. [22] ಶೃಂಗೇರಿಯಲ್ಲಿ ದೊರೆತಿರುವ ಒಂದು ಶಾಸನವೂ ಇದಕ್ಕೆ ಪುಷ್ಟಿ ಕೊಡುವಂತಿದೆ. [23] ಈ ಶಾಸನದ ಕಾಲ ಶಕವರ್ಷ ೧೨೬೮ ಪಾರ್ಥಿವ ಸಂವತ್ಸರ, ಫಾಲ್ಗುಣ. ಬ. ೧ ಗುರುವಾರ. ಇದು ಕ್ರಿ.ಶ. ೧೩೪೬ ಮಾರ್ಚ್ ೯ಕ್ಕೆ (A.D. 1346 March 9) ಸರಿ ಹೊಂದುತ್ತದೆ. ಮಂಗಳೂರಿನ ಅತ್ತಾವರದ ಶಾಸನ (ಮಾಘ ೧೪) ಹುಟ್ಟಿದ ಕೇವಲ ಒಂದು ತಿಂಗಳ (೩೨ ದಿನಗಳ) ನಂತರ ಹುಟ್ಟಿದ ಶಾಸನ ಇದು. ಇದೊಂದು ಬಹಳ ಮುಖ್ಯವಾಗಿ ಗಮನಿಸಬೇಕಾದ ಅಂಶ.

ಅರಿರಾಯ ವಿಭಾಡ ಭಾಷೆಗೆ ತಪ್ಪುವ ರಾಯರ ಗಂಡ ಎಂದು ಬಿರುದಾಂಕಿತನಾದ ಮಹಾಮಂಡಲೇಶ್ವರ ವೀರಹರಿಯಪೊಡೆಯನು (ತನ್ನ ತಮ್ಮಂದಿರಾದ) ಕಂಪಣ, ಬುಕ್ಕಂಣ, ಮಾರಪ ಮತ್ತು ಮಾದಪ, ಅಳಿಯ ಬಲ್ಲಪ್ಪ ದಂಣಾಯಕ ಮತ್ತು ಕುಮಾರ ದೇವಂಣ್ನೊಡೆಯರೊಡಗೂಡಿ ಸಿಂಗೇರಿ (ಶೃಂಗೇರಿ) ತೀರ್ಥವಾಸದಲ್ಲಿ ಅನುಷ್ಠಾನ ಮಾಡಿಕೊಂಡಿದ್ದ ಭಾರತೀ ತೀರ್ಥ್ಥ ಶ್ರೀಪಾದಂಗಳು ಮತ್ತು ಅವರ ಶಿಷ್ಯಾದಿಗಳ ಭಿಕ್ಷೆ ಮತ್ತು ಸ್ವಾಸ್ಥೆಗಾಗಿ ಸಾಂತಳಿಗೆ ನಾಡೊಳಗಿನ ಕೆಲ ನಾಡಿನಲ್ಲಿದ್ದ ಒಂಬತ್ತು ಗ್ರಾಮಗಳನ್ನು ಸರ್ವ ಸ್ವಾಮ್ಯ ಸಹಿತವಾಗಿ ದಾನ ಮಾಡಿದ್ದನ್ನು ಈ ಶಾಸನ ತಿಳಿಸುತ್ತದೆ. ಶಾಸನದಲ್ಲಿ ಗ್ರಾಮಗಳ ಹೆಸರು, ಹುಟ್ಟುವಳಿ, ತೆರಿಗೆ ಇತ್ಯಾದಿ ವಿವರಗಳಿವೆ.

ಇದೇ ಶಾಸನದ ಕೊನೆಯ ಭಾಗದಲ್ಲಿ ಇನ್ನೊಂದು ದಾನ ದಾಖಲಾಗಿದೆ. ಈ ದಾನ ಮಾಡಿದ್ದು 'ಶ್ರೀ ಮತ್ಪಾಂಡ್ಯ ಚಕ್ರವರ್ತಿ ಅರಿರಾಯ ಬಸವಶಂಕರ ರಾಯಗಜಾಂಕುಶ' ಎಂದು ಬಿರುದಾಂಕಿತಳಾಗಿದ್ದ ಶ್ರೀ ವೀರಕಿಕ್ಕಾಯಿ ತಾಯಿ. ಈಕೆ ಸಾಂತಳಿಗೆ ನಾಡೊಳಗಣ ಮೇಲುಭಾಗದಲಿದ್ದ ಕೆಲನಾಡು, ಕೈಮಲೆಯ ಹೊಸವೂರು ಮತ್ತು ಕನ್ಯಾನ (ಗ್ರಾಮ) ಗಳನ್ನು ಭಾರತೀತೀರ್ಥ್ಥ ಶ್ರೀ ಪಾದಂಗಳು (ಮತ್ತವರ) ಶಿಷ್ಯರಿಗೆ ಧಾರೆ ಎರೆದುಕೊಟ್ಟಳು (ಶಾಸನ ಪಾಠ-ಸಾಲು 34-36)

ವೀರ ಕಕ್ಕಾಯಿ ತಾಯಿಯು ಹೊಯ್ಸಳ ಮುಮ್ಮಡಿ ಬಲ್ಲಾಳನ ರಾಣಿ, ಆಳುಪ ರಾಜಕುವರಿ. ಹೊಯ್ಸಳ ಬಲ್ಲಾಳನು ತನ್ನ ಆಧಿಪತ್ಯವನ್ನು ಘಟ್ಟದ ಕೆಳಗಣ ಪ್ರದೇಶಗಳಿಗೆ ವಿಸ್ತರಿಸಿದಾಗ ಅದರ ಆಡಳಿತ ಜವಾಬ್ದಾರಿಯನ್ನು ತನ್ನ ರಾಣಿಗೆ ಕೊಟ್ಟ. ಶಾಸನಗಳು ಈಕೆಯನ್ನು ಚಿಕ್ಕಾಯಿತಾಯಿ ಎಂದೂ ಹೆಸರಿಸಿವೆ. ಬಲ್ಲಾಳ ಮತ್ತು ಚಿಕ್ಕಾಯಿ ತಾಯಿ ಇವರುಗಳ ಆಡಳಿತ ವಿಚಾರ ತಿಳಿಸುವ ಶಾಸನಗಳು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕ್ರಿ.ಶ. ೧೩೩೩ ರಿಂದಲೇ ದೊರೆಯುತ್ತವೆ.[24] ಬಾರಕೂರು ರಾಜಧಾನಿ ಯಾಗಿದ್ದ ಈಕೆಯ ಕರಾವಳಿ ರಾಜ್ಯ ಉತ್ತರದಲ್ಲಿ ಹೊನ್ನಾವರದವರೆಗೆ ಹರಡಿತ್ತು. ಮಲೆನಾಡಿನಲ್ಲಿದ್ದ ಸಾಂತಳಿಗೆ ನಾಡು ಇವಳ ಆಧಿಪತ್ಯದೊಳಗೆ ಇತ್ತು. ಹರಿಹರನು ಭಾರತೀ ತೀರ್ಥ ಶ್ರೀಪಾದಂಗಳಿಗೆ ದಾನ ಮಾಡಿದ ಒಂಬತ್ತು ಗ್ರಾಮಗಳು ಈಕೆಯ ಆಧಿಪತ್ಯದೊಳಗಿದ್ದ ಸಾಂತಳಿಗೆ ನಾಡವೊಳಗೆ ಇದ್ದವು. ಅಷ್ಟೇ ಅಲ್ಲ ಕ್ಷೇತ್ರ ಶೃಂಗೇರಿ ಇದ್ದುದೂ ಇದೇ ನಾಡೊಳಗೆ. ಆದರೆ ಗ್ರಾಮಗಳನ್ನು ದಾನ ಮಾಡುವ ಮೊದಲು ಕಿಕ್ಕಾಯಿ (ಚಿಕ್ಕಾಯಿ) ತಾಯಿಯೊಂದಿಗೆ ಹರಿಹರನು ಸಮಾಲೋಚನೆ ಮಾಡಿದ್ದನೆ ಎಂಬುದು ಶಾಸನದಿಂದ ತಿಳಿಯುವುದಿಲ್ಲ. ಪ್ರಯಶಃ ಈ ದಾನಕಾರ್ಯಕ್ಕೆ ಈರ್ವರ ಸಹಮತ ಇತ್ತು. ಹಾಗಾಗಿ ಈರ್ವರೂ ಮಾಡಿದ ದಾನಗಳನ್ನು ಒಂದೆಡೆ ದಾಖಲಿಸಿದ್ದಾರೆ. ಕುಟುಂಬಸಹಿತವಾಗಿ ಗುರುಗಳ ದರ್ಶನಕ್ಕಾಗಿ ಹರಿಹರ ಬಂದದ್ದು ಕಿಕ್ಕಾಯಿ ತಾಯಿ ರಾಜ್ಯದೊಳಗಿದ್ದ ಶೃಂಗೇರಿಗೆ. ಸೌಜನ್ಯದ ಭೇಟಿಗಾಗಿ ರಾಜಧಾನಿ ಬಾರಕೂರಿನಿಂದ ರಾಣಿ ಕಿಕ್ಕಾಯಿ (ಚಿಕ್ಕಾಯಿ) ತಾಯಿ ಶೃಂಗೇರಿಗೆ ಬಂದಳು. ಆದರೆ ಆ ವೇಳೆಗಾಗಲೆ ಬಾರಕೂರಿ ನಲ್ಲಿದ್ದ ವಿಜಯನಗರದ ರಾಜ್ಯಪಾಲ ರಾಜನ ಭೇಟಿಗಾಗಿ ಶೃಂಗೇರಿಗೆ ಬಂದನೇ ಎಂಬುದು ಮಾತ್ರ ತಿಳಿಯುವುದಿಲ್ಲ. ಶಾಸನದಲ್ಲಿ ಈ ಬಗ್ಗೆ ಯಾವ ಮಾಹಿತಿಯೂ ಇಲ್ಲ.

ಆ ಸಮಯದಲ್ಲಿ ಬಾರಕೂರು ನಗರದ ಸ್ಥಾನಮಾನ ಹಳ ವಿಚಿತ್ರ ರೀತಿಯಲ್ಲಿತ್ತು. ಪ್ರಾಯಶಃ ಬೇರಾವುದೇ ಪ್ರಾಚೀನ ರಾಜಧಾನಿ ನಗರಗಳಿಗೆ ಇಲ್ಲದ ರಾಜಕೀಯ ವರ್ಚಸ್ಸು ಇದರದು. ಸೀತಾನದಿಯಿಂದ ಸುತ್ತವರೆಯಲ್ಪಟ್ಟು (ಆದರೆ ಇದು ದ್ವೀಪ ಅಲ್ಲ) ಸಮುದ್ರಕ್ಕೆ ಅತಿ ಸಮೀಪದಲ್ಲಿರುವ ಈ ಬಂದರುನಗರ ಅತ್ಯಂತ ಪ್ರಾಚೀನ ಕಾಲದಿಂದ ಆಳುಪರ ರಾಜಧಾನಿಯಾಗಿತ್ತು. ಹೊಯ್ಸಳ ಮುಮ್ಮಡಿ ಬಲ್ಲಾಳನು ಈ ಭಾಗದ ಮೇಲಿನ ಹಿಡಿತವನ್ನು ಸಾಧಿಸಿ ಅದನ್ನು ತನ್ನ ನೇರ ಆಳ್ವಿಕೆಗೆ ತಂದ. ಅಂದಿನಿಂದ ಬಾರಕೂರು ಹೊಯ್ಸಳರ ರಾಜಧಾನಿಯಾಯಿತು. ಈತನ ಪಟ್ಟದ ಪಿರಿಯರಸಿ ವೀರ ಕಕ್ಕಾಯಿ (ಚಿಕ್ಕಾಯಿ) ತಾಯಿ ಈ ನಗರದದಿಂದ ತನ್ನ ಆಳ್ವಿಕೆ ನಡೆಸಿದಳು. ಆದರೆ ಹೊಯ್ಸಳರು ಆಳುಪರನ್ನು ಅಧಿಕಾರದಿಂದ ಕಿತ್ತೊಗೆಯಲಿಲ್ಲ. ಹಾಗಾಗಿ ಆಳುಪರೂ ತಮ್ಮ ಎಂದಿನ ರಾಜಕೀಯ ಚಟುವಟಿಕೆಗಳನ್ನು ಅರಸೊತ್ತಿಗೆಯಸಹಿತ ಮುಂದುವರೆಸಿದರು. ಅದೂ

ತಮ್ಮ ಮೂಲ ರಾಜಧಾನಿ ಬಾರಕೂರು ನಗರದಿಂದಲೇ ! [25] ಹೊಯ್ಸಳ ಮುಮ್ಮಡಿ ಬಲ್ಲಾಳನು ಮಲೆನಾಡು ಮತ್ತು ಕರಾವಳಿಯ ಮೇಲಿನ ತನ್ನ ಹಿಡಿತವನ್ನು ಕಾಯ್ದುಕೊಳ್ಳುವ ಸಲುವಾಗಿ ಬಾರಕೂರಿನಲ್ಲಿ ತನ್ನ ಸೈನಿಕ ನೆಲೆಯನ್ನು ಸ್ಥಾಪಿಸಿದ ಮತ್ತು ಈ ನೆಲೆಗೆ ಆಗಿಂದಾಗ್ಗೆ ಭೇಟಿ ಸಹ ಕೊಡುತ್ತಿದ್ದ. [26] ಕ್ರಿ.ಶ. ೧೩೩೮ ಕ್ಕೆ ಸೇರುವ ಅರಸೀಕೆರೆ ತಾಲ್ಲೂಕು ಆಲದಹಳ್ಳಿಯ ಒಂದು ಶಾಸನ. [27] ಇದನ್ನು ಪುಷ್ಟೀಕರಿಸುತ್ತದೆ. ಹೀಗೆ ಆಳುಪ ಹೊಯ್ಸಳರಿಬ್ಬರ ರಾಜಧಾನಿಯಾಯಿತು ಬಾರಕೂರು. ಮುಂದೆ ವಿಜಯ ನಗರದ ಆಡಳಿತ ಈ ಭಾಗಕ್ಕೆ ವಿಸ್ತಾರಗೊಂಡಾಗ ಇಲ್ಲಿ ಎರಡು ಪ್ರಾಂತಗಳು ನಿರ್ಮಾಣ ವಾದವು. ದಕ್ಷಿಣ ಭಾಗಕ್ಕೆ ಮಂಗಳೂರು ರಾಜಧಾನಿ ಆದರೆ ಉತ್ತರ ಭಾಗಕ್ಕೆ ಬಾರಕೂರು ರಾಜಧಾನಿ ಆಯಿತು. ಹೀಗೆ ಏಕಕಾಲದಲ್ಲಿ ಮೂರು ಶಕ್ತಿಗಳ ಕೇಂದ್ರ ಸ್ಥಾನವಾಯಿತು ಬಾರಕೂರು ನಗರ.

ಇದು ಸಾಧ್ಯವೇ ಎಂಬ ಪ್ರಶ್ನೆ ಏಳುವುದು ಸಹಜ. ಈ ಭಾಗದಲ್ಲಿ ದೊರೆತಿರುವ ಶಾಸನಗಳು ಇದರ ಸಾಧ್ಯತೆಗೆ ಆಧಾರಗಳಾಗಿವೆ. [28] ಪರಸ್ಪರರಲ್ಲಿದ್ದ ರಾಜಕೀಯ ತಿಳು ವಳಿಕೆ ಅದರಿಂದ ಮೂಡಿದ ಸಹಮತ ಪ್ರಾಯಶಃ ಈ ಸಮನ್ವಯ ಸಾಧನಕ್ಕೆ ಕಾರಣ ಇರಬಹುದು.

ಕ್ರಿ.ಶ. ೧೩೫೦ರ ವೇಳೆಗೆ ಹೊಯ್ಸಳರ ಆಳ್ವಿಕೆ ಇಲ್ಲಿ ಕೊನೆಗೊಂಡಂತೆ ಕಾಣುತ್ತದೆ. ಅವರ ಕೊನೆಯ ಶಾಸನ ಕ್ರಿ.ಶ. ೧೩೪೮ಕ್ಕೆ ಸೇರಿದ್ದು. [29] ಆಳುಪ ವಂಶ ಆನಂತವೂ ಇತ್ತು. ಸುಮಾರು ಕ್ರಿ.ಶ. ೧೩೬೦ರ ವೇಳೆಗೆ ಇವರು ಬಾರಕೂರಿನಿಂದ ನಿರ್ಗಮಿಸಿರಬೇಕು. ಈ ಭಾಗದಲ್ಲಿ ದೊರೆಯುವ ಇವರ ಕೊನೆಯ ಶಾಸನ ಕ್ರಿ.ಶ. ೧೩೫೫ ಡಿಸೆಂಬರ್ ೨೪ಕ್ಕೆ ಸೇರಿದ್ದು. [30] ಕರ್ನಾಟಕದ ಬೇರಾವ ಭಾಗದಲ್ಲೂ ನಿರ್ಮಾಣವಾಗದಿದ್ದಂತಹ ಮತ್ತು ಬೇರಾವ ಕಾಲದಲ್ಲೂ ಕಾಣದಂತಹ ರಾಜಕೀಯ ಪರಿಸ್ಥಿತಿಯನ್ನು (ಅವಿಭಜಿತ) ದಕ್ಷಿಣ ಕನ್ನಡ (ಕರ್ನಾಟಕ ಕರಾವಳಿಯ ದಕ್ಷಿಣ ಭಾಗ) ದಲ್ಲಿ ಹದಿನಾಲ್ಕನೆಯ ಶತಮಾನದ ಪೂರ್ವಾರ್ಧದಲ್ಲಿ ಕಾಣುತ್ತೇವೆ. ಇಲ್ಲಿಯ ಈ ರಾಜಕೀಯ ಸಾಮರಸ್ಯ ಮತ್ತು ಪರಿಸ್ಥಿತಿಯ ಸೂಕ್ಷ್ಮತೆಯ ಅರಿವು ಇತಿಹಾಸಕ್ಕೆ ಅಪೂರ್ವವಾದ ಸಂಗತಿ. ಇದು ಹೊಯ್ಸಳರ ಕೊನೆಯ ದಿನಗಳು ಮತ್ತು ವಿಜಯನಗರದ ಪ್ರಾರಂಭಿಕ ಕಾಲದಲ್ಲಿ ಕರಾವಳಿಯಲ್ಲಿದ್ದ ಪರಿಸ್ಥಿತಿ. ಇದರ ಆಧಾರದಲ್ಲಿ ಮೇಲೆ ಉದಹರಿಸಿರುವ ವಿಜಯ ನಗರದರಸರ ಶೃಂಗೇರಿ ಶಾಸನವನ್ನು ಇಲ್ಲಿ ಮತ್ತೊಮ್ಮೆ ಅವಲೋಕಿಸಲಾಗಿದೆ.

ಕ್ರಿ.ಶ. ೧೩೪೬ ಮಾರ್ಚ್ ೯ (ಶಕ ೧೨೬೮, ಪಾರ್ಥಿವ ಸಂ| ಫಾಲ್ಗುಣ. ಬ. ೧ ಗುರುವಾರ)ಕ್ಕೆ ಸೇರುವ ಈ ಶಾಸನ *ವಿದ್ಯಾತೀರ್ಥಾಯ ಗುರವೇ* ಪರಸ್ಮೈ ತೇಜಸೇನಮಃ (ವಿದ್ಯಾತೀರ್ಥರೆಂಬ ಪರಂಜ್ಯೋತಿಗೆ ನಮಸ್ಕಾರ) ಎಂದು ಪ್ರಾರಂಭವಾಗುತ್ತದೆ. ನಂತರ ಉಕ್ತವಾಗಿರುವ ಒಂದು ಸಂಸ್ಕೃತ ಪದ್ಯ ಬಹಳ ಮುಖ್ಯವಾದುದು.

ಪೂರ್ವಾಪರ ಸಮುದ್ರಾಂತಂ ಜಿತ್ವಾ ಹರಿಹರೋ ಭುವಂ|
ಜಯೋತ್ಸವಂ ಖ್ಯಾಪಯಿತು ಮಕರೋದ್ಧರ್ಮ್ಮ ಮುತ್ತಮಂ|| [31]

"ಹರಿಹರ ಮಹಾರಾಯರು ಪೂರ್ವ ಪಶ್ಚಿಮ ಸಮುದ್ರಗಳೇ ಮೇರೆಯಾಗಿರುವ ಭೂಮಿಯನ್ನು ಗೆದ್ದು ವಿಜಯೋತ್ಸವವನ್ನು ಪ್ರಸಿದ್ಧಗೊಳಿಸಲು ಉತ್ತಮವಾದ ಧರ್ಮವನ್ನು ಮಾಡಿದರು." [32]

ಅಂದರೆ ಪೂರ್ವದ ಬಂಗಾಳಕೊಲ್ಲಿಯಿಂದ ಪಶ್ಚಿಮದ ಅರಬಿ ಸಮುದ್ರದ ವರೆಗಿನ ವಿಶಾಲವಾದ ಭೂಪ್ರದೇಶವನ್ನು ಗೆದ್ದನಂತರ ಉತ್ತಮವಾದ ಧರ್ಮವನ್ನು ಮಾಡುವ ಮೂಲಕ ರಾಜ ಹರಿಹರನು ತನ್ನ ವಿಜಯವನ್ನು ಪ್ರಕಟಗೊಳಿಸಿದನು. ಅಂದಿನ ರಾಜಕೀಯ ಪರಿಸ್ಥಿತಿಯ ಅರಿವಿದ್ದಲ್ಲಿ ಗೊತ್ತಿರುತ್ತದೆ ಹರಿಹರನ ಸಾಧನೆ ಎಷ್ಟು ದುಸ್ತರವಾದುದೆಂದು. ದೆಹಲಿ ಸುಲ್ತಾನರ ಧಾಳಿಗಳಿಗೆ ಸಿಲುಕಿದ್ದ ದಕ್ಷಿಣ ಭಾರತದ ರಾಜಕೀಯ ಶಕ್ತಿ ಉಡುಗಿಹೋಗಿತ್ತು. ಅದುವರೆಗೂ ಪೈಪೋಟಿ ನಡೆಸಿದ್ದ ಪ್ರಬಲ ಶಕ್ತಿಗಳು ತಮ್ಮ ಅಸ್ತಿತ್ವವನ್ನೇ ಕಳಕೊಂಡಿದ್ದವು. ಉಳಿದವು ಕಳಾಹೀನವಾಗಿದ್ದರೂ ವೈಮನಸ್ಯದ ತುಣುಕುಗಳಾಗಿ ಒಗ್ಗಟ್ಟು ಮತ್ತು ಭದ್ರತೆಗೆ ಮುಳ್ಳುಗಳಾಗಿದ್ದವು.[33] ಹೊಯ್ಸಳ ಮುಮ್ಮುಡಿ ಬಲ್ಲಾಳನು ಪರಿಸ್ಥಿತಿಯ ಕ್ಲಿಷ್ಟತೆಯ ಅರಿವು ಹೊಂದಿದ್ದು ಅದನ್ನು ಸರಿಪಡಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ. [34] ತನ್ನ ಮಂತ್ರಿಗಳು, ದಂಡ ನಾಯಕರು. ಸಾಮಂತರು ಮತ್ತು ಪ್ರಾಂತೀಯ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಅಧಿಕಾರವನ್ನು ವಿಕೇಂದ್ರೀಕರಿಸುವ ಪ್ರಯತ್ನ ಮಾಡಿದ. ತನ್ನ ಆಶಯವನ್ನು ಸಾಕಾರಗೊಳಿಸಬಲ್ಲಂತಹ ನಿಷ್ಠಾವಂತ ಮತ್ತು ಮುತ್ಸದ್ದಿ ಸಾಮಂತಾಧಿಕಾರಿಗಳಿಗೆ ಹೆಚ್ಚಿನ ಜವಾಬ್ದಾರಿಗಳನ್ನು ನೀಡಿದ. [35] ಹೀಗೆ ಹೆಚ್ಚಿನ ಜವಾಬ್ದಾರಿ ಪಡೆದು ಕಾರ್ಯಪ್ರವೃತ್ತರಾದವರಲ್ಲಿ ಹರಿಹರ ಅತ್ಯಂತ ಪ್ರಮುಖನಾದವನು. [36]

"As Ballala was intent upon defending the northern frontiers of his empire, which he strengthened with new fortifications, he might have entrusted the responsibility to Harihara who was the most fitted officer for this commission. Thus, while Ballal could concentrate his resources in the south and south - east, Harihara was left free to pursue his task in the north and north-west. Harihara's success in this direction is attested by his construction of a fort at Badami farher in the north and extension of his sway in the northern zone of west coast which was acknowledged by the Muslim governer of that area". ಇದು ಹೊಯ್ಸಳ ಬಲ್ಲಾಳ ಮತ್ತು ಹರಿಹರ ಇವರುಗಳ ಕಾರ್ಯಯೋಜನೆ ಕುರಿತಾಗಿ ಪಿ.ಬಿ. ದೇಸಾಯಿಯವರು ವ್ಯಕ್ತಪಡಿಸಿರುವ ಅಭಿಪ್ರಾಯ. [37]

ತನ್ನ ವೃದ್ಧಾಪ್ಯ ಮತ್ತು ಸಾಧಿಸಬೇಕಾದ ಕಾರ್ಯಗಳ ಮಹತ್ವವನ್ನು ಗಮನದಲ್ಲಿರಿಸಿಕೊಂಡು ಸಾಮ್ರಾಜ್ಯದ ಉತ್ತರ ಭಾಗದಲ್ಲಿ ತನ್ನ ಆಶಯವನ್ನು ಸಾಕ್ಷಾತ್ಕರಿಸುವ ಸಲುವಾಗಿ ಹರಿಹರನಿಗೆ ಸಂಪೂರ್ಣ ಸ್ವತಂತ್ರ ಸ್ವಾಯತ್ತ ರಾಜ್ಯಾಧಿಕಾರವನ್ನು ಹೊಯ್ಸಳ ಬಲ್ಲಾಳ ಕೊಡಮಾಡಿದ. ಇದರಿಂದ ಹಂಪೆ ಸುತ್ತಮುತ್ತಲಿನ ಪ್ರದೇಶದಲ್ಲಿದ್ದ ಅತೃಪ್ತ ಮತ್ತು ದಂಗೆನಿರತ ತುಂಡರಸರನ್ನೆಲ್ಲಾ ಸೋಲಿಸಿ ತನ್ನ ಆಜ್ಞಾವರ್ತಿಗಳನ್ನಾಗಿ ಪರಿವರ್ತಿಸುವಲ್ಲಿ ಹರಿಹರ ಜಯಶಾಲಿಯಾದ. [38]

ಸ್ವತಂತ್ರ ಸ್ವಾಯತ್ತ ಅಧಿಕಾರವಾಗಿ ರಾಜ್ಯಾಡಳಿತದ ಗುರುತರ ಜವಾಬ್ದಾರಿ ದತ್ತವಾದ (ಕ್ರಿ.ಶ. ೧೩೩೬) ನಾಲ್ಕು ವರ್ಷಗಳಲ್ಲೆ ತನ್ನ ತಮ್ಮಂದಿರ ಸಹಕಾರದಿಂದ ಪೂರ್ವ ಪಶ್ಚಿಮವಾಗಿ ಹರಿದಿದ್ದ ವಿಶಾಲವಾದ ಉತ್ತರದ ಭೂಭಾಗವನ್ನು ಶತ್ರು ಧಾಳಿಯಿಂದ ಹರಿಹರ ಮುಕ್ತಗೊಳಿಸಿದ. [39] ಇದನ್ನೇ ಶೃಂಗೇರಿ ಶಾಸನದಲ್ಲಿ "*ಪೂರ್ವಾಪರ ಸಮುದ್ರಾಂತಂ ಜಿತ್ವಾ ಹರಿಹರೋ ಭುವಂ।*" ಎಂದಿರುವುದು. [40] ಕ್ರಿ.ಶ. ೧೩೩೨ ರ ವೇಳೆಗೆ ತುಳುನಾಡನ್ನು ತನ್ನ ನೇರ ಆಡಳಿತಕ್ಕೆ ವೊಳಪಡಿಸಿ ಅಲ್ಲಿ ತನ್ನ ಪಟ್ಟದ ಪಿರಿಯರಸ ಚಿಕ್ಕಾಯಿತಾಯಿ ಮತ್ತು ಆಕೆಯ ಮಗನನ್ನು ಆಡಳಿತಕ್ಕೆ ನಿಯುಕ್ತಿಗೊಳಿಸಿ ತನ್ನ ರಾಜಧಾನಿ ಯನ್ನು ತಮಿಳುನಾಡಿನ (ದಕ್ಷಿಣ ಆರ್ಕಾಟ್ ಜಿಲ್ಲೆಯ) ತಿರುವಣ್ಣಾಮಲೆಗೆ ವರ್ಗಾಯಿಸಿಕೊಂಡು ಅಲ್ಲಿಂದಲೇ ತನ್ನ ಮಹತ್ವಾಕಾಂಕ್ಷೀ ಯೋಜನೆಗಳನ್ನು ರೂಪಿಸಿ ಅವನ್ನು ಸಾಕಾರಗೊಳಿಸಲು ಹೊಯ್ಸಳ ಬಲ್ಲಾಳನಿಗೆ ಹರಿಹರನ ಆವಶ್ಯಕತೆ ಹಿಂದೆಂದಿಗಿಂತಲೂ ಈಗ ಹೆಚ್ಚಾಗಿತ್ತು. ಹೀಗಾಗಿ ತನ್ನ ರಾಜ್ಯದ ಉತ್ತರ ಭಾಗದ ಕಾರ್ಯಭಾರದ ಸಂಪೂರ್ಣ ಜವಾಬ್ದಾರಿಯನ್ನು ಮುತ್ಸದ್ದಿ ಬಲ್ಲಾಳನು ಹರಿಹರನಿಗೆ ಪೂರ್ಣ ಅಧಿಕಾರಸಹಿತ ಪ್ರದಾನ ಮಾಡಿದ. ಈ ಅಧಿಕಾರ ಹಸ್ತಾಂತರ ಕ್ರಿ.ಶ. ೧೩೩೬ರಲ್ಲಿ (ಅಥವಾ ಆ ವೇಳೆಗೆ) ನಡೆದಿರಬೇಕು. ಇದರಿಂದಾಗಿ ಸ್ವಂತ ನೆಲೆಯಲ್ಲಿ ಸೂಕ್ತ ನಿರ್ಧಾರಗಳನ್ನು ಕೈಗೊಂಡು ಮಿಲಿಟರಿ ಕಾರ್ಯಚರಣೆಗಳನ್ನು ನಡೆಸಿ ಪೂರ್ವ - ಪಶ್ಚಿಮ ಸಮುದ್ರಗಳ ನಡುವಿನ ವಿಶಾಲವಾದ ಭೂಪ್ರದೇಶವನ್ನು ತನ್ನ ವಶ ಮಾಡಿಕೊಂಡು ಅಲ್ಲಿ ಶಾಂತಿಯನ್ನು ಮರುಸ್ಥಾಪಿಸಲು ಹರಿಹರನಿಗೆ ಸಾಧ್ಯವಾಯಿತು. ಈ ಕಾರ್ಯಸಾಧನೆಗೆ ಸಾಕಷ್ಟು ಸಮಯವೂ ಬೇಕಿತ್ತು. ಈ ವಿಷಯವನ್ನು ಪುಷ್ಟೀಕರಿಸುವಂತಿದೆ ಕುಗ್ವೆ ಶಾಸನದ ವಕ್ಕಣೆ [41] ಕ್ರಿ.ಶ. ೧೩೩೯ ಏಪ್ರಿಲ್ ೧೩ಕ್ಕೆ ಸೇರುವ ಈ ಶಾಸನದಲ್ಲಿ - "ಶ್ರೀವೀರ ಹರಿಹರವೊಡೆಯರು ಪೃತುವೀರಾಜ್ಯವ ನಾಳುವ ಕಾಲದಲ್ಲಿ" [42] ಎಂದಿದೆ. ಆ ವೇಳೆಗಾಗಲೇ ಹರಿಹರನಿಗೆ ಸ್ವಂತ ನೆಲೆಯಲ್ಲಿ ರಾಜ್ಯಾಡಳಿತದ ಅಧಿಕಾರ ಹಸ್ತಾಂತರವಾಗದಿದ್ದಲ್ಲಿ ಈ ರೀತಿಯಾಗಿ "ಹರಿಹರ ವೊಡೆಯರು ಪೃತುವೀ ರಾಜ್ಯವನಾಳುವ ಕಾಲದಲ್ಲಿ" ಎಂಬ ವಕ್ಕಣೆ ಶಾಸನದಲ್ಲಿ ಬರಲು ಸಾಧ್ಯವಿರುತ್ತಿರಲಿಲ್ಲ.

ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ತಾಳಗುಪ್ಪ ಹೋಬಳಿಯಲ್ಲಿದ್ದ ಗ್ರಾಮ ಕುಗ್ವೆ (ಈಗಲೂ ಸಹ). ಇದು ಪಶ್ಚಿಮ ಕರಾವಳಿಗೆ ಅತಿ ಸಮೀಪದಲ್ಲಿದ್ದ ಆಯಕಟ್ಟಿನ ಸ್ಥಳ. ಎರಡೂ ಕಡೆಯ ಸಾರಿಗೆ ಸಂಪರ್ಕ ಮಾರ್ಗ ಇಲ್ಲಿ ಹಾದು ಹೋಗಿತ್ತು. ಕರಾವಳಿಯಲ್ಲಿ ಹೊಯ್ಸಳ ರಾಣಿ ಚಿಕ್ಕಾಯಿ ತಾಯಿಯ ಅಧಿಕಾರ ಇತ್ತು. ಹಾಗಾಗಿ ಹರಿಹರನಿಗೆ ಅತಿರಂಜಿತವಾಗಿ ತನ್ನ ಅಧಿಕಾರ ಪ್ರಕಟಿಸುವ ಸಾಧ್ಯತೆ ಇರಲಿಲ್ಲ. ಶಾಸನದಲ್ಲಿ ಹರಿಹರನಿಗಿದ್ದ 'ರಾಜ' ಅಧಿಕಾರ ಸ್ಪಷ್ಟವಾಗಿ ಮತ್ತು ಸರಳವಾಗಿ ನಿರೂಪಿತವಾಗಿದೆ. ಪರಿಸ್ಥಿತಿ ಹೀಗಿದ್ದರೂ "ಕ್ರಿ.ಶ. ೧೩೪೬ ರಲ್ಲಿ ಶೃಂಗೇರಿಗೆ ದಾನಕೊಟ್ಟಿರುವುದರಿಂದ ಕ್ರಿ.ಶ. ೧೩೪೫ರ ಕೊನೆಗೆ, ಅಂದರೆ ವಿಜಯದಶಮಿಯ ಸುಮಾರಿಗೆ ಹರಿಹರನು ರಾಜ್ಯಸೂತ್ರ ವಹಿಸಿಕೊಂಡಿರಬೇಕು[43] ಎಂದು ಹೇಳುವುದು ಎಷ್ಟು ಸಮಂಜಸ?

ಇದು ಇಷ್ಟೇ ಅಲ್ಲ. ಮುಂದುವರೆದು "ಆದರೆ, ಇಂತಹ ಪ್ರಮುಖ ವಿಷಯಗಳಲ್ಲಿ ಘಟನೆ ಮತ್ತು ದಾನದ ನಡುವೆ ಇಷ್ಟೊಂದು ಅಂತರ ಇರಲಾರದು. ಆದ್ದರಿಂದ ಕೆಲವು ವಿದ್ವಾಂಸರು ಗುರುತಿಸುವಂತೆ, ಕ್ರಿ.ಶ. ೧೩೪೬ ಮಾರ್ಚ್ ೯ ಗುರುವಾರವನ್ನು ಸಂಗಮ ಅರಸರ ರಾಜ್ಯ ಸ್ಥಾಪನೆಯ ಕಾಲ ಎಂದು ದೃಢೀಕರಿಸಲಾಗಿದೆಯಲ್ಲದೆ, ಕುಗ್ವೆಯ ಕ್ರಿ.ಶ. ೧೩೩೯ರ ಶಾಸನವನ್ನು ಸಂಗಮ ಅರಸರ ಪ್ರಾಚೀನ ಶಾಸನ ಎಂದು ಇಲ್ಲಿ ಗುರುತಿಸಲಾಗಿದೆ" [44] ಎಂದಿದ್ದಾರೆ. "ಸಂಗಮ ಅರಸರ ಪ್ರಾಚೀನ ಶಾಸನಗಳು" ಪ್ರಬಂಧದ ಲೇಖಕಿ ಕೂ.ಸ. ಅಪರ್ಣ ಅವರು. ಕ್ರಿ.ಶ. ೧೩೪೬ರಲ್ಲಿ ರಾಜ್ಯಸ್ಥಾಪನೆ ಮಾಡಿದರೆ ಅದಕ್ಕೂ ಮೊದಲು ಅಂದರೆ ಕ್ರಿ.ಶ. ೧೩೩೯ರಲ್ಲಿ "ಶ್ರೀ ವೀರಹರಿಹರ ವೊಡೆಯರು ಪೃತು ವಿರಾಜ್ಯವನಾಳುವ ಕಾಲದಲ್ಲಿ" ಎಂದು ಹರಿಹರನು ಶಾಸನ ಹಾಕಿಸಲು ಸಾಧ್ಯವಿತ್ತೆ? ರಾಜ್ಯವೇ ಆ ವೇಳೆಗೆ ಇಲ್ಲದಿದ್ದರೆ ಅದನ್ನು ಆಳುವುದಾದರೂ ಹೇಗೆ? ಕ್ರಿ.ಶ. ೧೩೩೯ರ ಕುಗ್ವೆ ಶಾಸನವನ್ನೂ 'ಸಂಗಮ ಅರಸರ ಪ್ರಾಚೀನ ಶಾಸನ ಎಂದು ಗುರುತಿಸಿದ'ಮೇಲೆ ಅದರಲ್ಲಿರುವ "ಶ್ರೀವೀರ ಹರಿಹರ ವೊಡೆಯರು ಪೃತು ವೀರಾಜ್ಯವನಾಳುವ ಕಾಲದಲ್ಲಿ" ಎಂಬುದನ್ನೂ ಗುರುತಿಸಬೇಕಲ್ಲವೆ? ರಾಜ ಹರಿಹರನಿಗಿದ್ದ ಸ್ವತಂತ್ರ ರಾಜ್ಯ ಪ್ರಭುತ್ವದ ಸ್ಥಾನಮಾನವನ್ನು ಸರಳ ಮತ್ತು ಸ್ಪಷ್ಟ ಮಾತುಗಳಲ್ಲಿ ಈ ಶಾಸನ ದೃಢಪಡಿಸಿದೆ ಎಂದು ಮೇಲೆ ಹೇಳಿದ್ದೇನೆ. ಅಂದರೆ ಹರಿಹರನಿಗೆ ಸ್ವತಂತ್ರ ನೆಲೆಯಲ್ಲಿ ಅವನದೇ ಆದ ರಾಜ್ಯ ಕ್ರಿ.ಶ. ೧೩೩೯ರ ವೇಳೆಗೇ ಸ್ಥಾಪನೆಯಾಗಿತ್ತು. ಇದನ್ನೂ ಆತ ಆಳುತ್ತಿದ್ದ ಎಂಬುದು 'ಪೃತುವೀರಾಜ್ಯವನಾಳುವ ಕಾಲದಲ್ಲಿ' ಎಂಬ ಶಾಸನ ಮಾಹಿತಿಯಿಂದ ದೃಢ ಪಡುತ್ತದೆ. ಅಂದ ಮೇಲೆ ಯಾವ ರೀತಿಯಲ್ಲಿ ಕ್ರಿ.ಶ. ೧೩೪೬'ಸಂಗಮ ಅರಸರ ರಾಜ್ಯ ಸ್ಥಾಪನೆ ಕಾಲ' ಆಗಲು ಸಾಧ್ಯ? ಅಲ್ಲದೆ ಶೃಂಗೇರಿಯ ಶಾಸನದಲ್ಲಿ ಈ ಬಗ್ಗೆ ಯಾವ ಸೂಚನೆಯೂ ಇಲ್ಲ. ಒಂದು ವೇಳೆ ಅಂತಹ ಘಟನೆಯೇನಾದರೂ ನಡೆದಿದ್ದರೆ ಅದು ಶಾಸನದಲ್ಲಿ ದಾಖಲಾಗುತ್ತಿತ್ತು. ಆದರೆ ಆಗಿಲ್ಲ ಅಂದರೆ ಅದು ನಡೆದಿಲ್ಲಾ ಎಂದೇ

ಅರ್ಥ. ಹರಿಹರನು ಮಾಡಿದ ಭೂದಾನವನ್ನು ಶಾಸನ ಅತ್ಯಂತ ಸರಳ ಮತ್ತು ಸೌಮ್ಯ ಭಾಷೆಯಲ್ಲಿ ಹೇಳಿರುವುದೇ ಇದಕ್ಕೆ ನಿದರ್ಶನ. ಅಲ್ಲದೆ ಹರಿಹರನ ದಿಗ್ವಿಜಯದ ವರ್ಣನಾ ರೀತಿಯನ್ನೂ ಗಮನಿಸಬೇಕಾದ್ದೆ. "*ಪೂರ್ವಾಪರ ಸಮುದ್ರಾಂತಂ ಜಿತ್ವಾ ಹರಿಹರೋ ಭುವಂ*" ಎಂದಷ್ಟೆ ಶಾಸನ ಹೇಳುತ್ತದೆ. ಪೂರ್ವ ಮತ್ತು ಪಶ್ಚಿಮ ಸಮುದ್ರಗಳ ನಡುವಿನ ವಿಶಾಲವಾದ ಪ್ರದೇಶವನ್ನು ಜಯಿಸುವುದೇನು ಸಾಮಾನ್ಯ ಕಾರ್ಯವೆ ? ಆದರೂ ಕ್ಲಿಷ್ಟ ಪರಿಸ್ಥಿತಿ ಯೊಂದು ರಾಜಯಕೀಯವಾಗಿ ತಲೆದೋರಿದಾಗ ಅದರ ನಿರೀಕ್ಷೆಗಳನ್ನು ಪೂರೈಸುವುದು ತನ್ನ ಕರ್ತವ್ಯ ಎಂಬ ರೀತಿಯಲ್ಲಿ ಹರಿಹರ ಕಾರ್ಯಸಾಧಿಸಿದ ಎಂಬ ಭಾವದಲ್ಲಿ ಶಾಸನ ದಲ್ಲಿ ಉಕ್ತವಾಗಿದೆ. ಇದಲ್ಲದಿದ್ದಲ್ಲಿ ಹರಿಹರನು ಮಾಡಿದ ಯುದ್ಧಗಳ ದೀರ್ಘ ವರ್ಣನೆಯನ್ನೇ ಶಾಸನದಲ್ಲಿ ಕೊಡ ಬಹುದಿತ್ತು. ಆದರೆ ಶಾಸನದ ಉದ್ದೇಶ ಅದಾಗಿರಲಿಲ್ಲ.

ಇನ್ನು ವಿಜಯೋತ್ಸವ ಆಚರಿಸಿದ ರೀತಿ - 'ಉತ್ತಮವಾದ ಕಾರ್ಯ (ಧರ್ಮ) ಗಳನ್ನೂ ಮಾಡುವ ಮೂಲಕ ತನ್ನ ಜಯವನ್ನೂ ಪ್ರಕಟಿಸಿದ ಎಂದಿದೆ. ಇಲ್ಲೂ ಸಹ ರಂಜನೀಯ ವರ್ಣನೆಗೆ ಅವಕಾಶ ಇತ್ತು. ಆದರೆ ಅದರ ಪ್ರಯೋಗ ಇಲ್ಲಿ ಆಗಿಲ್ಲ. ಅಷ್ಟೇ ಅಲ್ಲ ಶೃಂಗೇರಿಗೆ ಬರುವುದಕ್ಕೂ ಮುಂಚೆ ತಾನು ಜಯಿಸಿದ ಪ್ರದೇಶಗಳಲ್ಲಿ ಶಾಂತಿ ಸ್ಥಾಪನೆ ಮಾಡಿ ಹಲವಾರು ರೀತಿಯ ಸತ್ಕಾರ್ಯ (ದಾನ)ಗಳನ್ನೂ ಹರಿಹರ ಮಾಡಿರುವುದಕ್ಕೆ ಶಾಸನಾಧಾರಗಳಿವೆ. [45] ಶೃಂಗೇರಿಯಲ್ಲಿ ಜಯೋತ್ಸವವನ್ನು ಆಚರಿಸಿ ದ್ದಲ್ಲ; ಬದಲಾಗಿ ಆತ ಹೀಗೆ ಹಲವಾರು ಕಡೆಗಳಲ್ಲಿ ಮಾಡಿದ್ದಾನೆ ಎಂಬ ವಿಷಯ ವನ್ನಷ್ಟೇ ಶಾಸನ ತಿಳಿಸುವು ದಾಗಿದೆ. ಹಾಗಾಗಿ ರಾಜ್ಯ ಸ್ಥಾಪನೆ ವಿಚಾರವಿರಲಿ ಜಯೋತ್ಸವ ಸಹ ಶೃಂಗೇರಿಯಲ್ಲಿ ನಡೆಯಲಿಲ್ಲ. ಕಾರಣ ಹರಿಹರನ ರಾಜ್ಯ ಸ್ಥಾಪನೆ ಆವೇಳೆಗಾಗಲೇ ಆಗಿತ್ತು. ಆನಂತರ ಆತ ಮಾಡಿದ್ದು ರಾಜ್ಯ ವಿಸ್ತರಣಾ ಕಾರ್ಯ. ಶೃಂಗೇರಿ ಶಾಸನ - "*ಪೂರ್ವಾಪರ ಸಮುದ್ರಾಂತಂ ಜಿತ್ವಾ ಹರಿಹರೋ ಭುವಂ*" ಎಂದು ಹೇಳಿರುವುದು ಇದನ್ನೆ. ಈ ಕಾರ್ಯದಲ್ಲಿ ಆತ ಯಶಸ್ವಿಯಾದ. ಇದನ್ನು ಪರೋಕ್ಷವಾಗಿ ಕುಗ್ವೆ, [46] ತಟ್ಟುಕೋಟೆ, [47] ರಾಮಗರಿ, [48] ಕೋಡು ಮೂರು [49] ದೊಡ್ಡ ಕನ್ನಲ್ಲೆ [50] ಇತ್ಯಾದಿ ಶಾಸನಗಳು ಪುಷ್ಟೀಕರಿಸುತ್ತವೆ. ಇವುಗಳು ಕ್ರಿ.ಶ. ೧೩೩೯-೧೩೪೧ರ ಕಾಲಾವಧಿ ಯೊಳಗಿನವು. ಕ್ರಿ.ಶ. ೧೩೩೯-೪೦ಕ್ಕೆ ಸೇರುವ ಬಾದಾಮಿ. ತಟ್ಟುಕೋಟೆ ಶಾಸನದಲ್ಲಿ "ಮಹಾಮಂಡಳೇಸ್ವರಂ ಅರಿರಾಯವಿ (ಭಾಡ*), ಭಾಸೆಗೆ ತಪ್ಪುವ ರಾಯರಗಂಡ ಪೂರ್ವ ಪಶ್ಚಿಮ ಸಮುದ್ರಾಧಿಪತಿ ಶ್ರೀ ವೀರಹಯಪ್ಪ ವೊಡೆಯ "ಎಂಬ ಸ್ಪಷ್ಟ ಉಲ್ಲೇಖ ಇದೆ. ಇಲ್ಲಿ ಹಲವು ದಾನಗಳನ್ನು ಮಾಡಿ ಹರಿಹರ ಕೋಟೆಯೊಂದನ್ನು ಕಟ್ಟಿಸಿದ ಎಂದು ಶಾಸನ ಹೇಳುತ್ತದೆ. ಬೆಂಗಳೂರು ಜಿಲ್ಲೆಯ ಬಾಣಸವಾಡಿಯ (ಕ್ರಿ.ಶ. ೧೩೪೦?) ಶಾಸನ ಹರಿಹರ ನನ್ನು 'ಚತುಸ್ಸಮುದ್ರಾಧಿಪತಿ" ಎಂದು ಕರೆದಿದೆ. ಈ ಎಲ್ಲ ಶಾಸನಗಳೂ ಆ

ಕಾಲದಲ್ಲಿ ಹರಿಹರನು "ಪೃಥುವೀರಾಜ್ಯ" ವಾಳುತ್ತಿದ್ದುದನ್ನು ಹೇಳುತ್ತವೆ. ಅವುಗಳ ಮಹತ್ವವನ್ನು ಪರಿಗಣಿಸಿ, "ಕ್ರಿ.ಶ. ೧೩೩೯ ಪ್ರಮಾಥಿ ಸಂವತ್ಸರದಲ್ಲಿ ಹರಿಹರನ ಆಳ್ವಿಕೆ ಇತ್ತೆಂದು" ಮತ್ತು "ತಟ್ಟುಕೋಟೆಯ ಶಾಸನವು ಗಮನಾರ್ಹ"ವಾದುದೆಂದು ಅಪರ್ಣಾ ಅವರು ತಿಳಿಸಿರುತ್ತಾರೆ. [51] ಹೀಗೆ ಸ್ವತಂತ್ರ ನೆಲೆಯಲ್ಲಿ ಹರಿಹರನು ಸ್ವಾಯತ್ತ ರಾಜ ಪ್ರಭುತ್ವವನ್ನು ಹೊಂದಿದ್ದುದನ್ನು ಗುರುತಿಸಿಯೂ "ಕ್ರಿ.ಶ. ೧೩೩೯ ರಿಂದಲೇ ಸಂಗಮ ಪುತ್ರರು ಈ ನಾಡಿನ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರು ಎಂದು ಮಾತ್ರ ಹೇಳಬಹುದು" ಎಂಬ ಮಾತು[52] ಎಷ್ಟು ಸಮಂಜಸವಾಗುತ್ತದೆ ? ಯಾವ ಅಧಿಕಾರದ ಆಧಾರದಲ್ಲಿ ಇವರು ಅಂದಿನ "ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರು" ಎಂಬುದೂ ಸ್ಪಷ್ಟವಾಗಬೇಡವೇ ?

ಏನೇ ಆಗಲಿ, ಸಂಗಮ ಪುತ್ರರ ರಾಜಕೀಯ ಕಾರ್ಯ ಚಟುವಟಿಕೆಗಳ ಪ್ರಾರಂಭಿಕ ಕಾಲ ಕ್ರಿ.ಶ. ೧೩೩೬ ಎಂಬುದು ಇಲ್ಲಿ ವ್ಯಕ್ತವಾಗಿದೆ. ಅನಂತರವೇ ಹರಿಹರನು ಹಲವು ಭೂ ಭಾಗಗಳನ್ನು ಗೆದ್ದು 'ಪೃತುವೀರಾಜ್ಯವನಾಳುವ ಕಾಲದಲು' ಎಂದು ಶಾಸನ ಹಾಕಿಸಲು ಸಾಧ್ಯವಾಯಿತು. ಈ ಬಗ್ಗೆ ಸದ್ಯಕ್ಕೆ ಪ್ರಥಮ ಮಾಹಿತಿ ದೊರೆಯುವುದು ಕ್ರಿ.ಶ. ೧೩೩೯ರ ಪ್ರಾರಂಭಕ್ಕೆ ಸೇರುವ ಕುಗ್ವೆ ಶಾಸನದಲ್ಲಿ. ಈ ಎರಡರ ನಡುವಿನ ಮೂರು ವರ್ಷಗಳ ಅವಧಿ ಒಂದು ಪ್ರಮುಖ ಪರೀಕ್ಷಾ ಕಾಲ. ತನ್ನ ಧೈರ್ಯ ಮತ್ತು ಸಮಯೋಚಿತ ಕಾರ್ಯಾಚರಣೆಯಿಂದ ಹರಿಹರ ಜಯಶೀಲನಾದ. ಕರ್ನಾಟಕದ ಉತ್ತರ ಭಾಗದ ಪ್ರದೇಶಗಳನ್ನಷ್ಟೇ ಅಲ್ಲದೆ, 'ಪೂರ್ವಾಪರ ಸಮುದ್ರಾಂತಂ' ಪ್ರದೇಶಗಳನ್ನು ಒಂದು ಗೂಡಿಸಿದ. ಇದು ತನ್ನ ಆಸೆಯ ಕಾರ್ಯವಾಗಿದ್ದರೂ ಅದನ್ನು ತನ್ನಿಂದ ಸಾಧಿಸಲು ಸಾಧ್ಯವಿಲ್ಲ ಎಂಬುದನ್ನು ಮನಗಂಡ ಮುತ್ಸದ್ದಿಯಾದರೂ ವೃದ್ಧಾಪ್ಯದಲ್ಲಿದ್ದ ಹೊಯ್ಸಳ ಬಲ್ಲಾಳನು ಈ ಜವಾಬ್ದಾರಿಯನ್ನು ಸಂಪೂರ್ಣ ಸ್ವತಂತ್ರ ಮತ್ತು ಸ್ವಾಯತ್ತ ಅಧಿಕಾರವನ್ನು ಹರಿಹರನಿಗೆ ವಹಿಸಿಕೊಟ್ಟ [53]. ತನಗೆ ಸಂಪೂರ್ಣ ಸ್ವಾತಂತ್ರ್ಯದೊಂದಿಗೆ ದೊರೆತ ಜವಾಬ್ದಾರಿ ಸಂದರ್ಭದಲ್ಲಿ ಹರಿಹರ ಹೊಂದಿದ್ದು ಒಂದು ಪುಟ್ಟ ಪ್ರದೇಶದ ಮೇಲಿನ ಅಧಿಕಾರ. ಇದು ಪ್ರಾಯಶಃ ಇಂದಿನ ಬಳ್ಳಾರಿ ಜಿಲ್ಲೆಯ ಹೊಸಪೇಟೆ ಸುತ್ತ ಮುತ್ತಲಿನ ಪ್ರದೇಶಕ್ಕೆ ಸೀಮಿತವಾಗಿತ್ತು. ಹೀಗೆ ಹುಟ್ಟಿತು ಒಂದು ರಾಜ್ಯ. [54] ಇದನ್ನು ಹರಿಹರ ತನ್ನ ಸೋದರರ ಸಹಕಾರದಿಂದ 'ಪೂರ್ವಾಪರ ಸಮುದ್ರಾಂತಂ' ವಿಸ್ತರಿಸಿದ. ಹೀಗೆ ಸತತ ಪ್ರಯತ್ನದಿಂದ ಪುಟ್ಟ ರಾಜ್ಯವೊಂದು ವಿಶಾಲವಾಗಿ ಬೆಳೆಯಿತು. ಈ ಕಾರ್ಯಾಚರಣೆಯ ಅತ್ಯಂತ ಪ್ರಮುಖವಾದ ಪ್ರಥಮ ಘಟ್ಟವೇ ಕ್ರಿ.ಶ. ೧೩೩೬-೩೯ರ ನಡುವಿನ ಕಾಲ. ತನ್ನ ಜಯವನ್ನು ಸತ್ಕಾರ್ಯ ಮಾಡುವ ಮೂಲಕ ಹರಿಹರ ಆಚರಿಸಿದ. ಮೇಲೆ ಉದಹರಿಸಿರುವ ಹರಿಹರನ ಎಲ್ಲ ಶಾಸನಗಳೂ ದಾನಶಾಸನಗಳೇ ಆಗಿವೆ. ತನ್ನ ಜಯಗಳಿಂದ ನಿಜವಾಗಿಯೂ ಈತ 'ಮಹಾರಾಜಾಧಿರಾಜ' ನಾಗಿದ್ದರೂ ತನ್ನನ್ನು "ಮಹಾಮಂಡಲೇಶ್ವರ" ಎಂದು ಕರೆದುಕೊಂಡ.

ಒಟ್ಟಿನಲ್ಲಿ ಧ್ಯೇಯ ಉದ್ದೇಶಗಳೇನೇ ಇರಲಿ, ಹೊಸತೊಂದು ರಾಜ್ಯದ ಉದಯ ಕ್ರಿ.ಶ. ೧೩೩೬ರಲ್ಲಿ ಆಯಿತು. ಇದು ಹಿಂದಿನವುಗಳಿಗಿತ ಭಿನ್ನವಾಗಿದ್ದು ಮುಂದೆ ವಿಶಾಲ ವಾದ ಸಾಮ್ರಾಜ್ಯವಾಗಿ ಬೆಳೆಯಿತು. ಹಂಪೆ ಪರಿಸರದ ಕೇಂದ್ರಸ್ಥಾನದಿಂದ ಆಳಲ್ಪಟ್ಟ ಇದು ವಿದ್ಯಾನಗರ - ವಿಜಯನಗರ ಎಂದು ನಾಮಾಂಕಿತಗೊಂಡಿತು. ಹೀಗೆ ಹುಟ್ಟಿತು ವಿಜಯನಗರ ಮೊದಲು ರಾಜ್ಯವಾಗಿ ಆಮೇಲೆ ಅದು ಸಾಮ್ರಾಜ್ಯವಾಗಿ ಬೆಳೆಯಿತು.

ಒಂದು ಸಮಸ್ಯೆ

ವಿಜಯನಗರದ ಹುಟ್ಟು ಕ್ರಿ.ಶ. ೧೩೩೬ ರಲ್ಲಿ ಎಂಬುದು ಸ್ಪಷ್ಟವಾಗುತ್ತಿದ್ದರೂ ಅದನ್ನು ಒಪ್ಪಿಕೊಳ್ಳುವುದು ಒಂದು ಸಮಸ್ಯೆಯಾಗಿದೆ. ಅದೇನೆಂದರೆ ಕಾಲವನ್ನು ಒಪ್ಪಿಕೊಂಡ ಕೂಡಲೆ ಅದರೊಂದಿಗೆ ಥಳಕು ಹಾಕಿರುವ ವ್ಯಕ್ತಿಗಳು ಮತ್ತು ಕಥೆಯನ್ನು ಒಪ್ಪಿಕೊಂಡಂತಾಗುತ್ತದೆ ಎಂಬ ಹೆದರಿಕೆ. ಅಲ್ಲದೆ ಅದಕ್ಕೆ ಹೊಂದಿಕೊಂಡಂತೆ ಇರುವ ಶಾಸನ ದಾಖಲೆಗಳನ್ನೂ ಒಪ್ಪಿಕೊಂಡಂತೆ ಎಂಬ ಸಂದೇಹ ಕೂಡ ಇದರಲ್ಲಿ ಸೇರಿದೆ. ಕ್ರಿ.ಶ. ೧೩೩೬ರ ಏಪ್ರಿಲ್ ೧೮ಕ್ಕೆ ಸೇರಿದಂತೆ ಈ ಹಿಂದೆ ದೊರಕಿರುವ ಎರಡು (ಅದರಲ್ಲಿ ಒಂದು ಕಾಗದ) ತಾಮ್ರಪಟ ದಾಖಲೆ ಸ್ವೀಕೃತವಾಗಿಲ್ಲ. [55] ಇಲ್ಲಿ ಬೆಸ್ತರಪಲ್ಲಿಯದನ್ನು ರೈಸ್ ಅವರು ಪತ್ತೆಹಚ್ಚಿ ಪ್ರಕಟಿಸಿದ್ದರೆ ಕಾಪಲೂರಿನ ದಾಖಲೆಯನ್ನು ರಾಬರ್ಟ್ ಸೀವೆಲ್‌ರವರು ಪ್ರಕಟಿಸಿದ್ದಾರೆ. ರೈಸ್ ಅವರಿಗೆ ದೊರೆತದು ಮೂಲಶಾಸನದ ಕಾಗದ ಪ್ರತಿಯಾದ ಕಾರಣ ಆ ಬಗ್ಗೆ ತಮ್ಮ ಅನಿಸಿಕೆಯನ್ನು ಈ ರೀತಿ ಹೇಳಿದ್ದಾರೆ. - " ... From its date this inscription would be of special interest, if authentic, but it cannot be depended on, no original being forthcoming..."[56]) "ಈ ಶಾಸನದಲ್ಲಿರುವ ಕಾಲವು ವಿಶೇಷ ಆಸಕ್ತಿ ಮೂಡಿಸುವಂತಿದ್ದರೂ ಮೂಲ ದಾಖಲೆ ದೊರೆಯದ ಕಾರಣ ಒಪ್ಪುವಂತಿಲ್ಲ" ಎನ್ನುವುದು ರೈಸ್ ಅವರ ವಿಚಾರ. ಈ ಶಾಸನಗಳ ಸಾಲಿಗೆ ಇತ್ತೀಚೆಗೆ ಸೇರ್ಪಡೆಯಾಗಿದೆ. ಲಿಂಗಸುಗೂರು ತಾಲ್ಲೂಕು ಹಾಲ್ಕಾವಟಿಗೆಯಲ್ಲಿ ದೊರೆತಿರುವ ತಾಮ್ರಶಾಸನ. [57] ಈ ಶಾಸನವನ್ನು ಪತ್ತೆ ಹಚ್ಚಿ ಮೊದಲಬಾರಿಗೆ ಸಂಪಾದಿಸಿ ಪ್ರಕಟಿಸಿರುವ (ಪ್ರಬಂಧ 2004ರಲ್ಲಿ, ಪ್ರಕಟಣೆ 2005ರಲ್ಲಿ) ಡಿ.ವಿ. ಪರಮಶಿವ ಮೂರ್ತಿಯವರು - "ಬೆಸ್ತರಹಳ್ಳಿ ಮತ್ತು ಕಾಪಲೂರು ಶಾಸನಗಳ ನೈಜತೆಯ ಬಗ್ಗೆ ವಿದ್ವಾಂಸರು ಅನುಮಾನ ವ್ಯಕ್ತಪಡಿಸಿರುವುದು ಸರಿಯಷ್ಟೇ. ಆದರೆ ಯಾವ ವಿದ್ವಾಂಸರೂ ಇವು ಕೃತಕವೆಂಬುದಕ್ಕೆ ಸರಿಯಾದ ಕಾರಣಗಳನ್ನು ನೀಡಿಲ್ಲ." ಅವುಗಳ ಭಾಷೆ ಬೆಸ್ತರಹಳ್ಳಿ ಶಾಸನ ಕಾಗದದ ಪ್ರತಿ ಎಂಬ ಕಾರಣಕ್ಕೆ, ಕಾಪಲೂರು ಶಾಸನ ಸಂಗಮನ ಹೆಂಡತಿಯ ಹೆಸರನ್ನು ಗಾಳಾಂಬಿಕೆ' ಎಂದಿರುವುದು ಇವು ಕೃತಕ ಎನ್ನುವುದಕ್ಕೆ ಕೊಟ್ಟ ಕಾರಣಗಳು ಎಂದಿದ್ದಾರೆ. [58] ಹಾಲ್ಕಾವಟಿಗಿ ಶಾಸನದ ಬಗ್ಗೆ ಬರೆಯುತ್ತಾ"ಈ ಶಾಸನದ ಲಿಪಿ ಲಕ್ಷಣಗಳು, ವ್ಯಾಕರಣ, ಭಾಷಾಬಳಕೆ ಮತ್ತು ವಿರೂಪಾಕ್ಷನ ಅಂಕಿತ ಮತ್ತು ತಾಮ್ರ

ಪತ್ರಗಳನ್ನು ಕೂಡಿಸಿರುವ ಮುದ್ರೆಯುಂಗುರಗಳನ್ನು ಗಮನಿಸಿದಾಗ ಇದನ್ನು ಕೃತಕ ಶಾಸನವೆಂದು ಕರೆಯಲು ಸಾಧ್ಯವೇ ಇಲ್ಲ. ಎಲ್ಲಾ ಲಕ್ಷಣಗಳಿಂದ ಹಾಲ್ಕಾವಲಿಗಿ ಶಾಸನವು ನೈಜವಾದುದರಿಂದ ಇದೇ ವಿಷಯವನ್ನೊಳಗೊಂಡ ಬೆಸ್ತರ ಹಳ್ಳಿ ಮತ್ತು ಕಾಪಲೂರು ತಾಮ್ರಪಟಗಳೂ ನೈಜವೇ ಆಗುತ್ತವೆ" ಎಂದಿದ್ದಾರೆ. [59]

ಬೆಸ್ತರಪಲ್ಲಿ ಮತ್ತು ಕಾಪಲೂರು ಶಾಸನಗಳ ನೈಜತೆಯ ಆಧಾರದಲ್ಲಿಯೇ ಹಾಲ್ಕಾವಟಿಗೆ ಶಾಸನದ ನೈಜತೆಯನ್ನು ವಿಷಯಾಧಾರಿತ ನೆಲೆಯಲ್ಲಿ ಪ್ರಶ್ನಿಸಲಾಗಿದೆ.[60] ಜನಜನಿತವಾದ ಕಥೆಯನ್ನು ಬಿಂಬಿಸುವ ಇದನ್ನು ಕೂಟ ಎಂದೇ ಪರಿಗಣಿಸಲಾಗಿದೆ. [61] ಹೀಗೆ ಪರಿಗಣಿಸಲು ಇರುವ ನಿರ್ದಿಷ್ಟ ಅಂಶವೆಂದರೆ ಗೊತ್ತಾದ ದಿನದಂದು ವಿಜಯನಗರ ಸ್ಥಾಪನೆ ಮತ್ತು ಈ ಕಾರ್ಯದಲ್ಲಿ ಬಿಂಬಿತವಾಗಿರುವ ವಿದ್ಯಾರಣ್ಯರ ಪಾತ್ರ [62] ತಮ್ಮ ವಿರೋಧ ಇದಕ್ಕೆ ಏಕೆ ಎಂಬುದನ್ನು ಲೇಖಕರು ಸ್ಪಷ್ಟಪಡಿಸಿದ್ದಾರೆ.

ಈ ನಿಟ್ಟಿನಲ್ಲಿ ಹಾಲ್ಕಾವಟಿಗಿ ತಾಮ್ರ ಪಟಗಳ ಬಗ್ಗೆ ಒಂದು ಸಮಯೋಚಿತ ಆಲೋಯಚನೆ ಮಾಡುವುದು ೂಕ್ತ ಎಂದು ಕಾಣುತ್ತದೆ.

ಬೆಸ್ತರಪಲ್ಲಿ ಮತ್ತು ಕಾಪಲೂರು ತಾಮ್ರ ಪಟಗಳು ದೊರೆತು ಅವುಗಳ ಪರಿಶೀಲನೆ ಆದ ಬಹಳ ಕಾಲದನಂತರ ದೊರೆತ ದಾಖಲೆ ಹಾಲ್ಕಾವಟಿಗಿ ತಾಮ್ರಪಟಗಳು. ಇದರ ವಿಷಯಾದಾರಿತ ವಸ್ತು ಸ್ಥಿತಿ ಏನೇ ಇರಲಿ ಇದೊಂದು ವಿಜಯನಗರದ ಇತಿಹಾಸಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ದೊರೆತಿರುವ ಪ್ರಮುಖ ದಾಖಲೆ (ಕೂಟ ಎನ್ನ ಬೇಕಾದರೂ ಅದಕ್ಕೊಂಡು ದಾಖಲೆ ಇರಬೇಕಲ್ಲವೇ?) ಗಂಗರ ಇತಿಹಾಸಕ್ಕೆ ಸಂಬಂಧಿಸಿದಂತೆ ಹಿಂದೆ ಅನೇಕ ತಾಮ್ರಶಾಸನಗಳು ದೊರೆತವು. ಅವುಗಳನ್ನು ವಿಷಯಾಧಾರಿತ ಇಲ್ಲವೇ ಕ್ಷುಲ್ಲಕ ಕಾರಣಗಳ ಆಧಾರದಲ್ಲಿ 'ಕೂಟ' ಎಂಬ ತಲೆಬರಹದೊಂದಿಗೆ ಪ್ರಕಟಿಸಲಾಯಿತು. ಸಂಶೋಧನಾಗತಿ ಬದಲಾಗಿರುವ ಇತ್ತೀಚಿನ ದಿನಗಳಲ್ಲಿ ಕ್ಷುಲ್ಲಕ ಕಾರಣಗಳನ್ನು ಬದಿಗಿರಿಸಿ ಶಾಸನಗಳ ನೈಜತೆಯನ್ನು ಎತ್ತಿ ತೋರಿಸು ಮತ್ತು 'ಕೂಟ' ಎನ್ನಬಹುದಾದವು ಗಳಲ್ಲೂ ಇರುವ ಚಾರಿತ್ರಿಕ ಸತ್ಯ ಅಂಶಗಳನ್ನು ಎತ್ತಿ ತೋರಿಸುವ ತನ್ಮೂಲಕ ಅವುಗಳು ಇತಿಹಾಸ ರಚನೆ ಕೊಡುವ ಅಂಶಗಳನ್ನು ದಾಖಲಿಸುವ ಕಾರ್ಯಸಾಗಿದೆ. ಇತ್ತೀಚೆಗೆ ದೊರೆತಿರುವ ಹೇರಳವಾದ ದಾಖಲೆಗಳು ಈ ಕಾರ್ಯದಲ್ಲಿ ಪೂರಕ ಆಧಾರಗಳಾಗಿ ನೆರವಾಗಿವೆ.

ಈ ನೆಲೆಯಲ್ಲಿ ಆಲೋಚಿಸಿದಾಗ ಬೆಸ್ತರಪಲ್ಲಿ ಮತ್ತು ಕಾಪಲೂರು ದಾಖಲೆ ಗಳೊಂದಿಗೆ ಇತ್ತೀಚೆಗೆ ದೊರೆತ ಹಾಲ್ಕಾವಟಿಗಿ ತಾಮ್ರ ಪಟಗಳೂ (ಗಂಗರ ಕೆಲವು ತಾಮ್ರಪಟಗಳಂತೆ) ತಮ್ಮ ನೈಜತೆಯ ಪ್ರಶ್ನೆಯನ್ನು ಎದುರಿಸುತ್ತಿವೆ. ಇವುಗಳ ವಿಮೋಚನೆ ಅಷ್ಟು ಸುಲಭದ್ದಲ್ಲ. ಪೂರಕ ಆಧಾರಗಳ ಕೊರತೆಯ ದೊಡ್ಡ ಕಂದಕವೇ ಇಲ್ಲಿದೆ. ಹಾಗಾಗಿ ದೊರೆಯುವ ಪ್ರತಿಯೊಂದು ದಾಖಲೆಯನ್ನು ಅಮೂಲ್ಯ ಎಂದು

ಪರಿಗಣಿಸಿ ಬಹಳ ಎಚ್ಚರಿಕೆಯಿಂದ ಅದರ ವಿಶ್ಲೇಷಣೆಯನ್ನು ಮಾಡಬೇಕು. ಹಾಲ್ಕಾವಟಿಗಿಯ ತಾಮ್ರ ಪಟಗಳಿಗೂ ಇಂತಹ ಒಂದು ಜಾಗರೂಕ ನೋಟ ಬೇಕಾಗಿತ್ತು. ಇದರಿಂದ ಮಹತ್ವದ್ದಾಗಬಹುದಿದ್ದ ಪ್ರಮುಖ ದಾಖಲೆಯೊಂದು ಸೊರಗಿದೆ.

1. ಶಾಸನವನ್ನು ಕೇವಲ ಮೇಲ್‌ಸ್ತರದಲ್ಲಿ ವಿಶ್ಲೇಷಿಸಲಾಗಿದೆ. ಇದಕ್ಕೆ ಬೇಕಾದ್ದು ಆಳವಾದ ಅಧ್ಯಯನ ಮತ್ತು ವಿವರಣೆ.

2. ಈಗಾಗಲೇ ಬೆಳಕಿಗೆ ಬಂದಿರುವ ಶಾಸನಗಳ ಆಧಾರದಲ್ಲಿ ಹೊಸ ಶಾಸನದ ವಿಶ್ಲೇಷಣೆಯಲ್ಲಿ ಹೊಸತನ ಬೇಕು.

3. ಲೇಖನದಲ್ಲಿ ಪ್ರತಿಯೊಂದು ಹೇಳಿಕೆಗೂ ಆಧಾರ ಅಡಿ ಟಿಪ್ಪಣಿ ಬೇಕಿತ್ತು. ಅಡಿ ಟಿಪ್ಪಣಿಗಳಿಲ್ಲದ ಲೇಖನ ಎಷ್ಟೇ ಗಂಭೀರವಾಗಿದ್ದರೂ ಅದು ಸಾಹಿತ್ಯಕ್ಕೆ ಒಪ್ಪವಾಗುತ್ತದೆಯೇ ಹೊರತು ಇತಿಹಾಸಕ್ಕಲ್ಲ.

4. ಕೊನೆಯಲ್ಲಿ ಆಧಾರ ಗ್ರಂಥಗಳ ಪಟ್ಟಿ ಕೊಟ್ಟ ಮಾತ್ರಕ್ಕೆ ಅದು ಅಡಿ ಟಿಪ್ಪಣಿಯ ಅವಶ್ಯಕತೆ ಮತ್ತು ಪ್ರಾಮುಖ್ಯತೆಯನ್ನು ಪೂರೈಸುವುದಿಲ್ಲ.

5. ಶೃಂಗೇರಿ ಗುರುಪರಂಪರೆ ಪಟ್ಟಿ ಮಠದ ವತಿಯಿಂದ ಕರಾರುವಾಕ್ಕಾಗಿ ಮಾಡಲಾಗಿದೆ. ಅದು ಹಲವಾರು ಗ್ರಂಥಗಳಲ್ಲಿ ಈಗಾಗಲೇ ಪ್ರಕಟವಾಗಿದೆ. [63)] ಆದರೆ ಈ ಲೇಖನದಲ್ಲಿ ಗುರು ವಂಶಾವಳಿಯ ಪರಿಚಯವಿದ್ದಂತೆ ಕಾಣುವುದಿಲ್ಲ. ಒಂದೆಡೆ ಹೀಗೆ ಹೇಳಿದ್ದಾರೆ - "ಇವರಿಗಿಂತ ಪೂರ್ವದಲ್ಲಿ ಭಾರತೀ ತೀರ್ಥರು (ಕ್ರಿ.ಶ. ೧೩೪೬), ಆನಂತರ ವಿದ್ಯಾತೀರ್ಥರು (ಕ್ರಿ.ಶ. ೧೩೫೬) ಪೀಠಾಧಿಪತಿಗಳಾಗಿದ್ದರು. ಹಾಗಾದಲ್ಲಿ ವಿದ್ಯಾರಣ್ಯರು ಯಾವ ಕಾಲ ದಿಂದ ಶೃಂಗೇರಿಯ ಪೀಠಾಧಿಪತಿಗಳಾಗಿದ್ದರು? ಎಂಬುದಕ್ಕೆ ಆಧಾರಗಳಿಲ್ಲ. [64)] ಮುಂದೆ "ಇಮ್ಮಡಿ ಹರಿಹರನು ಭಾರತೀತೀರ್ಥರ ಮರಣಾ ನಂತರ (ಕ್ರಿ.ಶ. ೧೩೭೪). ವಿದ್ಯಾರಣ್ಯರನ್ನು ಹಂಪೆಯಿಂದ ಕರೆತಂದು ಶೃಂಗೇರಿಯಲ್ಲಿ ಮಠವನ್ನು ಕಟ್ಟಿಸಿಕೊಟ್ಟನೆಂಬ ವಾದವೂ ಇದೆ" ಎಂದು ಹೇಳುತ್ತಾರೆ.[65)] ಈ ರೀತಿಯ ಹೇಳಿಕೆಗಳಿಗೆ ಲೇಖಕರಿಗಿದ್ದ ಆಧಾರ ಯಾವುದು ಎನ್ನುವುದು ತಿಳಿಯುವುದಿಲ್ಲ. ಶೃಂಗೇರಿ ಮಠಕ್ಕೆ ಸಂಬಂಧಿಸಿದಂತೆ ಎಲ್ಲ ದಾಖಲೆಗಳೂ ಕೊಡುವ ಮಾಹಿತಿ ವಿದ್ಯಾತೀರ್ಥರ ಶಿಷ್ಯರು ಭಾರತೀತೀರ್ಥರು. [66)] ಆದರೆ ಲೇಖನದಲ್ಲಿ ಅವರ ಸ್ಥಾನ ಅದಲು ಬದಲಾಗಿದೆ. ಮುಂದುವರೆಯುತ್ತಾ "ಶೃಂಗೇರಿ ದಾಖಲೆಗಳ ಪ್ರಕಾರ ಭಾರತೀತೀರ್ಥರ ಮರಣಾನಂತರ ವಿದ್ಯಾತೀರ್ಥರು ಗುರುಗಳಾದಂತೆ ತಿಳಿಯುತ್ತದೆ" [67)] ಎಂದಿದ್ದಾರೆ. ಇಲ್ಲೂ ದಾಖಲೆಗಳು ಯಾವುವು ಎಂಬುದನ್ನು ತಿಳಿಸಿಲ್ಲ.

ಇತ್ತೀಚಿನ ಕೆಲವು ದಶಕಗಳಿಂದ ಶೃಂಗೇರಿ ಎಲ್ಲ ದಾಖಲೆ(ಕಡತ)ಗಳನ್ನೂ ಸಮಗ್ರವಾಗಿ ಅಭ್ಯಸಿಸಿ ಹಲವು ಗ್ರಂಥಗಳನ್ನು ಬರೆಯುವ ಮೂಲಕ ಆ ಬಗೆಗಿನ ವಿಶೇಷ ಮಾಹಿತಿಯನ್ನು ಮೂಲ ದಾಖಲೆಗಳಸಹಿತ ದೊರೆಯುವಂತೆ ಮಾಡಿ ವಿದ್ವತ್ಪ್ರಪಂಚಕ್ಕೆ ಮಹದುಪಕಾರ ಮಾಡಿದ್ದಾರೆ ಡಾ. ಎ.ಕೆ. ಶಾಸ್ತ್ರಿಯವರು. ಇವರು ಕೊಟ್ಟಿರುವ ಯಾವ ದಾಖಲೆಗಳಲ್ಲೂ ವಿದ್ಯಾತೀರ್ಥರು ಭಾರತೀತೀರ್ಥರ ನಂತರ ಶೃಂಗೇರಿಯ ಪೀಠಾಧಿಪತಿಗಳಾದರೆಂಬ ಮಾಹಿತಿ ಇಲ್ಲ.

ಹಾಲ್ಕಾವಟಿಗಿಯ ಶಾಸನ ಎಷ್ಟು ಪ್ರಾಮುಖ್ಯವೊ ಅಷ್ಟೇ ಪ್ರಾಮುಖ್ಯವಾದುದು ಶೃಂಗೇರಿ ಪೀಠದ ಗುರು ಪರಂಪರೆ. ಪರಮಶಿವಮೂರ್ತಿಯವರು ಹೇಳುವಂತೆ ಅದು ಅದಲು ಬದಲಾಗಿರುವುದು ದಾಖಲೆ ಸಹಿತ ಸಿದ್ಧವಾಗಿರುವುದಾದರೆ ಆ ದಾಖಲೆಯೂ ಮಹತ್ವಪೂರ್ಣವಾದುದೆ. ಆದರೆ ಇದನ್ನು ಸ್ಥಿರಪಡಿಸಬೇಕಾದರೆ ವಿವರಣೆ ಸಹಿತವಾಗಿ ದಾಖಲೆಯ ಮೂಲಪಾಠವನ್ನು ಕೊಟ್ಟು ಅದನ್ನು ವಿದ್ವಾಂಸರ ಗಮನಕ್ಕೆ ತರುವುದು ಸೂಕ್ತವೆನಿಸುತ್ತದೆ.

ಕೊನೆಯದಾಗಿ, ಶಾಸನದ ಪೂರ್ಣಪಾಠವನ್ನು ಸಿದ್ಧಮಾಡುವಲ್ಲಿ ಹಲವು ಜನ ತಜ್ಞರಿಂದ ತಾವು ಪಡೆದ ಸಹಾಯವನ್ನು ಲೇಖಕರು ಸ್ಮರಿಸಿದ್ದಾರೆ.[69] ಇಲ್ಲಿ ಮುಖ್ಯವಾಗಿ ಲೇಖಕರ ಗುರುಗಳಾದ ಪಿ.ವಿ. ಕೃಷ್ಣಮೂರ್ತಿ ಮತ್ತು ಮಾಧವ ಎನ್. ಕಟ್ಟಿಯವರಿದ್ದಾರೆ. ಪಿ.ವಿ. ಕೃಷ್ಣಮೂರ್ತಿಯವರು ಲೇಖನಗಳನ್ನು ಬರೆಯುವಾಗ ವಹಿಸುವ ಆಸಕ್ತಿ ಮತ್ತು ಎಚ್ಚರಿಕೆಯನ್ನು ಲೇಖಕರು ಅಳವಡಿಸಿಕೊಳ್ಳಬಹುದಿತ್ತು. ಶಾಸನದ ಬಗ್ಗೆ ಅವರ ಅಭಿಪ್ರಾಯವನ್ನು ದಾಖಲಿಸಬಹುದಿತ್ತು.

ಎಲ್ಲಕ್ಕಿಂತ ಮಿಗಿಲಾಗಿ ಮಾಧವ ಎನ್. ಕಟ್ಟಿಯವರುನ್ನು ಸಂಪರ್ಕಿಸಿರುವುದು. ಕಟ್ಟಿಯವರು ಕೇಂದ್ರ ಶಾಸನ ಇಲಾಖೆಯ ನಿರ್ದೇಶಕರಾಗಿ ಕಾರ್ಯನಿರ್ವಹಿಸಿರುವ ಖ್ಯಾತ ಶಾಸನತಜ್ಞರು. ಇಡೀ ದೇಶದ ಶಾಸನಗಳ ಬಗ್ಗೆ ಅಧಿಕಾರಯುತವಾಗಿ ವಿವರಣೆ ನೀಡಬಲ್ಲರು. ದೇವನಾಗರಿ ಮತ್ತು ನಂದಿನಾಗರಿ ಲಿಪಿಗಳಲ್ಲಿರುವ ಅದೆಷ್ಟೋ ಸಂಸ್ಕೃತ ಹಾಗೂ ಕನ್ನಡ ಶಾಸನಗಳನ್ನು ಇವರು ವಿಮರ್ಶಿಸಿದ್ದಾರೆ. ಹಾಲ್ಕಾವಟಿಗಿಯ ಶಾಸನವನ್ನು ಇವರು ನೋಡಿದ್ದಾರೆ ಎಂದ ಮೇಲೆ ಅದರ ಬಗ್ಗೆ ಇವರ ಅಭಿಪ್ರಾಯವನ್ನು ಅವರದೇ ಮಾತಿನಲ್ಲಿ ದಾಖಲಿಸಿದ್ದರೆ ಹೊಸ ಶಾಸನಕ್ಕೆ ಇಮ್ಮಡಿ ಬೆಲೆ ಬರುತ್ತಿತ್ತು. ಆದರೆ ಪ್ರಸಕ್ತ ಲೇಖನದಲ್ಲಿ ಈರ್ವರ ಅಭಿಪ್ರಾಯಗಳೂ ದಾಖಲಾಗಿಲ್ಲ. ಹೀಗಾಗಿ ಹಾಲ್ಕಾವಟಿಗೆ ತಾಮ್ರ ಪಟಗಳು ಉತ್ತಮ ದಾಖಲೆಯಾಗಬಹುದಾಗಿದ್ದರೂ ಸಂಶಯದ ನೆಲೆಯಲ್ಲೇ ಗುರುತಿಸಿಕೊಳ್ಳುವ ಮಟ್ಟದಲ್ಲಿದೆ

ಏನೇ ಆಗಲಿ, ಶಾಸನವನ್ನು ಪತ್ತೆ ಹಚ್ಚಿ ಅದನ್ನು ವಿದ್ವಾಂಸರ ಗಮನಕ್ಕೆ ತಂದಿರುವುದಕ್ಕಾಗಿ ಪರಮಶಿವಮೂರ್ತಿಯವರನ್ನು ಅಭಿನಂದಿಸುತ್ತೇನೆ. ಅಷ್ಟೇ ಅಲ್ಲ. ಅವರ

ಸಾಮರ್ಥ್ಯವನ್ನು ಗುರುತಿಸಿ ಅವರು ಶೀಘ್ರದಲ್ಲೇ ಈ ಲೇಖನವನ್ನು ಸಂಪೂರ್ಣ ವಾಗಿ ಪರಿಷ್ಕರಿಸಿ ತಾವು ಕಂಡುಹಿಡಿದ ಶಾಸನಕ್ಕೊಂದು ಮರು ಹುಟ್ಟು ಕೊಟ್ಟು ಅದನ್ನೊಂದು ಈ ಕಾಲದ ಮಹತ್ವದ ದಾಖಿಲೆಯನ್ನಾಗಿ ಮಾಡಲಿ ಎಂದು ಆಶಿಸುತ್ತೇನೆ.[70]

ಪ್ರಬಂಧವನ್ನು ಮುಕ್ತಾಯಗೊಳಿಸುವ ಮುನ್ನ ಒಂದು ಮಾತು. ಇದನ್ನು ಬರೆಯಲು ಮೂಲಪ್ರೇರಣೆ ಕಾರ್ಕಳ ತಾಲ್ಲೂಕು ಕಾಂತಾವರ ಸಮೀಪ ಇರುವ ಶೆಟ್ಟಿಬೆಟ್ಟುವಿನ ಕಿನ್ನಿಜಾಲು ಗದ್ದೆ (ಈಗ ತೆಂಗಿನ ತೋಟವಾಗಿದೆ)ಯಲ್ಲಿ ದೊರೆತ ಒಂದನೆಯ ಹರಿಹರನ ಕಾಲದ ಶಿಲಾ ಶಾಸನ. ಇದು ಕಾರ್ಕಳ ತಾಲ್ಲೂಕಿನಲ್ಲಿ ದೊರೆತಿರುವ ವಿಜಯನಗರ ಕಾಲೀನ ಶಾಸನಗಳಲ್ಲಿ (ಸದ್ಯಕ್ಕೆ) ಪ್ರಥಮದ್ದು. ಇದು ಅಲ್ಲಿಯವರೆಗೆ ದೊರೆತಿದ್ದ ವಿಜಯನಗರ ಕಾಲೀನ ಶಾಸನಗಳತ್ತ ಗಮನ ಹರಿಸುವಂತೆ ಮಾಡಿತು. ಇಡೀ ಕರಾವಳಿ, ಅಲ್ಲಿಂದ ಶೃಂಗೇರಿಗೆ ಅಲ್ಲಿಂದ ಮುಂದೆ ಮಲೆನಾಡು ಮತ್ತು ಮೈದಾನ ಪ್ರದೇಶಗಳಲ್ಲಿ ಒಂದನೆಯ ಹರಿಹರನ ಕಾಲದ ದಾಖಿಲೆಗಳಿಗಾಗಿ ಹುಡುಕಾಟ ನಡೆಸುವಂತೆ ಮಾಡಿತು. ಆ ಸಂದರ್ಭದಲ್ಲಿ ನನ್ನ ಗಮನ ಸೆಳೆದುದು ವಿಜಯನಗರ ಅಧ್ಯಯನ ಗ್ರಂಥದ ಸಂಪುಟ -೧೧ (2006) ರಲ್ಲಿ ಪ್ರಕಟವಾಗಿದ್ದ ಪ್ರಥಮ ಲೇಖನ. ಇದು "ಸಂಗಮ ಅರಸರ ಪ್ರಾಚೀನ ಶಾಸನಗಳು" ಕುರಿತಾದ್ದು. ಇದು ನನ್ನನ್ನು ತೀವ್ರವಾಗಿ ಪ್ರಚೋದಿಸಿತು ಮತ್ತು ಆ ಬಗ್ಗೆ ವಿಸ್ತೃತವಾದ ಅಧ್ಯಯನದ ಅವಶ್ಯಕತೆ ಇದೆ ಎಂಬ ಅರಿವಿಗೆ ಕಾರಣವಾಯಿತು. ಇದು ಮೂಲ ದಾಖಿಲೆಗಳತ್ತ ವಿಶೇಷ ಗಮನ ಹರಿಸುವಂತೆ ಮಾಡಿತಲ್ಲದೆ ಅದುವರೆವಿಗೂ ಪ್ರಸಕ್ತದಲ್ಲಿ ಅವಶ್ಯವಿಲ್ಲ ಎಂದು ಕೊಂಡಿದ್ದ ಅದೇಷ್ಟೋ ಶಾಸನಗಳು ಮತ್ತು ದಾಖಿಲೆಗಳ ಅಧ್ಯಯನ ಮಾಡುವಂತೆ ನನ್ನ ಅಧ್ಯಯನಕ್ಕೊಂದು ಕೈಮರ ವಾಯಿತು. ಇದಕ್ಕಾಗಿ ಈ ಲೇಖನದ ಲೇಖಕಿಯಾದ ಕೂ.ಸ. ಅಪರ್ಣ ಅವರನ್ನು ಅಭಿನಂದಿಸುತ್ತೇನೆ.

ಪ್ರಬಂಧ ದೀರ್ಘವಾದರೂ ಇಲ್ಲಿ ಚರ್ಚಿತವಾಗಿರುವುದು ರಾಜ್ಯಸ್ಥಾಪನೆಯ ಸಂಭವನೀಯ ಕಾಲ ಅನಂತರದ ಹರಿಹರನ ಸಾಧನೆ "ಪೂರ್ವಾಪರ ಸಮುದ್ರಾಂತಂ ಜಿತ್ವಾ ಹರಿಹರೋ ಭುವಂ", ಇದನ್ನು ಸತ್ಕಾರ್ಯ ಮಾಡುವುದರ ಮೂಲಕ ಪ್ರಕಟಿಸಿರುವುದು. ಕರಾವಳಿಗೆ ಸಂಬಂಧಿಸಿದಂತೆ ಅಲ್ಲಿ ಆಳುಪ ಮತ್ತು ಹೊಯ್ಸಳರ ಉಪಸ್ಥಿತಿಯ ನಡುವೆಯೂ ವ್ಯವಸ್ಥಿತವಾದ ರಾಜಕೀಯ ಮತ್ತು ಆಡಳಿತ ನಿರ್ಣಯಗಳನ್ನು ಕೈಗೊಂಡು ಆ ಭಾಗವನ್ನು ಬಾರಕೂರು ಮತ್ತು ಮಂಗಳೂರು ರಾಜ್ಯಗಳಾನ್ನಾಗಿ ವಿಂಗಡಿಸಿ ಅವಕ್ಕೆ ತನ್ನ ನೇರ ಪ್ರತಿನಿಧಿಯಾದ ರಾಜ್ಯಪಾಲರನ್ನು ಹರಿಹರ ನೇಮಿಸಿದ್ದ ವಿಚಾರ ಚರ್ಚಿತವಾಗಿದೆ.[71] ಮಂಗಳೂರು ರಾಜ್ಯಕ್ಕೆ ಸಂಬಂಧಿಸಿದಂತೆ ಪ್ರಾರಂಬಿಕ ಶಾಸನಗಳಲ್ಲಿ ಇಬ್ಬರು ರಾಜ್ಯಪಾಲರ ಹೆಸರು ದೊರೆಯುವುದರಿಂದ ಆವೇಳೆಗಾಗಲೆ ರಾಜ್ಯಪಾಲಕ ನೇಮಕ, ಬದಲಾವಣೆ ಇಲ್ಲವೇ ವರ್ಗಾವಣೆ ನೀತಿಯನ್ನು ಆಡಳಿತದಲ್ಲಿ ಅಳವಡಿಸಿಕೊಂಡಿದ್ದನ್ನು ಹೇಳಲಾಗಿದೆ.

ಇಲ್ಲಿ ಚರ್ಚಿತವಾಗಬೇಕಾಗಿರುವ ಹಲವಾರು ವಿಷಯಗಳು ಹಾಗೇ ಉಳಿದಿವೆ. ಕರಾವಳಿಯ ಶಾಸನ ಸಂಪತ್ತು ಮತ್ತು ನನಗೇ ದೊರೆತಿರುವ ಹಲವಾರು ಹೊಸ ಶಾಸನಗಳು ಈ ವಿಷಯಗಳ ಬಗ್ಗೆ ಸೂಕ್ತ ಮಾಹಿತಿ ನೀಡಬಲ್ಲಂತಹುದಾಗಿವೆ. ಸದ್ಯಕ್ಕೆ ಈ ಅವಕಾಶ ಮುಕ್ತವಾಗಿದೆ.

ಶೆಟ್ಟಿಬೆಟ್ಟುವಿನ ಕಿನ್ನಿಜಾಲುಗದ್ದೆಯ ಸ್ತಂಭಶಾಸನ

ಶಾಸನ ಪಾಠ

1. ಸ್ವಸ್ತಿ [1*] ಶ್ರೀ ಮತ್ತು *ಮಹಾರಾಯ ಹರಿಯಪ್ಪ ವೊಡೆಯ*
2. ರು ರಾಜ್ಯವಂ ಗೈವುತ್ತಿರಲು ಪ್ರಧಾನಿ *ಹಡಪದ ಗೋಪರಸರು*
3. ಮಂಗಲೂರು ರಾಜ್ಯಂ ಗೈವುತ್ತಿರ್ದ್ದ ಸರ್ವಜಿತು ಸಂವತ್ಸರದ
4. ಮೇ ೧ ಮಾಸ ೨೦ನೆಯ ಬ್ರಿಹಸ್ಪತಿ ಬಾರದಂದು ಕಾಂತೇಶ್ವರ
5. ದೇವರ ದಾನದಲು ಯರಸಾಗಿ ವೃತ್ತಿ ಕಾರಯಂಣ ಹೆ
6. ಗ್ಗಡೆ ಬಳಿಯ ಮಾದಿಹಡರು ಗ್ರಾಮದ ಮುನೂರ್ವ್ವರುಂ
7. ಹೊರ ನಹಿವರುಂ ಬಾರ್ಯ್ಯ ಸೇನ ಬನವರುಂ ಕೂಡಿದ್ದು
8. ಬರದ ಶಿಲಾ ಶಾಸನಕ್ರಮವೆಂತೆಂದೆ ಇಶ್ವರ ಬಾರದು
9. ವೀರ ಮಯನ ತಂಮುದಿರೂ ಕೂಡಿ ತಂಮೊಳೇಕಸ್ತರಾಗಿ ಮಂ-
10. ಜತ್ತಾಯಂ ಬೆಟು ಮನೆ ಬಾವಿ ಮಕ್ಕೆ ಮರಡುಲ ಸಹಿತ
11. ಆ ಮೂಲಿಗರಿಗೆ ಮಾದಡಹರು ಹೊನ್ನಕೊಟ್ಟು ಬಾಳಿದ ಬಾ-
12. ಳಾ ಮಾಮೂಲಿಗರ ಕರಸಿಯವರ ಕೈಯಲು ಅಮಸಿವೊ |

(ಶಾಸನ ಹೀಗೆ ಇಲ್ಲಿಗೆ ಮುಕ್ತಾಯಗೊಂಡಿದೆ)

ಅಡಿ ಟಿಪ್ಪಣಿಗಳು ಮತ್ತು ಆಕರಗಳು

1. C.S. Vasudevan - Distribution Pattern of Vijayanagara Inscriptions in Karnataka - *Journal of the Epigraphical Society of India* - Vol XXI (1995) pp. 32-36
2. A. *Annual Reports of South Indian Epigraphy*

   B. *Annual Reports of Indian Epigraphy.*
3. *South Indian Inscriptions* Vols. VII, IX Pg 1 & 11 and XXVII

4. ಡಾ. ಪಿ. ಗುರುರಾಜಭಟ್, ಡಾ.ಬಿ. ವಸಂತಶೆಟ್ಟಿ, ಡಾ. ಪಿ.ಎನ್. ನರಸಿಂಹ ಮೂರ್ತಿ, ಡಾ. ಪಿ. ಗಣಪಯ್ಯ ಭಟ್, ಡಾ.ಬಿ. ಜಗದೀಶ ಶೆಟ್ಟಿ, ಶ್ರೀ ಜೆ. ಅಚ್ಚುತ ಹೆಬ್ಬಾರ್, ಡಾ. ಎಸ್.ಡಿ. ಶೆಟ್ಟಿ, ಡಾ. ಉಮಾನಾಥ ಶೆಣೈ ಮತ್ತು ಶ್ರೀ ಶ್ರೀಧರಭಟ್.
5. ಕಾಂತೇಶ್ವರ ದೇವಸ್ಥಾನದಿಂದ ಕಾಂತಾವರ ಒಂದು ಕ್ಷೇತ್ರವಾಗಿ ಪರಿಗಣಿಸಲ್ಪಟ್ಟಿದೆ. ಹಲವಾರು ಶಾಸನಗಳಲ್ಲಿ ಕಾಂತೇಶ್ವರನ ಉಲ್ಲೇಖ ಇದೆ. ಇದರ ಪ್ರಾಚೀನತೆಯನ್ನು ನಿರ್ಧರಿಸುವ ಸಲುವಾಗಿ ನಡೆಸಿದ ಕ್ಷೇತ್ರಕಾರ್ಯ ಸಮಯದಲ್ಲಿ ದೊರೆತ ಶಾಸನ ಇದು.
6. ಉದಾಹರಣೆಗೆ ಉದಿಯಾವರ, ಕೋಟ ಇತ್ಯಾದಿ ಸ್ಥಳಗಲ್ಲಿ ದೊರೆತಿರುವ ಆಳುಪರ ಪ್ರಾಚೀನ ಶಾಸನಗಳನ್ನು ನೋಡಬಹುದು.
7. ಪಿ.ಎನ್. ನರಸಿಂಹಮೂರ್ತಿ. "ಕಾಂತಾವರ ಒಂದು ಅಧ್ಯಯನ", (2003) ಪು. 11-12, 46-47
8. ಅದೇ - ಸಾಲು 1-2
9. ಶಾಸನ ಪಾಠ ಸಾಲು 2-4
10. *S.I.I.* Vol VII No. 231; ಪಿ.ಎನ್. ನರಸಿಂಹಮೂರ್ತಿ, *ಕಾಂತಾವರ* (2003) ಸಂ. 1
11. ಶಾಸನ ಪಾಠ - ಸಾಲು 4-5
12. K.V. Ramesh - *A History of South Kanara* - (1970) p. 151 (*AHSK*)
13. Ibid (K.V.R. - *AHSK*)
14. ಶಾಸನ ಪಾಠ - ಸಾಲು 9 - 12
15. *S.I.I.* Vol. III No. 179; K.V.R - AHSK, pp 150-51
16. K.V.R. - *AHSK,* P. 150
17. *Ibid.* - P. 151.
18. *ARIE* - 1961-62, No. 621 - K.V.R. *AHSK,* P. 152
19. K.V.R. *AHSK* - "South Kanara Under Vijayanagara".
20. *Ibid* .P. 153 (A.D. 1347 - 1365)
21. *Epigraphia Carnatica.* Vol XI (New Edn.) Sgr. 1
22. *Ibid.* Nos. 55 and 56
23. *Ibid.* No. 1
24. K.V.R. *AHSK* pp. 137-145
25. *Ibid.* pp 134-138, 144 - 145
26. *Ibid,* P. 145
27. *E.C.* Vol. V (old) Ak. No. 183
28. *ARSIE* - 1928 - 29, No. 484; Apx - 'A' No. 15 etc

ARSIE - 1929-30, Nos. 591, 594, 603 etc

ARIE - 1961-62, Nos. 621; *S.I.I.* Vol. VII No. 3030 etc.

K.V.R. AHSK pp. 137 - 149; 150 - 15

29. ಪಿ.ಎನ್. ನರಸಿಂಮೂರ್ತಿ - *ಕುದನಾಡಿನ ಶಾಸನಗಳು* (2007) ಸಂ. 31.
30. *ARSIE,* 1929 - 30, No. 594
31. ಶಾಸನ ಪಾಠ - ಸಾಲು- 9-10
32. ಎ.ಕೆ. ಶಾಸ್ತ್ರಿ : '*ಶೃಂಗೇರಿ ಧರ್ಮ ಸಂಸ್ಥಾನ*' (1983) ಪು. 24.
33. B. Sheik Ali (Ed): *The Hoysala Dynasty* (1972) Pg. 335-39
34. *Ibid, p.* 337-40
35. *Ibid, p.* 339-41
36. *Ibid, p.* 341
37. P.B. Desai: "Ballala III and Vijayanagara"- Article in *The Hoysala Dynasty* - P. 341.
38. Ibid. P. 342. P.B. Desai writes - "The year around 1336 A.D. was a critical juncture in the freedom struggle of Ballala. Though successful, he was yet to win the last war by conquering the territory under the occupation of the Muslim governor of Madura. In the north the Dehli Sultan was striving to Keep under his control the Hampi - Anegondi region which had revolted against his rule. To a man nearing the age of seventy-five, that was Ballala, it was beyond possibility to effectively extend his authority to these farther limits".

    Hence, carrying his measure of decentralisation of power to the extreme, Ballala appears to have conferred upon Harihara not only full freedom of action, but even antonomy over the areas under his jurisdiction. Harihara in the meanwhile succeeded in pacyfying the rebellious chiefs in the Hampi territory, who were too glad to accept him as their ruler". pp. 341 - 342
39. Ibid. P. 341
40. ಶಾಸನ ಪಾಠ-ಸಾಲು - 9
41. M.A.R. 1923, No. 78
42. ಶಾಸನ ಪಾಠ ಸಾಲು - 3-5
43. ಡಾ. ಆರ್. ಗೋಪಾಲ್ etc (ಸಂ): *ವಿಜಯನಗರ ಅಧ್ಯಯನ* ಸಂ. ೧೧ (2006) ಇದರಲ್ಲಿನ ಲೇಖನ : "*ಸಂಗಮ ಅರಸರ ಪ್ರಾಚೀನ ಶಾಸನಗಳು*" : ಕೂ.ಸ. ಅಪರ್ಣ ಪು. 32.
44. ಅಲ್ಲೇ. ಪು. 32.

45. ಕಾಂತಾವರ ಬಳಿಯ ಶೆಟ್ಟಿಬೆಟ್ಟು ಶಾಸನ (ಹೊಸದು); *S.I.I.* Vol VII Nos. 179, 231; *M.A.R.* 1923 No. 78 *ವಿಜಯನಗರ ಅಧ್ಯಯನ* - ಸಂ. ೧೧. ಪು. 26-29
46. *M.A.R.* 1923, No. 78
47. *Ind. Ant.* Vol. X, No. 87.
48. *ವಿಜಯನಗರ ಅಧ್ಯಯನ* ಸಂ. ೧೧, ಪು. 26, 33
49. *ಅದೇ.* ಪು. 27, 34
50. *Ep. Carn.* Vol IX (Old) Bl. 47
51. *ವಿಜಯನಗರ ಅಧ್ಯಯನ* -ಸಂ. ೧೧, ಪು. 26-27
52. *ಅದೇ.* -ಸಂ. ೧೧, ಪು. 32
53. P.B. Desai: Ballala III and Vijayanagara"article in *The Hoysala Dynasty* (1972) p. 342-43
54. ಪಿ.ವಿ. ಕೃಷ್ಣಮೂರ್ತಿ - "ಆನೆಗೊಂದಿ ಪ್ರಭುಗಳ ಇತಿಹಾಸ" -(ಸೂರ್ಯನಾಥ ಕಾಮತ್‌ರ ಅಭಿನಂದನ ಗ್ರಂಥ - *ಸೂರ್ಯಕೀರ್ತಿ* ಯಲ್ಲಿನ ಲೇಖನ) - ಪು. 245.
55. (1) ಕೋಲಾರ ಜಿಲ್ಲೆಯ ಬಾಗೆಪಲ್ಲಿ ತಾಲ್ಲೂಕಿನ ಬೆಸ್ತರಪಲ್ಲಿ ಶಾಸನ *Ep. Carn* (Rice) Vol. X. *ಬಾಗೆಪಲ್ಲಿ* 70. ಇದು ಕಾಗದ ಪ್ರತಿ.

    (2) ಆಂಧ್ರ ಪ್ರದೇಶ ನೆಲ್ಲೂರು ಜಿಲ್ಲೆಯ ಕಾಪಲೂರು ತಾಮ್ರಶಾಸನ. Sewell (Ed) *Historical Inscriptions of South India,* Vol. II. No. 189
56. *Ep. Carn* (Rice). Vol X Introdn.
57. ಡಾ. ಡಿ.ವಿ. ಪರಮಶಿವಮೂರ್ತಿ -"೧ನೇ ಹರಿಹರನ ಮತ್ತು ವಿದ್ಯಾರಣ್ಯರ ತಾಮ್ರಶಾಸನ" ಲೇಖನ - *ವಿಜಯನಗರ ಅಧ್ಯಯನ* ಸಂ. ೧೦, (ಪು. 16-29 (2005)
58. *ಅದೇ.*ಪು. 20-21
59. *ಅದೇ.*ಪು. 21 (2005)
60. *ಅದೇ.* ಪು. 24 - 25
61. ವಿಜಯನಗರ ಅಧ್ಯಯನ ಸಂ. ೧೧ ಪು. 31
62. *ಅದೇ.* ಪು. 25 ಇದರೊಂದಿಗೆ "ವಿಜಯನಗರ ಅಧ್ಯಯನ" ಸಂ. ೧೦ (2005) ಇದರಲ್ಲಿ ಪ್ರಕಟವಾಗಿರುವ ಶಾಸನ ಪಾಠವನ್ನೂ ನೋಡಿ.
63. ಈ ಕೆಳಗಿನ ಗ್ರಂಥಗಳನ್ನು ನೋಡಿ.

    1. ಎ.ಕೆ. ಶಾಸ್ತ್ರಿ, '*ಶೃಂಗೇರಿ ಧರ್ಮಸಂಸ್ಥಾನ* (1983)

    2. ಹೆಚ್.ಎಲ್.ಎನ್. ಶಾಸ್ತ್ರಿ, '*ಶೃಂಗೇರಿ ಶ್ರೀ ಶಾರದಾ ಪೀಠ* (2002) ಮತ್ತು "*ಶಂಕರ ದಕ್ಷಿಣಾಮ್ನಾಯಪೀಠ*' (2005)

    3. A.V. Narasimha Murthy: SRINGERI (2005)

ಇವಲ್ಲದೆ ಇನ್ನೂ ಹಲವಾರು ಲೇಖಕರು ಗ್ರಂಥಗಳು (ಬೇರೆ ಬೇರೆ ಭಾರತೀಯ ಮತ್ತು ಆಂಗ್ಲ ಭಾಷೆಗಳಲ್ಲಿ) ಲಭ್ಯವಿದೆ.

64. ವಿಜಯನಗರ ಅಧ್ಯಯನ ಸಂ. ೧೦ (2005) ಪು. 21.

65. *ಅದೇ.* ಪು. 22.

65. ಶೃಂಗೇರಿಗೆ ಸಂಬಂಧಿಸಿದಂತೆ ಮೇಲೆ ಉದಹರಿಸಿರುವ ಗ್ರಂಥಗಳನ್ನು ನೋಡಿ.

67. ವಿಜಯನಗರದ ಅಧ್ಯಯನ, ಸಂ. ೧೦(2005) ಪು. 22.

68. ಎ.ಕೆ. ಶಾಸ್ತ್ರೀ: 1. *ಶೃಂಗೇರಿ ಧರ್ಮ ಸಂಸ್ಥಾನ* (1983)

2. *ಶೃಂಗೇರಿ ಮಠದ ಕಡತಗಳಲ್ಲಿಯ ಆಯ್ದ ಚಾರಿತ್ರಿಕ ದಾಖಲೆಗಳು* (ಎರಡು ಸಂಪುಟಗಳಲ್ಲಿ)

3. *A History of Shringeri*

4. *Selections from the Kadatas of Shringeri Matha*

5. *The Records of the shringeri Dharama Samasthana* (2009)

69. *ವಿಜಯ ನಗರ ಅಧ್ಯಯನ* ಸಂ. ೧೦(2005) ಪು. 24

70. ಆದರೆ ಕೇವಲ ಒಬ್ಬಿಬ್ಬರು ಲೇಖಕರ ಮಾಹಿತಿಯನ್ನಾಧರಿಸಿ ಅವರ ಸುತ್ತಾ ಸುತ್ತುವ ಬದಲು ವಿವಿಧ ಮೂಲಗಳಿಂದ ಈಗ ಲಭ್ಯವಿರುವ ಅಧಿಕಾಧಿಕ ಮಾಹಿತಿಯನ್ನು ಸಂಗ್ರಹಿಸಿ, ವಿಶ್ಲೇಷಿಸಿ, ಅಳವಡಿಸಿಕೊಂಡು ಅವುಗಳನ್ನು ಲೇಖನದಲ್ಲಿ ಸೂಕ್ತವಾಗಿ ದಾಖಲಿಸಬೇಕು.

71. ಈ ವಿಷಯಕ್ಕೆ ಸಂಬಂಧಿಸಿದಂತೆ ನೋಡಿ. ಡಾ. ಕೆ.ವಿ. ರಮೇಶ ಅವರ ಗ್ರಂಥ '*A History of South Kanara*' Dharwar, 1970;

72. ಇಲ್ಲಿ ವಿದ್ಯಾರಣ್ಯರ ಕುರಿತಾಗಿಯೇ ಹಲವಾರು ಶಿಲಾ ಶಾಸನಗಳು ದೊರೆತಿವೆ. ಅವುಗಳ ಬಗೆಗಿನ ಸಂಕ್ಷಿಪ್ತ ವಿವರಣೆಯನ್ನು ಒಂದು ಲೇಖನದಲ್ಲಿ ಮಾಡಿದ್ದೇನೆ. (ರಾಷ್ಟ್ರೀಯ ವಿಚಾರ ಸಂಕೀರ್ಣವೊಂದರಲ್ಲಿ ಮಂಡಿಸಿದ ಪ್ರಬಂಧ ಇದು - ನೋಡಿ.

Quarterly Journal of the Mythic Society - Vol. XCVII
No.2. April - June, 2006 Pp. 54-69.

೨. ವಿಜಯನಗರ ಕಾಲದ ತಾಮ್ರ ಶಾಸನ

ಡಾ. ಕೆಳದಿ ವೆಂಕಟೇಶ್ ಜೋಯಿಸ್

ಈ ಶಾಸನಗಳು ದೊರೆತಿರುವುದು ಉಡುಪಿ ತಾಲ್ಲೂಕಿನ ಬಾರಕೂರಿನ ಮಣಿಗಾರಕೇರಿ ಶ್ರೀ ಸೋಮನಾಥೇಶ್ವರ ದೇವಾಲಯದ ಮುಂಭಾಗದ ಹೊರ ಆವರಣದಲ್ಲಿ ವಾಸಮಾಡುತ್ತಿರುವ ಶ್ರೀ ಮಂಜುನಾಥ ಭಟ್ಟ ಮತ್ತು ಶ್ರೀ ಬಿ. ಕೆ. ಸುಶೀಲಾ ಭಟ್ಟ ಇವರಲ್ಲಿ. ಇವರು ತಮ್ಮ ಮನೆಯನ್ನು ನವೀಕರಿಸುವ ಸಂದರ್ಭದಲ್ಲಿ ಹಳೆ ಮನೆಯ ಗೋಡೆಯ ಬಿರುಕಿನಲ್ಲಿ ಈ ತಾಮ್ರಶಾಸನ ಪತ್ತೆಯಾಗಿವೆ. ಅವರಿಂದ ಶ್ರೀ ಬಾಲಚಂದ್ರ ಕರಣಿಕ ಎಂಬುವರು ಈ ಶಾಸನವನ್ನು ಸಂಗ್ರಹಿಸಿ ನನಗೆ ಕೊಟ್ಟಿರುತ್ತಾರೆ.

ಶಾಸನದ ವಿವರ ಹೀಗಿದೆ

ಶಾಸನದ ಉದ್ದ : 13 ಸೆಂ. ಮಿ.

ಶಾಸನದ ಅಗಲ : 7.5 ಸೆಂ. ಮಿ.

ಶಾಸನದಲ್ಲಿರುವ ಸಾಲುಗಳು : 18

ಶಾಸನದ ಸಾಲುಗಳಲ್ಲಿರುವ ಅಕ್ಷರಗಳು : 22

ಭಾಷೆ :ಲಿಪಿ :ಕನ್ನಡ.

ಮಲ್ಲಪ್ಪ ಒಡೆಯರು ಮತ್ತು ವಿಠರಸರ ಕುರಿತು ಶ್ರೀ ಗುರುರಾಜಭಟ್ಟರು ತಮ್ಮ 'ಸ್ಟಡೀಸ್ ಇನ್ ತುಳುವ ಹಿಸ್ಟರಿ'ಯಲ್ಲಿ ಹೀಗೆ ಬರೆಯುತ್ತಾರೆ.

The Vijayanagara period witnessed the division the Tulunadu into two well- defined provinces (rajyas), namely, the Barakuri and Mangaluru towns respectively. The earliest Vijayanagara inscription found in Tulunadu until now is dated A. D. 1345 and its states that during the reign of Mahamandalesvara Vira -Bukkanna- Odeya, Sankaradeva- Odeya was the governor of Manguluru- rajya and he seemed to have made a gift to a deity, probably to Gopinatha of Arthapura (Attavara). This inscription reveals an important fact that control ot the Vijayanagara governors over Tulunadu started very early. The earliest of the Barakuru epigraphs, so far discovered, is dated at A. D. 1353 and belongs to the governorship of Goparasa-Odeya

The names of governors, who were appointed to rule the two provinces of Barakuru and Mangaluru, are given at the end of this chapter. The following are the important inferences that may be drawn on the nature of their political history :

a) The governors were either appointed by the sovereign himself or by the Dandanayakas who were put in charge of the coastal regions and who were primarily answerable to the Central Government. A few examples will clarify this point. Hadapada Gautarasa was the Governor of Mangaluru in A. D. 1349 by the orders of the king, and Mangarasa Odseya, the governor of the same province in A. D. 1390, was appointed to the office by king Vira Harihararaya himself. But Mahapradhana Jakkanna Odeya was appointed governor of Barakuru in A. D. 1383 under the orders of Muddeya Dannayaka. Again, Annarasa Odeya was ruling over Mangaluru and Barakuru rajyas under the orders of Achanna Dannayaka. Likewise, Chandrasa Odeya became the governor of Barakuru in A.D. 1432 under the orders of the king and Mahapradhana Perumaladeva dannayaka. Pradhana Lakkanna Dannayaka appointed Timmanna Odeya as the governor of Barakuru. Inscriptions are numerous in proof of our above inference. It may not be unreasonable to suppose that the control of the Central Government over Tulu nadu was more direct and effective when these governors were directly responsible to the king and that in susch instances, the authority of the governors was substantial, whereas in cases of the governors held responsible to another dignitary of the king, powers tended to be less substantial and their tenure of office short lived.

B) Most of the governors were of the rank of Mahapradhana, but Narasimha Odeya who was in charge of Barakuru rajya in A. D. 1425 called himself Mahamantri. We do not know whether this governor wielded greater powers in administration than the rest.

C) It looks as though the Barakuru rajya was held in greater importance and also presented to the Central Government greater problems than the Mangaluru rajya. This inferences is based on consideration of frequent appointment of governors to the Barakuru province. One reason for this phenomenon seems probable managaluru rajya comprised a number of self governing feudatory states (The Kumbale kingdom, Banga nadu, the sime of the Chautas, the Punjaliya rajya, Mulike nadu, etc..) Which were largely respon-

sible for political and social stability, all of which continued in power until the advent of the British. Therefore, the problem of administration faced by the governors may have been of lesser magnitude.

D) The normal reign period of a governor in office would be two to three years. But there was no convention against the re-appointment of the same person to the office, who, either was transferred or was suceeeded by another. This short tenure of office was found to be essential to avoid despotism and recalcitrancy. Moreover, it appears that the direction of politics at Vijayanagara had their repercussions on the provinvial centres also. Sometimes, three governors were found in office in the same year. But it cannot be said that longer tenure of office was unknown. Mahapradhana Maleya dannayaka was in office in Barakuru from A. D. 1356 to A. D. 1366. Likewise, Mahapradhana Goparasa held power for eight years from A. D. 1366 to A.D. 1373. Another example of prolonged governorship was of Vitharasa Odeya during the reign of Virupaksharaya. He appears to have continued in power from A. D. 1467 to A.D. 1478. Ratnappodeya, who was ruling over the Barakuru and Manguluru rajyas from A. D. 1513 to A. D. 1519, was one of the most powerful of the governors. The assumption of elaborate titles bears witness to the power he commanded.

Srimat maha bhagadeyarum tadajnadhararum
sapta saptati durgadhisvara medinimisara
ganda Srimat Baichadanadadhipa gotra
gagana mandala martanda mandalarum
faina paramagama uddharana dattana
danarum samyaktva gunaratna bhushana
bhushitarum = appa Ratnappodeyaru
Mangaluru Barakuru rajyavam pratipalisuttidda
Kaladalu................

E) Most of these governors were appointed from outside Tulu nadu and perhaps, the reasons for this are not far to seek. Yet, it may be said that natives of Tulu nadu were also at times selected for this office of pride and power. Kurugodu Sovanna nayaka (A. D. 1509) and his brother Kurugodu Mallappa nayaka seemed to have belonged to Tulu nadu itself.

F) It is difficult to say finally whether there was any system of transfer of power from father to son. But, an inscription of Nilavara, Udupi taluk, states that Ratnappodeya, to whom was assigned the governorship of Barakuru, transferred his power to his son, Vijayappa Odeya, as governor. The epigraph of Nadanavana, Coondapur taluk, dated A. D. 1520, records a gift of land in the village of Kergal by Vaijappa - Odeya, son of Ratnappa- Odeya, ruling over Barakuru.

G) Instances of both Barakuru and Mangaluru- rajyas held by the same governor are also found. This would take place, perhaps, on two occasions. The most capable of the governors deserved to be entrusted with such enormous powers as in the cases of Annappa (Annarasa) - Odeya, Vitharasa-Odeya and Ratnappodeya. Moreover, during the interim period following the transfer of one governor and the appointment of another, it was but natural that the governor of the other province in Tulunadu was delegated with administrative powers. The signiicant fact in this connection is that seemed no lapse in administrative control over Tulu-nadu from the earliest times of the Vijayanagara rule. Sometimes the governor of Barakuru supervised over Haive and Konkana- rajyas also, as in the case of Mallappa-Odeya in A. D. 1386. Singanna held Tulu and Malaha-rajyas in A.D. 1392. Here, Tulu was Barakururajya and perhaps, Malaha was Araga - rajya. Tulu and Haiverajyas were governed by Mallappa-Odeya in A. D. 1396. Mahapradhana Purushottamadeva-Odeya, the governor of Barakuru, held sway as far in the north as Bailuru in the Honnavara taluk of North Kanara. In A. D. 1433. Tulu- rajya, which was practically the Barakuru- rajya, was in rare cases governed from the capital at Honnavara as is evidenced in A.D. 1427, when Mahapradhana Timmanna-Odeya is stated to be ruling over Haive, Tulu and Konakana-rajyas. Antappodeya was in charge of Haive, Tulu and Konkana-rajyas in A. D. 1438 and is stated to be ruling from his capital at Honnavara.

ಶಾಸನ ಪಾಠ

ಸ್ವಸ್ತಿ ಶ್ರಿ ಗಣದಿಪತಯೆ

ನಮ ನಮಸ್ತುಂಗ ಶಿರಸ್ತುಂಬಿ ಚಂದ್ರ

ಚಾಮರ ಚಾರವೆ ತ್ರಯಿಲೊಕ್ಯ ನಗರ ರ

ಭ ಮುಲಸ್ತಂಬಾಯ ಸಂಭವೆ ಸ್ವಸ್ತಿ

ಶ್ರಿ ವಿಜಯಾದ್ಬುದಯ ಸಾಲಿವಾಹ
ನ ಶಕ ವರುಷ 1309 ನೆಯ ಪ್ರಭವ್ಸ
ವತ್ಸರದ ವಯಿಶಾಖ ಶುಧ 1 ಸೋಮವಾ
ರ ಶ್ರಿ ನ್ಮಮಹಾರಾಜ ರಾಜಾಧಿರಾಜ
ರಾಜ ಪರಮೆಶ್ವರ ಪೂರ್ವ ದಕ್ಷಿಣ ಪಶ್ಚಿ
ಮ ಸಮುದ್ರಾಧಿಶ್ವರ ಭಾಷೆಗೆ ತಪ್ಪದ ರಾ
ಯರ ಗಂಡ ಶ್ರೀ ವಿರಪ್ರತಾಪ ಹರಿಹರ ಮ
ಹಾರಾಯರು ದುಷ್ಟ ನಿಗ್ರಹ ಶಿಷ್ಟ ಪ್ರತಿಪಾಲಕ
ನಾಗಿ ವಿಜಯನಗರದ ಸಿಂಹಾಸನವ ನಾ
ಳುತಯಿದಲಿ ರಾಯರ ನಿರೂಪದಿಂದ ಮಲ್ಲಪ್ಪ
ವೊಡೆಯರು ಬಾರಕೂರು ರಾಜ್ಯವನ್ನಾಳುವಲಿ
ನರಸಿಂಹ ಸಾಹು * (ದಿ?) ಕುರರಿಗೆ ಹಾ
ರುನಾಡ ಕುದಕಂನೆರ ಬೆಜನ ಬಾ
ನ ಬ್ರತು ಸಿಮೆ ವಿವರ ಮುಡಲು ಪೊದ
ಬತು ನಡವದಾರಿ ಯಿಂದಂ ಪಡುವಲು
ತೆಂಕಲು ಗೊವನ ಬನಿಯವರದೆ ವರ ಗ
ದಿಂದಂ ಬಡಗಲು ಪಡಲುವಲು ಮೆಕಾ
ರ ದಾರಿಯಿಂದಂ ಮೂಡಲು ಬಡಗ ಹಿ
ಲಿ ಹೊದಾರಿಯಿಂದ ತೆಂಕಲು ಯಿ ಬತು
ಸಿಮೆ ಬಾನಿಗಣವರ ಬನಿಯ ಸಂಕ|ವಾ
ಸವನ ಹಡಿ ಕಾ. ಗ 284 ಮೊದಲ **

ಹಿಂಭಾಗ

ಹರಿಹರ ಮಹಾರಾಯರ ನಿರೂಪದಿಂ
ದ ಮಲಪವೊಡೆಯರು ಕುಗವ ಕಡಿದು
ರಾಯದತ್ತವಾಗಿ ಸರ್ವಮಾನ್ಯವಾಗಿ ಕೊಟ
ಶಾಸನದ ಪಡೆ |ತೆರಮುರಿ ಸಂಕು

ವಾಗುವನ *ಪ ಹೊರ *ವಿತ್ತಿಗಾ

ರರ ಮೊಪದುರ್ಗಾದೆವಿ ಕೊಡಲ ಬ್ರಂ

ಹಣ ಪಲೊಕನಾದ ದೆವರ ಮಾಪಕರ

ಣಿಕರ ಮುಪನಾಡು ಮುವತ್ತರ ಮಾಪ .... ಅಪೂರ್ಣ.

ಈ ಶಾಸನವು ಶಾಲಿವಾಹನ ಶಕ 1309 ಅಂದರೆ ಕ್ರಿ. ಶ. 1387 ರದ್ದಾಗಿದೆ. ಈ ಸಮಯದಲ್ಲಿ ವಿಜಯನಗರ ಸಿಂಹಾಸನದಲ್ಲಿ ಹರಿಹರ ಮಹಾರಾಯರು ಆಡಳಿತ ನಡೆಸುತ್ತಿದ್ದು ಅವರ ಅನುಮತಿಯಿಂದ ಮಲ್ಲಪ್ಪ ವೊಡೆಯರು ಬಾರಕೂರು ರಾಜ್ಯವನ್ನು ಆಳುತ್ತಿದ್ದರೆಂದು ಶಾಸನದಿಂದ ತಿಳಿದುಬರುತ್ತದೆ. ಶಾಸನದ ಒಂದು ಪಟ ಮಾತ್ರ ದೊರೆತಿದ್ದು ಇನ್ನೊಂದು ದೊರೆತಿರುವುದಿಲ್ಲ. ಶಾಸನ ಅಪೂರ್ಣವಾಗಿದೆ. ಶಾಸನದಲ್ಲಿ ನರಸಿಂಹ ಸಾಹು ಎಂಬ ಉಕ್ತವಾಗಿದ್ದು ಇವರಿಗೆ ಕೆಲವು ಸ್ಥಳಗಳನ್ನು ದಾನ ಬಿಟ್ಟ ಕುರಿತು ಶಾಸನ ತಿಳಿಸುತ್ತದೆ. ಹರಿಹರ ಮಹಾರಾಯರು ಕ್ರಿ. ಶ. 1386-90 ಮತ್ತು 1395 -99ರವರೆಗೆ ಆಡಳಿತ ನಡೆಸಿರುವುದು ತಿಳಿದುಬರುತ್ತದೆ.

ಶಾಸನ 2

ಸೂರ್ಯ, ಗಣಪತಿ ಮಂಡಲ, ಶಂಖ, ಚಂದ್ರ ಚಿತ್ರ.

1. ಸ್ವಸ್ತಿಂಪಾತುನೂಜಲದ ಶ್ಯಾಮ ಶ್ಯಾಂಗ್ಯಜ್ಯಾಪತ ತರ್ತ ಶು ತ್ರೈ
2. ಲೊಕ್ಯ ಮಂಟಪಸ್ತಂಭ ಶತ್ಪರೊಹರಿ ಬಾಹವ : ಶ್ರೀ ಕೃಷ್ಣಾ
3. ಯ ನಮಃ ಶ್ರಿ ಗುರುಭ್ಯೊನಮಃ ಆ ವಿಘ್ನಮಸ್ತು ಶ್ರೀ ವಿಜ
4. ಯಾಭ್ಯುದಯ ಶಾಲಿವಾಹನ ಶಕ ವರುಷ 1395 ವರುಷದಲು
5. ರಾಜಾದಿರಾಜ ರಾಜಪರಮೆಶ್ವರ ಶ್ರಿ ವಿರೂಪಾಕ್ಷರಾಯ ಮಹಾ
6. ರಾಯರು ಸಖ ಸತ್ಕಥಾ ವಿನೊದದಿಂದಿರುತಿರಲು ಆ ರಾಯ
7. ರ ನಿರೂಪದಿಂ ಬಾರಕೂರ ರಾಜ್ಯವನಾಳಿದ ವಿಠರಸರ ಕಾಲದಲು
8. ರಾಯರ ನಿರೂಪದಿಂ ವಿಜಯ ಸಂವತ್ಸರದಲು ಕೊಟೆಶ್ವರ ಗ್ರಾಮದಲಿ
9. ಅರಮನೆಯ ಭಂಡಾರಕ್ಕೆ ಸಲುವ ಅಂಣಹತ್ವರನ ಜನನಡೆ
10. ಹದಿಯಲಿ ಕುಂಬಾಸಿಯ ಉಳಗೆ 60 ಕಾಟಿ ಬಿಜಾಡಿಯ ಉ
11. ರಲು ಹತ್ವರನ ಹಡಿಯಲು ಕಾಟ ಗ 30 ಅಂತು ತೊಂಭತ್ತು
12. ಕಾಟಿ ಹೊಣ್ಣನು ಪಾಲ್ಗುಣ ಶುದ್ಧ ಶ್ರವಣ ದ್ವಾದಶಿ ಪುಣ್ಯ ಕಾಲದಲು ವಿ
13. ಠರಸರು ತಮ್ಮ ಗುರುಗಳಾದ ದೆವೊತ್ತಮ ಶ್ರೀ ಪಾದ ತೀರ್ಥ ವೊಡೆಯರಿ


14. ಗೆ ಬಿಕ್ಷ ಸ್ವಾಸ್ಥೆಗೆ ಆಚಂದ್ರಾರ್ಕವಾಗಿ ಸಹಿರಣ್ಯದಾನಸಹವಾಗಿ
15. ಯರದಕೊಟ್ಟರು. ಯಿದಕ್ಕೆ ಪ್ರತಿ ಪಕ್ಷಿಗಳಾದರೆ ಮಹಾಪಾತಕನೆಯಿದುವರು.
16. ದಾನಪಾಲನಯೊರ್ಮದ್ಯೆ ದಾನಾಛ್ರೇಯೆನುಪಾಲನಂ ದಾನಾತ್ ಸರ್ಗ್ಗ
17. ಮವಾಪ್ನೋತಿ ಪಾಲನಾದಚ್ಯುತಂ ಪದಂ. ವಿಠ್ಠರಸರ ಒಪ್ಪ ಅಣ್ಣ ಹತ್ವಾರನ ಒಪ್ಪ
18. ಕರಣಿಕ * ಯಪ್ಪಗನ ಬರಹಾ ಶ್ರೀ.

ಈ ಶಾಸನದಲ್ಲಿ ಮೇಲ್ಭಾಗದಲ್ಲಿ ಶಿಲಾಶಾಸನಗಳಲ್ಲಿ ಇರುವಂತೆ ಸೂರ್ಯ, ಗಣಪತಿ ಮಂಡಲ, ಶಂಖ, ಚಂದ್ರ ಚಿತ್ರಗಳಿವೆ. ಶಾಸನವು ಶಾಲಿವಾಹನ ಶಕ 1395 ಅಂದರೆ ಕ್ರಿ. ಶ. 1473 ರದ್ದಾಗಿದೆ. ಈ ಸಮಯ ಎರಡನೆ ದೇವರಾಯನ ಕಾಲ. ಶಾಸನದಲ್ಲಿ ರಾಜಾಧಿರಾಜ ಪರಮೇಶ್ವರ ಶ್ರೀ ವಿರೂಪಾಕ್ಷರಾಯ ಮಹಾರಾಯರು ಆಡ ಳಿತ ನಡೆಸುತ್ತಿದ್ದ ಕಾಲದಲ್ಲಿ ಎಂದು ಉಲ್ಲೇಖವಾಗಿದೆ. ಇವನು ಈ ಕಾಲದಲ್ಲಿ ಬಾರಕೂರು ರಾಜ್ಯವನ್ನು ಆಳುತ್ತಿದ್ದ ವಿಠರಸರು ಆಡಳಿತ ನಡೆಸುತ್ತಿದ್ದರೆಂದು ತಿಳಿದು ಬರುತ್ತದೆ. ಇವರು ಕೋಟೇಶ್ವರ ಗ್ರಾಮದಲ್ಲಿರುವ ಕುಂಬಾಸಿ (ಇಂದಿನ ಆನೆಗುಡ್ಡೆ) ಎಂಬಲ್ಲಿ ಇದ್ದ ಈ ಅರಸರ ಗುರುಗಳಾದ ದೇವೋತ್ತಮ ಶ್ರೀ ಪಾದ ತೀರ್ಥ ವೊಡೆಯರಿಗೆ ಭಿಕ್ಷ ಸ್ವಾಸ್ಥೆಗೆ ದಾನ ಬಿಟ್ಟಿರುವುದನ್ನು ತಿಳಿಸುತ್ತದೆ. ಇಲ್ಲಿ ಬರುವ ಹತ್ವಾರ ಎಂಬುದು ಒಂದು ಉಪನಾಮವಾಗಿದೆ. ಅಲ್ಲದೆ ಹಾದಿ ಎಂಬುದು ಕಾಡನ್ನು ತಿಳಿಸುತ್ತದೆ. ಈ ಗುರುಗಳು ಯಾವ ಮಠಕ್ಕೆ ಸಂಬಂಧಪಟ್ಟವರಾಗಿದ್ದಾರೆಂಬುದು ತಿಳಿಯಬೇಕಾಗಿದೆ. ಉಡುಪಿಯ ಭಂಡಾರಕೇರಿ ಮಠ ಮತ್ತು ಕೃಷ್ಣ ಮಠದ ಮೂಲಗಳು ಇಲ್ಲಿಯೇ ಸಿಗು ತ್ತವೆ. ಅಲ್ಲದೆ ಸೋದೆ ಮಠದ ಎರಡು ಸಮಾಧಿಗಳು ಇಲ್ಲಿವೆ. ಆದ್ದರಿಂದ ಈ ಶಾಸನ ದಲ್ಲಿ ಉಲ್ಲೇಖವಾಗಿರುವ ಮಠದ ಕುರಿತು ಹೆಚ್ಚಿನ ಸಂಶೋಧನೆ ಆಗಬೇಕಾಗಿದೆ.

ನನಗೆ ವಿಠರಸರು ಮತ್ತು ಮಲ್ಲಪ್ಪ ವೊಡೆಯರ ಕುರಿತು ಡಾ. ಜಗದೀಶ ಶೆಟ್ಟಿ, ಬಾರಕೂರು (9448868868) ಇವರು ಮಾಹಿತಿ ಒದಗಿಸಿದ್ದಾರೆ. ಶಾಸನ ಒದಗಿಸಿದ ವರಿಗೂ ಸಹಕರಿಸಿದ ಎಲ್ಲರಿಗೂ ಮತ್ತು ಪ್ರಬಂಧ ಮಂಡನೆಗೆ ಅವಕಾಶ ಕಲ್ಪಿಸಿದ ನಿರ್ದೇಶನಾಲಯಕ್ಕೂ ನಾನು ಆಭಾರಿಯಾಗಿದ್ದೇನೆ. Studies in Tuluva History and Culture by Prof. P. Gururaja Bhatt, M. A. Ph. D. Chapter V. The rule of vijayanagara, (A. D. 1336-A. D. 1650)


ಬಾರಕೂರು ಬಗ್ಗೆ: *ಎಸ್. ಐ. 7, ಎಸ್. ಐ 9* ಭಾಗ 2. *ಇಂಡಿಕಾ* 12, 27 ಕೆ. ವಿ. ರಮೇಶ್ ತುಳುನಾಡಿನ ಶಾಸನಗಳು ಪುಸ್ತಕದಲ್ಲಿ ಹೆಚ್ಚಿನ ಮಾಹಿತಿ ದೊರೆಯುತ್ತದೆ.

ಕುಂಬಾಸಿ-ಇದು ಮೂಲ ಸೋದೆ ಮಠದ ಕ್ಷೇತ್ರ. ಇಲ್ಲಿ ಶ್ರೀ ವಾಗೀಶ ತೀರ್ಥ ಗುರುಗಳು ಮತ್ತು ಶ್ರೀ ವಿದ್ಯಾನಿಧಿ ತೀರ್ಥರು ಹೀಗೆ 2 ಮೂಲ ಬೃಂದಾವನಗಳಿವೆ. ಇವರ ಆರಾಧನೆಗಳು ಕ್ರಮವಾಗಿ ಜೇಷ್ಠ ಬಹುಶ ಚತುರ್ದಶಿ ಮತ್ತು ವೈಶಾಖ ಪಾಡ್ಯ ದಶಮಿ ನಡೆಯುತ್ತದೆ.







ದಕ್ಷಿಣ ಮೂರ್ತಿ




ಗೋಪಾಲಕೃಷ್ಣ




ಭಿಕ್ಷಾಟನಾ ಮೂರ್ತಿ



ದಕ್ಷಿಣಾ ಮೂರ್ತಿ



ದಕ್ಷಿಣಾ ಮೂರ್ತಿ



ಸಿಂಹ ಮುಖ

೩. ಬಾರಕೂರು ಮೂರುಕೇರಿ ಸೋಮೇಶ್ವರ ದೇವಾಲಯದ ವೀರ ಹರಿಹರನ ತಾಮ್ರ ಶಾಸನ

ಡಾ. ಎಸ್.ಜಿ. ಸಾಮಕ್

ಉಡುಪಿ ಜಿಲ್ಲೆ ಬಾರಕೂರಿನ ಮೂರುಕೇರಿಯಲ್ಲಿರುವ ಸೋಮೇಶ್ವರ ದೇವಾಲಯದ ಅರ್ಚಕರಲ್ಲಿದ್ದ ಪ್ರಸ್ತುತ ತಾಮ್ರ ಶಾಸನ ವಿಜಯನಗರದ ದೊರೆ ಇಮ್ಮಡಿ ಹರಿಹರನ ಕಾಲದ್ದಾಗಿದೆ(ಶಾ.ಶಕ.೧೩೧೨-ಕ್ರಿ.ಶಕ. ೧೩೬೦) ೩೧ ಸೆ.ಮೀ ಉದ್ದ, ೧೫ ಸೆ.ಮೀ ಅಗಲ

ಹಾಗೂ ೦.೨ ಮಿ.ಮಿ ದಪ್ಪವಿರುವ ಈ ಶಾಸನ ೩೨ ಸಾಲುಗಳನ್ನು ಹೊಂದಿದೆ. ಹಲಗೆಯ ಮುಂಭಾಗದಲ್ಲಿ ೨೪ ಸಾಲುಗಳನ್ನೂ ಹಾಗೂ ಹಿಂಭಾಗದಲ್ಲಿ ೮ ಸಾಲುಗಳನ್ನು ಬರೆಯಲಾಗಿದೆ. ಗಣಪತಿ, ಸರಸ್ವತಿ ಹಾಗೂ ಗುರುವಿನ ವಂದನೆಯೊಂದಿಗೆ ಶಾಸನವನ್ನು ಪ್ರಾರಂಭಿಸಲಾಗಿದೆ.

ಶಾಸನ ಪಾಠ

ಹಲಗೆಯ ಮುಂಬಾಗ

೧. ಸ್ವಸ್ತಿ ಶ್ರೀಗಣಾದಿಪತೆಯೆ ನವಮಃ|| ಶ್ರೀಸರಸ್ವಾತ್ಯಾಯ ನವಮಃ|| ಶ್ರೀಗುರುಭ್ಯೋಂನಮಃ ನಿರ್ವಿಘ್ನಮಸ್ತು| ನಮಸ್ತುಂಗ ಸಿರಸ್ತೊಂ

೨. ಬಿ. ಚಂದ್ರ ಚಾಮರ ತಾರುವೆ ತ್ರಯಿಲೋಕ್ಯನಗರಾರಂಭಂ ಮೂಲಸ್ತಂಬಾಯ ಶಂಬವೇ|| ಸ್ವಸ್ತಿ ಶ್ರೀ ಜಯಾಭ್ಯುದಯ ಶ.

೩. ಕ ವರುಷ ೧೩೧೨ ನೆಯ ವರ್ತಮಾನ ವಿಭವ ಸಂವತ್ಸರದ ಭಾದ್ರಪದ ಬ ೧೧ಗು ಶ್ರೀಮನು ಮಹಾ ರಾಜಾದಿರಾಜ

೪. ಪರಮೇಸ್ವರ ಶ್ರೀ ವಿರ ಹರಿಹರ ಮಹಾರಾಯರ ರಾಜ್ಯಾಭ್ಯುದಯದಲ್ಲಿ ಶೀಮನು ಮಹಾ ಪ್ರದಾನಂ ಗುಂಡಪ್ಪ ದಂಡನಾಯಕ

೫. ರ ಪ್ರದಾನಿ ಕೈಯಲು ಹೊಂನಾಉರದ ಮಲ್ಲಪ ವೊಡ್ಯೆಯರು ಬಾರಕೂರ ರಾಜ್ಯವನಾಳುವಲ್ಲಿ ಕೊ

೬. ಳೂರು ದೇವರಸರ ತಮ್ಮ ಮಾಯಂಣಗಳು ಮೂರುಕೇರಿಯ ಹೊರಗಣ ಸೋಮಯದೇವರ ಸಂನಿಧಿ

೭. ಯಲು ಮಾಡಿದ ಚತ್ರದ ಬ್ರಾಹ್ಮರು ಉಂಬ ದಂರ್ಮ್ಮ ಬ್ರಹ್ಮೂರು ಗ್ರಾಮದ ವೊಳಗಣ ಪಡುವ ಭಾಗದ ವಿಷ್ಣವಾ

೮. ರಂಬಳಿ ಗಂಡುಪಾಳು ಬಯಲಂಣ ಹೆಬಾರುವ ಕಲಿಯಂಣ ಹೆಬಾರುವ ವಾಸುದೇವ ಹೆಬಾರುವ ಅಂನ್ತೂ

೯. ಈ ಅಯಿವರೂ ತಂಮೊಳು ಏಕಸ್ತರಾಗಿ ಆಮಾಯಂಣಗಳು ತಾವು ಬದ್ದು ಬಂದ ಬ್ರಹ್ಮಾದಾಯದ ಮೂ

೧೦. ಲದ ಬಾಳಿಂಗೆ ತೆರೆಕೊಡುತಾಉ ಸೀಮೆಯ ಕಟ್ಟಿಕೊಂಡು ಕೊಟ್ಟ ತಾಂಬ್ರದ ಶಾಸನದ ಕ್ರಮವೆಂತೆಂದಡೆ ಬ್ರ

೧೧. ಹ್ಮೂರ ಗ್ರಾಮದ ವೊಳಗಣ ಪಡುವ ಬಾಗಿಯ ವಾರಂಬಳಿಯ ಆದಿವಾಸದವೊಳಗೆ ಆ ಮಾಯಂಣಗಳು ಬದ್ದು

೧೨. ಬಂದ ಬ್ರಹ್ಮಾದಾಯದಮೂಲದ ಬಾಳಿನ ವಿವರ ಪಡುವಲು ಹೆದಾಯಂ ರಾಮನಾಯಕನ ಬಯಚ

೧೩. ನಗಡಿಯ ಹೆದಾರಿಯಂ ಮೂಡಲು ಬಡಗಲು ಕೇತಣ ಭಂಡಾರಿಯ ವೋಣಿಯಿಂ ತೇಂಕಲು ವಿಷ್ಣು ವಾರಂಬಳಿ

೧೪. ಯ ಗಡಿಯ ಸಾಲಂದಲೂ ತೇಂಕಲು ಮೂಡಲು ಸಾಲಿಂದಲೂ ಪಡುವಲು ಯಿ ಚತುಸ್ಸಿಮೆಯ ವೊಳಗು.

೧೫. ಳ್ಳ ತಾಂಮ ಮನೆ ಮನೆ ಯಿಂದಲೂ ಮೂಡಣ ಬಾಗಿಲ ಗದ್ದೆ ಬಡಗಲು ಬಾರಕೂರು ಅಧಿಕಾರಿಯ ವಿಠಪನ ದಂ

೧೬. ಡಿ ಮೂಡಲು ಆ ವಿಠಪನ ಬಾಳಿಂದಲೂ ಪಡುವಲು ತೆಂಕಲು ನೀರು ಹರಿವ ಸಾಲಿನ ವೊಳಗುಳ ಮಕ್ಕಿ ಬೆದೆ

೧೭. ಗಣಿಗಲು ಮೂ ಬ ೪೦ ಲೆಕ್ಕದ ಮೂ ೩ ಮೊಕ್ಕೆ ಬಡಗಲು ನೀರು ಹರಿವ ಸಾಲಿಂದಲೂ ತೆಂಕಲು ಮೂಡಲು ನಂ

೧೮. ಮ ಕೊಳಕೆಯ ಬಯಲಿಂದಲೂ ಪಡುವಲು ತೆಂಕಲು ವಾಸು ವಾರಂಬಳಿಯ ಗಡಿಯಿಂದಲೂ ಬಡಗಲು ಪಡು

೧೯. ವಲು ಸಾಲಿಂದಲೂ ಮೂಡಣ ಮೊಕ ಬೆದೆಗಣಗಿಲು ಬ ೪೦ ಲೆಕದ ಮೂಡೆ ೭ ಬಯಲು ಪಡುವಲು ನಂಮ ಮೊ

೨೦. ಕ್ಕಿಯ ಗದ್ದೆಯಿಂದಲೂ ಮೂಡಲು ಬಡಗಲು ನೀರು ಹರಿವ ಸಾಲಿಂದಲೂ ತೆಂಕಲು ಮೂಡಲು ಅರಸನ ಕೇರಿ

೨೧. ಯ ವಾಸುವಾರಂಬಳ್ಳಿಯ ಮಕ್ಕೆಯ ಗದ್ದೆಯಿಂದ ಉ ಪಡುವಲು ತೆಂಕಲು ವಾಸುವಾರಂಬಳಿಯ ಮಕ್ಕಳ ಬಾ.

೨೨ ಳಿಂದ ಉ ಬಡಗಣ ಬಯಲು ಬೆದೆಗೆಣೆಗಿಲು ಬ ೪೦ ಲೆಕ್ಕದ ಮೂ ೮ ತೆರೆ ಮೂಲಿಗಳು ಬಯಲು

೨೩. ಮೂಲ ಕೆತರು ಮೂ ೬||ಗ ೦೧ ವಿಷ್ಣುವಾರಂಬಳಿ ಮೋಕೆ ಮಕ್ಕಿ ತೋಟ ಸಮಚ್ಚಯ ಗಂಡಪಾಳು

೨೪. ಬಯಲು ಅಂಕಿ ಹೆಬಾರು s ಆಯಂಣ ಹೆಬಾರು s ವಾಸ್ತಿ sಣಿಬಾರುವ ಯಿನಾಲ್ವರ ಅಪಣೆಯ ಮೂ ಕಂ ಗ ಹೊ

ಹಲಗೆ ಹಿಂಭಾಗ

೨೫. ನು ಆಂ ನ್ತುಯಿಚತುಸಿಮೆ ವೊಳಗುಳ್ಳ ಬಿತ್ತು s ಬೆದೆಗಣೆಗಲು ನಾಗಂಡುಗದ ಮು ೧೮ ಕ್ಕೆ ಪೂರ್ವಪ್ರಮಾಣಿನತೆರೆ ಮ

೨೬. ದಲು ಮೂಗಣ|| ತೆರನೂ ಕೊಟು ಕಟ್ಟಿಕೊಂಡು ಸೀಮೆಯ ವಿವರ |ವಿಷ್ಣುವಾರಂಬಳಿ ಕಟ್ಟಿಕೊಂಡು ಸೀಮೆ ಕಟಿ.

೨೭. ..ಗ೧ ಹೊಂನನೂ ತೆರೆಸಿಕೊಂಡು ತಂನ ಅಪ್ಪಣೆಯ ಮೂ ೬||ತೆರೆನೂ ಕೊಂಡು ತಂನ ಮಯಿದೆದಾರಿ.

೨೪. ತೆತ್ತು ಬಹನು|ಗಂಡಪಾಳು ಕಟಿ ಕೊಂಡ ಸೀಮೆ ಗ೧|ಹಣವನೂ ಕಟುಂದೆರಾಗಿ ತೆರೆಸಿಕೊಂಡು ತಂನ ಅಪ್ಪ

೨೯. ಣೆಯ ತೆರು ಹೊ೭೦ನೂ ಕೊಡ ತಂನ ಮಯಿದೆರಾಗಿ ತೆತ್ತೂ‌ಬಹನು| ಬಯಲಂಣ ಹೆಬಾರುವನು ಕಟಿ.

೩೦. ಕೊಂಡ ಸೀಮೆ ಕಟಿಂದೆರಾಗಿನಂ|ಹಣವನು ತೆರೆಸಿಕೊಂಡು ತಂನ ಅಪಣೆಯ ತೆರು ಹೊ ೭೦ ನೂ ಕೊಡ ತಂನ

೩೧. ಮಾಯಿದೆರಾಗಿ ತೆತ್ತೂ ಬಹನು|ಕರಿಯ ಅಂಣ ಹೆಬಾರುವನು ಕಟಿಕೊಂಡ ಸೀಮೆ ತಮಿಂದರಾಗಿ ಗಂ|ಹಣ

೩೨. ನೂ ತೆರ ಕೊಂಡು ತಂನ ಅಪಣ್ಣೆಯ ತೆರಂ

ಸಾರಾಂಶ

ಸ್ವಸ್ತಿ ಜಯಾಭ್ಯುದಯ ಶಾಲಿವಾಹನ ಶಕ ವರುಷ ೧೩೧೨ ನೇ ವಿಭವ ಸಂವತ್ಸರದ ಭಾದ್ರಪದ ಬಹುಳ ೧೦ ಗುರುವಾರದಂದು ಮಹಾರಾಧಿರಾಜ ರಾಜ ಪರಮೇಶ್ವರ ಶ್ರೀ ವೀರ ಹರಿಹರ ಮಹಾರಾಯರ ಆಳ್ವಿಕೆಯ ಕಾಲದಲ್ಲಿ ಮಹಾಪ್ರಧಾನಿ ಗುಂಡಪ್ಪ


ದಂಡನಾಯಕರ ಅಧೀನರಾದ ಹೊನ್ನಾವರದ ಮಲ್ಲಪ್ಪ ಒಡೆಯರು ಬಾರಕೂರ ರಾಜ್ಯವನ್ನು ಆಳುವ ಸಮಯದಲ್ಲಿ ಕೋಳುರು ದೇವರಸರ ತಮ್ಮ ಮಾಯಣ್ಣ ಎಂಬುವರು ಮೂರುಕೇರಿ ಸೋಮಯ ದೇವರ ಸನ್ನಿಧಿಯಲ್ಲಿ ಮಾಡಿದ ಬ್ರಾಹ್ಮಣರ ಭೋಜನದ ವ್ಯವಸ್ಥೆಗೆ ಬ್ರಹ್ಮಾವರದ ಸಮೀಪವಿರುವ ವಾರಂಬಳ್ಳಿ ಗ್ರಾಮದ ವಿಷ್ಣು ಹೆಬ್ಬಾರ, ಕಲಿಯಣ್ಣ ಹೆಬ್ಬಾರ, ವಾಸುದೇವ ಹೆಬ್ಬಾರ ಮುಂತಾದ ಐವರು ತಾವು ಅನುಭವಿಸಿಕೊಂಡು ಬರುತ್ತಿದ್ದ ಭೂಮಿಯ ಕೆಲವು ಬಾಗವನ್ನು ದಾನವಾಗಿನೀಡಿದ್ದಾರೆ. ದಾನದ ಭೂಮಿಯು ಚತುಸ್ಸೀಮೆ ಗಡಿಯ ವಿವರವನ್ನು ದಿಕ್ಕು, ನೀರಿನ ಹರವು, ಹೆದ್ದಾರಿ ಮುಂತಾದ ಗುರುತುಗಳ ಸಹಿತ ನೀಡಲಾಗಿದೆ.

ಚರ್ಚೆ


ಪ್ರಸ್ತುತ ತಾಮ್ರ ಶಾಸನ ರಾಜ್ಯಪಾಲ ಮಲ್ಲಪ್ಪ ಒಡೆಯನ ಆಳ್ವಿಕೆಯ ಕಾಲದಲ್ಲಿ ಬರೆಯಲ್ಪಟ್ಟ ೩ನೇ ಶಾಸನವಾಗಿದೆ (೧೮೪೬, ೧೮೪೭) ಹಾಗೂ ಕೊನೆಯ ಶಾಸನವಾಗಿ ಕಂಡುಬರುತ್ತದೆ. ೧೩೮೬ರ ಸುಮಾರಿಗೆ ಕೆಲಕಾಲ ವಿರುಗಪ್ಪ ದಂಡನಾಯಕ (೧೩೮೮) ಬಾರಕೂರನ್ನು ಆಳಿದ ಬಗ್ಗೆ ಮಾಹಿತಿ ತಿಳಿಯುತ್ತದೆ.(*SII*, 351). ಈ ಶಾಸನ ಶಾಪಾಶಯ ರಹಿತವಾಗಿದ್ದು ಅಪೂರ್ಣವಾಗಿ ಕಂಡುಬರುತ್ತದೆ. ಶಾಸನದಲ್ಲಿ ಕಂಡು ಬರುವ ಕೆಲವು ಕ್ಲಿಷ್ಟ ಪದಗಳು ಅರ್ಥ ಈ ರೀತಿ ಇವೆ. ಕಟ್ಟೆಂದುರಾಗಿ=ವಿಜಯನಗರ ಕಾಲದಲ್ಲಿ ಈ ಪ್ರದೇಶದಲ್ಲಿ ಚಾಲ್ತಿಯಲ್ಲಿದ್ದ ಗೇಣಿದಾರ ನೀಡಬೇಕಿದ್ದ ತೆರಿಗೆ, ಬೆದೆಗಣಗಿಲು=ಅಗೇಡಿ, ಸಸಿ ತಯಾರಿಸಲು ಇರುವ ಭೂಮಿ, ತೆರು=ಭೂಮಿಯ ಲಕ್ಷಣ ಹಾಗೂ ಆದರ ಇಳುವರಿ ಆದಾರದ ಮೇಲೆ ನಿರ್ಧರಿಸುವ ತೆರಿಗೆ.

ಈ ಶಾಸನದ ಬಗ್ಗೆ ಮಾಹಿತಿ ನೀಡಿದ ಪಾಂಡೇಶ್ವರದ (ಬ್ರಂಹಾವರ ತಾ||) ಶಾಂರಾವ್, ಶಾಸನದ ಪ್ರತಿಯನ್ನು ಒದಗಿಸಿದ ಬಾರಕೂರು ಮೂರುಕೇರಿ ಸೋಮೇಶ್ವರ ದೇವಾಲಯದ ಆರ್ಚಕರಾದ ಶ್ರೀ ವಿಶ್ವಾಸ್ ಶಾಸ್ತ್ರೀ ಅವರಿಗೆ ಹಾಗೂ ಅಧ್ಯಯನದಲ್ಲಿ ಸಹಕರಿಸಿದ ಶಿವಮೊಗ್ಗದ ಡಾ|| ಜಗದೀಶ್ ಮತ್ತು ಬ್ರಹ್ಮಾವರದ ಡಾ||ಜಗದೀಶ್ ಶೆಟ್ಟಿ ಅವರಿಗೆ ಧನ್ಯವಾದಗಳು.

ಬಾರಕೂರು ಮೂರುಕೇರಿ ಸೋಮೇಶ್ವರ ದೇವಾಲಯದ ವೀರ ಹರಿಹರನ ತಾಮ್ರ ಶಾಸನ



ಮುಂಭಾಗ



ಹಿಂಭಾಗ

೪. ಎರಡನೇ ಹರಿಹನ ಧಾರ್ಮಿಕ ಶಾಸನಗಳು
(ಕ್ರಿ. ಶ. ೧೩೭೭-೧೪೦೪)

ಡಾ. ಡಿ. ಎಂ. ನಾಗರಾಜು

ಹದಿನಾಲ್ಕನೆಯ ಶತಮಾನದಲ್ಲಿ ಉತ್ತರದ ದುರಾಕ್ರಮಣಕಾರರ ವಿರುದ್ಧ ರಕ್ಷಾಕವಚದಂತಿರುವ ರಾಜ್ಯ ಸ್ಥಾಪನೆಗೆ ದಾರಿ ಮಾಡಿಕೊಟ್ಟಿತು. ವಿಜಯನಗರ ಸಾಮ್ರಾಜ್ಯ ತುಂಗಭದ್ರೆಯ ದಕ್ಷಿಣದ ಇಡೀ ದಕ್ಷಿಣ ಭಾರತವನ್ನು ಏಕಛತ್ರದಡಿಗೆ ತಂದು, ಈ ಭಾಗದ ಪರಂಪರಾಗತ ಧರ್ಮ, ಸಾಹಿತ್ಯ, ಲಲಿತಕಲೆಗಳಿಗೆ ಕ್ಷೇತ್ರದಲ್ಲಿ ವಿಜಯನಗರ ಅಮೂಲ್ಯ ಸಾಧನೆಗಳಿಗೆ ಕಾರಣವಾಯಿತು. ವಿಜಯನಗರ ಇತಿಹಾಸ ರಚನೆಗೆ ಸಾಧನ ಸಾಮಗ್ರಿ ವಿಪುಲವಾಗಿದೆ. ಸುಮಾರು ೯೦೦೦ ಶಾಸನಗಳು ದಕ್ಷಿಣ ಭಾರತದಲ್ಲಿ ಹರಡಿದ್ದು ಆ ಪೈಕಿ ಅರ್ಧದಷ್ಟು ಕನ್ನಡದಲ್ಲೂ, ೩೦೦೦ ತಮಿಳಿನಲ್ಲೂ, ೨೫೦೦ ತೆಲುಗಿನಲ್ಲೂ ಉಳಿದವುಗಳ ಪೈಕಿ ಸುಮಾರು ೭೦೦ ತಾಮ್ರಪಟಗಳು, ಇದರ ನಂತರ ವಿದೇಶಗಳಿಂದ ಬಂದ ಪ್ರವಾಸಿಗಳಲ್ಲಿ ಮುಖ್ಯರಾಗಿ ಪೋರ್ಚುಗಲ್‌ನವರಾದ ಪಾಯಿಶ್, ನುನಿಸ್, ಬರ್ಬೋಸ ಮತ್ತು ಬರ್ರಡಸ್, ಇಟಲಿಯ ನಿಕೋಲಾಕಾಂಟಿ ಹಾಗೂ ಸೀಜರ್ ಫೆಡರಿಕ್ ಹಾಗೂ ಪರ್ಷಿಯಾದ ಅಬ್ದುಲ್ ರಜಾಕ್ ಮುಂತಾದವರು ಹಾಗೂ ಇತಿಹಾಸ ಗ್ರಂಥಗಳು ಒದಗಿಸುವ ಮಾಹಿತಿಯೂ ಅಮೂಲ್ಯ. ಸಾಹಿತ್ಯಿಕ ಬರಹಗಳಲ್ಲಿ ಸಂಸ್ಕೃತ 'ವಿದ್ಯಾರಣ್ಯ ಕಾಲಜ್ಞಾನ'ಗಂಗಾಂಬಿಕೆಯ ಮಧುರಾವಿಜಯಂ, ರಾಜನಾಥನ ಡಿಂಡಿಮ, ಸಾಳುವಾಭ್ಯುದಯಂ, ಕನ್ನಡ ಕೃತಿಗಳಲ್ಲಿ ನಂಜುಂಡ ಕವಿಯ ಕುಮಾರರಾಮ ಸಾಂಗತ್ಯ ಪ್ರಮುಖವಾದವು.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಶ್ರೇಯಸ್ಸು ಯಾದವ ವಂಶದ ಸಂಗಮ ಎಂಬ ಸಣ್ಣ ಸಾಮಂತ ಅಥವಾ ಪಾಳೇಗಾರನ ಐವರು ಪುತ್ರರಾದ ಹರಿಹರ, ಬುಕ್ಕ, ಕಂಪಣ, ಮಾರಪ್ಪ ಮತ್ತು ಮುದ್ದಪ್ಪ ಎಂಬುವರಿಗೆ ಸಲ್ಲಬೇಕು. ಸುಮಾರು ೧೩೩೬ ರಲ್ಲಿ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಆಗ ಹೊಯ್ಸಳ ಸಾಮ್ರಾಜ್ಯ ದುರ್ಬಲವಾಗಿ ಸಾಗಿತ್ತು. ಮುಳುಬಾಗಿಲು ಮತ್ತು ಗೌರಿಬಿದನೂರಿನ ಶಾಸನಗಳು ವಿಜಯನಗರ ರಾಜ್ಯಸ್ಥಾಪಕರ ವಂಶಾವಳಿಯ ಬಗ್ಗೆ ವಿವರಗಳನ್ನು ಕಾಣಬಹುದು. ವಿಜಯನಗರ ಅರಸರು ಧಾರ್ಮಿಕ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು.

ಕ್ರಿ. ಶ. ೧೩೭೭ ರಿಂದ ೧೪೦೪ ರವರೆಗೆ ಆಳಿದ ಎರಡನೇ ಹರಿಹರನ ಕಾಲದಲ್ಲಿ ವಿಜಯನಗರ ಪ್ರಸಿದ್ಧಿಗೆ ಬಂದಿತು. ''ಮಹಾರಾಜಾಧಿರಾಜ ರಾಜ ಪರಮೇಶ್ವರ"ಎಂಬ ಸಾಮ್ರಾಜ್ಯ ಸೂಚಕ ಬಿರುದನ್ನು ಧರಿಸಿದನು.

ಇಮ್ಮಡಿ ಹರಿಹರನನ್ನು ಯಳಂದೂರು ಶಾಸನದಲ್ಲಿ ಹರಿಯಪ್ಪ ಒಡೆಯರ್ ಎಂದು ಕರೆಯಲಾಗಿದೆ. ಮಳವಳ್ಳಿ ಶಾಸನದಲ್ಲಿ ಇಮ್ಮಡಿ ಹರಿಹರನನ್ನು ವೀರ ಹರಿಹರೇಶ್ವರ, ವೀರಹರಿಹರ ಮಹಾರಾಯ ಎಂಬುದಾಗಿಯೂ ಕರೆಯಲಾಗಿದೆ. ಬೇಲೂರಿನ ಶಾಸನಗಳು ಇಮ್ಮಡಿ ಹರಿಹರನು ಚೋಳ, ಕೇರಳ, ಪಾಂಡ್ಯರ ಮೇಲೆ ಯುದ್ಧ ಮಾಡಿ ವಿಜಯಿ ಯಾದನೆಂದೂ ಅವನು ಭಯಗ್ರಸ್ತರಾದ ಸೌರಾಷ್ಟ್ರರು, ಅಂಗರು, ಕಳಿಂಗರು, ವಂಗರು ಮತ್ತು ಯವನನ್ನು ಕಾಪಾಡಿದನೆಂದೂ ವರ್ಣಿಸಿದೆ.

ವಿಜಯನಗರದ ಅರಸರು ವೈಯಕ್ತಿಕವಾಗಿ ಶೈವಧರ್ಮಕ್ಕೂ, ವೈಷ್ಣವಧರ್ಮಕ್ಕೂ ಸೇರಿದವರಾಗಿದ್ದರು. ಅವರೆಲ್ಲರೂ ಪರಮಧರ್ಮ ಸಹಿಷ್ಣುಗಳಾಗಿದ್ದರು. ಸಂಗಮವಂಶದ ರಾಜರು ಶೈವಧರ್ಮಕ್ಕೆ ಹೆಚ್ಚಿನ ಉತ್ತೇಜನವನ್ನಿತ್ತರು. ಹಂಪೆಯ ವಿರೂಪಾಕ್ಷನು ಪಂಪಾ ಪತಿಯಾಗಿರಲಿಲ್ಲ. ಸಾಮ್ರಾಜ್ಯಧಿದೇವನೂ ಆಗಿದ್ದನು. ಸಂಗಮ ಸಂತತಿಯ ದೊರೆಗಳು ಶ್ರೀ ವಿರೂಪಾಕ್ಷನ ಕಿಂಕರರಾಗಿದ್ದರು. ಕಾಳಾಮುಖ ಪಂಥದ ಕಾಶೀವಿಲಾಸ ಕ್ರಿಯಾಶಕ್ತಿ ಎಂಬುವನು ರಾಜಗುರುವೆನಿಸಿದ್ದರು.

ಇಮ್ಮಡಿ ಹರಿಹರನು ಶೈವ, ವೈಷ್ಣವ, ಜೈನ ಮುಂತಾದ ಎಲ್ಲಾ ಮತಗಳನ್ನು ಸಮಾನ ದೃಷ್ಟಿಯಿಂದ ಕಂಡನು. ಅವನು ಕಾಳಹಸ್ತಿ, ಶ್ರೀ ಶೈಲ, ಚಿದಂಬರ, ಅಹೋ ಬಲಂ, ಶ್ರೀರಂಗಂ, ತಿರುಪತಿ ದೇವಾಲಯಗಳಿಗೆ ಉದಾರವಾಗಿ ಉಂಬಳಿಗಳನ್ನು ನೀಡಿದನು. ವೇದಗಳ ಮೇಲಿನ ಭಾಷ್ಯದ ರಚನೆಯ ಕಾರ್ಯ ಕ್ರಿ. ಶ. ೧೩೮೦ ರಲ್ಲಿ ಮುಗಿದು ಇಮ್ಮಡಿ ಹರಿಹರನಿಗೆ ವೈದಿಕ ಮಾರ್ಗ ಸ್ಥಾಪನಾಚಾರ್ಯ ಎಂಬ ಪ್ರಶಸ್ತಿ ಲಭಿಸಿತು. ಇಮ್ಮಡಿ ಹರಿಹರನ ದಳಪತಿ ಹಾಗೂ ಮಂತ್ರಿಯಾಗಿದ್ದ ಇರುಗಪ್ಪನು ಜೈನ ಮತಾವಲಂಬಿಯಾಗಿದ್ದನು. ಸಂಸ್ಕೃತದಲ್ಲಿ ವಿದ್ವಾಂಸನಾಗಿದ್ದ ಇರುಗಪ್ಪನು 'ನಾನಾರ್ಥ ಮಾಲಾ'ಎಂಬ ಶಬ್ದಕೋಶವನ್ನು ರಚಿಸಿದನು.

ಕ್ರಿ. ಶ. ೧೩೭೭ ರಿಂದ ೧೪೦೪ ರವರೆಗೆ ಇಮ್ಮಡಿ ಹರಿಹರನು ಧಾರ್ಮಿಕವಾಗಿ ರಾಜನು, ಮಾಂಡಳಿಕರು, ಮಂತ್ರಿಗಳು ಮಾಡಿದ ದಾನದತ್ತಿ ದೇವಾಲಯಗಳ ನಿರ್ಮಾಣ, ಜೀರ್ಣೋದ್ಧಾರ ಸೇವೆಗಳನ್ನು ಶಾಸನಗಳ ಮೂಲಕ ನಾವು ತಿಳಿಯಬಹುದು. ಕ್ರಿ. ಶ. ೧೩೭೭ ರ ಆರಗ ಶಾಸನದಲ್ಲಿ ಆರಗ ಸಾಮ್ರಾಜ್ಯದ ಪ್ರಾಂತೀಯ ಕೇಂದ್ರವಾಗಿತ್ತು. ಆರಗದ ವೀರಭದ್ರ ದೇವರ ಸೇವೆಗೋಸ್ಕರ ರಾಮದೇವ ಮತ್ತು ಮಂಜದೇವಿಯ ಮಗಳಾದ ಪದುಮಲದೇವಿಯ ದಾನ ನೀಡಿದ ದಾಖಲೆಯಿದೆ. ಇದೇ ಕಾಲದ ಹೊಸೂರಿನ ಶಾಸನದಲ್ಲಿ ಜೊಡನಾಥದೇವರ ಸೇವೆಗೋಸ್ಕರ ಮಹಾಪ್ರಧಾನ ಕುಪಯದಂಣಾಯಕ

ಕೆಲವು ದಾನ ನೀಡಿದ ದಾಖಲೆಯಿದೆ. ಮತ್ತೊಂದು ಶಾಸನದಲ್ಲಿ ಕಾಳಾಪುರ (ಸಾಂತಕ್ರುಜ್) ವಾರೇಶ್ವರ ದೇವರ ದೇವಾಲಯ ಕಟ್ಟಲು ಸಾಹು ಎಂಬುವನು ದಾನ ನೀಡಿದ ವಿಷಯವಿದೆ. ಕ್ರಿ. ಶ. ೧೩೭೮ ರ ಹಂಪಿ ಪಂಪಾ ಕ್ಷೇತ್ರದ ನರಸಿಂಹ ದೇವಾಲಯದ ಶಿವಾಲಯ ಕಟ್ಟಿ ಕ್ಷೇತ್ರಪಾಲ, ಸಂನುಜನಾಥ ವಿಗ್ರಹಗಳನ್ನು ಪ್ರತಿಷ್ಠಾಪಿಸಲು, ಬಯಿಚಸೆಟ್ಟಿಯ ಮಗನಾದ ಸುಂಕದ ಹಿರಿಯ ತಮ್ಮ ಚಿಕ್ಕ ತಮ್ಮ ದಾನ ನೀಡಲು ದಾಖಲೆಯಿದೆ. ಇದೇ ಕಾಲದ ಭಂಡಿಗಡಿ ಶಾಸನದಲ್ಲಿ ಮುನಿಯಾರಿನ ವಿದ್ಯಾರಣ್ಯ ಶ್ರೀ ಪಾದರ ಅನುಮತಿ ಮೇರಿಗೆ ಪ್ರಸನ್ನ ವಿಶ್ವೇಶ್ವರ ದೇವರ ಸೇವೆಗೆ ನೀಡಿದ ಸಂಗತಿಯನ್ನು ತಿಳಿಸುತ್ತದೆ. ಇದೇ ಕಾಲದ ಕೋಟೇಶ್ವರ ಶಾಸನದಲ್ಲಿ ಕೊಡುಸೂರ ಕೋಟೇಶ್ವರ ದೇವಾಲಯದ ದೀಪ ಬೆಳಗಿಸುವುದಕ್ಕೋಸ್ಕರ ಮುಖ್ಯಮಂತ್ರಿ ದಂಡನಾಯಕನು ಭೂಮಿ, ಒಡವೆಗಳನ್ನು ದಾನ ನೀಡಿದ್ದನೆಂದು ತಿಳಿಸುತ್ತದೆ.

ಕ್ರಿ. ಶ. ೧೩೭೯ ರ ಕೊಡವೂರ ಕಂಗೂರಮಠದ ನಾರಾಯಣ ದೇವ ಮತ್ತು ರಾಮದೇವರ ದೇವರುಗಳಿಗೆ ನಿಗದಿಪಡಿಸಿದ ಭೂಮಿ, ನಿವೇಶನವನ್ನು ತ್ರೈಲೋಕ್ಯ ಭೂಷಣತೀರ್ಥ ಶ್ರೀಪಾದ ಶಿವನಿಡುಂಬರ ಮಗ ಅಂವಣನಿಡುಂಬರ ದಾನ ನೀಡಿದ ದಾಖಲೆಯಿದೆ. ಇದೇ ಕಾಲದ ಹಂಪಿಯ ಶಾಸನದಲ್ಲಿ ರಾಜನ ಆದೇಶದ ಮೇರೆಗೆ ಮುದ್ದದಂಡೇಶನು ವಿರೂಪಾಕ್ಷ ದೇವಾಲಯಕ್ಕೆ ಭೂಮಿ ದಾನ ನೀಡಿದ್ದಾನೆ. ಇದೇ ಕಾಲದ ಗದುಗಿನ ತಾಮ್ರಶಾಸನ ಗದುಗಿನ ತ್ರಿಯಂಬಿಕ ಮತ್ತು ವೀರನಾರಾಯಣ ದೇವರುಗಳಿಗೆ ಗದುಗಿನ ದೇಶದ ೨೨ ಹಳ್ಳಿಗಳನ್ನು ರಾಜನು ದಾನ ನೀಡಿದ ವಿವರವಿದೆ.

ಕ್ರಿ. ಶ. ೧೩೮೦ ರ ಆಂಧ್ರಪ್ರದೇಶದ ಗಣಪುರ ಶಾಸನದಲ್ಲಿ ಶೀಲಪಾಡುವಿನಲ್ಲಿ ಒಂದು ಹೊಸ ಅಂಕಲದೇವಿ ವಿಗ್ರಹ ಪ್ರತಿಷ್ಠಾಪಿಸಲು ವೆದೂರುಪಾಡುವಿನಲ್ಲಿ ಭೂಮಿ ದತ್ತಿ ಬಿಟ್ಟ ಬಗ್ಗೆ ದಾಖಲೆಯಿದೆ. ಇದೇ ಕಾಲದ ಹೊಮ್ಮ ಶಾಸನದಲ್ಲಿ ಆ ಶ್ರೀಮತ್ಸರ್ವ್ವಗ್ನ, ವಿಷ್ಣುಪುರಂ ಹೊಮ್ಮವಾದ ಅಕಳಂಕ ಚತುರ್ವೇದ ಮಂಗಲದ ಮೂಲಸ್ಥಾನದೇವರ ಅಮೃತಪಡಿ ಧೂಪದೀಪ, ಗಂಧ, ವಸ್ತ್ರ, ಪಂಚಪರ್ವ್ವಗಳಿಗೆ ೧೦೮ ವೃತ್ತಿಯ ಮಹಾಜನಂಗಳು ದಾನವಾಗಿ ಭೂಮಿಯನ್ನು ದೇವರ ಸ್ಥಾನಿಕನಾದ ಭೂತಾಂಡಿ ಹಾರುವನಿಗೆ ಧಾರಾ ಪೂರ್ವಕವಾಗಿ ಮಾಡಿಕೊಟ್ಟ ದಾಖಲೆಯಿದೆ. ಇದೇ ಕಾಲದ ಗೋಪಾಲಪುರದ ಜಯತದ ಪಾಲ್ಗುಣೇಶ್ವರ ದೇವಾಲಯದ ಸೇವೆಗೋಸ್ಕರ ಕುಣಿಗಿಹಳ್ಳಿ ಯಲ್ಲಿ ಕೆಲವು ಭೂಮಿದಾನ ನೀಡಿದ ವಿಷಯವಿದೆ. ನಂನದವನ ಶಾಸನದಲ್ಲಿನ ಮಹಾಪ್ರಧಾನ ಮಲ್ಲಪ ಒಡೆಯ ಬಾರಕೂರು ರಾಜ್ಯವಾಳುತ್ತಿರುವಾಗ ಮಹಾಬಲೇಶ್ವರ ದೇವರಿಗೆ ದಾನ ನೀಡಿದುದನ್ನು ತಿಳಿಸುತ್ತದೆ.

ಕ್ರಿ. ಶ. ೧೩೮೧ ರ ಬೇಲೂರು ಶಾಸನದಲ್ಲಿ ಹರಿಹರನ ಆಜ್ಞೆಯ ಮೇರೆಗೆ ಮಹಾಪ್ರಧಾನ ಕಂಪಣವೊಡೆಯನು ಈಗಿನ ಚೆನ್ನಕೇಶವ ದೇವಾಲಯದ

ಜೀರ್ಣೋದ್ಧಾರ ಮಾಡಿಸಿದ್ದನ್ನು ವಿವರಿಸಿದೆ. ಇದೇ ಕಾಲದ ಮದ್ದೂರು ಶಾಸನದಲ್ಲಿ ಸರ್ವಪ್ರಜೆಗಳ ಅನುಮತದಿಂದ ಮೂರುಸೆಟ್ಟಿಯ ಮುಖಂಡತ್ವದಲ್ಲಿ ಆ ಊರ ಹೆಸರಿನ ಸುಂಕವನ್ನು ಮಹಾಜನರು ನಾಡ ಸಮಸ್ತರು ದೇವರಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ. ಕೊಂಕನಾಡಿ ನಲ್ಲಿರುವ ಗುಬ್ಬಿ ಅಲಿಯಾಸ್ ಬುಕ್ಕರಾಜೇಶ್ವರಪುರದ ಗ್ರಾಮವನ್ನು ರಾಜನು ಬುಕ್ಕರಾಜೇ ಶ್ವರ ದೇವರನ್ನು ನಿಲ್ಲಿಸಿದ ದಾಖಲೆಯಿದೆ. ಬೆಂಗಳೂರಿನ ಶಾಸನದಲ್ಲಿ ವಿಜಯನಗರ ವಿರೂಪಾಕ್ಷ ದೇವರ ಮುಂದೆ, ರೈತರುಗಳ, ವ್ಯಾಪಾರಸ್ಥರ ಇತರರಿಗೆ ಆಸ್ತಿಗಳ ವಸ್ತುಗಳ ಮೇಲಿನ ವಿವಿಧ ತೆರಿಗೆಗಳ ರಕ್ಷಾ ಶುಲ್ಕ ನೀಡಿದ ವಿವರವಿದೆ. ಕ್ರಿ. ಶ. ೧೩೮೨ ರ ಬೇಲೂರಿನ ಕೇಶವ ದೇವಸ್ಥಾನದ ಕಳಶವನ್ನು ಮಲಗರಸವಿಭು ಕಾಂಚನಮಯವಾಗಿ ಮುದ್ದಪ್ಪ ಮಂತ್ರಿಯು ಮಾಡಿಸಿದನೆಂದು ತಿಳಿಸುತ್ತದೆ. ಕ್ರಿ. ಶ. ೧೩೮೩ ರ ರಾಮನಾಥಪುರ ಶಾಸನ ದಲ್ಲಿ ರಾಮನಾಥ ಮತ್ತು ಗೋಪಿನಾಥ ದೇವರ ಪೂಜೆ, ನೈವೇದ್ಯಕ್ಕೋಸ್ಕರ ರಾಜನ ಸೇವಕನಾದ ಕರಿಯ ಮಾಯಣ್ಣನು ದಾನ ನೀಡಿದ ದಾಖಲೆಯಿದೆ. ಮತ್ತೊಂದು ಶಾಸನ ರಾಮನಾಥದೇವರ ಅಂಗಭೋಗ, ನೈವೇದ್ಯ, ಹೂವು, ದೀಪಸ್ಥಂಭ ಹಾಗೂ ಅಮೃತಪಡಿಗೋಸ್ಕರ ತಮ್ಮದೆಜೆ, ಮಗ್ಗದೆಜೆ, ಆಡಿನ ಮೇಲಿನ ತೆರಿಗೆ ಆದಾಯಗಳಿಂದ ಮಾಯಣ್ಣನು ದಾನ ನೀಡಿದ್ದನ್ನು ವಿವರಿಸುತ್ತದೆ. ಕ್ರಿ. ಶ. ೧೩೮೪ ರ ಭೋಗಾರಕೊಪ್ಪ ಶಾಸನದಲ್ಲಿ ಕೂಡಲನಾರಸಿಂಹ ದೇವರ ಅಮೃತಪಡಿಗೆ ಪ್ರತಿ ವರುಷ ೧ ಕ್ಕೆ ಬತ್ತಹಂನೆರಡು ಸಲಗೆ ಸರ್ವಮಾನ್ಯ ಭೂಮಿಯನ್ನು ದಾಸಿಮರಸರಿಗೆ ಧಾರಾ ಪೂರ್ವಕವಾಗಿ ಕೊಟ್ಟದ್ದನ್ನು ತಿಳಿಸುತ್ತದೆ ಕ್ರಿ. ಶ. ೧೩೮೪ ರಲ್ಲಿ ಜೈನ ವಾಸ್ತು ಶಿಲ್ಪ ಶೈಲಿಯಲ್ಲಿ ಜೈನ ಮಂದಿರ ವೊಂದನ್ನು ವಿಜಯನಗರದಲ್ಲಿ ನಿರ್ಮಿಸಿದನು. ಪಾರ್ಶ್ವಜಿನನಾಥನಿಗಾಗಿ ಗುತ್ತಿಯಲ್ಲಿ ಇನ್ನೊಂದು ಬಸದಿಯನ್ನು ಕಟ್ಟಿಸಿದನು. ಗೊಮ್ಮಟೇಶ್ವರನಿಗಾಗಿ ಒಂದು ಕೆರೆಯನ್ನು, ತೋಪನ್ನು ನಿರ್ಮಿಸಿ ದತ್ತಿ ನೀಡಿದುದನ್ನು ಶ್ರವಣಬೆಳಗೊಳ ಶಾಸನದಲ್ಲಿ ಕಾಣಬಹುದು.

ಕ್ರಿ. ಶ. ೧೩೮೬ ಹಳೇಬೀಡಿನ ಶಾಸನದಲ್ಲಿ ಸಂಗಮ ಮನೆತನದ ವಂಶಾವಳಿಯನ್ನು ವಿವರಿಸುತ್ತದೆ. ಇಮ್ಮಡಿ ಹರಿಹರನು ವಿಜಯನಗರ ರಾಜಧಾನಿಯಿಂದ ಆಳುತ್ತಿರುವಾಗ ವಿರೂಪಾಕ್ಷ ಮತ್ತು ಪಂಪಾ, ತುಂಗಾ ಸನ್ನಿಧಿಯಲ್ಲಿ ರಾಜನು ಮಹಾರಾಜಪುರದಲ್ಲಿ ಭೂಮಿ ದಾನ ಮಾಡಿದ್ದಾನೆ. ಇದೇ ಕಾಲದ ಶೃಂಗೇರಿ ಶಾಸನದಲ್ಲಿ ವಿದ್ಯಾರಣ್ಯ ಶ್ರೀಪಾದರ ಜ್ಞಾಪಕಾರ್ಥವಾಗಿ ವಿದ್ಯಾರಣ್ಯ ಪುರವೆಂಬ ಅಗ್ರಹಾರವನ್ನು ಸ್ಥಾಪಿಸಿ, ಪಂಪಾಕ್ಷೇತ್ರದಲ್ಲಿ ವಿರೂಪಾಕ್ಷ ದೇವರ ಮುಂದೆ ಈ ಕಾರ್ಯವನ್ನು ನೆರವೇರಿಸಲಾಯಿತೆಂದು ಹೇಳಿದೆ. ಕ್ರಿ. ಶ. ೧೩೮೬-೯೭ ರ ಗಣಗನೂರು ಶಾಸನ ಭೋಗನಾಥ ದೇವರ ಕೋವಗೆಜೆಯ ಕೆಳಗಣ ಅಡಿಕೆಯ ತೋಟವನ್ನು ಗ್ರಾಮದ ಗದ್ದೆಯನ್ನು ಮಂದಣವೊಡೆಯರು ಧಾರೆ ಯೆನೆಜುದುದನ್ನು ತಿಳಿಸುತ್ತದೆ. ಇದೇ ಕಾಲದ ನಂದಳಿಕೆ ಗ್ರಾಮದ ಕಾರ್ಕಳ ಬ್ರಹ್ಮೇಶ್ವರ

ದೇವರಿಗೆ ಸಂಗಣಜಿಯ ದಾನ ನೀಡಿದ ದಾಖಲೆಯಿದೆ. ಕ್ರಿ. ಶ. ೧೩೮೮ ರ ಬೊಪ್ಪಸಂದ್ರದ ಬೊಪ್ಪಸಂದ್ರ ದೇವರಿಗೆ ಮತ್ತು ಹಬ್ಬಕ್ಕೋಸ್ಕರ ದಾನ ನೀಡಿದ ವಿವರವಿದೆ. ಇದೇ ಕಾಲದ ತೆಳನೂರು ಶಾಸನದಲ್ಲಿ ತೆಳ್ಳನೂರು ಮಹಾಕಾಳಿದೇವಿಗೆ ಅಕ್ಕಸಾಲ ಸೋಮೋಜನ ಮಗ ಕಾಲೋಜನು ಕಲ್ಲತೋರಣವನ್ನು ನಿಲ್ಲಿಸಿದ ಬಗ್ಗೆ ತಿಳಿಸುತ್ತದೆ. ನೀಲವರಶಾಸನದಲ್ಲಿ ದುರ್ಗಭಗವತಿ ದೇವಾಲಯಕ್ಕೆ ಈ ಗ್ರಾಮದಲ್ಲಿ ವಾಸವಿರುವವರು ಕೆಲವು ಭೂಮಿ ದಾನ ನೀಡಿದ್ದಾರೆ. ಕ್ರಿ. ಶ. ೧೩೯೦ ರ ಉಡುಪಿ ಶಾಸನದಲ್ಲಿ ಸೋಮಯದೇವರ ದೇವಾಲಯದ ನಿರ್ವಹಣೆಗೋಸ್ಕರ ಮಾಯಮ್ಮ ಎಂಬುವಳು ಕೆಲವು ಭೂಮಿ ದಾನ ನೀಡಿದ ದಾಖಲೆಯಿದೆ. ಇದೇ ಕಾಲದ ಮುಳ್ಳೂರು ಶಾಸನದಲ್ಲಿ ಬಸದಿಗಳ ಜೀರ್ಣೋದ್ಧಾರ, ವಿಜಯ ಕೀರ್ತಿದೇವರ ಶಿಷ್ಯರಾದ ಬಾಹುಬಲಿದೇವರು ಇಂದು ಗ್ರಾಮದ ಶಾಸನ ಮಹಾಪ್ರಧಾನ ಲಿಂಗರಸವಡೆಯ ಮಂಗಳೂರು ರಾಜ್ಯವಾಳುತ್ತಿರುವಾಗ ಮಂಜಿನಾಥ ದೇವರಿಗೆ ಸರ್ವನಮಸ್ಯವಾಗಿ ಭೂಮಿ ದಾನ ನೀಡಿದ ದಾಖಲೆಯಿದೆ. ತಿರುಮ್ಮೈಲು ಶಾಸನದಲ್ಲಿ ಹೂಮಣಂದೂರು ಅಮೃತನಾಥ ದೇವರ ನೈವೇದ್ಯ ಪೂಜೆ, ಛತ್ರ ನಿರ್ವಹಣೆಗೋಸ್ಕರ ಕಾಮದೇವರಸನ ಮಗ ಪದುಮಲ ದೇವನು ಭೂಮಿ ದಾನ ನೀಡಿದ್ದಾನೆ.

ಕ್ರಿ. ಶ. ೧೩೯೧ ರ ಕೃಷ್ಣರಾಜನಗರದ ಎಡದೊರೆಯ ಶ್ರೀ ಅಂಕಾಥದೇವರ ಪೂಜೆ ನಿತ್ಯಪಡಿಯನಯಿವೆದ್ಯ ದೀಪಕ್ಕೋಸ್ಕರ ಸುಂಕಾಧಿಕಾರಿ ಕರಿಮಮಾಯಂಣಗಳು ತೋಟ, ಎಣ್ಣೆಗಾಣ, ಮಗ್ಗಗಳಿಂದ ಬಂದ ಆದಾಯದಿಂದ ದಾನ ನೀಡಿದ ದಾಖಲೆಯಿದೆ. ಕ್ರಿ. ಶ. ೧೩೬೨ ರ ಬೈರಾಪುರ ಶಾಸನ ಶ್ರೀ ವೀರಹರಿಹರರಾಯರ ಧರ್ಮೋದ್ಧಾರ ತಿರುಮ ಕೂಡಲನಾಥವೊಡೆಯರು ಸಮಕ್ಷಮದಲ್ಲಿ ಆಲುಗೋಡ ಗ್ರಾಮದ ಕೇದರ ನಾಥಭಟ್ಟ ಗಳು ರಾಮಭಕ್ತರಿಗೆ ಭಯಿರಾಪುರವನ್ನು ಬಿಟ್ಟು ೧೧ ಹೊನ್ನನು ವರಿಷ ದೇವದಾನ ಕೊಡುವುದನ್ನು ಈ ಶಾಸನ ತಿಳಿಸುತ್ತದೆ. ಕ್ರಿ. ಶ. ೧೩೯೪ ರ ವಿರುಪಾಪುರ ತಾಮ್ರ ಶಾಸನ ವಿರೂಪಾಕ್ಷ ದೇವರ ಮುಂದೆ ವಿರುಪಾಪುರ ಗ್ರಾಮ ನೀಡಿ ಹಾಗೂ ಮುಂದೆ ಮೂರೂ ಭಾಗಗಳ ಪಾಲುಗಳನ್ನು ಪಂಪಾವಿರೂಪಾಕ್ಷ ದೇವರಿಗೂ ಗ್ರಾಮದ ದೇವರು ಗಳಿಗೆ, ಶ್ರೀ ರಂಗನಾಥನ ಮಗನಾದ ಸೋಮನಾಥನಿಗೆ ಒಂದು ಭಾಗವನ್ನು ಹಾಗೂ ನಾಲ್ಕು ಖಂಡುಗಗದ್ದೆ, ಅಡಿಕೆ ತೋಟವನ್ನು ಸೋಮನಾಥವೊಡೆಯನಿಗೂ ಕೊಟ್ಟ ಉಲ್ಲೇಖವಿದೆ. ತೀರ್ಥಮತ್ತೂರು ಶಾಸನದಲ್ಲಿ ಸೋವಣ್ಣವಡೆಯ ಅರಗರಾಜ್ಯವನ್ನು ಆಳುತ್ತಿರುವಾಗ ನರಸಿಂಹ ದೇವರ ಸೇವೆಗೋಸ್ಕರ ಜಿನೇಂದ್ರ ಭಾರತಿ ಶ್ರೀಪಾದ ಭೂಮಿ ದಾನ ನೀಡಿದ್ದಾರೆ.

ಕಡಪ ಜಿಲ್ಲೆಯ ಕ್ರಿ. ಶ. ೧೩೯೪ ರ ಭೀಮುನಿಪಾಡು ಶಾಸನದಲ್ಲಿ ಹನುಮಂತ ದೇವರ ಪ್ರತಿಷ್ಠಾಪಿಸಲು ಭೀಮುಪಾಡುವಿನಲ್ಲಿ ಲಕ್ಕಿನಾಯಿನಿ ಮಗ ಕೇಶವನ

(ಕೇಶವಣ್ಣನು) ದಾನ ನೀಡಿದ್ದಾನೆ. ಕ್ರಿ. ಶ. ೧೩೭೫ ರ ಕಲಕುಣಿ ಗ್ರಾಮದ ಶಾಸನದಲ್ಲಿ ಮಧುಕನಾಥದೇವರ ಪ್ರಾರ್ಥನೆಗೋಸ್ಕರ ಕರುವೂರ ಶಾಂತದಂಣಾಯಕ ಮತ್ತು ಅನೇಕ ಗಾವುಂಡುಗಳು ದತ್ತಿ ನೀಡಿದ ದಾಖಲೆಯಿದೆ. ಇದೇ ಕಾಲದ ಹಂಪಿ ಶಾಸನದಲ್ಲಿ ಕುಂತು ತೀರ್ಥಂಕರ ವಿಗ್ರಹ ಪ್ರತಿಷ್ಠಾಪಿಸಲು ಮತ್ತು ಕಂದಣವುರ ಪಟ್ಟಣದಲ್ಲಿ ಒಂದು ಚೈತ್ಯಾಲಯ ಕಟ್ಟಲು ಇಮ್ಮಡಿ ಬುಕ್ಕ ಮತ್ರೀಶ್ವರ ಬೈಚದಂಡನಾಯಕನ ಮಗ ಧರ್ಮಭೂಷಣ ಭಟ್ಟಾರಕನ ಶಿಷ್ಯ ದಾನ ನೀಡಿದ ದಾಖಲೆಯಿದೆ.

ಬೇಲೂರಿನ ಶಾಸನದಲ್ಲಿ ಹರಿಹರರಾಯನ ಮನೆಯ ಪ್ರಧಾನಿ ಗುಂಡ ಪದಂಣಾಯಕನು ದೇವಾಲಯಕ್ಕೆ ಕಂಚಿನ ಕಂಬದ ದೀವಿಗೆಯನ್ನು ಮಾಡಿಸಿಕೊಟ್ಟ ದಾಖಲೆಯಿದೆ. ಕ್ರಿ. ಶ. ೧೩೮೬ ರ ಹಂಪಿ ಶಾಸನದಲ್ಲಿ ವಿರೂಪಾಕ್ಷ ಸಿದ್ಧ ಶ್ರೀ ಪಾದ ಶ್ರೀವಲ್ಲಭ ದೇವರ ಕಳಶ, ಸುಖನಾಸಿ, ಎಡಗಡೆ ಭೂ ಉತ್ಪನನ ಕೆರೆ ಮತ್ತು ನೆಟ್ಟಿರುವ ಮರಗಳು ಇತ್ಯಾದಿಗಳ ಬಗ್ಗೆ ವಿವರವಿದೆ. ಇದೇ ಕಾಲದ ಸಂಗೂರು (ಹಾವೇರಿ) ಶಾಸನದಲ್ಲಿ ಸಂಗೂರು ಪಾರ್ಶ್ವನಾಥಸ್ವಾಮಿ ಪೂಜೇಗೋಸ್ಕರ ನೇಮಣ್ಣನು ಭೂಮಿದಾನ ನೀಡಿದ್ದಾನೆ. ಹರೇ ಸಮುದ್ರ ಶಾಸನದಲ್ಲಿ ದೇವರುಗಳಿಗೆ ಬಸವೆಯ ನಾಯಕನ ಚೌಡಪ್ಪನ ಮಗ ದುಲ್ಕೆಯ ನಾಯಕನು ಕೂಡಿಯನಹಳ್ಳಿಯ ಗ್ರಾಮದಲ್ಲಿ ಕೆರೆಯ ಕೆಳಗಿನ ಬತ್ತದ ಗದ್ದೆಯನ್ನು ದಾನ ನೀಡಿದ್ದಾನೆ.

ಕ್ರಿ. ಶ. ೧೩೮೭ ರ ತಿರುಮಕೂಡಲು ನರಸೀಪುರ ನಾಗರೀಭಾಷೆಯ ತಾಮ್ರ ಶಾಸನಗಳು ರಾಜನ ವಂಶಾವಳಿಯನ್ನು ತಿಳಿಸುತ್ತಾ ಅಗಸ್ತನಾಥ ಸನ್ನಿಧಿಯ ಸಮ್ಮುಖದಲ್ಲಿ ಕೆಲವು ವೃತ್ತಿಗಳನ್ನು ಮಲ್ಲಪ್ಪವೊಡೆಯರ ಕುಂದೂರ ನಾರಾಯಣದೇವೊಡೆಯರು ದಾನ ನೀಡಿದ ವಿವರವಿದೆ. ಇದೇ ಕಾಲದ ಬೇಲೂರು ಶಾಸನದಲ್ಲಿ ಗುಂಡಪ ದಂಡನಾಯಕನ ಕೀರ್ತಿಯನ್ನು ಆಚಂದ್ರಾರ್ಕವಾಗಿ ನಿಲ್ಲಿಸುವ ಶಾಸನ ಬೇಲೂರಿನ ದೇವಸ್ಥಾನದ ಸಹಸ್ರಾರು ಯಾತ್ರಿಗಳ ಮನಮೋಹಿಸುವ ಮಹಾಗೋಪುರ ಕಟ್ಟಿಸಿದ ಬಗ್ಗೆ ವಿವರಗಳನ್ನು ನೀಡಿದೆ. ಜಗತ್ ಪ್ರಸಿದ್ಧ ಸರ್ವಧರ್ಮ ಸಮನ್ವಯವನ್ನು ಬೋಧಿಸುವ ಸುಂದರ ಪದ್ಯವನ್ನು ಹೊಂದಿದೆ.

ಯಂ ಶೇವಾಸ್ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ
ಬೌದ್ಧಾಬುದ್ಧ ಇತಿ ಪ್ರಮಾಣಪಟವಃ ಕರ್ತೇತಿನೇಯ್ಯಾಇಕಾಃ
ಅರ್ಹಶ್ಚೇತಿಹ ಜೈನ ಶಾಸನ ಮಿತಿ ಕಂರ್ಮೇತಿ ಮೀಮಾಂಸ ಕಾಃ
ಸೋಯಂವೋ ವಿಧಧಾತುವಾಂಛಿತ ಫಲಂ ಶ್ರೀ ಕೇಶವೇಶಸ್ಸದಾ||

ಶೃಂಗೇರಿ ಶಾಸನದಲ್ಲಿ ಹರಿಹರನು ಕಾರ್ಕಳಸೀಮೆಯಲ್ಲಿದ್ದ ಬಾನುವಳ್ಳಿ ಎಂಬ ಗ್ರಾಮವನ್ನು ಮಾಧವೇಂದ್ರ ಎಂಬುವನಿಗೆ ತುಂಗಾಭದ್ರಾ ತೀರದಲ್ಲಿ ವಿರೂಪಾಕ್ಷ ದೇವರ ಮುಂದೆ ದಾನ ಕೊಟ್ಟ ದಾಖಲೆಯಿದೆ. ಹರದನಹಳ್ಳಿ ಶಾಸನದಲ್ಲಿ ಅಣಿಲೇಶ್ವರ ದೇವರ

ಅಂಗಭೋಗ ಮತ್ತು ಗಂಧ, ಕುಂಕುಮ, ಕರ್ಪೂರ, ಪನ್ನೀರು, ನೇವೇದ್ಯಕ್ಕೋಸ್ಕರ ಏಣೆನಾಡು ಒಂದು ಗ್ರಾಮದಿಂದ ಪಂಚಾಳರುಗಳು ದಾನವಾಗಿ ಒಂದು ಹಣ ದಾನ ನೀಡಿದ ವಿವರವಿದೆ. ಸಿರಿಯಾರು ಶಾಸನದಲ್ಲಿ ರಾಜನ ಉನ್ನತಿಗೋಸ್ಕರ ನಾರಾಯಣ ದೇವರ ಪೂಜೆಗೋಸ್ಕರ ಮಹಾಪ್ರಧಾನ ಶಂಕರ ದೇವನು ಕೆಲವು ನಿಗದಿಪಡಿಸಿದ ಹಣ ಮತ್ತು ಭೂಮಿಯ ಆದಾಯದಿಂದ ದಾನ ನೀಡಿದ್ದಾನೆ.

ಕ್ರಿ. ಶ. ೧೩೭೮ ರ ಮಲ್ಲಿನಾಥಪುರ ಮಲ್ಲಿಕಾರ್ಜುನ ದೇವ ದೇವತಾರ್ಚನೆಗೆ ನಯಿವೇದ್ಯ ದೂಪದೀಪಗೋಸ್ಕರ ಆದಾಯದಿಂದ ೨೫ ವರಹ ಗದ್ಯಾಣ ಲಕುಣವೊಡೆಯರು ಧಾರಾಪೂರ್ವಕವಾಗಿ ಕೊಟ್ಟಿದ್ದಾರೆ. ಸಿಂಗನಲ್ಲೂರು ಶಾಸನದಲ್ಲಿ ಸಿಂಗಣನಲ್ಲೂರಪುರದ ಶಿವನಂಕಾದೇವರ ಅಂಗರಂಗ ಭೋಗಕ್ಕೆ ಅಯಿವತ್ತಾಱು ದೇಶದ ಹಲರು, ಅಯ್ಯವೊಳೆ ಸ್ವಾಮಿಗಳು ನಾನಾದೇಶಿಗಳು ಸುಂಕತೆರಿಗೆಗಳಿಂದ ಬಂದ ಆದಾಯಿಂದ ದಾನ ನೀಡಿದ ವಿವರವಿದೆ. ಕುಲ್ಯೆಶಾಸನದಿಂದ ಚಿತ್ರಪುರ ಮಂಜುನಾಥ ದೇವಾಲಯದ ನೈವೇದ್ಯಗೋಸ್ಕರ ಮಲಪಸೆಟ್ಟಿ ದಾನ ನೀಡಿದ್ದಾನೆ. ಕ್ರಿ. ಶ. ೧೩೯೯ರ ಕನ್ನಂಬಾಡಿ ಶಾಸನದಲ್ಲಿ ಕಣವೇಶ್ವರ ದೇವಾಲಯಕ್ಕೆ ಶಂಕರನಾಯಕ ಭೂಮಿ ದಾನ ನೀಡಿದ್ದಾನೆ. ಇದೇ ಕಾಲದ ಆನಕೆರೆ ಶಾಸನದಲ್ಲಿ ಲಖಣವೊಡೆಯರು ನಿರೂಪದ ಮೇರೆಗೆ ರಾಯಿಸೆಟ್ಟಿಯು ಚೆನ್ನಕೇಶವ ದೇವರಿಗೆ ಧನದಾನವನ್ನು ನೀಡಿದನು. ಬ್ಯಾಳಾರ್ ಶಾಸನದಲ್ಲಿ ನಂಜನಗೂಡಿನ ನಂಜುಂಡೇಶ್ವರ ದೇವರ ನಂದಾದೀಪಗೋಸ್ಕರ ಹೂಕಲನಾಡಹುರದ ಕಾಲುವಳ್ಳಿಯ ಬೆಳಱಪುರದ ಒಂದು ಚತುಸೀಮೆಯೊಳಗೆ ಲಕ್ಕಣ ಧರ್ಮವಾಗಿ ದಾನ ನೀಡಿದ ದಾಖಲೆಯಿದೆ.

ಕ್ರಿ. ಶ. ೧೪೦೦ ಹಳೇಅಗ್ರಹಾರ ಶಾಸನದಲ್ಲಿ ದೋರಸಮುದ್ರದಿಂದ ಹರಿಹರ ಆಳುತ್ತಿರುವಾಗ, ಬಸವಣ್ಣ ಒಡೆಯ ಬಾರಕೂರನಿಂದ ಕಾರ್ಯನಿರ್ವಹಿಸುತ್ತಿರುವಾಗ ಮಹಾಪ್ರಧಾನಗೋಪಯ ದಂಡನಾಯಕ ಒಡೆಯನು ಶಂಕರನಾರಾಯಣ ದೇವರ ಕಾರ್ಯ ನಿರ್ವಹಿಸುತ್ತಿರುವಾಗ ಮಹಾಪ್ರಧಾನಗೋಪಯ ದಂಡನಾಯಕ ಒಡೆಯನು ಶಂಕರನಾರಾಣ ದೇವರ ನಿತ್ಯಸೇವೆಗೋಸ್ಕರ ಅನ್ನದಾನ ನೀಡಿದ ದಾಖಲೆಯಿದೆ. ಇದೇ ಕಾಲದ ಕರ್ನೂಲ್ ಜಿಲ್ಲೆಯ ಪುಸುಲೂರು ಶಾಸನದಲ್ಲಿ ಮಾಧವದೇವರಿಗೆ ಕೊಟಿ ಕಾಂತಿಪಾದ ಮರ ಮಗ ಮಹಾಮಂಡಲೇಶ್ವರ ಅಯ್ಯಲರಾಜು ಒಂದು ತೋಟ ಭೂಮಿ ದಾನ ನೀಡಿದ್ದಾನೆ. ಇದೇ ಕಾಲದ ಬಾರಕೂರಿನ ನಖರೇಶ್ವರ ದೇವಾಲಯದ ಮುಂದೆ ನಂದೀಶ್ವರ ದೇವರಿಗೆ ನಿತ್ಯ ನೈವೇದ್ಯಕ್ಕೋಸ್ಕರ ಮಾದಣಸೆಟ್ಟಿಯು ಕೆಲವು ನಿಗದಿಪಡಿಸಿದ ಭೂಮಿ ದಾನ ನೀಡಿದ ಹಾಗೂ ಉಳ್ಳೂರ ದೇವರ ಸೇವೆಗೋಸ್ಕರ ಚಿನ್ನ ದಾನ ನೀಡಿರುವುದನ್ನು ವಿವರಿಸುತ್ತದೆ. ಗುಂಡುಗಾಲು ಶಾಸನದಲ್ಲಿ ಶ್ರೀ ಪರ್ವತದ ಮಲ್ಲಿಕಾರ್ಜುನ ದೇವಾಲಯದಲ್ಲಿ ಗುಂಡುಂಗಾಲಪುರದಲ್ಲಿ ವಾಸವಿರುವ ೭ ಜನ ಅಕ್ಕಸಾಲಿಗ ಜಾತಿ

ತಮ್ಮಂದಿರು ದೇವಾಲಯದಲ್ಲಿ ಒಂದು ಭಾಗದ ದೀಪಗಳನ್ನು ಮಾಡಿಸಿದ ವಿವರವಿದೆ. ಆಂಧ್ರಪ್ರದೇಶದ ಎನಾಂಬದೇಲಾ ಶಾಸನದಲ್ಲಿ ಕುಱುಂದೂರು ದೊಡ್ಡ ಮಲ್ಲಿನಾಥ ದೇವರ ದೇವಾಲಯದ ಪೂಜೆಗೋಸ್ಕರ ಅಣಮ್ಮ ನಾಯಣಿಂಗಾರು ಭೂಮಿ ದಾನ ನೀಡಿದ ದಾಖಲೆಯಿದೆ. ಕ್ರಿ. ಶ. ೧೪೦೧ ರ ಬಸರೂರು ಶಾಸನದಲ್ಲಿ ಬಸವಣ್ಣ ವೊಡೆಯ ಬಾರಕೂರು ರಾಜ್ಯವಾಳುತ್ತಿರುವಾಗ ರಾಜನ ಆದೇಶದ ಮೇರೆಗೆ ತುಳುವೇಶ್ವರ ದೇವರ ಸೇವೆಗೋಸ್ಕ ತುಳುವ ಹೆಗ್ಗಡತಿ ಭೂಮಿ ದಾನ ನೀಡಿದ ವಿವರವಿದೆ. ಕ್ರಿ. ಶ. ೧೪೦೨ ರ ಪುರ ಶಾಸನದಲ್ಲಿ ಪುರದ ವೀರಭಧ್ರ ದೇವರ ಅಂಗರಂಗ ಭೋಗಕ್ಕೆ ಮಗ್ಗದೆಜೆ, ಮದುವೆದೆಜೆ, ವೊರವಾರು ಅಲೆದೆಜೆ, ಅಡಿದೆಜೆ ಆದಾಯಗಳಿಂದ ಬಂದ ಸುಂಕಗಳಿಂದ ಲಖಿಂಣನು ದಾನವಾಗಿ ಬಿಟ್ಟಿದ್ದನ್ನು ತಿಳಿಸುತ್ತದೆ. ಇದೇ ಕಾಲದ ಯರಮಲ್ ಶಾಸನದ ಯರಮ್ಮಾಳ್ ಜನಾರ್ಧನ ದೇವರ ಸೇವೆಗೋಸ್ಕರ ಬೇರಿಯವರಿಂದ ಭೂಮಿ ಪಡೆದು ಭೂಮಿ, ನಿವೇಶನಗಳನ್ನು ಕಳಲಗೆ ಲಕ್ಕಪ್ಪನ ಮಗ ಗಣಪಣ್ಣನು ದಾನ ಮಾಡಿದ ದಾಖಲೆ ಯಿದೆ. ಇದೇ ಕಾಲದ ಹಳೇ ಅಗ್ರಹಾರ ಶಾಸನ ಸವೆದಿದೆ. ಕೊಡಗಿ ಶಂಕರ ನಾರಾಯಣ ದೇವರ ಪೂಜೆ ನೈವೇದ್ಯಗೋಸ್ಕರ ವೈಯಕ್ತಿಕವಾಗಿ ಕೆಲವರು ಭೂಮಿ ಮತ್ತು ಹಣ ನೀಡಿದ್ದಾರೆ. ಕ್ರಿ. ಶ. ೧೪೦೩ ರ ಗಂಡಸಿ ಶಾಸನದಲ್ಲಿ ಭಾಯಣನೆಂಬಾತನು ತನ್ನ ತಾಯಿಯ ಹೆಸರಿನಲ್ಲಿ ಮಂಗಾಪುರವೆಂಬ ರಚಿಸಿ ಅದಕ್ಕೆ ಮಂಗಸಮುದ್ರವೆಂಬ ತಟಾಕಮಂ ಕಟ್ಟಿಸಿ ಹಿರಿಗಂಡಸಿ ಅಗ್ರಹಾರವನ್ನು ಜೀರ್ಣೋದ್ಧಾರ ಮಾಡಿ ಹಾಗೂ ಅಲ್ಲಿನ ಹಿರಿಯ ಕೆರೆಗೆ, ಕಾಲುವೆಗೆ ರಕ್ಷಣಾರ್ಥವಾಗಿ ಹನುಮಂತದೇವರ ಪ್ರತಿಷ್ಠೆಯನ್ನು ಮಾಡಿದ ವಿಷಯವಿದೆ. ಇದೇ ಕಾಲದ ಬೊಮ್ಮಲಾಪುರ ಸೂರ್ಯನಾರಾಯಣ ದೇವರಿಗೆ ೧ ವೃತ್ತಿ ಬ್ರಹ್ಮೇಶ್ವರ ದೇವರಿಗೆ ೧ ವೃತ್ತಿ, ಲಕ್ಷ್ಮೀನಾರಾಯಣ ದೇವರಿಗೆ ೧ ವೃತ್ತಿ ಹಲವರಿಂದ ಭೂಮಿಯನ್ನು ಕ್ರಯದಾನ ಮಾಡಿದ್ದಾನೆ. ವಿಠಪ್ಪರವೊಡೆಯನು ಇದೇ ಕಾಲದ ಹಳೇ ಆಲೂರಿನ ಶಾಸನದಲ್ಲಿ ಆಲೂರಿನ ದೇಶಿನಾಥ ದೇವರಿಗೆ ಪಾತ್ರ ಭೋಗಕ್ಕೆ, ಸೇವೆಗೋಸ್ಕರ ಹತ್ತೊಂಬತ್ತು ಹೊಂನು, ಐದು ಹಣವನ್ನು ಸರ್ವಮಾನ್ಯವಾಗಿ ಅನೇಕ ನಾಯಕರುಗಳನ್ನು ಕೊಟ್ಟ ವಿವರವಿದೆ. ಬಲಮುರಿ ಶಾಸನದಲ್ಲಿ ಅಗಸ್ತ್ಯೇಶ್ವರ ಮುಂಭಾಗದ ಮಂಟಪ ಕಟ್ಟಲು ಬೆಳಗೊಳದ ಅಳಗುವಣ್ಣನ ಮಗ ಅಣ್ಣನು ದತ್ತಿ ನೀಡಿದ ದಾಖಲೆಯಿದೆ. ಚಿಂತರು ಶಾಸನದಲ್ಲಿ ನಿಡಂಪಂಳ್ಳಿಯ ಶಂಕರನಾರಾಯಣ ದೇವಾಲಯಕ್ಕೆ ಒಂದು ಭೂ ನಿವೇಶನವನ್ನು ಶಂಕರನಾರಾಯಣ ಶ್ರೀಪಾದನು ನೀಡಿದ್ದಾನೆ.

ಕ್ರಿ. ಶ. ೧೪೦೪ ರ ಆರಗ ಶಾಸನದಲ್ಲಿ ಹಿರಿಯಂಗಡಿಯ ಬನಶಂಕರದೇವರಿಗೆ ಜಪ ಮಾಡುವುದಕ್ಕೋಸ್ಕರ ಅನಂತಮಯ್ಯರಿಗೆ ದಾನಕೊಟ್ಟ ವಿಷಯವಿದೆ. ಮತ್ತೊಂದು ಶಾಸನ ಆರಗ ರಾಜ್ಯದಲ್ಲಿ ಹದಿನೆಂಟು ಕಂಪಣಗಳು ಮತ್ತು ಮೂರು ಪಟ್ಟಣಗಳು

ಇದ್ದವೆಂದು ಹೇಳಲಾಗಿದೆ. ಆರಗದ ಕಲ್ಲಿನಾಥದೇವರ ನೈವೇದ್ಯ ಸೇವೆಗೆ ಕ್ರಿಯಾಶಕ್ತಿ ಗುರುಗಳ ಶಿಷ್ಯ ದಾನ ಕೊಟ್ಟಿದ್ದಾನೆ. ಇದೇ ಕಾಲದ ಹೊಸಕೊಪ್ಪ ಶಾಸನದಲ್ಲಿ ಹುಲಿಗಾಲದ ನಾಗಣ್ಣನ ಮಗ ನಾಗಣ್ಣನು ಆರಗ ಮೂಲಸ್ಥಾನದ ಕಾಲಿನಾಥದೇವರಿಗೆ ಕೆಲವು ಭೂಮಿ ದಾನ ನೀಡಿದ ವಿವರವಿದೆ.

ಕೊನೆಯದಾಗಿ ವಿಜಯನಗರದ ಸಂಗಮ ಅರಸರು ಕಾಳಾಮುಖರು, ಕಾಶೀವಿಲಾಸ ಕ್ರಿಯಾಶಕ್ತಿಗಳು ಹರಿಹರಾದಿಗಳು ಗುರುಗಳು. ಅವರು ನೀಡಿದ ದತ್ತಿದಾನಗಳು ಅಪಾರ. ಶೈವರಾದರೂ ಸಾಮ್ರಾಜ್ಯ ಸ್ಥಾಪಕರು ವೈಷ್ಣವ ವರಾಹ ಲಾಂಛನವನ್ನು ಸ್ವೀಕರಿಸಿದ್ದರು. ಇಮ್ಮಡಿ ಹರಿಹರನು ಶೈವ, ವೈಷ್ಣವ, ಜೈನ ಮುಂತಾದ ಎಲ್ಲಾ ಧರ್ಮದವರನ್ನು ಸಮಾನ ದೃಷ್ಟಿಯಿಂದ ಕಾಣುತ್ತಿದ್ದನು. ಇವನಿಗೆ ವೈದಿಕ ಮಾರ್ಗಸ್ಥಾಪನಾಚಾರ್ಯ ಎಂಬ ಪ್ರಶಸ್ತಿ ಸಿಕ್ಕಿರುವುದು ಇವನ ಒಂದು ಧಾರ್ಮಿಕ ಸಾಧನೆಯ ಮಾರ್ಗ ಎಂದರೆ ತಪ್ಪಾಗಲಾರದು.

ಆಧಾರ ಗ್ರಂಥಗಳು

೧. ಎ. ಆರ್. ಐ. ಇ. (ವಾರ್ಷಿಕ ವರದಿಗಳು)

೨. ಎಸ್. ಐ. ಐ. (ಸಂಪುಟಗಳು)

೩. ಎ. ಕ. (ಸಂಪುಟಗಳು)

೫. ವಿಜಯನಗರ ಅರಸರ ದಾವಣಗೆರೆ ಜಿಲ್ಲೆಯ ಶಾಸನಗಳು

ಸಂತೇಬೆನ್ನೂರು ಸುಮತೀಂದ್ರ ನಾಡಿಗ್

ದಾವಣಗೆರೆ ಜಿಲ್ಲೆಯ ವ್ಯಾಪ್ತಿಗೊಳಪಟ್ಟಂತೆ ಈವರೆಗೆ ವಿಜಯನಗರ ಅರಸರ ಸುಮಾರು ೫೦ ಶಾಸನಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ ಆರು ತಾಮ್ರ ಶಾಸನಗಳಾಗಿವೆ. ಕೇವಲ ಅವರ ಈ ಆರು ತಾಮ್ರ ಶಾಸನಗಳನ್ನು ಮಾತ್ರ ಇಲ್ಲಿ ಪರಿಚಯಿಸಿ, ವಿಶ್ಲೇಷಣೆ ಮಾಡಲಾಗಿದೆ. ಕರ್ನಾಟಕ ಶಾಸನ ಪಿತಾಮಹ ಬಿ.ಎಲ್. ರೈಸರು ತಮ್ಮ ಶಾಸನ ಸಂಪುಟಗಳಲ್ಲಿ ಈ ಜಿಲ್ಲೆಯ ನಾಲ್ಕು ವಿಜಯನಗರ ಅರಸರ ತಾಮ್ರ ಶಾಸನ ಪರಿಚಯಿಸಿದ್ದರೆ, ಶಿಲಾಶಾಸನವೊಂದು ಆ ತಾಮ್ರ ಶಾಸನದ ಪ್ರತಿಯೆಂದು ಹೇಳಲ್ಪಟ್ಟಿರುವುದರಿಂದ ಅದು ಸೇರಿ ೫ ತಾಮ್ರ ಶಾಸನಗಳು ಅವರು ಗುರುತಿಸಿದಂತಾಗಿದೆ. ಇನ್ನೊಂದು ತಾಮ್ರ ಶಾಸನವನ್ನು ರಾ. ನರಸಿಂಹಾಚಾರ್‌ರವರು ಮೈಸೂರು ಪ್ರಾಚ್ಯ ಇಲಾಖೆಯ 1912 ವಾರ್ಷಿಕ ವರದಿಯಲ್ಲಿ ಅದರ ಆಂಗ್ಲ ಭಾಷಾಂತರ ಮಾತ್ರ ಪ್ರಕಟಿ ಸಿದ್ದಾರೆ. ಇವುಗಳಲ್ಲಿ ೫ ಶಾಸನಗಳು ಹರಿಹರ ತಾಲೂಕಿನಲ್ಲಿಯೂ, ಇನ್ನೊಂದು ಚನ್ನಗಿರಿ ತಾಲೂಕಿನಲ್ಲೂ ದೊರೆತಿದ್ದು, ಈ ಎಲ್ಲ ಶಾಸನಗಳೂ ವಿಜಯನಗರವಾಳಿದ ವಂಶದವರದ್ದೇ ಆಗಿವೆ. ಇವುಗಳಲ್ಲಿ ಬುಕ್ಕಾರಾಯನ (1254) ಶಾಸನವೇ ಅತಿ ಪ್ರಾಚೀನವಾಗಿದ್ದು ಇಮ್ಮಡಿ ದೇವರಾಯನ ಶಾಸನ(1426) ಕೊನೆಯದ್ದಾಗಿದೆ. ಇವುಗಳ ಬಗ್ಗೆ ಒಂದೊಂದಾಗಿ ಪರಿಶೀಲಿಸೋಣ

1) ಬುಕ್ಕರಾಯನ ಹರಿಹರದ ಶಾಸನ (ದಾವಣಗೆರೆ-67)

ಈ ಶಾಸನ ಹರಿಹರದ ಶಾನುಭೋಗ ರಾಮಕೃಷ್ಣಯ್ಯನವರಿಂದ ಬಂದಿದ್ದು ಎಂದು ದಾಖಲಾಗಿದ್ದು, ೩ ಪತ್ರಗಳ ಈ ತಾಮ್ರ ಶಾಸನ ನಾಗರಾಕ್ಷರದಲ್ಲಿದ್ದು, ವಾಮನ ಮುದ್ರೆ ಹೊಂದಿದೆ. ಶ್ರೀ ವಿರೂಪಾಕ್ಷ ಎಂಬ ವಿಜಯನಗರ ಅರಸರ ಒಪ್ಪವಿದ್ದು, ಇದರಲ್ಲಿ ೬೭ ಸಾಲುಗಳಿವೆ. ಪ್ರಾರಂಭದ ಸ್ತುತಿರೂಪದ ಪದ್ಯಗಳು, ಕೊನೆಯ ಫಲಶ್ರುತಿ ಪದ್ಯಗಳು ಸಂಸ್ಕತದಲ್ಲಿರುವುದನ್ನು ಬಿಟ್ಟರೆ ಉಳಿದಂತೆ ಶಾಸನದ ಲಿಪಿ ಮತ್ತು ಭಾಷೆ ಕನ್ನಡದಲ್ಲಿದೆ. ಜ್ಯೋತಿಷ್ಯ ಶಾಸ್ತ್ರದಲ್ಲಿ ಪರಿಣಿತರಾದ ಕಾಶ್ಯಪ ಗೋತ್ರದ ಬೋಧಾಯನ ಸೂತ್ರದ ಯಜುಶ್ಯಾಖೆಯ ಹರಿಹರದ ದೈವಜ್ಞಮಾಧವ ಜೋಯಿಸರ ಮಕ್ಕಳು ರಾಮಣ್ಣ ಜೋಯಿಸರಿಗೆ ವಿಜನಯಗರದ ಬುಕ್ಕರಾಯ

ಮಹಾರಾಯ(ಬುಕ್ಕರಾಯ- 1) ಕೊಟ್ಟೂರು ಚಾವಡಿಗೆ ಸಲ್ಲುವ ಉಚ್ಚಂಗಿ ವೆಂಟೆದೊಳಗಣ ಹರಿಹರದೇವರಪುರದ ಊರುಂ ಬಾಡದೊಳಿಹ ಹಿಂದೆ ಮಿಟ್ಟಲಿ ಗೊಲ್ಲನಿಗೆ ಕಟ್ಟಿಸಿಕೊಟ್ಟಿದ್ದ ಮಿಟ್ಟಲಿಗನ ಕಟ್ಟೆಯೆಂಬ ಗ್ರಾಮವನ್ನು ಚತುಸ್ಸೀಮ ಸಂಮತವಾಗಿ ಸಹಿರಣ್ಯೋದಕ ದಾನ, ಧಾರಪೂರ್ವಕ ವಿನಿಧಿ, ನಿಕ್ಷೇಪ, ಜಲ, ಪಾಷಣ, ಅಕ್ಷಿಣಿ, ಆಗಮ, ಸಿದ್ಧಿ ಸಾಧ್ಯ ಹೆಬ್ಬಾರಿಕೆ ಮೊದಲಾದ ಸಕಲ ಅಷ್ಟಭೋಗ, ತೇಜ ಸ್ವಾಮ್ಯ ಸಹಿತವಾಗಿ ಏಕಭೋಗದಿಂ ಭೋಗಿಸಿಕೊಂಡು ಬರುವಂತೆ ಹಂಪೆ ವಿರೂಪಾಕ್ಷ ದೇವರ ಸನ್ನಿಧಿಯಲ್ಲಿ ಕೊಟ್ಟ ದಾನಶಾಸನ ಇದಾಗಿದೆ. ಶಾಸನದ ಕಾಲ ಶಾ.ಶ.1276ನೇ (ಕ್ರಿ.ಶ.1356), ವಿಜಯ ಸಂ|| ದ ಮಾಘ ಶುದ್ದ ಹುಣ್ಣಿಮೆ (ಭರತ ಹುಣ್ಣಿಮೆ)ದಾನ ಕೊಟ್ಟ ಗ್ರಾಮದ ಮೇರೆ ಇಂತಿದೆ. ಪೂರ್ವಕ್ಕೆ ನಾಗೇನೂರು (ನಾಗನೂರು), ದಕ್ಷಿಣಕ್ಕೆ ಮುದಿ ಹದಡಿ(ಮುದ ಹದಡಿ), ಪಶ್ಚಿಮಕ್ಕೆ ಸಾಲುಕಟ್ಟಿ ಉತ್ತರಕ್ಕೆ ಕುಂದವಾಡಿ(ಕುಂದವಾಡ). ಇಲ್ಲಿ ಉಲ್ಲೇಖಿಸಿರುವ ಎಲ್ಲಾ ಗ್ರಾಮಗಳೂ ಈಗಲೂ ಇವೆ. ದಾನ ಕೊಟ್ಟ ಗ್ರಾಮ ಮಿಟ್ಟಲಿಗನಕಟ್ಟೆಯನ್ನು ಈಗ ಮಿಟಲಕಟ್ಟೆ ಎಂದು ಕರೆಯಲಾಗುತ್ತಿದೆ. ಶಾಸನದಲ್ಲಿ ಹರಿಹರಕ್ಕೆ ಹರಿಹರದೇವಪುರ ಎಂದು ಉಲ್ಲೇಖಿಸಲಾಗಿದೆ. ಇದಕ್ಕೆ ಪೂರ್ವದ ಕೆಲ ಶಾಸನಗಳಲ್ಲಿ ಇದಕ್ಕೆ ಹರೀಶಪುರ, ಕೂಡಲೂರು(ಹರಿದ್ರಾನದಿ-ತುಂಗಾಭದ್ರಾನದಿ ಇಲ್ಲಿ ಕೂಡುವ ಸಂಗಮ ಸ್ಥಳವಾದ ಕಾರಣ) ಎಂದೆಲ್ಲಾ ಕರೆಯಲಾಗಿದೆ. ಈ ಊರಿನಲ್ಲಿ ಹರಿ (ವಿಷ್ಣು)ಹರ (ಶಿವ) ಒಂದೇ ಶಿಲ್ಪದಲ್ಲಿ ಇರುವುದರಿಂದ ಹರಿಹರ ಎಂದೇ ದೇವರ ಹೆಸರಿನಲ್ಲಿಯೇ ಸ್ಥಳವೂ ಮುಂದೆ ಹರಿಹರ ಎಂದೇ ಕರೆಯಲ್ಪಟ್ಟಿದೆ. ಈ ಶಾಸನದ ಕಾಲದ ವೇಳೆಗೆ ಬನವಾಸಿ 12000 ಮೊದಲಾದ ವಿಭಾಗಗಳಿಗೆ ಬದಲು ಉಚ್ಚಂಗಿ ವೇಂಠೆ ಇತ್ಯಾದಿ ವಿಭಾಗ ರೂಡಿಯಲ್ಲಿ ಬಂದಿದ್ದನ್ನು ಈ ಶಾಸನದಿಂದ ಗುರುತಿಸಬಹುದಾಗಿದೆ. (ವೇಂಠೆ=ಆಡಳಿತ ವಿಭಾಗ) ಇಲ್ಲಿ ಶಕ ವರ್ಷ ತಪ್ಪಾಗಿದೆ. ದುರ್ಮುಖಿ ಸಂವತ್ಸರ ಎಂದಿದ್ದರೆ ಸರಿಯಾಗುತ್ತಿತ್ತು. ಹರಿಹರಸ್ವಾಮಿಯ ರಥೋತ್ಸವ ವಿಜಯನಗರ ಅರಸರ ಕಾಲದಿಂದಲೂ ಈವರೆಗೆ ಮಾಘಶುದ್ಧ ಪೌರ್ಣಮೆಯೆಂದೇ ನಡೆದು ಬರುತ್ತಿದೆ. ಈ ಶಾಸನವೂ ಅದೇ ದಿನ ಹಾಕಿಸಿರುವುದು ಗಮನಾರ್ಹ.

2) ಇಮ್ಮಡಿ ಹರಿಹರನ ಹರಿಹರದ ಶಾಸನ(ದಾವಣಗೆರೆ-68)

ಇದು ಹರಿಹರದ ಶ್ಯಾನಭೋಗದಲ್ಲಿದ್ದು ತಾಮ್ರ ಶಾಸನದ ನಕಲಾಗಿದೆ. ಶಾಸನದ ಕಡೆಯಲ್ಲಿ ವಿರೂಪಾಕ್ಷ ಎಂಬ ಒಪ್ಪವಿದೆ. ವಿಜಯನಗರ ಅರಸನಾದ ಇಮ್ಮಡಿ ಹರಿಹರನ ಕಾಲದ ಶಾಸನ ಇದು. ಶಾಸನದ ಕಾಲವನ್ನು (1382) ಶಕ 1183ನೇ ದುಂದುಭಿ ಸಂ ದ ವೈಶಾಖ ಬಹುಳ 30ನೇ ಭಾನುವಾರ ಎಂದು ಹೇಳಿದೆ.

ಇದು ಇಮ್ಮಡಿ ಹರಿಹರನ ಕಾಲಕ್ಕೆ ಸರಿಹೊಂದದ ಕಾರಣ ಇದರ ನೈಜತೆ ಬಗ್ಗೆ ವಿದ್ವಾಂಸರಲ್ಲಿ ಗೊಂದಲ ಉಂಟುಮಾಡಿದೆ. ಶಾಸನ ನಕಲು ಪ್ರತಿ ಆದ ಕಾರಣ ಕಾಲ ನಮೂದಲ್ಲಿ ತಪ್ಪಾಗಿರುವ ಸಾಧ್ಯತೆ ಇದೆ. ಎಂದಿನಂತೆ ಈ ಶಾಸನ ದಲ್ಲೂ ಮಂಗಳ ಪದ್ಯಗಳು, ಫಲಶ್ರುತಿ ಪದ್ಯಗಳು ಸಂಸ್ಕೃತದಲ್ಲಿದ್ದು, ಉಳಿದಂತೆ ಶಾಸನ ಕನ್ನಡದಲ್ಲಿದೆ.

ಹರಿಹರದ ಶ್ರೀ ಹರಿಹರೇಶ್ವರ ಸ್ವಾಮಿಯ ಸನ್ನಿಧಿಯಲ್ಲಿ ನಿರಂತರ ವೇದ ಶಾಸ್ತ್ರ ಪಾರಾಯಣವಾಗಬೇಕೆಂದು ಶಾಂಕರೀಪುರ ಎಂಬ ಗ್ರಾಮವನ್ನು ರಾಮದೇವಯ್ಯನ ಮಕ್ಕಳು ಲಿಂಗರಸರಿಗೆ ತಮ್ಮ ಇತರ ಆಸ್ತಿಗಳೊಡನೆ ಅನುಭವಿಸಿಕೊಂಡು ಬರುವಂತೆ ದಾನ ಶಾಸನ ಇದಾಗಿದೆ. ಹಿಂದೆ ಆ ಸ್ಥಳದ ಮಹಾಜನರೊಂದಿಗೆ ಅನುಭವಿಸಿಕೊಂಡು ಬರುತ್ತಿದ್ದ 60 ವೃತ್ತಿಯೊಂದಿಗೆ ಈ ವೃತ್ತಿಯನ್ನು ಅನುಭವಿಸಿಕೊಂಡು ಬರಲು ತೊಡಕು ಬರದೆಂಬ ಉದ್ದೇಶ ಈ ಶಾಸನ ಬರೆದು ಕೊಡಲಾಗಿದೆ. ಈ ಶಾಸನದಲ್ಲಿ ಗಡಿ ಉಲ್ಲೇಖಿಸುತ್ತ ಪಶ್ಚಿಮ ದಿಕ್ಕಿಗೆ ಹರಿದ್ರ ನದಿ ಎಂದು ನಿರ್ದೇಶಿಸಿದೆ. ಈಗ ಶ್ಯಾಗಲೆಹಳ್ಳ, ಸೂಳೇಕೆರೆ ಹಳ್ಳ ಎಂದು ಕರೆಯುತ್ತಿರುವ ಸಣ್ಣ ತೊರೆಯೇ ಈ ಹರಿದ್ರಾ ನದಿ, ಈಗ ಕಾಲಗರ್ಭದಲ್ಲಿ ಈ ನದಿ ಹೆಸರು ಪ್ರಚಲಿತದಲ್ಲಿ ಇಲ್ಲ. ಶಾಸನದಲ್ಲಿ ಉಲ್ಲೇಖಿತ ದತ್ತು ಗ್ರಾಮವನ್ನು ಈಗ ಸಂಕಲೀಪುರ ಎಂದು ಕರೆಯಲಾಗುತ್ತಿದೆ.

3) ಇಮ್ಮಡಿ ಹರಿಹರನ ಸಂತೇಬೆನ್ನೂರು ಶಾಸನ (ಚನ್ನಗಿರಿ-13)

ಸಂತೇಬೆನ್ನೂರು ನಾಡಿಗ ಮನೆತನದಲ್ಲಿರುವ ಎರಡುಬದಿ ಅಕ್ಷರವಿರುವ ಒಂದು ಹಲಗೆಯ ಈ ಶಾಸನ ಕನ್ನಡಲಿಪಿ ಮತ್ತು ಭಾಷೆಯಲ್ಲಿದೆ. 39 ಸಾಲುಗಳ ಈ ಶಾಸನದ ಕೊನೆಯಲ್ಲಿ ವಿರೂಪಾಕ್ಷ ಎಂಬ ಒಪ್ಪವಿದೆ. ಕ್ರಿ.ಶ.1401ರ ಶಾಸನ ಶಾಶ.1316ನೇ ಯುವ ಸಂ| ದ ವೈಶಾಖ ಶುದ್ಧ ಪೌರ್ಣಿಮೆ ಇಮ್ಮಡಿ ಹರಿಹರದೇವ ಮಹಾರಾಯ ಮದಕರಿ ಸ್ತಳದ ಶ್ರೀ ವತ್ಸಗೋತ್ರದ ಯಜುಶಾಖೆಯ ಯಿಂದ್ರಕಂಠಿ ಮನೆತನದ ಆವಲ ನರಸಿಂಹ ಭಟ್ಟಗೆ ಜೋತಿಷ್ಯ, ಪುರೋಹಿತ ವೃತ್ತಿ, ಅಪರಾಲೇಖನ ವೃತ್ತಿಗಳಿಗಾಗಿ ಹರಿದ್ರಾತೀರದ ಬೊಮ್ಮೇನಹಳ್ಳಿ (ಬ್ರಹ್ಮನಾಮಕ ಗ್ರಾಮ)ವನ್ನು ದತ್ತಿಕೊಟ್ಟು ಅಲ್ಲಿನ ವೆಂಕಟೇಶಾಲಯ, ಶ್ರೀ ರಾಮೇಶ್ವರ ದೇವಾಲಯದ ಪೂಜಾ ಕೈಂಕರ್ಯ ನಡೆಸಿಕೊಂಡು ಬರಲು ಈ ದತ್ತಿ ಕೊಟ್ಟಿದ್ದಾಗಿ ತಿಳಿಸುತ್ತದೆ.

4) ದೇವರಾಯನ ಮಲೆಬೆನ್ನೂರು ಶಾಸನ (ದಾವಣಗೆರೆ-108)

ಇದು ಹರಿಹರ ತಾಲ್ಲೂಕು ಮಲೆಬೆನ್ನೂರು ಗ್ರಾಮದಲ್ಲಿರುವ ಹೆಂಚಿನಮನೆ ಸುಬ್ಬಾಜೋಯಿಸರ ವಂಶದಲ್ಲಿದ್ದ ತಾಮ್ರ ಶಾಸನದ ನಕಲಾಗಿದೆ. ಈ ಶಾಸನದ

ದಂತೆ ಶಾಶ 1323ನೇ ವ್ಯಯ ಸಂ| ದ ಭಾದ್ರಪದ ಬಹಳ 6 ಭೌಮವಾರ (1406)ಪಂಪಾ ವಿರೂಪಾಕ್ಷ ದೇವರ ಸನ್ನಿಧಿಯಲ್ಲಿ ವಜಿಯನಗರದ ಅರಸು ಬುಕ್ಕ ರಾಯ ದೇವಮಹಾರಾಯರು ಸ್ವತಂತ್ರ ಕಪಿಗೋತ್ರದ ಅಪಸ್ತಂಭಸೂತ್ರದ ಯಜು ಶಾಖೆಯ ಹರದರಿಕೆ ಸಹಸ್ರನಾಮದ ನರಸಾವಧಾನಿಗಳ ಪೌತ್ರರಾದ ವಿರೂಪಾಕ್ಷ ವಧಾನಿಗಳ ಪುತ್ರರಾದ ನರಸಾವಧಾನಿಗಳಿಗೆ ಉಚ್ಚಂಗಿ ವೇಂಠೆಗೆ ವಳಗಿನ ಕೊಟ್ಟೂರು ಶಿಂಹಾಸನಕ್ಕೆ ಸಲ್ಲುವ ಭಾನುವತೀ ಪಟ್ಟಣ ಸ್ಥಳಕ್ಕೆ ಜಿಗಳೆ, ಕುಂದೂರು, ಹರೊಸಗ್ರ ಮುಂತಾದ ಗ್ರಾಮಗಳಲ್ಲಿ ಜೋತಿಷ್ಯ ಸ್ಥಳ, ಪುರೋಹಿತ್ಯಾದಿ ಬಗ್ಗೆ ನಾಗಳ ಬೀಜವರಿ ಭೂಮಿ ಸಹಿರಣ್ಯೋದಕ (ದಾನ)ಧಾರ ಪೂರ್ವಕವಾಗಿ ದಾನ ಕೊಟ್ಟಿದ್ದನ್ನು ತಿಳಿಸುವ ಭೂದಾನ ಶಾಸನವಾಗಿದೆ. ಶಾಸನದಲ್ಲಿ ಉಲ್ಲೇಖಿತ ಭಾನುವತಿಪಟ್ಟಣ ಈಗ ಭಾನುವಳ್ಳಿ ಎಂದು ಕರೆಯಲ್ಪಡುತ್ತಿದೆ. ಉಳಿದಂತೆ ಶಾಸನದಲ್ಲಿ ಸೂಚಿಸಿದ ಎಲ್ಲಾ ಗ್ರಾಮಗಳು ಈಗಲೂ ಅಸ್ತಿತ್ವದಲ್ಲಿವೆ.

5) ದೇವರಾಯನ ಹರಿಹರದ ಶಾಸನ (ದಾವಣಗೆರೆ -23)

ಹರಿಹರನ ಶ್ರೀ ಹರಿಹರೇಶ್ವರ ದೇವಸ್ಥಾನ ದಕ್ಷಿಣಭಾಗದಲ್ಲಿ ನೆಟ್ಟಿರುವ ಸಾಲುಗಳ ಒಂದು ಶಿಲಾ ಶಾಸನ ತಾಮ್ರಶಾಸನದ ಪ್ರತಿಯೆಂದು ಅದರಲ್ಲೇ ನಮೂದಿ ಸಲಾಗಿದೆ. ಇದೊಂದು ಸುದೀರ್ಘಶಾಸನವಾಗಿದ್ದು, ಮೂಲ ತಾಮ್ರಶಾಸನ ಎಲ್ಲಿದೆಯೋ ತಿಳಿದುಬಂದಿಲ್ಲ. ಹಿಂದೆ ಮೊದಲು ತಾಮ್ರ ಶಾಸನದಲ್ಲಿ ದಾನದ ವಿವರ ಬರೆಯಿಸಿ, ನಂತರ ಶಿಲಾಶಾಸನವನ್ನು ಹಾಕಿಸುವ ಪದ್ಧತಿ ಇದ್ದಿತೆಂಬುದಕ್ಕೆ ಈ ಶಾಸನ ಉದಾಹರಣೆಯಾಗಿದೆ. ಶಾಸನ ರೀತ್ಯಾ ಶಾ.ಶ.1332ನೇ ವಿಕೃತಿ ಸಂ|ದ (1410) ಭಾದ್ರಪದ ಶುದ್ಧ ದ್ವಾದಶಿ ಸೋಮವಾರ ಶ್ರೀ ವೀರಪ್ರತಾಪ ದೇವರಾಯ ಮಹಾರಾಯರು ಹರಿಹರದ ಶ್ರೀ ಹರಿಹರದ ದೇವರಿಗೆ ಮತ್ತು ಕ್ಷೇತ್ರದ ಮಹಾಜನಗಳಿಗೆ ಮಾಡಿಕೊಟ್ಟ ಜಮೀನು ವ್ಯವಹಾರದ ನಿರ್ಣಯದ ವಿವರವನ್ನು ಶಾಸನ ಒದಗಿಸುತ್ತದೆ. ಶಾಸನದಂತೆ ತಂಬಾಭದ್ರಾನದಿಗೆ ಸೇರುವ ಹರಿದ್ರಾನದಿಗೆ ಒಂದು ಅಡ್ಡಗಟ್ಟೆಯನ್ನು ಕಟ್ಟಿ ದೇವರ ಭೂಮಿಯಲ್ಲಿ ಹರಿಹರಕ್ಕೆ ಕಾಲುವೆ ತಂದು ಅದರ ನೀರು ಎಲ್ಲಿಯವರೆಗೆ ಹರಿಯುತ್ತದೆಯೋ ಅಲ್ಲಿಯವರೆಗೂ ನೀರಾವರಿ ಆಗುವಂತೆ ಮಾಡಿದರು. ಇದನ್ನು ಚಕ್ರವರ್ತಿ 1ನೇ ದೇವರಾಯನ ಮಂತ್ರಿಯಾಗಿದ್ದ ಬುಳ್ಳರಾಯನು ಕಟ್ಟಿಸಿದನು. ಇದರಂತೆ ಶ್ರೀಹರಿಹರ ದೇವರಿಗೆ ಸೇರಿದ ಹರಿಹರ ಪ್ರದೇಶದಲ್ಲಿ ಹರಿದ್ರಾನದಿಗೆ ಈ ಅಣೆಕಟ್ಟು ಕಟ್ಟಿನಿ ಬನ್ನಿಕೋಡು, ಬೆಲವಡಿ (ಬೆಳ್ಳುಡಿ), ಹನಗವಾಡಿ, ಹರಿಹರ, ಗುತ್ತೂರು, ಗಂಗನರಸಿ ಕೆರೆವರೆಗೆ ಒಂದು ಕಾಲುವೆಯನ್ನು ನಿರ್ಮಿಸಿ ಅದರಿಂದ ನೀರು ಬಳಕೆ ಮಾಡುವ ಭೂಮಿಯನ್ನು 3 ಭಾಗಮಾಡಿ 2 ಪಾಲು ಹರಿಹರದ ದೇವರು

ಅನುಭವಿಸತಕ್ಕದೆಂದು, ಒಂದು ಪಾಲು ಭೂಮಿ ಹಣಕೊಟ್ಟ ಮಹಾಜನಗಳು ಅನುಭವಿಸತಕ್ಕದೆಂದೂ ಕಟ್ಟೆ ಕಾಲುವೆ ಮುಗಿದುದರಿಂದ ಮುದೆ ಅದರ ನಿರ್ವಹಣೆ ರಿಪೇರಿ ಆರೈಕೆ ವೆಚ್ಚವನ್ನು ದೇವರು ೨ ಪಾಲು, ಭೂದಾನ ಸ್ವೀಕರಿಸಿದ ಬ್ರಾಹ್ಮಣರು ಒಂದು ಪಾಲು ನಿರ್ವಹಿಸಬೇಕೆಂದೂ ಈ ತಾಮ್ರಪತ್ರ ತಿಳಿಸುತ್ತದೆ. ಈ ಒಂದು ಪಾಲಿನಲ್ಲೂ ಒಂದು ನೂರಾ ಹನ್ನೊಂದು ವೃತ್ತಿಗಳನ್ನು ಗುರುತಿಸಿ ½ ಪಾಲಿನಿಂದ ಅವರವರು ಹಾಕಿದ ಹಣಕ್ಕೆ ತಕ್ಕಂತೆ ಆಯ-ವ್ಯಯವನ್ನು ಹಂಚಿದ್ದು, ಈ ಕಾಲುವೆಗೆ ಹಣ ಹಾಕಿದ ಬ್ರಾಹ್ಮಣರ ಹೆಸರು, ಗೋತ್ರ ಸಮೇತ ಸೂಚಿಸಿರುವುದು ವಿಶೇಷ. ಈ ಶಾಸನ ಕೃತಿ ರಚಿಸಿದ ಯಜುಶಾಖೆಯ ಚಲ ಸಂಪ್ರದಾಯದ ಮಲ್ಲಿಕಾರ್ಜುನನ ಮಕ್ಕಳು ಉಭಯ ಭಾಷಾ ಕವಿ ಬಾಯಣಚಾರ್ಯರಿಗೆ 8 ಕೊಳಚೆ ಗದ್ದೆ ಕೊಟ್ಟಿರುವುದನ್ನು ಶಾಸನ ತಿಳಿಸುತ್ತದೆ. ಶಾಸನ ಬರೆದವನ ಹೆಸರು ತಿಳಿಸುವುದಿಲ್ಲ. ಶಾಸನದಲ್ಲಿ ಉಕ್ತವಾಗಿರುವ ವಾಧುಲ, ಜೈಮಿನಿ, ಹಾರೀಶ, ಬಾದನಾರಾಯಣ, ಮಾಸ್ಯ ಪೂರ್ತಿಮಾತ್ಯ, ಪರಾಶರ, ವಿಷ್ಣುವರ್ಧನನ ಲೋಲಾಕ್ಷಿ ಈ ಗೋತ್ರಗಳು ಹೆಚ್ಚು ಪ್ರಚಾರದಲ್ಲಿ ಇಲ್ಲ. ಹಾಗೆಯೇ ಕಾಯಣಾರಾಧ್ಯ, ಬನ್ನಾವಝ್ಝ, ಇಮ್ಮಡಿಬಟ್ಟ, ಬಸವಣ್ಣಭಟ್ಟ, ಮಂಗಣ್ಣ ಭಟ್ಟ, ಅಚಿಭಟ್ಟ, ದಶಗ್ರಂಥಿ ಭಟ್ಟ, ಚೌಢಿಭಟ್ಟ, ಬಮ್ಮಣ್ಣಭಟ್ಟ, ಬಿಡಾಡಿ ಭಟ್ಟ, ಗಂಗಾಭಟ್ಟ, ಸಂಗುಭಟ್ಟ, ಮಲ್ಲಪ್ಪ, ಹೊನ್ನಪ್ಪ, ಕೊಪ್ಪಣ್ಣ ಇತ್ಯಾದಿ ಬ್ರಾಹ್ಮಣರ ಹೆಸರುಗಳೂ ಇಂದಿಗೆ ನಮಗೆ ವಿಚಿತ್ರವೆನಿಸುತ್ತದೆ.

ವಿಶೇಷವಾದ ಸಂಸ್ಕೃತ ಭಾಷೆಯಲ್ಲಿರುವ ಈ ಶಾಸನದಲ್ಲಿ ಎರಡು ಕಂದ, ಎರಡು ಮಾಲಿನಿ, ಮೂರು ಸ್ರಗ್ಧರೆ, ಆರು ಶೂರ್ದೂಲ, 19 ಶ್ಲೋಕಗಳಿವೆ. ಈ ಶಾಸನ ದಲ್ಲಿ ಸೂಚಿಸಿದ ಅಳತೆ ಪ್ರಮಾಣ ವಿಜಯನಗರದ ಪದ್ಧತಿ, ಮಾನಗಳನ್ನು ಸೂಚಿಸು ತ್ತದೆ. ಖಂಡುಗಗಿದ್ದನ, ಅದ್ದನ, ಬಳ್ಳ,ಸೇರು ಇತ್ಯಾದಿ ವಿಜಯನಗರ ಕಾಲದ ಅಳತೆ ಮಾಪಕಗಳಾಗಿದ್ದವೆಂದು ತಿಳಿಯಬಹುದಾಗಿದೆ. ಆಕಾಲದಲ್ಲಿ ಕೃಷಿಗೆ, ನೀರಾವರಿ ವ್ಯವಸ್ಥೆಗೆ ಎಷ್ಟು ಪ್ರೋತ್ಸಾಹಕೊಡುತ್ತಿದ್ದರು ಎಂಬುದನ್ನು ಈ ಶಾಸನ ತಿಳಿಸುತ್ತದೆ. ಕೆಲವು ವರ್ಷಗಳಾದ ನಂತರ ಶಾಸನದಂತೆ ಕಟ್ಟಿದ ಕಟ್ಟೆ ಒಡೆದು ಆಮೇಲೆ ವಿಜಯ ನಗರ ಅರಸ 2ನೇ ದೇವರಾಯನ ಕಾಲದಲ್ಲಿ 14 ವರ್ಷಗಳ ನಂತರ ಅವನ ಮಂತ್ರಿ ಚಾಮರಾಜ ಪುನಹ ಕ್ರಿ.ಶ.1424ರಲ್ಲಿ ಅದನ್ನು ಕಟ್ಟಿಸಿದನೆಂಬುದು. ಅದು ಸಹ ಈಗ ಹಾಳಾಗಿ ಅದರ ಅವಶೇಷವೂ ಕಂಡುಬರುತ್ತಿಲ್ಲ. ಅದು ಈಗಲೂ ಇದ್ದರೆ ವಿಜನಯಗರ ಕಾಲದ ಕೆರೆ-ಕಾಲುವೆ ರಚನೆಯ ವಾಸ್ತುಶಿಲ್ಪದ, ತಾಂತ್ರಿಕ ನೈಪುಣ್ಯತೆ ಸಾರುವ ಒಂದು ಅಮೂಲ್ಯ ಮಾದರಿ ನಮಗೆ ಸಿಗುತ್ತಿತ್ತು. ಈ ಕಟ್ಟೆ ನಿರ್ಮಾಣವಾದ ಸ್ಥಳದ ಬಗ್ಗೆ ವಿವಿಧಾಭಿಪ್ರಾಯಗಳಿದ್ದು ಡಾ|| ಜಗದೀಶ

ಅಗಸಿಬಾಗಿಲರವರು ಇದನ್ನು ದೇವರಬೆಳೆಕೆರೆ ಸಮೀಪದ ಹಳೆಯ ಪಾಳು ಗ್ರಾಮದ ಹತ್ತಿರ ಕಟ್ಟಿದ್ದೆಂದು ಗುರುತಿಸಬಹುದಾಗಿದೆ ಎಂದು ಅಭಿಪ್ರಾಯಿಸಿದ್ದಾರೆ. ಈಗ ಅದರ ಸಮೀಪದಲ್ಲಿಯೇ ಹೊಸದಾಗಿ ಸಣ್ಣ ಅಣೆಕಟ್ಟು ಕಟ್ಟಿದ್ದಾರೆ

6) ಇಮ್ಮಡಿ ದೇವರಾಯನ ಹರಿಹರನ ಶಾಸನ(ಎಂ.ಆ.ಆರ್. 1912)

ಮೈಸೂರು ಪ್ರಾಚ್ಯ ಇಲಾಖೆಯ1912ರ ವಾರ್ಷಿಕ ವರದಿಯಲ್ಲಿ ವಿಜಯನಗರದ ಅರಸು ಇಮ್ಮಡಿ ದೇವರಾಯನ ಕ್ರಿ.ಶ.1426ರ ಒಂದು ತಾಮ್ರಶಾಸನವನ್ನು ರಾ. ನರಸಿಂಹಾಚಾರ್ಯರು ಗುರುತಿಸಿ, ನಾಗರೀಲಿಪಿಯಲ್ಲಿದ್ದ ಸಂಸ್ಕೃತ ಭಾಷೆಯ ಆ ಶಾಸನದ ಆಂಗ್ಲ ಭಾಷಾಂತರವನ್ನು ಪ್ರಕಟಿಸಿದ್ದಾರೆ. ಶಾಸನದ ಒಂದ ಹಲಗೆ ಮಾತ್ರ ಅವರಿಗೆ ದೊರೆತಿದ್ದು, ಆರಂಭದ ಸಂಸ್ಕೃತ ಶ್ಲೋಕಗಳು ಮಾತ್ರ ಇದರಲ್ಲಿ ದೊರೆಯುತ್ತದೆ. ಹೆಚ್ಚಿನ ವಿವರಗಳು ದೊರೆಯುತ್ತಿಲ್ಲ. ಈ ಶಾಸನದ ಸಂಪೂರ್ಣ ಪಾಠ ದೊರೆತರೆ ವಿಜಯನಗರ ಇತಿಹಾಸಕ್ಕೆ ಒಂದು ಕೊಡುಗೆಯಾಗುತ್ತದೆ. ಈಗ ದೊರೆತಿರುವ ಮೊದಲ ಹಲಗೆಯ ಕನ್ನಡ ಪಾಠಾಂತರ ವನ್ನು ಇಲ್ಲಿ ಕೊಡಲಾಗಿದ್ದು. ಇದನ್ನು ಹೊಸ ಶಾಸನವೆಂದು ಪರಿಗಣಿಸಬಹುದಾಗಿದೆ.

ಮೇಲ್ಕಂಡ ಎಲ್ಲಾ ಶಾಸನಗಳಿಂದ ಹರಿಹರ ವಿಜಯನಗರಕಾಲಕ್ಕೆ ಒಂದು ದೊಡ್ಡ ಅಗ್ರಹಾರವಾಗಿತ್ತಲ್ಲದೆ, ಬಹಳಷ್ಟು ಜೋತಿಷ, ವೇದಾಂತ ಪಂಡಿತರನ್ನು ಹೊಂದಿ ತ್ತೆಂದು ತಿಳಿದುಬರುತ್ತದೆ. ಇದಲ್ಲದೆ ಕೊಟ್ಟೂರು ಚಾವಡಿ ಆಸ್ಥಾನ ವಿಜಯನಗರ ಅರಸರ ಒಂದು ನೆಲೆವೀಡಾಗಿತ್ತೆಂದು ತಿಳಿಯಬಹುದಾಗಿದೆ.

ಹೀಗೆ ದಾವಣಗೆರೆ ಜಿಲ್ಲೆಗೆ ಸೇರಿದ ವಿಜಯನಗರ ಅರಸರ ಎಲ್ಲಾ 6 ತಾಮ್ರ ಶಾಸನಗಳು ವಿಜಯನಗರ ಅರಸರು ದಾವಣಗೆರೆ ಜಿಲ್ಲೆಯ ಇತಿಹಾಸಕ್ಕೆ ನೀಡಿದ ಕೊಡುಗೆಯನ್ನು ತಿಳಿಸುತ್ತದೆ. ಈ ಎಲ್ಲಾ ದಾನ ಶಾಸನಗಳು ವಿಶೇಷವಾಗಿ ಬ್ರಾಹ್ಮಣ ರಿಗೆ ಸಂದಿರುವುದು ಆಗಿನ ಸಮಾಜದ ವ್ಯವಸ್ಥೆಯನ್ನು ಸೂಚಿಸುತ್ತದೆ. ಶಾಸನಗಳು ಸಾಹಿತ್ಯದ ದೃಷ್ಟಿಯಿಂದ ಉತ್ಕೃಷ್ಟವಾಗಿವೆ. ಈ ಶಾಸನಗಳಲ್ಲಿ ಸಂಸ್ಕೃತದಲ್ಲಿ ಹೆಚ್ಚಿನ ಭಾಗ ಬರೆಯಲ್ಪಟ್ಟಿದ್ದರೂ, ಕನ್ನಡದಲ್ಲೂ ಕೆಲವು ಕೆಲವು ಸಾಲುಗಳು ಇರುವುದು ಕನ್ನಡಕ್ಕೆ ಶಾಸನಗಳಲ್ಲಿ ಹೆಚ್ಚಾಗಿ ಪ್ರಾಮುಖ್ಯತೆ ಕೊಟ್ಟಿರುವುದನ್ನು ತೋರಿಸುತ್ತದೆ.

ಇಮ್ಮಡಿ ದೇವರಾಯನ ಕ್ರಿ. ಶ.1426ರ ಹರಿಹರದ ಶಾಸನ


1. ಶ್ರೀ ಸರಸ್ವತ್ಯೇ ನಮಃ| ಶ್ರೀ ಗಣಾಧಿಪತಿಯೇ ನಮಃ | ಶ್ರೀ ನರಸಿಂಹಾಯ
2. ನಮಹ| ಶ್ರೀ ಗೋಪಾಲಕೃಷ್ಣಾಯ ನಮಹ| ಏತದ್ ರಾಜಾಧಿರಾಜಸ್ಯ ತ್ರಾ

3. ತುರ ಅಂಭೋಧಿ ಮೇಖಲಾವ್| ಸಂಗ್ರಾಮೇ ತಾರಕಾರತೇರ್ ದೇವರಾಜ್ಯಸ ಸಾ
4. ಸನಂ ಅವ್ಯಾತ್ವಾಂ ಆನನೇ ಹಸ್ತಿ ದೃಷ್ಯಾಯಾಸ್ಯ ದಯಾ ದುಹಾ | ನಾಡಿ
5. ಮಾತ್ರಿಕತಾಂ ಯಾಂತಿ ನರಣಾಂ ಕಾಯನೀವ್ರಿತಹಾ | ಕಲ್ಯಾಣಾನಿಕರೇ
6. ಕರೋತು ವಸುಧಾಂ ವಾರಾಕರಾದ ಉದ್ದರಾನ್ ದಮಸ್ತುಕಾಂತಿ ತಾತಿರ್ ಯ
7. ತೋ ದಿಶಿ ದಿಶಿ ವ್ಯಾತನ್ವಾತೀ ಚಂದ್ರಿಕಾಂ | ಲೋಕಗ್ರಾಮವಿಧಾನ
8. ಲೋಲಪ ಧಿಯಾ ಕ್ರೋಡಿಕೃತೇ ವೇಧಸಾ ಸೂತೇ ವ್ಯೋಮನಿ ಸೂತ್ರಪಾ
9. ತ ಸುಶಮಾಂ ಸೋಯಂಕಿರಿ ಗ್ರಾಮಾಣೇಹ ಧಾತ್ರಿ ಪೋತ್ರಿಶ್ವರೋತ್ಸಂಗ ಭೊ
10. ಶಾ ಪುಷ್ಣಾತು ವಹ ಶ್ರೀಯಾಂ | ಅನುಬದ್ಧೇವಯಾ ಸಿಂಧೋ ಶ್ರೀ ಕರ್ರೈಃ
11. ಸ್ವೇದ ಬಿಂದಭಿಃ | ಅಸ್ತಿ ಚೂಢಾಮಣಿನ್ ಶಾಂಭೋರು ಅಮಭೋರಾಶೇಸ ತನುಭಾ
12. ವರ| ಮಹೇಂದ್ರ ನಗರೀ ನಾರೀ ಮಗಲ್ಯಾ ಸ್ತಾಪನೌಶಧಂ| ತತೋ ಯ
13. ದೋರ ಅಭುದ ವಂಶೋ ಭಜನ್ ಪರ್ವಬಿರಂ ಉನ್ನತಿಂ ಯಶೊದೌತ ದಿಶಂ ರಾಜ
14. ರತ್ನಾನಾಂ ಯತ್ರ ಸಂಭವಃ ತತ್ರಾಭುದ್ ಬುಕ್ಕ ಭೂಪಾಲೋ ವ್ರಿತ್ರಾರಿ ಸ
15. ಮ ವಿಕ್ರಮಃ ಕ್ರಿದಾ ಪುತ್ರಿಕೃತಾರಾತಿಹ ಕೀರ್ತಿ ಶಾಖಾ ಮಹೀ
16. ರುಹ ಪಾಲಯನ್ ಯಹ ಪ್ರಜಾಹ ಸರ್ವಾಹ ಪಕ್ಷಪಾತ ಪರಾನ್ ಮುಖ
17. ವ್ಯಾತನೋದ ವಿರತೋತ್ಯಾಂತಣತಾಂ ಧರಿತ್ರೀಂ ಚಕ್ರವರ್ತಿಷು ಪುತೋಭೊ
18. ದ ಅಸ್ಯ ಪುಣ್ಯೇನ ಮಹೀಭಾಜಾಂ ಮಹಿಯಾಸ್ಸಾ ರಾಜಾ ಹರಿಹ
19. ರೋ ನಾಮ ನಾಮಶೇಷೀಕೃತಾಹಿತಃ | ಅರ್ಥಾನು ಬಂಧೀನೀ ತುಂಗಭದ್ರಾ
20. ಯದ್ ದಾನ ಧಾರಯಾ ಪರ್ಜನ್ಯೋಪಜನಾ ಸೌಭಾಗ್ಯಹ ಪ್ರತ್ಯಾದಿ
21. ತಿ ನಿಮ್ನಗಾಹ| ಭದ್ರಾ ಯದ್ ರಾಜಧಾನಿ ಮಣಿ ನಿವಹ ಮ

(ಇದರ ಕನ್ನಡ ರೂಪಾಂತರವನ್ನು ಕೆಳದಿಯ ಡಾ|| ಜಿ.ವಿ. ಕಲ್ಲಾಪುರ್ ರವರು ಮಾಡಿಕೊಟ್ಟಿದ್ದಾರೆ. ಅವರಿಗೆ ಧನ್ಯವಾದಗಳು)

ಆಧಾರ ಗ್ರಂಥಗಳು

1. *ಎಫಿಗ್ರಾಫಿಯಾ ಆಫ್ ಕರ್ನಾಟಕ ಭಾಗ*-I ಮತ್ತು II
2. *ಹರಿಹರದ ದೇವಾಲಯಗಳು* - ಡಾ. ಶಂಕರನಾರಾಯಣರಾವ್
3. *ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ*-ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
4. *ವಿಜಯನಗರ ಇತಿಹಾಸ* - ಎ.ಎಸ್. ನಂಜುಂಡಸ್ವಾಮಿ,
5. *ಎಂ.ಎ.ಆರ್.*1912



೬. ವಿಜಯನಗರದ ಪ್ರಾತಿನಿಧಿಕ ಶಾಸನ ರೂವಾರಿಗಳು

ಚೆನ್ನಕ್ಕ ಪಾವಟೆ

ವಿಜಯನಗರ ಸಾಮ್ರಾಜ್ಯ ಆಡಳಿತ, ಸಾಹಿತ್ಯ, ಸಂಸ್ಕೃತಿಗೆ ಹೆಸರುವಾಸಿಯಾದುದು. ಅಂದಿನ ಕಾಲದ ಶಾಸನ ಸಾಹಿತ್ಯ ಮಹತ್ವಪೂರ್ಣವಾದ ಪ್ರತಿಷ್ಠಿತ ದೊರೆಗಳ ಕಾಲದಲ್ಲಿ ಶಾಸನಗಳು ಹಲವಾರು ಪ್ರಕಾರದಲ್ಲಿ ಹುಟ್ಟಿವೆ. ಆದರೆ ಬಹುಸಂಖ್ಯೆಯ ಶಾಸನಗಳಲ್ಲಿ ರೂವಾರಿಗಳ ಹೆಸರಿಲ್ಲ, ಸಿಕ್ಕ ಉಲ್ಲೇಖಗಳನ್ನು ಗಮನಿಸಿಕೊಂಡು ಶಾಸನಕಾರರು ಮತ್ತು ಕಂಡರಣೆಕಾರರು ಎಂಬ ಭಿನ್ನ ಅಂಶಗಳನ್ನು ಗಮನಿಸಿಕೊಂಡು ವಿಷಯ ಸಂಗ್ರಹಿಸ ಲಾಗಿದೆ. ವಿಜಯನಗರದ ದೊರೆಗಳಲ್ಲಿ ಪ್ರೌಢಪ್ರತಾಪದೇವರಾಯ, ಕೃಷ್ಣದೇವರಾಯ, ಅಚ್ಯುತದೇವರಾಯ ಮತ್ತು ಹರಿಹರರ ಕಾಲದ ಕೆಲ ಶಾಸನಗಳಲ್ಲಿ ಶಾಸನ ರೂವಾರಿಗಳ ಉಲ್ಲೇಖಗಳಿವೆ. ಅಂದಿನ ಶಾಸನ ರೂವಾರಿಗಳ ಮಾಲಿಕೆಯಲ್ಲಿ ಧರಣೋಜ(1424), ಸೇನಬೋವ(1427), ವಿಠಣ(1426), ಆಕೋಜ(1429), ಚೆನ್ನಪ್ಪ(1430), ಕಲಿಕೋಜ(1430), ಪ್ರತಾಪರಾಯ(1431),ತಿರುಮಲ(1434),ಸುರೋದನಮಗ ನಿರೋಜ(1432), ಮೊದಲಾದವರ ಉಲ್ಲೇಖಗಳಿದ್ದು, ಅವರು ಅಂದಿನ ಕಾಲದಲ್ಲಿ ತಮ್ಮ ರಾಜರ ಆಡಳಿತಕ್ಕೆ ಕೊಟ್ಟ ದಾನದತ್ತಿಗಳ ಬಗ್ಗೆ ಹಲವಾರು ಶಾಸನಗಳನ್ನು ರಚಿಸಿಕೊಟ್ಟವರು. ಧರ್ಮನಾಥ ಪುರಾತನ ಕರ್ತೃ ಮಧುರ ಕವಿ ಪ್ರಸಿದ್ಧ ಹಂಪೆಯ ಶಾಸನ ರಚಿಸಿದ್ದು, ಅದರಲ್ಲಿ ಲಕ್ಷ್ಮೀರಥನ ತಾಯಿ ಹೇಳಿದ 'ಕೆರೆಯಂ ಕಟ್ಟಿಸು ಭಾವಿಯಂ ಸವೆಸು' ಎಂಬ ಪದ್ಯ ಕನ್ನಡನಾಡಿನ ಸಂಸ್ಕೃತಿ ಮಾತೃತ್ವದ ಮಹಿತಿ, ನೀತಿಯ ನುಡಿಗಳನ್ನು ಬಿಜ್ಜಳಿಸಿದೆ. ವಿಜಯನಗರದ ಒಂದೊಂದು ಶಾಸನಗಳು ಪುಟ್ಟ, ಪುಟ್ಟ ಚಂಪೂಕಾವ್ಯಗಳಿಂತಿದ್ದರೆ, ಕಾಲ ಶಾಸನಗಳು ಘಟನಾ ಪ್ರಧಾನ ವಿಷಯ ಗಳನ್ನೊಳಗೊಂಡಿದೆ.

ಗದ್ಯಕ್ಕೆ ದೊರೆತ ಪ್ರಾಸಶ್ಯ

ವಿಜಯನಗರ ಕಾಲದ ಗದ್ಯ ಭಾಷೆಯ ಬರವಣಿಗೆ ಮಹತ್ವಪೂರ್ಣವಾಗಿದೆ. ಈ ಕಾಲದಲ್ಲಿ ಕನ್ನಡ ಪಂಡಿತರು ಕಂಡ ವೃತ್ತಿ ವಿವಿಧ ಛಂದೋರೂಪಗಳನ್ನು ಬಳಸಿಕೊಂಡು ಪ್ರೌಢವಾದ ರೀತಿಯಲ್ಲಿ ಪಾಂಡಿತ್ಯಪೂರ್ಣ ಶಾಸನಗಳನ್ನು ರಚಿಸಿದ್ದಾರೆ, ಸಾಮಾನ್ಯಜನತೆ ಬರೆದ ಶಾಸನಗಳು ಆಡುಮಾತಿನ ಧಾಟಿಗೆ ಹೆಚ್ಚು ಸ್ಪಂದಿಸುವಂತೆ ರಚಿತವಾಗಿದೆ. ವರ್ಣನೆಗಳಿಗಿಂತ ಸಹಜವಾಗಿ ನೈಜ ಘಟನೆಗಳನ್ನು ಬರೆಯುತ್ತಾ ಹೋಗಿರುವರು. ಅಂದಿನ ಶಾಸನಗಳು ಸಾಮಾಜಿಕ ಸಾಂಸ್ಕೃತಿಕ ಬದುಕಿಗೆ ಕನ್ನಡಿ ಹಿಡಿದಿವೆ. ಶತಮಾನ

ಕಾಲಕ್ಕೆ ಸಾರ್ವಜನಿಕ ಸೊತ್ತಾದ ಶಿಲಾಶಾಸನಗಳ ಜೊತೆಗೆ ವೈಯಕ್ತಿಕ ಸೊತ್ತಾದ ತಾಮ್ರ ಶಾಸನಗಳು ಹೆಚ್ಚಾಗಿ ಪ್ರಕಟವಾಗಿದೆ. ಕಾಲಕ್ರಮೇಣ ಶಾಸನಗಳ ಬರವಣಿಗೆ ಕಡಿಮೆಯಾಗಿ ಶೈಲಿ ಸಡಿಲಗೊಂಡು ಆಡುವ ಮಾತಿನ ಸಹಜತೆ, ವ್ಯಾಕರಣ, ಶಿಲ್ಪನಿಯಮಗಳ ಉಲ್ಲಂಘನೆ ನಡೆದುದು ಶಾಸನಗಳಿಂದ ವಿದಿತವಾಗುತ್ತಿದೆ.

ಶಾಸನ ರೂವಾರಿಗಳು

ವಿಜಯನಗರದ ರೂವಾರಿಗಳು ಪದ್ಯಕ್ಕಿಂತ ಗದ್ಯಕ್ಕೆ ಪ್ರಾತಿನಿಧ್ಯ ನೀಡಿದ್ದಾರೆ. ಅಂದಿನ ಶಾಸನಗಳನ್ನು ಗಮನಿಸಿದರೆ ತತ್ಕಾಲೀನ ರಾಜಕೀಯ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಜೀವನದ ವಿವಿಧೋನ್ಮುಖ ಚಿತ್ರ ದೊರಕುತ್ತವೆ. ಅಂದು ಬಳಿಕೆಯಲ್ಲಿದ್ದ ಶಿಷ್ಟಭಾಷೆ ಜನಜೀವನದ ಆಚಾರ ಸಂಪ್ರದಾಯಗಳ ಆದರ್ಶಗಳು ಕಣ್ಮುಂದೆ ಕಟ್ಟುತ್ತವೆ. ಭಾಷೆ ಸಾಂಸ್ಕೃತಿಕ ದೃಷ್ಟಿಯಿಂದ ವಿಜಯನಗರ ಶಾಸನ ರೂವಾರಿಗಳಿಗೆ ವಿಶೇಷ ಮರ್ಯಾದೆ ಸಲ್ಲುತ್ತದೆ.

ರೂವಾರಿ ಧರಣೋಜ

ದಾವಣಗೆರೆಯ ೨೯ ನೆಯ ಶಾಸನ ರಚಿಸಿದ ಮಹಾಸನಾಯಕ ಧರಣೋಜ. ಪುಟ್ಟ ಚಂಪೂ ಕಾವ್ಯದಂತಿರುವ ಶಾಸನ ರಚಿಸಿದ ಈ ಕವಿ ೧೪೨೪ ರಲ್ಲಿ ವಿಜಯನಗರ ಸಂಸ್ಥಾನದಲ್ಲಿ ಶಾಸನರೂವಾರಿಯಾಗಿದ್ದು, ಈತನ ತಂದೆ ಮಾಚಿದೇವ ಶಾಸನಕವಿ. ಧರಣೋಜ ಹರಿಹರದವನು. ಹರಿಹರೇಶ್ವರ ವರಪ್ರಸಾದಿಂದ ಗದ್ಯ ಪದ್ಯ ರಚಿಸಲು ಪ್ರೇರಣೆ ಪಡೆದು ಇಂಥ ಶಾಸನ ರಚಿಸಲು ಸಮರ್ಥವಾಗಿರುವನೆಂಬುದು ಈತನ ದಿವ್ಯವಾಣಿ.

ಪ್ರೌಢ ಪ್ರತಾಪ ದೇವರಾಯ ಚಾರಿತ್ರಿಕ ದೊರೆಯಾದುದರಿಂದ ಪರಧರ್ಮ ಸಹಿಷ್ಣುತೆ ಅವನ ಮೈಮನಗಳಲ್ಲಿ ಹರಿಯುತ್ತಿರುವುದರಿಂದ ಅವನ ಮಂತ್ರಿಗಳು, ಸಾಮಂತರೂ ಇದೇ ಮನೋಭಾವನೆಯನ್ನು ಹರಡಿಸಿಕೊಂಡಿರುವರು. ವಿಜಯನಗರದ ದೊರೆ ದೇವರಾಯ ಮಹಾರಾಯನ ಕಾಲದಲ್ಲಿ ಓರ್ವ ಮಂತ್ರಿಯ ವಿಷಯವನ್ನು ಪ್ರಸ್ತುತ ಶಾಸನ ಒಳಗೊಂಡಿದೆ. ಧರಣೋಜ ಹರಿಹರೇಶ್ವರನನ್ನು ಕೊಂಡಾಡುತ್ತ ತನ್ನ ದೊರೆಯ ಆಶ್ರಿತರಾಗಿರಬಹುದಾಗಿದೆ. ರಾಜಕಾರ್ಯ ದುರಂಧರರೂ , ಉದಾರಿಗಳೂ ಎನಿಸಿದ ಚಾಮನೃಪಾಲ ಮತ್ತು ಬುಳ್ಳನೃಪರನ್ನು ಸ್ತುತಿಸಿದ್ದಾರೆ. 'ಸದ್ಧರ್ಮವೇಮೂರ್ತಿ ಯನುಕರಿಸಿತ್ತೋ ಸತ್ಕೃತಿಗಳೇ ಪುರುಷಾಕಾರಂ ತಾಳ್ದವೋ ಧರಕಲ್ಪಬೋಜಂ'ಎಂಬಂತೆ ಚಾಮನೃಪಾಲರನ್ನು ಹೊಗಳಿದರೆ 'ಸುಕೃತ ಸಮಾಜಂ ಗಂಡರ ಗೂಳಿವರಾನ್ವಯಂ' ಎಂದು ಬುಳ್ಳನೃಪನನ್ನು ಹೊಗಳಿದ್ದಾನೆ. ಕವಿಯ ಸಾಲಿಗೆ ಬುಳ್ಳನೃಪ ಸಾಕ್ಷಾತ್ 'ದ್ವಿತೀಯ ಭಗೀರಥನೇ ಧರೆಗಿಳಿದು ಬಂದಂತೆ' ಎಂದು ಸೂಚಿಸಿದ್ದಾನೆ.

ವೀರಭಗೀರಥಂ ಗಗನಗಂಗೆಯನುರ್ವಿಗೆ ತಂದನಂತದೇಂ
ಪೌರುಷಮಲ್ತು ಕೇಳ್ ಗಗನದಿಂ ಕೆಳಗಿರ್ದು ಹರಿದ್ರೆಯೆತ್ತಲುಂ
ಬಾರದಿರಲಲ್ಕೆ ಕಟ್ಟಿ ಪಿಡಿದಟ್ಟಿ ಹರೀಶಪುರಕ್ಕೆ ಕೊಂಡೋಂಬಂ
ದಿ ದೆಸೆಯೊಳ್ ಪೆಸರ್ವಡೆದ ಬುಳ್ಳಚನಿದೇಂ ಸೌಭಾಗ್ಯನೋ||

'ಪರಶಿವಗಂಗೆಯನ್ನು ತನ್ನ ಸಿರಿಮುಡಿಯಲ್ಲಿ ಅಡಗಿಸಿಕೊಂಡು ಭುವಿಗೆ ತಂದಂತೆ'

ಎಂಬ ಕವಿಯ ಕಲ್ಪನೆ ಮನೋಜ್ಞವಾಗಿದೆ. ಶಾಸನದಲ್ಲಿ ಕವಿಯ ದಿಟ್ಟ ಪ್ರಸಂಗವೊಂದು ಎಡೆಪಡೆದಿದೆ. 'ಒಂದು ಪ್ರಸಂಗದಲ್ಲಿ ಬುಳ್ಳನೃಪ ಕಟ್ಟಿದ ಈ ಅಣೆಕಟ್ಟು ಒಡೆಯಬಹುದು. ಆದರೆ ಕವಿ ಕಟ್ಟಿದ ಈ ಕಾವ್ಯಕಟ್ಟು ಶಾಶ್ವತವಾದುದು'ಎಂಬುದು ಆ ದಿಟ್ಟ ಪ್ರಸಂಗ. ತನ್ನ ನೆಚ್ಚಿನ ಸಚಿವನಾದ ಬುಳ್ಳನೃಪನ ಔದಾರ್ಯ ಸಾಮರ್ಥ್ಯವನ್ನು ಕವಿ ಇಲ್ಲಿ ಚಿರಸ್ಥಾಯಿಗೊಳಿಸಿದ್ದಾನೆ. ಪ್ರೌಢದೇವರಾಯನ ಆಳ್ವಿಕೆಯ ಪ್ರಾರಂಭಿಕ ಈ ಶಾಸನ ಅಂದಿನ ಕೃಷಿ ಸಂಪನ್ಮೂಲಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಿದ ಮಹತ್ವವನ್ನು ಪ್ರಕಟಿಸುವಲ್ಲಿ ಯಶಸ್ವಿಯಾಗಿದೆ.

ಕಾವ್ಯದೃಷ್ಟಿ ಶ್ರೇಷ್ಠ ಕಾವ್ಯಗಳಿಂದ 'ಹಾಡುವಳ್ಳಿ'ಶಾಸನ ಸುಪ್ರಸಿದ್ಧವಿದೆ. ಈ ಶಾಸನ ಬರೆದವನ ಹೆಸರು ಲುಪ್ತವಾಗಿದೆ . ಕ್ರಿ.ಶ.೧೪೫೯, ರಚಿತವಾದ ಮಾಣಿಕಸೇನನೆಂಬ ಜೈನಯತಿ ತನ್ನ ಜೀವನದ ನಿಸ್ಸಾರತೆಯನ್ನು ಮನಗಂಡು ಸಲ್ಲೇಖನ ವ್ರತಧಾರಿಯಾಗಿ ಸಮಾಧಿ ಮರಣ ಕೈಕೊಂಡ ಉಲ್ಲೇಖವಿದೆ. ಸುಂದರವಾದ ಕಂದ ವೃತ್ತಗಳಿಂದ ಒಡಗೂಡಿದ ಸುಂದರಪದ್ಯ ಸಮಾಧಿ ಮರಣ ಸಾಂದರ್ಭಿಕ ಶ್ರೇಷ್ಠ ಕಾವ್ಯಗಳಲ್ಲೊಂದಾಗಿದೆ. ಇಲ್ಲಿರುವ ಮಾಣಿಕಸೇನ ಸಲ್ಲೇಖನೆಯ ವರ್ಣನೆ.

ಅನ್ನ ರಸಂಗಳಿಕ್ಷುರಸಮಂಬರ ಪಾಶಾರ್ಥವಾರಿಯಂ
ಸಿನ್ನು ತರಂಥ್ರ ಪಂಚ ದಶಸನ್ನೆರಡಾರುದಿನಗಳಂತಿರ್ದ್ದಂ
ಮನ್ನಿಸಿ ಪಾನ್ಯ ನಾಲ್ಕೆರಡ ನಾಲ್ಕೆರದೊಂದನೆ ಸೇವಿಸುತ್ತಮು
ತ್ವನ್ನ ಸತ್ವತ್ತಿನ ಪ್ರೇಮನ ಮಾಣಿಕಸೇನ ಮುನಿಂದ್ರನಿರ್ದಪಂ||.

ಜೈನ ಧರ್ಮದ ಅನಶನ ವ್ರತೋಪವಾಸ ಸನ್ಯಸನ ಮೇಲ್ಮೆಯನ್ನು ಸಾರಿ 'ಪಂಚಪನ್ನೆರಡಾರು' ದಿನಗಳಲ್ಲಿ ಸಮಾಧಿಮರಣ ಪಡೆದುದನ್ನು ಪದ್ಯ ವರ್ಣಿಸಿದೆ. ಇದೊಂದು ಸುಂದರವಾದ ನಿಷಧ ಶಾಸನ.

ವಿಜಯನಗರದ ಶಾಸನ ಕವಿಗಳ ಮಾಲಿಕೆಯಲ್ಲಿ ಕವಿ ಲಿಪಿಕಾರ ರೂವಾರಿಗಳ ನಿವೇಶನದಲ್ಲಿ ಲಿಖಿತಂ, ಬರೆದಂ, ಬರೆಪಂ ಮೊದಲಾದ ವಿಶಿಷ್ಟ ಪದಗಳಿದ್ದು ಭಾಷೆಗೆ ಸೌಂದರ್ಯ ತಂದಿವೆ. ಕವಿಗಳಿಗೆ 'ಸುಕವಿ' 'ಬಳ್ಗವಿ' ಇತ್ಯಾದಿ ಬಿರುದುಗಳು, ಲಿಪಿಕಾರರಿಗೆ ಬರೆದಾಚಾರ್ಯ, ಬಿರುದು ಲೇಖಕ, ಮದನಮಹೇಶ್ವರ , ಶ್ರೀಕರಣ ಇತ್ಯಾದಿ ಬಿರುದುಗಳು ನಿಯೋಗಪ್ರಭು ಸಂದಿವಿಗ್ರ ಕುಳಕರಣಿ, ಸೇನಬೋವ, ಕಾಯಸ್ಥ, ಗಣಕರು,

ಲೇಖನಕಾರ ಮುಂತಾದ ಪದಗಳಿವೆ. ರೂವಾರಿಗಳದು ವಂಶಪರಂಪರೆಯಾಗಿ ಬಂದ ವೃತ್ತಿ. ಅಕ್ಕಸಾಲಿಗ, ಕಮ್ಮಾರ, ಕಂಚಗಾರ, ಗಾವುಂಡ, ರೂವಾರಿ ಎಂಬ ವಿಶೇಷಣಗಳ ಹೆಸರಿನ ಮುಂದೆ, ಆಚಾರಿ, ಶಿಲ್ಪಿ, ಎಂಬ ಉಪಸರ್ಗಗಳೂ ವಿಶೇಷ. ಕ್ರಿಯಾಪದ ಸ್ಥಾನದಲ್ಲಿ ಕಂಡರಿಸು, (ಕಂಡಳಿಸು), ಬೆಸಕೆಯ್, ಬೆಸ್, ಹೊಯ್, ಪೊಯ್, ಕಲ್ಪೆಸ, ಕಲ್ಲಂಗಡಿ, ಕಲ್ಲಿಹೊಯಿ, ಕಲ್ಲಿಗೆಯಿ, ಶಿಲಾಕರ್ಮಿ, ತಿದ್ದು, ಸಮ ಲಿಖಿತ, ಕೆಲಸ, ಶಿಲ್ಪಿ, ಬರೆದ ಮೊದಲಾದ ಪದಗಳು ಬರುತ್ತವೆ.

ಹೀಗೆ ಈ ಪರಭಾಷೆಯಿಂದ ಸಮಕಾಲೀನ ಸಮಾಜದ ಶಿಲ್ಪಿ ರೂವಾರಿಕ್ಷೇತ್ರಗಳ ಪರಿಚಯ ಸಾಧ್ಯವಾಗುತ್ತಿದೆ. ಗ್ರಂಥಸ್ಥಭಾಷೆಯ ಮೂಲಕ ಆದರ್ಶ ಬದಕನ್ನು ರೇಖಿಸುವ ಕಾವ್ಯ ಸಾಹಿತ್ಯದಲ್ಲಿ ಕಂಡುಬಾರದ ಈ ವಿವರ ಪ್ರಾಚೀನ ಕರ್ನಾಟಕದ ಅದರಲ್ಲೂ ವಿಜಯನಗರ ಸಾಂಸ್ಕೃತಿಕ ಅಧ್ಯಯನಕ್ಕೆ ವಿಶೇಷ ಸಂಪತ್ತು ಎನಿಸಿದೆ.

ಪಂಡಿತ ಕವಿ

ಮೂಡುಬಿದುರೆಯ ಕ್ರಿ.ಶ.೧೪೩೦ ನೆಯ ಜೈನ ಶಾಸನದಲ್ಲಿ ಚಂದ್ರಪ್ರಭ ಸ್ತುತಿ, ಮೇರುಶೈಲಿ ಆರ್ಯಚಂದ್ರ, ತುಳು ದೇಶ, ಮಂಗಳೂರು, ವಂಶಪುರ, ವೇಣುಪುರ, ತ್ರಿಭುವನಚೂಡಾಮಣಿ ಚೈತ್ಯಾಲಯಗಳ ಮನೋಹರ ವರ್ಣನೆ ಗುಡಿಗಟ್ಟಿ ನಿಂತಿದೆ. 'ಬಿನದಕ್ಕೆಡೆಯಾದ ತಾಣದಿಂದೊಪ್ಪುವ ತುಳುನಾಡಿನಲ್ಲಿ ಚೆಲ್ವಾದ ವಂಶಪುರವು ಅನುರಾಗಕ್ಕೆಡೆಯಾಗಿ' ಸಂಚರಿಸುವ ನಾರಿವೃಂದದಿಂದ ಕಾವ್ಯ ಪ್ರೌಢಿಮೆಯಿಂದ ವಿಕ್ರಮತೆಯಿಂದಲೂ ಪರಿಶೋಭೆಗೊಂಡವು. ಇಲ್ಲಿನ ಪುರುಷ ಬಾಲರೆಲ್ಲರೂ ಜಿನಧರ್ಮ ಪಾಲಕರೆನಿಸಿದ್ದಾರೆ. ಸ್ತ್ರೀಯರು ಬಾಲೆಯರು 'ಆತ್ಮನಾಥಂಗನುಕೂಲೆಯರು ಎಂದೊಡಂ ನಾಲಿಗೆಯಾಂಗುಂಟು ಪೊಗಳೆಲೆಂದು'ಕವಿ ಪಂಡಿತ ಉದ್ಗಾರ ತೆಗೆದಿದ್ದಾನೆ. ಇಲ್ಲಿ ಬಂದಿರುವ ಸಾಮಂತ ಭೈರವೇಂದ್ರನ ವರ್ಣನೆ ಪ್ರತಾಪ, ಶಾಸನ ಸಾಹಿತ್ಯದಲ್ಲಿ ಒಡಮಾಡಿದ ವೀರಶೈಲಿ ಮೆಚ್ಚಿಕೊಳ್ಳುವಂತಿದೆ.

ಕಲುರೆ ತುಳ್ಕಿ ದಿಕ್ಪತಿಗಳಳಲ್ಕೆ ದಿಶಾಗಡಮುಳ್ಕೆ ಭೂತಳಂ.
ಜಡಿಯೆ ಕುಲಾಂಚಲಂ ಕಡೆಯ ವೈರಿ ನೃಪಾಲಕ ಹೃದಯಂಗಳುಂ
ತೊಡೆಯೆ ಧಡಂ ಧಡಂ ಧಡಂಧಡಂದುದು ಭೂರಿ ಗಂಭೀರ ಭೇರಿದಿಂ
ಕಿಡಿ ವಿಜಯ ಪ್ರಯಾಣದೊಳ್ ಬೈರವಭವರನೇಂ ಪ್ರತಾಪಿಯೋ||

ಯುದ್ಧಕ್ಕೆ ಸಿದ್ಧವಾಗಿ ಹೊರಟ ಭೈರವೇಂದ್ರನ 'ದಡಂ ದಡಂ ಧಡಧಡಂ'ಎಂಬ ಶಬ್ದ ಮಾರ್ದನಿಸಿದೆ. ಇಲ್ಲಿಯ ವೀರವೇಷದ ಗತ್ತುಗಾರಿಕೆ ಭೈರಭೂಪನ ಅಟಾಟೋಪಕ್ಕೆ ಕುಂದಣವನ್ನಿಟ್ಟಂತಾಗಿದೆ.

ಈ ಎಲ್ಲ ಶಾಸನಗಳಲ್ಲಿ ಅದ್ವಿತೀಯವೆನಿಸಿದುದು ಹಂಪೆಯ ಶಾಸನ. ಪ್ರೌಢ ಪ್ರತಾಪ ದೇವರಾಯನ ಮಂತ್ರಿ, ಲಕ್ಷ್ಮೀಧರದಂಡನಾಯಕ ಚಿಕ್ಕವನಿದ್ದಾಗ ಆತನ ತಾಯಿ ಮಗನಿಗೆ ಹಾಲು ಕುಡಿಸುವ ಸಂದರ್ಭದಲ್ಲಿ ಹೇಳಿರುವ ನೀತಿನುಡಿಗಳು ಕಲ್ಲೋಳು ಬರೆದಿಟ್ಟ ಅಕ್ಕರಗಳಿಂತಿವೆ. ಮುಂದೆ ಲಕ್ಷ್ಮೀಧರ ದೊಡ್ಡವನಾದಾಗ ಅನೇಕ ಮಹತ್ವದ ಸಾಮಾಜಿಕ ಕಾರ್ಯಗೈದಿರುವನು.

ಲಕ್ಷ್ಮೀಧರದಂಡನಾಯಕನ ಸ್ವಪ್ನದಲ್ಲಿ ವಿಘ್ನೇಶ್ವರನು ಬಂದು 'ಮಾಲ್ಯವಂತ ಪರ್ವತದ ದಕ್ಷಿಣ ಭಾಗದಲ್ಲಿಅಕೃತ್ರಿಮಣವಾದ ಒಂದು ಗುಹೆ ಇದೆ. ಅಲ್ಲಿ ನನ್ನನು ಪ್ರತಿಷ್ಠಿಸು'ಎಂದಂತಾಗಲು ಮಂತ್ರಿ ಹಸಾದವೆಂದು ಅಲ್ಲಿ ಗಣಪತಿ ವಿಗ್ರಹ ಪ್ರತಿಷ್ಠಾಪಿಸಿ ದತ್ತಿಬಿಟ್ಟನೆಂದು ಶಾಸನ ತಿಳಿಸಿದೆ. ಲಕ್ಷ್ಮೀಧರದಂಡನಾಯಕ ರಚಿಸಿದ 'ನೀತಿವಾಕ್ಯಾಮೃತ' 'ಆನಂದ ರಾಮಾಯಣ', 'ಕೃಷ್ಣಲೀಲಾ'ಎಂಬ ಕೃತಿಗಳು ಇಂದಿಗೂ ದೊರೆಕಿಲ್ಲ. ಆತ ಚಿಕ್ಕವನಾಗಿದ್ದಾಗ ಆತನ ತಾಯಿ ಕಲಿಸಿದ ನುಡಿ ಮುತ್ತು.

ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾ
ಗಾಱಮಂ ಮಾಡಿಸಜ್ಜರೆಯೊಳ್ಪಿಲ್ಕಿಥನಾಥರಂ ಬಿಡಿಸು.
ಮಿತ್ರಗಿಂಬುಕೆಯ್ ನಂಬಿದರ್ಗೆರೆವೆಟ್ಟಾಗಿರು ಶಿಷ್ಟರಂ
ಪೊರೆಯನುತ್ತೆಂತಲ್ಲವಂ ಪಿಂದೆತಾಂಯೇಱೆದೆಳ್ಪಾಲೆಱೆವಂದು
ತೊಟ್ಟು ಕಿವಿಯೊಳ್ ಲಕ್ಷ್ಮೀಧರಮಾತ್ಯನಾ||

ಎಂಬ ಅವಳ ನೀತಿವಾಕ್ಯಾಮೃತ ಇಂದಿನ ಮಹಿಳೆಯರಿಗೆ ಮಾರ್ಗದರ್ಶನ ನೀಡು ವಂತಿದೆ. ನಾವು ಅವಳ ನೀತಿಯಂತೆ ನಡೆದರೆ ನಮ್ಮ ಮಕ್ಕಳೂ ಮುಂದೆ ಸತ್ಪ್ರಜೆ ಯಾಗುವರು.

ಸಭಾಪತಿ ಕವಿ

ಕ್ರಿ.ಶ. ೧೫೧೩, ೧೫೧೭, ಮತ್ತು ೧೩೨೧ ನಂಜನಗೂಡು ಮತ್ತು ಗುಂಡ್ಲುಪೇಟೆ ಮೂರು ತಾಮ್ರ ಶಾಸನಗಳ ಸಭಾಪತಿ ವಿಜಯನಗರದ ಅರಸ ಕೃಷ್ಣದೇವರಾಯನ ಹಲವಾರು ಶಾಸನಗಳ ಕರ್ತೃವಾದ ಆತ ಪರಿಚಿತ ಶಾಸನಕವಿಯಾಗಿದ್ದಾನೆ. ಆಸ್ಥಾನ ಕವಿಯಾದ ಈತ ಅಚ್ಯುತರಾಯನ ಕಾಲದಲ್ಲಿ ಮುಂದುವರೆದಂತಿದೆ. ಸಲಕರಾಜನ ಮಗನಾದ ತಿರುಮಲ ಹಾಕಿಸಿದ ನಂಜನಗೂಡು ೧೧೫ ನೆಯ ಶಾಸನಗಳ ಕರ್ತೃವೂ ಸಭಾಪತಿಯೆ. ಈತನ ಕಾಲ ೧೫೪೩, ಹೆಸರನ್ನು ಆಧರಿಸಿದಂತೆ ಇವನೊಬ್ಬ ಬೇರೆ ಸಭಾಪತಿಯಾಗಿರುವ ಸಾಧ್ಯತೆ ಇದೆ. ಮೇಲಿನ ಸಭಾಪತಿಯೆ ಈತನೆಂದು ಹೇಳಿದರೆ ಈ ಶಾಸನಕವಿ ಮೂರು ದಶಕಗಳಿಗಿಂತಲೂ ಅಧಿಕವಾದ ಅಧಿಕಾರದಲ್ಲಿದ್ದಂತಾಗುತ್ತದೆ. ಇಷ್ಟು ದೀರ್ಘಕಾಲ ಒಬ್ಬ ಅಧಿಕಾರದಲ್ಲಿರುವುದು ಅಸಂಭವವೇ.

ಇತರರು

ಈ ಸಭಾಸತಿ ಕುಂಭಕೋಣಂದ ಕುಂಭಲಿಂಗನ ಮಗ. ಇವನ ಜೊತೆ ನರಸಿಂಹಾಚಾರ್ಯನ ಮಗ ನೃಹರಿ ಎಂಬ ಮತ್ತೊಬ್ಬ ಹೊಸಕವಿ ಬೆಳಕಿಗೆ ಬಂದಿದ್ದಾನೆ. ಕ್ರಿ.ಶ. ೧೫೪೦ ಲೋಕ್ಕಿರೆಯ ಶಾಸನವೊಂದು 'ಅಪ್ಪಾಜಿ ಚೌವೀಸನ ಬರೆದ' ಎಂದು ತಿಳಿಸಿದೆ. ಅಚುತರಾಯನ ಕಾಲದಲ್ಲಿ ಮಂಗಣಾಚಾರ್ಯರ ಮಗ ವೀರಣ್ಣ, ಸೋಮಯ್ಯನ ಮಗ ಈಶ್ವರಯ್ಯ, ಶಿವದೇವ, ಅರಸನಕೆರೆಯ ಪರಮಣ್ಣನ ಮಗ ಇರುಗಣ್ಣ, ಪೆರುಮಾಳ ದೇವ, ಮಹಲಿಂಗಯ್ಯ, ಕೀರ್ತಿನಾರಾಯಣ, ಸೋಮನಾಥ ಇವರೆಲ್ಲ ಅಂದಂದಿನ ಶಾಸನಕವಿಗಳು. ತೀರ್ಥಹಳ್ಳಿಯ ೧೪೩೨ ರ ಕೊರಕೋಡು ಶಾಸನವೊಂದು ವೀರಪ್ರತಾಪ ದೇವರಾಯನ ಕಾಲದಲ್ಲಿ ಸಾತಳಿಗೆನಾಡ ಕೋಳುಧಳಿಗೆ ಪಠಾವಳಿ ಬಂದು ಕಾದಿದಲ್ಲಿ ಬೊಮ್ಮರಸ ಹೆಗ್ಗಡೆಯ ಮಗ ಪುಟ್ಟ ಪಡೆವಳನು ಮುಂದು ರಣರೊಳಗೆ 'ಕುಮಾರರಾಮನ ಪ್ರತಾಪವಾಗಿ' ಅಂಬುಗೂಡಿಗಾಗಿ ಸ್ವರ್ಗವನ್ನು ಸೂರೆಗೊಂಡಾಗ, ಜೋಯಿಸ ಶಿವಗಂಗ ಐದು ಸಲಗೆ ಭೂಮಿಯನ್ನು ದತ್ತಿಯಾಗಿ ಕೊಟ್ಟಂತೆ ತಿಳಿಸಿ ಬರೆದವ ಸುರೋಜನ ಮಗ ನಿರೋಜನನೆಂಬವ ಅರಗದ ಕಲ್ಲಿನಾದ ದೇವರಿಗೆ ಅಮೃತಪಡಿಗೆ ದೇವರ ಉಪಾಹಾರದ ಕಟ್ಟಲೆಯಾಗಿ ಬರೆದ ಶಾಸನದ ರೂವಾರಿ ವೀರಣ್ಣ ಎಂದು ಶಾಸನ ಸೂಚಿಸಿದೆ.

ಒಟ್ಟಿನಲ್ಲಿ ವಿಜಯನಗರ ಅರಸರ ಕಾಲದಲ್ಲಿ ಜರುಗಿದ ಸಾಹಿತ್ಯ ಸಾಧನೆ ಬೋಧನೆ ಅಷ್ಟೇ ಆದರ್ಶಪ್ರಾಯವಾಗಿದ್ದು, ಬಾಳಿಗೆ ಬೆಳಕಾಗಿದೆ. ಸಿದ್ಧಾಂತಕ್ಕೆ ನೆಲೆಯಾಗಿದೆ. ಸಾಹಿತ್ಯಕ್ಕೆ ನೂತನ ಮಾರ್ಗ ಕಲ್ಪಿಸಿದೆ. ಅರಮನೆ ಗುರುಮನೆಗಳಿಂದ ಏಕಕಾಲದಲ್ಲಿ ಹೊರಬಂದ ಕನ್ನಡದ ಉಜ್ವಲ ಸಾಹಿತ್ಯಿಕ ಪರಪಂರೆಗೆ ನಿದರ್ಶನವಾಗಿದೆ. ಸಾಹಿತ್ಯದಲ್ಲಿ ಸೃಷ್ಟಿಕ್ರಿಯೆಯೊಡನೆ ಅನುಸೃಷ್ಟಿಯ ಅಷ್ಟೇ ಮಹತ್ವ ಪೂರ್ಣವಾದುದು ಎಂಬ ವಿಚಾರ ವಿಮರ್ಶೆಗೆ ಈ ಕಾಲ ಒಂದು ಮಾದರಿಯಾಗಿದೆ. ಅಂದಿನ ಪ್ರೇರಣೆ ಪ್ರಭಾವಗಳು ಯುಗಪರಿವರ್ತನೆಯ ಲಕ್ಷಣಗಳನ್ನು ಪಡೆದಿವೆ. ಕನ್ನಡ ಸಾಹಿತ್ಯವು ಮಾರ್ಗದಿಂದ ದೇಸಿಯತೆಗೆ ತಿರುಗಿದ ಸಂಕ್ರಮಣ ಕಾಲ ಇದಲ್ಲ. ಇದರ ಸಂಕ್ರಮಣಾವಸ್ಥೆ ಮುಗಿದು ಸಮಗ್ರದೃಷ್ಟಿ ಹಾಗೂ ಸ್ವತಂತ್ರ ಪ್ರತಿಭೆಗಳು ಮೇಳವಿಸಿ ಸತ್‌ಚಿಂತನದಿಂದ ಹೊರಬಂದ ಸಮೃದ್ಧ ಸಾಹಿತ್ಯ ಕಾಲವು ಇದಾಗಿದೆ. ವೀರಶೈವ ಕೃತಿಗಳ ನೂತನ ವಿಚಾರೋದಯದಿಂದ ಇಂದು ಚರಿತ್ರೆಯಲ್ಲಿ ವಸಂತಕಾಲವಾಗಿದೆ. ಇಲ್ಲಿಯ ಮೌಲ್ಯಗಳು ಸಾರ್ವಕಾಲಿಕ ಮೌಲ್ಯಪ್ರದವಾಗಿದೆ.

೭. ಶಿವಮೊಗ್ಗ ತಾಲ್ಲೂಕಿನ ಶಾಸನಗಳಲ್ಲಿ ವಿಜಯನಗರ ಅರಸರು

ಜಯದೇವಪ್ಪ ಜೈನಕೇರಿ

ದಕ್ಷಿಣ ಭಾರತದ ಬಹುಭಾಗವನ್ನು ಅತ್ಯಂತ ವೈಭವದಿಂದ ಆಳಿದ ವಿಜಯನಗರ ಅರಸರು ಶಿವಮೊಗ್ಗ ತಾಲ್ಲೂಕಿನಲ್ಲಿ ಅನೇಕ ದಾನ ದತ್ತಿಗಳುನ್ನು ನೀಡಿ ಶಾಸನಗಳನ್ನು ರಚಿಸಿರುವುದು ಕಂಡುಬರುತ್ತದೆ. ವಿಜಯನಗರ ಅರಸರು ಚಕ್ರವರ್ತಿಗಳಾಗಿದ್ದು ಆಡಳಿತದ ಅನುಕೂಲಕ್ಕಾಗಿ ಅಲ್ಲಲ್ಲಿ ಅನೇಕ ಪ್ರಾಂತೀಯ ಅರಸುಗಳಿಗೆ ಪಾಳೆಗಾರರಿಗೆ ಸ್ವತಂತ್ರ ವಾಗಿ ಆಳಲು ಅವಕಾಶ ನೀಡಿದ್ದರು. ಇತಂಹ ತುಂಡರಸರು ಚಕ್ರವರ್ತಿಗಳಿಗೆ ನಿಷ್ಠರಾಗಿ ಅವರ ಹೆಸರಿನಲ್ಲೇ ದಾನದತ್ತಿ ನೀಡಿದ ಉಲ್ಲೇಖಗಳಿವೆ. ಈ ಹಿನ್ನೆಲೆಯಲ್ಲಿ ಶಿವಮೊಗ್ಗ ತಾಲ್ಲೂಕಿನಲ್ಲಿ ಇದುವರೆಗೆ ದೊರಕಿರುವ ವಿಜಯನಗರ ಅರಸರ ಕಾಲದ ಶಾಸನಗಳ ವೈಶಿಷ್ಟ್ಯಗಳನ್ನು ಪರಿಶೀಲಿಸುವ ಪ್ರಯತ್ನ ಮಾಡಲಾಗಿದೆ.

ಶಿವಮೊಗ್ಗ ತಾಲ್ಲೂಕಿನಲ್ಲಿ ಪ್ರಾಚೀನವಾಗಿ ನವಶಿಲಾಯುಗದ ಮಾನವನು ವಾಸಿಸುತ್ತಿದ್ದ ಅವಶೇಷಗಳು ದೊರಕಿದೆ. ಶಿವಮೊಗ್ಗ ಸಮೀಪದ ಗುಡ್ಡೇ ಮರಡಿಯ ಬುಡದಲ್ಲಿ ನವಶಿಲಾಯುಗದ ನಿವೇಶನವನ್ನು ಕುರುಹುಗಳನ್ನು ಖ್ಯಾತ ವಿದ್ವಾಂಸರಾದ ಡಾ.ಅ.ಸುಂದರ ಅವರು ಗುರುತಿಸಿದ್ದಾರೆ. ಇತಿಹಾಸ ಕಾಲಕ್ಕೆ ಬಂದರೆ ಮೌರ್ಯರ ಕಾಲದ ಆಳ್ವಿಕೆಯ ಕುರುಹುಗಳು ಜಿಲ್ಲೆಯಲ್ಲಿ ದೊರಕಿವೆ. ಬೌದ್ಧರ ಕಾಲದ ತಾರಾ ಭಗವತಿ ಮತ್ತು ಕುಬ್ಜರ ಶಿಲ್ಪಗಳು ಬಳ್ಳಗಾವಿ ಮತ್ತು ತೊಗರ್ಸಿಗಳಲ್ಲಿ ಕಂಡುಬರುತ್ತವೆ. ಬಂದಳಿಕೆಯಲ್ಲಿರುವ ಹೊಯ್ಸಳ ಶಾಸನಗಳಲ್ಲಿ ನಂದರು ಮತ್ತು ಮೌರ್ಯರು ಕುಂತಲ ನಾಡನ್ನು ಆಳಿದ ಉಲ್ಲೇಖಗಳಿವೆ. ಸಾತವಾಹನರ ಆಳ್ವಿಕೆಗೂ ಶಿವಮೊಗ್ಗ ಜಿಲ್ಲೆ ಒಳಪಟ್ಟಿತ್ತೆಂದು ತಿಳಿದುಬರುತ್ತದೆ.

ಕರ್ನಾಟಕದ ಪ್ರಥಮ ರಾಜಮನೆತನವೆಂದು ಹೆಸರಾದ ಕದಂಬರ ಮೂಲ ಪುರುಷರು ಶಿವಮೊಗ್ಗ ಜಿಲ್ಲೆಯ ಸ್ಥಾನಕುಂದೂರು ಅಥವಾ ಈಗಿನ ತಾಳಗುಂದದವರು. ನಾಲ್ಕನೇ ಶತಮಾನದ ನಂತರ ತಲಕಾಡಿನ ಗಂಗರು ಆಳಿದರೆಂಬ ಶಾಸನಗಳನ್ನು ಡಾ.ಹಂ.ಪ.ನಾಗರಾಜಯ್ಯನವರು ಗುರುತಿಸಿದ್ದಾರೆ. ಗಂಗರು 11ನೇ ಶತಮಾನದವರೆಗೆ ಸ್ವತಂತ್ರರಾಗಿ, ಕೆಲವೊಮ್ಮೆ ಬಾದಾಮಿ ಚಾಳುಕ್ಯರ, ರಾಷ್ಟ್ರಕೂಟರ ಸಾಮಂತರಾಗಿ ಜಿಲ್ಲೆಯನ್ನು ಆಳಿದ್ದಾರೆ. ನಂತರದಲ್ಲಿ ಕಲ್ಯಾಣ ಚಾಲ್ಯುಕರ ಆಳ್ವಿಕೆಗೆ ಒಳಪಟ್ಟಿತು.

ಅದೇ ಕಾಲದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ನಡೆದ ಸಾಮಾಜೋಧಾರ್ಮಿಕ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ ಅಲ್ಲಮ ಪ್ರಭುದೇವರು, ಅಕ್ಕಮಹಾದೇವಿ ಮುಂತಾದ ಶರಣರು ಶಿವಮೊಗ್ಗ ಜಿಲ್ಲೆಗೆ ಸೇರಿದವರು. ನಂತರದ ಹೊಯ್ಸಳರ ಕಾಲದಲ್ಲಿ ಶಿವಮೊಗ್ಗ ಜಿಲ್ಲೆ ಸಮೃದ್ಧಿಯನ್ನು ಪಡೆಯಿತು. ಗಂಗರು, ಕಲ್ಯಾಣ ಚಾಳುಕ್ಯರು, ಹೊಯ್ಸಳರಿಗೆ ಸಾಮಂತರಾಗಿ ಹೊಂಬುಜದ ಶಾಂತರರು ಆಳಿದ್ದಾರೆ. ಇವರೆಲ್ಲರೂ ಕನ್ನಡ ನಾಡಿನ ಸಂಸ್ಕೃತಿ, ಕಲೆಗಳಿಗೆ ಸಾಹಿತ್ಯಕ್ಕೆ ವಿಶೇಷವಾದ ಗೌರವವನ್ನು ನೀಡಿದ್ದಾರೆ. ದಾನ, ದತ್ತಿಗಳನ್ನು ನೀಡಿ ಶಿಲಾಶಾಸನಗಳಲ್ಲಿ ದಾಖಲಿಸಿದ್ದಾರೆ. ಕ್ರಿ.ಶ.1334ರಲ್ಲಿ ಆರಂಭವಾದ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಗೆ ಒಳಪಟ್ಟ ಶಿವಮೊಗ್ಗ ತಾಲ್ಲೂಕಿನ ಶಾಸನಗಳನ್ನು ಮಾತ್ರ ಪ್ರಧಾನವಾಗಿ ಚರ್ಚಿಸಲಾಗಿದೆ.

ಶಿವಮೊಗ್ಗ ಜಿಲ್ಲೆ ವಿಜಯನಗರ ಸಾಮ್ರಾಜ್ಯದ ಪ್ರಮುಖ ಭಾಗವಾಗಿತ್ತು. ಜಿಲ್ಲೆಯ ಆರಗ ಮತ್ತು ಚಂದ್ರಗುತ್ತಿಗಳು ಪ್ರಾಂತೀಯ ಮುಖ್ಯ ಸ್ಥಳಗಳಾಗಿದ್ದವು. ಅಧಿಕೃತ ದಾಖಲೆಗಳ ಪ್ರಕಾರ ಇದುವರೆಗೆ ವಿಜಯನಗರ ಕಾಲದ 5 ಶಿಲಾ ಶಾಸನಗಳು 7 ತಾಮ್ರ ಶಾಸನಗಳು *E.C.*Vol 13ರಲ್ಲಿ ಪ್ರಕಟವಾಗಿದೆ. ಇಲ್ಲಿ 5ಶಿಲಾ ಶಾಸನಗಳನ್ನು ಕುರಿತು ಚರ್ಚಿಸಲಾಗಿದೆ. ಶಿಲಾ ಶಾಸನಗಳು, ಲಿಪಿ ಕನ್ನಡ.

1. ಶಿವಮೊಗ್ಗ ತಾಲ್ಲೂಕು ಕಲ್ಲುಕುರ್ಚಿ ಬೇಚರಾಕ್ ಗ್ರಾಮದ ಪಾಳುದೇಗುಲದ ಬಳಿ ಬಿದ್ದಿರುವ ತುಂಡು ಕಲ್ಲಿನ ಶಾಸನ ಸಂ13(ರಿ. 1923-114)ವಿಜಯನಗರದ ಅರಸು ಬುಕ್ಕನ ಕಾಲಕ್ಕೆ ಸೇರಿದೆ. 14ನೇ ಶತಮಾನಕ್ಕೆ ಸೇರಿರುವ ಈ ಶಾಸನದಲ್ಲಿ ಆಷಾಢ ಬ.30ಗುರುವಾರ ಎಂದು ದಾಖಲಾಗಿದೆ. ತ್ರುಟಿತವಾಗಿರುವ ಈ ಶಾಸನ ಅಪೂರ್ಣವಾಗಿದೆ. ವಿಜಯನಗರದಲ್ಲಿ ವೀರ ಬುಕ್ಕರಾಯ ರಾಜ್ಯವಾಳುತ್ತಿರುವಾಗ ಲವಂಕ ನಾಡಿನ ನಾಗಣ್ಣ ಪ್ರಾಂತ್ಯಾಧಿಕಾರಿಯಾಗಿದ್ದಾಗ ನಾಗವೆಗ್ಗಡೆ ನೇಮತ್ತಿಯ (ಈಗಿನ ನ್ಯಾಮತಿ) ವೀರಣ್ಣಗೆ ದಾನ ಕೊಟ್ಟ ಶಿಲಾಶಾಸನವಾಗಿದೆ. ಗ್ರಾಮದ ಪ್ರಮುಖನೊಬ್ಬನು ಪ್ರಾಂತ್ಯಾಧಿಕಾರಿ ಮತ್ತು ಚಕ್ರವರ್ತಿಯ ಹೆಸರನಲ್ಲಿ ದಾನ ನೀಡಿರುವುದು ಶಾಸನದ ವೈಶಿಷ್ಟ್ಯವಾಗಿದೆ.

2. ಕನ್ನಡ ಲಿಪಿ, ಶಾಸನ ಸಂಖ್ಯೆ 28(ರಿ 1928-60)ಶಿವಮೊಗ್ಗ ತಾ||ಕೂಡ್ಲಿ ರಾಮೇಶ್ವರ ದೇವಾಲಯದ ಬಳಿ ಇರುವ ವೀರಗಲ್ಲು. ವಿಜಯನಗರ ಅರಸು ದೇವರಾಯರ ಆಳ್ವಿಕೆ ಕಾಲಕ್ಕೆ ಸೇರಿದೆ. ಕೂಡಲಿಯ ಕೂಚಿಗೌಡನ ಮಗ ಕಾಮಗೌಡನು ಯುದ್ಧದಲ್ಲಿ ವೀರನಾಗಿ ಹೋರಾಡಿ ಹಲವರನ್ನು ಇರಿದು ಕೊಂದು, ತಾನು ಸುರಲೋಕವನ್ನು ಸೇರಿದನೆಂದೂ, ವೀರನ ಸಹೋದರನು ಈ ಶಾಸನವನ್ನು (ನಿಷಿಧಿಯ ಕಲ್ಲು) ನಿಲ್ಲಿಸಿದನೆಂಬ ಉಲ್ಲೇಖವಿದೆ. ಕೊನೆಯಲ್ಲಿ 'ಮಂಗಳ ಮಹಾಶ್ರೀ' ಎಂದಿದೆ. ಆರಂಭದಲ್ಲಿ ಶ್ರೀ ಮನ್ಮಹಾಮಂಡಳೇಶ್ವರ ಅರಿರಾಯ ವಿಭಾಡ ಭಾಷೆಗೆ ತಪ್ಪುವ ರಾಯರ

ಗಂಡ ಚತುಸ್ಸಮುದ್ರಾಧಿಪತಿ ಶ್ರೀ ವೀರ ದೇವರಾಯ ರಾಜ್ಯವನಾಳುವಲ್ಲಿ ಎಂದಿದೆ. ಆದರೆ ಕೊನೆಯಲ್ಲಿ ವಿಜಯನಗರ ಉಲ್ಲೇಖವಿಲ್ಲ. ವಿಜಯನಗರ ಚಕ್ರವರ್ತಿಗಳ ಹೆಸರಲ್ಲಿ ವೀರನ ತಮ್ಮ ನಿಲ್ಲಿಸಿದ ವಿಶಿಷ್ಟ ವೀರಗಲ್ಲು ಶಾಸನ ಅಂದಿನ ಸಂಸ್ಕೃತಿಯ ಬಿಂಬವಾಗಿದೆ. ಕಾಲದ ಉಲ್ಲೇಖವಿಲ್ಲ.

3. ಶಾಸನ ಸಂಖ್ಯೆ 32VII (ಶಿವ-70)ಕೂಡಲಿಯ ಅದೇ ಸ್ಥಳದಲ್ಲಿರುವ ಎರಡನೇ ಶಾಸನವು ತ್ರುಟಿತವಾಗಿದ್ದು, ಕನ್ನಡ ಭಾಷೆಯಲ್ಲಿದೆ. ನಾಗರಿಲಿಪಿಯಿಂದ ಕೂಡಿದೆ. ಶಿವಮೊಗ್ಗ ತಾಲ್ಲೂಕಿನ ಹನಸವಾಡಿಯಿಂದ ಅರಮನೆಗೆ ಸಂದಾಯವಾಗ ಬೇಕಾದ 15 ಗದ್ಯಾಣದ ಉಲ್ಲೇಖವಿದೆ. ವಿಜಯನಗರ ಸಾಮ್ರಾಜ್ಯದ ಪ್ರಾಂತೀಯ ಉಪರಾಜಧಾನಿಯಾದ ಆರಗದ ರಾಜ್ಯಪಾಲ ವಿಠಣ್ಣ ಒಡೆಯರು, ವಿಜಯನಗರ ಚಕ್ರವರ್ತಿ 1ನೇ ದೇವರಾಯನ ಆಜ್ಞೆಯ ಮೇರೆಗೆ ಕೂಡಲಿಯ ರಾಮನಾಥ ದೇವರಲ್ಲಿ ಪುರಾಣವ ಹೇಳುವ ವೆಂಕಣ್ಣ ಉಪಾಧ್ಯರಿಗೆ, ಅಮೃತಪಡಿಗೆ ಸಲ್ಲುವ, ಹನಸವಾಡಿ ಎಂಬ ಗ್ರಾಮದಲ್ಲೂ ಅರಮನೆ ಭಂಡಾರಕ್ಕೆ ಸಲ್ಲಿಸುವಂತೆ ನೀಡಿದ ನಿರೂಪವಾಗಿದೆ. 42ಸಾಲುಗಳ ಶಾಸನ ಬರೆದವರು ವಿಠಂಣ ಎಂದಿರುವುದು ವಿಶೇಷ. ಶಕ 1330ನೇ ಸರ್ವಧಾರಿ ಪಾಲ್ಗುಣ. ಶು. ಅಂದರೆ ಕ್ರಿ.ಶ.1409ರ ಫೆಬ್ರವರಿ ಮಾರ್ಚ್ ಕಾಲಕ್ಕೆಸೇರಿದೆ. ವೀರಪ್ರತಾಪ ಹರಿಹರ ಮಹಾ ರಾಯರ ಬಿಂಬ ಪ್ರತಿಬಿಂಬ ಭೂತ ದೇವರಾಯ ಮಹಾರಾಯರು ವಿಜಯನಗರಿಯಲ್ಲಿ ಶ್ರೀ ವಿರುಪಾಕ್ಷ ದೇವರ ಸನ್ನಿಧಿಯಲ್ಲಿ ರಾಜ್ಯ ಪಾಲಿಸುತ್ತಿಹ ಕಾಲದಲ್ಲಿ ಎಂಬ ಉಲ್ಲೇಖ ವಿರುವುದು ವಿಶೇಷ. ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿಗಳೆಲ್ಲರೂ ಹಂಪೆಯ ಶ್ರೀ ವಿರುಪಾಕ್ಷದೇವರ ಹೆಸರಿನಲ್ಲಿ ರಾಜ್ಯವಾಳಿದರೆಂಬ ಮಾತಿಗೆ ಈ ಶಾಸನ ಸಾಕ್ಷಿ ಯಾಗಿದೆ. ದಾನ ನೀಡಿದವರಿಗೆ ಆಯುರಾರೋಗ್ಯವನ್ನು ಜೊತೆಗೆ ಧರ್ಮಕರ್ತೃ ವಿಠಣ ಒಡೆಯರಿಗೆ ವೇದೋಕ್ತಾಯುಷ್ಯಾಭಿವೃದ್ಧಿಗಳನ್ನು ಧರ್ಮಪಾಲಕರಿಗೆ ಸಾವಿರ ಗೋವು ಗಳನ್ನು ದಾನ ಕೊಟ್ಟ ಪುಣ್ಯ ಲಭಿಸಲಿ ಎಂದಿದೆ. ಕೊನೆಯಲ್ಲಿ ಶಾಪಾಶಯವಿದೆ. 15 ಗದ್ಯಾಣಗಳ ಅಮೃತ ಪಡಿದಾನಕ್ಕೆ ಇಷ್ಟೊಂದು ದೀರ್ಘ ಶಾಸನವಿರುವುದು ಈ ಶಾಸನದ ವಿಶಿಷ್ಟತೆ ಎನ್ನಬಹುದು.

4. ಕನ್ನಡ ಭಾಷೆಯಲ್ಲಿರುವ ಶಾಸನ ಸಂಖ್ಯೆ 33 VII(ಶಿವ-71) ಕೂಡಲಿ ಯಲ್ಲಿರುವ ಮೂರನೇ ಶಿಲಾ ಶಾಸನವಾಗಿದೆ. ನಾಗರಿಯ ಲಿಪಿಯಲ್ಲಿದೆ. ವಿಜಯನಗರ ಚಕ್ರವರ್ತಿ 2ನೇ ದೇವರಾಯನ ಕಾಲಕ್ಕೆ ಸೇರಿದೆ. ಶಕ 1352ಸಾಧಾರಣ ಪುಷ್ಯ ಬ.30 ಭಾನುವಾರ, 14 ಜನವರಿ ಕ್ರಿ.ಶ. 1431ಕ್ಕೆ ಅನುಗುಣವಾಗಿದೆ. 68ಸಾಲುಗಳಿರುವ ದೀರ್ಘ ಶಾಸನವಾಗಿದೆ. ಶಿವಮೊಗ್ಗ ಜಿಲ್ಲೆ ಆರಗ ರಾಜ್ಯವನ್ನು ರಾಯಣ್ಣ ಒಡೆಯ ಮಹಾಪ್ರಧಾನರಾಗಿ ಆಳುತ್ತಿದ್ದ ಸಮಯದಲ್ಲಿ ಹನಸವಾಡಿಯ ಭಾಗದ ನಾಡಿನ, ಆನವೇರಿ ನಾಡು ಮತ್ತು ಹೊಳೆಯ ಹೊನ್ನೂರು ನಾಡಿಗೆ ಸಂಬಂಧಿಸಿದೆ. ಬುಕ್ಕರಾಯನ ಮಂತ್ರಿ ಬೈಚಪ್ಪನೆಂಬ ಉಲ್ಲೇಖವಿದೆ.

ವಿಜಯನಗರದಲ್ಲಿ ವೀರಪ್ರತಾಪ ರಾಯರ ಕುಮಾರ ಪ್ರತಾಪದೇವರಾಯರು, ಶ್ರೀ ವಿರೂಪಾಕ್ಷದೇವರ ಸನ್ನಿಧಿಯಲ್ಲಿ ರಾಜ್ಯವಾಳುತ್ತಿದ್ದ ಸಂದರ್ಭದಲ್ಲಿ ಕೂಡಲಿ ಸಮಸ್ತ ದೇವ ಸನ್ನಿಧಿಯಲ್ಲಿ ಛತ್ರ ಧರ್ಮಕ್ಕೆ ಭೂಮಿದಾನ ನೀಡಿದ ಉಲ್ಲೇಖವಿದೆ. ನಾಲ್ಕು ಮೂಲೆಗೆ ವಾಮನ ಮುದ್ರೆಕಲ್ಲು ನೆಟ್ಟು ದಂಣ್ಣಾಯಕಪುರ ಗ್ರಾಮವನ್ನು ದತ್ತಿ ನೀಡಿ, ಈ ಗ್ರಾಮದಿಂದ ಬರುವ ಹುಟ್ಟುವಳಿ, ತೋಟ, ತುಡಿಕೆ, ಗದ್ದೆ, ಅಡಕೆಮರ, ತೆಂಗಿನ ಮರ, ಮಾವು, ನೇರಲೆ,ಹುಣಸೆ, ಬಾಳೆ, ಮುಂತಾಗಿ ಗಾಣದೆರೆ, ಆಮೆದೆರೆ, ಮಗ್ಗಮುದ್ರೆ, ಸುಂಕ ತಳವಾರಿಕೆ ಹುಟ್ಟುವಳಿ 35 ಹೊನ್ನು ತೆತ್ತು ಛತ್ರ ಧರ್ಮ ನಡೆಸ ಬೇಕಂದು, ಎಂಟು ದಿಕ್ಕಿನಲ್ಲಿರುವ ಕೆರೆ, ಹಳ್ಳಗಳನ್ನು ಗಡಿಯಾಗಿ ಗುರುತಿಸಿದ್ದಾರೆ. ಇದರಿಂದಾಗಿ ವಿಜಯನಗರ ಅರಸರು ಕೆರೆ ಕಟ್ಟೆಗಳ ನಿರ್ಮಾಣಕ್ಕೆ ನೀಡಿರುವ ಆದ್ಯತೆ ಯನ್ನು ಗುರುತಿಸಬಹುದು. 35 ಹೊನ್ನು ಕೆರೆ ಕಟ್ಟಿಸುವುದಕ್ಕೆ , ಎಂಟು ಹೊನ್ನು ತೋಟ ವನ್ನಿಡುವುದಕ್ಕೆ ಅಲ್ಲದೆ ಕಡಿಮೆ ಬಿದ್ದ ಬೆಳಗುಲಿ ಗ್ರಾಮದ ತೆರಿಗೆಯ 7 ಹೊನ್ನು ಸೇರಿಸಿ ಕೂಡಲಿಯಲ್ಲಿ ಮಾಡುವ ಧರ್ಮಕೊಟ್ಟವಿವರವಾದ ಉಲ್ಲೇಖವಿದೆ. ಕೊನೆಯಲ್ಲಿ 'ಶ್ರೀ ತ್ರಿಯಂಬಕ'ಎಂಬ ಅಂಕಿತವಿರುವುದು ವಿಶೇಷ. ವಿಜಯನಗರಕಾಲದ ಜನ ಜೀವನ ಸಂಸ್ಕೃತಿಯನ್ನು ಬಿಂಬಿಸುವ ಈ ಶಾಸನ ವೈಶಿಷ್ಯ ಪೂರ್ಣವಾಗಿದೆ.

5. ವಿಜಯನಗರ ಚಕ್ರವರ್ತಿ 2ನೇ ಹರಿಹರನ ಪುತ್ರ 1ನೇ ದೇವರಾಯನ ಕಾಲಕ್ಕೆ ಸೇರಿದ ಶಾಸನ ಸಂಖ್ಯೆ 102(ರಿ1923-60)ಸೂಡೂರು(ಬೇಚರಾಕ್) ಗ್ರಾಮದ ಅಡವಿಯಲ್ಲಿರುವ ಶಾಸನ 27-10-1407ಕ್ಕೆ ಸೇರಿದೆ. ಶಕ ವರುಷ 1329 ಸರ್ವಜಿತು ಕಾರ್ತೀಕ ಬ.11ಗುರುವಾರ ಸೂಡೂರಿನ ಚಿಲಗೊಂಡರಸನು ಬೊಮ್ಮಣ್ಣ ಎಂಬ ವೀರನಿಗೆ ಆನೆಯ ಧಾಳಿಯಿಂದ ರಕ್ಷಿಸಿದ್ದಕ್ಕಾಗಿ ಉಂಬಳಿಯಾಗಿ(ಜಮೀನು)ಭೂಮಿದಾನ ನೀಡಿದ ಉಲ್ಲೇಖವಿದೆ. ಶಾಪಾಶಯದ ನಂತರ ಕೊನೆಯಲ್ಲಿ ಶ್ರೀ ಶ್ರೀ ಶ್ರೀ ಎಂದಿದೆ. ಊರ ಪ್ರಮುಖನ ಪ್ರಾಣವನ್ನು ರಕ್ಷಿಸಿದ ವೀರನಿಗೆ ಭೂಮಿ ನೀಡಿದ ಶಾಸನವನ್ನು ವಿಜಯನಗರ ಚಕ್ರವರ್ತಿಗಳ ಹೆಸರಲ್ಲಿ ನೀಡಿರುವುದು ಅಂದಿನ ಕಾಲಘಟ್ಟದ ಸಂಸ್ಕೃತಿಯನ್ನು ಮತ್ತು ವಿಜಯನಗರ ಅರಸರ ಮೇಲೆ ಜನ ಸಾಮಾನ್ಯರಿಗಿದ್ದ ಪ್ರೀತಿ ಗೌರವವನ್ನು ತೋರಿರುವುದು ಈ ಶಾಸನದ ವೈಶಿಷ್ಟವಾಗಿದೆ.

ಶಿವಮೊಗ್ಗ ತಾಲ್ಲೂಕಿನಲ್ಲಿ ವಿಜಯನಗರ ಅರಸರ ಕಾಲದ 5 ಶಾಸನಗಳು ಕೂಡಲಿಗೆ ಸಂಬಂಧಿಸಿವೆ. ಆದರೆ 3 ಶಾಸನಗಳಲ್ಲಿ ಎಲ್ಲಿಯೂ ಕೂಡಲಿ ಶೃಂಗೇರಿ ಮಠದ ಅಥವಾ ಅಕ್ಷೋಭ್ಯ ತೀರ್ಥ ಮಠಗಳ ಉಲ್ಲೇಖವಿಲ್ಲದಿರುವುದು ಗಮನಾರ್ಹ ಸಂಗತಿ ಯಾಗಿದೆ. ಈ ಶಾಸನಗಳ ಕಾಲದಲ್ಲಿ ಮೇಲಿನ ಮಠಗಳು ಅಸ್ತಿತ್ವದಲ್ಲಿ ಇರಲಿಲ್ಲವೇ? ಅಥವಾ ವಿಜಯನಗರ ಅರಸರು ಶೃಂಗೇರಿ ಮಹಾಸಂಸ್ಥಾನ ಮೂಲ ಮಠಕ್ಕೆ ಮಾತ್ರ ನಿಷ್ಠರಾಗಿದ್ದರೇ? ಅಧ್ಯಯನ ನಡೆಯಬೇಕಾಗಿದೆ. ಮೇಲಿನ ಶಾಸನಗಳಲ್ಲಿ ಕಂಡು ಬರುವ

ಆರಗ, ಹನಗವಾಡಿ, ಆನವೇರಿ, ಹೊಳೆಹೊನ್ನುರು, ಕೂಡಲಿ ಮುಂತಾದ ಗ್ರಾಮಗಳು ಇಂದಿಗೂ ಅದೇ ಹೆಸರಿನಿಂದ ಕರೆಯಲ್ಪಡುತ್ತಿರುವುದು ವಿಶೇಷ. ಶಾಸನಗಳಲ್ಲಿ ಉಲ್ಲೇಖಿವಾಗಿರುವ ವಿಠಣ್ಣ, ಬೈಚಪ್ಪ ಮುಂತಾದವರು ಆಯಾ ಕಾಲಘಟ್ಟಗಳಲ್ಲಿ ವಿಜಯನಗರವನ್ನು ಆಳುತ್ತಿದ್ದ ಅರಸರ ಹತ್ತಿರದ ಬಂಧುಗಳಾಗಿರುವುದನ್ನು ಗಮನಿಸಬಹುದು.

ಶಾಸನಗಳ ಸಂಖ್ಯೆ 28ರಲ್ಲಿ ಕಂಡು ಬರುವ ವೀರನ ಮರಣವನ್ನು ಹೇಳುವ ಶಾಸನವನ್ನು ಬಿ. ಎಲ್.ರೈಸ್ ಅವರ ಶಾಸನ ಸಂಪುಟ 13 ಶಿವಮೊಗ್ಗ ಜಿಲ್ಲೆ ಗ್ರಂಥದಲ್ಲಿಯೂ(ನಿಷಿಧಿ ಕಲ್ಲು)ಎಂದು ಉಲ್ಲೇಖವಾಗಿರುವುದು ಕಂಡುಬರುತ್ತದೆ. ವೀರಗಲ್ಲೇ ಬೇರೆ, ನಿಷಿಧಿ ಕಲ್ಲು ಬೇರೆ ಎಂಬುದು ಮರುಮುದ್ರಣದ ಕಾಲದಲ್ಲಿ ವಿದ್ವಾಂಸರ-ಸಂಪಾದಕರ ಗಮನಕ್ಕೆ ಬಾರದಿರುವುದು ವಿಶೇಷ.

ಆಕರಗಳು

1. ನಾಗರಾಜರಾವ್ ಎಚ್.ಎಂ. *ಸಂ. ಎಪಿಗ್ರಾಫಿಯ ಕರ್ನಾಟಿಕ,* 2006
ಪ್ರ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

2. ಜಯದೇವಪ್ಪ ಜೈನಕೇರಿ *ಇತಿಹಾಸ ಸಂಪದ* ಪುಟ 28-31. 2004.
ಪ್ರ. ಶಾಂತಲ ಪ್ರಕಾಶನ, ಶಿವಮೊಗ್ಗ.

೮. ಕೆಂಜೂರು ಪಾದೆಮಠ ವೀರೇಶ್ವರ ದೇವಸ್ಥಾನದ ಶಾಸನ - ಒಂದು ಅಧ್ಯಯನ

ಡಾ. ಜಗದೀಶ ಶೆಟ್ಟಿ

ಉಡುಪಿ ತಾಲೂಕು ಮತ್ತು ಜಿಲ್ಲೆಯ ಪಾದೇಮಠ ವೀರೇಶ್ವರ ದೇವಸ್ಥಾನದಲ್ಲಿ ದೊರೆತಿರುವ ಒಂದನೇ ದೇವರಾಯನ ಶಾಸನ, ಶಾಸನಶಾಸ್ತ್ರ ಇಲಾಖೆಯವರು ಪ್ರಕಟಿಸಿದ ಶಾಸನವಾಗಿದ್ದು, ಅದರ ಮರುಅಧ್ಯಯನದ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ. ಈ ಶಾಸನವನ್ನು ಶಾಸನಶಾಸ್ತ್ರ ಇಲಾಖೆಯವರು ವರದಿ ಮಾಡಿದ್ದರೂ, ಅದನ್ನು ಪುನಃ ಪ್ರತಿ ಮಾಡಿ ಅಧ್ಯಯನ ಮಾಡಿದಾಗ ಅದು ಒಂದು ಪ್ರಮುಖ ದಾಖಲೆ ಯಾಗಿದ್ದು ಈ ಭಾಗದ ಒಟ್ಟು ಇತಿಹಾಸದ ಅಧ್ಯಯನಕ್ಕೆ ಸಹಕಾರಿಯಾಗಿದೆ.

ಕನ್ನಡ ಭಾಷೆ ಮತ್ತು ಲಿಪಿಯಲ್ಲಿ ಬರೆಸಲಾಗಿರುವ ಈ ಶಾಸನ 36 ಸಾಲುಗಳನ್ನು ಹೊಂದಿದ್ದು, ಬಾರಕೂರಿನ ರಾಜ್ಯಪಾಲನಾಗಿದ್ದ ಗೋವೆಯ ಬಾಚಣ್ಣ ಒಡೆಯನ ಕಾಲದಲ್ಲಿ ಸೂರಾಲಿನಲ್ಲಿ ಆಡಳಿತ ನಡೆಸುತ್ತಿದ್ದವನು ಬೆಮ್ಮಣ್ಣಾಡಿ ತೊಳಹ ಎಂದು ತಿಳಿಸುತ್ತದೆ. (1405-1412) [1] ಕ್ರಿ. ಶ. 1408ರ ಈ ಶಾಸನ ಆಗಿನ ಕಾಲದ ರಾಜಕೀಯ ವ್ಯವಸ್ಥೆಯ ಬಗ್ಗೆ ಅಧ್ಯಯನ ಮಾಡಲು ಇರುವ ಉಪಯುಕ್ತ ದಾಖಲೆಗಳಲ್ಲೊಂದು. ಗೋವೆಯ ಬಾಚಣ್ಣ ಒಡೆಯ ಬಾರಕೂರಿನ ರಾಜ್ಯಪಾಲನಾಗಿ ಬರುವುದಕ್ಕೆ ಒಂದು ಹಿನ್ನೆಲೆಯಿದೆ. ಅವನಿಗಿಂತ ಮೊದಲು ರಾಜ್ಯಪಾಲನಾಗಿದ್ದ ಮಹಾಬಳದೇವ ಒಡೆಯ, ಹತ್ತುಕೇರಿಯ ಹಲರು, ನಖರ ಮತ್ತು ಹಂಜಮಾನರು ಅನುಭವಿಸಿಕೊಂಡು ಬರುತ್ತಿದ್ದ ಸವಲತ್ತುಗಳನ್ನು ಮೊಟಕುಗೊಳಿಸಿದಾಗ ರಾಜನಿಗೆ ದೂರು ಹೋಗಿ ರಾಜ ಇಮ್ಮಡಿ ಬುಕ್ಕ ಅದರ ತನಿಖೆಗಾಗಿ ಗೋನೆಯ ಬಾಚಣ್ಣನನ್ನು ನೇಮಿಸಿದ. ಮಹಾಬಳದೇವ ಒಡೆಯ ತಪ್ಪಿತಸ್ಥನೆಂದು ತೀರ್ಮಾನವಾಗಿ ತೊಂದರೆಗೊಳಗಾದವರಿಗೆ ಪರಿಹಾರ ನೀಡಲಾಗಿತ್ತು. ಅನಂತರ ತನಿಖೆ ಮಾಡಿದ ಗೋವೆಯ ಬಾಚಣ್ಣನನ್ನು ಬಾರಕೂರಿನ ರಾಜ್ಯಪಾಲರಾಗಿ ನೇಮಿಸಲಾಯಿತು. ಡಾ.ಬಿ. ವಸಂತ ಶೆಟ್ಟಿಯವರು ಬಾಚಣ್ಣ ಒಡೆಯನ ಆಡಳಿತದ ಬಗ್ಗೆ ಬರೆಯುತ್ತಾ, ಕ್ರಿ. ಶ. 1406 ರ ಉತ್ತರಭಾಗದ ಹಂದಾಡಿಯ ಒಂದು ಶಾಸನ ಹಾಗೂ ಕ್ರಿ. ಶ. 1408 ರ ಪಾಂಡೇಶ್ವರ ಶಾಸನ ಅವನ ಬಗ್ಗೆ ಇರುವ ಎರಡು ದಾಖಲೆಗಳು ಎಂದಿದ್ದಾರೆ.[2] ಆದರೆ ಈ ಕೆಂಜೂರು ಪಾದೆಮಠದ ಶಾಸನ ಅವನ ಬಗ್ಗೆ ಹೇಳುವ ಇನ್ನೊಂದು ದಾಖಲೆ. [3] ಇದು ಸಹ ಕ್ರಿ. ಶ. 1408 ರದ್ದು. ಇದಲ್ಲದೆ ಕ್ರಿ. ಶ.

1407 ರ ಪೆರ್ಡೂರು,[4] ಮಣಿಪುರ,[5] ನೀಲಾವರ [6] ದ ಶಾಸನಗಳು ಅವನ ಬಗ್ಗೆ ತಿಳಿಸುತ್ತವೆ.

ಇನ್ನು ಈ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿರುವ ಬೆಂಮಣ್ಣಾಡಿ ತೊಳಹ, ಕೆಂಜೂರಿನ ಸಮೀಪದಲ್ಲಿ ತಮ್ಮ ರಾಜಕೀಯ ಪ್ರಾಬಲ್ಯವನ್ನು ಹೊಂದಿದ್ದು, ಸೂರಾಲಿನ ತೊಳಹ ರಾಜ ವಂಶದವನು. ವಿಜಯನಗರ ಮತ್ತು ತೊಳಹರ ಮಧ್ಯೆ ಉತ್ತಮ ಬಾಂಧವ್ಯವಿತ್ತು. ಈ ಪ್ರದೇಶ ವಿಜಯನಗರ ಸಾಮ್ರಾಜ್ಯದ ವ್ಯಾಪ್ತಿಯಲ್ಲಿದ್ದರೂ ಈ ಭಾಗದ ತೆರಿಗೆ ಸಂಗ್ರಹದ ಜವಾಬ್ದಾರಿ ತೊಳಹರದ್ದಾಗಿತ್ತು ಎಂಬುದು ಸ್ಪಷ್ಟ. ಇದಕ್ಕೆ ಈ ಶಾಸನವು ಒಂದು ಉತ್ತಮ ಉದಾಹರಣೆ.

ಈ ಶಾಸನ ಬೆಂಮು ಸೇನಭೋವ ಮತ್ತು ಪೆರುಣು ಸೇನಭೋವರು ಮಾಡಿದ ದಾನದ ಬಗ್ಗೆ ತಿಳಿಸುತ್ತದೆ. ಈ ಇಬ್ಬರು ಚಾಪಾಳಿಯಲ್ಲಿ ಬ್ರಾಹ್ಮಣರಿಗೆ ಭೂಮಿಯನ್ನು ನೀಡಿ, ಅದನ್ನು ಅನುಭವಿಸಿಕೊಂಡು ಬರುವ ಬಗ್ಗೆ ಮಠಕ್ಕೆ ನಿರ್ದಿಷ್ಟ ಹಣವನ್ನು ನೀಡ ಬೇಕೆಂದು ತಿಳಿಸಲಾಗಿದೆ. ಅಲ್ಲದೆ ಬ್ರಾಹ್ಮಣ ಭೋಜನದ ವ್ಯವಸ್ಥೆಯನ್ನು ಮಾಡಬೇಕೆಂಬ ಶರತ್ತು ಹಾಕಲಾಗಿದೆ. ಅಲ್ಲದೆ ಬೇರೆ ಬೇರೆ ವ್ಯಕ್ತಿಗಳು, ಅಂದರೆ ಕೃಷ್ಣ ಬಾಹಿರಿ, ಕುಂಞಣ್ಣ ಹೊಳ್ಳ, ಕಾರಂತ, ಶಿವ ಬಾಹಿರಿ, ವಿಷ್ಣು ಕುಂಜತ್ತ, ಶಿವ ಮಂಡೆಚ್ಚ, ಕೃಷ್ಣ ಭಾತ್ರ ಮತ್ತು ಗೋವಿಂದ ಪಾಥೆ ಮುಂತಾದವರು ಮಠಕ್ಕೆ ನೀಡಬೇಕಾದ ಹಣದ ವಿವರವನ್ನು ಇಲ್ಲಿ ದಾಖಲಿಸಲಾಗಿದೆ. ಈ ಶಾಸನದ ಪ್ರಕಾರ ವರ್ಷವೊಂದಕ್ಕೆ 890 ಬ್ರಾಹ್ಮಣರಿಗೆ ಅನ್ನ ದಾನದ ವ್ಯವಸ್ಥೆಯಿತ್ತು. ಈ ಬಾಳಿನ ಬಗ್ಗೆ ಸೂರಾಲಿನ ತೊಳಹರಿಗೆ ತೆಂಗಿನಕಾಯಿಯನ್ನು ಕಾಣಿಕೆಯಾಗಿ ನೀಡಬೇಕೆಂದು ಶಾಸನ ವಿಧಿಸುತ್ತದೆ. ಈ ಶಾಸನವನ್ನು ಕೆಂಜೂರ ಚಾಪ್ಪಳಿಯ ಊರು ಮತ್ತು ತೊಳಹರ ಸನ್ನಿಧಿಯಲ್ಲಿ ಬರೆಸಲಾಯಿತು. ಇದರಿಂದಾಗಿ ಪಾದೆಮಠ ಒಂದು ಪ್ರಮುಖ ಮಠವಾಗಿ ರೂಪುಗೊಂಡಿತು.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಜನರು ಮಠಗಳ ನಿರ್ಮಾಣದಲ್ಲಿ ಆಸಕ್ತಿ ವಹಿಸಿದ್ದರು. ಮಾತ್ರವಲ್ಲ ಅವುಗಳಿಗೆ ಧಾರಾಳವಾಗಿ ದಾನಗಳನ್ನು ನೀಡಿದ್ದರು. ವಿಜಯ ನಗರ ಕಾಲದ ಇತರ ಶಾಸನಿಕ ದಾಖಲೆಗಳನ್ನು ಗಮನಿಸಿದರೆ ಅವುಗಳು ಊಟದ ವ್ಯವಸ್ಥೆ ಯನ್ನು ಮಾಡುವ ಕೇಂದ್ರಗಳಾಗಿ ಹಾಗೂ ಧಾರ್ಮಿಕ ಚಟುವಟಿಕೆಗಳಿಗೆ ಆಶ್ರಯ ತಾಣ ಗಳಾಗಿ ಬೆಳೆದುಬಂದವು. ಹಾಗಾಗಿ ಅವುಗಳ ಮೂಲಕ ವಿವಿಧ ಧಾರ್ಮಿಕ ಗುಂಪುಗಳು ಬೆಳೆಯಲು ಕಾರಣವಾಯಿತು. ಮೇಲೆ ಹೇಳಿದ ರೀತಿಯಲ್ಲಿ ಪಾದೆಮಠವೂ ಒಂದು ಮಠವಾಗಿ ಬೆಳವಣಿಗೆಯನ್ನು ಕಂಡಿತು.

ಈ ಶಾಸನದಲ್ಲಿ "ಚಂದಂಣ ಸೆಟಿಯ ಬಾಳಿಂಗೆ ತೆಪುವ ಕಟುಂದೆವು ಮಠಕೆ ಕೊಡು ವುದು" ಎಂಬ ಉಲ್ಲೇಖವೂ ಆರ್ಥಿಕ ಇತಿಹಾಸದ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲುತ್ತದೆ.

ಕಟ್ಟುಂದೆಪು ವಿಜಯನಗರ ಕಾಲದಲ್ಲಿ ಬಾರಕೂರು ರಾಜ್ಯದಲ್ಲಿ ಪ್ರಚಲಿತ ವಿದ್ದ ತೆರಿಗೆ, ಕಟ್ಟುಂದೆಪು ವ್ಯವಸಾಯಕ್ಕೆ ಭೂಮಿಯನ್ನು ಪಡೆದುಕೊಂಡ ವ್ಯಕ್ತಿ ನೀಡಬೇಕಾದ ನಾಮಮಾತ್ರ ತೆರಿಗೆ. ಕಟ್ಟುಂದೆಪು ತೆರಿಗೆಯು ಹಣದ (ನಗದು) ರೂಪದಲ್ಲಿ ಹಾಗೂ ಭತ್ತದ ರೂಪದಲ್ಲಿಯೂ ಪಾವತಿಸುತ್ತಿದ್ದ ಬಗ್ಗೆ ಉಲ್ಲೇಖಗಳಿವೆ. [7]

ಈ ಶಾಸನ ಸ್ಥಳನಾಮದ ಅಧ್ಯಯನಕ್ಕೂ ಸಹಕಾರಿ. ಕೆಂಜೂರು, ಸೂರಾಲು ಹಾಗೂ ಚೆಪ್ಪಳಿಯ ಉಲ್ಲೇಖ ಶಾಸನದಲ್ಲಿದ್ದು ಮೊದಲ ಎರಡು ಊರುಗಳು ಈಗಲೂ ಅದೇ ರೂಪವನ್ನು ಉಳಿಸಿಕೊಂಡಿವೆ. ಆದರೆ ಚೆಪ್ಪಳಿ ಚಾಪಾಳಿಯೆಂಬ ರೂಪಾಂತರವನ್ನು ಹೊಂದಿದೆ. ಶಾಸನಕ್ಕೆ ಒಪ್ಪಿಗೆಯನ್ನು ನೀಡಿರುವವರನ್ನು ಹೆಸರಿಸುತ್ತಾ ''ಊರಿನ'' ಮತ್ತು ''ತೊಳಹರ'' ಪ್ರಸ್ತಾಪವಿದೆ. ಆಗ ಪ್ರಚಲಿತವಿದ್ದ ನಾಣ್ಯ ಪದ್ಧತಿಯು ಬಗ್ಗೆಯೂ ಶಾಸನ ತಿಳಿಸುತ್ತದೆ. ಅಲ್ಲದೆ ಬ್ರಾಹ್ಮಣರ ವ್ಯಕ್ತಿನಾಮಗಳ ಬಗ್ಗೆಯೂ ಶಾಸನದಲ್ಲಿ ವಿವರವಿದೆ. ಉದಾ: ಹೊಳ್ಳ, ಕಾರಂತ, ಬಾಹಿರಿ, ಕುಂಜತ್ತ, ಮಂಡೆಚ್ಚ, ಭಾತ್ರ, ಪಾಥೆ. ಇವುಗಳೆಲ್ಲವೂ ಈಗಲೂ ಸಹ ಪ್ರಚಲಿತವಿರುವ ಹೆಸರುಗಳು. ಬ್ರಾಹ್ಮಣರ ಸ್ಥಾನಮಾನದ ಬಗ್ಗೆಯೂ ಇದು ತಿಳಿಸುತ್ತದೆ. ಆಗ ವ್ಯವಸಾಯದ ಭೂಮಿಯನ್ನು ಬಿತ್ತುವ ಬೀಜದ ಆಧಾರದ ಮೇಲೆ ಮಾಪನ ಮಾಡುತ್ತಿದ್ದರು ಎಂಬುದಕ್ಕೆ ಶಾಸನದಲ್ಲಿ ತಿಳಿಸಿರುವ ನಾಕು ಮುಡೆ ಗದ್ದೆಯ ಉಲ್ಲೇಖ ಸಾಕ್ಷಿ. ಅಲ್ಲದೆ ಅನೇಕ ಸ್ಥಳೀಯ ಅಧಿಕಾರಿಗಳ ಪಾತ್ರವನ್ನು ಇಲ್ಲಿನ ಶಾಸನಗಳು ತಿಳಿಸುತ್ತವೆ. ಈ ಶಾಸನದಲ್ಲಿಯೂ ಅಂತಹ ಒಬ್ಬ ಅಧಿಕಾರಿ ಸೇನಭೋವನ ಪ್ರಸ್ತಾಪವಿದೆ. ಒಟ್ಟಿನಲ್ಲಿ ಈ ಶಾಸನ ವಿಜಯನಗರ ಕಾಲದಲ್ಲಿನ ರಾಜಕೀಯ, ಆರ್ಥಿಕ, ಸಾಮಾಜಿಕ ಬೆಳವಣಿಗೆಯನ್ನು ತಿಳಿಸುವುದರೊಂದಿಗೆ ವಿಜಯನಗರ ಹಾಗೂ ಸ್ಥಳೀಯ ಅರಸುಮನೆತನವಾದ ತೊಳಹರ ನಡುವಿನ ಸಂಬಂಧದ ಅಧ್ಯಯನದ ಮೇಲೆ ಬೆಳಕು ಚೆಲ್ಲುತ್ತದೆ.

ಟಿಪ್ಪಣಿಗಳು

1. ಡಾ. ಬಿ. ಜಗದೀಶ ಶೆಟ್ಟಿ, ''ಸೂರಾಲಿನ ತೊಳಹರು''- *ತುಳು ಕರ್ನಾಟಕದ ಅರಸು ಮನೆತನಗಳು* -ಕನ್ನಡ ವಿ. ವಿ. ಹಂಪಿ 2000 ಪು. 12.
2. ಡಾ. ಬಿ. ವಸಂತ ಶೆಟ್ಟಿ, *ಬಾರಕೂರು -ಎ ಮೆಟ್ರೊಪೊಲಿಟನ್ ಸಿಟಿ ಆಫ್ ಆಂಟಿಕ್ವಿಟಿ -ಇಟ್ಸ್ ಹಿಸ್ಟರಿ ಎಂಡ್ ಕಲ್ಚರ್* -ಅಪ್ರಕಟಿತ ಪಿಹೆಚ್. ಡಿ. ಪ್ರಬಂಧ -ಪುಟಗಳು : 180, 181.
3. ಕೆಂಜೂರು ಪಾದೆಮಠದ ಶಾಸನ.
4. ಸಂಖ್ಯೆ : 82

5. ಸಂಖ್ಯೆ : 84
6. ಸಂಖ್ಯೆ : 85
7. ಡಾ. ಬಿ. ವಸಂತ ಶೆಟ್ಟಿ, *ದಿ ಅಗ್ರೊ ಇಕನಾಮಿಕ್ ರಿಲೇಶನ್ಸ್ ಅಂಡ್ ಸೋಶಿಯಲ್ ಸ್ಟ್ರಕ್ಚರ್ ಇನ್ ದಕ್ಷಿಣ ಕನ್ನಡ ಕ್ರಿ. ಶ. 1000-1600* ಅಪ್ರಕಟಿತ ಪಿಹೆಚ್. ಡಿ. ಪ್ರಬಂಧ ಪು. 148.

ಕೆಂಜೂರು ಪಾದೆಮಠ ವೀರೇಶ್ವರ ದೇವಸ್ಥಾನದ ಶಾಸನ

1. ಶ್ರೀ ಗಣಾಧಿಪತಯೆ ನಮಃ |ನಮಸ್ತುಂಗ ಸಿರ ಚುಂಬಿ ಚಂದ್ರಚಾಮರ
2. ಚಾರನೆತ್ರೈಲೋಕ್ಯ ನಗರಾರಂಭಂ ಮೂಲಸ್ತಂಭಾಯ ಶಂಭವೆ|ಸ್ವಸ್ತಿ ಶ್ರೀ
3. ಜಯಾಭ್ಯುದಯ ಶಕವರುಶ 1330 ತ್ತನೆಯ ಸರ್ವಜಿತು ಸಂವತ್ಸರದ -
4. .... ವಾರದಲು| ಶ್ರೀ ಮನ್ಮಹಾರಾಧಿರಾಜ ರಾಜಪರಮೇಶ್ವರ
5. ಅದಿರಾಯ ವಿಭಾಡ ಭಾಷೆಗೆ ತಪ್ಪುವ ರಾಯರ ಗಂಡ ಪೂರ್ವ ದಕ್ಷಿಣ ಪಶ್ಚಿಮ
6. ಸಮುದ್ರಾಧೀಶ್ವರ ಶ್ರೀ ವೀರದೇವರಾಯರು ಸುಖ ಸಂಕಥಾ ವಿನೋದದಿಂ ರಾಜ್ಯವ ಪ್ರತಿ
7. ಪಾಲ್ಲುಸಿತಿದ್ದ ಕಾಲದಲ್ಲಿ ಶ್ರೀ ಮನ್ಮಹಾ ಪ್ರಧಾನಂ ಗೋವೆಯ ಬಾಣಂಚ ವೊಡೆಯ
8. ರು ಬಾರಕೂರ ರಾಜ್ಯವನಾಳುವ ಕಾಲದಲ್ಲಿ ಸೂರಾಲ ಬೆಂಮಂಣಾಡಿ ತೊಳಹ
9. ರ ಕಾಲದಲು ಕೆಂಜೂರು ಚಪ್ಪಳಿಯ ವೊಳಗೆ ಬೆಂಮು ಸೇನಭೋವ ಪೆರುಣು ಸೇ
10. ನಭೋವ ಮಾಡಿದ ಧರ್ಮದ ಶಿಲಾಶಾಸನದ ಕ್ರಮವೆಂತೆಂದರೆ ಕ್ರಿಷ್ಣ ಬಾಹಿರಿ ತಾ. ಬ
11. ದ್ದ ಬಳಿನ ಮೇಲೆ ಮಠದಲೆ ಉಂಬ ಬ್ರಾಹ್ಮರು 17 ಮಠಕ್ಕೆ ಕೊಡುವ ಹಣ 4| ವಡಿಲವ
12. ನು ತಾ ಬದ್ಧ ಬಾಳಿನೊಳಗೆ ಮಠದಲಿ ಉಂಬ ಬ್ರಾಹ್ಮರು -ಕೆ. ಕೊಡುವ ಹಣ 41
13. ಕುಂಞಂಣ್ಣ ಹೊಳ ತಾ ಬದ ಬಾಳಿನ ವೊಳಗೆ ಉಂಬ ಬ್ರಾಹ್ಮರು 34 ಮಠಕೆ ಕೊ
14. ಡುವ ಹಣ 2 ಕಾರಂತನು ತಾ ಬದ್ಧ ಬಾಳಿನೊಳಗೆ ಉಂಬ ಬ್ರಾಹ್ಮರು 34
15. ಮಠಕೆ ಕೊಡುವ ಹಣ 2 ಶಿವ ಬಾಹಿರಿ ತಾ ಬದ ಬಾಳಿನೊಳಗೆ ಉಂಬ ಬ್ರಾಹ್ಮ
16. ಣರು 24 ಮಠಕೆ ಕೊಡುವ ಹಣ 3 ವಿಷ್ಣು ಕುಂಜತ್ತನು ತಾ ಬದ ಬಾಳಿಂಗೆ ಮ
17. ಠದಲಿ ಉಂಬ ಬ್ರಾಹ್ಮರು 60 ಮಠಕೆ ಕೊಡುವ ಹಣ - ಕುಂಜತ್ತನು
18. ತಾ ಬದ ಬಾಳಿನೊಳಗೆ ವುಂಬ ಬ್ರಾಹ್ಮರು 60 ಮಠಕೆ ಕೊಡುವ ಹಣ 1ಶಿವಮಂ
19. ಡೆಚ್ಚ ತಾನು ಬದ್ದ ಬಾಳಿಂಗೆ ಮಠದಲುಂಬ ಬ್ರಾಹ್ಮರು 58ಮಠಕೆ ಕೊಡುವ ಹ
20. ಣ 1ಕ್ರಿಷ್ಣ ಭಾತ್ರನು ತಾ ಬದ್ದ ಬಾಳಿನೊಳಗೆ ಮಠದಲುಂಬ ಬ್ರಾಹ್ಮರು 100ಮಠಕೆ
21. ಕೊಡುವ ಹಣ 1 ಗೋವಿಂದ ಪಾಥೆ ತಾ ಬದ್ದ ಬಾಳಿನೊಳಗೆ (ಉಂಬ)ಬ್ರಾಹ್ಮರು 8 -

22. -ಕೆ-ಮಠಕೆ ಕೊಡುವ ಹಣ ಗ 182 ಬೋಗಾರ ಚಂದಂಣ ಸೆಟ್ಟಿಯ ಬಾಳಿಂ
23. ಗೆ ತೆ ವ ಕಟುಂದೆ ಮಠಕೆ ಕೊಡುವದು ಗಣಕೆ -ತೆ ವ ದಮ್ಮ ಕ -
24. ಕೆತಂಮ ಚಕ್ಕನ ಮಕ್ಕಳಿಗೆ ನಾಕು ಮೂಡೆ ಗದ್ದೆಯನೂ-ಸುಖದಲಿ
25. ಬಾಳುವರು ಕೆಂಜೂರು ಚೆಪ್ಪಳಿಯ ಬಾಳಿಗೆ ಬೋಗಾ ಸೇನಬೋವ ಪೆರುಣಸೇ
26. ನಭೋವ ಯಿಬರೂ ಬ್ರಾಹ್ಮರಿಗೆ ಕೊಟ್ಟ ಬಾಳಿನ ವೊಳಗೆ ನಾಲ್ಕುವೊಕ್ಕಲ ಕಟ್ಟಳೆಯ
27. ವೊಳಗೆ ಪ್ರತಿವರುಷವೊಂದಕ್ಕೆ ಉಂಬ ಬ್ರಾಹ್ಮರು ಯೆಂಟುನೂ ತೊಂಭ-
28. ತ್ತು ಮಠಕೆ ಕೊಡುವ ಹಣ ನಾಕು ಹೊನ್ನು ಅಯಿದು ಹಣಂನ ಕೊಟ್ಟು ಬಹರು
29. ಯಿ ಬಾಳಿಂಗೆ ತೊಳಹರಿಗೆ ಕಿಳುಗಂದರಿಗೆ ಯಿಬ್ಬರ ಕಾಣಿಕೆ ತೆಂಗಿ
30. ನ ಕಾಯಿ ಕೊಟ್ಟು ಕಾಬಿ (ಬ) ಯಿ ಯಿದರ್ಮ್ಮದ ಬ್ರಾಹ್ಮರನೂ ಸರ್ವ್ವಮಾನ್ಯವಾಗಿ ನಡ
31. ಸಿ ಬಹರು ಕೆಂಜೂರ ಚಾಪ್ಪಳಿಯ ಊರು ತೊಳಹರ ಸಂನಿಧಿಯಲಿ ಬರದಶಿಲಾ
32. ಶಾಸನ ಮಂಗಳಮಹ ಶ್ರೀಶ್ರೀಶ್ರೀ ಸ್ವದತ್ತಂ ವರದತ್ತಂ ನಾಯೊಹರೆತಿವಸುಂ
33. ಧರಾಷಷ್ಟಿವರುಷ ಸಹಸ್ರಾಳಿ ವಿಷ್ಟಾಯಾಂಜಾಯತೆ ಕ್ರಿಮಿ | ಸೇನ ಭೊ-
34. ವನ ಕುಟುಂಬವನೂ ಕೂಡಿಕೊಂಡು ವ ಲಕಿ ಸೆಟ್ಟಿ ಬರಸಿ ನ (ಡಿ) ಸಿದ ಶಿಲಾ ಶಾಸನ ಶ್ರೀ ಶ್ರೀ
35. ಯಿಧರ್ಮಕೆ ಆರೊಬರು ತಪ್ಪಿಗರು ವಾರಣಾಸಿಯಲೆ ನೂ ಎಂಟು ಕಪಿಲೆಯ
36. ಯ ವ (ಧಿ) ಸಿದ ದೋಷಕೆ ಹೋಹರು||

೯. ವಿಜಯನಗರ ಕಾಲದ ಶಾಸನಗಳಲ್ಲಿ ಒಪ್ಪ

ಡಾ. ಎನ್. ನಂದೀಶ್ವರ

ನಮ್ಮ ನಾಡಿನ ಜನಜೀವನವು ಶಾಸನಗಳಲ್ಲಿ ಅಭಿವ್ಯಕ್ತಗೊಂಡಿರುವಂತೆ ಪ್ರಾಯಶಃ ಇನ್ನೆಲ್ಲೂ ವ್ಯಕ್ತವಾಗಿಲ್ಲ. ಶಾಸನಗಳಿಂದ ರಾಜರ ಇತಿಸಾಹವನ್ನು, ಅವರ ಪರಸ್ಪರ ನಡೆಸಿದ ಘೋರ ಯುದ್ಧಗಳನ್ನು, ಅವರ ಕಾಲ್ಪನಿಕ ಪ್ರಶಂಸೆಗಳನ್ನು ಮಾತ್ರ ಅರಿಯ ಬಹುದೇ ಹೊರತು, ಆ ಕಾಲದ ಒಳ ಆಡಳಿತ, ವ್ಯಾಪಾರ, ಸಾಮಾಜಿಕ ವ್ಯವಸ್ಥೆಗಳು, ಧಾರ್ಮಿಕ ಪರಿಪರಿವರ್ತನೆಗಳು ಮತ್ತು ತಿಕ್ಕಾಟಗಳು-ಈ ವಿಷಯಗಳಲ್ಲಿ ಶಾಸನಗಳಿಂದ ನಮಗೆ ಯಾವ ಉಪಯೋಗವೂ ಇಲ್ಲವೆಂಬ ಭಾವನೆ ಒಬ್ಬಿಬ್ಬರು ವಿದ್ವಾಂಸರಲ್ಲಿ ಇದ್ದಿತು. ಆದರೆ ಈ ಅಭಿಪ್ರಾಯಕ್ಕೆ ವಿರುದ್ಧವಾದ ಅಭಿಪ್ರಾಯಗಳೂ ಒಂದೆರಡು ಕಡೆ ಕಾಣಿಸಿಕೊಂಡಿದ್ದವು. ಶಾಸನಗಳೇನಿದ್ದರೂ ಜನರ ನೀತಿ, ನಡವಳಿಕೆಗಳು, ಮತತತ್ವಗಳು, ಅವರ ಕಲೆಗಳು ಈ ವಿಷಯವನ್ನು ತಿಳಿಸುವುದೇ ಹೊರತು "ಇಲ್ಲಿ ಆಳಿದ ರಾಜರು, ಅವರಿಗೆ ಸಂಬಂಧಿಸಿದ ಯುದ್ಧ ಸಂಗತಿಗಳು, ಬೇರೆ ಬೇರೆ ರಾಜನೀತಿಗಳ ಪರಿಣಾಮಗಳು— ಈ ವಿಷಯಗಳನ್ನು ಶಾಸನಾಧ್ಯಯದಿಂದ ಪಡೆಯಬಹುದುದೆಂಬ ಅಪೇಕ್ಷೆಯು ನಿರೀಕ್ಷೆಗೆ ಮೀರಿದ್ದು." ಶಾಸನಗಳು ಆಗ ತಾನೇ ಪ್ರಕಟವಾಗಲಾರಂಭವಾಗಿದ್ದ ಕಾಲದಲ್ಲಿ ಈ ಅಭಿಪ್ರಾಯಗಳು ಹೊರಬಂದಿವೆ ಎಂಬುದನ್ನು ನಾವು ಮರೆಯಬಾರದು.

ಕೋಶಗಳಲ್ಲಿ ಒಪ್ಪ ಎಂಬುದಕ್ಕೆ ಸಮಿತಿ, ಒಪ್ಪಿಗೆ, ಸಹಿ, ರುಜು, ಒಪ್ಪುವಂತಹ ಮಾತು, ಅಂಗೀಕರಿಸುವಂತಹ ಮಾತು ಎಂಬರ್ಥಗಳಿವೆ. ಕನ್ನಡ ಒಪ್ಪ ಸ್ವಹಸ್ತಾಂಕಿತ, ರುಜು. ಪತ್ರದಲ್ಲಿ ಉಕ್ತವಾಗಿರುವ ವಿಷಯಕ್ಕೆ ತನ್ನ ಒಪ್ಪಿಗೆಯಿದೆ ಎಂದು ಸೂಚಿಸಲು ಹಾಕಿರುವ ಸ್ವಹಸ್ತಾಂಕಿತತವೇ 'ಒಪ್ಪ'ಅಥವಾ ಒಪ್ಪ. ತಮಿಳು ಒಪ್ಪಂ, ಕೈಯೊಪ್ಪ; ಮಲೆಯಾಳ ಒಪ್ಪು, ಕೈಯೊಪ್ಪು; ತೊದ; ಕೊಯಪಮ್:ತುಳು:ಕಯ್ಯೊಪ್ಪಿಗೆ-ಈ ಮಾತುಗಳಿಗೆ 'ರುಜು' ಎಂದೇ ಅರ್ಥ. ಒಪ್ಪು ಎಂಬ ಧಾತುವಿಗೆ ಹೆಚ್ಚು ಕಡಿಮೆ ಎಲ್ಲ ದ್ರಾವಿಡ ಭಾಷೆಗಳಲ್ಲಿಯೂ ಸಮ್ಮಿತಿಸು ಎಂಬ ಅರ್ಥವಿದೆ.[1]

ಸಹಿ ಲಿಪಿ ಬಳಕೆಯ ಇನ್ನೊಂದು ರೂಪವಾಗಿರುತ್ತದೆ. ಹಿಂದಿನ ಕಾಲದಲ್ಲಿ ಅನಕ್ಷ ರಸ್ಥರು ನೇಗಿಲನ್ನು ಬರೆಯುವ ಮೂಲಕ ಅಥವಾ ಅಡ್ಡಗೆರೆ, ಉದ್ದ ಗೆರೆಗಳನ್ನು ಸೂಚಿ ಸುವ ಮೂಲಕ ತಮ್ಮ ಸಹಿಯನ್ನು ಹಾಕುತ್ತಿದ್ದರು. ಇದನ್ನು ಲಿಪಿಕಾರ ಇಂತಹವರ ಸಹಿಯೆಂದು ಗುರುತಿಸಿ ಬರೆಯುತ್ತಿದ್ದ.[2]

ರಾಜನು ಕೊಟ್ಟ ಶಾಸನಗಳಲ್ಲಿ ಕಾಲ, ಅವನ ಸ್ವಹಸ್ತದ ಅಂಕಿತವಿರಬೇಕೆಂದು ಯಾಜ್ಞವಲ್ಕ್ಯ ಸ್ಮೃತಿಯಲ್ಲಿ ವಿಧಿಸಲಾಗಿದೆ. "ಸ್ವಹಸ್ತ ಕಾಲ ಸಂಪನ್ನಂ ಶಾಸನಂ ಕಾರಯೇತ್ ಸ್ಥಿರಂ." [3] ಕರ್ನಾಟಕದಲ್ಲಿ ಹತ್ತನೆಯ ಶತಮಾನದ ತನಕ ಯಾವ ತಾಮ್ರಪಟದಲ್ಲಾಗಲಿ ಶಿಲಾ ಶಾಸನದಲ್ಲಾಗಲಿ ರಾಜ ಹಸ್ತಾಂಕಿತಗಳು ಕಂಡುಬರುವುದಿಲ್ಲ. ಉತ್ತರ ಭಾರದಲ್ಲಾದರೋ ಏಳನೇ ಶತಮಾನದ ಹರ್ಷವರ್ಧನ ಸ್ವಹಸ್ತಾಕ್ಷರಗಳು ನಮಗೆ ದೊರೆಯುತ್ತವೆ. ಹರ್ಷನು ದೊಡ್ಡ ಕವಿಯಲ್ಲದೆ ಉತ್ತಮ ಅಲಂಕಾರಲಿಪಿಕಾರನೂ (Calligraphist) ಆಗಿದ್ದನು. ಮಳಖೇಡ ಅಥವಾ ಮಾಲೇಖೇಡಿನ ರಾಷ್ಟ್ರಕೂಟರ ಶಾಖೆಯೊಂದು ಗುಜರಾತಿನಲ್ಲಿ ಒಂಭತ್ತನೆಯ ಶತಮಾನದಿಂದ ರಾಜ್ಯ ಆಳಲಾರಂಭಿಸಿತು. ಕರ್ನಾಟಕದ ರಾಷ್ಟ್ರಕೂಟರಿಗೆ ಅಧೀನರಾಗಿದ್ದ ಅವರ ನಾಗರೀ ಲಿಪಿಯಲ್ಲಿರುವ ಹಲವು ತಾಮ್ರಪಟಗಳು ದೊರಕಿವೆ. ಇನ್ನು ಕೆಲವು ಆ ಕಾಲದಲ್ಲಿ ಗುಜರಾತಿನಲ್ಲಿ ಪ್ರಚಲಿತವಾಗಿದ್ದ ಬೇರೆ ಲಿಪಿಗಳಲ್ಲೂ ಇವೆ. ಭಾಷೆ ಮಾತ್ರ ಸಂಸ್ಕೃತ. ಆದರೂ ತಾಮ್ರಪಟಗಳನ್ನು ನೀಡಿದ ರಾಜರ ಸ್ವಹಸ್ತದ ಅಂಕಿತವು ಮಾತ್ರ ಕನ್ನಡಾಕ್ಷರಗಳಲ್ಲಿದೆ. 'ಸ್ವಹಸ್ತೋಽಯಂ ಮಮ ಶ್ರೀಕರ್ಕರಾಜಸ್ಯ ಶ್ರೀಮದಿಂದ್ರ ರಾಜಸುತಸ್ಯ', "ಮತಂ ಮಮ ಶ್ರೀಧ್ರುವರಾಜ ದೇವಸ್ಯ", "ಶ್ರೀ ಕರ್ಕರಾಜ ಸುತಸ್ಯ ಯದುಪರಿ ಲಿಖಿತಂ". ಈ ರಾಷ್ಟ್ರಕೂಟ ದೊರೆಗಳ ಮನೆಯ ಮಾತು ಕನ್ನಡವಾದ್ದರಿಂದ ಅವರು ಗುಜರಾತಿನಲ್ಲಿದ್ದರೂ, ಕನ್ನಡಾಕ್ಷರಗಳಲ್ಲೇ ರುಜು ಹಾಕುತ್ತಿದ್ದರು. [4]

ಹೀಗೆ ಶಾಸನಗಳಲ್ಲಿ ತಾಮ್ರಪಟಗಳಲ್ಲಿ ರಾಜರ ಸ್ವಹಸ್ತಾಂಕಿತವಿರುವ ಸಂಪ್ರದಾಯವು ಉತ್ತರ ಭಾರತದಲ್ಲಿದ್ದರೂ, ಕನ್ನಡ ರಾಜರೇ ಬೇರೆ ಪ್ರಾಂತ್ಯಗಳಲ್ಲಿದ್ದರೂ ಹನ್ನೊಂದನೇ ಶತಮಾನದ ವಿಜ್ಞಾನೇಶ್ವರನು ಯಾಜ್ಞವಲ್ಕ್ಯನ "ಸ್ವಹಸ್ತಕಾಲ ಸಂಪನ್ನಂ" ಎಂಬ ಮಾತಿಗೆ "ಸ್ವಹಸ್ತೇನ ಸ್ವಹಸ್ತ ಲಿಖಿತೇನ ಮತಂ ಮೇ ಅಮುಕ ನಾಮ್ನಃ ಅಮುಖಪುತ್ರಸ್ಯ ಯದತ್ರೋಪತಿ ಲೇಖಿತಮಿತ್ಯನೇನ ಸಂಪನ್ನಂ ಯುಕ್ತಂ" ಎಂಬ ವ್ಯಾಖ್ಯಾನಿಸಿದ್ದರೂ ಕರ್ನಾಟಕದ ಯಾವ ಪ್ರಾಚೀನ ಶಿಲಾ ಶಾಸನದಲ್ಲೂ ತಾಮ್ರಪಟದಲ್ಲೂ ರಾಜರ ಸ್ವಹಸ್ತಾಂಕಿತಗಳು ಸಿಕ್ಕಲ್ಲ.

ಶ್ರವಣಬೆಳಗೊಳದಲ್ಲಿ ಸಿಕ್ಕಿರುವ "ಶ್ರೀ ಕವಿರತ್ನ"ಎಂಬ ರತ್ನನ ರುಜುಗಳೂ, ಬೇಲೂರಿನ ಕೇಶವ ದೇವಾಲಯದ ಮದನಿಕಾ ವಿಗ್ರಹಗಳ ಪೀಠಗಳ ಮೇಲೆ ಶಿಲ್ಪಿಗಳೇ ಕೊರೆದುಕೊಂಡಿರುವ ಅವರ ಹೆಸರುಗಳೂ ಸ್ವಹಸ್ತಾಂಕಿತಗಳೇ ಆದರೂ ಒಪ್ಪ [5]ಗಳೆಂದು ಕರೆಯಲು ಸಾಧ್ಯವಿಲ್ಲ. ಕೆಲವು ಶಾಸನಗಳಲ್ಲಿ 'ಲಾಂಚಿತ'ಎಂಬ ಮಾತು ಬಂದಿದೆ. ಇದು ವಿಶೇಷವಾಗಿ ಒರಿಸ್ಸ-ಆಂಧ್ರಗಳ ಗಡಿಯಲ್ಲಿರುವ ಗಂಜಂ-ಶ್ರೀ ಕಾಕುಳಂ ಪ್ರಾಂತದ ಶಾಸನಗಳಲ್ಲಿ ಕಂಡುಬರುತ್ತದೆ. ಉದಾಹರಣೆಗೆ ಸ್ವಲ್ಪವೆಲುರ ದಾಖಲೆ; ಅದರಲ್ಲಿ "ಮಹಾದೇವಿ ಶ್ರೀನಿವಾಸ ಭಟ್ಟಾರಿಕೆಯಿಂದ ಲಾಂಛಿತ"ವೆಂದಿದೆ. ಮೂಲ ದಾಖಲೆಯ

ಮೇಲೆ ರಾಜಲಾಂಛನವುಳ್ಳ ಮುದ್ರೆಯನ್ನೊತ್ತುವ ಕ್ರಿಯೆಯನ್ನು ಇದು ಸೂಚಿಸುತ್ತದೆ. ತಾಮ್ರಪಟಗಳಿಗೆ ಲಗತ್ತಾಗುತ್ತಿದ್ದುದು ಈ ಮುದ್ರೆಯ ಲೋಹಾಕೃತಿಯೇ.

ಕ್ರಿ. ಶ. 1083 ರ ವೇಮಲವಾಡದ ಕನ್ನಡ ಶಾಸನದ ಕೊನೆಯಲ್ಲಿ "ಶ್ರೀಮನ್ಮಹಾ ಮಂಡಳೇಶ್ವರಂ ರಾಜಾದಿತ್ಯರಸರ ಸ್ವಹಸ್ತಲಿಖಿತಂ"ಎಂದಿದೆ. [6] ಇನ್ನೂ ಹಿಂದಿನ ಶಾಸನಗಳಲ್ಲಿ ಇಂತಹ ಒಪ್ಪಗಳು ಸಿಗಬಹುದು. ಹನ್ನೆರಡನೆ ಶತಮಾನದಲ್ಲಿ ಪ್ರಾರಂಭದಲ್ಲಿ (ಕ್ರಿ. ಶ. 1117 ಮಾರ್ಚ್ 16) ಚನ್ನರಾಯಪಟ್ಟಣ ಸಂ. 142 ರ ಹೊಯ್ಸಳ ಬಲ್ಲಾಳನ ಕಲ್ಲಿನ ಶಾಸನವು [7] "ಸಾಸನವುನೆಂಬ ಪಾತಕನಾ..... ಹೌರವಕ್ಕೆಗಳಗಳನಿಳಿಗುಂ ಶ್ರೀ ಶಿಘದ"ಎಂಬ ರುಜು ಇದೆ.

ವಿಜಯನಗರ ಕಾಲದಲ್ಲಿ ರಾಜರು ತಮ್ಮ ಪ್ರಿಯವಾದ ದೇವರ ಹೆಸರಿನಲ್ಲಿ, ರಾಜನ ಹೆಸರಿನಲ್ಲಿ, ಅಧಿಕಾರಿಗಳ ಹೆಸರಿನಲ್ಲಿ, ಊರ ಹೆಸರಿನಲ್ಲಿ ಒಪ್ಪಗಳು ಕಂಡುಬರುತ್ತವೆ.

ವಿಜಯನಗರ ಸ್ಥಾಪನೆಯಾದ ವರ್ಷವೇ ಅಂದರೆ ಕ್ರಿ. ಶ. 1336 ರ ವಿಜಯನಗರ ತಾಮ್ರ ಶಾಸನಗಳಲ್ಲಿ ಹಂಪೆಯ ಅಧಿದೈವ 'ಶ್ರೀ ವಿರೂಪಾಕ್ಷ'ಒಪ್ಪ ಮೊದಲಿಗೆ ಕಂಡು ಬರುತ್ತದೆ. [8]

ನಂತರ ಈ ಮನೆತನದ ಬಹಳಷ್ಟು ತಾಮ್ರ ಶಾಸನಗಳಲ್ಲಿ ಹಂಪೆಯ ಅಧಿದೈವ 'ಶ್ರೀ ವಿರೂಪಾಕ್ಷ'ದೇವರ ಹೆಸರಿನಲ್ಲಿ, ಪೆನುಗೊಂಡೆಯ ರಾಮಚಂದ್ರ ದೇವರ ಹೆಸರಿನಲ್ಲಿ ಹಾಗೂ 'ಶ್ರೀ ವೆಂಕಟೇಶನ ದೇವರ ಹೆಸರಿನಲ್ಲಿ ಒಪ್ಪಗಳು ಕಂಡುಬರುತ್ತವೆ. ಹದಿನಾಲ್ಕನೇ ಶತಮಾನದ ವಿಜಯನಗರ ಶಾಸನಗಳಲ್ಲಿ ಶ್ರೀ ಹರಿಹರ, ಪ್ರಸನ್ನಕೇಶವ, ಶ್ರೀ ನಾರಾ ಯಣ, ಶ್ರೀ ಅಣಿಲೇಶ್ವರಿ, ಶ್ರೀ ಚನ್ನಕೇಶವ, ಶ್ರೀ ವಜ್ರೇಶ್ವರ ದೇವರ ಹೆಸರಿನಲ್ಲಿ ಒಪ್ಪ ಕಂಡುಬರುತ್ತವೆ. ಶ್ರೀ ಹಸ್ತದ ವೊಪ್ಪ, ಮಾದರಸ, ವಿಶ್ವನಾಥ, ಶ್ರೀ ಪ್ರತಾಪ ಹರಿಹರ, ಮಾದಿಗಿ ದೇವ ದಂಡನಾಯಕರ ಸ್ವಹಸ್ತದ ವೊಪ್ಪ, ಕಾವಣ್ಣ, ನೀಲಕಂಠ, ಶ್ರೀ ವೀರಮಾದವ ದಂಡನಾಯಕರು, ಶ್ರೀ ಅಲ್ಲಾಳನಾಥ, ಮಾದಜಿಯ, ಮಹಾದೇವ, ಶ್ರೀ ಸಿವನಂಕಕಾರ, ವೀರಪ್ಪ, ನಾಚಪ್ಪ, ಮಲ್ಲಪ್ಪ, ಶ್ರೀ ಶಿವನಂಕಾರ, ಗೋಪಿನಾಥ, ಸೋಮನಾಥ, ಸೇಸಿನಾಥ, ದೊಡ್ಡೇಜಿ ವ್ಯಕ್ತಿಗಳ ಹೆಸರಿನಲ್ಲಿ ಒಪ್ಪಗಳು, ಹುಲಿಯ ಕೆರೆಯ ಮಂಚೆಗವಡನ ಒಪ್ಪ, ಮಾಲಗಾರನಹಳ್ಳಿಯ ಚಲುವೆ ಗೂಡನ ಒಪ್ಪ, ಶ್ರೀ ಬಯಿರಮೇಶ್ವರ ದೇವರು ಹೊಣೆಗಾರರ ಒಪ್ಪ, ಮಾನಿಸ ಹಾಸನ ಮಾದನೂರ ವೊಪ್ಪ, ಊರ ವೊಪ್ಪ, ವ್ರಿತ್ತಿವಂತರ ಸ್ವಹಸ್ತದ ದೊಪ್ಪಗಳು ಕಂಡುಬರುತ್ತವೆ.

ಹದಿನೈದನೇ ಶತಮಾನದ ಶಾಸನಗಳಲ್ಲಿ ಶ್ರೀ ಮಲ್ಲಿಕಾರ್ಜುನ, ಶ್ರೀ ವಿರೂಪಾಕ್ಷ, ಅಣಿಲೇಶ್ವರ, ಚಲುಡೇಶ್ವರಿ ದೇವಿ, ಶ್ರೀ ಮಯಿಲಾರದೇವ, ಶ್ರೀ ಬದಿಯ ದೇವರು, ಶ್ರೀ ರಂಗನಾಥ ದೇವರ ಹೆಸರಿನಲ್ಲಿ, ವರದಣ್ಣ ಸುಹಸ್ತ, ಶ್ರೀ ಚಂದ್ರ, ಬೊಮಣ

ಹೆಗ್ಗಡೆ, ಚಿಕ್ಕಂಣ ಹೆಗ್ಗಡೆ, ಎಕ್ಕನಾಥ, ಶ್ರೀ ಮಹಾಲಕ್ಷ್ಮೀ, ಸಂಕಂಣನ ಬರಹ, ಸಿದ್ದನ ಬರಹ, ಕೋಟಿನಾಥ, ಸಂಕರದೇವ, ನಾಗಂಣ, ತಿಪ್ಪಸೆಟ್ಟಿ, ತಿರುಮಲೆಯಪ್ಪ, ಅಲ್ಲಪನಾಯಕರ ವೊಪ್ಪ, ಸಿರಿಯ ಗವುಡನ ಮಗ ನಾಜಿಯನ ಒಪ್ಪ ಶ್ರೀ ಮಹಾದೇವ, ಶ್ರೀ ಗುಂಮ್ಮನಾಥ, ಶ್ರೀ ವಿಶ್ವನಾಥ, ಶ್ರೀ ಶಾನ್ತಿನಾಥ, ಶ್ರೀ ಸೋಮನಾಥ, ತಾಯೂರ ನಾಡ ಪ್ರಭುಗಳ ವೊಪ್ಪ, ವಾಸುದೇರು ಉಂಮತ್ತೂರು ಗವುಡಗಳ ವೊಪ್ಪಗಳು, ಗವುಗಡಗಳ ವೊಪ್ಪಗಳು ಕಂಡುಬರುತ್ತವೆ.

ಹದಿನಾರನೇ ಶತಮಾನದ ಶಾಸನಗಳಲ್ಲಿ ಶ್ರೀ ವಿರೂಪಾಕ್ಷ, ಶ್ರೀ ವೆಂಕಟಾದ್ರಿ, ಶ್ರೀ ಕಳಶನಾಥ, ಶ್ರೀ ಮಹಾಲಕ್ಷ್ಮಿ ಸಾಕ್ಷಿಗಳ ಒಪ್ಪ, ದುರ್ಗಪರಮೇಶ್ವರಿ, ಯಡನಾಳ ಗೋಪಿನಾಥ ದೇವರು, ಶ್ರೀ ವೀರಭದ್ರ ದೇವರ ಹೆಸರಿನಲ್ಲಿ, ವರದಣ್ಣ ಸುಹಸ್ತ, ಸೇವ ಬೋವ ಹಂಸರಾಸನ ಬರಹ, ಅರತುಮಲ್ಲ ಹೆಗ್ಗಡೆ ಸುಹಸ್ತದ ಒಪ್ಪ ಕೂಚಲದೇವಿ ಸಾಕ್ಷಿಗಳ ಒಪ್ಪ, ಅಯಿವತಿಬರ ಒಪ್ಪ, ಶ್ರೀ ನಾರಾಯಣ, ಬೈರರಸ ಒಡೆಯರ ಒಪ್ಪ, ಗುಂಮ್ಮಟದೇವ ಹೆಗ್ಗಡೆಯ ಒಪ್ಪ, ಮೇಲುವಳಿಯ ಮಾರಿಕವೆ ಸಾಕ್ಷಿಗಳ ಒಪ್ಪ, ಶ್ರೀ ರಾಮಚಂದ್ರ ಭಾರತಿ ಒಡೆಯರ ಸ್ವಹಸ್ತದ ಒಪ್ಪ, ಬೊಮ್ಮಣ ಹೆಗ್ಗಡೆಯವರ ಸುಹಸ್ತದ ವೊಪ್ಪ, ಮಲ್ಲಿಕಾರ್ಜುನ ದೇವರ ಸಾಕ್ಷಿಗಳ ಒಪ್ಪ, ಮಲ್ಲರಸಯ್ಯನ ವೊಪ್ಪ, ರಾಜರು ಆಚಾರ್ಯರು, ಮಹಾಜನರ ಒಪ್ಪ, ಪುರೋಹಿತರ ಸುಹ (ಸ್ತ)ದ ಒಪ್ಪ, ಶ್ರೀ ಜಯಸಿಂಹ್ವ, ಶ್ರೀ ಗೋಪಿನಾಥ, ರಾಮರಾಜಯ್ಯ ಅಯಿಪತ್ತಿಬ್ಬರಯ್ಯನವರ ಒಪ್ಪ, ಶ್ರೀ ನಾರಾಯಣ, ಆಚಾಯ್ಯಪುರುಸರು, ಜೀಯರು ಶ್ರೀ ವಯಿಷ್ಣವರ ವೊಪ್ಪ, ಸಮಸ್ತ ಮೂಲಿಗರ ಸುಹಸ್ತದ ಒಪ್ಪ, ಪಿರಿಯ ರಾಜಯ್ಯಗ ವೊಪಿತಾ, ರಾಮರಾಜನಾಯಿಕರ ವೊಪ್ಪಗಳು ಕಂಡು ಬರುತ್ತವೆ.

ಹದಿನೇಳನೆಯ ಶತಮಾನದಲ್ಲಿ ಶ್ರೀ ವಿರೂಪಾಕ್ಷ, ಶ್ರೀ ವೆಂಕಟಾದ್ರಿ, ಶ್ರೀ ಕೃಷ್ಣ, ಶ್ರೀ ಜಯನರಸಿಂಹ, ಶ್ರೀ ರಾಮದೇವರ ಹದಿನೆಂಟನೇ ಶತಮಾನಗಳಲ್ಲೂ ಒಪ್ಪಗಳು ಮುಂದುವರೆಯುತ್ತವೆ. ಮುಂದೆ ಕಾಗದ ಬಳಕೆಗೆ ಬಂದ ಮೇಲೆಯೂ ಒಪ್ಪ ಮುಂದು ವರೆಯುತ್ತದೆ. ಆದರೆ ಬ್ರಿಟೀಷರ ಆಗಮನದ ನಂತರ ಸಹಿ ಯಾರದೆಂದು ತಿಳಿಯ ಲಾರದಷ್ಟು ಗುಪ್ತವಾಗಿ ಗೀಚಿರುತ್ತಾರೆ. ಇದರ ಕೆಳಗೆ ಹೆಸರು ಬರೆದಲ್ಲಿ ಮಾತ್ರ ತಿಳಿಯು ತ್ತದೆ. ಇಲ್ಲವಾದಲ್ಲಿ ಇಲ್ಲ. ಆದರೆ ಈ ಸಹಿಗೆ ಬಹು ಬೆಲೆಯೂ ಇರುತ್ತದೆ. ಹೀಗಾಗಿ ಈ ಪದ್ಧತಿ ಮುಂದುವರೆದಿದೆ. ಇಲ್ಲಿ ಬಳಸಿರುವ ಅಕ್ಷರಗಳು ವಕ್ರರೇಖೆಗಳಾಗಿಯೋ, ಸರಳರೇಖೆಗಳಾಗಿಯೋ, ಪರಿವರ್ತಿತವಾಗಿರುತ್ತದೆ. [10]

ಅಡಿಟಿಪ್ಪಣಿಗಳು

1. *A Dravidian Etymological Dictionary*, p. 68
2. ಡಾ. ದೇವರಕೊಂಡರೆಡ್ಡಿ, '*ಲಿಪಿಯ ಹುಟ್ಟು ಮತ್ತು ಬೆಳವಣಿಗೆಗೆ*', ಪು. 293, 294.
3. 'ಸ್ವಹಸ್ತಕಾಲ ಸಂಪನ್ನಂ'ಎಂಬುದಕ್ಕೆ ವಿಜ್ಞಾನೇಶ್ವರ ವ್ಯಾಖ್ಯಾನವಿದು. ಸ್ವಹಸ್ತೇನ ಸ್ವಹಸ್ತಲಿಖಿತೇನ ಮತ್ತು ಮೇ ಅಮುಕನಾಮ್ನಃ ಅಮುಕ ಪುತ್ರಸ್ಯ ಯದತ್ರೋಪರಿ ಲೇಖಿತಮಿತ್ಯ ನೇನ ಸಂಪನ್ನ ಯುಕ್ತ.
4. ಎನ್. ಲಕ್ಷ್ಮೀನಾರಾಯಣರಾವ್, ಮಾಲ್‌ಖೇಡಿನ ರಾಷ್ಟ್ರಕೂಟರು ಎಲ್ಲಿಯವರು? (*ಪ್ರಬುದ್ಧ ಕರ್ಣಾಟಕ*, 203, ಪು. - 82-4
5. ಡಾ. ಎಂ. ಚಿದಾನಂದಮೂರ್ತಿ, '*ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*' ಪು. 70
6. *Kannada Insrcription of Andhra Pradesh*, KN 7
7. ಎಪಿಗ್ರಾಫಿಯ ಕರ್ನಾಟಿಕ, ಹಾಸನ ಜಿಲ್ಲೆ, ಸಂ. 10 (ಪರಿಷ್ಕೃತ)ಚನ್ನರಾಯಪಟ್ಟಣ, 142
8. ಡಾ. ಆರ್. ಗೋಪಾಲ್ ಹಾಗೂ ಇತರರು ಸಂ. '*ವಿಜಯನಗರ ಅಧ್ಯಯನ*' ಸಂ. 10, ಪು. 28
9. ಡಾ. ದೇವರಕೊಂಡ ರೆಡ್ಡಿ, ಅದೇ, ಪು. 294

ಅನುಬಂಧ

ಒಂದನೇ ಹರಿಹರ (1336-1356) ಕಂಪಣ ಒಡೆಯರ (ಕಂಪರಾಜ, ತಂದೆ ಬುಕ್ಕಣ್ಣ ಒಡೆಯರು ವಿಜಯನಗರ ರಾಜರಾಗಿದ್ದ ಕಾಲದಲ್ಲಿ 1354 ರ ಕಲ್ಲು ಶಾಸನವು ಶ್ರೀ ಬನದಚವುಡೇಶ್ವರಿ ನಾಡಿನ ವೊಪ್ಪ ಶ್ರೀ ಶಿವನಂಕಾರ ದೇವರು ಎಂದು ತಿಳಿಸುತ್ತದೆ. [ಎ. ಕ. , ಮೈಸೂರು ಜಿಲ್ಲೆ, ಸಂ. 4(ಪ)ಕೊಳ್ಳೇಗಾಲ, ನಂ. 62]

1362 ರ ಡಿಸೆಂಬರ್ 27 ರ ಶಾಸನವು [ಬುಕ್ಕರಾಯ 1356-1377] ಮಹಾಗಣಂಗಳ ಮಠಪತಿಗಳ ಆ ವ್ರಿತ್ತಿವಂತರ ಸ್ವಹಸ್ತದೊಪಪದ ಬಗ್ಗೆ ತಿಳಿಸುತ್ತಾ ಕೃಪಾಸಮರ್ಥ ಶ್ರೀ ವೀರಭದ್ರ, ಶ್ರೀ ಬಸವರಾಜ, ಶ್ರೀ ನಂಬಿಯಣ, ಶ್ರೀ ಜ್ಞಾನಸಂಮಂಧ, ಶ್ರೀ ವಾಗೀಶ, ಭರತನಾಥ, ಶ್ರೀ ವಿಶ್ವನಾಥ, ಶ್ರೀ ನಿತ್ಯವರದ, ಶ್ರೀ ಸಿದ್ಧಸೋಮನಾಥರ ಒಪ್ಪಗಳನ್ನು ತಿಳಿಸುತ್ತದೆ. [ಎ. ಕ. ಹಾಸನಜಿಲ್ಲೆ, ಸಂ 8 (ಪ) ಅರಕಲಗೂಡು, ಸಂ. 96]

1371 ಮಾರ್ಚ್ 18ರ ಶಾಸನವು ಮಹಾಜನಂಗಳ ಶ್ರೀ ಹಸ್ತದ ವೊಪ್ಪವನ್ನು ತಿಳಿಸುತ್ತದೆ. (ಎ. ಕ. ಹಾಸನ ಜಿಲ್ಲೆ, ಸಂ. 8 (ಪ) ಅರಕಲಗೂಡು, ಸಂ. 11)

1374 ರ ಸೆಪ್ಟಂಬರ್ 2 ರ ಕಲ್ಲು ಶಾಸನವು ಮಹಾದೇವರು ಹುಲಿಯಕೆರೆಯ

ಮಂಚೆಗಲುಡನ ಒಪ್ಪ, ಶ್ರೀ ಕಿತಮಸಾಮಿ ಮಾಲಗಾರನಹಳ್ಳಿಯ ಚುಡೆಗುಡನ ಒಪ್ಪ ಶ್ರೀ ಚ ಉಡೇಶ್ವರಿಯ ಒಪ್ಪಗಳಗಳನ್ನು ತಿಳಿಸುತ್ತದೆ. [ಎ. ಕ. ಮಂಡ್ಯ ಜಿಲ್ಲೆ, ಸಂ. 7(ಪ) ಮದ್ದೂರು, ಸಂ. 94]

ಎರಡನೇ ಹರಿಹರ (1377-1404)

1378ರ ಡಿಸೆಂಬರ್ 4 ರ ತಾಮ್ರ ಶಾಸನವು ಪೂರ್ವ ದಕ್ಷಿಣ ಪಶ್ಚಿಮ ಸಮುದ್ರಾಧಿಪತಿ ರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಹರಿಹರರಾಯರ ಶ್ರೀ ಹಸ್ತ ದೊಪ್ಪ ಶ್ರೀ ವಿರೂಪಾಕ್ಷ ಎಂದು ಕಂಡುಬರುತ್ತದೆ. ಹಂಪೆಯ ಅಧಿದೈವ 'ಶ್ರೀ ವಿರೂಪಾಕ್ಷ'ಒಪ್ಪ ಮೊದಲಿಗೆ ಕಂಡುಬರುತ್ತದೆ. [ಎ. ಕ. ಹಾಸನ ಜಿಲ್ಲೆ, ಸಂ. 10 (ಪ) ಚನ್ನರಾಯಪಟ್ಟಣ, ಸಂ 131]

1378ರ ಕಲ್ಲು ಶಾಸನವು ಹರಿಹರ ಮಹಾರಾಯರ ವೊಪ್ಪ, ಶ್ರೀ ವಿರೂಪಾಕ್ಷ, ಮೂವರು ಪ್ರಭುಗಳು, ಏಳುಮಲೆಯ ನಾಡರ ಒಪ್ಪ ಹಾಗೂ ಶ್ರೀ ಕಳಸನಾಥ ದೇವರು ಒಪ್ಪಗಳನ್ನು ತಿಳಿಸುತ್ತದೆ. [ಎ. ಕ. , ಚಿಕ್ಕಮಗಳೂರು ಜಿಲ್ಲೆ, ಸಂ. 11 (ಪ)ಮೂಡಿಗೆರೆ, ಸಂ 108]

1379ಜೂನ್ 31 ರ ಇಮ್ಮಡಿ ಹರಿಹರಮಹಾರಾಜನ ತಾಮ್ರ ಶಾಸನವು ಹರಿಹರ ಮಹಾರಾಜರ ವಪ್ಪ, ಶ್ರೀ ಮದ್ವಣಾಚಾರ್ಯ ಲಿಖಿತಂ ವಿರೂಪಾಕ್ಷ ಎಂದು ಬರೆದಿದೆ. [*ಕನ್ನಡ ವಿಶ್ವವಿದ್ಯಾಲಯ ಶಾಸನ* ಸಂ. 2 ಯಲಬುರ್ಗ ಸಂ. 48]

1380 ರ ಜುಲೈ 7 ರ ಕಲ್ಲು ಶಾಸನವು ಗೋಪಂಣ ಒಪ್ಪವನ್ನು ತಿಳಿಸುತ್ತದೆ. [ಎ. ಕ. ಮೈಸೂರು ಜಿಲ್ಲೆ, ಸಂ. 4 (ಪ)ಚಾಮರಾಜನಗರ ಸಂ. 148]

1383 ಅಕ್ಟೋಬರ್ 26 ರಂದು ಕಲ್ಲು ಶಾಸನವು ಸ್ವಹಸ್ತದ ವೊಪ್ಪ ಶ್ರೀ ಸಾಯೋಂಮಾ ಶ್ರೀ [ಎ. ಕ. ಮೈಸೂರು ಜಿಲ್ಲೆ, ಸಂ. 8 (ಪ), ಅರಕಲಗೂಡು ಸಂ. 48]

1384 ನವೆಂಬರ್ 25 ರ ಕಾಲದ ತಾಮ್ರ ಶಾಸನವು ಶ್ರೀ ವಿರೂಪಾಕ್ಷ ಒಪ್ಪವಿರುವುದು ತಿಳಿಯುತ್ತದೆ. [ಎ. ಕ. ಚಿಕ್ಕಮಗಳೂರು ಜಿಲ್ಲೆ, ಸಂ 11 (ಪ) ಶೃಂಗೇರಿ, ಸಂ. 31]

1388ರ ಮಾರ್ಚ್ 9ರ ಕಲ್ಲು ಶಾಸನವು ಸಮಸ್ತ ಬಾಣಿಗರ ಒಪ್ಪ, ಸಾಕ್ಷಿಗಳ ಒಪ್ಪ, ಸೋಮಯ್ಯ ದೇವರು, ಗೋಪಿನಾಥ ದೇವರು, ಸೋಮನಾಥ ದೇವರ ಒಪ್ಪಗಳನ್ನು ತಿಳಿಸುತ್ತದೆ. [ಎ. ಕ. ಮಂಡ್ಯ ಜಿಲ್ಲೆ, ಸಂ. 7(ಪ) ಮದ್ದೂರು, ಸಂ. 84]

1388ರ ಮಾರ್ಚ್ 9ರ ಕಲ್ಲು ಶಾಸನವು ಕೊಮಂಣ ವೊಪ್ಪ, ಶ್ರೀ ಅಂಕನಾಥ ಸಾಕ್ಷಿಗಳ ವೊಪ್ಪ, ಶ್ರೀ ವೀತರಾಗ ಶ್ರೀ ಅಲ್ಲಾಳನಾಥ, ಶ್ರೀ ಭೈರವ ಶ್ರೀ ಮಹಾದೇವರ ವೊಪ್ಪಗಳ ಬಗ್ಗೆ ತಿಳಿಸುತ್ತದೆ. (ಎ. ಕ. ಮಂಡ್ಯ ಜಿಲ್ಲೆ, ಸಂ. 7(ಪ) ಮದ್ದೂರು, ಸಂ. 110)

1389 ಆಗಸ್ಟ್ 17 ರ ಕಲ್ಲು ಶಾಸನವು ಗವುಡಗಳ ವೊಪ್ಪ, ಶ್ರೀ ದೇಸಿನಾಥ, ಶ್ರೀ ಸಂಕರದೇವರ ಒಪ್ಪಗಳನ್ನು ತಿಳಿಸುತ್ತದೆ. [ಎ. ಕ. , ಮೈಸೂರು ಜಿಲ್ಲೆ, ಸಂ. 4 (ಪ) ಚಾಮರಾಜನಗರ, ಸಂ. 129]

1392 ರ ಸೆಪ್ಟಂಬರ್ 18 ರ ಹರಿಹರ (2ನೇ)ಕಾಲದ ಕಲ್ಲು ಶಾಸನವು ಮೂಲ ಸ್ವಾಮಿಗಳ ವೊಪ್ಪ, ಶ್ರೀ ಅಂಕನಾಥ ದೇವರು ಸಾಕ್ಷಿಗಳ ವೊಪ್ಪ, ಶ್ರೀ ವೀತರಾಗ ಸಾಲಾಕದೇವಿ ಭಯಿರವ ದೇವರು, ಶ್ರೀ ಲಕ್ಷ್ಮಿ ಗಂಗಿನಾಥ ದೇವರು, ಮಲ್ಲೆಯ ದೇವರು, ಶ್ರೀ ಗೋಪಿನಾಥ ದೇವರ ವೊಪ್ಪಗಳ ಬಗ್ಗೆ ತಿಳಿಸುತ್ತದೆ. [ಎ. ಕ. ಮಂಡ್ಯ ಜಿಲ್ಲೆ, ಸಂ. 7 (ಪ) ಮದ್ದೂರು, ಸಂ. 102]

14 ನೇ ಶತಮಾನದ ಶಾಸನವು ಮಾಇದೀಕ್ಷಿತರ ವೊಪ್ಪ, ವಿಶ್ವನಾಥ ಮಹಾ ಜನಂಗಳ ವೊಪ್ಪ, ಅಶೇಷಮಹಾಜನಂಗಳ ವೊಪ್ಪ, ಶ್ರೀ ಪ್ರತಾಪಹರಿಹರ ವೊಪ್ಪಗಳ ಬಗ್ಗೆ ಹೇಳುತ್ತದೆ. [ಎ. ಕ. ಮೈಸೂರು ಜಿಲ್ಲೆ, ಸಂ. 4 (ಪ) ಚಾಮರಾಜನಗರ, ಸಂ. 173]

1396 ರ ಜನವರಿ 16 ರ ತಾಮ್ರ ಶಾಸನವು ಭೂಯೋ ಭೂಯೋ ಯಾವತೇ ರಾಮಚಂದ್ರಃ ಎಂದು ಹಂಪೆಯ ಅಧಿದೈವ 'ಶ್ರೀ ವಿರೂಪಾಕ್ಷ'ಒಪ್ಪ ತಿಳಿಸುತ್ತದೆ. [ಎ. ಕ. ಹಾಸನ ಜಿಲ್ಲೆ, ಸಂ. 8(ಪ)ಹೊಳೆನರಸೀಪುರ, ಸಂ. 87]

1396 ರ ಜುಲೈ 21ರ ತಾಮ್ರ ಶಾಸನವು ವೀರಹರಿಹರರಾಯರ ಹಸ್ತ ಮುಟ್ಟಿದ ವೊಪ್ಪಿದ, ಶ್ರೀ ವಿರೂಪಾಕ್ಷ ಒಪ್ಪಗಳನ್ನು ತಿಳಿಸುತ್ತದೆ. (ಎ. ಕ. , ಹಾಸನ ಜಿಲ್ಲೆ, ಸಂ. 8(ಪ) ಹಾಸನ, ಸಂ. 115)

1396ರ ಸೆಪ್ಟೆಂಬರ್ 2 ಕಾಲದ ಶಾಸನವು ಚಉುಡವೆಗಡೆಯ ಸ್ವಹಸ್ತದ ಶ್ರೀ ಚ ಉಡೇಶ್ವರಿ ದೇವಿಯ ಒಪ್ಪವಿರುವುದು ತಿಳಿಯುತ್ತದೆ. [(ಎ. ಕ. , ಚಿಕ್ಕಮಗಳೂರು ಜಿಲ್ಲೆ, ಸಂ. 11 (ಪ) ಶೃಂಗೇರಿ, ಸಂ. 31]

1397 ಜನವರಿ 6 ರ ಕಾಲದ ತಾಮ್ರ ಶಾಸನವು ಶ್ರೀ ವಿರೂಪಾಕ್ಷ ಒಪ್ಪದ ಬಗ್ಗೆ ತಿಳಿಯುತ್ತದೆ. [ಎ. ಕ. ಚಿಕ್ಕಮಗಳೂರು ಜಿಲ್ಲೆ, ಸಂ. 11 (ಪ) ಶೃಂಗೇರಿ, ಸಂ. 31]

14 ನೇ ಶತಮಾನದ ಶಾಸನವು ಕಲ್ಲು ಶಾಸನವು ಮಹಾಜನಂಗಳ ಶ್ರೀ ಹಸ್ತದೊಪ್ಪ, ಶ್ರೀ ನಂದಿನಾಥ ಒಪ್ಪಗಳನ್ನು ತಿಳಿಸುತ್ತದೆ. [ಎ. ಕ. ಮೈಸೂರು ಜಿಲ್ಲೆ, ಸಂ. 4(ಪ) ಪಿರಿಯಾಪಟ್ಟಣ, ಸಂ. 45]

14 ನೇ ಶಾಸನವು ಪಟ್ಟಣಸ್ವಾಮಿಗಳ ಸ್ವಹಸ್ತ, ಶ್ರೀ ಕಾಳೇಶ್ವರ, ಶ್ರೀ ಸೋಮನಾಥರ ಒಪ್ಪಗಳನ್ನು ತಿಳಿಸುತ್ತದೆ. [ಎ. ಕ. ಮಂಡ್ಯ ಜಿಲ್ಲೆ, ಸಂ. 7 (ಪ) ಮಳವಳ್ಳಿಯ ಸಂ. 25]

1403 ಜೂನ್ 20ರ ಕಲ್ಲಿನ ಶಾಸನವು ಮಲ್ಲಿಕಾರ್ಜುನ ದೇವರ ಒಪ್ಪವನ್ನು ತಿಳಿಸುತ್ತದೆ. [ಎ. ಕ. ಮೈಸೂರು ಜಿಲ್ಲೆ, ಸಂ. 4 (ಪ) ಪಿರಿಯಾಪಟ್ಟಣ, ಸಂ. 89]

ಒಂದನೇ ವಿರೂಪಾಕ್ಷ 1404-1405

1406 ನವೆಂಬರ್ ರ ತಾಮ್ರ ಶಾಸನವು ಹಂಪೆಯ ಅಧಿದೈವ 'ಶ್ರೀ ವಿರೂಪಾಕ್ಷ'ಒಪ್ಪ ತಿಳಿಸುತ್ತದೆ. (ಎ. ಕ. ಹಾಸನ ಜಿಲ್ಲೆ, ಸಂ. 8 (ಪ) ಹಾಸನ 11)

ಎರಡನೇ ಬುಕ್ಕರಾಯ 1405-1406

1406 ಡಿಸೆಂಬರ್ 29ರ ಕಲ್ಲು ಶಾಸನವು ಹರಿಪ ವಪಡೆಯ ವೊಪ್ಪದ ಬಗ್ಗೆ ತಿಳಿಸುತ್ತದೆ. [ಎ. ಕ. ಚಿಕ್ಕಮಗಳೂರು ಜಿಲ್ಲೆ, ಸಂ. 11(ಪ) ಮೂಡಗೆರೆ ಸಂ. 19]

ಒಂದನೇ ದೇವರಾಯ 1406- 1422

1407ಅಕ್ಟೋಬರ್ 2 ಕಲ್ಲಿನ ಶಾಸನವು ವೀರಂಣನ ವೊಪ ಕಳಿಕಾದೇವಿ ಸಾಕ್ಷಿಗಳ ವೊಪ ಶ್ರೀ ಮಲ್ಲಿಕಾರ್ಜುನ ದೇವರ ಒಪ್ಪವನ್ನು ತಿಳಿಸುತ್ತದೆ. [ಎ. ಕ. , ಮೈಸೂರು ಜಿಲ್ಲೆ, ಸಂ. 4 (ಪ) ಪಿರಿಯಾಪಟ್ಟಣ, ಸಂ. 91]

1409 ಏಪ್ರಿಲ್ 22ರ ಕಾಲದ ಕಲ್ಲು ಶಾಸನವು ಶ್ರೀ ಎಕ್ಕನಾಥ ಶ್ರೀ ಮಹಾಲಕ್ಷ್ಮೀ ಒಪ್ಪದ ಬಗ್ಗೆ ತಿಳಿಯುತ್ತದೆ. [ಎ. ಕ. ಚಿಕ್ಕಮಗಳೂರು ಜಿಲ್ಲೆ, ಸಂ. 11(ಪ) ಶೃಂಗೇರಿ, ಸಂ. 69]

1410ರ ತಾಮ್ರ ಶಾಸನಗಳಲ್ಲಿ ಶ್ರೀ ವಿರೂಪಾಕ್ಷ ಒಪ್ಪ [ಎ. ಕ. ಚಿಕ್ಕಮಗಳೂರು ಜಿಲ್ಲೆ, ಸಂ. 11 (ಪ) ಶೃಂಗೇರಿ, ಸಂ. 79]

1413 ರ ಶಾಸನಗಳಲ್ಲಿ ತಾಯೂರ ಪ್ರಭುಗಳ ವೊಪ್ಪ, ವಾಸುದೇವರು ಉಂಮತ್ತೂರು ಗವುಡಗಳ ವೊಪ್ಪ ಶ್ರೀ ಭೂಜಂಗನಾಥ ದೇವರು [ಎ.ಕ., ಮೈಸೂರು ಜಿಲ್ಲೆ ಸಂ.4(ಪ) ಚಾಮರಾಜನಗರ, ಸಂ.104]

1416 ರಗವುಡಗಳ ವೊಪ್ಪ ಅಣಿಲೇಶ್ವರ ದೇವರು [ಎ. ಕ. ಮೈಸೂರು ಜಿಲ್ಲೆ, ಸಂ. 4(ಪ) ಚಾಮರಾಜನಗರ, ಸಂ. 208]

1416ರ ಶಾಸನಗಳಲ್ಲಿ ಸೇನಬೋವನ ಮಗ ಸಂಕರದೇವನ ಸ್ವಹಸ್ತ, ಶ್ರೀ ವಿದ್ಯಾ ಶಂಕರ, ಶ್ರೀ ಹರಿಹರ ದೇವರು [ಎ. ಕ. ಚಿಕ್ಕಮಗಳೂರು ಜಿಲ್ಲೆ, ಸಂ. 11(ಪ) ಶೃಂಗೇರಿ, ಸಂ. 71]

1422ರ ಶಾಸನಗಳಲ್ಲಿ ಶ್ರೀ ವಿರೂಪಾಕ್ಷ ದೇವರು [ಎ. ಕ. ಮೈಸೂರು ಜಿಲ್ಲೆ, ಸಂ. 4(ಪ) ಚಾಮರಾಜನಗರ, ಸಂ. 372]

ವಿಜಯರಾಯ 1422-1424

1423 ರ ಶಾಸನಗಳಲ್ಲಿ ತಿಪ್ಪಸೆಟ್ಟರ ಒಪ್ಪ ಮಯಿಲಾರ ದೇವ [ಎ. ಕ. ಮೈಸೂರು ಜಿಲ್ಲೆ, ಸಂ. 4(ಪ) ಪಿರಿಯಾಪಟ್ಟಣ ಸಂ. 115]

ಎರಡನೇ ದೇವರಾಯ 1424 - 1446

1426 ರ ಶಾಸನಗಳಲ್ಲಿ ಶ್ರೀ ವಿರೂಪಾಕ್ಷ [*ಪ್ರೌಢದೇವರಾಯನ ಶಾಸನಗಳು* ಸಂ. ಡಾ. ಡಿ. ವಿ. ಪರಶಿವಮೂರ್ತಿ, ಸಂ. 9]

1425 ರ ಶಾಸನಗಳಲ್ಲಿ ಕೋಣನಾಡು ಸೆಟಿಕಾರ ಒಪ, ಸಾತಯನಗೋಳಿಯ ಬ್ರಂಹ್ಮರು ಆ ನಾಡ ಸೇವಬೋವ ಜನಾರ್ದನನ ಒಪ, ಶ್ರೀ ವಿಷ್ಣುಮೂರ್ತಿ, [ಪ್ರೌಢದೇವರಾಯನ ಶಾಸನಗಳು ಸಂ. ಡಾ. ಡಿ. ವಿ. ಪರಶಿವಮೂರ್ತಿ, ಸಂ. 11] ನಿಡುಂಬುರರ ಒಪ್ಪ ಕಡೆಕಾರರ್ಕ್ಕಳ ಒಪ್ಪ, ನಾಲ್ಕೂರು ಬಿಳಿನೆಳಲವರ ಒಪ್ಪ, ಶ್ರೀ ಗೋಪಿನಾಥ ದೇವರು (ಅದೇ, ಸಂ. 15)

1426ರ ಶಾಸನಗಳಲ್ಲಿ ಗುರುನಾತ, ಶ್ರೀ ಮಲಿನಾತ, ಶ್ರೀ ಸೋಮನಾತ (ಎ. ಕ. ಮಂಡ್ಯ ಜಿಲ್ಲೆ, ಸಂ. 7(ಪ) ನಾಗಮಂಗಲ, ಸಂ. 179)

1427ರ ಶಾಸನಗಳಲ್ಲಿ ಶ್ರೀ ಭೈರವ ದೇವರು, ಸಾಕ್ಷಿಗಳ ಒಪ್ಪ ಶ್ರೀ ನರಸಿಂಹ ದೇವರು, ಶ್ರೀ ಪ್ರಸಂನ ವಿಶ್ವೇಶ್ವರ ದೇವರು ಶ್ರೀ ಬನದಶಂಕರಿ, ಶ್ರೀ ನಾರಸಿಂಹದೇವರು, ಶ್ರೀ ಕೊಂತೀದೇವಿ, ಶ್ರೀ ಮಲ್ಲಿಕಾರ್ಜುನದೇವ ಶ್ರೀ ಬ್ರಹ್ಮದೇವರು ಒಪ್ಪಗಳು ಕಂಡು ಬರುತ್ತವೆ.

1429 ರ ಶಾಸನಗಳಲ್ಲಿ ಅಲೋಜ ಗವುಡಗಳ ಒಪ್ಪ ಶ್ರೀ ಚುಡೇಶ್ವೀದೇವಿ (*ಪ್ರೌಢ ದೇವರಾಯನ ಶಾಸನಗಳು* ಸಂ. ಡಾ. ಡಿ. ವಿ. ಪರಶಿವಮೂರ್ತಿ, ಸಂ. 41), ವೊಪ್ಪ ಶ್ರೀ ಕಾಳಿಕಾದೇವಿ (ಅದೇ, ಸಂ. 43), ಶ್ರೀ ವಿರೂಪಾಕ್ಷ (ಅದೇ, ಸಂ. 51)

1430ರ ಶಾಸನಗಳಲ್ಲಿ ಶ್ರೀ ಸೋಮನಾಥ ಒಪ್ಪ, (ಅದೇ, ಸಂ. 59),ಶ್ರೀ ವಿರೂಪಾಕ್ಷ (ಅದೇ, ಸಂ. 61)

1431ರ ಶಾಸನಗಳಲ್ಲಿ ರಾಯಂಣ ಒಡೆಯರ ಒಪ್ಪ ,ಶ್ರೀ ತ್ರಿಯಂಬಕ (ಅದೇ, ಸಂ. 67)

1432 ರ ತಾಮ್ರ ಶಾಸನಗಳಲ್ಲಿ ವಿರೂಪಾಕ್ಷ [ಎ. ಕ. ಚಿಕ್ಕಮಗಳೂರು ಜಿಲ್ಲೆ, ಸಂ. 11 (ಪ) ಶೃಂಗೇರಿ, 34, 35]

1434 ರ ಶಾಸನಗಳಲ್ಲಿ ಶ್ರೀ ವಿರೂಪಾಕ್ಷ [*ಪ್ರೌಢದೇವರಾಯನ ಶಾಸನಗಳು* ಸಂ. ಡಾ. ಡಿ. ವಿ. ಪರಶಿವಮೂರ್ತಿ, ಸಂ. 120]

1445 ರ ಶಾಸನಗಳಲ್ಲಿ ಶ್ರೀ ವಿರೂಪಾಕ್ಷ (ಅದೇ, ಸಂ. 139) ಶ್ರೀ ರಾಮಚಂದ್ರ, ಶ್ರೀ ವಿರೂಪಾಕ್ಷ (ಅದೇ, ಸಂ. 139)

1448ರ ಶಾಸನಗಳಲ್ಲಿ ಶ್ರೀಸಿರಿಯಾವಾಳ್ವನ ವೊಪ್ಪ (*ಅದೇ,* ಸಂ. 192)

15 ನೇ ಶತಮಾನದ ಶಾಸನಗಳಲ್ಲಿ ಬೀಡಪ್ಪಹೆಗ್ಗಡೆಯ ಸಮಸ್ತ ಒಪ್ಪ ಶ್ರೀರಾಮ (*ಅದೇ,* ಸಂ. 210)

ಎರಡನೇ ವಿರೂಪಾಕ್ಷ 1465-1485

1466 ರ ಶಾಸನಗಳಲ್ಲಿ ಮಹಾಜನಂಗಳ ವೊಪ್ಪ, ಶ್ರೀ ವಾಸುದೇವರು ಸ್ವದತ್ತಂ [ಎ. ಕ. ಹಾಸನ ಜಿಲ್ಲೆ, ಸಂ. 8 (ಪ) ಹಾಸನ ಸಂ. 201]

1469ರ ಕಾಲದ ಶಾಸನಗಳಲ್ಲಿ ತಿರುಮಲೆಯಪ್ಪ, ಶ್ರೀ ನಾರಾಯಣರ ಒಪ್ಪ [ಎ. ಕ. ಮಂಡ್ಯ ಜಿಲ್ಲೆ, ಸಂ. 6 (ಪ) ಪಾಂಡವಪುರ ಸಂ. 162]

1472 ರ ಕಾಲದ ಶಾಸನಗಳಲ್ಲಿ ಅಲ್ಲಪನಾಯಕರ ವೊಪ್ಪ ಶ್ರೀ ಕದಿಯದೇವರು [ಎ. ಕ. ಮಂಡ್ಯ ಜಿಲ್ಲೆ, ಸಂ. 7(ಪ) ನಾಗಮಂಗಲ ಸಂ. 155]

ಕೃಷ್ಣದೇವರಾಯನ ಕಾಲದಲ್ಲಿ 1509-1529

1509 ಏಪ್ರಿಲ್ 20ರ ಕಾಲದ ಕಲ್ಲುಶಾಸನವು ಅರತುವಲ್ಲ ಹೆಗಡೆ ಸುಹಸ್ತದ ಒಪ್ಪ, ಕೂಚಲ ದೇವಿ ಆಡಕೋಡ ಬ್ರಂಹದೇವರು ಶ್ರೀ ಕಳಸನಾಥ ಶ್ರೀ ವೀಥರಾಗ ಒಪ್ಪದ ಬಗ್ಗೆ ತಿಳಿಯುತ್ತದೆ. [ಎ. ಕ. ಚಿಕ್ಕಮಗಳೂರು ಜಿಲ್ಲೆ, ಸಂ. 11(ಪ) ಮೂಡಗೆರೆ, ಸಂ. 104]

1515 ಜುಲೈ 25 ತಾಮ್ರ ಶಾಸನವು ಹಂಪೆಯ ಅಧಿದೈವ 'ಶ್ರೀ ವಿರೂಪಾಕ್ಷ'ಒಪ್ಪ ತಿಳಿಸುತ್ತದೆ. [ಎ. ಕ. ಹಾಸನ ಜಿಲ್ಲೆ, ಸಂ. 8 (ಪ) ಹಾಸನ 8]

1515 ಆಗಸ್ಟ್ 5ರ ಕಲ್ಲು ಶಾಸನವು ಮೂಲಿಗರ ಸುಹಸ್ತದ ಒಪ್ಪ, ಶ್ರೀ ಕಳಸನಾಥ ದೇವರು, ಶ್ರೀ ಮಂಗಳೇಶ್ವರ ದೇವರು, ಶ್ರೀ ಕಳಶನಾಥ ದೇವರು, ಶ್ರೀ ಮಂಗಳೇಶ್ವರ ದೇವರು, ಶ್ರೀ ಮಹಾಲಕ್ಷ್ಮಿ ಸಾಕ್ಷಿಗಳ ಒಪ್ಪ, ಶ್ರೀ ದುರ್ಗಪರಮೇಶ್ವರಿ ಶ್ರೀ ಕಳಶನಾಥ ದೇವರು ವಿಠಲದೇವರು ಒಪ್ಪವನ್ನು ತಿಳಿಸುತ್ತದೆ. [ಎ. ಕ. ಚಿಕ್ಕಮಗಳೂರು ಜಿಲ್ಲೆ, ಸಂ. 11 (ಪ) ಮೂಡಗೆರೆ, ಸಂ. 109]

1516 ಜುಲೈ 13 ಕಲ್ಲು ಶಾಸನವು ಅಯಿವತಿಬರ ಒಪ್ಪ ಶ್ರೀ ನಾರಾಯಣ ಒಡೆಯರ ತಿಬ್ಬಸೆಟ್ಟಿಯ ಒಪ್ಪಗಳನ್ನು ತಿಳಿಸುತ್ತದೆ. [ಎ. ಕ. ಮಂಡ್ಯ ಜಿಲ್ಲೆ, ಸಂ. 7(ಪ) ಪಾಂಡವಪುರ ಸಂ. 135]

1520 ಜುಲೈ 1 ರ ಕಲ್ಲು ಶಾಸನವು ಗುಮ್ಮಟದೇವ ಹೆಗ್ಗಡೆಯ ಒಪ್ಪ, ಮೇಲುವಳಿಯ ಮಾರಿಕವೆ ಸಾಕ್ಷಿಗಳ ಒಪ್ಪ ಶ್ರೀ ಕಳಶನಾಥ ದೇವರು, ದುರ್ಗಪರಮೇಶ್ವರಿ, ಹೊಸಮಕ್ಕಿ ಬ್ರಹ್ಮದೇವರು ಕಾರಮಂಣ ಬ್ರಹ್ಮದೇವರ ಒಪ್ಪವನ್ನು ತಿಳಿಸುತ್ತದೆ. [ಎ. ಕ. ಚಿಕ್ಕಮಗಳೂರು ಜಿಲ್ಲೆ, ಸಂ. 11 (ಪ) ಮೂಡಗೆರೆ, ಸಂ. 66]

1524 ಜುಲೈನ ಕಲ್ಲು ಶಾಸನವು ಶ್ರೀ ರಾಮಚಂದ್ರ ಭಾರತೀ ಒಡೆಯರ ಸ್ವಹಸ್ತದ ಒಪ್ಪವನ್ನು ತಿಳಿಸುತ್ತದೆ. [ಎ. ಕ. ಚಿಕ್ಕಮಗಳೂರು ಜಿಲ್ಲೆ, ಸಂ. 11 (ಪ) ಶೃಂಗೇರಿ ಸಂ. 52]

1524 ಆಗಸ್ಟ್ 4 ರ ಕಲ್ಲು ಶಾಸನವು ಭಾನಪ್ಪಸೇನಬೊವನ ಬರಹ ಕತ್ತುವಿನ ಒಪ್ಪ ಯೆಡದಾಳ ಗೋಪಿನಾಥ ದೇವರು ಸಾವಿನ ಬರಹ ಕತ್ತುವಿನ ಒಪ್ಪ ಯೆಡದಾಳ ಗೋಪಿನಾಥ ದೇವರು ಸಾಕ್ಷಿಗಳ ಒಪ್ಪವನ್ನು ಕಳಶನಾಥ ದೇವರು ಒಪ್ಪಗಳನ್ನು ತಿಳಿಸುತ್ತದೆ. [ಎ. ಕ. ಚಿಕ್ಕಮಗಳೂರು ಜಿಲ್ಲೆ, ಸಂ. 11(ಪ) ಮೂಡಗೆರೆ, ಸಂ. 67]

1529- 1530 ರ ಕಲ್ಲು ಶಾಸನವು ಬೊಂಮ್ಮಣ ಹೆಗ್ಗಡೆಯವರ ವೊಪ್ಪ ಹರಿವರಿಯ ಮಲ್ಲಿಕಾರ್ಜುನ ಶ್ರೀ ವಿದ್ಯಾಶಂಕರ ದೇವರು, ಬನದ ದೇವತೆ ನಾರಸಿಂಹ ದೇವರು, ಮೈಲಾರದೇವರು ಉಮಾಮಹೇಶ್ವರ ಶೃಂಗೇರಿಯ ಮಲ್ಲಿಕಾರ್ಜುನ ದೇವರ ಒಪ್ಪಗಳನ್ನು ತಿಳಿಸುತ್ತದೆ. [ಎ. ಕ. ಚಿಕ್ಕಮಗಳೂರು ಜಿಲ್ಲೆ, ಸಂ. 11(ಪ) ಶೃಂಗೇರಿ ಸಂ. 49]

ಅಚ್ಯುತರಾಯ 1529-1542

1531 ಜನವರಿ 19ರ ಕಲ್ಲಿನ ಶಾಸನವು ಮಲ್ಲಯ್ಯನಹ ಹಸ್ತ ಕೋನೇರಿದೇವಗಳ ಮಗ ಗೋಪಣನ ಬರಹ ಅಂಕಪಯನವರು ಮಲಿದೇವಗಳ ಮಗ ತಿಂಮರಸನ ಬರಹ ಸಿಂಗಣನಾಯಕರ ನಿರೂಪದಿಂದ ಮಲ್ಲರಸಯ್ಯನ ವೊಪ್ಪವನ್ನು ತಿಳಿಸುತ್ತದೆ. [ಎ. ಕ., ಮೈಸೂರು ಜಿಲ್ಲೆ, ಸಂ. 4(ಪ). ಯಳಂದೂರು, ಸಂ. 169]

1534 ಫೆಬ್ರವರಿ 8 ಕಲ್ಲು ಶಾಸನವು ಮಹಾಜನರ ಒಪ್ಪ ಶ್ರೀ ಒಪ್ಪಗಳನ್ನು ತಿಳಿಸುತ್ತದೆ. [ಎ. ಕ. ಮಂಡ್ಯ ಜಿಲ್ಲೆ, ಸಂ. 7 (ಪ) ಪಾಂಡವಪುರ ಸಂ. 138]

1535 ಫೆಬ್ರವರಿ 27 ರ ಶಾಸನವು ಶ್ರೀ ವಿರೂಪಾಕ್ಷ ವಪ್ಪವನ್ನು ತಿಳಿಸುತ್ತದೆ. [ಎ. ಕ. ಹಾಸನ ಜಿಲ್ಲೆ, ಸಂ. 10 (ಪ) ಅರಸೀಕೆರೆ ಸಂ. 240]

ಸದಾಶಿವರಾಯ 1542-1565

1547 ಜುಲೈ 18 ಶಾಸನವು ಪುರೋಹಿತರ ಸುಹಸ್ತದ ಒಪ್ಪ ಶ್ರೀ ಮಹಾಲಕ್ಷುಮಿ ಸಾಕ್ಷಿಗಳ ಒಪ್ಪ ಶ್ರೀ ವಿದ್ಯಶಂಕರ ಒಪ್ಪವನ್ನು ತಿಳಿಸುತ್ತದೆ. [ಎ. ಕ. , ಚಿಕ್ಕಮಗಳೂರು ಜಿಲ್ಲೆ, ಸಂ. 11(ಪ) ಶೃಂಗೇರಿ ಸಂ. 43]

1549 ಅಕ್ಟೋಬರ್ 2 ಕಲ್ಲು ಶಾಸನವು ಮಹಾಜನಂಗಳ ವೊಪ್ಪವನ್ನು ತಿಳಿಸುತ್ತದೆ. [ಎ. ಕ., ಮಂಡ್ಯ ಜಿಲ್ಲೆ, ಸಂ. 7 (ಪ) ನಾಗಮಂಗಲ ಸಂ. 9]

1550 ಏಪ್ರಿಲ್ 21ರ ಶಾಸನವು ಅ ಉಬಳ ರಾಜೆಯನವರ ಶ್ರೀ ಹಸ್ತದ ವೊಪ್ಪ. [ಎ. ಕ. ಮೈಸೂರು ಜಿಲ್ಲೆ, ಸಂ. 5 (ಪ) ಟಿ. ನರಸೀಪುರ ಸಂ. 94]

1555 ಆಗಸ್ಟ್ 10ರ ಕಲ್ಲಿನ ಶಾಸನವು ಶ್ರೀ ಕ್ರುಷ್ಣ ವೊಪ್ಪವನ್ನು ತಿಳಿಸುತ್ತದೆ. [ಎ. ಕ. ಮೈಸೂರು ಜಿಲ್ಲೆ, ಸಂ. 4 (ಪ) ಚಾಮರಾಜನಗರ ಸಂ. 301]

1561 ಅಕ್ಟೋಬರ್ 20ರ ಶಾಸನವು ಶ್ರೀ ವಿರೂಪಾಕ್ಷ ವೊಪ್ಪ. [ಎ. ಕ. ಹಾಸನ ಜಿಲ್ಲೆ, ಸಂ. 9 (ಪ) ಹಾಸನ ಸಂ. 9]

1563 ಅಕ್ಟೋಬರ್ 17 ರ ಶಾಸನವು ಶ್ರೀ ಗೋಪಿನಾಥಾ ವೊಪ್ಪ. [ಎ. ಕ. ಹಾಸನ ಜಿಲ್ಲೆ, ಸಂ. 8 (ಪ) ಹಾಸನ ಸಂ. 108]

ಒಂದನೇ ಶ್ರೀರಂಗರಾಯ 1572- 1586

1582 ಅಕ್ಟೋಬರ್ 17 ಅಯಿಪತ್ತಿಬ್ಬರಯ್ಯನವರ ವೊಪ್ಪ ಶ್ರೀ ನಾರಾಯಣ ಶ್ರೀ ವಯಿಷ್ಣವರ ವೊಪ್ಪ [ಎ. ಕ. ಮಂಡ್ಯ ಜಿಲ್ಲೆ, ಸಂ. 6 (ಪ) ಪಾಂಡವಪುರ ಸಂ. 140]

1586 ಜನವರಿ 7 ರ ಕಲ್ಲಿನ ಶಾಸನವು ಪಿರಿಯರಾಜ್ಯಗಳ ವೊಪಿತಾವನ್ನು ತಿಳಿಸುತ್ತದೆ. [ಎ. ಕ., ಮೈಸೂರು ಜಿಲ್ಲೆ, ಸಂ. 4 (ಪ) ಪಿರಿಯಾಪಟ್ಟಣ ಸಂ. 135]

ಎರಡನೇ ವೆಂಕಟರಾಯ 1586-1614

1593 ಸೆಪ್ಟೆಂಬರ್ 10ರ ಕಲ್ಲಿನ ಶಾಸನವು ಇಂಮಡಿ ರಾಮರಾಜನಾಯಿಕರ ವೊಪ್ಪವನ್ನು ತಿಳಿಸುತ್ತದೆ. [ಎ. ಕ. ಮೈಸೂರು ಜಿಲ್ಲೆ, ಸಂ. 4(ಪ) ಚಾಮರಾಜನಗರ ಸಂ. 216]

1586 ಜನವರಿ 7 ರ ಕಲ್ಲಿನ ಶಾಸನವು ಪಿರಿಯರಾಜಯ್ಯಗಳ ವೊಪಿತಾವನ್ನು ತಿಳಿಸುತ್ತದೆ. [ಎ. ಕ. ಮೈಸೂರು ಜಿಲ್ಲೆ, ಸಂ. 4(ಪ) ಪಿರಿಯಾಪಟ್ಟಣ, ಸಂ. 135]

1596 ಜನವರಿ 7ರ ಕಲ್ಲಿನ ಶಾಸನವು ರಾಮರಾಜನಾಯಿಕರ ವೊಪ್ಪದ ಬಗ್ಗೆ ತಿಳಿಸುತ್ತದೆ. [ಎ. ಕ. ಮೈಸೂರು ಜಿಲ್ಲೆ, ಸಂ. 4(ಪ) ಚಾಮರಾಜನಗರ ಸಂ. 216]

16 ನೇ ಶತಮಾನದ ಕಲ್ಲಿನ ಶಾಸನವು ಶ್ರೀ ರಾಮಚಂದ್ರ ವೊಪ್ಪದ ಬಗ್ಗೆ ತಿಳಿಸುತ್ತದೆ. [ಎ. ಕ., ಮೈಸೂರು ಜಿಲ್ಲೆ, ಸಂ. 4 (ಪ) ಚಾಮರಾಜನಗರ ಸಂ. 124]

1603 ಸೆಪ್ಟೆಂಬರ್ 4ರ ತಾಮ್ರ ಶಾಸನವು ಶ್ರೀ ವಿದ್ಯಾಶಂಕರ ವೊಪ್ಪದ ಬಗ್ಗೆ ತಿಳಿಸುತ್ತದೆ. [ಎ. ಕ. , ಚಿಕ್ಕಮಗಳೂರು ಜಿಲ್ಲೆ, ಸಂ. 11(ಪ) ಶೃಂಗೇರಿ ಸಂ. 44]

1603 ಸೆಪ್ಟೆಂಬರ್ 4ರ ಕಲ್ಲು ಶಾಸನವು ಶ್ರೀ ವಿದ್ಯಾಶಂಕರ ವೊಪ್ಪದ ಬಗ್ಗೆ ತಿಳಿಸುತ್ತದೆ. [ಎ. ಕ. , ಚಿಕ್ಕಮಗಳೂರು ಜಿಲ್ಲೆ, ಸಂ. 11(ಪ) ಶೃಂಗೇರಿ ಸಂ. 2]

1605 ಏಪ್ರಿಲ್ 4ರ ಕಲ್ಲಿನ ಶಾಸನವು ಚಂದ್ರಶೇಖರ, ಮಲ್ಲರಾಜ ವೊಪ್ಪದ ಬಗ್ಗೆ ತಿಳಿಸುತ್ತದೆ. [ಎ. ಕ. , ಮೈಸೂರು ಜಿಲ್ಲೆ, ಸಂ. 4 (ಪ) ಚಾಮರಾಜನಗರ ಸಂ. 1]

ರಾಮದೇವರಾಯ 1617-1632

1625 ಆಗಸ್ಟ್‌ರ ಶಾಸನವು ಶ್ರೀ ಕೃಷ್ಣ ವೊಪ್ಪ. [ಎ. ಕ. ಹಾಸನ ಜಿಲ್ಲೆ, ಸಂ. 8 (ಪ)ಅರಕಲಗೂಡು ಸಂ. 6]

1630 ಸೆಪ್ಟೆಂಬರ್ 13 ರ ಶಾಸನವು ಶ್ರೀ ವೆಂಕಟಾದ್ರೆ ವೊಪ್ಪದ ಬಗ್ಗೆ ತಿಳಿಸುತ್ತದೆ. [ಎ. ಕ., ಚಿಕ್ಕಮಗಳೂರು ಜಿಲ್ಲೆ, ಸಂ. 11 (ಪ) ಶೃಂಗೇರಿ ಸಂ. 36]

ಮೂರನೇ ವೆಂಕಟರಾಯ 1632-1642

1635 ಫೆಬ್ರವರಿ 21 ರ ಶಾಸನವು ಶ್ರೀ ಚಾಮರಾಜ ಶ್ರೀ ವೊಪ್ಪ. [ಎ. ಕ. , ಹಾಸನ ಜಿಲ್ಲೆ, ಸಂ. 8 (ಪ) ಅರಕಲಗೂಡು ಸಂ. 94]

1638 ಸೆಪ್ಟೆಂಬರ್ 23 ಏಪ್ರಿಲ್ 11ರ ಕಲ್ಲಿನ ಶಾಸನವು ಶ್ರೀ ವೀರರಾಜಗಳ ವಪ್ಪಿತಾ ಬಗ್ಗೆ ತಿಳಿಸುತ್ತದೆ. [ಎ. ಕ. , ಮೈಸೂರು ಜಿಲ್ಲೆ, ಸಂ. 5 (ಪ) ಕೃಷ್ಣರಾಜನಗರ ಸಂ. 18]

1642 ಮೇ 29 ರ ಕಲ್ಲು ಶಾಸನವು ಶ್ರೀ ವಿದ್ಯಾಶಂಕರ ವೊಪ್ಪದ ಬಗ್ಗೆ ತಿಳಿಸುತ್ತದೆ. [ಎ. ಕ. ಚಿಕ್ಕಮಗಳೂರು ಜಿಲ್ಲೆ, ಸಂ. 11 (ಪ) ಶೃಂಗೇರಿ ಸಂ. 46]

ಮೂರನೇ ಶ್ರೀರಂಗರಾಯ 1642-1681

1651 ಮಾರ್ಚ್ 12 ರ ಶಾಸನವು ಹಸನಖಿನಸಾಹೇಬರು ಖಾನಸಾಹೇಬರು ವಪ್ಪಿತ ಮಲ್ಲಿನಾಥ ಸರಣು ಶ್ರೀ ಎಂದು ತಿಳಿಸುತ್ತದೆ. [ಎ. ಕ. , ಹಾಸನ ಜಿಲ್ಲೆ, ಸಂ. 8 (ಪ) ಅರಕಲಗೂಡು ಸಂ. 94]

1658 ಫೆಬ್ರವರಿ 6 ರ ಕಲ್ಲು ಶಾಸನವು ಶ್ರೀ ಜಯನರಸಿಂಹ್ವ ವೊಪ್ಪದ ಬಗ್ಗೆ ತಿಳಿಸುತ್ತದೆ. [ಎ. ಕ. , ಹಾಸನ ಜಿಲ್ಲೆ, ಸಂ. 8 (ಪ) ಹೊಳೆನರಸೀಪುರ ಸಂ. 55]

1660 ಜನವರಿಯ ತಾಮ್ರ ಶಾಸನವು ಶ್ರೀ ಜಯನರಸಿಂಹ ವೊಪ್ಪದ ಬಗ್ಗೆ ತಿಳಿಸುತ್ತದೆ. (ಎ. ಕ. ಹಾಸನ ಜಿಲ್ಲೆ, ಸಂ. 8 (ಪ) ಅರಕಲಗೂಡು ಸಂ. 79)

1661 ಏಪ್ರಿಲ್ 4 ತಾಮ್ರ ಶಾಸನವು ಶ್ರೀ ರಾಮ ವೊಪ್ಪದ ಬಗ್ಗೆ ತಿಳಿಸುತ್ತದೆ. [ಎ. ಕ. , ಹಾಸನಜಿಲ್ಲೆ, ಸಂ. 8 (ಪ) ಅರಕಲಗೂಡು ಸಂ. 142]

1661 ಏಪ್ರಿಲ್ 24 ತಾಮ್ರ ಶಾಸನವು ಶ್ರೀ ಶ್ರೀ ಶ್ರೀ ರಾಮ ವೊಪ್ಪದ ಬಗ್ಗೆ ತಿಳಿಸುತ್ತದೆ. [ಎ. ಕ. , ಹಾಸನಜಿಲ್ಲೆ, ಸಂ. 8 (ಪ) ಹೊಳೆನರಸೀಪುರ ಸಂ. 48]

1661 ಅಕ್ಟೋಬರ್ 27ರ ತಾಮ್ರ ಶಾಸನವು ಶ್ರೀ ರಾಮ ವೊಪ್ಪದ ಬಗ್ಗೆ ತಿಳಿಸುತ್ತದೆ. [ಎ. ಕ. ಚಿಕ್ಕಮಗಳೂರು ಜಿಲ್ಲೆ, ಸಂ. 11 (ಪ) ಚಿಕ್ಕಮಗಳೂರು ಸಂ. 27]

1665 ಏಪ್ರಿಲ್ 13 ತಾಮ್ರ ಶಾಸನವು ಶ್ರೀಜಯನರಸಿಂಹ ವೊಪ್ಪದ ಬಗ್ಗೆ ತಿಳಿಸುತ್ತದೆ. [ಎ. ಕ. , ಹಾಸನಜಿಲ್ಲೆ, ಸಂ. 8 (ಪ) ಅರಕಲಗೂಡು ಸಂ. 142]

1675ನವೆಂಬರ್ 8ರ ತಾಮ್ರ ಶಾಸನವು ಶ್ರೀ ವೆಂಕಟಾದ್ರಿ ವೊಪ್ಪದ ಬಗ್ಗೆ ತಿಳಿಸುತ್ತದೆ. [ಎ. ಕ. ಚಿಕ್ಕಮಗಳೂರು ಜಿಲ್ಲೆ, ಸಂ. 11 (ಪ) ಮೂಡಗೆರೆ ಸಂ. 103]

1675 ನವೆಂಬರ್ 19ರ ತಾಮ್ರ ಶಾಸನವು ಶ್ರೀ ವೆಂಕಟಾದ್ರಿ ವೊಪ್ಪದ ಬಗ್ಗೆ ತಿಳಿಸುತ್ತದೆ. [ಎ. ಕ. ಚಿಕ್ಕಮಗಳೂರು ಜಿಲ್ಲೆ, ಸಂ. 11 (ಪ)ಮೂಡಗೆರೆ ಸಂ. 103]

(ಈ ಲೇಖನ ಬರೆಯುವಲ್ಲಿ ಪ್ರೋತ್ಸಾಹಿಸಿ ಸಹಕರಿಸಿದ ಡಾ. ಪಿ. ವಿ. ಕೃಷ್ಣಮೂರ್ತಿಯವರಿಗೆ ಹಾಗೂ ಕೆ. ಜಿ. ಗೋಪಾಲಕೃಷ್ಣರಾವ್‌ರವರಿಗೆ ಧನ್ಯವಾದಗಳು)

೧೦. ಎಪಿಗ್ರಾಫಿಯಾ ಇಂಡಿಕಾ ವಿಜಯನಗರ ಶಾಸನಗಳ ಪರಿಷ್ಕರಣೆ ಅಗತ್ಯತೆ

ಕೆಳದಿ ಗುಂಡಾಜೋಯಿಸ್

ವಿಶ್ವದ ಚರಿತ್ರೆಯ ನಕ್ಷೆಯಲ್ಲಿ ವಿಜಯನಗರ ಇತಿಹಾಸ ಪ್ರಾಮುಖ್ಯತೆಯನ್ನು ಮನಗಂಡ ಯುನೆಸ್ಕೋ ಮುಂದಿನ ಪೀಳಿಗೆಗೆ ಉಳಿಸಲು ಇದರ ರಕ್ಷಣೆ ಜವಾಬ್ದಾರಿಗೆ ಇಂಬು ಗೊಟ್ಟಿರುವುದು ಶುಭ ಸಂಕೇತವಾಗಿದೆ. ಸಮಗ್ರ ಭಾರತದಲ್ಲಿ ಸುಮಾರು ಅರ್ಧಭಾಗದಷ್ಟು ಸಾಮ್ರಾಜ್ಯದ ಚರಿತ್ರೆಯನ್ನೊಳಗೊಂಡ ಇದರ ಪಳೆಯುಳಿಕೆಗಳು ದೇಶ ವಿದೇಶಗಳಲ್ಲಿ ಚದುರಿ ಹೋಗಿವೆ. ಅವುಗಳಲ್ಲಿ ಶಾಸನ ಸಂಪತ್ತು ಪ್ರಮುಖವಾದುದು. ರಾಬರ್ಟ್ ಸೀವೆಲ್ ಆದಿಯಾಗಿ M. A. ರಾಮಶರ್ಮರವರೆಗೆ ಹಲ್ಟ್ಜ (Hultzch), ಕೀಲ್ ಹಾರ್ನ್ (Keilhorn), ಎಲ್. ಡಿ. ಬಾರ್ನೆಟ್ (L. D. Barnet) , ಹೀರಾನಂದ ಶಾಸ್ತ್ರಿ, ಬಿ. ಎಚ್. ಛಾಬ್ರ, ಕೆ. ಎನ್. ದೀಕ್ಷಿತ್, ಡಿ. ಸಿ. ಸರ್ಕಾರ್, ಎನ್. ಲಕ್ಷ್ಮೀನಾರಾಯಣರಾವ್, ಜೆ. ಎಸ್. ದೀಕ್ಷಿತ್, ಬಾ. ರಾ. ಗೋಪಾಲ್ ಮುಂತಾದವರು ಶ್ರಮಪಟ್ಟು ದುಡಿದಿದ್ದಾರೆ. ಡಾ. ಬಾ. ರಾ. ಗೋಪಾಲರವರು ವಿಜಯನಗರ ಶಾಸನಗಳ ಸಮಗ್ರ ಸಂಪುಟ ಹೊರತರಲು ಸಾಧ್ಯವಾಗದೇ ತಮ್ಮ ಅಸಾಮರ್ಥ್ಯತೆಯನ್ನು ತೋಡಿಕೊಂಡಿದ್ದಾರೆ. ಇದರ ವಿಮರ್ಶೆಯಲ್ಲಿ ಡಾ. ಶ್ರೀನಿವಾಸ ಪಾಡಿಗಾರ್‌ರವರು ನೀಡಿದ ಸಲಹೆಯನ್ನು ಗಣನೆಗೆ ತೆಗೆದುಕೊಂಡಿದ್ದಾರೆ.[1] ಡಾ. ಬಾ. ರಾ. ಗೋಪಾಲ್‌ರವರು ಸಂಪಾದಿಸಿದ್ದ ಶಾಸನಗಳು ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತಗೊಂಡಿದೆ ಎಂದು ಹೇಳಬಹುದು. ಅವರೇ ಉಪೋದ್ಘಾತದಲ್ಲಿ ಪ್ರಸ್ತಾಪಿಸಿದಂತೆ ಹೊರನಾಡಿನ ಕನ್ನಡ, ತೆಲುಗು, ತಮಿಳು ಹಾಗೂ ಸಂಸ್ಕೃತದ ಶಾಸನಗಳು ವಿಪುಲವಾಗಿದ್ದು ಅವುಗಳ ಅಧ್ಯಯನಗಳಿಗೆ ಇದು ತಳಹದಿಯಾಗಿದೆ. ಇದರ ಹಿನ್ನೆಲೆಯಲ್ಲಿ ಎಪಿಗ್ರಾಫಿಯಾ ಇಂಡಿಕಾ ಸಂಪುಟದಲ್ಲಿ ವಿಜಯನಗರ ಶಾಸನಗಳ ಪುನಃ ಪರಿಷ್ಕರಣೆಯ ಅಗತ್ಯತೆ ಕುರಿತು ಡಾ. ಎಂ. ಜಿ. ಮಂಜುನಾಥ್‌ರವರ ಅಭಿಪ್ರಾಯದಂತೆ. ವಿದ್ವಾಂಸರ ಅವಗಾಹನೆಗಾಗಿ ಪ್ರಬಂಧವನ್ನು ಸಾದರಪಡಿಸಿರುವುದನ್ನು ಸಹೃದಯ ಪ್ರಾಮಾಣಿಕ ಸಂಶೋಧಕರು ಸ್ವಾಗತಿಸುವರೆಂದು ನಂಬಿರುವೆನು.

ವಿಜಯನಗರ ಶಾಸನಗಳು

ದಿ||ಎಂ. ಎಚ್. ರಾಮಶರ್ಮರವರ ಕೃತಿಯಲ್ಲಿ ಕಂಡುಬಂದಂತೆ ಸುಮಾರು 5,000 ಶಿಲಾಶಾಸನಗಳೂ, 350 ತಾಮ್ರಶಾಸನಗಳೂ ಈ ಕೆಳಗಿನಂತೆ ಸಂಪುಟಗಳಲ್ಲಿ ಬೆಳಕು

ಕಂಡಿವೆ. ಲೇಖನ ವಿಸ್ತಾರಭಯದಿಂದ ಕೇವಲ ಸಂಕೇತಗಳನ್ನು ಮಾತ್ರ ನೀಡಲಾಗಿದ್ದು ವಿವರಗಳನ್ನು *The History of the Vijayanagar* ರಾಮಶರ್ಮ M. H. ಕೃತಿಯಲ್ಲಿ ಅವಲೋಕಿಸಬಹುದು.

1) A. S. W. Ind Burgess
2) Butterworth Nellore Ins.
3) Chi Halli Rev Ins
4) E. C
5) E. J
6) E. I. Mos
7) I. A
8) I. C. D
9) Ins Mys, kan
10) I. S. D
11) J. B. R. A. S
12) J. R. A. S. B
13) J. O. R
14) J. I. H
15) Mack. Mss
16) M. A. R
17) M. E. R
18) Mad. Or, Mss Lib
19) Mys Gaz
20) P. I. H. C
21) Q. J. A. H. R. S
22) QJMS
23) R. M. I
24) S. L. A
25) S. D. A
26) Sans and old Kan Ins
27) Stone Ins of Bombay
28) S. I. I
29) S. I. (D. C. Sircar
30) S. L. I
31) Tra. Arch. Ser
32) V. R. [2](ಅಪೂರ್ಣ)

ಡಾ. ಬಾ. ರಾ. ಗೋಪಾಲ್ ಸಂಪಾದಿತ ವಿಜಯನಗರ III ನೇ ಶಾಸನ ಸಂಪುಟದಲ್ಲಿ ಉಪೋದ್ಘಾತದ ಕೊರತೆ ಕಂಡುಬರುತ್ತದೆ. ಮೂರು ಸಂಪುಟಗಳಲ್ಲಿ ಕರ್ನಾಟಕದ ಹಿಂದಿನ 18 ಜಿಲ್ಲೆಗಳ ಪ್ರಕಟಿತ ಶಾಸನಗಳನ್ನು ಸಮೀಕರಿಸಿ ಸಂಶೋಧನೆಗೆ ಮಾರ್ಗಸೂಚಿ ನೀಡಿರುವುದು ಶ್ಲಾಘನೀಯವಾದುದು. ಸುಮಾರು ಕರ್ನಾಟಕ ಭಾಗದಲ್ಲಿರುವ 3066 ಶಾಸನಗಳು ಉಪಲಬ್ಧವಿದ್ದು, ಡಾ. ಪಾಟೀಲ್, ಡಾ. ಕೆ. ವಿ. ರಮೇಶ್, ಡಾ. ಗಾಯಿ ಹಾಗೂ ಡಾ. ನಾಗರಾಜರಾವ್‌ರವರೂ ಹಲವು ಶಾಸನಗಳನ್ನು ಬೆಳಕಿಗೆ ತಂದಿದ್ದಾರೆ. ಅಲ್ಲಿಂದ ಈಚೆಗೆ ವಿಜಯನಗರ ಅಪ್ರಕಟಿತ ಶಾಸನಗಳು ವಿಜಯನಗರ ಅಧ್ಯಯನ ಸಂಪುಟಗಳಲ್ಲಿ ಪ್ರಕಟಣೆ ಕಂಡಿವೆ. ಹೊರನಾಡಿನ ವಿಜಯನಗರ ಶಾಸನ ಸೂಚಿ ಹಾಗೂ ಸಾರಾಂಶಗಳು ಸಂಶೋಧನೆ ಹಾಗೂ ಅಧ್ಯಯನಾಕಾಂಕ್ಷಿಗಳಿಗೆ ಆಕರಗಳ ಪರಿಶೀಲನೆಯಲ್ಲಿ ಕೊರತೆಯುಂಟಾಗಿದೆ.

ಎಪಿಗ್ರಾಫಿಯಾ ಇಂಡಿಕಾ

ಮದರಾಸ್ ವಸ್ತುಸಂಗ್ರಹಾಲಯ ಆದಿಯಾಗಿ ಬ್ರಿಟಿಷ್ ಮ್ಯೂಜಿಯಂಗಳವರೆಗೆ ಶಿಲಾ ಹಾಗೂ ತಾಮ್ರ ಶಾಸನಗಳವರೆಗೆ ಸುಮಾರು 53 ಶಾಸನಗಳ ಸಂಕ್ಷಿಪ್ತ ಸೂಚಿ ಈ ಕೆಳಕಂಡಂತಿದೆ.

ಅರವೀಡು : (1) Vol III 1894-95; E; Hultzsch, 126, III 34; Kuniyur plates of the time of Venkata II, Saka 1556. H. Krishna Sastry; Nagari; Copper plate.

2) Vol IV 1896-97; Ed : Hultzsch, 190 IV 39; Vilapaka grant of Venkata I, Saka 1523; E. Hultzsch; Cooper plate; pp 269-78.

3) Vol XI 1911-12 ; Ed; Venkayya and Sten Konow; 444 XI 34; Maredapalli grant of Sri Rangaraya II Saka 1497; V. Natesha Aiyar; pp 326-36

4) Vol XII 1913-14 Ed : Sten Konow; 467 XII 21; Dalavai Agraharam (Street, Madura) plates of Venkatapatideva Maharaya I Saka 1508; T. A. Gopinatha Rao; Copper plate pp 159-87.

5) Vol XII Ibid; 484 XII 38 Arivilimangalam (Tanjavur Dt.) pltes of "Srirangaraya II; Saka 1499; Nandi Nagari and Sanskrit; T. A. Gopinatha Rao, (Trivandrum), T. S. Kuppaswamy Sastry (Tanjore) pp 340-58; plate.

6) Vol XII 1915-16 Ed; Sten Konow & F. W. Thomas; 508(A-B) XIII 22; Two grants of Venkatapati I Saka 1508 & 1535 by Lionel D. Barnett; Nandi Nagari; L : Sanskrit and Kannada ; pp 225-37; Five Copper plates - collection of Sir Walter Elliot 1887.

(A) British Museum plates ; Saka 1508 (B) Ibid ; Saka 1535

7) Vol XVI 1921-22 ; Ed : F. W. Thomas and H. Krishna Sastry; 593 XVI 18; The Penngutur grant of Tirumala I; Saka 1493; C. R. Krishnamacharlu B. A., pp 241-63; Seven copper plates; Nandi nagari ; L>S.

8) Ibid - 587 XVI 22 Padmaneri grant of Venkata I Saka 1520; V. Natesha Aiyar pp 287-97 ; Seven copper plates ; Nandi Nagari ; L>S, Kannada and Telugu scripts. Now in the Govt. Museum, Madras.

9) Vol XIX 1927-28 ; Ed ; Hirananda Sastry; 689 XIX 14 ; The Kandukuru plates of Venkatapathideva I Saka 1535 ; G. V.Srinivas Rao, B. A., Madras pp 89-96 ; Five copper plates on loan from M. R. Ry Uddi Narasimhacharya of Kundukuru, madanapalli Tk, Chittor Dt. in 1921-22 ; Nandi Nagari ; L>S;

ಸಾಳುವ : (1) Vol VII 1902 -03 Ed; : Hultzsch ; 267 VII 8 ; Dveulapalli plates of Immadi Nrsimha ; Saka 1427 ; J. Ramayya ; pp 74-85 ; Copper plate ; Nagari script L>S.

ಸಂಗಮ : 1) Vol III 1894-95 ; Ed : E. Hultzsch

(a) 96-97 III 4 ; Bitragunta grant of Sangama II Saka 1278 ; H. Krishna Sastry ; pp 21 - 35 ; Copper plate script : Telugu ; L>S.

(b) 97 III 5 Satyamangalam plates of Devaraya II ; Saka 1346; E. Hultzsch ; pp 31-41 copper plate Nagari script ; L>S and Telugu original : Dr. C. Macleane, Collector of Nallor through Dr. Hultzysch.

2) Ibid - III III 19 Nallur grant of Harihara II Saka 1321, V. Venkayya pp 113-26 ; pp 113-26 ; Copper plate ; Nandi Nagari.

3) 124 III 32 Alampndi plate of Virupaksha ; Saka 1305 ; V. Venkayya ; Copper plate ; pp 224 - 30 ; Grantha Lipi; Canarese character.

4) Vol VIII 1905 - 06 ; Ed Hultzsch, 322 VIII 31 ; Sorarikkavur plates of Virupaksha ; Saka 1308 ; T. A. Gopinatha Rao ; pp 298 - 306 ; plate

5) Ibid ; 323 VIII 32 ; Madras Museum plates of Sri Giribhupala; Saka 1346 ; M. Narayanaswamy Ayyar pp 306-17 plate.

6) Vol XIV 1917-18 ; Ed ; F. W. Thomas ; 519: xiv 2 ; Dandapalle plates of Vijayabhupathi ; Saka 1332 ; G.

Venkoba Rao, Madras ; pp 68-83 ; Copper plates ; Nandi Nagari script ; L>S and K ; Now in the Govt. Museum Madras.

7) Ibid 521 XIV 4 ; Porumamilla Tank Inscription of haskara Bhavadura ; Saka 1291 - V. S. Suktankar pp 97-109 plates.

8) Vol XV 1919-20 Ed by F. W. Thomas 549 XV 2 Sri Sailam plates of Virupaksha ; Saka 1388 ; T. A. Gopinatha Rao ; pp 8-25 ; 3 copper plates Telugu, Kannada and Sanskrit.

9) Vol XVI 1921 - 22 Ed : F. W. Thomas and Krishna Sastry ; 590 XVI 15 Sri Rangam (Ranganatha Temple) plates of Harihararaya Udaiyar III ; Saka 1336 ; T. A. Gopinatha Rao, Varakhedi Bapu Acharya, Madras pp 227 - 29 ; 5 Copper plates ; Telugu scripts, L>S & K.

10) Ibid ; 603 XVI 28, Sri Rangam plates of Mallikarjuna ; Saka 1384 ; T. A. Gopinatha Rao ; pp 345-53 ; 3 copper plates ; Nandi Nagari ; L>S & K.

11) Vol XVII 1923-24 ; Ed : H. Krishna Sastry 613 XVII 8 ; Srirangam (Ranganatha Temple ; Saka 1349 (1350) ; T. A. Gopinatha Rao pp 110-17 ; Two sets of copper plates ; Nandi Nagari ; L>S & K. pp 110-17

12) Ibid - 619 XVII 14 ; Somalapuram Grant of Virupaksha ; Saka 1389 ; K. V. Subramanya Ayyar ; pp 193-204 ; 3 copper plates ; Nandi Nagari ; L>S & K.

13) Vol XVIII 1925-26 : Ed : Krishna Sastry and Hirananda Sastry ; 648 XVIII 17, Sri Rangam (Ranganatha Temple) ; Copper plates of Devaraya II ; Saka 1356 ; S. V. Viswanatha and T. A. Gopinatha Rao ; pp 138-45 ; Nandi Nagari ; L>S, K, Tamil and Regional language.

14) Vol XXI 1931-32 ; Ed : Hirananda Sastry, K. N. Dixit and N. P. Chakravarty ; 752 XXI 4 ; Chandala grant of Harihara; Saka 1313; G. V. Acharya ; pp. 17-23.

15) Vol XXIII 1935-36 ; Ed : N. P. Chakravarthi ; 861 XXIII 28 Sangur Inscription of Devaraya Maharaya, Saka 1329 ; R. S. Panchamukhi ; pp. 182-85.

16) Vol XXV 1939-40 ; Ed ; N. P. Chakaravarthy ; 949(B) XXV 19 ; 2 (B) plate of Vijayanagara, prince Triyambaka ; p 192 N. Lakshminarayana Rao pp 186 - 94. Copper plate.

17) Vol XXVIII 1949-50 ; Ed : Chabra and D. C. Sircar ; 1104 XXVIII 28 ; Two Inscriptions of Kampana from Madpam ; V. Venkata Subba Aiyyar pp 154 plate.

1) Madam Tatakapuriswara temple Inscription, Saka 1285 ; 154 plate.

2) Madam Tatakapruiswara temple Inscription (undated) pp 154 ; plate (Appendix ; Sambuvaraya chiefs known so far pp 163-70).

Tuluva : (1) Vol I 1888-92 ; Ed ; Burgess with E. Hultzsch and A. Fuhrer as Asst Editors ; 43 I 42 ; Hampe (Siva Temple) Inscription of Krishna Raya ; Saka 1430 ; E. Hultzsch ; pp 361 - 71 ; Stone Inscription ; photo ; Dr. Pigon ; Sanskrit, Nagari.

2) Ibid - I - 46 ; Krishnapura (Ugra Narasimhaswamy Temple) Inscription of Krishna Raya ; Saka 1451 ; Hultzsch pp 398-402 ; Nagari, Kannada.

3) Vol II 1982 - 94 ; Ed : Jas Burgess Assisted by A. Fuhrer ; 69 II 19 ; Prabhosa Inscriptions ; pp 240-44 ; (a) Rock Inscription of Ashadasena p 242 plate (b) Cave Inscription of Ashadasena p. 243 plate (c) Dharmasala Inscription of V. S. 1881 p. 244 plates.

4) Vol III 1894-95 ; Ed ; Hultzysch ; 116 III 24 ; unamanjeri plates of Achyutaraya ; Saka 1462 ; F. Kielhorn ; pp 147-58; 5 copper plates Nandi Nagari ; L>S.

5) Vol IV 1896-97 ; Ed : Hultzsch ; 142 IV-1 ; British Museum plates of Sadasiva Raya, Saka 1478 ; F. Kielhorn pp. 1-22.

6) Ibid - 179 - IV-38 ; Sankalapura (Anjaneya Temple) Inscription of Krishnaraya ; Saka 1435 ; E. Hultzsch ; pp 266-69 ; Script ; Kannada ; L>S.

7) Vol VI 1900 - 01 ; Ed : E. Hultzsch ; 234 A-B-VI-12 ; Two pillar Inscriptions of the time of Krishnaraya of Vijayanagara; H. Lunders ; pp 108 - 33 ; 1- (A) Mangaladevi pillar, Inscription of Krishna Raya p 117 ; 2 - (B) Kaza (Kodandarama swamin Temple) pillar Inscription of Krishnaraya ; Saka 1438 p. 133.

8) Ibid - 244 VI 22 ; Kondavidu pillar Inscription of the time of Krishnaraya of Vijayanagara ; Saka 1442 ; H. Lunders p 230-39

9) Vol VII 1902-03 ; Ed : E Hultzsch ; 262 VII - 3 Amaravati (Amareswara temple slab) Inscription of Krishnaraya of Vijayanagara ; Saka 1437 ; H. Lunders pp 17-22 ; slab;Telugu script L>S.

10) Vol IX 1907-08 ; Ed : E. Hultzsch and Sten Knonow ; 379 IX 52 ; Krishnapuram plates of Sadasivaraya ; saka 1489 ; T.A. Gopinatha Rao and T. Raghavaiah ; pp 328 - 41 plates.

11) Vol XIII 1915-16 ; Ed : Sten Knonow and F. W. Thomas ; 494 XIII 8 Conjeevaram plates of Krishnadevaraya ; Saka 1444 ; S. V. Venkateswara Aiyar and S. V. Viswanatha ; pp 122-32-plate ; Nandi Nagari ; L>S & K.

12) Vol XIV 1917-18 ; Ed : F. W. Thomas ; 529 XIV 12 ; Udayambakam grant of Krishnadevaraya ; Saka 1450; S. V. Venkateswara and S. V. Viswanatha pp 168-75 ; 3 copper plates ; Nandi Nagari L>S * eK (Now in the Shankaracharya Matha Conjevaram).

13) Ibid - 533 XIV 16 ; Bevinahalli grant of Sadasivaraya ; Saka 1473 ; S. V. Venkateswara and S. V. Viswanatha. M. A. Kumbhakoam ; pp 210-03 ; 7 copper plates ; L>S & K.

14) Ibid - 543 XIV 17 ; Kudiyanlandal grant of Vira Nrsimha ; Saka 1429 ; S. V. Venkateswara and S. V. Viswanatha ; pp 231-240, 3 copper plates ; Nandi Nagari ; L>S.

15) Ibid-539 xiv 22; Kadaladi plates of achayutaraya; saka 1451; S.V. Venkateswara and S.V Viswanatha; pp 310-23; 5 coper plates; Nandinagari L>K&S.

16) Ibid 542 XIV 25 ; The Kannurna grant of Sadasivaraya ; Saka 1470 ; S. V. Viswanatha ; pp 341-53 ; 5 copper plates; Nandi Nagari ; L>S K ; preserved in the Colletor of Ananthapura.

17) Vol XVIII 1925-26 ; Ed : H. Krishna Sastry and Hirananda Sastry ; 652 XVIII - 21 - Two (Sri Rangam Ranganatha Temple) Copper plate grants of Krishnadevaraya - T. A. Gopinath Rao and K. Amrita Rao ; pp 160-69 ; (1) - A plates of Saka 1436 p. 160 ; (2) - B plates of Saka 1450 p. 165 ; 3 copper plates ; Nandi Nagari ; L>S.

18) Vol XXI 1931 - 32 ; Ed : Hirananda Sastry, K. N. Dixit and N. P. Chakravarthy ; 767, XXI - 19 ; Piranalai (Mangainatheswara temple) Inscription of Krishnadevaraya; Saka 1440 ; Venkatasubba Aiyyar pp 119-24.

19) Vol XXIV 1937-38 ; Ed : N. P. Chakravarthi ; 925 XXIV 41; Sri Rangam (Ranganatha temple) Inscription of

Achyutaraya ; Saka 1461 ; A. S. Ramanatha Ayyar ; pp 285-90.

20) Vol XXV 1939 - 40 ; Ed : N. P. Chakravarthy·; 962 XXV 32; Punjari Inscription of Krishnadevaraya ; K. A. Nilakanta Sastry ; pp 297-309.

21) Vol XXIX 1951-52; ed; chabra, N. Lakshminarayana Rao and D.C. Sircari; 1138 xxix 9 ; Srirangam (Ranganatha Temple) Inscription of Sadasivaraya ; Saka 1467 ; K. G. Krishnan ; pp 71-78.

22) Vol XXX 1953 - 54 ; Ed : Lakshminarayana Rao and D. C. Sircar ; 1190 XXX 27 ; Sangli Museum plates of Krishnadevaraya ; Saka 1434 ; Moreswar, G. Dixit ; pp 153 - 58.

23) Vol XXXI 1955-56 ; Ed : D. C. Sircar ; 1235 XXXI 21 ; Kamalapur plates of Krishnadevaraya ; Saka 1447 ; V. Rangacharya ; pp 139-62.

24) Vol XXXIII 10959 -60 ; Ed : D. C. Sircar; 1322 XXXIII 20; Inscriptions from Gaya (Vishnupada temple) D. C. Sircar and K. H. V. Sharma ; pp 103-16 ; (a) Inscription of the time of Kakatiya Prataparudra, 103 plate (b) Inscription of the time of Hoysala Narasimha III p 108 plate (c) Inscription of Krishnadevaraya, Saka 1444 p 110 plate (d) Inscription of Achyutaraya V. S. 1588 p 113 plate.

25) Ibid 1341 - XXXIII - 139 ; Kanchipuram (Ekambranatha Temple) Inscription of Achyutaraya ; Saka 1453 ; K. G. Krishnam and V. S. Subramanyam ; pp 199 - 204.

ರಾಬರ್ಟ್ ಸೀವೆಲ್ ಉಲ್ಲೇಖಿತ ಶಾಸನಗಳು.

ಎ ಫರ್ಗಾಟನ್ ಎಂಪೈರ್ (A Forgotten Empire)ನಲ್ಲಿ ರಾಬರ್ಟ್ ಸೀವೆಲ್‌ರವರು ಸೆನ್ಹರ್ ಲೋಪ್ಸ್ (Senhor Lopes) ಹೇಳಿದ ಪೋರ್ಚುಗೀಸ್ ಭಾಷಾಂತರದ ವಿಜಯನಗರ ಶಾಸನವೊಂದು ಗಮನಾರ್ಹವಾಗಿದ್ದು ಈ ಕೆಳಗಿನಂತಿದೆ. *[3]

"Senhore Lopes tells me that he recently found in the archives of the Torre do Tobo in Lisbon (Corpo chronologico, Part III, packet II, No 107) a copy of a copper plate grant which was executed by the Chief of Goa in A. D. 1391 in the name of "Virahariar" king of Vijayanagar, the Suzgerain. This was "Vira" Harihara II. It was copied in A. D. 1532, and translated into Portuguese.

ಈವರೆಗಿನ ಶಾಸನ ಸಂಪುಟಗಳಲ್ಲಿ ಇದು ಕಂಡು ಬಂದಿರುವುದಿಲ್ಲ. ಡಾ. ಎಸ್. ಜಿ. ಧೋಪಟೆರವರು 1913ರಲ್ಲಿ V. K. ರಾಜುವಾಡೆರವರ ಗೋವಿಂದ ಬಂಡಿವಾಡೆ ನಾಗೇಶ ದೇವಾಲಯದಲ್ಲಿರುವ ವಿಜಯನಗರದ ಮರಾಠಿ ಶಾಸನಗಳು ಮೊಟ್ಟ ಮೊದಲನೆಯದಾಗಿದ್ದು ಮರಾಠಿ ಭಾಷೆಯಲ್ಲಿ ಇದೊಂದೇ ಶಾಸನವು ಮಾತ್ರ ಈವರೆಗೆ ಲಭಿಸಿರುವುದಾಗಿ ಅಭಿಪ್ರಾಯಪಟ್ಟಿದ್ದಾರೆ. ಆದರೆ ನನ್ನ ಸಂಶೋಧನೆಯಲ್ಲಿ ಮರಾಠೆ ಸರದಾರ ಶಿವಾಜಿಯ ಸ್ವಹಸ್ತಾಕ್ಷರ ಸಹಿಯಿರುವ ಬೆಳ್ಳಿ ತಗಡಿನ ಮರಾಟಿ ಶಾಸನವೊಂದು ವಿಜಯನಗರ ಚಕ್ರವರ್ತಿಗಳ ಪೀಳಿಗೆಯವರಾದ ಆನೆಗೊಂದಿ ದಿ|| ಅಚ್ಯುತದೇವ ರಾಯರಲ್ಲಿ ಲಭಿಸಿದ್ದುದನ್ನು (ನನ್ನ ಲೇಖನ)ವಿಜಯನಗರ ಅಧ್ಯಯನ ಸಂಪುಟದಲ್ಲಿ ಅವಲೋಕಿಸಬಹುದು.[4]. ಪಾಂಡಿಚರಿ ಮ್ಯೂಜಿಯಂನಲ್ಲಿರುವ ವಿಜಯನಗರ ಶಾಸನವೂ ಈವರೆಗಿನ ಸಂಪುಟಗಳಲ್ಲಿ ಕಂಡುಬರುವುದಿಲ್ಲ.[5] ಲೇಖನ ವಿಸ್ತಾರ ಭಯದಿಂದ ಅಧ್ಯಯನಾಕಾಂಕ್ಷಿಗಳ ಪಾಲಿಗೆ ಬಿಟ್ಟು ಇಲ್ಲಿಗೆ ವಿರಮಿಸುವಂತಾಗಿದೆ.

ಪ್ರಕೃತ ಎಪಿಗ್ರಾಫಿಯಾ ಇಂಡಿಕಾದಲ್ಲಿರುವ ವಿಜಯನಗರ ಶಾಸನಗಳನ್ನು ಕುರಿತಂತೆ ಇತ್ತೀಚಿನ ಸಂಶೋಧನೆಗಳಿಗನುಸಾರವಾಗಿ ಆಗಲೇಬೇಕಾಗಿರುವ ಪರಿಷ್ಕರಣೆಗಳನ್ನು ಮಾತ್ರ ತರ್ಕಿಸಲು ಪ್ರಯತ್ನ ನಡೆಸಲಾಗಿದೆ. ಮೂಲ ಆಕರಗಳಿಗೆ ಭಂಗಬಾರದಂತೆಯೂ ಎಚ್ಚರಿಕೆಯಿಂದ ಮುಂದಿನ ಅಧ್ಯಯನಾದಿಗಳಿಗೆ ನ್ಯೂನತೆಗಳನ್ನು ಮಾತ್ರ ತೋರಿಸಕೊಡಲಾಗಿದೆ. ರಾಬರ್ಟ್ ಸೀವೆಲ್‌ರವರು ಎಪಿಗ್ರಾಫಿಯಾ ಇಂಡಿಕಾದೊಂದಿಗೆ, ಈಚಿನ ಸಂಪುಟೀಕರಣದಲ್ಲಿ ಉಲ್ಲೇಖವಿಲ್ಲದಿರುವ ಶಾಸನಗಳನ್ನೂ ಬಳಸಿಕೊಂಡಿರುವುದೂ ಅಧ್ಯಯನ ಯೋಗ್ಯವಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ವಿದೇಶೀಯ ವಿದ್ವಾಂಸರು ಶಾಸನ ಸಂಶೋಧನೆಯಲ್ಲಿ ವಹಿಸಿದ ಆಸಕ್ತಿಯು ಗಣನೀಯವಾದುದು ಎಂಬುದನ್ನು ಅಲ್ಲ ಗಳೆಯುವಂತಿಲ್ಲ. ರಾಬರ್ಟ್ ಸೀವೆಲ್‌ರವರೇ ನುಡಿದಂತೆ "I trust that my remarks regarding the causes of the down fall of Portuguese trade in the 16th century will not be misunderstood. It is not in any spirit of criticism or comparison that I have written those passages, "History, however is history ; and it is a fact"

ಈ ಹಿನ್ನೆಲೆಯಲ್ಲಿ ಮುಂದೆ ಕಂಡುಬರುವಂತೆ ಶಾಸನಗಳನ್ನು ವಿಜಯನಗರ ಇತಿಹಾಸಕ್ಕನುಗುಣವಾಗಿ ಪರಿಷ್ಕರಿಸಿ ನೀಡಲಾಗಿದೆ.

ಎಪಿಗ್ರಾಫಿಯಾ ಇಂಡಿಕಾದಲ್ಲಿರುವ ವಿಜಯನಗರ ಶಾಸನಗಳ ಪರಿಷ್ಕರಣಾ ಸೂಚಿ (1) ಅರವೀಡು (2) ಸಾಳುವ (3)ಸಾಳುವ (4) ಸಂಗಮ (4) ತುಳುವ

ಸಂಖ್ಯೆ	ಎ. ಇಂ. ನಂಬರು	ಸಂಪುಟ	ಕಾಲ	ಚಕ್ರವರ್ತಿಗಳು	ಸಂಪಾದಕರು	ಲೇಖಕರು	ವಿಶೇಷ ವಿಷಯ
1	2	3	4	5	6	7	8
					ಅರವೀಡು		
1	126	III	1894-95	ವೆಂಕಟ - III	ಹುಲ್ಟ್ಜ	ಹೆಚ್. ಕೃಷ್ಣಶಾಸ್ತ್ರಿ	ಕುಣಿಯೂರು ತಾಮ್ರ ಶಾಸನ
2	180	IV	1896-97	ವೆಂಕಟ I	ಅದೇ	ಹುಲ್ಟ್ಜ	ವಿಳಾಪಾಕಾ ಶಾಸನ
3	444	XI	1911-12	ಶ್ರೀರಂಗರಾಯ II	ವಿ. ನಟೇಶ ಅಯ್ಯರ್ ಪೆಷಾವರ್	ವೆಂಕಟಯ್ಯ ಸ್ಟೆನ್ ಕೋನೋ	ಮಾರೇಪಳ್ಳಿ ಶಾಸನ
4	467	XII	1913-14	ವೆಂಕಟಪತಿ ದೇವಮಹಾರಾಯ I	ಟಿ. ವಿ. ಗೋಪಿನಾಥರಾವ್	ಸ್ಟೆನ್ ಕೋನೋ	ದಳವಾಯಿ ಅಗ್ರಹಾರಂ ಮಧುರಾ ಸಾಸನ
5	484	ಅದೇ	ಅದೇ	ಶ್ರೀರಂಗರಾಯ II	ಟಿ. ಎ. ಗೋಪಿನಾಥರಾವ್ ಟಿ. ಎಸ್ ಕುಪ್ಪುಸ್ವಾಮಿ ಶಾಸ್ತ್ರಿ	ಅದೇ	ಅರವಿಳಿ ಮಂಗಳಂ ಶಾಸನ
6	508 A-B	XIII	1915-16	ವೆಂಕಟಪತಿ I	ಸ್ಟೆನ್ ಕೋನೋ ಎಫ್. ಡಬ್ಲ್ಯು. ಥಾಮಸ್	ಎಲ್. ಡಿ. ಬಾರ್ನೆಟ್	ಬ್ರಿಟಿಷ್ ಮ್ಯೂಜಿಯಂ ಶಾಸನ
7	593	XVI	1921-22	ತಿರುಮಲ I	ಎಫ್. ಡಬ್ಲ್ಯು. ಥಾಮಸ್ ಹೆಚ್. ಕೃಷ್ಣಶಾಸ್ತ್ರಿ	ಕೃಷ್ಣಮಾಚಾರ್ಲು	ಪೆನುಗಟೂರು ಶಾಸನ
8	597	ಅದೇ	ಅದೇ	ವೆಂಕಟ I	ಅದೇವಿ.	ನಟೇಶ ಅಯ್ಯರ್	ಪದ್ಮನೇರಿ ಶಾಸನ
9	689	XIX	1927-28	ವೆಂಕಟಪತಿದೇವ I	ಹೀರಾನಂದ ಶಾಸ್ತ್ರಿ	ಜಿ. ವಿ. ಶ್ರೀನಿವಾಸರಾವ್	ಕಂಡುಕೂರು ಶಾಸನ.

1		2	3	4	5	6	7 8
					ಸಾಳುವ		
1	267	VII	1902-03	ಇಮ್ಮಡಿ ನರಸಿಂಹ	ಹುಲ್ಟ್ಜ(Hultysch)	ಜೆ. ರಾಮಯ್ಯ	ದೇವಲಪಳ್ಳಿ ಶಾಸನ
					ಸಂಗಮ		
1	96	III	1894-95	ಸಂಗಮ II	ಅದೇ	ಹೆಚ್. ಕೃಷ್ಣಶಾಸ್ತ್ರಿ	ಚಿತ್ರಗುಂಟ ಶಾಸನ
2	97	ಅದೇ	ಅದೇ	ದೇವರಾಯ II	ಅದೇ	ಹುಲ್ಟ್ಜ	ಸತ್ಯಮಂಗಲ ಶಾಸನ
3	111	ಅದೇ	ಅದೇ	ಹರಿಹರ II	ಅದೇ	ವಿ. ವೆಂಕಯ್ಯ	ನಲ್ಲೂರು ಶಾಸನ
4	ಅದೇ	ಅದೇ	ವಿರೂಪಾಕ್ಷ	ಅದೇ	ಅದೇ	ಆಲಂಪಡಿ ಶಾಸನ	
5	322	VIII	1905-06	ಅದೇ	ಅದೇ	ಎ. ಗೋಪಿನಾಥರಾವ್	ಸೋರೈಕ್ಕಾವೂರ್ ಶಾಸನಿ
6	323	ಅದೇ	ಅದೇ	(ಶ್ರೀಗಿರಿಭೂಪಾಲ?)	ಅದೇ	ಎಂ. ನಾರಾಯಣಸ್ವಾಮಿ ಅಯ್ಯರ್	ಮದರಾಸ್ ವಸ್ತುಸಂಗ್ರಹಾಲಯ ಶಾಸನ
7	519	XIV	1917-18	ವಿಜಯಭೂಪತಿ	ಎಫ್. ಡಬ್ಲ್ಯು. ಥಾಮಸ್	ಜಿ. ವೆಂಕೋಬರಾವ್	ದಂಡಪಲ್ಲಿ ಶಾಸನ
8	521	ಅದೇ	ಅದೇ	ಭಾಸ್ಕರ ಭವದೂರ	ಅದೇ	ವಿ. ಎಸ್. ಸುಕ್ತಂಕರ್	ಪೊಮ್ಮಮಿಲ್ಲಾ ಕೆರೆ ಶಾಸನ, ಇದು ವಿಜಯನಗರಕ್ಕೆ ಸಂಬಂಧಿಸಿದಂತೆ ಕಂಡು ಬರುವುದಿಲ್ಲ. ನಂ. 520ರ ಶ್ರೀರಂಗನಾಥ ಸ್ವಾಮಿ ದೇವಾಲಯ ಶಾಸನ ಪರಿಶೀಲನೆಗೆ ಅರ್ಹವೆನಿಸಿದೆ.

1	2	3	4	5	6	7	8
9	549	XV	1919-20	ವಿರೂಪಾಕ್ಷ	ಎಫ್. ಡಬ್ಲ್ಯೂ ಥಾಮಸ್	ಟಿ. ಎ. ಗೋಪಿನಾಥರಾವ್	ಶ್ರೀ ಶೈಲಂ ಶಾಸನ
10	590	XVI	1921-22	ಹರಿಹರರಾಯ, ಉದಯಯಾರ್	ಎಫ್. ಡಬ್ಲ್ಯೂ ಥಾಮಸ್ ಕೃಷ್ಣಶಾಸ್ತ್ರಿ	ಟಿ. ಎ. ಗೋಪಿನಾಥರಾವ್, ವರಖೇಡಿ ಬಾಪು ಆಚಾರ್ಯ	ರಂಗನಾಥ ದೇವಾಲಯ ಶಾಸನ (ಉದಯಕುಮಾರ್ > ಒಡೆಯರ್ > ಚಕ್ರವರ್ತಿ)
11	603	ಅದೇ	ಅದೇ	ಮಲ್ಲಿಕಾರ್ಜುನ	ಅದೇ	ಗೋಪೀನಾಥರಾವ್	ಶ್ರೀರಂಗಂ ಶಾಸನ
12	613	XVII	1923-24	ದೇವರಾಯ II	ಹೆಚ್. ಕೃಷ್ಣಶಾಸ್ತ್ರಿ	ಅದೇ	ಶ್ರೀರಂಗನಾಥ ಶಾಸನ
13	619	ಅದೇ	ಅದೇ	ವಿರೂಪಾಕ್ಷ	ಅದೇ	ಕೆ. ವಿ. ಸುಬ್ರಮಣ್ಯ ಅಯ್ಯರ್	ಸೋಮಲಾಪುರಂ ಶಾಸನ
14	648	XVIII	1925-26	ದೇವರಾಯ II	ಕೃಷ್ಣಶಾಸ್ತ್ರಿ, ಹೀರಾನಂದ ಶಾಸ್ತ್ರಿ	ಎಸ್. ವಿ. ವಿಶ್ವನಾಥ, ಟಿ. ಎ. ಗೋಪಿನಾಥರಾವ್	ಶ್ರೀ ರಂಗನಾಥ ದೇವಾಲಯ (ಶ್ರೀರಂಗಂ) ತಾಮ್ರ ಶಾಸನ
15	752	XXI	1931-32	ಹರಿಹರ	ಹೀರಾನಂದ ಶಾಸ್ತ್ರಿ, ಕೆ. ಎನ್. ದೀಕ್ಷಿತ್, ಎನ್. ಪಿ. ಚಕ್ರವರ್ತಿ	ಜಿ. ವಿ. ಆಚಾರ್ಯ	(ಚಂದಲ ಶಾಸನ?)
16	861	XXIII	1935-36	ದೇವರಾಯ-ಮಹರಾಯ	ಎನ್. ಪಿ. ಚಕ್ರವರ್ತಿ	ಆರ್. ಎಸ್. ಪಂಚಮುಖಿ	ಸಂಗೂರು ಶಾಸನ
17	949-B	XXV	1939-40	ಪ್ರಿನ್ಸ್ ತ್ರಿಯಂಬಕ?	ಅದೇ	ಎನ್. ಲಕ್ಷ್ಮೀನಾರಾಯಣರಾವ್	ನೂತಿಮಡುನಿಂದ ಶಾಸನ 2B plate of Vijayanagara (ಪರಿಶೀಲನಾರ್ಹ)
18	1104	XXVIII	1949-50	ಕಂಪಣ	ಬಿ. ಚಿ. ಚಾಬ್ರ,	ವೆಂಕಟಸುಬ್ಬಯ್ಯ ಡಿ. ಸಿ. ಸರ್ಕಾರ್	ಮದಂ ತಾಟಕಪುರೀಶ್ವರ ದೇವಸ್ಥಾನ I undated II ಶಂಬುವರಾಯ ವಾಯಕರ ಕುರಿತು ಪರಿಶೀಲಿಸುವಅಗತ್ಯವಿದೆ

1	2	3	4	5	6	7	8
19	43	I	1888-92	ಕೃಷ್ಣರಾಯ	ಬರ್ಗೆಸ್(Burgess), ಹುಲ್ಟ್ಜ	ಹುಲ್ಟ್ಜ	ಹಂಪೆ ಶಿವದೇವಾಲಯ ಶಾಸನ. ಇದು ಆಕರ ಉಪಯೋಗವಾಗಿದೆಯೇ?
20	46	ಅದೇ	ಅದೇ	ಅದೇ	ಅದೇ	ಅದೇ	ಉಗ್ರನರಸಿಂಹಸ್ವಾಮಿ ದೇವಾಲಯ ಶಾಸನ ಅದೇ
21	69	II	1892-94	?	ಬರ್ಗೆಸ್, Asst. a. ಪುಹ್ರೆರ್	?	Prabhosa Inscription Rock Inscription, Ashadasena plate; Cave Inscription of Ashadasena Dharmasala Inscription ಲೇ : ಪುಹ್ರೆರ್ ; ಇದು ವಿಜಯನಗರ ಶಾಸನದಲ್ಲಿ ಪ್ರಶ್ನಾರ್ಹವಾಗಿದೆ.
					ತುಳುವ		
1	116	III	1894-95	ಅಚ್ಯುತರಾಯ	ಹುಲ್ಟ್ಜ	ಎಫ್. ಕೀಲ್‌ಹಾರ್ನ್	ಉಣಮಂಜೇರಿ ಶಾಸನ
2	116	III	1894-95	ಸದಾಶಿವರಾಯ	ಅದೇ	ಅದೇ	ಬ್ರಿಟಿಷ್ ಮ್ಯೂಜಿಯಂ ಶಾಸನ
3	179	ಅದೇ	ಅದೇ	ಕೃಷ್ಣರಾಯ	ಅದೇ	ಅದೇ	ಸಕಲಾಪುರ ಆಂಜನೇಯ ಶಾಸನ
4	234 A-B	VI	1900-01	ಅದೇ	ಅದೇ	ಹೆಚ್. ಲೂಡರ್ಸ್	ಮಂಗಲಗಿರಿ ಸ್ತಂಭ ಶಾಸನ, ಕೋದಂಡರಾಮಸ್ವಾಮಿ ದೇವಾಲಯ ಸ್ತಂಭ ಶಾಸನ
5	244	ಅದೇ	ಅದೇ	ಅದೇ	ಅದೇ	ಅದೇ	ಕೊಂಡವೀಡು ಸ್ತಂಭ ಶಾಸನ
6	262	VII	1902-03	ಅದೇ	ಅದೇ	ಅದೇ	ಅಮರಾವತಿ ಶಿಲಾ ಶಾಸನ

1	2	3	4	5	6	7	8
7	579	IX	1907-08	ಸದಾಶಿವರಾಯ	ಹುಲ್ಟ್ಜ:ಸ್ಟೆನ್ ಕೋನೋ	ಟಿ. ಎ. ಗೋಪಿನಾಥರಾವ್ ಟಿ. ರಾಘವಯ್ಯ	ಕೃಷ್ಣಾಪುರಂ ತಾಮ್ರಶಾಸನ
8	494	XIII	1915-16	ಕೃಷ್ಣದೇವರಾಯ	ಸ್ಟೆನ್ ಕೋನೋ. ಎಫ್. ಡಬ್ಲ್ಯೂ ಥಾಮಸ್	ಎಸ್. ವಿ ವೆಂಕಟೇಶ ಅಯ್ಯರ್, ಎಸ್. ವಿ. ವಿಶ್ವನಾಥ	ಕಾಂಜೀವರಂ ತಾಮ್ರ ಶಾಸನ
9	529	XIV	1917-18	ಅದೇ	ಎಫ್. ಡಬ್ಲ್ಯೂ. ಥಾಮಸ್	ಅದೇ	ಉದಯಂಬಾಕಂ ಶಾಸನ
10	533	ಅದೇ	ಅದೇ	ಸದಾಶಿವರಾಯ	ಅದೇ	ಅದೇ	ಬೇವಿನಹಳ್ಳಿ ಶಾಸನ
11	534	ಅದೇ	ಅದೇ	ವೀರನೃಸಿಂಹ	ಅದೇ	ಅದೇ	ಕುಡಿಯಾಲಂಡಾಲ್ ಶಾಸನ
12	539	ಅದೇ	ಅದೇ	ಅಚ್ಯುತರಾಯ	ಅದೇ	ಅದೇ	ಕುಡಲಾಡಿ ಶಾಸನ
13	542	ಅದೇ	ಅದೇ	ಸದಾಶಿವರಾಯ	ಅದೇ	ಎಸ್. ವಿ. ವಿಶ್ವನಾಥ್	ಕನುಮಾ ಶಾಸನ
14	652	XVIII	1925-26	ಕೃಷ್ಣದೇವರಾಯ	ಹೆಚ್. ಕೃಷ್ಣಶಾಸ್ತ್ರಿ, ಹೀರಾನಂದ ಶಾಸ್ತ್ರಿ	ಟಿ. ಎ. ಗೋಪಿನಾಥರಾವ್, ಕೆ. ಅಮೃತರಾವ್	ಶ್ರೀರಂಗ ರಂಗನಾಥದೇವಾಲಯ ಶಾಸನ 2 ತಾಮ್ರ ಶಾಸನಗಳು (A)-1436(B)-1450
15	767	XXI	1931-32	ಅದೇ	ಹೀರಾನಂದ ಶಾಸ್ತ್ರಿ, ಕೆ. ಎನ್. ದೀಕ್ಷಿತ್, ಎನ್. ಪಿ. ಚಕ್ರವರ್ತಿ	ವೆಂಕಟಸುಬ್ಬ ಅಯ್ಯರ್	ಪಿರನ್ಮಲೈ ಮಂಗೈನಾಥೇಶ್ವರ ದೇವಾಲಯ ಶಾಸನ
16	925	XXIV	1937-38	ಅಚ್ಯುತರಾಯ	ಎನ್. ಪಿ. ಚಕ್ರವರ್ತಿ	ಎ. ಎಸ್. ರಾಮನಾಥಅಯ್ಯರ್	ಶ್ರೀರಂಗ ರಂಗನಾಥದೇವಾಲಯ ಶಾಸನ
17	962	XXV	1939-40	ಕೃಷ್ಣದೇವರಾಯ	ಅದೇ	ಕೆ. ಎ. ನೀಲಕಂಠಶಾಸ್ತ್ರಿ	ಮಂಗಾಯಿ ಶಾಸನ
18	1138	XXIX	1951-52	ಸದಾಶಿವರಾಯ	ಬಿ. ಚ. ಚಾಬ್ರ, ಎನ್. ಲಕ್ಷ್ಮೀನಾರಾಯಣರಾವ್, ಡಿ. ಸಿ. ಸರ್ಕಾರ್	ಕೆ. ಜಿ. ಕೃಷ್ಣನ್	ಶ್ರೀರಂಗ ರಂಗನಾಥದೇವಾಲಯ ಶಾಸನ

1	2	3	4	5	6	7	8
19	1190	XXX	1953-54	ಕೃಷ್ಣದೇವರಾಯ	ಎನ್. ಲಕ್ಷ್ಮೀನಾರಾಯಣರಾವ್, ಡಿ. ಸಿ. ಸರ್ಕಾರ್	ಮೋರೇಶ್ವರ್, ಜಿ. ದೀಕ್ಷಿತ್	ಸಾಂಗ್ಲಿ ಮ್ಯೂಜಿಯಂ ಶಾಸನ
20	1235	XXXI	1955-56	ಅದೇ	ಡಿ. ಸಿ. ಸರ್ಕಾರ್	ವಿ. ರಂಗಾಚಾರ್ಯ	ಕಮಲಾಪುರ ತಾಮ್ರಶಾಸನ ಈವರೆಗಿನ ಆಕರದಲ್ಲಿ ಬಳಕೆಯಾಗಿದೆಯೇ?
21	1322	XXXIII	1959-60	ಕೃಷ್ಣದೇವರಾಯ	ಅದೇ	ಡಿ. ಸಿ. ಸರ್ಕಾರ್, ಕೆ. ಹೆಚ್. ವಿ. ಶರ್ಮ	ಗಯಾ ವಿಷ್ಣುಪಾದ ಶಾಸನ (3) ಕೃಷ್ಣದೇವರಾಯ ಶಾ.ಶ.1444 ಡಾ. ವೆಂಕಟೇಶ್ ಈಗಾಗಲೇ ಪ್ರಬಂಧ ಸಾದರಪಡಿಸಿದ್ದಾರೆ. (4) ಅಚ್ಯುತರಾಯ ಶಾ. ಶ. 1588 ಇದು ಪ್ರಶ್ನಾರ್ಹವಾಗಿದೆ.
22	1341	ಅದೇ	ಅದೇ	ಅಚ್ಯುತರಾಯ	ಅದೇ	ಅದೇ	ಕಾಂಚೀಪುರಂ ಏಕಾಂಬ್ರನಾಥ ದೇವಾಲಯ ಶಾಸನ.

ಅರವೀಡು	9
ಸಾಳುವ	1
ಸಂಗಮ	21
ತುಳುವ	22
ಒಟ್ಟು	*53*

ಇದರಲ್ಲಿ ಕಂಡು ಬಂದಂತೆ 53 ಶಾಸನಗಳಲ್ಲಿ ಸಂಗಮ ನಂಬರ್ 8, 17, 18, 21; ತುಳುವ ನಂ. 21ನೇ ಶಾಸನಗಳು ಪ್ರಶ್ನಾರ್ಹವಾಗಿವೆ. ಹಲವು ಸಂದರ್ಭಗಳಲ್ಲಿ ಹುಲ್ಟ್ಜ್, ಕೀಲ್ ಹಾರ್ನ್, ಎಲ್. ಡಿ. ಬಾರ್ನೆಟ್, ಲಕ್ಷ್ಮೀನಾರಾಯಣರಾವ್ ಹೊರತು ಪಡಿಸಿದಲ್ಲಿ ವಿಜಯನಗರ ಇತಿಹಾಸದಲ್ಲಿ ಅಧ್ಯಯನದ ಕೊರತೆ ಕಂಡುಬರುತ್ತದೆ. ರಾಬರ್ಟ್ ಸೀವೆಲ್ ಮತ್ತು ಎಂ. ರಾಮಶರ್ಮರವರು ಮಾತ್ರ ಎಫಿಗ್ರಾಫಿಯಾ ಇಂಡಿಕಾ ಆಕರಗಳನ್ನು ಬಳಸಿಕೊಂಡಿರುವುದು ವ್ಯಕ್ತಪಡುತ್ತದೆ. ಸದ್ಯಕ್ಕೆ ಇಷ್ಟು ಸಾಕೆನಿಸಿದೆ.

ಉಪಸಂಹಾರ

ಈ ಪ್ರಬಂಧದಲ್ಲಿ ನಿರೂಪಿಸಿದಂತೆ ದೇಶವಿದೇಶಗಳ ಮ್ಯೂಜಿಯಂ ಹಾಗೂ ಪತ್ರಾಗಾರಗಳಲ್ಲಿ ವಿಜಯನಗರ ಅಪ್ರಕಟಿತ ಶಾಸನಗಳು ಗೋಚರಿಸಿದ್ದು ಅಧ್ಯಯನಾದಿಗಳಿಗೆ ಮೈಲುಗಲ್ಲಾಗಿವೆ. ಬ್ರಿಟಿಷ್ ಮ್ಯೂಜಿಯಂನಲ್ಲಿರುವ ವಿಜಯನಗರ ಶಾಸನದ ಚರಿತ್ರಾರ್ಹ ಸಂಗತಿಗಳು ಆಕರಗಳಿಗೆ ಗಮನಾರ್ಹ ಮಾಹಿತಿಗಳನ್ನು ನೀಡುತ್ತವೆ. ಮಾದರಿಗಾಗಿ :

4ನೇ ಪುಟ (ಮುಂಭಾಗ)

131 ನೇ ಸಾಲು : ಚೇತಸೇ ಜಗತಂಖ್ಯಾತ ಜಯಂಕೊಂಡ ಚೋಳ ಮಂಡಳವಾಸಿನಮ್

132 ನೇ ಸಾಲು : ಶ್ರೀ ಚಂದ್ರಗಿರಿ ರಾಜ್ಯೇಚ ಪ್ರಾಜ್ಯೇವಾಸಂಉಪಾಶ್ರಿತಮ್ ಶಿಂಕಟ್ಟು ಕೋಟಕಂತ

133 " " : ಸ್ಥಮ್ ಮಾಹಾಲೂರ್ನಕೆ ಸ್ಥಿತಮ್ | (ಶ್ರೀ) ಕಚ್ಚಿಪಟ್ಟು ಸೀಮಂತರ್ಭವಮ್

134 " ": ತಂ ಶ್ರೀಪತಿಚ್ಚೇರಿ ಸೀಮಾಂತತ್ ಪ್ರಾಚ್ಯಂ ಚ ವಟಮಂಗಳತ್ ಮಲೇಪ.... ಇತ್ಯಾದಿ.

ಇದರ ವಿವರಣೆಗಳನ್ನು ಡಾ. ಹುಲ್ಟ್ಜ್‌ರವರು - The figures after the names refer to the lines of the original text - ಎಂಬುದಾಗಿ ನೀಡಿ the list of Kotakas

(a) List of Kotakas

Ikkathu - k, 188, 218, 222

Pulali. k- 199 ; Pulili, k - 195; Polili - k. 183 Puliyar - k. 176.

(b) List of Nandukas :

Amaru - n, 212

Kachchuru - n., in Ikattu - k, 219 ; in Pulali - k. 196

Kakalanur - n 188

Nayathn - n 199

(c) List of villages etc., :

Achchaperumpedu 162 ; Achamperumpeta (du) 143

Achchirumuha 203. ಇತ್ಯಾದಿ.

The name of this naduka which means 'the hill division' may be connected with that of the temple of Malaya - Nachchiyar which belonged it.[6]

ಈ ರೀತಿಯ ವಿಜಯನಗರ ಶಾಸನಗಳ ವಿವಿಧಾಂಶಗಳ ಪ್ರಮುಖ ಆಕರಗಳನ್ನು ಇತಿಹಾಸ ತಜ್ಞರು ಬಳಸಿಕೊಂಡಂತೆ ಕಂಡುಬರುವುದಿಲ್ಲ. ಇಂತಹ ಕೊರತೆಗಳು ವಿಪುಲವಾಗಿವೆ. ಈಚೆಗೆ ವಿಜಯನಗರ ಅಧ್ಯಯನ ಸಂಪುಟಗಳಲ್ಲಿ ಅಪ್ರಕಟಿತ ಶಾಸನಗಳೂ ಪ್ರಕಟವಾಗಿವೆ. ದಿ|| ಅಚ್ಯುತ ದೇವರಾಯರಲ್ಲಿರುವ ಕೋರಿ ಕಾಗದ ಗೊಚಲುಗಳಲ್ಲಿಯೂ ವಂಶಾವಳಿಯ ಮಾಹಿತಿಗಳು ತೆಲುಗಿನಲ್ಲಿ ಲಭಿಸಿವೆ. *[7] ಎಫಿಗ್ರಾಫಿಯಾ ಆಂಧ್ರಿಕಾ ಆದಿಯಾಗಿ ಇವುಗಳೆಲ್ಲವನ್ನೂ ಕ್ರೋಡಕರಿಸಿ ಡಾ. ಬಾ. ರಾ. ಗೋಪಾಲ್‌ರವರ ಸಂಪುಟಗಳಿಗೆ ಮುಂದುವರಿಯಲು ಸಂಪುಟೀಕರಿಸಿ ಪ್ರಕಟಿಸಿದಲ್ಲಿ ಮುಂದಿನ ಅಧ್ಯಯನಾಕಾಂಕ್ಷಿಗಳಿಗೆ ವಿಪುಲ ಪ್ರಯೋಜನವುಂಟು. ಕನ್ನಡ ವಿಶ್ವವಿದ್ಯಾನಿಲಯ ಕುವೆಂಪು ವಿಶ್ವವಿದ್ಯಾನಿಲಯದ ಕೆಳದಿ ಸಂಶೋಧನಾಲಯದ ಮುಖಾಂತರ ಯೋಜನೆ ಹಮ್ಮಿಕೊಂಡಲ್ಲಿ ನನ್ನ ಮಾರ್ಗದರ್ಶನ ಸದಾ ಸಿದ್ಧವಾಗಿದೆ. ಇದಕ್ಕೆ ಇಚ್ಛಾಶಕ್ತಿ ಇದೆಯೇ? ಕಾಲಪುರುಷನೇ ಹೇಳಬೇಕಲ್ಲವೇ?

೧೧. ವಿಜಯನಗರ ಸಾಮ್ರಾಜ್ಯದ ಶಾಸನಗಳಲ್ಲಿ 'ಚಾವಡಿ': ಒಂದು ಪರಿಶೀಲನೆ

ಡಾ. ಪಿ.ವಿ. ಕೃಷ್ಣಮೂರ್ತಿ

ಪ್ರಾಚೀನ ಮತ್ತು ಮದ್ಯಕಾಲೀನ ಪ್ರಾದೇಶಿಕ ವಿಭಾಗಗಳು ಸಾಮಾನ್ಯವಾಗಿ ಸಮಕಾಲೀನ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯಲ್ಲಿನ ಬದಲಾವಣೆಗಳನ್ನು ಬಿಂಬಿಸುತ್ತವೆ. ವಿಜಯನಗರ ಕಾಲದ ಶಾಸನಗಳಲ್ಲಿ ಲಭ್ಯವಾಗುವ ಭೌಗೋಳಿಕ ವಿವರಗಳನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಿದರೆ, ಮೇಲ್‌ಸ್ತರದ ಪ್ರಾದೇಶಿಕ ಘಟಕಗಳಾದ ಮಂಡಲ, ರಾಜ್ಯ, ವಳನಾಡು ಮುಂತಾದವುಗಳಿಗೆ ಹೋಲಿಸಿದರೆ ಕೆಳ ಸ್ತರದ ಪ್ರಾದೇಸಿದ ಘಟಕಗಳಾದ ನಾಡು, ಸ್ಥಳ ಮತ್ತು ಗ್ರಾಮಗಳು ದೀರ್ಘಕಾಲ ಹೆಚ್ಚು ಸ್ಥಿರವಾಗಿದ್ದುದನ್ನು ಮನಗಾಣಬಹುದಾಗಿದೆ. ವಾಸ್ತವವಾಗಿ ಕೆಳಸ್ತರದ ಘಟಕಗಳು ಮೊದಲಿಗೆ ಸಾಮಾಜಿಕ ಎಲ್ಲೆಗಳು, ಅನಂತರದಲ್ಲಿ ಆಡಳಿತಾತ್ಮಕ ಎಲ್ಲೆಗಳಷ್ಟೆ. ಪ್ರಸ್ತುತ ಪ್ರಬಂಧವು ವಿಜಯನಗರ ಸಾಮ್ರಾಜ್ಯದ ಆಡಳಿತದಲ್ಲಿನ ಮೇಲ್‌ಸ್ತರದ ಪ್ರಾದೇಶಿಕ ಘಟಕಗಳ ಲೆಕ್ಕದಲ್ಲಿ ಉಲ್ಲೇಖವಾಗಿರುವ ಚಾವಡಿಯನ್ನು ಕುರಿತದ್ದಾಗಿದೆ.

ವಿಜಯನಗರವನ್ನು ಕುರಿತು ಆರಂಭಿಕ ಅಧ್ಯಯನಗಳನ್ನು ನಡೆಸಿದ ವಿದ್ವಾಂಸರಲ್ಲಿ ಎನ್. ವೆಂಕಟರಮಣಯ್ಯ ಮತ್ತು ಟಿ.ವಿ. ಮಹಾಲಿಂಗಂ ಅವರು ಅಗ್ರಗಣ್ಯರು. ಅವರು ತಮ್ಮ ಅಧ್ಯಯನಗಳಲ್ಲಿ ವಿಜಯನಗರದ ಪ್ರಾದೇಶಿಕ ಎಲ್ಲೆಗಳ ವ್ಯವಸ್ಥೆಯ ಬಗ್ಗೆ ಒಂದು ಸ್ಥೂಲ ಚಿತ್ರವನ್ನಷ್ಟೇ ನೀಡಿದ್ದಾರೆ. ಅಲ್ಲದೆ ಸುಮಾರು ಮುನ್ನೂರು ವರ್ಷಗಳ ವಿಜಯನಗರದ ಆಡಳಿತದಲ್ಲಿ ಉಂಟಾಗಿರಬಹುದಾದ ಆಡಳಿತ ಘಟಕಗಳ ಬದಲಾವಣೆ ಹಾಗೂ ವಿಭಿನ್ನ ಭಾಷಾ ಪ್ರದೇಶಗಳಲ್ಲಿ ಕಂಡುಬಂದ ವ್ಯತ್ಯಾಸಗಳ ಬಗ್ಗೆ ಅವರು ಸೂಕ್ಷ್ಮ ಅಧ್ಯಯನವನ್ನು ಕೈಗೊಳ್ಳದಿರುವುದೇ ಆ ಅಧ್ಯಯನಗಳ ಕೊರತೆ ಎನ್ನಬಹುದು.

1940ರ ಅನಂತರದಲ್ಲಿ ಬಂದ ವಿಜಯನಗರಕ್ಕೆ ಸಂಬಂಧಿಸಿದ ಇತಿಹಾಸ ಪುಸ್ತಕಗಳಲ್ಲಿ ಹಿಂದಿನ ವಿದ್ವಾಂಸರ ಅಭಿಪ್ರಾಯಗಳನ್ನೇ ಪ್ರಶ್ನಿಸದೆ, ಸ್ವೀಕರಿಸಿರುವುದು ಕಂಡುಬರುತ್ತದೆ. ಈ ನಿಟ್ಟಿನಲ್ಲಿ ಡಾ. ಕೆ.ವಿ. ರಮೇಶ್ ವರು ತಮ್ಮ *A History*

of South Kanara ಕೃತಿ ಮತ್ತು *Vijayanara and Territorial Re-adjustmens is Karnataka (Kannada Studies* Vol 3; University of Mysore) ಎಂಬ ಲೇಖನದಲ್ಲಿ ಮೇಲ್‌ಸ್ತರದ ಆಡಳಿತ ಘಟಕವಾದ 'ರಾಜ್ಯ'ವನ್ನು ಮಾತ್ರ ಕುರಿತು ಸ್ವಲ್ಪ ಮಟ್ಟಿಗೆ ವಿಶ್ಲೇಷಿಸಿರುವುದು ಕಂಡುಬರುತ್ತದೆ. ವಿಜಯನಗರ ಕಾಲದ ಕನ್ನಡ, ತಮಿಳು ಮತ್ತು ತೆಲುಗು ಶಾಸನಗಳ ವಿಪುಲ ಭಂಡಾರವೆ ನಮ್ಮ ಮುಂದೆ ಇದ್ದರೂ ಆ ಸಾಮ್ರಾಜ್ಯದ ಚಾರಿತ್ರಿಕ ಮತ್ತು ರಾಜಕೀಯ ಭೂಗೋಳದ ಸ್ಪಷ್ಟ ಚಿತ್ರ ಇನ್ನೂ ನಮಗೆ ಅಲಭ್ಯವಾಗೇ ಉಳಿದಿದೆ. ಆದರೆ ಖ್ಯಾತ ಶಾಸನತಜ್ಞ ಹಾಗೂ ಇತಿಹಾಸಕಾರರಾಗಿದ್ದ ಬಿ.ಆರ್. ಗೋಪಾಲ್ ಅವರು ತಮ್ಮ *Vijayanagar Inscriptions*, Vol I (19896)ರ ಪ್ರಸ್ತಾವನೆ ಭಾಗದಲ್ಲಿ ಈ ಭೌಗೋಳಿಕ ಘಟಕಗಳ ಬಗ್ಗೆ ವಿದ್ವಾಂಸರ ಗಮನ ಸೆಲೆಯುವ ಪ್ರಯತ್ನ ಮಾಡಿದ್ದಾರೆ. ಅವುಗಳಲ್ಲಿ 'ಚಾವಡಿ' ಮುಂತಾದ ವಿಶಿಷ್ಟ ಪ್ರಾದೇಶಿಕ ಘಟಕಗಳ ಪ್ರಾಮುಖ್ಯತೆಯನ್ನು ಪ್ರಸ್ತಾಪಿಸಿದ್ದಾರಾದರೂ ಸೂಕ್ಷ್ಮ ಅಧ್ಯಯನಕ್ಕೆ ಒಳಪಡಿಸಿರುವುದಿಲ್ಲ. ಇತ್ತೀಚೆಗೆ ಪ್ರಕಟವಾದ ಶ್ರೀನಿವಾಸ ರಿತ್ತಿ ಮತ್ತು ಬಿ.ಆರ್. ಗೋಪಾಲ್ ಅವರು ಸಂಪಾದಿಸಿರುವ Inscri-tions of Vijayanagar Rulers Vol. II (ICHR 2008)ರಲ್ಲಿ 'ಚಾವಡಿ' ಯ ಬಗ್ಗೆ ಸ್ವಲ್ಪ ಹೆಚ್ಚಿನ ವಿಶ್ಲೇಷಣೆ ಮಾಡಿರುವುದು ಕಂಡುಬರುತ್ತದೆ. 'ಚಾವಡಿ' ಯ ಇಂದಿನ ಅರ್ಥವ್ಯಾಪ್ತಿಗೂ ವಿಜಯನಗರ ಶಾಸನಗಳಲ್ಲಿನ 'ಚಾವಡಿ' ಅರ್ಥವ್ಯಾಪ್ತಿಗೂ ವ್ಯತ್ಯಾಸವಿರುವುದನ್ನು ಸೋದಾಹರಣವಾಗಿ ನಿರೂಪಿಸಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ಒಟ್ಟಾರೆ ವಿಜಯನಗರ ಕಾಲದ 'ಚಾವಡಿ' ಎಂಬುದು ಆಡಳಿತಕ್ಕೆ ಸಂಬಂಧಪಟ್ಟಿದ್ದರೂ ಅದು ಯಾವ ತೆರವಾದ ಆಡಳಿತಕ್ಕೆ ನೇರವಾಗಿ ಸಂಬಂಧಿಸಿದೆ ಎಂಬುದನ್ನು ನಿರ್ಧರಿಸುವುದರಲ್ಲಿ ವಿದ್ವಾಂಸರಲ್ಲಿ ಗೊಂದಲವಿರುವುದು ಖಚಿತ.

ಕನ್ನಡ-ಕನ್ನಡ ನಿಘಂಟಿನಲ್ಲಿ 'ಚಾವಡಿ' ಎಂಬುವ ಪದಕ್ಕೆ ಅನೇಕ ಅರ್ಥಗಳನ್ನು ನೀಡಲಾಗಿದೆ. ಅದರ ಪರ್ಯಾಯ ಪ್ರಯೋಗಗಳನ್ನು ಗುರುತಿಸಲಾಗಿದೆ. ಅಂದರೆ ಚಾವಡಿ, ಚಾವಡೆ, ಚಾವುಡಿ, ಛಾವಡಿ ಎಂದೂ ಪ್ರಯೋಗವಾಗಿರುವುದನ್ನು ಸೂಚಿಸಲಾಗಿದೆ. ಆಸ್ಥಾನ, ಸಭಾಮಂದಿರ, ಓಲಗಶಾಲೆ, ಹಳ್ಳಿಯಲ್ಲಿಯ ಪಂಚಾಯಿತಿ ಸಭೆ, ಸೇರುವ ಸ್ಥಳ, ಹಳ್ಳಿಯ ಕಚೇರಿ, ಗ್ರಾಮ ಕಚೇರಿ, ಮನೆಯ ಮುಂದಿನ ಜಗುಲಿ, ಕಟ್ಟೆ, ಆಶ್ರಯ ಸ್ಥಾನ, ಕೊತವಾಲನ ಕಚೇರಿ, ಪೋಲಿಸ್ ಚೌಕಿ-ಎಂಬುವ ಅರ್ಥವ್ಯಾಪ್ತಿಯನ್ನು 'ಚಾವಡಿ' ಪದ ಪಡೆದಿರುವುದನ್ನು ನಿಘಂಟುಗಾರರು ಗುರುತಿಸಿದ್ದಾರೆ. ಈ ಪದ ಮರಾಠಿ ಮತ್ತು ಹಿಂದಿಯಲ್ಲೂ ಬಳಕೆಯಲ್ಲಿದೆ.

ಶಾಸನ ಅಧ್ಯಯನ ಕ್ಷೇತ್ರದ ದಿಗ್ಗಜರೆನಿಸಿದ್ದ ಜೆ.ಎಫ್. ಫ್ಲೀಟ್ ಅವರು ಕ್ರಿ.ಶ. ೧೮೭೬ರಷ್ಟು ಹಿಂದೆಯೇ ಕೆಲವು ವಿಜಯನಗರ ಶಾಸನಗಳನ್ನು ಸಂಪಾದಿಸುವ ಸಂದರ್ಭದಲ್ಲಿ 'ಚಾವಡಿ' ಬಗ್ಗೆ ಈ ರೀತಿ ಅಭಿಪ್ರಾಯಪಟ್ಟಿದ್ದಾರೆ.

"In the present day the meaning of this term is restricted to the revenue and police office of a village, in which the village headman and accountant transact their business. At the time of the inscription in which occurs it would appear to denote the chief offce for transacting or superintending the business of circle of villages."

ಫ್ಲೀಟರ ಈ ಹೇಳಿಕೆ ಮತ್ತು ಅವರ ಒಳನೋಟವನ್ನು ಕಳೆದ ಒಂದು ಶತಮಾನದ ಅವಧಿಯಲ್ಲಿ ಯಾರೂ ಚರ್ಚಿಸಿಲ್ಲ. ತಮಿಳುನಾಡಿನ ವಿಜಯನಗರ ಇತಿಹಾಸದ ಮೇಲೆ ಅಗಾಧ ಕೆಲಸ ಮಾಡಿರುವ ಟಿ.ವಿ. ಮಹಾಲಿಂಗಂ ಅವರು "the term ಚಾವಡಿ, literally meaning a hall" or an office, occurs in the inscriptions. A number of villages were attached to the ಚಾವಡಿ and at times even ಸ್ಥಳ and ಸೀಮೆ were attached to it" ಎಂದು ತಮ್ಮ ಒಂದು ಕೃತಿಯಲ್ಲಿ[2] ಅಭಿಪ್ರಾಯಪಟ್ಟಿದ್ದರೂ, ತಮ್ಮದೇ ಇನ್ನೊಂದು ಕೃತಿಯಲ್ಲಿ [3] ಚಾವಡಿ ಎಂಬುದು ರಾಜ್ಯದ ಪರ್ಯಾಯವೆಂದು ಹೇಳಿದ್ದಾರೆ. ಆದರೆ ಎ.ವಿ. ವೆಂಕಟರತ್ನಂ ಅವರು ತಮ್ಮ ಕೃತಿಯಲ್ಲಿ ಒಂದು ಕಡೆ 'ಒಂದು ಗ್ರಾಮದ ಸಭಾಂಗಣ, ಎಂದೂ ಮತ್ತೊಂದೆಡೆಯಲ್ಲಿ, 'ಚಿಕ್ಕ ಆಡಳಿತ ಘಟಕ'ವೆಂದು ಅಭಿಪ್ರಾಯಪಟ್ಟಿದ್ದಾರೆ.[4] ವಿದ್ವಾಂಸರ ಈ ಮೇಲಿನ ಹೇಳಿಕೆಗಳು ಸದರಿ ಅಧ್ಯಯನಗಳ ಸಾಂದರ್ಭಿಕ ಅಭಿಪ್ರಾಯ ಗಳಂತೆ ಕಂಡುಬರುತ್ತದೆ. ಹಾಗಾಗಿ ಅವರು ಶಾಸನ ಮೂಲ ಪಾಠಗಳಿಗೆ ವಿಶ್ಲೇಷಣೆಗೆ ಪ್ರಾಮುಖ್ಯತೆಯನ್ನು ನೀಡಿಲ್ಲವೆಂಬುದು ಖಚಿತವಾಗುತ್ತದೆ.

ವಿಜಯನಗರ ರಾಜರ ಕನ್ನಡ ಮತ್ತು ತಮಿಳು ಶಾಸನಗಳ ಒಂದು ವಿಹಂಗಮ ಪರಿಶೀಲನೆಯಿಂದ 'ಚಾವಡಿ' ಎಂಬುದನ್ನು ಮೇಲುನೋಟಕ್ಕೆ ಸಾಕಷ್ಟು ಪ್ರಸಿದ್ಧವಾದ ಪ್ರಾದೇಶಿಕ ಘಟಕವೆಂಬಂತೆ ಬಿಂಬಿತವಾಗಿರುವುದು ಕಂಡುಬರುತ್ತದೆ. ಚಾವಡಿ ಮತ್ತು ಉಚಾವಡಿ ಎಂಬುವು ಹೆಚ್ಚಿನ ಮಟ್ಟಿಗೆ ಒಂದು ಸ್ಥಳನಾಮದೊಂದಿಗೆ ಕೂಡಿಕೊಂಡು ಬಂದಿರುವುದನ್ನು ಕಾಣಬಹುದಾಗಿದೆ. ಉದಾ: ಬಾರಕೂರು ಚಾವಡಿ(1459),[5] ಬೇಲೂರು ಚಾವಡಿ (1534)[6], ಚಂದ್ರಗಿರಿ ಚಾವಡಿ (1522)[7], ಚನ್ನಪಟ್ಟಣ ಚಾವಡಿ (1387)[8], ದಣ್ಣಾಯಕನ ಕೋಟೆ ಚಾವಡಿ (1535)[9], ಕೊಟ್ಟೂರು ಚಾವಡಿ(1530)[10], ಕನ್ರತ್ತೂರು ಚಾವಡಿ (1530)[11], ಪಡೆವೀಡು ಚಾವಡಿ [12], ತಿರು ಚಿರಪಳ್ಳಿ ಚಾವಡಿ[13],

ಇತ್ಯಾದಿ. 'ಚಾವಡಿ'ಯನ್ನು ಪ್ರತ್ಯಯವನ್ನಾಗಿ ಪಡೆದಿರುವ ಸ್ಥಳಗಳ ವ್ಯಾಪ್ತಿ ಅಧಿಕಾರ ಬಹುವಿಸ್ತಾರವಾಗಿರುತ್ತಿತ್ತು. ಅಂದರೆ ಚಾವಡಿಯ ಅಧಿಕಾರ ವ್ಯಾಪ್ತಿಯಲ್ಲಿ ಕೆಲವು ಕೆಳಸ್ತರದ ಪ್ರಾದೇಶಿಕ ಘಟಕಗಳು ಮತ್ತು ಗ್ರಾಮಗಳು ಸೇರ್ಪಡೆಯಾಗಿರುತ್ತಿದ್ದವು. ಹಾಗಾಗಿ ಟಿ.ವಿ. ಮಹಾಲಿಂಗಂ ಅವರ ಚಾವಡಿಯನ್ನು ರಾಜ್ಯದೊಂದಿಗೆ ಸಮೀಕರಿಸುವ ಅಭಿಪ್ರಾಯವು ಸಮಂಜಸವೆನಿಸುವುದಿಲ್ಲ. ಏಕೆಂದರೆ ಆ ಪದಗಳನ್ನು ಪ್ರತ್ಯಯವಾಗಿ ಪಡೆದಿರುವ ಶಾಸನಗಳಲ್ಲಿನ ವಿವರಗಳನ್ನು ಸೂಕ್ಷ್ಮ ವಾಗಿ ಗಮನಿಸಿದರೆ 'ರಾಜ್ಯ' ಎಂಬುದು ಪ್ರದೇಶ ಸೂಚಕವಾಗಿಯೂ 'ಚಾವಡಿ' ನೇರವಾಗಿ ಆಡಳಿತಕ್ಕೆ ಸಂಬಂಧಿಸಿದಂತೆ ಉಕ್ತವಾದಂತಿದೆ.

'ಚಾವಡಿ' ಎಂಬುದರ ನಿರ್ದಿಷ್ಟ ಅರ್ಥವನ್ನು ಗ್ರಹಿಸಲು ನಾವು ಸಮಕಾಲೀನ ಶಾಸನಗಳನ್ನೇ ಸೂಕ್ಷ್ಮವಾಗಿ ಪರಿಶೀಲಿಸುವುದು ಅಗತ್ಯ. ಆ ಸಂದರ್ಭದಲ್ಲಿ ಡಾ. ಫ್ಲೀಟ್ ಅವರು ನೀಡಿರುವ ಅರ್ಥಛಾಯೆಗಳನ್ನು ಗಮನದಲ್ಲಿಟ್ಟುಕೊಳ್ಳುವುದು ಸೂಕ್ತವೆನಿ ಸುತ್ತದೆ. ಒಂದು ಗ್ರಾಮದ ಅಥವಾ ಒಂದು ಪ್ರದೇಶದ ಒಟ್ಟು ಕಂದಾಯ ಚಾವಡಿಗೆ ಸಲ್ಲುತ್ತದೆ. ಅಥವಾ ಚಾವಡಿಗಾಗಿ ಕಂದಾಯವನ್ನು ಸಂಗ್ರಹಿಸಲಾಯಿತು ಎಂಬ ಹೇಳಿಕೆಗಳು ಶಾಸನಗಳಲ್ಲಿ ಬಂದಿವೆ. ಅಂದಹಾಗೆ ಚಾವಡಿ ಎಂಬುದು ಪ್ರಧಾನತಃ ಒಂದು ಕಂದಾಯ ವಿಭಾಗ. ಎಲ್ಲಿ ಚಾವಡಿಯಿಂದ ಕಂದಾಯ ವಸೂಲಿ ಉಲ್ಲೇಖ ಗೊಂಡಿದೆಯೋ ಅಲ್ಲಿ ರಾಜನ ನೇರ ಆಳ್ವಿಕೆಯನ್ನು ಕಾಣಬಹುದಾಗಿದೆ. ಅಲ್ಲಿವೆ ಅದು ವಾಸ್ತವವಾಗಿ ಒಂದು ದೊಡ್ಡ ಕಂದಾಯ ವಿಭಾಗವೂ ಆಗಿರುತ್ತಿತ್ತು. ಎಂಬ ಸಂಗತಿಯನ್ನು ಕ್ರಿ.ಶ. 1429ರ ವಲಂಗೈ/ಇಡಂಗೈ ಶಾಸನಗಳಿಂದ [14] ಮನಗಾಣ ಬಹುದಾಗಿದೆ. ಚಾವಡಿಯ ಸಂದರ್ಭದಲ್ಲಿ ಹೆಚ್ಚಾಗಿ ಶಾನುಭೋಗ ಅಥವಾ ಕರಣಿಕರ ಉಲ್ಲೇಖವಿದ್ದು ಅವರು ಇಡೀ ಚಾವಡಿಯ ಕಂದಾಯದ ಲೆಕ್ಕಪತ್ರಗಳ ಅಧಿಕಾರಿಯಾಗಿರುತ್ತಾರೆ.

ಕರ್ನಾಟಕದಲ್ಲಿ ಅತ್ಯಂತ ಮೇಲ್‌ಸ್ತರದಲ್ಲಿ ರಾಜ್ಯ, ಕೆಳಸ್ತರ ಗ್ರಾಮವಾಗಿತ್ತು. ಇವುಗಳ ಮಧ್ಯ, ನಳಿತ, ನೊಂಕಿ, ಸ್ಥಲ, ಕಂಪಣ ಸೀಮೆ, ಮಾಗಣಿ ಮತ್ತು ನಾಡುಗಳು ಕಂಡುಬರುತ್ತವೆ. ಇವುಗಳ ನಿರ್ದಿಷ್ಟ ಸ್ತರ ವಿನ್ಯಾಸ ಅಸ್ಪಷ್ಟ. ವಾಸ್ತವವಾಗಿ ಯಾವುದೇ ರಾಜ್ಯ ಇಷ್ಟೊಂದು ಸ್ತರಗಳನ್ನು ಹೊಂದಿರುವುದಿಲ್ಲ. ೩ ಅಥವಾ ೪ ಮಟ್ಟಕ್ಕಿಂತ ಹೆಚ್ಚಿನ ಸ್ತರವಿನ್ಯಾಸಕ್ಕೆ ಅಷ್ಟು ಆಧಾರಗಳಿಲ್ಲ. ಒಂದು ಸಾಮಾನ್ಯೀಕರಣಗೊಂಡ ಸ್ತರವಿನ್ಯಾಸವನ್ನು ಅರಿಯಬೇಕಾದರೆ, ಬೇರೆ ಬೇರೆ ಪ್ರದೇಶದ ಆಧಾರಗಳ ವಿಶ್ಲೇಷಣೆ ಅಗತ್ಯ. ಅಂಥ ವಿಶ್ಲೇಷಣೆಯಿಂದ ಭೌಗೋಳಿಕವಾಗಿ ಹಿಂದೆ ಇದ್ದಿರುವುದಕ್ಕೂ ಈಗ ಬಳಕೆಯಲ್ಲಿರುವುದಕ್ಕೂ ಇರುವ ವ್ಯತ್ಯಾಸವನ್ನು ಹಾಗೂ ಸಾಮಾನ್ಯವಾಗಿ ರಾಜಕೀಯ ಕಾರ್ಯಕ್ಷೇತ್ರದಿಂದ ಸಾಮಾಜಿಕ ಕಾರ್ಯಕ್ಷೇತ್ರಗಳಿಗಿರುವ ವ್ಯತ್ಯಾಸಗಳನ್ನು ಗುರುತಿಸಲು ಸಹಾಯವಾಗುತ್ತದೆ.

ಅನೇಕ ರಾಜ್ಯಗಳ ಸ್ಥಾನದಲ್ಲಿ 'ಚಾವಡಿ' ಎಂಬುದನ್ನು ಉಪಯೋಗಿಸಲಾಗಿದೆ. ಕರ್ನಾಟಕ ಪ್ರದೇಶದಲ್ಲಿ ಗುರುತಿಸಲಾದ ಚಾವಡಿ ಅಥವಾ ರಾಜ್ಯಗಳ ಏಕತೆಯನ್ನು ತಮಿಳು ಪ್ರದೇಶದ ಶಾಸನಗಳೂ ಅನುಮೋದಿಸುತ್ತವೆ. ಹಾಗೇ ಗಮನಿಸಬೇಕಾದ ಮತ್ತೊಂದು ಸಂಗತಿಯೆಂದರೆ 15ನೇ ಶತಮಾನದ ಉದ್ದಕ್ಕೂ ವಿಜಯನಗರದ ಬೇರೆ ಬೇರೆ ಪ್ರದೇಶಗಳ ಆಡಳಿತವನ್ನು ಅದು ತನ್ನ ಸ್ವಂತ ಅಧಿಕಾರಿಗಳ ಮೂಲಕ ನಡೆಸಲು ಪ್ರಯತ್ನಿಸಿರುವುದು ಕಂಡುಬರುತ್ತದೆ.

ರಾಜ್ಯದ ಕೆಳಗಿನ ಆಡಳಿತ ಘಟಕಗಳು, ಬೇರೆ ಬೇರೆ ಪ್ರದೇಶಗಳಲ್ಲಿ ಹೆಚ್ಚು ಭಿನ್ನವಾಗಿರುವುದು ಕಂಡುಬರುತ್ತದೆ. ಕರ್ನಾಟಕ ಪ್ರದೇಶದಲ್ಲಿ ವಿಜಯನಗರ ಕಾಲದ ಹೊಸ ಆಡಳಿತ ಘಟಕಗಳೊಂದಿಗೆ ವಿಷಯ ನಾಡು, ಕಂಪಣ, ಎಂಬುವ ಹಿಂದಿನ ವಿಭಾಗಗಳೇ ಆಗಾಗ ಉಲ್ಲೇಖವಾಗಿರುವುದು ಕಂಡುಬರುತ್ತದೆ. ಹಾಗೇ ತಮಿಳು ಪ್ರದೇಶದಲ್ಲೂ ಕೂಡ ಮಂಡಲ. ನಾಡು, ಕೊಟ್ಟಂ, ವಳನಾಡು ಎಂಬುವ ಹಿಂದಿನ ವಿಭಾಗಗಳೇ ಉಲ್ಲೇಖವಾಗಿರುವುದು ಕಂಡುಬರುತ್ತದೆ. ಹಾಗಾಗಿ ಆ ಆಡಳಿತ ಘಟಕ ಗಳೇ ಅಸ್ತಿತ್ವದಲ್ಲಿದ್ದವೆಂಬ ಭಾವನೆಯನ್ನು ಉಂಟುಮಾಡುತ್ತದೆ. ವಾಸ್ತವವಾಗಿ ಈ ಹಳೇ ಆಡಳಿತ ವಿಭಾಗಗಳು ಕೇವಲ ಸಾಮಾಜಿಕ ಸಂಬಂಧಿ ಭೌಗೋಳಿಕ ಪಳೆ ಯುಳಿಕೆಯಷ್ಟೇ ಹೊರತು ವಿಜಯನಗರದ ಆಡಳಿತಕ್ಕೆ ಅವು ಅಷ್ಟು ಮುಖ್ಯ ವಾಗಿರಲಿಲ್ಲ. ಹೊಯ್ಸಳ ನಾಡು/ದೇಶ/ರಾಜ್ಯ, ಪಾಂಡ್ಯ, ದೇಶ/ನಾಡು, ಬನವಾಸಿ-12000 ಎಂಬುವ ವಿಜಯನಗರ ಕಾಲದ ಶಾಸನಗಳಲ್ಲಿನ ಉಲ್ಲೇಖಗಳು ಕೂಡ ಸಾಮಾಜಿಕ ಸಂಬಂಧಿ ಭೌಗೋಳಿಕ ಪಳೆಯುಳಿಕೆಗಳೆಂದೇ ಪರಿಗಣಿಸಬೇಕು.

ಈ ಹಿನ್ನೆಲೆಯಲ್ಲಿ 'ಚಾವಡಿ'ಯನ್ನು 'ರಾಜ್ಯ' ದೊಂದಿಗೆ ಸಮೀಕರಿಸಿರುವುದು ಸರಿಯಲ್ಲವೆಂಬುದು ಖಚಿತವಾಗುತ್ತದೆ. ಮೂಲತಃ ರಾಜ್ಯ ಎಂಬುದು ಭೌಗೋಳಿಕ ವಿಸ್ತಾರವನ್ನು ಪ್ರತಿನಿಧಿಸಿದರೆ, 'ಚಾವಡಿ' ಎಂಬುದು ಒಂದು ಕ್ರಿಯೆಯ ವ್ಯಾಪ್ತಿಯನ್ನು ಪಡೆದ ಕಾರ್ಯಸ್ಥಾನವೊಂದನ್ನು ಸೂಚಿಸುತ್ತದೆ. ಸಾಮಾನ್ಯವಾಗಿ ರಾಜ್ಯದ ಕೇಂದ್ರ ಸ್ಥಾನವೇ ಚಾವಡಿಯ ಕಾರ್ಯಸ್ಥಾನವೂ ಆಗಿರುತ್ತದೆ. ಹಾಗಾಗಿ ರಾಜ್ಯ-ಚಾವಡಿಗಳು ಉಕ್ತವಾಗಿರುವ ಹಲವು ಸನ್ನಿವೇಶಗಳು ಮೇಲಿನಂತೆ ಭಿನ್ನಾಭಿಪ್ರಾಯಗಳಿಗೆ ಎಡೆ ಕೊಟಿದ್ದಿತು. ಆದರೆ ಸೂಕ್ಷ್ಮ ಅಧ್ಯಯನ ಅವಲೋಕನಗಳು 'ಚಾವಡಿ' ರಾಜ್ಯದಿಂದ ಭಿನ್ನ, ಅಷ್ಟೇ ಅಲ್ಲ, ಅದೊಂದು ಕಂದಾಯ ಆಡಳಿತ (Revenue adminstration) ಕ್ಕೆ ಸಂಬಂಧಿಸಿದ್ದು ಎಂಬುದನ್ನು ಖಚಿತಪಡಿಸುತ್ತದೆ. ಹಾಗಾಗಿ ಆಡಳಿತ ಘಟಕ ಸೂಚಕ ಪದವಾಗಿ 'ಚಾವಡಿ'ಯನ್ನು ಪರಿಗಣಿಸುವುದು ಸೂಕ್ತವಲ್ಲ. ಒಂದು ಚಾವಡಿಯ ಆಡಳಿತ ವ್ಯಾಪ್ತಿಯಲ್ಲಿ ರಾಜ್ಯದ ಅನೇಕ ನಾಡು-ಸೀಮೆಗಳು ಬರುತ್ತಿದ್ದವು. ಅಂದರೆ ಕಂದಾಯ ಪ್ರಾಧಿಕಾರ ಅವುಗಳ ಮೇಲೆ ಅಧಿಕಾರ ಹೊಂದಿದ್ದಿತು.

ಆಧಾರಸೂಚಿ ಮತ್ತು ಟಿಪ್ಪಣಿಗಳು

1. ಜೆ.ಎಫ್. ಫ್ಲೀಟ್ *Journal of the Bombay Branch of the Roayal Asiatic Society*, XII, (1876) p. 356.
2. T.V. Mahalingam, *Administration and Social Live under Vijaynagar; Pt I*, 2nd Edn, Madras Univesity, 1969, p 191.
3. *Sount Indian Polity*, 2nd edn, Madras University, 1967, p. 319.
4. ಎ.ವಿ. ವೆಂಕಟರತ್ನಂ; *ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ*, ಮೈಸೂರು 1974,
5. *SII*, vol VII No. 315.
6. *E.C.* Vol X, Bg 25.
7. *ARIE*-1915, No.140.
8. *EC* Vol IX, Cp 24 (Rice Vol)
9. *SITI* Vol I, No. 207
10. *EC*, Vol XI, Dg 28.
11. *ARIE*-1917, No. 312
12. *ARIE* -1937, No. 198
13. *SII* Vol. XXIV, No. 320
14. *ARIE*-1913, No. 13; *ಅದೇ* 1918, No. 92; *ಅದೇ* 1926, No.253; *ಅದೇ* 1928-29, No.246

ಗ್ರಂಥಗಳು

Shrinivasa Ritti & B.R. Gopal (Ed): *Inscriptions of the Vijayanagar Rulers* Vol II, ICHR, ಬೆಂಗಳೂರು, 2008

K.V. Ramesh : *A Histroy of South Kanara*, Darwad, 1970

K.V. Ramesh: Vijayanagar and Terrtorial Re-adjustments in Karnataka, *Kannada Studies*, Vol. 3, No.1. University of Mysore.

B.R. Gopal : *Vijayanagar Inscriptions*, Vol I, Mysore 1986.

ಕನ್ನಡ-ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

C.P. Brown :*Telugu English Dictionary*, 1852.

೧೨. ಹಂಪಿಯ ಶಾಸನೋಕ್ತ ಮಹಿಳೆಯರು

ಎನ್. ಎಸ್. ವೀರೇಶ ಉತ್ತಂಗಿ

'ಹಂಪಿ' ಅನೇಕ ಕಾರಣಗಳಿಗೆ ಮುಖ್ಯವೆನಿಸುತ್ತದೆ. ಜನಸಾಮಾನ್ಯರಿಗೆ ಮತ್ತು ಪ್ರವಾಸಿಗರಿಗೆ ಮನರಂಜನಾ ಕೇಂದ್ರ. ವಿದ್ವಾಂಸರಿಗೆ ಮತ್ತು ಸಂಶೋಧಕರಿಗೆ ಅಧ್ಯಯನದ (ಜ್ಞಾನದ) ಆಗರ, ಆಕರಗಳ ಸಮುದ್ರ. ವಿದೇಶಯರಿಗೆ ಮೋಜಿನ ತಾಣ. ಹಂಪಿಯನ್ನು ಕಟ್ಟಿ ಬೆಳೆಸಿದ ಜೀವಗಳು ಲಕ್ಷೋಪಲಕ್ಷ. ಈ ಜೀವಗಳು ಹಂಪಿಯನ್ನು ನಾನಾ ಆಯಾಮ ಗಳಲ್ಲಿ ರೂಪಿಸುವಲ್ಲಿ ವಹಿಸಿದ ಪಾತ್ರ ಅಪಾರವಾದದ್ದು. ಹಂಪಿಯನ್ನು ಬೆಳೆಸುವಲ್ಲಿ ಮಹಿಳೆಯರ ಪಾತ್ರವೂ ಅಷ್ಟೇ ಮುಖ್ಯವೆನಿಸಿದೆ. ರಾಣಿಯರು ಕೇವಲ ರಾಣಿಯರಾಗಿ ಉಳಿಯದೇ, ನೃತ್ಯಗಾರ್ತಿಯರು ನೃತ್ಯಕ್ಕೆ ತಮ್ಮನ್ನು ಸೀಮಿತಗೊಳಿಸಿ ಕೊಳ್ಳದೇ, ಹೆಗ್ಗಡೆತಿ ಯರು ತಮ್ಮ ಅಧಿಕಾರಕ್ಕೆ ಅಂಟಿಕೊಳ್ಳದೆ, ಸಾಮಾನ್ಯ ವರ್ಗದ ಮಹಿಳೆಯರು ತಮ್ಮ ಮನೆಗೆ ಸೀಮಿತವಾಗದೇ, ಕೆಲವು ಸಮಾಜೋಪಯೋಗಿ ಕಾರ್ಯಗಳನ್ನು ಮಾಡಿರುವುದನ್ನು ಹಂಪಿ ಶಾಸನಗಳು ದಾಖಲಿಸುತ್ತವೆ. ಈ ಮಹಿಳೆಯರು ದೇವರಿಗೆ ದಾನ -ದತ್ತಿ ಬಿಟ್ಟಿರುವುದನ್ನು, ದೇವರ ಮಂಟಪ ಕಟ್ಟಿಸಿರುವುದನ್ನು, ದೀಪ ಕಂಬ ಮಾಲೆ ಕಟ್ಟಿಸಿರುವುದನ್ನು ಹಂಪಿ ಶಾಸನಗಳು ಉಲ್ಲೇಖಿಸಿರುವುದನ್ನು ಕಾಣ ಬಹುದು.

ಶಾಸನಗಳಲ್ಲಿ ಉಲ್ಲೇಖವಾಗಿರುವ ಮಹಿಳೆಯರನ್ನು ಎರಡು ರೀತಿಯಲ್ಲಿ ವಿಭಾಗಿಸಿಕೊಳ್ಳಬಹುದು:

1) ಆಡಳಿತ ವರ್ಗದ ಮಹಿಳೆಯರು

2) ಸಾಮಾನ್ಯ ವರ್ಗದ ಮಹಿಳೆಯರು

1) ಆಡಳಿತ ವರ್ಗದ ಮಹಿಳೆಯರು : ಮಹಾರಾಣಿಯರಾಗಿ ಸಾಮಂತರ ಪತ್ನಿಯ ರಾಗಿ, ಸ್ವತಃ ಹೆಗ್ಗಡೆತಿಯರಾಗಿ ಆಡಳಿತಗಾರರಾಗಿ ಕಾರ್ಯ ನಿರ್ವಹಿಸುತ್ತಿರುವಾಗ ಕೆಲವು ಸಮಾಜೋಪಯೋಗಿ ಕಾರ್ಯಗಳನ್ನು ಮಾಡಿರುವುದನ್ನು ಶಾಸನಗಳು ದಾಖಲಿಸಿವೆ. ಈ ಆಡಳಿತದ ವರ್ಗದ ಮಹಿಳೆಯರನ್ನು ಎರಡು ರೀತಿ ವಿಂಗಡಿಸಿಕೊಳ್ಳಬಹುದು. ಅ) ಅರಸರ/ ಮಂತ್ರಿಗಳ ತಾಯಿ /ಪತ್ನಿಯರಾಗಿ ಆ) ಹೆಗ್ಗಡೆತಿಯರಾಗಿ

೧) ಅರಸರ/ಮಂತ್ರಿಗಳ ತಾಯಿ/ಪತ್ನಿಯರಾಗಿ : ಕ್ರಿ. ಶ. ೧೪ ನೇ ಶತಮಾನದ ಆರಂಭಕಾಲಕ್ಕೆ ಸೇರಿದ ಹೇಮಕೂಟದ ಉತ್ತರಕ್ಕಿರುವ ದೇವಾಲಯದ ಕಂಬದ ಮೇಲೆ ಇರುವ ಶಾಸನವು

"ಮುಂಮುಡಿ ಸಿಂಗೆಯನಯಕನ ಕೊಮರ
ವೀರ ಕಂಪಿಲದೇವನು ತಂಮ ತಯ
ಮಾರೊನಾಕಿತಿ ಸಿಂಗೆಯನಯಕ ಪೆರುಡಿ
ಯನಯಕಕ ಇಂತು ಮೂವರ ಲಿಂಗ ಪ್ರತಿಷ್ಠೆಯ ಮಡಿಸಿದ" [೧]

ಎಂದು ವಿಜಯನಗರ ಪೂರ್ವದ ಅರಸ ಕಂಪ್ಲಿಯ ಮುಮ್ಮಡಿ ಸಿಂಗೆಯ ನಾಯಕನ ಮಗನಾದ ವೀರಕಂಪಿಲ ದೇವನು ತಮ್ಮ ತಾಯ ಮಾರನಾಕಿತಿ, ತಂದೆ ಸಿಂಗೆಯನಾಯ ಮತ್ತು ಪೆರುಡಿ ನಾಯಕನ ಹೆಸರಿನಲ್ಲಿ ಮೂರು ಲಿಂಗಗಳನ್ನು ಪ್ರತಿಷ್ಠೆ[೨] ಮಾಡಿಸಿದ್ದನ್ನು ಉಲ್ಲೇಖಿಸುತ್ತದೆ. ಈ ಶಾಸನದಲ್ಲಿ ರಾಣಿ ಮಾರನಾಕಿತಿಯ ಹೆಸರಿನಲ್ಲಿ ಲಿಂಗ ಪ್ರತಿಷ್ಠೆ ಮಾಡಿಸಿದ್ದನ್ನು ಮಾತ್ರ ದಾಖಲಿಸಲಾಗಿದೆ. ಬಹುಶಃ ಈ ರಾಣಿ ಜನರ ಮನ್ನಣೆಗೆ ಪಾತ್ರಳಾಗಿ ಸತ್ತಿರಬಹುದು.

ಹೇಮಕೂಟದ ಮೇಲಿರುವ ಪ್ರಸನ್ನ ವಿರೂಪಾಕ್ಷ ದೇವಾಲಯದ ಹಿಂದಿನ ಬಂಡೆಯ ಮೇಲಿನ ಕ್ರಿ. ಶ. ೨೬-೧೧-೧೩೬೭ ರ ಶಾಸನವು

"ಶ್ರೀ ವೀರಹರಿಹರಾಯನ ಅರ್ಧಾಂಗ ಲಕ್ಷ್ಮ
ಮಿ ಬುಕ್ಕಯವೆಗಳು ತಮ್ಮ ಶ್ರೀಗುರು
ಭಸ್ಕರ ದೇವಯ್ಯಗಳಿಗೆ ಪುಣ್ಯವಾಗಬೇಕೆಂದು
ಜೆಡೆಯ ಶಂಕರ ದೇವರಿಗೆ ಎತ್ತಿಸಿದ ದೀಪಮಾಲೆಯ ಕಂಭ" [೩]

ಎಂದು ವೀರಹರಿಹರರಾಯನ ರಾಣಿಯರಾದ ಲಕ್ಷ್ಮೀ ಮತ್ತು ಬುಕ್ಕಯವ್ವೆಯರು ತಮ್ಮ ಗುರುಗಳಾದ ಭಾಸ್ಕರದೇವಯ್ಯನವರಿಗೆ ಪುಣ್ಯವಾಗಬೇಕೆಂದು ಜೆಡೆಯ ಶಂಕರ ದೇವರ ಮುಂದೆ ದೀಪಮಾಲೆ ಕಂಬವನ್ನು ಮಾಡಿಸಿದ್ದರ ಬಗ್ಗೆ ಉಲ್ಲೇಖಿಸುತ್ತದೆ. ಅಂದರೆ ರಾಣಿಯರು ತಮ್ಮ ಗುರುನಿಷ್ಠೆ ತೋರಿಸಲು ಈ ಕಾರ್ಯ ಮಾಡಿದಂತೆ ತೋರುತ್ತದೆ.

ವಿರೂಪಾಕ್ಷ ದೇವಾಲಯದ ರಂಗಮಂಟಪದ ಒಳಗಿನ ಪೂರ್ವಗೋಡೆಯ ಕ್ರಿ. ಶ. ೧೫೧೦ ರ ಶಾಸನವು

"ನರಸಣನಾಯಕರ ತಾ ಇ ಬುಕ್ಕಾ ಜಂಮ್ಮನು
ಹಂಪೆಯ ತಿರುಮಲ ಭಟ್ಟರ ಮಕ್ಕಳು ಸಾಇ ಭಟ್ಟರಿಗೆ
ವಿರೂಪಾಕ್ಷ ದೇವರ ನೈವೇದ್ಯ..... ದ ಕಾ (ಲ್ವಿ)ಮುದ್ದಾ
ನ ಹಲ್ಲಿಯಲು ಭೂಮಿಯನು ಕೊಂಡು " [೪]

ಎಂದು ವಿಜಯನಗರದ ಅರಸ ನರಸನಾಯಕನ ತಾಯಿ ಬುಕ್ಕಾಜಿಯಮ್ಮ ಹಂಪಿಯ ತಿರುಮಲ ಭಟ್ಟನ ಮಗ ಸಾಯಿಭಟ್ಟನಿಗೆ, ವಿರೂಪಾಕ್ಷ ದೇವರ ನೈವೇದ್ಯಕ್ಕಾಗಿ ಕಾಲ್ವಿಮುದ್ದಾನಹಳ್ಳಿಯಲ್ಲಿ ಭೂಮಿಯನ್ನು ಕೊಂಡು ದಾನ ಬಿಟ್ಟಿದ್ದನ್ನು ದಾಖಲಿಸುತ್ತದೆ.

ಬಹುಶಃ ನರಸನಾಯಕರು ಈ ವೇಳೆಗೆ ಅನಾರೋಗ್ಯ ಪೀಡಿತರಾಗಿದ್ದು ಅವರ ಆರೋಗ್ಯ ಸರಿಯಾಗಲೆಂದು ಈ ಭೂದಾನವನ್ನು ಬುಕ್ಕಾಜಿಂಮ್ಮನ್ನು ಬಿಟ್ಟಿರಬಹುದು.

ಕಡಲೆಕಾಳು ಗಣೇಶನ ಗುಡಿಯ ಮುಂಭಾಗದ ಮಂಟಪದಲ್ಲಿ ನಿಲ್ಲಿಸಿರುವ ಕ್ರಿ. ಶ. ೧೪೧೦ ರ ಶಾಸನವು...

"ಜನವವರ ತಂಗಿ ಸಿಂಗಲೆ ಭುವನಸ್ತ (ವ)ನೀಯ್ಯ ಚರಿತೆ
ಸಂತತಮವನೀತಳದೋಳ್ಸು ಭದ್ರೆಯೆನಿಪುದು ಪಿರಿದೇ
ಆ ತರುಣೀ ಶಿಲಾಮಣಿಗೆ" [೫]

ಎಂದು ದೇವರಾಯನ ಮಂತ್ರಿಗಳಾದ ಮಾದರಸ ಮತ್ತು ಸಾಯಣರ ತಂಗಿಯಾದ ಸಿಂಗಲೆ ಅಥವಾ ಸಿಂಗಾಂಬಿಕಾಳ ವ್ಯಕ್ತಿತ್ವವನ್ನು ಸುಭದ್ರೆಗೆ ಹೋಲಿಸುತ್ತದೆ. ಭೂಮಿಯ ಮೇಲೆ ಸುಭದ್ರೆಯ ಚರಿತ್ರೆಗಿಂತ ಹಿರಿದಾದ ಚರಿತ್ರೆ ಮತ್ತ ವ್ಯಕ್ತಿತ್ವ ಇರುವುದು ಸಿಂಗಾಂಬಿಕಾಗೆ ಮಾತ್ರ ಎಂದು ಶಾಸನ ಉಲ್ಲೇಖಿಸುತ್ತದೆ.

ಅಲ್ಲದೆ ದೇವರಾಯನ ಮಹಾಮಂತ್ರಿಯಾದ ಲಕ್ಷ್ಮೀಧರಾಮಾತ್ಯನ ಜನ್ಮದಾತಳು ಈ ಸಿಂಗಾಂಬಿಕೆ. ಇವಳು ಲಕ್ಷ್ಮೀಧರನು ಚಿಕ್ಕವನಾಗಿದ್ದಾಗ ಹಾಲುಣಿಸುತ್ತಾ ಮಾನವ ಕುಲಕ್ಕೆ ಒಳಿತಾಗುವ ಕೆಲಸಗಳನ್ನು ಮಾಡು, ಲೋಕ ಮೆಚ್ಚುವಂತಹ ಕೆಲಸಗಳನ್ನು ಮಾಡು ಎಂಬತ್ಯಾದಿಯಾಗಿ ಹೇಳುತ್ತಿದ್ದಳು. ಇದನ್ನು ಶಾಸನವು

"ಸಿಂಗಾಂಬಿಕಾ ಮಂಗಳ ಜಠರ ಸುಧಾವಾರ್ಧಿ ಸಂಜಾತನಂ
ತಾನಾರಾಮಂ ಲಕ್ಷ್ಮಣಾಮಾತ್ಯನೆ ಸಕಲಜಗಜ್ಞಾತ ಚೇ ತೋಭಿರಾ
ಮಂ|| ಕೆರೆಯಂ ಕಟ್ಟಿಸು ಬಾವಿಯಂ ಸವಸು ದೇವಾಗಾರಮಾ
....
....
ತಾಂಯೆಐದಳ್ಪಾಲೆಜೆವೆಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ" [೬]

ಎಂದು ದಾಖಲಿಸುತ್ತದೆ. ಸಿಂಗಾಂಬಿಕೆಯ ಹೊಟ್ಟೆ (ಗರ್ಭ) ಯು ಅಮೃತಸಮುದ್ರ ದಂತೆ ಮಂಗಳಕರವಾದದ್ದು. ಇಂಥ ಹೊಟ್ಟೆಯಲ್ಲಿ ಹುಟ್ಟಿದ ಲಕ್ಷ್ಮೀಧರನು, ಶ್ರೀ ರಾಮ ತನ್ನ ತಂದೆಯ ಮಾತನ್ನು ಪಾಲಿಸಿ ಜಗದ್ವಿಖ್ಯಾತನಾದಂತೆ ಈತನು ತನ್ನ ತಾಯಿ ಚಿಕ್ಕವ ನಿದ್ದಾಗ ಹೇಳುತ್ತಿದ್ದ 'ಕೆರೆಯನ್ನು ಕಟ್ಟಿಸು, ಬಾವಿಯನ್ನು ತೋಡಿಸು, ದೇವಾಲಯ ಗಳನ್ನು ನಿರ್ಮಿಸು, ಸೆರೆಸಿಕ್ಕ ಅನಾಥರನ್ನು ಬಿಡಿಸು, ಮಿತ್ರರಿಗೆ ಮತ್ತು ನಂಬಿಕಸ್ತರಿಗೆ ನಿಷ್ಠನಾಗಿರು ಶಿಷ್ಟರನ್ನು ರಕ್ಷಿಸು' ಎಂಬಿತ್ಯಾದಿ ಮಾತುಗಳನ್ನು ಪಾಲಿಸಿ ಜಗದ್ವಿಖ್ಯಾತ ನಾದನು.

ಸಾಮ್ರಾಜ್ಯದ ಹಲವು ಕಡೆಗಳಲ್ಲಿ ಕೆರೆ ಬಾವಿ ಕಟ್ಟಿಸಿ ಪ್ರಜೆಗಳ ಹಿತರಕ್ಷಿಸಿ ಅವರ ಪ್ರೀತಿಗೆ ಪಾತ್ರನಾದನು. ಇದಕ್ಕೆಲ್ಲಾ ಕಾರಣ ಈತನ ತಾಯಿ ಸಿಂಗಲೆ. ಇವಳು ದೂರದೃಷ್ಟಿ ವುಳ್ಳವಳಾಗಿದ್ದಳು. ಬಹುಶಃ ಈಕೆ ಈ ಮಾತು ಹೇಳಲು ಕಾರಣ ಅಂದಿನ ಅರಸರು ಮತ್ತು ಅವರ ಅಧಿಕಾರಿಗಳು ಪ್ರಜೆಗಳ ಹಿತ ಕಡೆಗಣಿಸಿ ದುಂದುವೆಚ್ಚಮಾಡುತ್ತಾ ವಿಲಾಸಿ ಜೀವನ ಸಾಗಿಸುತ್ತಿದ್ದಿರಬಹುದು ಅಥವಾ ಕ್ಷಾಮ ತಲೆದೋರಿ ಪ್ರಜೆಗಳು ಸಂಕಷ್ಟಕ್ಕೀ ಡಾದಾಗಲೂ ಅವರ ಕಡೆ ಲಕ್ಷ್ಯ ಕೊಡದೆ ಯುದ್ಧನಿರತರಾಗಿ ರಾಜ್ಯ ವಿಸ್ತರಣೆ ಕಡೆ ಗಮನ ಹರಿಸಿ, ವೈಭೋಗದ ಕಡೆ ಗಮನಹರಿಸಿರಬಹುದು ಈ ಎಲ್ಲಾ ಅಂಶಗಳನ್ನು ಗಮನಿಸಿದ ಸಿಂಗಾಂಬಿಕೆ ತನ್ನ ಮಗ ದೊಡ್ಡವನಾದಾಗ ಪ್ರಜೆಗಳ ಹಿತರಕ್ಷಣೆ ಮಾಡುತ್ತಾ ಸದಾ ಜನೋ ಪಯೋಗಿ ಕಾರ್ಯಗಳಲ್ಲಿ ಮಗ್ನನಾಗುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾಳೆ. ಶಾಸನ ಕವಿಯ ಸ್ತುತಿಯಂತೆ ಸಿಂಗಲೆಯ ಗರ್ಭ ನಿಜಕ್ಕೂ ಅಮೃತದ ಸಮುದ್ರವೇ ಸರಿ.

ಲಕ್ಷ್ಮೀಧರನ ಇಬ್ಬರು ಪತ್ನಿಯರನ್ನು ಕುರಿತು ಶಾಸನವು

"ಧರೆ ಪೊಗಳ್ವಿನಮಾ ಲಕ್ಷ್ಮೀಧರಂಗೆ ದೇ(ವಕಿ)ಯುಮೆಸೆವ
ಸೋಮಲೆಯುಂ ಗೈನರದರಿಸಿಯಾರಾದರ್ (ಗೂ)ರ್ತ್ತರಸಿಯೆರಾದಂತೆ
ಹರಿಗೆ ಸಿರಿಯುಂ ಧರೆಯುಂ " ೭

ಎಂದು ದೇವಕಿ ಮತ್ತು ಸೋಮಲೆ ಎಂಬುವರು ಲಕ್ಷ್ಮೀಧರನ ಕೈಹಿಡಿದು ಆತನು ವೀರತ್ವದಿಂದ ಹೋರಾಡಿ ಭೂಮಿಯ ಮೇಲೆ ಒಳ್ಳೆಯ ಹೆಸರು ಮತ್ತು ಹೊಗಳಿಕೆ ಎಂಬ ಸಂಪತ್ತನ್ನು ಸಂಪಾದಿಸಲು ಈ ಇಬ್ಬರೂ ಪತ್ನಿಯರ ಪಾತ್ರವಿದೆ ಎಂದು ದಾಖಲಿ ಸುತ್ತದೆ. ಹಾಗೆಯೇ ಮುಂದುವರೆದು ಮೊದಲ ಪತ್ನಿ ದೇವಕಿಯ ಗುಣ ಸ್ವಭಾವ ಕುರಿತು ಶಾಸನವು

"ಪಿರಿಯಳೆನೆ ಸಂದ ಪೇರ್ಮ್ಮೆಯ ಪಿರಿಯ (ಳ್) ಸೌಭಾಗ್ಯದಿಂದ
ಪಿರಿಯಳುಣ್ಣದಿಂ ಪಿರಿಯಳ್ಪಾತಿವ್ರತ್ಯದೆ ಪಿರಿಯೆಳೆನಲ್ಪಿರಿ
ಯಳಮಮ ದೇವಕಿ ನೆಗಳ್ದ (ಳ್) " ೮

ಎಂದು ದಾಖಲಿಸುತ್ತದೆ. ಅಂದರೆ ದೇವಕಿ ತಾನು ಹಿರಿಯ ಪತ್ನಿ ಸೋಮಲೆ ಕಿರಿಯ ಪತ್ನಿ ಎಂದ ಭೇದ ತೊರೆದ ಹೆಮ್ಮೆಯಿಂದ, ತನ್ನ ಸೌಂದರ್ಯವನ್ನೂ ಮತ್ತು ಮುತ್ತೈದೆ ತನವನ್ನು ಪಾತಿವ್ರತ್ಯದಿಂದ ಹೆಚ್ಚಿಸಿಕೊಂಡು ಪ್ರಸಿದ್ಧಳಾದಳು, ಹಾಗೂ ಸರ್ವರನ್ನೂ ತನ್ನಂತೆ ಕಾಣುವ ಮನಸ್ಸನ್ನು ಹೊಂದಿದ್ದಳು.

ವಿರೂಪಾಕ್ಷ ದೇವಾಲಯದ ದಕ್ಷಿಣ ಪ್ರವೇಶ ದ್ವಾರದ ಕ್ರಿ. ಶ. ೧೫೧೩ ರ ಕೃಷ್ಣ ದೇವರಾಯನ ಕಾಲದ ಶಾಸನವು

"ನಂಮ ತಾಯಿ ನಾಗಾಜಿ ಅಂಮನವರಿಗೆ ಉ ಧರ್ಮವಾಗಿ" ೯

ಎಂದು ಕೃಷ್ಣದೇವರಾಯನು ತನ್ನ ತಾಯಿ ನಾಗಾಜಿ ಅಮ್ಮನ ಹೆಸರಿನಲ್ಲಿ ದಾನ ಬಿಟ್ಟ ವಿಚಾರ ತಿಳಿಸುತ್ತದೆ. ಈ ಶಾಸನದಲ್ಲಿ 'ನಾಗಾಜಿ ಅಮ್ಮನ' ಉಲ್ಲೇಖ ಮಾತ್ರ ಬರುತ್ತದೆ. ಆಕೆಯ ಯಾವ ಕಾರ್ಯವನ್ನೂ ಶಾಸನ ದಾಖಲಿಸುವುದಿಲ್ಲ. ಇದು ಕೃಷ್ಣದೇವ ರಾಯನ ಮೇಲೆ ತನ್ನ ತಾಯಿ ನಾಗಾಜಿ ಅಮ್ಮನ ಪ್ರಭಾವ ತೋರಿಸುತ್ತದೆ.

ವಿಠಲ ದೇವಾಲಯದ ಸಭಾಮಂಟಪದ ಪ್ರವೇಶ ಬಾಗಿಲ ಬಲಕ್ಕಿರುವ ಕ್ರಿ. ಶ. ೧೫೧೩ ರ ಕೃಷ್ಣದೇವರಾಯನ ಕಾಲದ ಶಾಸನವು

"ಶ್ರೀ ಕೃಷ್ಣರಾಯ ಮಹಾರಾಯ
ಪಟ ದೇವಿಯರು ಚಿಂನ್ನಾದೇವಿ
ಅಂಮ್ಮನವರು ತಿರುಮಲದೇವಿ ಅಂಮ್ಮನವರು
ಶ್ರೀ ವಿಠಲ ದೇವರಿಗೆ ಗೋಪುರಗಳನೂ
ಕಟಿ(ಸಿ) ದೇವರನಯಿವೇದ್ಯ
ಆರೋಗಣೆಯ ಚಿತ್ತೈಸುವದಕ್ಕೆ ಸಮರ್ಪಿಸುತ್ತ" [೧೦]

ಆ) ಹೆಗ್ಗಡೆತಿಯರಾಗಿ ಮಹಿಳೆಯರು : ಕೇವಲ ಪುರುಷರಷ್ಟೇ ಸಾಮಂತರು ಮತ್ತು ಹೆಗ್ಗಡೆ, ಗೌಡರಾಗಿ ಕಾರ್ಯ ನಿರ್ವಹಿಸಿಲ್ಲ, ಮಹಿಳೆಯರೂ ಹೆಗ್ಗಡೆಗಳಾಗಿ ಕಾರ್ಯ ನಿರ್ವಹಿಸಿದ್ದರೆ ಬಗ್ಗೆ ಶಾಸನಗಳು ಉಲ್ಲೇಖಿಸಿವೆ. ಬಹುಶಃ ಈ ಮಹಿಳೆಯರು ಪುರುಷನಿಗಿಂತಲೂ ಮಿಗಿಲಾಗಿ ಹೆಗ್ಗಡೆತಿಯರಾಗಿ ಕಾರ್ಯ ನಿರ್ವಹಿಸುವ ಸಾಮರ್ಥ್ಯ ಹೊಂದಿರಬಹುದು ಅಥವಾ ಆ ನಿಟ್ಟಿನಲ್ಲಿ ಸಮಾಜೋಪಯೋಗಿ ಕೆಲಸಗಳನ್ನು ಮಾಡಿ ಪ್ರಸಿದ್ಧಿ ಹೊಂದಿದ್ದರ ಫಲವಾಗಿ ಅರಸರು ಮಹಿಳೆಯರನ್ನು ಹೆಗ್ಗಡಿತಿಯರನ್ನಾಗಿ ನೇಮಿಸಿರಬಹುದಾದ ಸಾಧ್ಯತೆ ಇದೆ. ಅಲ್ಲದೆ ಅರಸರು ತಮ್ಮ ಉಪಪತ್ನಿಯರನ್ನು ಹೆಗ್ಗಡೆತಿಯರನ್ನಾಗಿ ನೇಮಿಸಿರಲೂ ಬಹುದು.

ಹಜಾರ ರಾಮಸ್ವಾಮಿ ದೇವಾಲಯದ ಹಿಂಬದಿಯ ಪಾಳು ನಿವೇಶನದಲ್ಲಿನ ವಿಗ್ರಹ ಪೀಠದಲ್ಲಿರುವ ಶಾಸನವು

"ವೀರ ಹರಿಹರರಾಯನ
ಮನೆಯ ಹೆಗಡಿತಿ ಚಉಡಾ
ಯಿ ಮಾಡಿಸಿದ ಪ್ರತಿಷ್ಠೆ" [೧೧]

ಎಂದು ಉಲ್ಲೇಖಿಸಿದೆ. ಅಂದರೆ ಚಕ್ರವರ್ತಿ ವೀರಹರಿಹರರಾಯನ ಮನೆಯ ಹೆಗಡತಿ ಚೌಡಾಯಿ ಎಂದಿದೆ. ಇಲ್ಲಿ ವೀರಹರಿಹರ ರಾಯನ ಮನೆಯ ಹೆಗಡತಿ ಎಂದರೆ ಹರಿಹರ ರಾಯನ ಅರಮನೆಯ ಒಳಾಡಳಿತ ನೋಡಿಕೊಳ್ಳುವ ಅಧಿಕಾರಿ ಅಥವಾ ಸಚಿವೆ ಎಂದರ್ಥ. ಬಹುಶಃ ಈ ಚೌಡಾಯಿಯು ಸೂಕ್ಷ್ಮಮತಿಯಾಗಿದ್ದು ಆಡಳಿತ ಬಲ್ಲವಳಾಗಿ

ರಬೇಕು. ಇವಳ ಚತುರತೆಯನ್ನು ನೋಡಿದ ಅರಸ ಈಕೆಯನ್ನು ಮನೆಯ ಹೆಗಡತಿಯಾಗಿ ನೇಮಿಸಿರಬಹುದು. ಈಕೆ ಆ ಹಜಾರರಾಮಸ್ವಾಮಿ ದೇವಾಲಯದ ಹಿಂಬದಿಯ ಪಾಳು ನಿವೇಶನದಲ್ಲಿರುವ ವಿಗ್ರಹ ಮಾಡಿಸಿದ್ದಾಳೆ. ಚೌಡಾಯಿ ಅರಸನ ಸಂಬಂಧಿಯೂ ಆಗಿರಬಹುದು.

ಜೈನ ಮಂದಿರದ ಪಶ್ಚಿಮಕ್ಕೆ ಕೊಳದ ಬದಿಯಲ್ಲಿರುವ ಶಾಸನವು

"ಶ್ರೀಪಾಪವಿನಾಶಿಯ ತೀರ್ಥದ ಸೇವೆ
ಹೆಗ್ಗಡತಿ ಉಮಾದೇವಿಯರ ಧರ್ಮ" [೧೨]

ಎಂದು ಉಲ್ಲೇಖಿಸುತ್ತದೆ. ಇದರಲ್ಲಿ ಹೆಗ್ಗಡತಿಯಾದ ಉಮಾದೇವಿಯು ಶ್ರೀ ಪಾಪ ವಿನಾಶಿ ತೀರ್ಥವನ್ನು ಜೀರ್ಣೋದ್ಧಾರ ಮಾಡಿಸಿದಂತೆ ತಿಳಿಸುತ್ತದೆ. ಹೆಗ್ಗಡತಿ ಉಮಾ ದೇವಿ ಯಾವುದೋ ಊರಿನ ಹೆಗ್ಗಡತಿಯಾಗಿರಬಹುದು. ವಿಜಯನಗರ ಸಾಮ್ರಾಜ್ಯದ ಆಡಳಿತದಲ್ಲಿ ಮಹಿಳೆಯರ ಪಾತ್ರವೂ ಇದೆ ಎಂಬುದನ್ನು ಮೇಲಿನ ಶಾಸನಗಳ ಮಾಹಿತಿ ಯಿಂದ ಅರಿಯಬಹುದು.

೨) ಸಾಮಾನ್ಯವರ್ಗದ ಮಹಿಳೆಯರು : ಸಾಮಾನ್ಯ ವರ್ಗದ ಮಹಿಳೆಯರಲ್ಲಿ ಶಿಕ್ಷಕರು ಅಥವಾ ಪ್ರವಚನಕಾರ್ತಿಯರು, ನಟಿ ಅಥವಾ ನೃತ್ಯಗಾರ್ತಿ, ಹಂಪಿ ಸಂದರ್ಶಕರು ಇತ್ಯಾದಿಗಳು ಹಂಪಿಗೆ ಬಂದು ವಿವಿಧ ದೇಣಿಗೆ, ದಾನ ನೀಡಿದ್ದರ ಬಗ್ಗೆ, ಜೀರ್ಣೋದ್ಧಾರ ಮಾಡಿದ್ದರ ಬಗ್ಗೆ ಶಾಸನಗಳು ದಾಖಲಿಸಿವೆ.

ರಾಯಗೋಪುರದ ಎಡಗೋಡೆಯ ಮೇಲಿರುವ ಕ್ರಿ. ಶ. ೧೫೩೩ ರ ಅಚ್ಯುತ ದೇವರಾಯನ ಕಾಲದ ಶಾಸನವು

"ಶ್ರೀ ವೀರಅಚ್ಯುತ ದೇವರ ಮಹಾರಾಯರು ವಿಜಯ
ಸಂವತ್ಸರದ ಮಾರ್ಗಶಿರ್ಷ ಶು ೧೧ ಗುರುವಾರದಲಿ
ತುಂಗಾಭದ್ರಾ ತೀರದಲಿ ಶ್ರೀ ವಿಠಲೇಶ್ವರನ
ಸನ್ನಿಧಿಯಲಿ ಮಾಡಿದ ಸುವರ್ಣಮೇರು ದಾನಕ್ಕೆ
ವೋದುವ ತಿರಮಲಂಮನವರು ಕಟಿದ ಶ್ಲೋಕವಿದು" [೧೩]

ಎಂದು ದಾಖಲಿಸಿದೆ. ವಿಜಯನಗರ ಸಾಮ್ರಾಟ ಅಚ್ಯುತ ದೇವರಾಯನು ವಿಜಯ ಸಂವತ್ಸರದ ಮಾರ್ಗಶಿರ ಶುದ್ಧ ೧೧ ರ ಗುರುವಾರದಂದು ತುಂಗಾಭದ್ರಾ ತೀರದಲ್ಲಿರುವ ಶ್ರೀವಿಠಲೇಶ್ವರನಿಗೆ ಮಾಡಿದ ಸುವರ್ಣಮೇರು ದಾನದ ಬಗ್ಗೆ ವೋದುವ ತಿರುಮಲಮ್ಮನು ಶ್ಲೋಕ ರಚಿಸಿದ್ದಾಳೆ. ಈ ವೋ (ಓ) ದುವ ತಿರುಮಲಮ್ಮನು ಪ್ರವಚನ ಕಾರ್ತಿ ಅಥವಾ ಅಧ್ಯಾಪಕಿ ಅಥವಾ ಪಂಡಿತೆಯಾಗಿರಬಹುದು. ಈಕೆ ಸಂಸ್ಕೃತ ಶ್ಲೋಕ ರಚಿಸುವ ಸಾಮರ್ಥ್ಯ ಹೊಂದಿದ್ದಳೆಂದರೆ ಅಚ್ಯುತದೇವರಾಯನ ಆಸ್ಥಾನದಲ್ಲಿ

ಸಂಸ್ಕೃತ ಪಂಡಿತೆ ಮತ್ತು ಕವಯತ್ರಿಯಾಗಿರುವ ಸಾಧ್ಯತೆ ಇದೆ. ಈ ಕುರಿತು ಹೆಚ್ಚಿನ ಸಂಶೋಧನೆಯ ಅಗತ್ಯವಿದೆ.

ಕೃಷ್ಣಸ್ವಾಮಿ ದೇವಾಲಯದ ಉತ್ತರ ಗೋಡೆಯಲ್ಲಿರುವ ಶಾಸನವು
"ಶ್ರೀ ಬಾಲಕೃಷ್ಣದೇವರ (ಏ) ಕಾಂತದ ಅವಸರದ ಪರಮಾಂನ
(ನಯಿ) ವೇದ್ಯಕ್ಕಾಗಿ ಪಾತ್ರದ ಬೇಪಾ (0) ಯ ಸಮ (ರ್ಪಿ)ಸಿದ
.... ಕರಣೀಕ ಗಣಪತಿ ದೇವಗಳು ನನಗೆ ಕೊಟ" [೧೪]

ಎಂದು ಸದಾಶಿವ ದೇವರಾಯ ಆಳುತ್ತಿದ್ದಾಗ ಶ್ರೀ ಬಾಲಕೃಷ್ಣದೇವರ ಏಕಾಂತದ ಅವಸರದ ಪರಮಾನ್ನ ನೈವೇದ್ಯಕ್ಕೆ ಹೊಲ ದಾನ ಬಿಡುತ್ತಾಳೆ ಪಾತ್ರದ ಬೆಂಪಾಯಿ. ಇದನ್ನು ಬೆಂಪಾಯಿಗೆ ಕರಣಿಕ ಗಣಪತಿ ದೇವನು ನೀಡಿರುತ್ತಾನೆಂದು ದಾಖಲಿಸುತ್ತದೆ.

ಈ ಪಾತ್ರದ ಬೆಂಪಾಯಿ ಅರಮನೆಯ ದಾಸಿ ಇಲ್ಲವೆ ನೃತ್ಯಗಾರ್ತಿಯಾಗಿರಬೇಕು ಅಥವಾ ದೇವಾಲಯಗಳಲ್ಲಿ ನೃತ್ಯ ಮಾಡುವ ದೇವದಾಸಿ ಮತ್ತು ಕರಣಿಕ ಗಣಪತಿ ದೇವನ ಉಪಪತ್ನಿಯಾಗಿರಬೇಕು. ಇವಳಿಗೆ ತನ್ನ ಕೆಲಸಕ್ಕೆ ಬಂದ ಉಡುಗೊರೆ ಅಥವಾ ಆದಾಯದಲ್ಲಿ ಈ ದಾನ ನೀಡಿದ್ದಾಳೆ.

ಮಾವಿನ ಮರಗಳ ನಂದಿಯ ಪೀಠದಲ್ಲಿನ ಶಾಸನವು

"ವೀರಂಮಂಮನು ಪ್ರತಿಷ್ಟೆನ ಶೇ ಶಿನ ಮಂಡಪಂ" [೧೫] ಎಂದು ವೀರಮ್ಮಮ್ಮನು ಮಂಟಪವನ್ನು ಪ್ರತಿಷ್ಠಾಪಿಸಿದಂತೆ ದಾಖಲಿಸುತ್ತದೆ.

ವಿರೂಪಾಕ್ಷ ದೇವಾಲಯದ ವಾಯುವ್ಯಕ್ಕೆ ನದಿಯ ದಂಡೆಯಲ್ಲಿ ಹಳೆಯ ಸ್ನಾನ ಘಟ್ಟದ ಹತ್ತಿರವಿರುವ ಮಂಟಪದ ಎದುರು ಬಂಡೆಯ ಮೇಲಿರುವ ತೆಲುಗು ಶಾಸನವು

"ವಿಜಯ ಸಂವತ್ಸರದ ಚೈತ್ರ ಶು ೫ ಅಪುಣ್ಯ
ಸೀಲಗೋತ್ರಂ ಯೆಕೆಹಳ್ಳಿ ರತಿಕುಂಜ
ಬೋಖಿಸೆಟಿ ಕೊಡ್ಕು ಸಿರಿಗಿಸೆಟಿ ಪೆಂಡ್ಲಾಮು
ಮಾ (ಟ)ಂಮ ಕ ಸೇಯಿಂಚಿ ಹಂಪೆ ಸ್ಥಳಂ
ದೇವಾದುಲ ವುಯ್ಯಾಲ ಕಂಭಾಲು ಶ್ರೀ" [೧೬]

ಎಂದು ವಿಜಯ ಸಂವತ್ಸರ ಚೈತ್ರ ಶುದ್ಧ ೫ ರಂದು ಯೆಕೆಹಳ್ಳಿಯ ಬೋಖಿಶೆಟ್ಟಿಯ ಮಗ ಸಿಂಗಿಶೆಟ್ಟಿಯ ಪತ್ನಿ ಮಾಟಮ್ಮಳು ಹಂಪಿಯಲ್ಲಿ ಉಯ್ಯಾಲೆ ಕಂಬಗಳನ್ನು ಮಾಡಿಸಿದಂತೆ ದಾಖಲಿಸಿದೆ. ಬಹುಶಃ ಈ ಮಾಟಮ್ಮಳು ಆಂಧ್ರದವಳಿರಹುದು. ಹಂಪಿಗೆ ಬಂದು ಉಯ್ಯಾಲೆ ಕಂಬ ಮಾಡಿಸಿರುವುದು ಒಂದು ಸಾಧನೆ ಎನ್ನಬಹುದು.

ಕೃಷ್ಣಸ್ವಾಮಿ ದೇವಾಲಯದ ದಕ್ಷಿಣ ಗೋಡೆಯಲ್ಲಿರುವ ಕ್ರಿ. ಶ. ೯-೧೨-೧೫೩೨ ರ ಅಚ್ಯುತದೇವರಾಯನ ಕಾಲದ ಶಾಸನವು

"ವರದಾಜಿದೇವಿ (ಅ) (೦) ಮ್ಮನವರೂ ಸಮರ್ಪಿತ್ತ
ಅವಸರ ೧ ಕಂ ಸಲುವ (ರು) ಚಕ್ರ ಗ೯ ೯ ಹೊಂದಿವಿನಲೂ
ವರುಷ ೧ ಕಂ ಗ ೩-೨೪೦ .... ಕೊಡೆತಿರುನಾಳು
೧ ಕಂ ಚಕ್ರ ಗ ೩೦೦ ಮುಂನೂಱ ಅಂತ್ತೂ ಗ [೩] ೮೪೦
.... ನಿ (೦) ರ್ಮಾಲ್ಯದ ಪ್ರಸಾದವನೂ [ಪಂ]ಚೌನಾಥ
ಪರದೇಶಿ ಶ್ರೀ ವೈಷ್ಣವರಿಗೆ" [೧೭]

ಎಂದು ವರದಾಜಿದೇವಿ ಅಮ್ಮನು ದೇವರ ಅವಸರ ಕಾರ್ಯ ಒಂದಕ್ಕೆ ಒಂದು ದಿನಕ್ಕೆ ೯ ಚಕ್ರಗದ್ಯಾಣದ ಲೆಕ್ಕದಲ್ಲಿ ವರುಷಕ್ಕೆ ೩೨೪೦ ಚಕ್ರಗದ್ಯಾಣವನ್ನೂ, ಕೊಡೆ ತಿರುನಾಳು ೧ ಕ್ಕೆ ೩೦೦ ಚಕ್ರಗದ್ಯಾಣ ಸೇರಿ ಒಟ್ಟು ೩೮೪೦ ಗದ್ಯಾಣಗಳನ್ನು ನೀಡಿ ಈ ಪೂಜಾ ಪ್ರಸಾದವನ್ನು ಪಂಚಾನಾಥ, ಪರದೇಶಿ ಶ್ರೀ ವೈಷ್ಣವರಿಗೆ ನೀಡಬೇಕೆಂದು ಉಲ್ಲೇಖಿಸಿದೆ.

ವರದಾಜಿ ಅಮ್ಮ ಬಾಲಕೃಷ್ಣದೇವರಿಗೆ ಸಾವಿರಾರು ಚಕ್ರಗದ್ಯಾಣವನ್ನು ದಾನ ನೀಡಬೇಕಾದರೆ ಆಕೆ ಸ್ಥಿತಿವಂತಳಿರಬೇಕು ಅಥವಾ ಜಮೀನ್ದಾರಳಾಗಿರಬೇಕು. ಬಾಲ ಕೃಷ್ಣದೇವಾಲಯದಲ್ಲಿ ಬಹುಶಃ ದಾಸೋಹ ನಡೆಯುತ್ತಿರಬೇಕು. ಈ ವರದಾಜಿ ಅಮ್ಮಳು ಶ್ರೀವೈಷ್ಣವಳಾಗಿದ್ದು, ವಿಜಯನಗರ ಸಾಮ್ರಾಜ್ಯದ ವ್ಯಾಪ್ತಿಗೆ ಒಳಪಡದ ಪ್ರದೇಶದಿಂದ ಬರುವ ಶ್ರೀವೈಷ್ಣವರಿಗೆ ಈಕೆ ನೀಡಿದ ದಾನದಲ್ಲಿನ ಪೂಜಾಪ್ರಸಾದವನ್ನು ನೀಡಬೇಕೆಂದು ತಿಳಿಸಿರುವುದು ಗಮನಾರ್ಹ ಅಂಶವಾಗಿದೆ. ಶ್ರೀ ವೈಷ್ಣವರ ಅಭ್ಯುದಯ ಕ್ಕಾಗಿ ವರದಾಜಿಯನ್ನು ದಾನ ನೀಡಿರುವುದು ಸ್ತುತ್ಯರ್ಹವಾದದ್ದು.

ಮತಂಗ ಪರ್ವತದ ವೀರಭದ್ರ ದೇವಾಲಯದ ಪಕ್ಕದ ಬಂಡೆಯ ಮೇಲಿರುವ ಶಾಸನವು

"ಪಿಂಗಳ ಸಂವತ್ಸರದ ಏಕಾದೆಸೆ ಭಾನುವಾರದಲು ಮಟ್ಟರ
ಸರ ಮಂಗಾಯ ಮಗಳು ರಾಮಾಯಿ ವಿರು(ಪಾ)ಕ್ಷ ದೇವರ
ಕಳಸವನುಕಂಡು ನಮಕ್ಸಾರವನು ಮಾಡಿ ಕ್ರುತಾರ್ಥ ಅದ(ಳು)
.... ಮಯಿಲಪ್ಪ ತಾಯಿ
ಸಾತಾಯಿ............... ಮಾಯಕ ಮಾಯಕನ ಮಗಳು
ಪೂವಾಯ ಕಲ್ಲಾಯಿ" [೧೮] ಎಂದು ಶಾಸನ ದಾಖಲಿಸಿದೆ.

ಈ ಶಾಸನವು ಪಿಂಗಳ ಸಂವತ್ಸರದ ಏಕಾದಶಿ ಭಾನುವಾರದಂದು ಹಂಪಿಗೆ ಬಂದ ಮಟ್ಟರಸ ಮತ್ತು ಮಂಗಾಯರ ಮಗಳು ರಾಮಾಯಿ, ಮಯಿಲಪ್ಪನ ತಾಯಿ ಸಾತಾಯಿ, ಮಾಯಕ್ಕ, ಮಾಯಕ್ಕನ ಮಕ್ಕಳಾದ ಪೂವಾಯಿ ಕಲ್ಲಾಯಿಯರು ವಿರೂಪಾಕ್ಷ ದೇವರ ಕಳಸವನ್ನು ಕಂಡು ನಮಸ್ಕಾರ ಮಾಡಿ ಕೃತಾರ್ಥರಾದಂತೆ ವಿವರಿಸುತ್ತದೆ.

ಈ ಶಾಸನದಲ್ಲಿ ಬರುವ ಮಹಿಳೆಯರು ಸಾಮಾಜಿಕ ವ್ಯವಸ್ಥೆಯಲ್ಲಿ ಗುರುತಿಸಿಕೊಂಡಿರಬಹುದು ಅಥವಾ ಸಮಾಜಸೇವೆಗೆ ತಮ್ಮನ್ನು ಅರ್ಪಿಸಿಕೊಂಡಿದ್ದು ಹಂಪಿಗೆ ಪ್ರವಾಸ ಬಂದಿರಬಹುದು.

ಮತಂಗದೇವ ಗುಹೆಯ ಎದುರು ಬಂಡೆಯಲ್ಲಿನ ತ್ರುಟಿತ ಶಾಸನವು

“ರಂಗಪನು ತಾಯಿ ಬನದಮನು...............

.... ಮ ದೇವಿಯ ಮಗ ಬೋಗಣನ

ಮಗ ಗೋಪಣನ ತಾಯಿ ಮಾದಮ ”[೧೯] ಎಂದು ರಂಗಪನ ತಾಯಿ ಬನದಮ್ಮ, ಗೋಪಣನ ತಾಯಿ ಮಾದಮ್ಮರ ಉಲ್ಲೇಖ ನೀಡುತ್ತದೆ. ಅಲ್ಲದೆ ಇದೇ ಗುಹೆಯ ಪಕ್ಕದ ಬಂಡೆಯಲ್ಲಿರುವ ಶಾಸನವು “ವೊಬಳದ ದೇವಿಗಳು”[೨೦] ಎಂದು ವೊಬಳ ದೇವಿಯನ್ನು ದಾಖಲಿಸಿದೆ ಹಾಗೂ ಮಾಲ್ಯವಂತ ಪರ್ವತದ ಪೂರ್ವಕ್ಕೆ ಕಣಿವೆಯಲ್ಲನ ಗುಂಡಿನ ಮೇಲೆ ಇರುವ ಶಾಸನವು “ಚೆನಮಲಂಮ”[೨೧] ಎಂದು ದಾಖಲಿಸಿದೆ.

ಈ ಮೇಲಿರುವ ಶಾಸನಗಳಲ್ಲಿ ಬರುವ ಬನದಮ್ಮ, ಮಾದಮ್ಮ, ವೊಂಳದೇವಿ, ಚೆನ್ನ ಮಲ್ಲಮ್ಮರು ಹಂಪಿ ನಿವಾಸಿಗಳಾಗಿರಬಹುದು ಇಲ್ಲವೆ, ಪರ ಊರಿನ ಪ್ರಭಾವಿ ಮಹಿಳೆಯರಾಗಿರಬಹುದು ಅಥವಾ ಶ್ರೀಮಂತವರ್ಗಕ್ಕೆ ಸೇರಿದವರಾಗಿರಬಹುದು. ಇವರುಗಳು ಹಂಪಿಗೆ ಬಂದಿದ್ದರ ಬಗ್ಗೆ ಅಥವಾ ಹಂಪಿಯಲ್ಲಿ ಯಾವುದೋ ಸಮಾಜೋಪ ಯೋಗಿ ಕಾರ್ಯ ಮಾಡಿದ್ದರ ಕುರುಹು ಆಗಿ ಅವರ ಹೆಸರು ಶಾಶ್ವತವಾಗಿ ಉಳಿಯಲು ಶಾಸನ ಬರೆಸುವ ಸಾಧ್ಯತೆ ಇದೆ.

ಉದಯಗಿರಿ ಬಾಗಿಲ ಹೊರಗಿರುವ ಬಂಡೆಯ ಮೇಲಿರುವ ಕ್ರಿ. ಶ. ೩೦-೬-೧೫೫೮ರ ಶಾಸನವು

“ಕಾಳಾಯುಕ್ತ ಸಂವತ್ಸರದ ಆಷಾಡ ಸು ೧೫

ಸೋಮಾಯೆನಾಯಕನ ಮಗ ಬುಳಾಪನು

ಆತನ ಮದವಳಿಗೆ ಭಯಿರಾಯಿ ಯಿವರು

ಯಿಬರು ಸುಗನಹಳ್ಳಿಯ ಜಂಗಮ ಸೋಮಯದೇವ

ಅಯಗಳಿಗೆ ಯಾ ಬಾವಿ ದಾರಿಯಿಂದ ವೊಳಗಣ ನಿವೇಶನವನೂ”[೨೨]

ಎಂದು ಕಾಳಾಯುಕ್ತ ಸಂವತ್ಸರದ ಆಷಾಢ ಶುದ್ಧ ೧೫ ರಂದು ಸೋಮಯೆ ನಾಯಕನ ಮಗ ಬಳಪ ಮತ್ತು ಆತನ ಪತ್ನಿ ಭಯಿರಾಯಿಯು ಸುಗನಹಳ್ಳಿಯ ಜಂಗಮನಾದ ಸೋಮಯಿದೇವ ಅಯ್ಯನಿಗೆ ಬಾವಿ ದಾರಿಯಿಂದ ಬಾಗಿಲ ಒಳಗಣ ನಿವೇಶನವನ್ನು ದಾನವಾಗಿ ನೀಡಿದ್ದನ್ನು ಉಲ್ಲೇಖಿಸಿದೆ. ಇಲ್ಲಿ ಭಯರಾಯಿಯು ಜಂಗಮ ಮತ್ತು ಅವರ ಸಿದ್ಧಾಂತಗಳ ಬಗ್ಗೆ ನಂಬಿಕೆ ಹೊಂದಿದ್ದು, ಜಂಗಮನಾದ ಸೋಮಯದೇವ

ಅಯ್ಯನವರಿಗೆ ಬಹುಶಃ ತಮ್ಮ ಮನೆಯ ನಿವೇಶನವನ್ನು ದಾನವಾಗಿ ಕೊಟ್ಟಿರುವು ವಂತಿದೆ. ಗಂಡ ಬುಳಪನಿಗಿಂತಲೂ ಈಕೆ ಚತುರೆಯಾಗಿದ್ದು ಸಮಾಜ ಸೇವೆಗೆ ತಮ್ಮ ದಾನ ವಿನಿಯೋಗವಾಗಲೆಂಬ ಆಕಾಂಕ್ಷೆಯಿಂದ ಈ ನಿವೇಶನಗಳನ್ನು ದಾನವಾಗಿ ಕೊಟ್ಟಿರ ಬಹುದು. ಭಯಿರಾಯಿಯು ಬುದ್ಧಿವಂತೆ ಮತ್ತು ಪ್ರಬಲ ಮಹಿಳೆಯಾಗಿರುವುದಕ್ಕೆ ಈ ಶಾಸನ ಸಾಕ್ಷಿ.

ಒಟ್ಟಾರೆಯಾಗಿ ಹೇಳುವುದಾದರೆ, ಹಂಪಿ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಮಹಿಳೆಯರು ಸ್ವಯಂ ಆಡಳಿತ ನಡೆಸಿದ, ಸ್ವಯಂ ದಾನ -ದತ್ತಿವಿಟ್ಟ ವಿವೇಕಿಗಳು. ಮಹಿಳೆ ಕೇವಲ ತಂದೆಗೆ ಮಗಳಾಗಿ, ಗಂಡನಿಗೆ ದಾಸಿಯಾಗಿ, ಮಕ್ಕಳಿಗೆ ತಾಯಿಯಾಗಿ ಉಳಿಯದೆ ವ್ಯಕ್ತಿಯ ಬದುಕಿನಲ್ಲಿ ಸಹಭಾಗಿಯಾಗಿ ಸ್ವಯಂ ಜೀರ್ಣೋದ್ಧಾರ ಮಾಡುವ ಮನಸ್ಥಿತಿ, ಸ್ವಯಂ ನಿರ್ಧಾರ ಕೈಗೊಳ್ಳುವ, ಆಡಳಿತ ನಡೆಸುವ ಚಮತ್ಕಾರ ಹೊಂದಿದ ಅಂಶಗಳು ಶ್ಲಾಘನೀಯವಾದದ್ದು. ಅರಸನಿಗೆ ಕೇವಲ ರಾಣಿಯಾಗಿರದೆ ತಾನು ಆಡಳಿತ ದಲ್ಲಿ ಪಾಲ್ಗೊಂಡು ಅರಸನ ಕಾರ್ಯಗಳನ್ನು ಕೆಲಸಗಳನ್ನು ಹಂಚಿಕೊಂಡು ದೇವಾಲಯ ಗಳನ್ನು ಜೀರ್ಣೋದ್ಧಾರ ಮಾಡಿದ್ದರ ಬಗ್ಗೆ, ದೇವರ ನೈವೇದ್ಯಕ್ಕೆ ದಾನ ನೀಡಿದ್ದನ್ನು, ಹೆಗ್ಗಡತಿಯರಾಗಿ ಆಡಳಿತ ಮಾಡಿದ್ದನ್ನು ನೋಡಿದಾಗ ಮಹಿಳೆಗೆ ವ್ಯವಹಾರ ಮತ್ತು ಆಡಳಿತದ ಅನುಭವ ಇದೆ ಎಂದು ತಿಳಿಯುತ್ತದೆ. ಸಮಾಜೋದ್ಧಾರ ಕೆಲಸ ಮಾಡಿದ ಮಂತ್ರ ಲಕ್ಕಣ್ಣದಂಡೇಶ ಅಥವಾ ಲಕ್ಷ್ಮೀಧರ ಜಗದ್ವಿಖ್ಯಾತನಾಗಲು ಮೂಲಕಾರಣ ಅವನ ತಾಯಿ ಸಿಂಗಾಂಬಿಕಾ ನಿಜಕ್ಕೂ ಲೋಕಮಾನ್ಯಳು ಹಾಗೆಯೇ ಲಕ್ಷ್ಮೀಧರನ ಏಳಿಗೆಯಲ್ಲಿ ಪ್ರಮುಖ ಪಾತ್ರವಹಿಸಿದ ದೇವಕಿ ಮತ್ತು ಸೋಮಲೆ ಎಂಬ ಇಬ್ಬರು ಪತ್ನಿಯರು ಅಭಿನಂದನಾರ್ಹರು. ಬಹುಶಃ ಸಿಂಗಾಂಬಿಕಾ, ದೇವಕಿ ಮತ್ತು ಸೋಮಲೆ ಎಂಬ ಮಹಿಳೆಯರ ಪ್ರಚೋದನೆ ಸಿಗದೇ ಹೋಗಿದ್ದರೆ ಲಕ್ಷ್ಮೀಧರಾಮಾತ್ಯ ಲೋಕ ಮೆಚ್ಚುವ ಕಾರ್ಯಗಳನ್ನು ಮಾಡುತ್ತಿದ್ದನೋ ಇಲ್ಲವೋ, ಹಾಗೆಯೇ ವರದಾಜಿ ಅಮ್ಮ ಮತ್ತು ಭಯಿರಾಯಿ ಕ್ರಮವಾಗಿ ಶ್ರೀ ವೈಷ್ಣವರಿಗೆ ಪೂಜಾ ಪ್ರಸಾದಕ್ಕಾಗಿ, ಮತ್ತು ಜಂಗಮ ಸೋಮಯದೇವ ಅಯ್ಯನಿಗೆ ನಿವೇಶನವನ್ನು ಸಮಾಜೋಪಯೋಗಿ ಕೆಲಸಕ್ಕೆ ದಾನ ಬಿಟ್ಟಿರುವುದನ್ನು ನೋಡಿದರೆ ಅವರುಗಳಿಗೆ ಸಮಾಜೋದ್ಧಾರ ಕಾಳಜಿ ಎಷ್ಟಿದೆ ಎಂಬುದು ತಿಳಿಯುತ್ತದೆ.

ಉಯ್ಯಾಲೆ ಕಂಬ ಕಟ್ಟಿಸುವುದು, ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡು ವುದು, ಭಗ್ನಗೊಂಡ ಮೂರ್ತಿ ಶಿಲ್ಪಗಳನ್ನು ಪುನಃ ಹೊಸದಾಗಿ ಪ್ರತಿಷ್ಠಾಪಿಸು ವುದು, ಗುರುವಿಗೆ ನಿಷ್ಠೆ ತೋರಲು ದೀಪಮಾಲೆ ಕಂಬ ಮಾಡಿಸುವುದು, ಮಂಟಪ ಕಟ್ಟಿಸುವುದು, ಸ್ವತಃ ದಾಸಿಯಾಗಿದ್ದರೂ ದೇವರಿಗೆ ಯಾರೋ ಕೊಟ್ಟ ಉಡುಗೊರೆ ಹೊಲವನ್ನು ದಾನ ನೀಡುವುದು ಇನ್ನು ಮುಂತಾದ ಅಂಶಗಳನ್ನು ಗಮನಿಸದಾಗ ಮಹಿಳೆಯರಲ್ಲಿ ಎಂತಹ

ಉದಾರ ಮನೋಭಾವ, ನಿಸ್ವಾರ್ಥ ಗುಣಗಳಿವೆ ಎಂಬುದನ್ನು ಅರಿಯಬಹುದು. (ಹಂಪಿ ಶಾಸನಗಳಲ್ಲಿ ಬರುವ ಮಹಿಳೆಯರನ್ನು ಕುರಿತು ಇನ್ನೂ ಹೆಚ್ಚಿನ ಅಧ್ಯಯನದ ಅವಶ್ಯಕತೆ ಇದೆ)

ಅಡಿ ಟಿಪ್ಪಣಿಗಳು

೧) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* : ೩ -ಹಂಪಿ ಶಾಸನಗಳು - ಪು. -೫೦
೨) ಅದೇ ಪು. -೫೦
೩) ಅದೇ ಪು. -೪೯
೪) ಅದೇ -ಪು. -೧೬
೫) ಅದೇ -ಪು. -೫೯
೬) ಅದೇ -ಪು. -೫೯
೭) ಅದೇ ಪು. -೬೨
೮) ಅದೇ -ಪು. -೬೨
೯) ಅದೇ -ಪು. -೧೭
೧೦) ಅದೇ -ಪು. -೧೩೨
೧೧) ಅದೇ ಪು. -೨೦೬
೧೨) ಅದೇ ಪು. -೮೭
೧೩) ಅದೇ-ಪು. -೨೮
೧೪) ಅದೇ -ಪು. -೭೮
೧೫) ಅದೇ ಪು. - ೫
೧೬) ಅಲ್ಲೇ -ಪು. -೫
೧೭) ಅದೇ -ಪು.-೭೭
೧೮) ಅದೇ -ಪು. -೯೮
೧೯) ಅದೇ -ಪು. -೧೦೧
೨೦) ಅದೇ -ಪು. -೧೦೨
೨೧) ಅದೇ -ಪು.-೨೬೧
೨೨) ಅದೇ -ಪು. -೨೬೯

ಆಕರ ಗ್ರಂಥ

೧) ಡಾ. ದೇವರ ಕೊಂಡಾ ರೆಡ್ಡಿ ಮತ್ತು ಇತರರು (ಸಂ) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೩-ಹಂಪಿ ಶಾಸನಗಳು* -ಪ್ರಸಾರಾಂಗ, ಕನ್ನಡ ವಿ. ವಿ. ಹಂಪಿ, -೨೦೦೦

೧೩. ವಿಜಯನಗರ ಕಾಲದ ಶಾಸನೋಕ್ತ ಅನ್ನಛತ್ರಗಳು

ಎನ್.ಎಸ್. ಮಹಂತೇಶ

ದಕ್ಷಿಣ ಭಾರತದ ಚರಿತ್ರೆಯಲ್ಲೇ ರಾಜಕೀಯ ಏಕತೆಯನ್ನು ಸಾಧಿಸಿ ಸುವರ್ಣ ಯುಗವನ್ನು ಸೃಷ್ಟಿಸಿ ವಿಶಿಷ್ಟ ರೀತಿಯಲ್ಲಿ ಆಳಿದ ವಿಜಯನಗರ ಸಾಮ್ರಾಜ್ಯವು ವಿವಿಧ ದೃಷ್ಟಿಕೋನಗಳಿಂದ ಮಹತ್ವ ಪಡೆದಿದೆ. ಇವರ ಆಳ್ವಿಕೆಯ ಕುರುಹಾಗಿ ದಕ್ಷಿಣ ಭಾರತದಾದ್ಯಂತ ಸಹಸ್ರಾರು ಸಂಖ್ಯೆಯ ಶಾಸನಗಳು ದೊರೆತಿದ್ದು, ಅವುಗಳ ಅಧ್ಯಯನದಿಂದ ಹೊಸ ಸಂಗತಿಗಳು ಬೆಳಕಿಗೆ ಬರುತ್ತಿವೆ. ವಿಜಯನಗರ ಕಾಲದ ರಾಜಕೀಯ ಇತಿಹಾಸಕ್ಕಿಂತ ಪ್ರಾಮುಖ್ಯತೆ ಪಡೆದಿರುವುದು ಅವರ ಸಾಂಸ್ಕೃತಿಕ ಕೊಡುಗೆಗಳು. ಅವರ ಕಾಲದ ದೇವಾಲಯಗಳ ನಿರ್ಮಾಣ, ಕಲೆ, ವಾಸ್ತುಶಿಲ್ಪದ ಬೆಳವಣಿಗೆ, ಕೆರೆ-ಕಟ್ಟೆಗಳ ನಿರ್ಮಾಣ, ಸಾಹಿತ್ಯದ ಪೋಷಣೆ, ದೇವಾಲಯಗಳೊಂದಿಗೆ ಮಠಗಳು, ಅನ್ನಛತ್ರಗಳ ನಿರ್ಮಾಣ ಅವುಗಳಿಗೆ ನೀಡಿರುವ ದಾನಧರ್ಮಗಳು ಮಹತ್ವ ಪೂರ್ಣವಾದ ಸಾಂಸ್ಕೃತಿಕ ಕೊಡುಗೆಗಳಾಗಿವೆ. ಈ ಸಂಗತಿಗಳ ಬಗ್ಗೆ ಅವರ ಕಾಲದ ಶಾಸನಗಳು ಸಾಕ್ಷಿಗಳಾಗಿವೆ.

ಪ್ರಸ್ತುತ ಪ್ರಬಂಧದಲ್ಲಿ "ವಿಜಯನಗರ ಕಾಲದ ಶಾಸನೋಕ್ತ ಅನ್ನಛತ್ರಗಳ"ನ್ನು ಕುರಿತು ಅಧ್ಯಯನಿಸಲು ಪ್ರಯತ್ನಿಸಲಾಗಿದೆ. ವಿಜಯನಗರ ಕಾಲದಲ್ಲಿ ಧಾರ್ಮಿಕ ವ್ಯವಸ್ಥೆಯ ಪ್ರತೀಕವಾಗಿ ಈ ಅನ್ನಛತ್ರಗಳು ಹೇಗೆ ಬೆಳೆದುಬಂದಿವೆ? ಅವುಗಳನ್ನು ಯಾರ್‍ಯಾರು ನಿರ್ಮಿಸಿದ್ದಾರೆ? ಅವುಗಳಿಗೆ ಯಾವ ಸ್ವರೂಪದ ದಾನ-ಧರ್ಮಗಳನ್ನು ನೀಡಿದ್ದಾರೆ? ವಿಜನಯಗರ ಕಾಲದ ಸಾಮಾಜಿಕ-ಧಾರ್ಮಿಕ ವ್ಯವಸ್ಥೆಯಲ್ಲಿ ಅನ್ನಛತ್ರಗಳ ಪಾತ್ರ ಏನು? ಮುಂತಾದ ಹಲವು ವಿಚಾರಗಳನ್ನು ವಿಜಯನಗರ ಕಾಲದ ಶಾಸನಗಳನ್ನು ಅವಲೋಕಿಸುವುದರ ಮೂಲಕ ವಿಜಯನಗರ ಕಾಲದ ಅನ್ನಛತ್ರಗಳನ್ನು ಕುರಿತು ಅಧ್ಯಯನ ಮಾಡಲು ಪ್ರಯತ್ನಿಸಿದ್ದೇವೆ.

ಅನ್ನಛತ್ರಗಳ ನಿರ್ಮಾತೃಗಳು

ವಿಜಯನಗರ ಕಾಲದ ಶಾಸನಗಳಲ್ಲಿ ಅನ್ನಛತ್ರಾದಿ ಮಠಗಳನ್ನು ನಿರ್ಮಿಸಿದವರ ಬಗ್ಗೆ ಸಾಕಷ್ಟು ಉಲ್ಲೇಖ ದೊರೆಯುತ್ತವೆ. ಈ ಕಾಲದಲ್ಲಿ ರಾಜ-ಮಹಾರಾಜರಿಂದ ಹಿಡಿದು ದಣ್ಣಾಯಕರು, ಅಮರನಾಯಕರು, ಅಧಿಕಾರಿ ವರ್ಗದವರು, ಮಠದ

ಶ್ರೀಗಳು, ವರ್ತಕರು ಹಾಗೂ ಇನ್ನೂ ಮುಂತಾದವರು ತಮ್ಮ ಪರಿಸರಗಳಲ್ಲಿ ಅನ್ನಛತ್ರ ಮಠಗಳನ್ನು ನಿರ್ಮಾಣ ಮಾಡಿರುವುದು ಉಲ್ಲೇಖನೀಯವಾಗಿವೆ.

ವಿಜಯನಗರ ಕಾಲದ ಶಾಸನೋಕ್ತ ವಿಚಾರದಂತೆ ರಾಜ ಪ್ರೌಢದೇವರಾಯನ ಕಾಲದಲ್ಲಿ ಅನ್ನಛತ್ರಗಳು ಹೆಚ್ಚು ಪ್ರಮಾಣದಲ್ಲಿ ನಿರ್ಮಾಣಗೊಂಡು ದಾನದತ್ತಿಗಳನ್ನು ನೀಡಲಾಗಿದೆ. ಸ್ವತಃ ಪ್ರೌಢದೇವರಾಯನೇ ನಿರ್ಮಿಸಿದ ಅನ್ನಛತ್ರದ ವಿಚಾರವನ್ನು ಕ್ರಿ.ಶ.೧೪೨೧ರ ಅವನ ಶಾಸನದಿಂದ ತಿಳಿಯಬಹುದು. ಇದರಲ್ಲಿ

ಶ್ರೀ ಮನ್ಮಹಾ ರಾಜಾಧಿರಾಜ ರಾಜಪರಮೇಶ್ವರ ಶ್ರೀವೀರ ಪ್ರತಾಪ ದೇವರಾಯ ಮಹಾರಾಯರು

ವಿಜೆಯನಗರಿಯ ರಾ

ಜಧಾನಿಯಲ್ಲಿ ಸುಖಸಂಕಥಿವಿನೋದಂ ಸಮಸ್ತರಾಜ್ಯಂಗಳನೂ ಸಕಲ ವರ್ಣಾ

ಶಮಧರ್ಮಗಳನೂ ಪ್ರತಿ

ಪಾಲಿಸುವ ಕಾಲದಲ್ಲು ಮಹಾರಾಯರ ನಿರೂಪದಿಂದ ಮಹಾಪ್ರಧಾನ ಚಂಡಪ್ಪಗಳು

ಬಾರಕೂರು ಮಹಾರಾಜ್ಯ

ವನೂ ಪ್ರತತಿ ಪಾಲಿಸುವ ಕಾಲದಲ್ಲು ಆ ದೇವರಾಯ ಮಹಾರಾಜರು ಮಾಡಿದತ್ಸತ್ರದ

ಬ್ರಾಹ್ಮಣ ಭೋಜನದ [೧]

ಎಂದು ವಿವರಿಸುತ್ತದೆ. ಅಂದರೆ ಬಾರಕೂರು ರಾಜ್ಯವನ್ನು ಪ್ರೌಢದೇವರಾಯನ ಮಹಾಪ್ರದಾನಿಯಾಗಿ ಚಂಡಪ್ಪ ಎಂಬುವವನು ಆಳುತ್ತಿರುವಾಗ ಸ್ವತಃ ಪ್ರೌಢದೇವರಾಯನೇ ಅಲ್ಲಿ ಒಂದು ಅನ್ನಛತ್ರವನ್ನು ನಿರ್ಮಿಸಿ ಬ್ರಾಹ್ಮಣರ ಭೋಜನಕ್ಕೆ, ಅಡುಗೆ ಮಾಡುವವರಿಗೆ, ಪರಿಚಾರಕರಿಗೆ ಒಟ್ಟು ೨೫ ಜನರ ಭೋಜನಕ್ಕಾಗಿ ವಿವಿಧ ದವಸಧಾನ್ಯಗಳನ್ನು ಮತ್ತು ಹಣವನ್ನು ದಾನಬಿಟ್ಟ ವಿಚಾರವನ್ನು ಶಾಸನ ಹೇಳುತ್ತದೆ.

ಕ್ರಿ.ಶ. ೧೪೧೪ರ ತಮಿಳುನಾಡಿನ ಶ್ರೀರಂಗಂನ ಶಾಸನೋಕ್ತ ವಿಚಾರದಿಂದ ವೀರಪ್ರತಾಪ ದೇವರಾಯನ ಮಗ ವೀರ ಹರಿಹರರಾಯರ ಆಳ್ವಿಕೆ ಕಾಲದಲ್ಲಿ ಶ್ರೀರಂಗಂನ ರಂಗನಾಥ ದೇವಾಲಯದ ಉತ್ತಮನಂಬಿ ಎಂಬ ವ್ಯಕ್ತಿಗೆ ನರುವೂರು ಎಂಬ ಗ್ರಾಮವನ್ನು ದಾನ ನೀಡುವುದರೊಂದಿಗೆ ರಂಗನಾಥ ದೇವಾಲಯದ ಪ್ರಕಾರದ ಒಳಗಡೆ ಬ್ರಾಹ್ಮಣರ ಭೋಜನಕ್ಕಾಗಿ ಅನ್ನಛತ್ರವನ್ನು ಕಟ್ಟಿಸುವುದು ಹಾಗೂ ಪ್ರತಿದಿನ ೧೨ ಜನ ಬ್ರಾಹ್ಮಣರಿಗೆ ಭೋಜನ ವ್ಯವಸ್ಥೆ ಮಾಡುವಂತೆ ಸೂಚಿಸಿದ್ದಾನೆ.[೨]

ಕ್ರಿ.ಶ. ೧೫೨೬ರ ಕೃಷ್ಣದೇವರಾಯನ 'ಬಿದರ ಕೆರೆ [ದಾವಣಗೆರೆ (ಜಿ), ಜಿಗಳೂರು (ತಾ)]' ಶಾಸನದಲ್ಲಿ ಹೇಳುವಂತೆ ಇಲ್ಲಿ ಆಳುತ್ತಿದ್ದ ಸಾಮಂತದೊರೆಯು ಬ್ರಾಹ್ಮಣರ ಭೋಜನ ಹಾಗೂ ಅನ್ನಛತ್ರಕ್ಕಾಗಿ ಬಿದರಕೆರೆಯಲ್ಲಿರುವ ಕೆರೆಯ ನಾಲ್ಕು ದಿಕ್ಕಿನ ಹೊಲವನ್ನು, ತೋಟತುಡಿಕೆಯನ್ನು ದಾನ ನೀಡಲಾಗಿದೆ.[೩]

ಹಾಸನದ ವಿರೂಪಾಕ್ಷ ದೇವಾಲಯದ ಕ್ರಿ.ಶ. ೧೫೩೧ರ ಅಚ್ಯುತರಾಯನ ಕಾಲದ ಶಾಸನೋಕ್ತ ವಿಚಾರದಂತೆ ಶಾಸನ ವಿರೂಪಾಕ್ಷ ದೇವಸ್ಥಾನದ ಕರ್ತರಾದ ದೇವರು ಭಟ್ಟರೂ ಸೇರಿದ್ದಂತೆ ೧೨ ಜನ ಬ್ರಾಹ್ಮಣರಿಗೆ ಭೋಜನ ಹಾಕುವ ಸತ್ರವೊಂದರ ನಿರ್ವಹಣೆಗಾಗಿ ಚನ್ನಪ್ಪಣ್ಣನ ಅಳಿಯ ಸಂತಾನ ಮತ್ತು ತಿಪ್ಪಭೂಪಾಲನ ಮಗನಾದ ಯಲ್ಲಪ್ಪನಾಯಕನು ಉದ್ದೂರು ಗ್ರಾಮವನ್ನು ದಾನ ಮಾಡಿರುವ ವಿಷಯ ಇದರಿಂದ ತಿಳಿದುಬರುತ್ತದೆ.[೪]

ಈ ರೀತಿಯ ಸ್ವತಃ ವಿಜಯನಗರ ಅರಸಲು ತಮ್ಮ ಕಾಲದಲ್ಲಿ ದೇವಾ ಲಯಗಳಿಗೆ ಹೊಂದಿಕೊಂಡಂತೆ ಅನ್ನಛತ್ರಾದಿ ಮಠಗಳನ್ನು ಸ್ಥಾಪಿಸಿದ್ದರು.

ಕೇವಲ ವಿಜಯನಗರ ಅರಸರು ಮಾತ್ರವಲ್ಲದೆ ಅವರ ಮಾಂಡಳಿಕರು, ಮಹಾ ಪ್ರಧಾನರು ಹಾಗೂ ಅಮರನಾಯಕರು ಸಹ ತಮ್ಮ ಪ್ರದೇಶಗಳಲ್ಲಿ ಅನ್ನಛತ್ರಗಳನ್ನು ತೆರೆದಿದ್ದಾರೆ. ಈ ಬಗ್ಗೆ ಕ್ರಿ.ಶ. ೧೪೩೧ರ ಪ್ರೌಢದೇವರಾಯನ ಕಾಲದ ಶಾಸನಗಳನ್ನು ಗಮನಿಸಿದಾಗ "ಅರಗರಾಜ್ಯದ ಹೊಳೆಯ ಹೊನ್ನೂರು ನಾಡನ್ನು ಬೈಚಪ್ಪ ದಂಡ ನಾಯಕನ ಮಗ ರಾಯಣ್ಣ ಒಡೆಯನು ಆಳುತ್ತಿರುವಾಗ ತುಂಗಭದ್ರ ಸಂಗಮ ವಾದ ಕೂಡಲಿಯಲ್ಲಿ ಒಂದು ಅನ್ನಛತ್ರವನ್ನು ನಿರ್ಮಿಸಿದ್ದು, ಅದಕ್ಕೆ ಹೊಳೆಯ ಹೊನ್ನೂರಿನ ಸಮಸ್ತರು ದಾನವನ್ನು ನೀಡಿರುವ ಅಂಶವನ್ನು ಕಾಣಬಹುದು."[೫]

ಕ್ರಿ. ಶ. ೧೪೩೧ರ ಶಾಸನವೊಂದರಲ್ಲಿ[೬]

ರಾಜಪರಮೇಶ್ವರ ಶ್ರೀ ವಿರಪ್ರತಾಪ ದೇವರಾಯ ಮಹಾರಾಯರು ವಿಜಯ

ನಗರದು ಸು

ಕಸಾಂಬ್ರಾಬ್ಯಂಗೆಯ ಉತ್ತಂಯಿಿಹ ಕಾಲದಲು ಆ ರಾಯನ ನಿರೂಪದಿಂ

ಅಗರದ ರಾಜ್ಯವನು

....ಪ್ರತಿಪಾಲಿಸುತ್ತಂ ಯಿಹಕಾಲದಲು ಯೀಶ್ವರಸ್ವರೂಪ ಒಡೆಯರ ಹೆಸ

ರಲುಗಾ.... ಪ್ರರಿಶ್ರೀಪಾದಂಗಳೂ ಮಾಡಿ ಧರ್ಮ್ಯದ ಛತ್ರದ ಭೂಮಿಯ ವಿವರ ಬುಕ್ಕರಾಯಪು.

ಎಂದು ಉಲ್ಲೇಖಿತಗೊಂಡಿದೆ. ಅಂದರೆ ಪ್ರೌಢದೇವರಾಯನ ಕಾಲದಲ್ಲಿ ಅರಗದ ರಾಜ್ಯದಲ್ಲಿ ಬರುವ ಮಠದ ಶ್ರೀಗಳಾದ ಗಂಗಾಧರ ಪುರಿ ಶ್ರೀಪಾದಂಗಳು ಅವರು ದೇವರಾಯನ ಹೆಸರಿನಲ್ಲಿ ನಾರಾಯಣದೇವರ ಛತ್ರದ ಸೇವೆಗಾಗಿ ರಾಮಭಟ್ಟ ಎಂಬು ವವನಿಗೆ 'ಬುಕ್ಕರಾಯಪುರ'ಎಂಬುದನ್ನು ದಾನ ನೀಡಿದ ವಿಷಯವನ್ನು ತಿಳಿಸುತ್ತದೆ.

ವಿಜಯನಗರ ಕಾಲದಲ್ಲಿ ಸ್ತ್ರೀಯರೂ ಅನ್ನಛತ್ರಗಳ ನಿರ್ಮಾಣಕ್ಕೆ ದಾನ ಮಾಡಿದ್ದಾರೆ. ಅವುಗಳ ಶಾಸನಗಳಲ್ಲಿ ಉಲ್ಲೇಖನೀಯವಾಗಿದೆ. ಕ್ರಿ.ಶ. ೧೪೨೭ರ ಶಾಸನದಲ್ಲಿ ಹೇಳಿರುವಂತೆ ಅರಗದ ರಾಜ್ಯದ ಸಾಂತಗಳಿಗೆ ನಾಡಿನ 'ಹೆಬ್ಬರಡಿ ಹರಿಯಕ್ಕ ನಾಯಕಿತ್ತಿ' ಎಂಬುವವಳು ಸಿಂಯಮ ಹೆಗ್ಗಡೆ, ಈರಣ್ಣ ಹೆಗ್ಗಡೆ, ಅಕ್ಕಮ್ಮ ಹೆಗ್ಗಡತಿಯ ಬೊಂಮಣ್ಣ ಹೆಗ್ಗಡೆ ಎಂಬುವವರಿಂದ ಅರಂವಳ್ಳಿಯ ಭೂಮಿಯನ್ನು ಎಂಬತ್ತೈದು ಹೊನ್ನನ್ನು ನೀಡಿ ಕ್ರಯ ಮಾಡಿಕೊಂಡು ಅಲ್ಲಿನ ಅಮರೇಶ್ವರ ತೀರ್ಥ ಶ್ರೀಪಾದಂಗಳಿಗೆ ಮಠದ ಹತ್ತಿರ ಛತ್ರವನ್ನು ಕಟ್ಟಿಸಲು ಯತಿಗಳ ಜನಕ್ಕೆ ಪರದೇಶಿ ಬ್ರಾಹ್ಮರಿಗೆ ಹಾಗೂ ಅಡಿಗೆಯವರಿಗಾಗಿ ಆ ಭೂಮಿಯನ್ನೂ ಧಾರೆಯೆರೆದಳು.[೭]

ಅನ್ನಛತ್ರಗಳಿಗೆ ನೀಡಿದ ದಾನ-ಧರ್ಮಗಳು

ವಿಜಯನಗರ ಕಾಲದಲ್ಲಿ ಸ್ಥಾಪನೆಗೊಂಡಿದ್ದ ಅನ್ನಛತ್ರಗಳಿಗೆ ರಾಜ ಮಹಾರಾಜರು, ಮಹಾಪ್ರಧಾನರು, ಮಠದ ಶ್ರೀಗಳು, ವ್ಯಾಪಾರಿ ವರ್ತಕರು ಹಾಗೂ ಇತರೆ ಮುಖಂಡರುಗಳು ಹೇರಳ ಪ್ರಮಾಣದಲ್ಲಿ ದಾನ-ಧರ್ಮಗಳನ್ನು ನೀಡಿರುವುದು ಶಾಸನೋಕ್ತ ಸಂಗತಿಗಳಾಗಿವೆ. ಅನ್ನಛತ್ರಗಳಿಗೆ ಅಂದು ಯಾರ‍್ಯಾರು ದಾನಗಳನ್ನು ನೀಡಿದ್ದಾರೆ ಹಾಗೂ ಅವರು ನೀಡಿರುವ ದಾನಗಳ ಸ್ವರೂಪ ಎಂತಹುದು ಎಂಬುದನ್ನು ಈ ಕೆಳಗಿನಂತೆ ಗಮನಿಸಬಹುದು.

ಅಂದು ಅನ್ನಛತ್ರಗಳಿಗೆ ದವಸ-ಧಾನ್ಯಗಳನ್ನು ದಾನ ನೀಡುತ್ತಿದ್ದ ಉಲ್ಲೇಖವಿದೆ. ಅಂದು ಅಕ್ಕಿ, ಹೆಸರು, ಮೆಣಸು, ಏಲಕ್ಕಿ, ಅರಿಷಿಣ, ಶುಂಠಿ, ಮೆಂಥೆ, ಸಾಸಿವೆ, ನಿಂಬೆಹಣ್ಣು, ತೆಂಗಿನಕಾಯಿ, ಉದ್ದು, ಭತ್ತ, ಅಡಿಕೆ ಮುಂತಾದ ದವಸ-ಧಾನ್ಯಗಳನ್ನು ಅನ್ನಛತ್ರಗಳಿಗೆ ದಾನ ನೀಡುತ್ತಿದ್ದರು. 'ಚಂಡಿಕೇಶ್ವರ ದೇವಾಲಯದಲ್ಲಿ ಮುರಿದು ಬಿದ್ದಿರುವ ಕ್ರಿ. ಶ.೧೫೪೪ರ ಸದಾಶಿವರಾಯನ ಕಾಲದಲ್ಲಿ ದಳವಾಯಿ ಜಂಗಮಯ್ಯನು ಸದಾಶಿವರಾಯನಿಗೂ ಮತ್ತು ಅವನ ಪರಿವಾರದವರಿಗೂ ಪುಣ್ಯ ವಾಗಲೆಂದು ಹಾಕಿಸಿದ ಶಾಸನದಲ್ಲಿ

ಛತ್ರಕ್ಕೆ ದವಸವಹಾಕುವ ಬೇ ಹಾರಿಗಳಿಗೂ ದೇವರ

ಅಮತ ಪಡಿಗೆ (ವರ್ತ)ನ (೧) ಧ(೦)ರ್ಮ ಮುಂತಾಗಿ

ಬಿಟ್ಟರು ದವಸಗ(ಳ) ಕ್ರಯಗಳ ಬ

ಗೆ.... (ಕೊ)ಡು ಎದು....

ಛ(ತ್ರದಿಂ)ದಲೂ ದಿನ ೧ಕ್ಕೆ ಕೊಡು ಎದು (ಅಕ್ಕಿ) ಅರೆಯ ತಲ ೧ ಹೆಸ

ರು.... ಉಪ್ಪು ಪಡಿ ೧ ಮೆಣಸು ಸೇ

ರು.... ಏಲಕ್ಕಿ ಸೇ ¸ಅರಿಶಿನ ಸೇ=ಶುಂಠಿ ಸೇ=

ಜೀ.... ಮಂಥೆ ಸೇ..... ಸಾಸಿವೆ ಸೆ.ಕಾಯಿ ಮೇಲೋಗರ

ಛತ್ರಕ್ಕೆ ದಿನವೊಂದಕ್ಕೆ ನೀಡಬೇಕಾದ ಅಕ್ಕಿ, ಹೆಸರು, ಉಪ್ಪು, ಮೆಣಸು, ಏಲಕ್ಕಿ, ಅರಿಷಿಣ, ಶುಂಠಿ, ಜೀರಿಗೆ, ಮೆಂಥೆ ಸಾಸಿವೆ ಮುಂತಾದ ಧಾನ್ಯಗಳ ಉಲ್ಲೇಖ ಕಂಡುಬರುತ್ತದೆ.[೮]

ಅನ್ನಛತ್ರಗಳಿಗೆ ಹಣವನ್ನು ದಾನವಾಗಿ ನೀಡುತ್ತಿದ್ದರು. ಈ ಸಂಗತಿ ಅಂದಿನ ವಿಜಯನಗರ ಕಾಲದ ಹಣದ ವ್ಯವಸ್ಥೆ ಅಥವಾ ನಾಣ್ಯ ಪದ್ಧತಿಯನ್ನು ತಿಳಿಯಲು ಸಹಕಾರಿಯಾಗುತ್ತದೆ. ಹಂಪಿಯ ಉದ್ದಾನ ವೀರಭದ್ರ ದೇವಾಲಯ ಪಶ್ಚಿಮಕ್ಕಿರುವ ಕ್ರಿ.ಶ.೧೪೪೫ರ ಸದಾಶಿವರಾಯನ ಕಾಲದ ಶಾಸನೋಕ್ತ ವಿಚಾರದಂತೆ.

ಚತ್ರದಲು ದಿನ ೧ ಕಂ ಅರ್ಕಿ (ಸಿದೆ)ಹೆಸರು ಸಿಧೆ೧ತು

ಪ ಪಡಿ ೧ ಎಂಣೆ ಪಡಿ ೧ ಉ (ಪು) ಪಡಿ ಕಾಯಿ

ಮೇಲೋಗರ ಮಣ ಹೋಳು (೧)೬ ವೀಳ್ಯೆದೆಲೆ

(೨)೬ ನಿಂಬೆ (ಯ)ಹಣು೩ ಮೆಣಸು ಶಂಭಾರ

(ಸ)ಹ ಕೃಷ್ಣಾಪುರದ ಪೇಟೆಯಲು ಮೂಲೆ ವೀ

ಸ ನಾನಾ ಹೇರು ೧ಕ್ಕೆ ಸಲು ಉದು ಕಾಸು ೧ ಸೋಮ

ವಾರದಲು ಅಂಗಡಿ ೧ಕೆ ಸಲುವ ಕಾಸು ೧

ಬಿ ಚುತಾಪುರಪೇಟೆಯಲು ಮೂಲೆ ವೀಸ

ಒಳಹೇರು ೧ಕೆ ಸಲು ಉದು ಕಾಸಂ ೧ ಮಂ

ಗಳವಾರದಲೂ ಅಂಗಡಿ ೧ ಕೆ ಸಲು ವ ಕಾಸು ೧ ||[೯]

ಅಂದರೆ ಸದಾಶಿವರಾಯನ ಕಾಲದಲ್ಲಿ ದಳವಾಯಿ ಜಂಗಮಯ್ಯ ಎಂಬುವವನು ಹಂಪಿಯ ಕೃಷ್ಣಪುರ ಪೇಟೆಯ ಹಿರಿಯ ಕಾಲುವೆಯ ಬಳಿಯ ಅನ್ನಛತ್ರದ ವಿವಿಧ ದವಸ ಧಾನ್ಯಗಳ ವೆಚ್ಚಕ್ಕಾಗಿ ಅಲ್ಲಿನ ವ್ಯಾಪಾರಿಗಳು ಹಾಗೂ ಅಂಗಡಿಯವರು ಇಂತಿಷ್ಟು ಪ್ರಮಾಣದ ಕಾಸನ್ನು ನೀಡಲೇಬೇಕೆಂದು ನಿಯಮ ವಿಧಿಸಿರುವುದನ್ನು ಗಮನಿಸಿದರೆ ವಿಜಯನಗರ ಕಾಲದಲ್ಲಿ ಅನ್ನಛತ್ರಗಳಿಗೆ ನೀಡಿದ್ದ ಪ್ರಾಮುಖ್ಯತೆ ಇದರಿಂದ ತಿಳಿದು ಬರುವುದು. ಅದೇ ರೀತಿ ಸದಾಶಿವರಾಯನ ಕಾಲದಲ್ಲಿ 'ಕಾಸು' ಎಂಬ ನಾಣ್ಯ ವ್ಯವಸ್ಥೆಯನ್ನು ಕಾಣಬಹುದು. ಕ್ರಿ.ಶ. ೧೫೩೦ರ ವಿಜಯನಗರ ಕಾಲದ ಶಾಸನದಲ್ಲಿ ದಣ್ಣಾಯಕ ತಮ್ಮರಸನಿಗೆ ಕೃಷ್ಣರಾಯನು ಪಾಲಿಸಿದ್ದ ಯಳೆಪೆ ಗ್ರಾಮದಲ್ಲಿ ೧೨ ಜನ ಬ್ರಾಹ್ಮಣರಿಗೆ ಭೋಜನ ಮಾಡಿಸುವ ಅಥವಾ ಅನ್ನಛತ್ರಕ್ಕೆ ವರ್ಷಕ್ಕೆ ೨೬ ವರಹವನ್ನು ಅಚ್ಯುತರಾಯ ಮಹಾರಾಯರಿಗೆ ಪುಣ್ಯವಾಗಲಿ ಎಂದು ದಾನ ಬಿಡ ಲಾಗಿದೆ.[೧೦] ಈ ದಾನದ ವಿಚಾರದಿಂದ 'ವರಹ' ಎಂಬ ನಾಣ್ಯದ ಸಂಗತಿ ತಿಳಿಯಬಹುದು. ಅಷ್ಟೇ ಅಲ್ಲದೆ ಅದು ಅನ್ನಛತ್ರಗಳಿಗೆ ಕಾಟಿ ಗದ್ಯಾಣ, ಹೊನ್ನು ಎಂಬು ನಾಣ್ಯಗಳನ್ನು ದಾನ ಮಾಡಿರುವ ಸಂಗತಿ ತಿಳಿದುಬರುವುದು.

ವಿಜಯನಗರ ಕಾಲದ ಅನ್ನಛತ್ರಗಳಿಗೆ ಹೊಲ, ಗದ್ದೆ, ಗ್ರಾಮ, ಪುರಗಳನ್ನು ದಾನ ನೀಡಿದ್ದಾರೆ. ಕ್ರಿ.ಶ. ೧೪೪೯ರ ಶಾಸನೋಕ್ತ ವಿಚಾರದಂತೆ ಪ್ರೌಢದೇವರಾಯನ ಮರಣದ ವಾರ್ತೆಯನ್ನು ಕೇಳಿದ ಹಿರಿಯ ಕೆರೆ ಊರ ಹಲಾಯುದ ಕೇರಿಯ ಸಿರುಮಿಸೆಟ್ಟಿಯರು ಕೊಡಕಣಿಗೆ (ಕೊಡಕಣಿಯು ಇಂದಿನ ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕಿನಲ್ಲಿ ಬರುವುದು) ಬಂದು ರಾಮಯಿದೇವರ ಸನ್ನಿಧಿಯಲ್ಲಿ ಮರಣ ಹೊಂದಿದಾಗ ಅವರ ಮಕ್ಕಳು ಅಲ್ಲಿನ ಛತ್ರಕ್ಕೆ ತಾವರಿಗೆ ಕೆರಿಯ ಮತ್ತು ಬೋಗಾವೆಯ ಬಳಿ ಭೂಮಿಯನ್ನು ದಾನ ಬಿಟ್ಟಿರುವ[೧೧] ಉಲ್ಲೇಖವಿದೆ. ಕ್ರಿ.ಶ. ೧೪೩೧ರ ಶಾಸನದಲ್ಲಿ ಕೊಡಲಿಯಲ್ಲಿ ರಾಯಣ್ಣ ಒಡೆಯನು ಒಂದು ಅನ್ನಛತ್ರವನ್ನು ನಿರ್ಮಿಸಿದ್ದು ಅದಕ್ಕೆ ನಾಗರೀಕರು ಸೇರಿ ದಣ್ಣಾಯಕಪುರದ ಉತ್ಪತ್ತಿಯನ್ನು ದಾನ ನೀಡಿದ್ದಾರೆ.[೧೨] ಕ್ರಿ.ಶ. ೧೪೩೧ರ ಶಾಸನದಲ್ಲಿ ಅಲ್ಲಿನ ಮಠದ ಗಂಗಾಧರ ಪುರ ಶ್ರೀಪಾದಂಗಳು ಪ್ರೌಢ ದೇವರಾಯನ ಹೆಸರಿನಲ್ಲಿ ನಾರಾಯಣ ದೇವರ ಛತ್ರದ ಸೇವೆಗಾಗಿ ರಾಮಭಟ್ಟ ಎಂಬುವವನಿಗೆ 'ಬುಕ್ಕರಾಯಪುರ'ವನ್ನೇ ದಾನ ನೀಡಿರುವ ಸಂಗತಿ ತಿಳಿಯಬಹುದು.[೧೩] ಈ ರೀತಿ ವಿಜಯನಗರ ಕಾಲದ ಅನ್ನಛತ್ರಗಳಿಗೆ ಅಂದಿನ ರಾಜರು, ಮಹಾಪ್ರಧಾನರು, ವರ್ತಕರು, ಮಠದಶ್ರೀಗಳು ಹಲವರು ದವಸ-ಧಾನ್ಯಗಳನ್ನು ಹಣವನ್ನು, ಹೊಲ-ಗದ್ದೆ, ಗ್ರಾಮ ಪುರಗಳನ್ನು ದಾನ ನೀಡಿರುವ ಸಂಗತಿಯನ್ನು ಶಾಸನಗಳು ದಾಖಲಿಸುತ್ತವೆ.

ವಿಜಯನಗರ ಕಾಲದ ಸಾಮಾಜಿಕ-ಧಾರ್ಮಿಕ ವ್ಯವಸ್ಥೆಯಲ್ಲಿ ಅನ್ನಛತ್ರಗಳ ಪಾತ್ರ

ವಿಜಯನಗರ ಸಮಾಜದಲ್ಲಿ ಧರ್ಮ ಪ್ರಮುಖ ಸ್ಥಾನವನ್ನು ಪಡೆದಿದ್ದು ಸಂಗಮರಿಂದ ಹಿಡಿದು ಅರವೀಡು ಮನೆತನದವರೆಗೂ ವಿವಿಧ ಧರ್ಮಗಳು ಪೋಷಿಸಲ್ಪಟ್ಟವು. ಆಯಾಯ ಪ್ರದೇಶದ ಧಾರ್ಮಿಕ ವ್ಯವಸ್ಥೆಗನುಗುಣವಾಗಿ ದೇವಾಲಯಗಳಲ್ಲಿ ಅಥವಾ ಅವುಗಳಿಗೆ ಹೊಂದಿಕೊಂಡಂತೆ ಅನ್ನಛತ್ರಗಳು ತೆರೆಯಲ್ಪಟ್ಟವು. ಅಂತಹ ಕೆಲವು ಪ್ರಮುಖ ಅನ್ನಛತ್ರ ಮಠಗಳೆಂದರೆ, ಕೂಡಲಿಯ ಅನ್ನಛತ್ರ[೧೪], ಗೋಕರ್ಣ ಕ್ಷೇತ್ರದ ಮಹಾಬಲಾದೇವರ ಸನ್ನಿಧಿಯಲ್ಲಿ ಅನ್ನಛತ್ರ[೧೫], ನಾರಾಯಣದೇವರ ಅನ್ನಛತ್ರ [೧೬], ಬಾರಕೂರಿನ ಕೋಟೆಯ ಕೇರಿಯ ಮಾರ್ಕಡೇಶ್ವರ ಗುಡಿಯ ಅನ್ನ ಛತ್ರ[೧೭], ಸ್ವಯಂಭುಲಿಂಗ ಗುಡಿಯ ಅನ್ನಛತ್ರ[೧೮], ಕೋಟಿನಾಥ ದೇವಾಲಯದಲ್ಲಿನ ಅನ್ನಛತ್ರ[೧೯], ನಂಜನಗೂಡಿನ ನಂಜುಂಡೇಶ್ವರ ದೇವರ ಸನ್ನಿಧಿಯ ಜಂಗಮ ಅನ್ನ ಛತ್ರ[೨೦], ಶ್ರೀರಂಗಂನ ರಂಗನಾಥ ದೇವಾಲಯದ ಅನ್ನಛತ್ರ[೨೧] , ಕೃಷ್ಣಪುರ ಪೇಟೆಯ ಹಿರಿಯ ಕಾಲುವೆಯ ಅನ್ನಛತ್ರ[೨೨], ಹಾಸನದ ವಿರೂಪಾಕ್ಷ ಲಿಂಗದ ಛತ್ರ[೨೩]ಗಳು ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ಈ ಅನ್ನಛತ್ರಗಳು ಶೈವ-ವೈಷ್ಣವ ದೇವಾಲಯ ಗಳಲ್ಲೂ ಸ್ಥಾಪನೆಗೊಂಡಿದ್ದವು.

ಸಾಮಾಜಿಕ ವ್ಯವಸ್ಥೆಯಲ್ಲಿ ಹೆಚ್ಚು ಪ್ರಾಮುಖ್ಯತೆ ಪಡೆದಿದ್ದ ಅನ್ನಛತ್ರಗಳು ಅವುಗಳ ಸ್ಥಾಪನೆಯಿಂದಾಗಿ ಅಥವಾ ಅಂತಹ ಕಾರ್ಯಗಳಿಂದಾಗಿ ಪುಣ್ಯ ಬರುವುದೆಂಬ ನಂಬಿಕೆ ಹೆಚ್ಚಾಗಿ ಇದ್ದಿತ್ತು. ವಿಜಯನಗರದ ಅರಸರು ಸಹ ಇಂತಹ ಧಾರ್ಮಿಕ ಕಾರ್ಯಗಳಿಗೆ ಉತ್ತೇಜನ ನೀಡಿ ಜನ ಮನ್ನಣೆ ಪಡೆಯುತ್ತಿದ್ದರು. ಇದು ವಿಜಯನಗರದ ರಾಜಕೀಯ ಆಡಳಿತಾತ್ಮಕ ವ್ಯವಸ್ಥೆಗೂ ತುಂಬಾ ಸಹಕಾರಿಯಾಗಿತ್ತು.

ವಿಜಯನಗರ ಕಾಲದಲ್ಲಿ ಅನ್ನಛತ್ರಗಳು ಬ್ರಾಹ್ಮಣರು ಭೋಜನಕ್ಕೆ ಹೆಚ್ಚಾಗಿ ರಚನೆಗೊಂಡ ಉಲ್ಲೇಖ ಕಂಡುಬರುತ್ತದೆ. ಇದರಿಂದ ಇವರ ಕಾಲದಲ್ಲಿ ದೇವಾಲಯ ಗಳಲ್ಲಿ ಬ್ರಾಹ್ಮಣರಿಗೆ ಹೆಚ್ಚು ಉತ್ತೇಜನ ನೀಡಿದ್ದ ಅಂಶವನ್ನು ಕಾಣಬಹುದು. ದೇವಾಲಯಗಳನ್ನು ಪುಣ್ಯಕ್ಷೇತ್ರ ಮಾಡಲು ಅನ್ನಸಂತರ್ಪಣೆಯೂ ಒಂದು ಕಾರಣವಿ ರಬಹುದು. ಈ ಮೂಲಕ ಅನೇಕ ಪ್ರವಾಸಿಗರನ್ನು ಆಕರ್ಷಿಸಿ, ಅವರಿಂದ ದೇವಾ ಲಯಕ್ಕೆ (ದೇವರಿಗೆ) ಮುಡುಪು ಮತ್ತು ಕಾಣಿಕೆ ರೂಪದಲ್ಲಿ ಬರುವ ದವಸ-ದನಕಕಾದಿಗಳಿಂದ ರಾಜ್ಯ ಭಂಡಾರವನ್ನು ತುಂಬಿಕೊಳ್ಳುವ ಯೋಜನೆ ಅಂದಿನ ರಾಜ ಪ್ರಭುತ್ವಕ್ಕಿದ್ದಿರಬಹುದು.[೨೪]

ಒಟ್ಟಾರೆಯಾಗಿ ಹೇಳುವುದಾದರೆ, ವಿಜಯನಗರ ಕಾಲದಲ್ಲಿನ ಅನ್ನಛತ್ರಗಳು ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಯಲ್ಲಿ ಅತ್ಯಂತ- ಮಹತ್ವದ ಪಾತ್ರವನ್ನು

ಹೊಂದಿದ್ದವು. ಅವುಗಳ ನಿರ್ಮಾಣಕ್ಕೆ ನಿರ್ವಹಣೆಗೆ ಹಾಗೂ ಮುಂದುವರಿಕೆಗೆ ರಾಜಪ್ರಭುತ್ವಗಳಿಂದ ಹಿಡಿದು ಒಬ್ಬಸ್ತ್ರೀ ಸಾಮಾನ್ಯಳವರೆಗೂ ಅಪಾರ ಪ್ರಮಾಣದ ದಾನದತ್ತಿಗಳನ್ನು ನೀಡಿರುವ ಸಂಗತಿಗಳನ್ನು ನಾವು ಶಾಸನಗಳ ಅಧ್ಯಯನದಿಂದ ತಿಳಿಯಬಹುದಾಗಿದೆ.

ಅಡಿ ಟಿಪ್ಪಣಿಗಳು

೧. ಪರಮಶಿವಮೂರ್ತಿ, ಡಿ.ವಿ., *ಪ್ರೌಢದೇವರಾಯನ ಶಾಸನಗಳು*, ಕನ್ನಡ ವಿಶ್ವವಿದ್ಯಾನಿಲಯ, ೨೦೦೭, ಸಂಖ್ಯೆ, ೬೬, ಪುಟ ೧೪೫.

೨. ಗೋಪಾಲ್ ಬಾ.ರಾ.ಮತ್ತು ಇತರರು (ಸಂ)., *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* ೪., ಕನ್ನಡ ವಿಶ್ವವಿದ್ಯಾಲಯ, ೨೦೦೦, ಸಂಖ್ಯೆ ೨೩, ಪುಟ ೩೫.

೩. *ಎಪಿಗ್ರಾಫಿಯ ಕರ್ನಾಟಿಕ* ೧೧, ಜಗಳೂರು ೪೮

೪. *ಎಪಿಗ್ರಾಫಿಯ ಕರ್ನಾಟಿಕ* ೮, ಹಾಸನ ೧.

೫. ಪರಮಶಿವ ಮೂರ್ತಿ ಡಿ.ವಿ., ಪೂರ್ವೋಕ್ತ, ೨೦೦೭, ಸಂಖ್ಯೆ ೬೭, ಪುಟ ೧೪೨.

೬. *ಅದೇ.* ಸಂಖ್ಯೆ ೭೩, ಪುಟ ೧೬೪.

೭. ಪರಮಶಿವಮೂರ್ತಿ ಡಿ.ವಿ. ಪೂರ್ವೋಕ್ತ, ೨೦೦೭, ಸಂಖ್ಯೆ ೩೨, ಪುಟ ೬೩.

೮. ವೀರೇಶ್ ಉತ್ತಂಗಿ, *ಹಂಪಿ ಶಾಸನಗಳಲ್ಲಿ ದವಸ-ಧಾನ್ಯಗಳು, ವಿಜಯನಗರ ಅಧ್ಯಯನ* (ಸಂ) ೧೨, ೨೦೦೬, ಪುಟ ೧೨೨-೧೨೩.

೯. ದೇವರಕೊಂಡಾರೆಡ್ಡಿ ಮತ್ತು ಇತರರು (ಸಂ), *ಹಂಪಿ ಶಾಸನಗಳು*, ಕನ್ನಡ ವಿಶ್ವವಿದ್ಯಾಲಯ, ೨೦೦೦, ಸಂಖ್ಯೆ ೮೪, ಪುಟ ೮೫.

೧೦. ದೇವರಕೊಂಡಾರೆಡ್ಡಿ ಮತ್ತು ಇತರರು (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧ ಬಳ್ಳಾರಿ ಜಿಲ್ಲೆ*, ೧೯೯೮, ಸಂಖ್ಯೆ ೬೨, ಪುಟ ೮೪.

೧೧. ಪರಮಶಿವಮೂರ್ತಿ ಡಿ.ವಿ. ಪೂರ್ವೋಕ್ತ., ೨೦೦೭, ಸಂಖ್ಯೆ ೧೯೩, ಪುಟ ೩೯೪

೧೨. *ಅದೇ,* ಸಂಖ್ಯೆ ೬೭, ಪುಟ ೧೪೭

೧೩. *ಅದೇ,* ಸಂಖ್ಯೆ ೭೩, ಪುಟ ೧೬೩

೧೪. *ಅದೇ,* ಸಂಖ್ಯೆ ೬೭, ಪುಟ ೧೪೭

೧೫. *ಅದೇ,* ಸಂಖ್ಯೆ ೭೯, ಪುಟ ೧೫೭

೧೬. *ಅದೇ,* ಸಂಖ್ಯೆ ೭೩, ಪುಟ ೧೬೩

೧೭. *ಅದೇ,* ಸಂಖ್ಯೆ ೧೦೪, ಪುಟ ೨೨೨

೧೮. *ಅದೇ,* ಸಂಖ್ಯೆ ೧೫೪, ಪುಟ ೩೨೨

೧೯. *ಅದೇ,* ಸಂಖ್ಯೆ ೧೬೧, ಪುಟ ೩೪೬

೨೦. ಗೋಪಾಲ್ ಬಾ.ರಾ.ಮತ್ತು ಇತರರು (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* ೪,

೨೧. *ಅದೇ,* ಸಂಖ್ಯೆ ೨೩, ಪುಟ ೩೫

೨೨. *ದೇವರ ಕೊಂಡಾ ರೆಡ್ಡಿ* ಮತ್ತು ಇತರರು (ಸಂ), ಪೂರ್ವೋಕ್ತ, ೨೦೦೦ ಸಂಖ್ಯೆ ೮೩, ಪುಟ-೮೨

೨೩ *ಎಪಿಗ್ರಾಫಿಯ ಕರ್ನಾಟಿಕ* ೭, ಹಾಸನ ಸಂಖ್ಯೆ ೫, ಪುಟ ೬.

೨೪. ವೀರೇಶ್ ಉತ್ತಂಗಿ, ಪೂರ್ವೋಕ್ತ, ೨೦೦೬, ಪುಟ ೧೨೫.

೧೪. ವಿಜಯನಗರದ ಅರಸರಿಗೂ ಹರಪನಹಳ್ಳಿ ಪಾಳೆಯಗಾರರಿಗೂ ಇದ್ದ ಸಂಬಂಧ

ಕುಂ. ಬಾ. ಸದಾಶಿವಪ್ಪ

ವಿಜಯನಗರದ ಅರಸರಲ್ಲಿ ಸದಾಶಿವ ಮಹಾರಾಜನ ಅಳಿಯ ರಾಮರಾಜನು ಕ್ರಿ. ಶ. ೧೫೬೪ ರಲ್ಲಿ ಬಿಜಾಪುರ, ಬಹಮನಿ ಸುಲ್ತಾನರ ಒಕ್ಕೂಟದ ವಿರುದ್ಧ ರಕ್ಕಸ ತಂಗಡಿ ಕದನದಲ್ಲಿ ಹೋರಾಡಿ ಮಡಿದ ಬಳಿಕ, ವಿಜಯನಗರದ ಅರಸರ ಸಂತತಿಯವರು ಆನೆಗೊಂದಿ ಮತ್ತು ಆಂಧ್ರದ ಚಂದ್ರಗಿರಿಗಳಲ್ಲಿದ್ದು ಸುಮಾರು ಒಂದು ಶತಮಾನಕ್ಕೂ ಹೆಚ್ಚು ಕಾಲ ರಾಜ್ಯವಾಳಿದ್ದನ್ನು ಇತಿಹಾಸ ತಿಳಿಸುತ್ತದೆ.

ಈ ಅವಧಿಯಲ್ಲಿ ವಿಜಯನಗರದ ದಳವಾಯಿಗಳು, ಪ್ರಮುಖ ಸೇನಾನಿಗಳು ಬೇಡರು, ಸರದಾರರು ಚಿಕ್ಕ ಚಿಕ್ಕ ಪಾಳೆಯ ಪಟ್ಟುಗಳನ್ನು ದಕ್ಷಿಣ ಭಾರತದಲ್ಲಿ ಸ್ಥಾಪಿಸಿದರು. ಅಂಥವರಲ್ಲಿ ಸುರಪುರ, ಸೋದೆ, ಕೆಳದಿ, ಸವಣೂರು, ಚಿತ್ರದುರ್ಗ, ರಾಯದುರ್ಗ, ಸಂಡೂರು, ಗುಡೇಕೋಟೆ, ಜರ್ಮಲಿ, ಹರಪನಹಳ್ಳಿ ಪಾಳೆಯಗಾರರು. ಬ್ರಿಟಿಷ್ ಅಧಿಕಾರಿ ಥಾಮಸ್ ಮನ್ರೋ ಹೇಳಿಕೆ ಪ್ರಕಾರ ಬಳ್ಳಾರಿ ಜಿಲ್ಲೆಯ ಪಾಳೆಯಗಾರರಲ್ಲಿ ಹರಪನಹಳ್ಳಿ ಪಾಳೆಗಾರರು ಹೆಚ್ಚು ಪ್ರಸಿದ್ಧರು.

ಹರಪನಹಳ್ಳಿ ಪಾಳೆಯಗಾರರು ಕ್ರಿ. ಶ. ೧೫೬೬ ರಿಂದ ಸುಮಾರು ೧೮೦೦ರ ವರೆಗೂ ಸ್ವತಂತ್ರ ಆಡಳಿತ ನಡೆಸಿದರು. ಮಧ್ಯದಲ್ಲಿ ಟಿಪ್ಪುಸುಲ್ತಾನನ ಮೋಸಕ್ಕೆ ಒಳಗಾಗಿ ಬಸಪ್ಪ ನಾಯಕ ಸೆರೆಬಿದ್ದ ಅವಧಿಯಲ್ಲಿ ರಾಜ್ಯದ ಆಡಳಿತ ಕೆಲಕಾಲ ಅಸ್ತವ್ಯಸ್ತವಾಗಿ ದ್ದಿತು. ತಮ್ಮ ಆಡಳಿತ ಅವಧಿಯಲ್ಲಿ ವಿಜಯನಗರದ ರಾಯರಿಗೆ ನಿಷ್ಠೆ ತೋರಿಸಿ, ಅವರ ಆಡಳಿತ ಧೋರಣೆಯನ್ನು ನಡವಳಿಕೆಗಳನ್ನು, ಪ್ರಜಾಕಲ್ಯಾಣ ಕಾರ್ಯಕ್ರಮಗಳನ್ನು ಮುಂದುವರಿಸಿದರು. ಅವುಗಳನ್ನು ಈಗ ಗಮನಿಸೋಣ.

ಈ ರಾಜ್ಯದ ಪೂರ್ವಕ್ಕೆ ಹುಲಿಗಿ ಹೊಸೂರು ಚಿತ್ತವಾಡಿಗಿ, ಪಶ್ಚಿಮಕ್ಕೆ ತುಂಗಭದ್ರಾ ನದಿಗೆ ಹೊಂದಿಕೊಂಡ ಗ್ರಾಮಗಳು. ಉತ್ತರ ದಿಕ್ಕಿಗೆ ಬಿದಿರಹಳ್ಳಿ ದಕ್ಷಿಣ ದಿಕ್ಕಿಗೆ ಮಾಗಾನ ಹಳ್ಳಿ ತೂಲಹಳ್ಳಿಗಳಿಂದ ಕೂಡಿದ್ದ ೪೬೦ ಕಂದಾಯದ ಹಳ್ಳಿಗಳು.

ದಾದೇನಾಯಕರಿಂದ ಎರಡನೆಯ ಸೋಮಶೇಖರ ನಾಯಕರವರೆಗೆ ಹದಿನೈದು ಜನ ಪುರುಷರು ಒಬ್ಬ ಸ್ತ್ರೀ ಒಟ್ಟು ಹದಿನಾರು ಜನರು ರಾಜ್ಯ ಆಳಿದರು. ಹರಿಯಮ್ಮಾಜಿ ಗಂಡನ ಹೆಸರಿನಿಂದಲೇ ರಾಜ್ಯ ಆಳಿದಳು. ಇವರು ವಿಜಯನಗರದ ಅರಸರಿಗೆ, ಹಂಪಿಯ

ಶ್ರೀ ವಿರೂಪಾಕ್ಷ ದೇವರಿಗೆ, ಕೂಡಲಿ ಶೃಂಗೇರಿ ಮಠದ ಶಂಕರ ಭಾರತಿ ಸ್ವಾಮಿಗಳಿಗೆ, ಕೊಟ್ಟೂರಿನ ಗುರುಬಸವರಾಜ ಸ್ವಾಮಿಗಳ ಮೇಲೆ ಅಪಾರ ಅಭಿಮಾನ -ಭಕ್ತಿ - ಗೌರವಗಳನ್ನು ಹೊಂದಿದ್ದು, ಕೆರೆ, ಕಾಲುವೆ, ಬಾವಿ, ಡೋಣಿ, ಅರವಟ್ಟಿಗೆಗಳನ್ನು ಸ್ಥಾಪಿಸಿದರು. ಒಳ್ಳೇತಳಿ ಹಸುಗಳು ಹೋರಿಗಳನ್ನು ತರಿಸಿದ್ದು ಪಂಚಾಯತಿ ಮೂಲಕ ಜಗಳಗಳನ್ನು ನಿವಾರಿಸಿದ್ದುದು, ಕುರಿ ತೆರಿಗೆ ಮನ್ನಾ, ಕವಿಗಳಿಗೆ ಆಶ್ರಯವಿತ್ತದ್ದು, ಅವರು ಬರೆಯಿಸಿದ ದಾನಪತ್ರ, ನಿರೂಪಣೆ, ದೇವಾಲಯಗಳ ನಿರ್ಮಾಣ, ಜೀರ್ಣೋದ್ಧಾರ ಶಿಲಾಶಾಸನಗಳಿಂದ ತಿಳಿದು ಬರುವುದು.

ಕೊಟ್ಟೂರು ಕರಣಿಕರ ಮನೆ ಮುಂದೆ ಬಿದ್ದ ಒಂದು ಶಾಸನ ಹೀಗಿದೆ : ಶಾಲಿವಾಹನ ಶಕ ವರ್ಷ ೧೫೦೨ ವಿಕ್ರಮಾರ್ಗಸಿರ ಬ ೧೦ ಕ್ಕೆ ಸರಿಯಾದ ಕ್ರಿ. ಶ. ೧-೧೨ -೧೫೮೦ ರ ಗುರುವಾರ ರಾಮರಾಜಯ್ಯನ ಮಗನಾದ ತಿಮ್ಮರಾಜಯ್ಯ ಮಹಾ ಅರಸ ಆನೆಗೊಂದಿಯಲ್ಲಿ ರಾಜ್ಯಭಾರ ಮಾಡುತ್ತಿರುವಾಗ ರಾಜನ ಕಾರ್ಯಕರ್ತನಾದ ಬಾಗುಳಿಯ ಮಾಚಿನಾಯಕನ ಮಗನಾದ ದಾದನಾಯಕನು ಕೊಟೂರು ಸೀಮೆಯ ಕುಬರಿಗೆ ಕುಜೆದೆರಿಗೆಯನ್ನು ಸಿದ್ದಪ್ಪ ಒಡೆಯರು ಮೊದಲಾದವರಿಗೆ ಬಾಗುಳಿಯ ಕಲ್ಲಿನಾಥ ದೇವರ ಸನ್ನಿಧಿಯಲ್ಲಿ ಮುನ್ನಾ ಮಾಡಿ ಬರೆಯಿಸಿದ ಧರ್ಮ ಶಾಸನ.

ಮೈದೂರು ಗ್ರಾಮದ ಉತ್ತರಕ್ಕಿರುವ ಹೊಲದಲ್ಲಿ ಬಿದ್ದ ಶಾಸನ

ಶಾಲಿ ವಾಹನ ಶಕ ವರ್ಷ ೧೫೬೬ ಮಾಘ ಶು ೫ ಕ್ಕೆ ಸರಿಯಾಗಿ ಕ್ರಿ. ಶ. ೪-೧-೧೬೮೮ ರಿಂದ ವೆಂಕಟಪತಿ ದೇವರಾಯನು ಆಳುತ್ತಿದ್ದಾಗ, ಬಾಗಳಿ ವೋಬೈಯ ದೇವನಾಯಕನ ಕೊಮಾರ ಮಹಾನಾಯಕಾಚಾರ್ಯ ಬಸವೈ ನಾಯಕನ ಕಾಲದಲ್ಲಿ ಮೈದೂರಿಲ್ಲಿ ಧರ್ಮದ ಯಾತ ಮತ್ತ ಕಲ್ಲು ದೋಣಿ ಮಾಡಿಸಿದ್ದು ತಿಳಿಯುವುದು.

ಕಸವನಹಳ್ಳಿ ಉತ್ತರ ದಿಕ್ಕಿಗೆ ಹೊಲ ಒಂದರಲ್ಲಿರುವ ಶಾಸನ

ಶಾಲಿವಾಹನ ೧೫೮೧ ನೆಯ ವಿಕಾರಿ ಫಾಲ್ಗುಣ ಶುಭ ಶುಕ್ರವಾರ ಕ್ರಿ. ಶ. ೧೬೬೦ ವೀರವೆಂಕಟಪತಿರಾಯನ ಕುಮಾರ ಬಾಗುಳಿ ಬಸವಪ್ಪ ನಾಯಕನು ಕಸವನಹಳ್ಳಿ ಪುರ ವರ್ಗವು ಹಾಳು ಬಿದ್ದದ್ದನ್ನು (ಗ್ರಾಮವನ್ನು) ಜೀರ್ಣೋದ್ಧಾರ ಮಾಡಿದ ಗಿರಿಮಲ್ಲಪ್ಪನ ಮೊಮ್ಮಗ ಹಾಗೂ ಬಸವಯ್ಯನ ಮಗನಾದ ತಿರುಕಪ್ಪಗೆ ಭೂದಾನ ನೀಡುವನು.

ಅರಸಿಕೆರೆ ಕೆರೆ ಕಟ್ಟೆಯ ಬಳಿಯ ಹೊಲದಲ್ಲಿ ನಿಂತಿರುವ ಶಾಸನ :

ಶಾಲಿವಾಹನ ಶಕ ೧೫೮೩ ನೆಯ ಮಾರ್ಗಶಿರ ಸು ೫ ಸ್ಥಿರ ವಾರಕ್ಕೆ ಸರಿಯಾದ ಕ್ರಿ. ಶ. ೧೬-೧೧-೧೬೬೧ ನೆಯ ಶನಿವಾರದಂದು ರಾಮದೇವರಾಯರ ಕುಮಾರ ಬಗುಳಿ ಬಸವ ನಾಯಕ ಅಯ್ಯನವರು ಅರಸಿಕೆರೆ ಮುರಿಗೆ ಸಾಂತರಾವುತನ ಮಗ ಗಿರಿಮಲ್ಲಣನ

ಮಗ ಬಸವಯನಿಗೆ ರಾವುತ ವೃತ್ತಿಗಾಗಿ ಭೂದಾನ ನೀಡಿದನು. ಸೂರ್ಯ ಚಂದ್ರಾದಿಗಳ ಪರಿಯಂತ ನಾವು ಹಾಕಿಕೊಟ್ಟಂತ ಭೂಮಿಗೆ ತಪ್ಪಿದವರ ಬಾಯಿಗೆ.......

ಭೂದಾನ ಪತ್ರ

ಶುಭಮಸ್ತು ನಮಸ್ತುಂಗ ಶಿರಚುಂಬಿ ಚಂದ್ರಜಾಮರವೇ ತ್ರೈಲೋಕ್ಯನಗರಾರಂಭ ಮೂಲಸ್ಥಂಭಾಯ ಶಂಭವೇ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕೆ ವರ್ಷಗಳು ೧೬೩೩ ನೆಯ ಖರನಾಮ ಸಂವತ್ಸರದ ಶ್ರಾವಣ ಶು ೧೨ ರಲ್ಲು ಶ್ರೀ ಮದ್ರಾಜಾಧಿರಾಜ ರಾಜ ಪರಮೇಶ್ವರ ವೀರ ಪ್ರತಾಪ ಶ್ರೀ ರಂಗರಾಯದೇವ ಮಹಾರಾಯನವರು ಚಂದ್ರಗಿರಿ ಯೆಂಬ ದುರ್ಗದಲ್ಲಿ ಮಣಿ ಖಚಿತ ಸಿಂಹಾಸನರೂಢನಾಗಿ ಸುಖಸಂಕಥಾ ವಿನೋದದಿಂದ ಪೃಥ್ವಿ ರಾಜ್ಯವನ್ನಾಳುತ್ತಾಯಿರಲು ಅವರ ಮನ್ನೇವಾರರಾದ ಶ್ರೀ ಮನ್ನಾಯಕಾಚಾರ್ಯ ರಾದ ಭಾಷೆಗೆ ತಪ್ಪುವ ನಾಯಕರ ಗಂಡ, ಮರೆಹೊಕ್ಕರೆಕಾವ ಮಾರಾಂತರ ಗೆಲುವ ಬಾಗಳಿ ಹರಿಯಮ್ಮಾಜಿಯವರು ರಾಜಪುರೋಹಿತರ ನಾಗದೇವ ಭಟ್ಟರಿಗೆ ಬರೆಸಿಕೊಟ್ಟ ಭೂದಾನ ಪಟ್ಟೇದ ಕ್ರಮವೆಂತನೆ, ದಳವಾಯಿ ಬಸಪ್ಪನು ತಮ್ಮ ಮಾನ್ಯದ ಗ್ರಾಮ ಅಲಗಿಲವಾಡದಲ್ಲಿ ಈ ನಾಗದೇವ ಭಟ್ಟಗೆ ಗದ್ದೆ ಬೀಜವರಿಯಲ್ಲು ವಕ್ಕಳ ಗದ್ದೆಯನ್ನು ಧಾರಾಪೂರ್ವಕವಾಗಿ ಶಿವಾರ್ಪಿತವಾಗಿ ಕೊಟ್ಟು ಇದ್ದೇನೆ. ಹೀಗೆಂದು ಬರೆಸಿಕೊಟ್ಟ ಭೂದಾನ ಪಟ್ಟ. ಹೀಗೆ ಕೆಲವು ಶಾಸನಗಳನ್ನು ಮತ್ತು ದಾನಪತ್ರಗಳನ್ನು ವಿಜಯನಗರದ ಅರಸರನ್ನು ಸ್ಮರಿಸಿ ಬರೆಸಿರುವರು.

ಮೊದಲ ಸೋಮಶೇಖರನಾಯ್ಕನ ಮಡದಿ ರಾಣಿ ಸೋಮಮ್ಮಾಜಿ ರಾಜ್ಯದಲ್ಲಿ ಸಂಭವಿಸಿದ ಅನೇಕ ಕದನಗಳಲ್ಲಿ ಬಹು ಜನರನ್ನು ಹತ್ಯಗೊಳಿಸಿದ್ದು, ಅದರ ಪಾಪ ನಿವಾರಣೆಗಾಗಿ ಹಂಪಿ ಶ್ರೀ ವಿರೂಪಾಕ್ಷ ದೇವರಿಗೂ ಮತ್ತು ನಾರಾಯಣದೇವರ ಕೆರೆಯ ಶ್ರೀ ಭೂನಾರಾಯಣಸ್ವಾಮಿಗಳಿಗೂ ಜೋಡು ರಥಗಳನ್ನು ರಚಿಸಿ ಅರ್ಪಿಸಬೇಕೆಂದು ಬಸಪ್ಪನಾಯಕರಿಗೆ ಆದೇಶವಿತ್ತಳು. ಆ ರಥ ತಯಾರಿಸುವವರೆಗೂ ಪ್ರತಿದಿನ ಒಬ್ಬ ಕುದುರೆ ಸವಾರನನ್ನು , ಆಕಾರ್ಯಕ್ಕೆ ನೇಮಿಸಿ, ಅದರ ಪ್ರಗತಿಯ ಬಗ್ಗೆ ವರದಿಯನ್ನು ತರಿಸುತ್ತಿದ್ದಳು. ಈ ರಥಗಳು ಪೂರ್ಣಗೊಂಡ ಬಳಿಕ ಶಾ.ಶ ೧೬೫೯ ಕ್ರಿ. ಶ. ೧೭೭೭ರಲ್ಲಿ ಹಂಪಿಯ ಶ್ರೀ ವಿರೂಪಾಕ್ಷ ದೇವರಿಗೆ ಅರ್ಪಿಸಿದಳು. ಈ ಕಾರ್ಯಕ್ಕೆ ಕೂಡ್ಲಿ ಶೃಂಗೇರಿ ಶ್ರೀ ಶಂಕರ ಭಾರತಿ ಸ್ವಾಮಿಗಳನ್ನು ಆಹ್ವಾನಿಸಿದುದು ಗೊತ್ತಾಗುವುದು.

ಮಾನ್ಯವಾರರು : ಕೆಲವು ಶಾಸನಗಳಲ್ಲಿ ವಿಜಯನಗರದ ಅರಸರ ಮಾನ್ಯವಾರರು ಎಂಬುವ ಉಲ್ಲೇಖಗಳಿರುತ್ತವೆ. ಮಾನ್ಯವಾರರು ಎಂದರೆ ಅಧೀನ -ಸಾಮಂತ ಅರಸರು -ಗೌರವಾನ್ವಿತರು ಎಂದಾಗುವುದು.

ವಿಜಯನಗರದ ಅರರಸು ತಾವು ಸದಾ ದೇವರ ಮುಂದೆ ಇರಲು ಬಯಸಿ ಆಂಧ್ರದ ತಿರುಪತಿಯ ಶ್ರೀವೆಂಕಟರಮಣ ದೇವರ ಗುಡಿಯ ಒಳಭಾಗದಲ್ಲಿ ಒಂದು ಕಡೆ ಶ್ರೀ ಕೃಷ್ಣದೇವರಾಯನ ಪಕ್ಕದಲ್ಲಿ ಅವನ ರಾಣಿಯರಾದ ತಿರುಮಲ ದೇವಿ ಮತ್ತು ಚಿನ್ನಾದೇವಿಯರ ವಿಗ್ರಹಗಳಿರುವುವು. ಕನ್ನಡದಲ್ಲಿ ಶ್ರೀ ಕೃಷ್ಣದೇವರಾಯ ಎಂದೂ, ತೆಲುಗು ಭಾಷೆಯಲ್ಲಿ ಶ್ರೀ ತಿರುಮಲದೇವರಾಯಲು ಒಂದು ಬರೆದಿದೆ. ಅದರಂತೆ ಹರಪನಹಳ್ಳಿಯ ಪಾಳೆಯಗಾರರಾದ ದಾದಾನಾಯಕ ಮತ್ತು ಅವರ ಮಗ ರಂಗಾ ನಾಯಕರ ಕಲ್ಲಿನ ವಿಗ್ರಹಗಳು, ಹರಪನಹಳ್ಳಿ ಪಕ್ಕದ ದೇವರತಿಮಲಾಪುರದ ದೇವಾಲಯ ದಲ್ಲಿ ಶ್ರೀ ವೆಂಕಟೇಶ್ವರ ದೇವರ ಎದುರಿಗೆ ಸ್ಥಾಪಿಸಿರುವರು. ಹಡಗಲಿ ತಾಲೂಕು ಮೊದಲಗಟ್ಟಿ ಗ್ರಾಮದ ಹನುಮಂತ ದೇವರ ಎದುರಿಗೆ ದಾದಾನಾಯಕ ಮತ್ತು ಅವರ ಧರ್ಮಪತ್ನಿ ಶ್ರೀಮತಿ ಹೊನ್ನಾ ನಾಗತಿಯವರು ಮೂರ್ತಿ ಶಿಲ್ಪ ಕಾಣುತ್ತದೆ.

ಕುಮಾರ

ತಮ್ಮ ಅಧೀನ ಪಾಳೆಯಗಾರ ಅರಸರಿಗೆ, ಹರಪನಹಳ್ಳಿಯವರು ಕುಮಾರರೆಂದು ಸಂಬೋಧಿಸುತ್ತಿದ್ದರು. ಉದಾ :ಚಿಗಟೇರಿ ಕುಮಾರ ಶಿವನಪ್ಪ ನಾಯಕನ ಮುಖಾಂತರ ಮಾಡಿಸಿದ ಗಂಟೆ ಎಂದು ಉಚ್ಚಂಗಿದುರ್ಗದ ಗಂಟೆ ಶಾಸನದಲ್ಲಿ ಉಲ್ಲೇಖವಾಗಿದೆ. ಕುಮಾರ ಎಂದರೆ ಮಗನ ಸಮಾನ.

ವಿಜಯನಗರದ ಅರಸರು ಪತ್ರ ಬರೆಯುವವರಿಗೆ ಮತ್ತು ಬಂದ ಪತ್ರ ಓದಿ ಹೇಳುವವರಿಗೆ 'ರಾಯಸ'ದವರು ಎಂದು ಕರೆದರು. ಅದರಂತೆ ಹರಪನಹಳ್ಳಿಯ ಪಾಳೆಯಗಾರರಿಗೂ ರಾಯಸದವರು ಇದ್ದರು. ಅವರು ಪತ್ರ ಬರೆಯುವ ಮತ್ತು ಓದಿ ಹೇಳುವ ವೃತ್ತಿಯಲ್ಲಿದ್ದರು. ಪತ್ರದ ಕೊನೆಗೆ 'ಜಾಣಿಜ' ಎಂದು ಬರೆದುಕೊಳ್ಳುತ್ತಿದ್ದರು. ಉದಾಹರಣೆಗೆ : ಹಾಸ್ಯ ಸಾಹಿತಿ ಬೀಚಿಯವರು ರಾಯಸದ ವಂಶಕ್ಕೆ ಸೇರಿದವರು. ಹರಪನಹಳ್ಳಿಯಲ್ಲಿ ಈ ಜನರು ಮನೆಗಳು ಈಗಲೂ ಕಾಣುವುವು. ವಿಜಯನಗರದ ಅರಸರು ತಾವು ಕಳಿಸುವ ಆದೇಶ ನಿರೂಪಣೆಗಳಿಗೆ "ಶ್ರೀ ವಿರೂಪಾಕ್ಷ"ಎಂಬುವ ಮುದ್ರಿಕೆ ಹಾಕುತ್ತಿದ್ದರು. ಕಾರಣ ಅವರ ಇಷ್ಟದೇವರು ಹಂಪಿಯ ವಿರೂಪಾಕ್ಷ.

ಹರಪನಹಳ್ಳಿಯ ಪಾಳೆಯಗಾರರು ಕೊನೆ ಕೊನೆಗೆ ಕೊಟ್ಟೂರು ಶ್ರೀ ಗುರುಬಸವೇಶ್ವ ರರನ್ನು ಆರಾಧ್ಯ ದೇವರನ್ನಾಗಿ ಸ್ವೀಕರಿಸಿದರು. ಅದಕ್ಕಾಗಿ ಇವರು 'ಶ್ರೀ ಬಸವ'ಎಂಬ ಮುದ್ರಿಕೆಯನ್ನು ಒತ್ತುತ್ತಿದ್ದರು.

ಬಳಸಿದ ನಾಣ್ಯಗಳು

ಹರಪನಹಳ್ಳಿ ಪಾಳೆಯಗಾರರು ತಮ್ಮ ಸಾಮ್ರಾಜ್ಯ ಸ್ಥಾಪಿಸಿದ ಮೊದ ಮೊದಲು ವಿಜಯನಗರದ ನಾಣ್ಯಗಳನ್ನು ಚಲಾವಣೆಗೊಳಿಸಿದರು. ೫೨ ಗ್ರೇನು ತೂಕವುಳ್ಳ ಚಿನ್ನದ

ನಂದಿ ನಾಣ್ಯ ದುರ್ಗಿವರಾಹ, ಶಂಖ ಚಕ್ರ ಒಂದು ಮುಖ ಮತ್ತೊಂದು ಮುಖದಲ್ಲಿ ಶ್ರೀ ಪ್ರತಾಪ ಕೃಷ್ಣರಾಯ ಎಂದು ನಾಗರಿಲಿಪಿಯಲ್ಲಿದ್ದಿತು.

ನೀರಾವರಿ ಯೋಜನೆಗಳು

ವಿಜಯನಗರದ ಅರಸರ ನೀರಾವರಿ ಯೋಜನೆಯಿಂದ ಕುಡಿಯುವ ನೀರು ಮತ್ತು ಕೃಷಿ ಕೆಲಸಕ್ಕೆ ಉಪಯುಕ್ತವಾಗುವಂತೆ ತುಂಗಭದ್ರಾ ನದಿಯನ್ನು ಉಪಯೋಗಿಸಿ ಕೊಂಡರು. ಅಲ್ಲಲ್ಲಿ ಕೆರೆಗಳನ್ನು ಬಾವಿಗಳನ್ನು ರಚಿಸಿದರು. ಮಂತ್ರಿ ಬಯಕಾರ ರಾಮಪ್ಪ ಒಬ್ಬನೇ ಹದಿನಾರು ಕೆರೆಗಳನ್ನು ನಿರ್ಮಿಸಿದನು.

ಇದನ್ನರಿತ ಹರಪನಹಳ್ಳಿ ಪಾಳೆಯಗಾರರು ತಮ್ಮ ರಾಜ್ಯದಲ್ಲಿ ಹಲವು ಕೆರೆ ಬಾವಿಗಳನ್ನು ರಚಿಸಿದರು. ಹರಪನಹಳ್ಳಿಯಲ್ಲಿ ಚಂದ್ರಾವತಿ ಎಂಬ ಕೆರೆಯನ್ನು ಒಂದು ನಾಯಕನ ಕೆರೆಯನ್ನು ಮತ್ತೊಂದು ಐಯ್ಯಪ್ಪನ ಕೆರೆಯನ್ನು ನಿರ್ಮಿಸಿದರು. ನಾರಾಯಣ ದೇವರ ಕೆರೆಯ ಹೂಳನ್ನು ತೆಗೆಯಿಸಿ ಎರಡು ಕೋಡಿಗಳನ್ನು ನಿರ್ಮಿಸಿದರು. ಹೀಗೆ ಮಾಡಿದ ಮೇಲೆ ಬಸಪ್ಪ ನಾಯಕನಿಗೆ "ಅಂಡ ಮುಗಿಲಿಗೆ ಬಾಯಿ ತೆಗೆಯುವವರ ಗಂಡ" ಎಂಬ ಬಿರುದು ಬಂದಿತು (ಜನರಿಂದ)

ಕೃಷಿ ಮತ್ತು ಪಶುಪಾಲನೆ

ಬೇಸಾಯದ ಕಾರ್ಯಕ್ಕೆ ಒಳ್ಳೆಯ ಹೋರಿಗಳು (ಎತ್ತುಗಳು) ಮತ್ತು ಹಾಲು ಮೊಸಲು ತುಪ್ಪಕ್ಕಾಗಿ ವಿವಿಧ ಜಾತಿಯ ಸುಧಾರಿಸಿದ ತಳಿಯ ಗೂಳಿ ಮತ್ತು ಆಕಳು ಎಮ್ಮೆ ಮೊದಲಾದುವನ್ನು ಬೇರೆ ಬೇರೆ ರಾಜ್ಯಗಳಿಂದ ತರಿಸುತ್ತಿದ್ದರು. ಹರಪನಹಳ್ಳಿ ಪಾಳೆಯ ಗಾರರು ಬಾದಾಮಿ ಅಮಲ್ದಾರರಿಗೆ ದೌಲತ್‌ಖಾನನ ಮುಖಾಂತರ ತರಿಸಿದ ಬಗ್ಗೆ ಒಂದು ಪತ್ರ ಪೂನಾದ ಪೇಶ್ವೆದಫ್ತರಿಯಲ್ಲಿ ದೊರುಕುವುದು.

ಗರಡಿ ಮನೆ ಮತ್ತು ಕುಸ್ತಿ ವ್ಯವಸ್ಥೆ

ಗರಡಿ ಮನೆಗಳಿಗೆ ಮತ್ತು ಕುಸ್ತಿಗೆ ವಿಜಯನಗರದ ರಾಯರು ಹೆಚ್ಚು ಆದ್ಯತೆ ಕೊಟ್ಟಿದ್ದರು. ಕೃಷ್ಣದೇವರಾಯನೇ ಗರಡಿ ಮನೆಗೆ ಹೋಗಿ ಕುಸ್ತಿ ಆಡುತ್ತಿದ್ದನು. ಇದನ್ನು ಅರಿತ ಹರಪನಹಳ್ಳಿ ಪಾಳೆಯಗಾರರ ರಾಜ್ಯದಲ್ಲಿ ಪ್ರತಿ ಗ್ರಾಮಕ್ಕೂ ಒಂದು ಎರಡು ಗರಡಿ ಮನೆಗಳನ್ನು ತೆರೆದರು. ಹರಪನಹಳ್ಳಿಯಲ್ಲಿ ಈಗಲೂ ಹನ್ನೆರಡು ಗರಡಿ ಮನೆಗಳು ಅಸ್ತಿತ್ವದಲ್ಲಿವೆ.

೧)ಚಿತ್ತಾರಗೇರಿ ಗರಡಿ ೨) ಬಾಣಗೇರಿ ಗರಡಿ ೩) ಹುಲಿಬೆಂಚಿ ಉಕ್ಕಡಗರಡಿ ೪) ಹುಲುಗರಡಿ ೫) ಗೌಳೇರ ಕೇರಿ ಗರಡಿ ೬) ದೊಡ್ಡ ಗರಡಿ ೭) ತೆಕ್ಕೇದ ಕೇರಿ ಗರಡಿ ೮) ಸೈತಾನ್ ಗರಡಿ ೯) ಕಾತರಕಿಗರಡಿ ೧೦) ಕುರುಬರಕೇರಿ ಗರಡಿ ೧೧) ಗುಡೇಕೋಟಿ ಕೇರಿ ಗರಡಿ ೧೨) ಗೌಡರ ಗರಡಿ

ವೈದ್ಯಕೀಯ ಸೌಕರ್ಯ

ಮೊದಲ ಸೋಮಶೇಖರನಾಯಕರು ಆನೆಗೊಂದಿಗೆ ತೆರಳಿ ಅನಂತಪದ್ಮನಾಭ ಎಂಬುವ ವೈದ್ಯರನ್ನು ಕರೆ ತಂದರು. ಅವರು ಗೋಸಾವಿ ಗುಡ್ಡದ ಹಿಂಬದಿಯಲ್ಲಿ ಕೊಪ್ಪರಿಗೆ ತುಂಬ ಪಲಾಚಿಡು ರಸವನ್ನು, ವಿವಿಧ ನಮೂನೆ ಭಸ್ಮಗಳನ್ನು ತಯಾರಿಸುತ್ತಿದ್ದರು. ಇವರು ರಾಜವೈದ್ಯರಾದರೂ ಶ್ರೀ ಸಾಮಾನ್ಯರಿಗೆ ಔಷಧಿ ಉಪಚಾರ ಮಾಡುತ್ತಿದ್ದರು. ೧) ಪೂರ್ಣ ಚಂದ್ರೋದಯ ೨)ಭೂಪತಿ ಮಾತ್ರೆಗಳು ಪ್ರಸಿದ್ಧವಾಗಿದ್ದುವು. ನೆರೆ ರಾಜ್ಯಗಳ ಅರಸರೂ ಇಲ್ಲಿಗೆ ಕಳಿಸಿ ಔಷಧಿ ಪಡೆಯುತ್ತಿದ್ದರು. ಈ ವೈದ್ಯರಿಗೆ ಪಕ್ಕದ 'ಕಾಯಕದ ಹಳ್ಳಿ'ಯನ್ನು ಉಂಬಳಿ ಹಾಕಿ ಕೊಟ್ಟಿದ್ದರು. ಹರಪನಹಳ್ಳಿ ಗುಳಿಗೆಗಳು ಪ್ರಸಿದ್ಧವಾಗಿದ್ದವು. ಈ ವೈದ್ಯರ ವಂಶಜರನ್ನು ಈಗಲೂ ಕಾಣಬಹುದು.

ಆಧಾರ ಸೂಚಿ

೧) *South Indian Inscriptions.*

೨) *ಕನ್ನಡ ವಿ. ವಿ. ಶಾಸನ ಸಂಪುಟ* - ೧ ಬಳ್ಳಾರಿ ಜಿಲ್ಲೆ -ದೇವರ ಕೊಂಡಾರೆಡ್ಡಿ.

೩) *ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ* -ಕುಂ. ಬಾ. ಸದಾಶಿವಪ್ಪ

೪) *ಹರಪನಹಳ್ಳಿ ಪಾಳೆಯಗಾರರು* -ಕುಂ. ಬಾ. ಸದಾಶಿವಪ್ಪ, ಕ. ಸಾ. ಪ. ಪ್ರಕಟಣೆ

೫) *ಹರಪನಹಳ್ಳಿ ಪಾಳೆಯಗಾರ ಇತಿಹಾಸ ದರ್ಶನ* -ಕುಂ. ಬಾ. ಸದಾಶಿವಪ್ಪ, ಕ. ಸಾ. ಪ ಪ್ರಕಟಣೆ

೬) *ನಾರಾಯಣ ದೇವರ ಕೆರೆ* -ಧ್ರುವ ನಾರಾಯಣ

೭) *ಹರಪನಹಳ್ಳಿ ಬೆಟ್ಟನಗೌಡರ ಮನೆಯ -ಪ್ರಾಚೀನ ಕಡತ*

೮) ಮೀರಾ ಕೊರನಹಳ್ಳಿ ಬಸವನಗೌಡರ ಮನೆಯಲ್ಲಿ ದೊರೆತ ಕಡತಗಳು


೯) *ಪೂನಾಪೇಶ್ವ ದಪ್ತರಿಕಡತ* -ನೆರವು ಡಾ|| ಕೆ. ಎಸ್. ಚಿಟ್ನೀಸ್ ಪ್ರೊ. ಮತ್ತು ಮುಖ್ಯಸ್ಥರು, ವಿ. ವಿ. ಪೂನಾ -೧೯೬೦

೧೦) *ಚಾರಿತ್ರಿಕ ದಾಖಲೆಗಳು* - (ಸಂ) ತಿ. ತಾ. ಶರ್ಮ

೧೧) ರಾಬರ್ಟ್ ಸಿವೆಲ್ಲ - *ಮರೆತು ಹೋದ ಮಹಾ ಸಾಮ್ರಾಜ್ಯ ವಿಜಯನಗರ*


ರಂಗನಾಯ್ಕ





೧೫. ವಿಜಯನಗರ ಸಾಮ್ರಾಜ್ಯ ಮತ್ತು ಉಮ್ಮತ್ತೂರಿನ ಗಂಗರಾಜ

ಡಾ. ನಿರ್ಮಲ್ ರಾಜ್

ಉಮ್ಮತ್ತೂರು ಪ್ರಭುಗಳಲ್ಲೆಲ್ಲ ಅತ್ಯಂತ ಸಮರ್ಥ ಹಾಗೂ ಪ್ರಸಿದ್ಧ ಅರಸನೆಂದರೆ ವೀರನಂಜರಾಜವೊಡೆಯ. ಈತನು ಕ್ರಿ. ಶ. 1480 ರಿಂದ 1512 ರವರೆಗೂ ಆಳ್ವಿಕೆ ನಡೆಸಿದನು. ಈತನ ಕಾಲವು ಉಮ್ಮತ್ತೂರು ರಾಜ್ಯದ ಇತಿಹಾಸದಲ್ಲಿ ಬಹಳ ಮಹತ್ವ ವಾದ ಕಾಲ. ಏಕೆಂದರೆ ಈ ಸಂದರ್ಭದಲ್ಲಿಯೇ ಉಮ್ಮತ್ತೂರು ರಾಜ್ಯವು ತನ್ನ ರಾಜ್ಯ ವಿಸ್ತರಣೆಗಾಗಿ ಯಶಸ್ವಿ ಸೈನಿಕ ಕಾರ್ಯಾಚರಣೆ ನಡೆಸಿ ಶ್ರೀರಂಗಪಟ್ಟಣ ಮತ್ತು ಪೆನುಕೊಂಡ ಮೊದಲಾದ ವಿಜಯನಗರ ಸಾಮ್ರಾಜ್ಯಕ್ಕೆ ಸೇರಿದ್ದ ಪ್ರಮುಖ ಪ್ರದೇಶಗಳನ್ನು ತನ್ನದಾಗಿಸಿಕೊಂಡು ತನ್ನ ಸಾರ್ವಭೌಮತ್ವದ ಅಧಿಕೃತ ಮುದ್ರೆಯನ್ನು ಒತ್ತಿತ್ತು. ವೀರನಂಜರಾಜ ಒಡೆಯನು ಸಾಮ್ರಾಜ್ಯ ನಿರ್ಮಾಪಕ ಮಾತ್ರವಲ್ಲದೆ ಉತ್ತಮ ಆಡಳಿತಗಾರನೂ ಧಾರ್ಮಿಕ ಶ್ರದ್ಧೆಯುಳ್ಳವನೂ ಉತ್ತಮ ಬರಹಗಾರನೂ ಆಗಿದ್ದನು. ಈತನು ಸುತ್ತೂರು ಮಠದ ಶಿವರಾತ್ರಿಯಾರ್ಯ ಮತ್ತು ಆ ಮಠದ ಪರಂಪರೆ ಯೊಂದಿಗೆ ತನ್ನನ್ನು ತೊಡಗಿಸಿಕೊಂಡಿದ್ದನು. ಸ್ವತಃ ಸಾಹಿತಿಯೂ ಆಗಿದ್ದ ನಂಜರಾಜ ವೊಡೆಯನು ಅನೇಕ ಕವಿ ಸಾಹಿತಿಗಳಿಗೆ ಆಶ್ರಯನೀಡಿದ್ದನು. ಅವರಲ್ಲಿ ಪ್ರಮುಖ ನಾದವನು ನೀಲಕಂಠಾಚಾರ್ಯ. ನೀಲಕಂಠಾಚಾರ್ಯನಿಂದ ಕ್ರಿ. ಶ. 1485ರಲ್ಲಿ ಆರಾಧ್ಯ ಚರಿತೆಯು ರಚಿತವಾಯಿತು. ಈ ಕೃತಿಯಲ್ಲಿ ಗಜವೇಂಟೇಕಾರನೆಂದು ಬಿರುದಾಂಕಿತ ನಾಗಿದ್ದ ವಿಜಯನಗರದ ಪ್ರೌಢದೇವರಾಯನ ಉತ್ತರಾಧಿಕಾರಿಗಳ ಭಂಟ ಹಾಗೂ ನಂಬಿಕಸ್ತನಾಗಿ ನಂಜರಾಜವೊಡೆಯನು ಆಡಳಿತ ನಡೆಸುತ್ತಿದ್ದನೆಂದು ತಿಳಿದುಬರುತ್ತದೆ. ಇದು ವೀರನಂಜರಾಜವೊಡೆಯನ ಪೂರ್ವಜರು ವಿಜಯನಗರ ಸಾಮ್ರಾಜ್ಯದ ವಿಶೇಷವಾಗಿ ಆರಂಭದ ಸಂಗಮಸಂತತಿಯ ಅರಸರೊಡನೆ ಹೊಂದಿದ್ದ ಅತ್ಯಂತ ನಿಷ್ಠಾವಂತ ಸೌಹಾರ್ದ ಹಾಗೂ ವಿಧೇಯ ಸಂಬಂಧವನ್ನು ಸೂಚಿಸುತ್ತದೆ.

ಕ್ರಿ. ಶ. 1504 ರ ತೆರಕಣಾಂಬಿ ಶಾಸನವು ಉಮ್ಮತ್ತೂರು ಪ್ರಭು ವೀರನಂಜ ರಾಜವೊಡೆಯರು ವಿಜಯನಗರ ಸಾಮ್ರಾಜ್ಯದ ಪರಮಾಧಿಕಾರವನ್ನು ತೊರೆದು ಸ್ವತಂತ್ರ ಹಾಗೂ ಸಾರ್ವಭೌಮರಂತೆ ಆಳುತ್ತಿದ್ದುದರ ಸಂಕೇತವಾಗಿದೆ. ಈ ಶಾಸನದಲ್ಲಿ ವೀರನಂಜರಾಜವೊಡೆಯರು ಶ್ರೀ ಮನ್ಮಹಾಮಂಡಳೇಶ್ವರ ಘೇಣಾಂಕಚಕ್ರೇಶ್ವರ

ಗಜಬೇಂಟೆಗಾರ ಜವಾದಿ ಕೋಳಾಹಳ ಪೆಸಾಳಹಸನುಮ ಅರಸಂಗಸೂರೆಗಾರ ಸಕಲಧರ್ಮ ಪ್ರತಿಪಾಲಶಂ ಮಹಾ ರಾಜ್ಯಾಧಿಪತಿ ಎಂದು ವರ್ಣಿಸಲಾಗಿದೆ.[1] ಇದರಿಂದ ಉಮ್ಮತ್ತೂರು ಪ್ರಭುಗಳು ಸ್ವತಂತ್ರ ಪ್ರಭುಗಳಾಗಿ ವಿಶಾಲರಾಜ್ಯದ ಆಡಳಿತಗಾರರಾಗಿದ್ದ ರೆಂಬುದು ಕಂಡಬರುತ್ತದೆ.

ಕ್ರಿ. ಶ. 1506 ರ ಹೊಣಕನಹಳ್ಳಿ ಶಾಸನದಲ್ಲಿ ವಿಜಯನಗರದರಸ ನರಸಿಂಹ ಮಹಾರಾಯರು ಆಳುತ್ತಿರುವಾಗ ತೆರಕಣಾಂಬೆ ರಾಜ್ಯವನ್ನು ದೇಪಣ್ಣವೊಡೆಯನ ಮಗ ಚಿಕ್ಕರಾಜವೊಡೆಯ ಆಳುತ್ತಿದ್ದನೆಂಬುದಾಗಿ ತಿಳಿದುಬರುತ್ತದೆ.[2] ಈ ಶಾಸನದ ಪ್ರಕಾರ ಶ್ರೀರಂಗಪಟ್ಟಣವು ಉಮ್ಮತ್ತೂರು ಪ್ರಭುಗಳ ಅಧೀನಕ್ಕೊಳಪಟ್ಟಿತ್ತೆಂಬುದಾಗಿ ಗೊತ್ತಾಗುತ್ತದೆ. ಇದರಿಂದ ದಕ್ಷಿಣ ಭಾಗದಲ್ಲಿ ವಿಜಯನಗರ ಸಾಮ್ರಾಜ್ಯದ ಪ್ರಾಂತ್ಯಾಡಳಿತದ ಕೇಂದ್ರವಾಗಿದ್ದ ಶ್ರೀರಂಗಪಟ್ಟಣ ಉಮ್ಮತ್ತೂರು ರಾಜ್ಯಕ್ಕೆ ಸೇರಿತ್ತೆಂಬುದು ಗಮನಾರ್ಹ.

ಕ್ರಿ. ಶ. 1512 ರ ಕೊಳ್ಳೇಗಾಲದ ಕುಂತೂರು ಶಾಸನವು ಉಮ್ಮತ್ತೂರು ಪ್ರಭುಗಳ ಇತಿಹಾಸಕ್ಕೆ ಸಂಬಂಧಿಸಿದಂತೆ ಅತ್ಯಂತ ಮಹತ್ವದ ಶಾಸನವಾಗಿದೆ.[3] ಏಕೆಂದರೆ ಅವರ ಇತರ ಎಲ್ಲಾ ಶಾಸನಗಳಲ್ಲೂ ಅವರನ್ನು ಕುರಿತು ಶ್ರೀಮನ್ಮಹಾಮಂಡಲೇಶ್ವರ ಹಾಗೂ ಇನ್ನಿತರ ಬಿರುದು ಬಾವಲಿಗಳ ಬಗ್ಗೆ ಮಾತ್ರ ಪ್ರಸ್ತಾಪಿಸಲಾಗಿದೆ. ಆದರೆ ಈ ಶಾಸನದಲ್ಲಿ ಶ್ರೀಮಾನ್ ಮಹಾರಾಜಾಧಿರಾಜ ರಾಜಪರಮೇಶ್ವರ ಮುಂತಾದ ಬಿರುದುಗಳನ್ನು ವಿಶೇಷವಾಗಿ ಧರಿಸಿರುವುದನ್ನು ನಾವು ಕಾಣಬಹುದು. ಪ್ರಸ್ತುತ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿರುವ ಉಮ್ಮತ್ತೂರು ಅರಸ ಶ್ರೀ ಮನ್ಮಹಾನಂಜರಾಜವೊಡೆಯರನ್ನು ಶ್ರೀಮಾನ್ ಮಹಾರಾಜಾಧಿರಾಜ ರಾಜಪರಮೇಶ್ವರ ಹಾಗೂ ಇನ್ನಿತರ ಎಂದಿನ ಬಿರುದುಗಳಿಂದ ಸಂಭೋಧಿಸಲಾಗಿದೆ. ಹಾಗೂ ಅವರ ಕುಮಾರ ಯುವರಾಜ ಶ್ರೀಮನ್ಮಹಾವೀರ ಇಮ್ಮಡಿ ಚಿಕ್ಕರಾಜವೊಡೆಯರನ್ನು ಸಹ ಕುರಿತದ್ದಾಗಿದೆ. ಇದು ಅವರು ತಾವು ಸ್ವತಂತ್ರರಾಜರೆಂಬುದನ್ನು ಅಭಿವ್ಯಕ್ತಪಡಿಸಲು ಈ ರೀತಿಯ ಬಿರುದುಗಳನ್ನು ಧರಿಸಿರಬೇಕು. ಜೊತೆಗೆ ಅಂದು ಅಸ್ತಿತ್ವದಲ್ಲಿದ್ದ ಸಣ್ಣ ಪುಟ್ಟ ನೆರೆಹೊರೆಯ ರಾಜ್ಯಗಳನ್ನು ಆಕ್ರಮಣ ಇಲ್ಲದೆ ರಾಜತಾಂತ್ರಿಕ ಸಂಬಂಧಗಳ ಮೂಲಕ ತಮ್ಮ ಪರಮಾಧಿಕಾರವನ್ನು ಒಪ್ಪಿಕೊಳ್ಳುವಂತೆ ಮಾಡುವುದರಲ್ಲಿ ಯಶಸ್ವಿಯಾದ ಸಂಕೇತವಾಗಿ ಅವರು ಈ ವಿಶೇಷವಾದ ಬಿರುದುಬಾವಲಿಗಳನ್ನು ಧರಿಸಿರುವುದನ್ನು ನಾವು ಗಮನಿಸಬಹುದು. ಹೊಯ್ಸಳ ಹಾಗೂ ವಿಜಯನಗರದರಸರು ಧರಿಸುತ್ತಿದ್ದ ಇಂತಹ ಬಿರುದುಗಳನ್ನು ಉಮ್ಮತ್ತೂರು ಅರಸರು ತಾವು ಸಹ ಹೊಂದುವುದರ ಮೂಲಕ ತಮ್ಮ ರಾಜಕೀಯ ಪರಮಾಧಿಕಾರವನ್ನು ವಿಶೇಷವಾಗಿ ದಕ್ಷಿಣ ಕರ್ನಾಟಕದಲ್ಲಿ ಸ್ಥಾಪಿಸಿದ್ದ ರೆಂಬುದು ಇದರಿಂದ ತಿಳಿದುಬರುತ್ತದೆ. ಇಲ್ಲಿ ಮತ್ತೊಂದು ಗಮನಿಸಬೇಕಾದ ಅಂಶ

ವೇನೆಂದರೆ ಅದು ವಿಜಯನಗರ ಹಾಗೂ ಉಮ್ಮತ್ತೂರು ರಾಜ್ಯಗಳ ನಡುವಣ ಸಂಬಂಧಗಳು. ಈಗ ಚಾಲ್ತಿಯಲ್ಲಿರುವ ಅಭಿಪ್ರಾಯದಂತೆ ಕ್ರಿ. ಶ. 1485 ರಿಂದ 1505ರ ನಡುವಣ 20 ವರ್ಷದ ಅವಧಿಯಲ್ಲಿ ಎರಡು ರಾಜ ಸಂತತಿಗಳ ಆಳ್ವಿಕೆಯು ಕೊನೆಗೊಂಡು ಮೂರನೆಯ ತುಳುವ ಸಂತತಿಯ ಆಳ್ವಿಕೆಯು ಆರಂಭಗೊಳ್ಳುವವರೆಗೂ ವಿಜಯನಗರ ಸಾಮ್ರಾಜ್ಯದ ರಾಜಕೀಯ ವ್ಯವಸ್ಥೆಯಲ್ಲಿ ಅನೇಕ ಏಳುಬೀಳುಗಳು ಕಾಣಿಸಿ ಕೊಂಡವು. ಈ ಸಂದರ್ಭದಲ್ಲಿ ವಿಜಯನಗರ ಸಾಮ್ರಾಜ್ಯದ ಬಾಹ್ಯ ಹಾಗೂ ಆಂತರಿಕ ಶತ್ರುಗಳ ಭರಾಟೆಯು ತೀವ್ರಗೊಂಡಿತು. ಇಂತಹ ಅವಕಾಶವನ್ನೇ ಎದುರು ನೋಡುತ್ತಿದ್ದ ಅನೇಕ ಸಾಮಂತಪ್ರಭುಗಳು, ಪ್ರಾಂತ್ಯಾಧಿಕಾರಿಗಳು, ಸ್ಥಳೀಯ ಅರಸರು ವಿಜಯನಗರದ ಸಾರ್ವಭೌಮಾಧಿಕಾರವನ್ನು ಕಿತ್ತೊಗೆದು ಸ್ವತಂತ್ರರಾದರಲ್ಲದೆ ತಮ್ಮ ರಾಜ್ಯ ವಿಸ್ತರಣೆಗೂ ಮುಂದಾದರು. ಈ ಹಿನ್ನೆಲೆಯಲ್ಲಿ ಉಮ್ಮತ್ತೂರು ಪ್ರಭುಗಳು ಸಹ ವಿಜಯನಗರ ಸಾಮ್ರಾಜ್ಯದ ವಿರುದ್ಧ ಸೆಟೆದು ನಿಂತು ಶ್ರೀರಂಗಪಟ್ಟಣ, ಶಿವನ ಸಮುದ್ರ, ಪೆನುಕೊಂಡೆ ಮೊದಲಾದ ಆಯಕಟ್ಟಿನ ಹಾಗೂ ಪ್ರಮುಖ ಪ್ರದೇಶಗಳನ್ನು ವಶಪಡಿಸಿ ಕೊಳ್ಳುವ ಭಾರೀ ಸಾಹಸದಲ್ಲಿ ಯಶಸ್ವಿಯಾದರು. ಜೊತೆಗೆ ಘೇಣಂಕ ಚಕ್ರೇಶ್ವರ, ಗಜಬೇಂಟೆಕಾರ, ಹೊಯ್ಸಳ ರಾಜ್ಯಾಧಿಪತಿ ಪೆನುಕೊಂಡಚಕ್ರೇಶ್ವರ ಮೊದಲಾದ ಸಾರ್ವಭೌಮಾಧಿಕಾರ ಸೂಚಿ ಗೌರವಬಿರುದುಗಳನ್ನು ಧರಿಸಲಾರಂಭಿಸಿದರು. ಇದು ದಕ್ಷಿಣ ಕರ್ನಾಟಕದಲ್ಲಿ ಉಮ್ಮತ್ತೂರು ಪ್ರಭುಗಳು ರಾಜಕೀಯವಾಗಿ ಪ್ರವರ್ಧಮಾನಕ್ಕೆ ಬಂದರೆಂಬುದನ್ನು ತೋರಿಸುತ್ತದೆ. ಇದರಿಂದ ಸಹಜವಾಗಿ ವಿಜಯನಗರದಲ್ಲಿ ತುಳುವ ಸಂತತಿಯ ಅಧಿಕಾರ ಸ್ಥಾಪನೆಯೊಂದಿಗೆ ವಿಜಯನಗರ ಮತ್ತು ಉಮ್ಮತ್ತೂರುಗಳ ನಡುವಣ ಸಂಬಂಧ ಹದಗೆಟ್ಟು, ಕ್ರಿ. ಶ. 1512 ರ ಪೂರ್ವ ಕಾಲದವರೆಗೂ ಅಂದರೆ ಕೃಷ್ಣದೇವರಾಯನ ಉಮ್ಮತ್ತೂರು ಆಕ್ರಮಣದವರೆಗೂ ಎರಡೂ ರಾಜ್ಯಗಳ ನಡುವೆ ತೀವ್ರ ಘರ್ಷಣೆಯು ಸಂಭವಿಸಿತ್ತೆಂದು ಅಭಿಪ್ರಾಯ ಪಡಬಹುದು.

ಕ್ರಿ. ಶ. 1517 ರ ಗುಂಡ್ಲುಪೇಟೆಯ ಸಂಸ್ಕೃತ ಶಾಸನವು ಕೃಷ್ಣದೇವರಾಯನ ಆಳ್ವಿಕೆ ಹಾಗೂ ಆತನ ವಂಶಾವಳಿಯ ಬಗೆಗೆ ವಿವರವಾದ ಮಾಹಿತಿ ನೀಡುತ್ತದೆ. ಮುಂದುವರಿದು ತುಂಗಾನದಿಯ ದಡದ ಮೇಲಿರುವ ವಿಠಲನ ಸನ್ನಿಧಾನದಲ್ಲಿ ಗೋಪಿ ನಾಥನ ಮಗ ಶ್ರೀನಿವಾಸನಿಗೆ ತೆರಕಣಾಂಬಿ ಮಹಾರಾಜ್ಯದ ಕೃಷ್ಣಸಾಗರವೆಂಬ ಪ್ರತಿನಾಮ ಧೇಯ ಪಡೆದ ಮಡಲವಾಡಿಯನ್ನು ದಾನ ನೀಡಿದುದಾಗಿ ತಿಳಿಸುತ್ತದೆ. [4] ಈ ಶಾಸನದಲ್ಲಿ ತೆರಕಣಾಂಬಿ ಮಹಾರಾಜ್ಯ ಎಂಬ ವಿವರವಿರುವುದು ಆ ರಾಜ್ಯದ ವಿಸ್ತಾರ ಹಾಗೂ ಘನತೆಯನ್ನು ಎತ್ತಿತೋರಿಸುತ್ತದೆ.

ತಿ. ನರಸೀಪುರದಲ್ಲಿರುವ ಮಾದಾಪುರ ಶಾಸನವು ವಿಜಯನಗರ ಸಾಮ್ರಾಜ್ಯದ ಕೃಷ್ಣದೇವರಾಯ ಮತ್ತು ಉಮ್ಮತ್ತೂರು ಪ್ರಭುಗಳ ಸಂಬಂಧದ ಹಿನ್ನೆಲೆಯಲ್ಲಿ ಬಹಳ

ಅಮೂಲ್ಯವಾದ ಆಕರವಾಗಿದೆ. ಕ್ರಿ. ಶ. 1519 ರ ಈ ಶಾಸನದಲ್ಲಿ ಶ್ರೀ ಕೃಷ್ಣರಾಯ ಮಹಾರಾಯರ ನಿರೂಪದಂತೆ ಶ್ರೀ ಮಹಾಪ್ರಧಾನ ಸಾಳುವ ಗೋವಿಂದರಾಜರುಗಳು ಉಮ್ಮತ್ತೂರು ಸೀಮೆಯ ಮೂಗೂರು ಸ್ಥಳದ ಮಾದವಪುರವನ್ನು ಉಮ್ಮತ್ತೂರು ದೇವರಾಯ ಅರಸರ ಮಗನಾದ ನಂಜಯಅರಸರಿಗೆ ವಿರೂಪಾಕ್ಷ ವಿಠಲದೇವನ ಸನ್ನಿಧಿಯಲ್ಲಿ ಧಾರಾಪೂರ್ವಕವಾಗಿ ಧಾರೆಯೆರೆದು ಕೊಟ್ಟರೆಂಬುದು ಉಲ್ಲೇಖಗೊಂಡಿದೆ. [5] ಇದರಿಂದ ಕಾಲಾನಂತರದಲ್ಲಿ ಉಮ್ಮತ್ತೂರು ಪ್ರಭುಗಳ ವಂಶಸ್ಥರ ಮೇಲೆ ಕರುಣೆ ತೋರಿ ಔದಾರ್ಯದಿಂದ ವರ್ತಿಸಿದ ಶ್ರೀ ಕೃಷ್ಣದೇವರಾಯನು ದೇವರಾಯ ಅರಸನ ಮಗ ನಂಜಯ್ಯ ಅರಸರಿಗೆ ಮಾಧವಪುರವನ್ನು ಸರ್ವಮಾನ್ಯವಾಗಿ ನೀಡಿರುವುದನ್ನು ನಾವು ಗ್ರಹಿಸಬಹುದು. ಏಕೆಂದರೆ ಬೀದರ್, ಗುಲ್ಬರ್ಗ ಪ್ರಾಂತ್ಯಗಳ ಸುಲ್ತಾನರು ಸ್ವತಃ ತಮ್ಮ ಮಂತ್ರಿ ದಂಡನಾಯಕರಿಂದ ಅಧಿಕಾರ ಕಳೆದುಕೊಂಡು ಬಂಧಿತರಾಗಿದ್ದಾಗ ಮತ್ತು ಆ ಪ್ರಾಂತ್ಯಗಳ ಮೇಲೆ ರಾಯನು ಸ್ವತಃ ದಾಳಿ ಮಾಡಿ ಅವುಗಳನ್ನು ವಶಪಡಿಸಿ ಕೊಂಡಾಗ ತನ್ನ ಶತ್ರುಗಳಾದರೂ ಆ ಪ್ರಾಂತ್ಯಗಳ ಸುಲ್ತಾನರನ್ನು ಸೆರೆಯಿಂದ ಬಿಡಿಸಿ, ಅವರನ್ನು ಅಧಿಕಾರದಲ್ಲಿ ಪುನಃ ಪ್ರತಿಷ್ಠಾಪಿಸಿ 'ಯವನರಾಜ್ಯ ಪ್ರತಿಷ್ಠಾಪನಾಚಾರ್ಯ' ಎಂಬ ಬಿರುದು ಧರಿಸಿರುವುದನ್ನು ನಾವಿಲ್ಲಿ ಗಮನಿಸಬಹುದು. ಈ ಹಿನ್ನೆಲೆಯಲ್ಲಿ ಉಮ್ಮತ್ತೂರು ಪ್ರಭುಗಳ ವಂಶಸ್ಥರೊಂದಿಗೆ ರಾಯನು ವರ್ತಿಸಿದ ನೀತಿ ಆದರ್ಶ ಪ್ರಾಯವೂ ಅನುಕರಣೀಯವೂ ಆಗಿದೆ.

ಕ್ರಿ. ಶ. 1521ರ ತ್ರಿಯಂಬಕಪುರ ಶಾಸನವು ಅತ್ಯಂತ ಆಸಕ್ತಿದಾಯಕವಾಗಿದ್ದು ಅದರಲ್ಲಿ ಕೃಷ್ಣದೇವರಾಯನ ಆಳ್ವಿಕೆಯನ್ನು ಕುರಿತಾಗಿದ್ದು, ಆಶ್ಚರ್ಯವೆಂಬಂತೆ ಈ ಶಾಸನವು ತ್ರಿಯಂಬಕಪುರದ ತ್ರಿಯಂಬಕ ದೇವರಿಗೆ ನೀಡಲಾದ ವಿವಿಧ ಕೊಡುಗೆಗಳ ಜೊತೆಗೆ ಕೊಂಗಿನ ಸೀಮೆಯಲ್ಲಿ ಉಮ್ಮತ್ತೂರ ನಂಜರಾಯ ಕೊಟ್ಟಿದ್ದು ವಡಪರಸ ನಾಡಮಡಪಾನೂರ ಮುಂತಾಗಿ ವಿವರಣೆಯಿದೆ.[6] ಪ್ರಾಯಶಃ ಕ್ರಿ. ಶ. 1521 ರ ವೇಳೆಗೆ ಕೃಷ್ಣದೇವರಾಯನ ಆಳ್ವಿಕೆಯ ಕಾಲದಲ್ಲೇ ಉಮ್ಮತ್ತೂರು ಪ್ರಭು ವೀರನಂಜರಾಯ ಮತ್ತು ಅವನ ಉತ್ತರಾಧಿಕಾರಿಗಳು ಪುನಃ ಉಮ್ಮತ್ತೂರು ಪ್ರಭುತ್ವವನ್ನು ಪಡೆದು ಕೊಂಡರು ಎಂಬ ಅಭಿಪ್ರಾಯ ಮೂಡುತ್ತದೆ. ಕ್ರಿ. ಶ. 1526 ರ ಅಂಕುಸಯ್ಯನಪುರ ಶಾಸನದಲ್ಲಿ ಕೃಷ್ಣದೇವರಾಯನ ಆಳ್ವಿಕೆಯ ಕಾಲದಲ್ಲಿ ಗೌರವನರಸಪ್ಪಯ್ಯ ನವರು ಉಮ್ಮತ್ತೂರನ್ನು ಆಳುತ್ತಿದ್ದ ಕೃಷ್ಣದೇವರಾಯನ ನಿರೂಪದಂತೆ ಉಮ್ಮತ್ತೂರು ಶ್ರೀರಂಗನಾಥದೇವರಿಗೆ ಆ ಉಮ್ಮತ್ತೂರು ಸ್ಥಳಕ್ಕೆ ಸಲ್ಲುವ ಚಿಕ್ಕಹೊಮ್ಮವನ್ನು ಅಗ್ರಹಾರವನ್ನಾಗಿ ಅಭಿವೃದ್ಧಿಪಡಿಸಿ ಅದಕ್ಕೆ ಅಂಕುಸಯ್ಯನಪುರವೆಂಬ ಪ್ರತಿನಾಮ ಧೇಯವ ಮಾಡಿ ಅದನ್ನು ಕಾವೇರಿ ಕಪಿನೀ ನದಿಗಳ ಸಂಗದಲ್ಲಿರುವ ಶ್ರೀ ಅಗಸ್ತ್ಯ ಲಿಂಗನಾರಸಿಂಹ ದೇವರ ಸನ್ನಿಧಿಯಲ್ಲಿ ಒಪ್ಪಿಸಲಾಯಿತು ಮತ್ತು ಆ ಅಗ್ರಹಾರದಲ್ಲಿ

ನಂಬಿಯೂರ ರಾಮಚಂದ್ರದೇವರ ಮಗ ಅಪ್ಪಣ್ಣದೇವನಿಗೂ ಒಂದು ಭಾಗವನ್ನು ಬ್ರಹ್ಮಾದಾಯವಾಗಿ ನೀಡಲಾಯಿತ್ತೆಂಬುದಾಗಿ ವಿವರಿಸಲಾಗಿದೆ. [7]

ಉಮ್ಮತ್ತೂರಿನಲ್ಲಿರುವ ಕ್ರಿ. ಶ. 1527ರ ಕೃಷ್ಣದೇವರಾಯನ ಶಾಸನದಲ್ಲಿ ರಾಯನಿಗೆ ಧರ್ಮಕೀರ್ತಿಯಾಗಬೇಕೆಂದು ಅವರಸದ ದೇಮರಸಯ್ಯನ ನಿರೂಪದ ಮೇರೆಗೆ ಲಕ್ಕರಾಜನ ಮಗ ತಿಮ್ಮರಾಜನು ಕೈಗೊಂಡ ದಾನಧರ್ಮದ ಮಾಹಿತಿಯು ನಮೂದಿಸಲ್ಪಟ್ಟಿದೆ. [8] ಈ ದೇಮರಸ್ಯಯನ ಉಲ್ಲೇಖ ಇತರ ಶಾಸನಗಳಲ್ಲೂ ಕಂಡು ಬರುತ್ತದೆ. ಈತನಿಗೆ ಉಮ್ಮತ್ತೂರು ಸೀಮೆಯ ನಾಯಕತ್ವವನ್ನು ಅರಸನು ದಯ ಪಾಲಿಸಿದ್ದ ನೆಂದು ಕ್ರಿ. ಶ. 1527 ರ ಚಾಮರಾಜನಗರದ ಹೆಗ್ಗೊಠಾರದ ಶಾಸನದಿಂದ ತಿಳಿದುಬರುತ್ತದೆ. [9] ಅಂದರೆ ಗೋವಿಂದರಾಜನ ತರುವಾಯ ದೇಮರಸಯ್ಯನು ಉಮ್ಮತ್ತೂರು ಸೀಮೆಯ ಅರೆಕೊಠಾರ ಪ್ರದೇಶದ ನಾಯಕತನ ಅಥವಾ ಪ್ರಭುತ್ವವನ್ನು ಪಡೆದುಕೊಂಡ ನೆಂದು ಅಭಿಪ್ರಾಯಪಡಬಹುದು. ಬಿಳಿಗೆರೆ ಶಾಸನದಲ್ಲಿ ಕೃಷ್ಣದೇವ ರಾಯನ ಆಳ್ವಿಕೆಯ ಕಾಲದಲ್ಲಿ ಉಮ್ಮತ್ತೂರು ಪ್ರಭು ನರಸಪ್ಪಯ್ಯನ ಮಗ ರಾಮಪ್ಪನು ನಂಜನಗೂಡಿನ ನಂಜುಂಡೇಶ್ವರ ದೇವರಿಗೆ ಬಿಳಿಗೆರೆ ಗ್ರಾಮವನ್ನು ದಾನ ನೀಡಿದ್ದು ಕಂಡುಬರುತ್ತದೆ. [10]

ತಿ. ನರಸೀಪುರದ ಕ್ರಿ. ಶ. 1527 ರ ತೊಟ್ಟವಾಡಿ ಶಾಸನವು ವಿಜಯನಗರ ಹಾಗೂ ಉಮ್ಮತ್ತೂರು ಪ್ರಭುಗಳ ನಡುವಣ ರಾಜತಾಂತ್ರಿಕ ಸಂಬಂಧಗಳ ಹಿನ್ನೆಲೆಯಲ್ಲಿ ಬಹಳ ಮುಖ್ಯವಾದ ಶಾಸನವಾಗಿದೆ. [11] ಏಕೆಂದರೆ ನಮಗೆಲ್ಲ ತಿಳಿದಿರುವ ಪ್ರಕಾರ ಕ್ರಿ. ಶ. 1512ರಲ್ಲಿ ಉಮ್ಮತ್ತೂರು ಪ್ರಭುವನ್ನು ಸೋಲಿಸಿ ಅವರ ರಾಜ್ಯವನ್ನು ಕಸಿದುಕೊಂಡ ಕೃಷ್ಣದೇವರಾಯನು ಈ ಭಾಗದ ಆಡಳಿತದ ಪುನರ್ವ್ಯವಸ್ಥೆಗಾಗಿ ಸಾಳುವ ತಿಮ್ಮನ ಮಗ ಸಾಳುವ ಗೋವಿಂದರಾಜ, ಕೃಷ್ಣರಾಯನಾಯಕ, ಮಾಗಡಿಯ ಪ್ರಭು ಮೊದಲಾದ ವರನ್ನು ಪ್ರಾಂತ್ಯಾಧಿಕಾರಿಗಳಾಗಿ ನೇಮಿಸಿದ್ದು ಸರಿಯಷ್ಟೇ. ಆದರೆ ಶತ್ರುಗಳ ಬಗ್ಗೆ ಔದಾರ್ಯದಿಂದ ನಡೆದುಕೊಳ್ಳುತ್ತಿದ್ದ ಕೃಷ್ಣದೇವರಾಯನು ಉಮ್ಮತ್ತೂರು ಪ್ರದೇಶದ ಆಡಳಿತವನ್ನು ಪುನಃ ಅದೇ ಸಂತತಿಯ ನಂಜಪ್ಪೊಡೆಯರಿಗೆ ಬಿಟ್ಟುಕೊಟ್ಟಿ ರುವುದು ಪ್ರಸ್ತುತ ಶಾಸನದಲ್ಲಿ ಕಂಡುಬರುತ್ತದೆ. ಆದುದರಿಂದ ನಂಜಪ್ಪೊಡೆಯರು ಕೃಷ್ಣದೇವ ರಾಯರಿಗೂ ಅವರ ತಂದೆ ನರಸಣ್ಣನಾಯಕರಿಗೂ ಪುಣ್ಯವಾಗಬೇಕೆಂದು ತುಂಗಭದ್ರಾ ತೀರದ ಪಂಪಾಕ್ಷೇತ್ರದ ವಿರೂಪಾಕ್ಷ ಲಿಂಗದ ಸಂನಿಧಿಯಲ್ಲಿ ಹೊಂನಕಳ್ಸ ದೇವರಿಗೆ ಭೂಮಿಯೊಂದನ್ನು ನೀಡಿದರು.

ಕ್ರಿ. ಶ. 1529 ರ ಎಲೆಯೂರು ಶಾಸನದಲ್ಲಿ ಉಮ್ಮತ್ತೂರು ಪ್ರಭು ಶ್ರೀ ಮನ್ಮಹಾ ಮಂಡಲೇಶ್ವರ ರಾಮರಾಜತಿರುಮಲರಾಜಯ್ಯನವರು ತೆರಕಣಾಂಬೆ ಸೀಮೆಯ ಯರಿಯೂರು ಗ್ರಾಮವನ್ನು ಶ್ರೀ ಮದ್ವೇದಮಾರ್ಗ ಪ್ರತಿಷ್ಠಾಪನಾಚಾರ್ಯರಾದ ಶ್ರೀ

ವೆಂಗಡೆಯ್ಯ ಭಟ್ಟರಿಗೆ ಧರ್ಮವಾಗಿ ಕೊಟ್ಟದ್ದು ದಾಖಲಾಗಿದೆ. [12] ಕ್ರಿ. ಶ. 1530 ರ ತಿರುಮಕೂಡಲು ನರಸೀಪುರದ ಹೆಮ್ಮಿಗೆಯ ಶಾಸನವು ವೀರ ದೇವಣ್ಣವೊಡೆಯನ ಆಳ್ವಿಕೆಗೆ ಸಂಬಂಧಿಸಿದ್ದು ಅವನನ್ನು ಉಮ್ಮತ್ತೂರರಸನೆಂದು ನಿರ್ಧರಿಸಲಾಗಿದೆ. [13] 1530 ರ ಬಸವಟ್ಟಿಗೆಯ ಶಾಸನದಲ್ಲಿ ಉಮ್ಮತ್ತೂರರಸರ ಎಲ್ಲಾ ಬಿರುದುಗಳನ್ನೂ ಹೊಂದಿದ್ದ ವೀರಮಲ್ಲರಾಜವೊಡೆಯನ ಹೆಸರಿದ್ದು ತಿ. ನರಸೀಪುರದ ದೇವಣ್ಣ ವೊಡೆಯನಿಗೆ ಯಾವುದೇ ಬಿರುದುಗಳು ಇರುವುದಿಲ್ಲ. [14]

ಕ್ರಿ. ಶ. 1530 ರ ಸುತ್ತೂರು ಶಾಸನದಲ್ಲಿ ಉಮ್ಮತ್ತೂರರಸ ಮಹಾಮಂಡಲೇಶ್ವರ ರಾಮರಾಜ ತಿರುಮಲರಾಜೈಯ್ಯದೇವ ಮಹಾಅರಸುಗಳ ಬಗ್ಗೆ ಕಂಡುಬರುತ್ತದೆ. [15] ಕ್ರಿ. ಶ. 1530 ರ ಬಸವಟ್ಟಿಗೆ ಶಾಸನವು ಉಮ್ಮತ್ತೂರು ಪ್ರಭುಗಳು ಮತ್ತು ವಿಜಯಗನರ ಸಾಮ್ರಾಜ್ಯಗಳ ಸಂಬಂಧದ ಹಿನ್ನೆಲೆಯಲ್ಲಿ ಅಮೂಲ್ಯವಾದ ದಾಖಲೆಯಾಗಿದೆ. ಈ ಶಾಸನದಲ್ಲಿ ಉಮ್ಮತ್ತೂರಿನ ಅರಸ ವೀರಮಲ್ಲರಾಜ ಒಡೆಯನು ಈ ಹಿಂದಿನ ಉಮ್ಮತ್ತೂರು ಪ್ರಭುಗಳು ಧರಿಸುತ್ತಿದ್ದ ಸಾರ್ವಭೌಮ ಹಾಗೂ ಸ್ವತಂತ್ರಪ್ರವೃತ್ತಿಯ ಬಿರುದುಬಾವಲಿಗಳನ್ನು ಹೊಂದಿರುವುದು ಕುತೂಹಲಕಾರಿಯಾಗಿದೆ. ಏಕೆಂದರೆ ಕ್ರಿ. ಶ. 1512 ರಲ್ಲಿ ಕೃಷ್ಣದೇವರಾಯನ ಆಕ್ರಮಣದ ನಂತರ ಉಮ್ಮತ್ತೂರು ಪ್ರಭುಗಳು ನೇರ ರಾಜಕೀಯದಿಂದ ತುಸುಮಟ್ಟಿಗೆ ಹಿಂದೆ ಸರಿದಿದ್ದು ಮಹಾನಾಡು, ತಗಡೂರು, ಅರೆಕೊತಾರನಾಡು ಮುಂತಾದ ಪ್ರದೇಶಗಳಿಗೆ ಸೀಮಿತವಾಗಿದ್ದರು. ಈ ಸಂದರ್ಭದಲ್ಲಿ ಮಹಾಪ್ರಧಾನ ಸಾಳುವ ತಿಮ್ಮರಸನ ಮಗ ಸಾಳುವ ಗೋವಿಂದರಾಜನು ಕೃಷ್ಣ ದೇವರಾಯನ ರಾಜಪ್ರತಿನಿಧಿಯಾಗಿ ಉಮ್ಮತ್ತೂರು ರಾಜ್ಯದ ಅಧಿಪತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದನು. ಇದಕ್ಕೆ ಸಂಬಂಧಿಸಿದಂತೆ ಹಲವಾರು ಶಾಸನಾಧಾರಗಳು ಲಭ್ಯ ವಾಗಿವೆ. ಅಂತೆಯೇ ಕ್ರಿ. ಶ. 1523 ರ ವೇಳೆಗೆ ರಾಯನ ಆಳ್ವಿಕೆಯ ಸಂದರ್ಭದಲ್ಲೇ ಪುನಃ ಉಮ್ಮತ್ತೂರು ರಾಜ್ಯದ ಅಧಿಕಾರವನ್ನು ಪಡೆದುಕೊಳ್ಳುವುದರಲ್ಲಿ ಯಶಸ್ವಿಯಾದ ಉಮ್ಮತ್ತೂರು ಮನೆತನದವರು ಕೃಷ್ಣದೇವರಾಯನ ಉತ್ತರಾಧಿಕಾರಿಯಾದ ಶ್ರೀ ಅಚ್ಯುತ ದೇವರಾಯನ ಕಾಲದಲ್ಲಿ ಈ ಹಿಂದಿನಂತೆ ಉತ್ತಮ ರಾಜತಾಂತ್ರಿಕ ಬಾಂಧವ್ಯವನ್ನು ಪುನರ್ ಸ್ಥಾಪಿಸುವುದರಲ್ಲಿ ಯಶಸ್ವಿಯಾದರು. ಇದಕ್ಕೆ ನಿದರ್ಶನವಾಗಿ ಕ್ರಿ. ಶ. 1530ರ ನಂಜನಗೂಡಿನ ಬಸವಟ್ಟಿಗೆ ಶಾಸನದಲ್ಲಿ ಉಮ್ಮತ್ತೂರು ಅರಸ ವೀರಮಲ್ಲ ರಾಜವೊಡೆಯರು ಈ ಹಿಂದೆ ಉಮ್ಮತ್ತೂರು ಪ್ರಭುಗಳು ಧರಿಸುತ್ತಿದ್ದ ಶ್ರೀ ಮನ್ಮಹಾಮಂಡಲೇಶ್ವರ, ಕಟಾರಿತ್ರಿಣೇತ್ರ ಪೆಸಾಳಿಹನುಮ ಅರಸಂಕಸೂನೆಗಾರ ಘೇಣಂಕಚಕ್ರೇಶ್ವರ ಜವಾಜಿಕೋಳಾಹಳ ಗಜಬೇಂಟೆಗಾರ ಎಂಬಿತ್ಯಾದಿ ಬಿರುದುಗಳನ್ನು ಹೊಂದಿರುವುದನ್ನು ನಾವು ಕಾಣಬಹುದು. [16]

ಒಟ್ಟಾರೆ ಮೇಲ್ಕಂಡ ಅಧ್ಯಯನದಿಂದ ವಿಜಯನಗರ ಹಾಗೂ ಉಮ್ಮತ್ತೂರು ರಾಜ್ಯಗಳ ನಡುವಣ ರಾಜತಾಂತ್ರಿಕ ಸಂಬಂಧವನ್ನು ವಿಶೇಷವಾಗಿ ಕೃಷ್ಣದೇವರಾಯ ಮತ್ತು ವೀರನಂಜರಾಜ ಒಡೆಯ ಅಥವಾ ಗಂಗರಾಜ ಇವರ ಕಾಲದ ಸಂಬಂಧಗಳ ಬಗ್ಗೆ ತಿಳಿದುಕೊಳ್ಳಬಹುದು. ಅದೇನೆಂದರೆ 15 ನೇ ಶತಮಾನದ ಕೊನೆಯ ದಶಕದಲ್ಲಿ ಅಧಿಕಾರಕ್ಕೆ ಬಂದ ಸಂಗಮರಾಜರ ದೌರ್ಬಲ್ಯ ಮತ್ತು ಸಾಳುವ ರಾಜನ ಸಿಂಹಾಸನಾರೋಹಣ ನಿಮಿತ್ತವಾಗಿ, ವಿಜಯನಗರ ಸಾಮ್ರಾಜ್ಯದಲ್ಲಿ ರಾಜಕೀಯ ಪಲ್ಲಟ ಕಂಡು ಬಂದ ಕಾರಣ ಉಮ್ಮತ್ತೂರಿನ ಪ್ರಭುಗಳು ಪ್ರಾಬಲ್ಯಕ್ಕೆ ಬಂದರು. ಅವರ ಶಾಸನಗಳಿಂದ ದೊರಕಿರುವ ಮಾಹಿತಿಯಂತೆ 15 ನೆಯ ಶತಮಾನದ ಕೊನೆಯ ವೇಳೆಗೆ ಸೋಮರಾಜ ಒಡೆಯನ ಮಗನಾದ ದೇಪಣ್ಣ ಒಡೆಯನು ವಿಜಯನಗರದ ಆಧಿಪತ್ಯವನ್ನು ಧಿಕ್ಕರಿಸಿದನು. ದೇಪಣ್ಣ ಒಡೆಯನ ದಂಗೆಯ ಬಗ್ಗೆ ತಿಳಿದು ಅವನ ಉದ್ಧಟತನದ ಸೊಕ್ಕಡಗಿಸಲು ನರಸನಾಯಕನು ದಂಡೆತ್ತಿ ಹೊರಟು, ಕಾವೇರಿ ಕಣಿವೆಯ ಮೂಲಕ ಸಾಗಿ ಶ್ರೀರಂಗಪಟ್ಟಣದ ಕೋಟೆಯನ್ನು ಹಾಳುಗೆಡವಿ ವಿಜಯಸ್ತಂಭ ವೊಂದನ್ನು ಅಲ್ಲಿ ನೆಟ್ಟನು. ಸೋತ ದೇಪಣ್ಣ ಒಡೆಯನು ವಿಜಯನಗರ ಸೈನ್ಯಕ್ಕೆ ಶರಣಾಗತನಾಗಿ ಪುನಃ ಆ ಪ್ರದೇಶಗಳನ್ನು ಹಿಂತಿರುಗಿ ಪಡೆದುಕೊಂಡನು. ದೇಪಣ್ಣ ಒಡೆಯನ ಶರಣಾಗತಿಯೊಂದಿಗೆ ಉಮ್ಮತ್ತೂರು ಪ್ರಭುಗಳ ಅವಿಧೇಯ ವರ್ತನೆ ಅಲ್ಲಿಗೆ ನಿಲ್ಲಲಿಲ್ಲ. ಮುಂದೆ ಅವನ ಮಗ ಮಲ್ಲರಾಜ ಒಡೆಯನು ವಿಜಯನಗರದ ದೊರೆ ಸಾಳ್ವ ನರಸನಾಯಕನು ಮರಣ ಹೊಂದಿದ ಬಳಿಕ, ವೀರನರಸಿಂಹನ ದುರ್ಬಲ ಆಳ್ವಿಕೆಯ ಲಾಭ ಪಡೆದು ಪುನಃ ದಂಗೆ ಎದ್ದನು. ಈ ದಂಗೆಯ ಮಾಹಿತಿ ಪಡೆದು ವೀರನರಸಿಂಹನು ಅದನ್ನು ಅಡಗಿಸುವುದಕ್ಕಾಗಿ ಸೈನ್ಯದೊಡನೆ ತೆರಳಿ ಉಮ್ಮತ್ತೂರನ್ನು ಮೂರು ತಿಂಗಳ ವರೆಗೆ ಸುತ್ತುವರೆದನು. ಆದರೆ ಶತ್ರುವಿನ ಪ್ರಬಲ ಪ್ರತಿರೋಧದ ಕಾರಣ ಉಮ್ಮತ್ತೂರು ಆಕ್ರಮಣವನ್ನು ಸಡಿಲಿಸಿ ಶ್ರೀರಂಗಪಟ್ಟಣವನ್ನು ಮುತ್ತಲು ಹೊರಟನು. ಆದರೆ ದಂಗೆಯೆದ್ದಿದ್ದ ಮಲ್ಲರಾಜ ಒಡೆಯನು ವಿಜಯನಗರದ ಸೈನ್ಯವನ್ನು ಸೋಲಿಸಲಾಗಿ ವೀರನರಸಿಂಹನು ಹಿಂತೆಗೆದನು. ಇದರಿಂದ ಉಮ್ಮತ್ತೂರು ಪ್ರಭುವಿನ ನೈತಿಕ ಸ್ಥೈರ್ಯ ಹೆಚ್ಚಿ ತದನಂತರ ಅವನು ಅಂಕೆಗೊಳಪಡದವನಾದನು. ವೀರ ದೇವರಾರ ಒಡೆಯನ ಎರಡನೆಯ ಮಗನಾದ ಇಮ್ಮಡಿ ನಂಜರಾಜ ಒಡೆಯನು ರಾಜಾಧಿಕಾರವನ್ನು ಪಡೆದ ಬಳಿಕ ಸಾಳುವ ವಂಶದವರ ಬಿರುದುಗಳಾದ ಅರಿರಾಯ ವಿಭಾಡ, ಭಾಷೆಗೆ ತಪ್ಪುವ ರಾಯರಗಂಡ, ಪೆನುಗೊಂಡ ಚಕ್ರೇಶ್ವರ, ಚಿಕ್ಕರಾಯಪ್ಪ ಮತ್ತಿತರ ಬಿರುದುಗಳನ್ನು ಧರಿಸಿದನು. ಉಮ್ಮತ್ತೂರು ಪ್ರಭುಗಳು ರಾಜಶಾಹಿಗಳನ್ನು ಹೊಂದಿದುದು ವೀರನರಸಿಂಹನು ಉಮ್ಮತ್ತೂರು ರಾಜನ ಸ್ಥಾನಮಾನಗಳನ್ನು ಗುರುತಿಸಿ ಅವನಿಗೆ ಪಟ್ಟಕ್ಕೆ ಬರುವ ರಾಜ ಕುಮಾರರನನ್ನಾಗಿ ಮಾಡಿದಂತಿದೆಯೆಂದು ಕೃಷ್ಣಶಾಸ್ತ್ರಿಗಳು ಅಭಿಪ್ರಾಯಪಟ್ಟಿದ್ದಾರೆ.

ಇದರಿಂದ ಉಮ್ಮತ್ತೂರು ಪ್ರಭುಗಳು ಈ ಕಾಲಕ್ಕಾಗಲೇ ವಿಜಯನಗರ ಸಾಮ್ರಾಜ್ಯದಿಂದ ಸ್ವತಂತ್ರಗೊಂಡು, ರಾಜಬಿರುದುಗಳನ್ನು ಧರಿಸಿ ಆಳ್ವಿಕೆ ನಡೆಸುತ್ತಿದ್ದರೆಂಬುದು ಖಚಿತವಾಗುತ್ತದೆ.

ಕೃಷ್ಣದೇವರಾಯನು ಅಧಿಕಾರಕ್ಕೆ ಬಂದ ಕೂಡಲೇ ತನ್ನ ಗಮನವನ್ನು ಉಮ್ಮತ್ತೂರು ಪ್ರಾಂತ್ಯದ ಕಡೆಗೆ ಹರಿಸಿದನು. ಆಗ ಉಮ್ಮತ್ತೂರಿನ ಪ್ರಭುವಾಗಿದ್ದ ವೀರನಂಜರಾಜವೊಡೆಯ ಅಥವಾ ಗಂಗರಾಜನು ಶಿವನಸಮುದ್ರ ಮತ್ತು ಶ್ರೀರಂಗಪಟ್ಟಣಗಳ ಕೋಟೆಗಳನ್ನು ತನ್ನ ಅಧೀನದಲ್ಲಿಟ್ಟುಕೊಂಡು ಕಾವೇರಿ ಕಣಿವೆಯಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಿ, ವಿಜಯನಗರದ ಪ್ರಭುತ್ವಕ್ಕೆ ಚ್ಯುತಿ ತಂದಿದ್ದನು. ಇಷ್ಟಲ್ಲದೆ ಪೆನುಗೊಂಡೆಯ ಕೋಟೆಯನ್ನು ಸಹ ವಶಪಡಿಸಿಕೊಂಡು ಗಂಗರಾಜನು ಕೃಷ್ಣದೇವರಾಯನಿಗೆ ನೇರ ಸವಾಲನ್ನೆಸೆದನು. ಇದರಿಂದ ಕ್ರೋಧಗೊಂಡ ರಾಯನು ಉಮ್ಮತ್ತೂರು ಸಾಮಂತರ ವಿರುದ್ಧ ಕ್ರಮ ಕೈಗೊಳ್ಳಲು ನಿರ್ಧರಿಸಿದನೆಂದು ಫಾದರ್ ಹೆರಾಸ್ ಬರೆಯುತ್ತಾರೆ. ಕೊಂಗುದೇಶ ರಾಸಕ್ಕಳ್ ಚರಿತಂ ಕೃತಿಯ ಪ್ರಕಾರ ಈ ದಂಡಯಾತ್ರೆಯು ಒಂದು ವರ್ಷದವರೆಗೆ ನಡೆಯಿತೆಂದು ತಿಳಿದುಬರುತ್ತದೆ. ಪಾರಿಜಾತಪಹರಣಮು ಗ್ರಂಥವು ಉಮ್ಮತ್ತೂರು ಮತ್ತು ಶಿವನಸಮುದ್ರಗಳಲ್ಲಿನ ಯುದ್ಧ ಶಿಬಿರಗಳನ್ನು ಕೆಡವಿದ ಬಗ್ಗೆ ತಿಳಿಸುತ್ತದೆ. ಅಂತಿಮವಾಗಿ ಪ್ರತಿರೋಧವನ್ನು ತಡೆಯಲಾರದೆ, ಗಂಗರಾಜನು ಶತ್ರು ಸೈನ್ಯದಿಂದ ತಪ್ಪಿಸಿಕೊಂಡು ಪಲಾಯನ ಗೈಯ್ಯುವಾಗ ಗಗನ ಚುಕ್ಕಿಯ ಬಳಿ ಕಾವೇರಿ ನದಿಯಲ್ಲಿ ಮುಳುಗಿ ಮರಣ ಹೊಂದಿದನು. ಈ ರೀತಿ ಶತ್ರುವನ್ನೆದುರಿಸಿ ಉಮ್ಮತ್ತೂರು ಪ್ರದೇಶವನ್ನು ವಶಪಡಿಸಿಕೊಂಡ ರಾಯನು ಅದನ್ನು ಒಂದು ಹೊಸ ಪ್ರಾಂತ್ಯಕ್ಕೆ ವೀರಪ್ಪ ಒಡೆಯರ್ ಎಂಬುವನನ್ನು ಸಾಮಂತನನ್ನಾಗಿ ಕಾರ್ಯಸ್ಥಾನವನ್ನಾಗಿ ಮಾಡಿ ಆ ಹೊಸ ಪ್ರಾಂತ್ಯವಾಗಿ ಮಾರ್ಪಡಿಸಿ, ಅದಕ್ಕೆ ಶ್ರೀರಂಗಪಟ್ಟಣವನ್ನು ಕಾರ್ಯಸ್ಥಾನ ಮಾಡಿ ಆ ಹೊಸ ಪ್ರಾಂತ್ಯಕ್ಕೆ ವೀರಪ್ಪ ಒಡೆಯರ್ ಎಂಬುವನನ್ನು ಸಾಮಂತನನ್ನಾಗಿ ನೇಮಿಸಿದನು. ರಾಯನಿಂದ ಪರಾಜಿತಗೊಂಡ ಉಮ್ಮತ್ತೂರು ಪ್ರಭುವಾಗಿದ್ದ ಗಂಗರಾಜನ ಮಗನೇ ಇವನಿರಬೇಕೆಂದು ಎರಡು ಶಾಸನಗಳು ಅಧಿಕೃತಗೊಳಿಸುತ್ತವೆ. ಹೀಗೆ ಉಮ್ಮತ್ತೂರು ಪ್ರಭುಗಳು ವಿಜಯನಗರದೊಡನೆ ಪ್ರಾರಂಭದಲ್ಲಿ ಮಧುರವಾದ ರಾಜಕೀಯ ಸಂಬಂಧವನ್ನೇ ಹೊಂದಿದ್ದು ಅಮರನಾಯಕರಾಗಿ ವಿಜಯನಗರ ಸಾಮ್ರಾಜ್ಯದ ಆಧಾರಸ್ತಂಭವಾಗಿದ್ದರು. ಇದನ್ನು ಬಿ. ಎಲ್. ರೈಸ್‌ರವರೂ ದಾಖಲಿಸಿದ್ದಾರೆ.

ಟಿಪ್ಪಣಿಗಳು

1) ಎಕ ಸಂಪುಟ -3, ಗುಪೇ - 119
2) ಎಕ ಸಂಪುಟ - 3, ಗುಪೇ - 26
3) ಎಕ ಸಂಪುಟ - 4, ಕೊಗಾ - 07
4) ಎಕ ಸಂಪುಟ - 3, ಗುಪೇ -1
5) ಎಕ ಸಂಪುಟ - 7, ಮವ - 146
6) ಎಕ ಸಂಪುಟ - 5, ತಿನ - 128
7) ಎಕ ಸಂಪುಟ - 3, ಗುಪೇ - 134
8) ಎಕ ಸಂಪುಟ - 3, ನಂಗೂ - 298
9) ಎಕ ಸಂಪುಟ - 4, ಚಾನ - 100
10) ಎಕ ಸಂಪುಟ -4, ಚಾನ -387
11) ಎಕ ಸಂಪುಟ -3, ನಂಗೂ - 246
12) ಎಕ ಸಂಪುಟ - 5, ತಿನ - 258
13) ಎಕ ಸಂಪುಟ - 3, ಪೇ - 170
14) ಎಕ ಸಂಪುಟ -5, ತಿನ -249
15) ಎಕ ಸಂಪುಟ - 3, ನಂಗೂ - 338
16) ಎಕ ಸಂಪುಟ - 3, ನಂಗೂ - 217

೧೬. ವಿಜಯನಗರ ಸಾಮ್ರಾಜ್ಯ ಮತ್ತು ಉಮ್ಮತ್ತೂರು ಸಂಸ್ಥಾನಗಳ ನಡುವಿನ ಸಂಬಂಧ

ಡಾ. ಲ. ನ. ಸ್ವಾಮಿ, ಉಜಿರೆ

ವಿಜಯನಗರ ಸಾಮ್ರಾಜ್ಯದ ಉದಯ ದಕ್ಷಿಣ ಭಾರತದ ಹಲವು ರಾಜಮನೆತನಗಳ ವಿನಾಶಕ್ಕೆ ಹಾಗೂ ಅದರ ಪತನ ಹಲವು ರಾಜ ಮನೆತನಗಳ ಹುಟ್ಟಿಗೆ ಕಾರಣ ವಾಗಿರುವುದು ಎಲ್ಲರಿಗೂ ತಿಳಿದ ವಿಷಯ. ವಿಜಯನಗರದ ಅರಸರು ತಮ್ಮ ಎಲ್ಲ ಸಾಮಂತರು ಗಳೊಂದಿಗೆ ಸಾಮರಸ್ಯ ಮತ್ತು ಸಹಭಾಗಿತ್ವದ ಜೀವನ ನಡೆಸಿರುವುದು ಕಂಡುಬರುತ್ತದೆ. ಆದರೆ ಕೆಲವೊಂದು ಸಂದರ್ಭಗಳಲ್ಲಿ ಉದ್ಧಟತನ ಪ್ರದರ್ಶಿಸಿದ ಸಾಮಂತರನ್ನು ಕರುಣೆ ತೋರದೆ ಶಿಕ್ಷಿಸಿರುವ ಉಲ್ಲೇಖಗಳೂ ಇಲ್ಲದಿಲ್ಲ. ಸಾಮ್ರಾಜ್ಯದ ಲಾಲಸೆಗೆ, ಶಕ್ತಿ-ಬಲವರ್ಧನೆಗೆ ಸ್ವತಂತ್ರ ರಾಜ್ಯಾಕಾಂಕ್ಷಿಗಳಾದ ಮನೆತನಗಳು ಸಾಮ್ರಾಜ್ಯಶಾಹಿ ಅರಸರ ಕೆಂಗಣ್ಣಿಗೆ ಗುರಿಯಾದವು. ಈ ಹಂತದಲ್ಲಿ ಉಮ್ಮತ್ತೂರಿನ ನಾಯಕರು ಉಲ್ಲೇಖಾ ರ್ಹರು. ಪ್ರಾರಂಭದ ದೆಸೆಯಲ್ಲಿ ಉಮ್ಮತ್ತೂರಿನ ಪ್ರಭುಗಳು ವಿಜಯನಗರ ಸಂಸ್ಥಾನಕ್ಕೆ ಸಾಮಂತರಾಗಿ ಕಾರ್ಯನಿರ್ವಹಿಸಿ, ವಿಜಯನಗರ ಕೇಂದ್ರ ರಾಜಕೀಯದಲ್ಲಾದ ಬದಲಾವಣೆಯನ್ನು ತಮ್ಮ ಪುರೋಭಿವೃದ್ಧಿಗೆ ಬಳಸಿಕೊಂಡ ಉಮ್ಮತ್ತೂರು ನಾಯಕರು ಸಾಮ್ರಾಜ್ಯದಿಂದ ಹೊರಬರುವ ಪ್ರಯತ್ನಕ್ಕೆ ಮುಂದಾದರು. ಇದು ಸಂಘರ್ಷಕ್ಕೆ ನಾಂದಿಯಾಯಿತು.

15 ನೇ ಶತಮಾನದ ಕೊನೆಯ ವೇಳೆಗೆ ಸಂಗಮ ವಂಶದ ಅವನತಿಯ ನಂತರ ಸಾಮ್ರಾಜ್ಯದ ಕೇಂದ್ರಾಡಳಿತದಲ್ಲಿ ಉಂಟಾದ ಅದಕ್ಷತೆಯನ್ನು ಬಳಸಿಕೊಂಡ ಉಮ್ಮ ತ್ತೂರು ಸಂಸ್ಥಾನದ ನಾಯಕ ದೇಪಣ್ಣನು ಶಿವನಸಮುದ್ರದಿಂದ ವಿಜಯನಗರ ಸಾಮ್ರಾಜ್ಯದ ವಿರುದ್ಧ ಕಾರ್ಯಾಚರಣೆಗಿಳಿದನು. ಆ ಹೊತ್ತಿಗಾಗಲೇ ಉಮ್ಮತ್ತೂರಿನ ನಾಯಕರು ಶಿವನಸಮುದ್ರ ಮತ್ತು ಶ್ರೀರಂಗಪಟ್ಟಣಗಳಿಂದ ಆಡಳಿತ ನಡೆಸುತ್ತಿದ್ದರು. ವಿಜಯನಗರದ ಅರಸ ನರಸನಾಯಕನು ಸಾಮ್ರಾಜ್ಯದ ವಿರುದ್ಧ ಬಂಡೆದ್ದ ದೇಪಣ್ಣನನ್ನು ಶಿಕ್ಷಿಸುವ ಸಲುವಾಗಿ ಉಮ್ಮತ್ತೂರು ನಾಯಕರ ಪ್ರಬಲಕೋಟೆಯಾದ ಶ್ರೀರಂಗಪಟ್ಟಣ ಕೋಟೆಯನ್ನು ಮುತ್ತುವ ಸಾಹಸಕ್ಕೆ ಇಳಿದನು. ನದಿಯ ಪ್ರವಾಹ ಹೆಚ್ಚಿದ್ದರಿಂದ ತುರ್ತು ಸೇತುವೆಯನ್ನು ನಿರ್ಮಾಣ ಮಾಡಿ ಶ್ರೀರಂಗಪಟ್ಟಣವನ್ನು ತಲುಪಿ ಕೋಟೆಯನ್ನು ಗೆದ್ದು ಅಲ್ಲಿ ವಿಜಯಸ್ತಂಭವನ್ನು ಸ್ಥಾಪಿಸಿದನು. ಆ ನಂತರ ಶರಣಾದ ದೇವರಾಜನಿಗೆ (ದೇಪಣ್ಣ) ಇಲ್ಲಿನ ಪ್ರದೇಶಗಳ ಆಡಳಿತವನ್ನು ಪುನಃ ವಹಿಸಿದನು. ಇದಾದ ನಂತರವೂ

ಉಮ್ಮತ್ತೂರಿನ ನಾಯಕರು ತಮ್ಮ ಸ್ವತಂತ್ರ ಮನೋಭಾವವನ್ನು ನಿಗ್ರಹಿಸದಾದರು. ದೇಪಣ್ಣ ರಾಜನ ಮಗ ಮಲ್ಲರಾಜ ಒಡೆಯನು ನರಸನಾಯಕನ ಮರಣದ ತರುವಾಯ ಪುನಃ ಬಂಡೆದ್ದನು. ವೀರನರಸಿಂಹನ ಸಡಿಲ-ಆಳ್ವಿಕೆಯ ಲಾಭ ಪಡೆದ ಮಲ್ಲರಾಜ ಒಡೆಯನು ಸಾಮ್ರಾಜ್ಯಶಾಹೀ ನೀತಿಗೆ ವಿರುದ್ಧವಾಗಿ ಹಲವಾರು ಪ್ರದೇಶಗಳನ್ನು ತನ್ನದೆಂದು ಘೋಷಿಸಿಕೊಂಡು ಸ್ವತಂತ್ರನಾದನು. ಈತನನ್ನು ಶಿಕ್ಷಿಸಲು ವೀರನರಸಿಂಹನು ಉಮ್ಮತ್ತೂರು ಮತ್ತು ಶ್ರೀರಂಗಪಟ್ಟಣಗಳ ಮೇಲೆ ದಾಳಿ ಮಾಡಿದನು. ವಿಪರ್ಯಾಸ ವೇನೆಂದರೆ ಈ ಸೈನಿಕ ಕಾರ್ಯಾಚರಣೆಯಲ್ಲಿ ಸಾಮ್ರಾಟನೇ ಸೋತು ಹಿಂದಿರುಗ ಬೇಕಾಯಿತು. ಇದಾದ ನಂತರ ಅಧಿಕಾರಕ್ಕೆ ಬಂದ ಗಂಗರಾಜನು ಮತ್ತೊಮ್ಮೆ ಕೃಷ್ಣರಾಜನ ಕಾಲದಲ್ಲಿ ತಿರುಗಿಬಿದ್ದನು. ಉಮ್ಮತ್ತೂರಿನ ನಾಯಕ ಗಂಗರಾಜ ಸಾಮ್ರಾಜ್ಯ ಶಾಹೀ ನೀತಿಗೆ ವಿರುದ್ಧವಾದ ಅವಿಧೇಯತೆಯನ್ನು ಮತ್ತು ಅವನ ದುರಾಕ್ರಮವವನ್ನು ಶಿಕ್ಷಿಸಲು ಕೃಷ್ಣರಾಯನು ಕ್ರಿ. ಶ. 1512 ರಲ್ಲಿ (ಉಮ್ಮತ್ತೂರು ಮತ್ತು ಶ್ರೀರಂಗಪಟ್ಟಣಗಳನ್ನು ಮುತ್ತಿ) ಶಿವನಸಮುದ್ರ ಕೋಟೆಯನ್ನು ಗೆದ್ದು ಕೋಟೆಯನ್ನು ಹಾಳುಗೆಡವಿ ಮುಂದುವರೆದು ಶ್ರೀರಂಗಪಟ್ಟಣವನ್ನು ಪ್ರವೇಶಿಸಿದನೆಂದು ದಿನಚರಿ ಉಲ್ಲೇಖಿಸುತ್ತದೆ. ಇದಾದ ನಂತರ ಗಂಗರಾಜನು ಗಗನಚುಕ್ಕಿ ಬಳಿ ಕಾವೇರಿಯಲ್ಲಿ ಮುಳುಗಿ ಗತಿಸಿದನೆಂದು ತಿಳಿದುಬರುತ್ತದೆ. ಶ್ರೀ ನಿರ್ಮಲರಾಜು ಅವರು ಇತ್ತೀಚಿನ ಪ್ರಬಂಧವೊಂದರಲ್ಲಿ ಶ್ರೀರಂಗಪಟ್ಟಣದ ಪ್ರದೇಶವನ್ನು ಗಂಗರಾಜನ ಮಗ ವೀರಪ್ಪ ಒಡೆಯನಿಗೆ ವಹಿಸಿಕೊಡಲಾಗಿ ತ್ತೆಂದು ಹೀಗೆ ಅಭಿಪ್ರಾಯಪಡುತ್ತಾರೆ. ''ಮತ್ತೆ ಕೆಲವು ಶಾಸನಾಧಾರಗಳ ಪ್ರಕಾರ ಗಂಗರಾಜನು ಪರಾಜಯಗೊಂಡ ನಂತರ ಅವನ ಮಗ ವೀರಪ್ಪ ಒಡೆಯನನ್ನು ಈ ವಿಭಾಗದ ಅಧಿಕಾರಿಯಾಗಿ ನೇಮಿಸಲಾಯಿತೆಂದೂ ತಿಳಿದುಬರುತ್ತದೆ.'' ಈ ಉಲ್ಲೇಖಕ್ಕೆ ಅವರು ಮೈಸೂರು ತಾಲೂಕು ಬೆಲವತ್ತೆಯ (*EC* Vol V My 116 ಮತ್ತು *EC* Vol VI Sr. 31)ಶ್ರೀರಂಗಪಟ್ಟಣ ಶಾಸನಗಳನ್ನು ಉಲ್ಲೇಖಿಸುತ್ತಾರೆ. ಆದರೆ ಈ ಶಾಸನಗಳಲ್ಲಿ ಕಂಡುಬರುವ ಪ್ರಶಸ್ತಿಗಳಿಗೂ, ಉಮ್ಮತ್ತೂರಿನ ನಾಯಕರ ಪ್ರಶಸ್ತಿಗಳಿಗೂ ಯಾವುದೇ ಹೋಲಿಕೆಯಿಲ್ಲ ಅಥವಾ ಆ ಶಾಸನ ಉಮ್ಮತ್ತೂರಿನ ನಾಯಕರ ವಂಶಾವಳಿಯನ್ನು ಸೂಚಿಸುವುದಿಲ್ಲ. *ಎಪಿಗ್ರಾಫಿಯ ಕರ್ನಾಟಿಕದ* ವಂಶಾನುಕ್ರಮದ ಸೂಚಿಯಲ್ಲಿ ಕೂಡ ಆ ಶಾಸನವನ್ನು ಉಮ್ಮತ್ತೂರಿನ ಅರಸರ ಶಾಸನವೆಂದು ಗುರುತಿಸಿರುವುದಿಲ್ಲ. ಹೀಗಾಗಿ ಕೇವಲ ಹೆಸರಿನ ಸಾಮ್ಯತೆಯ ಆಧಾರದ ಮೇಲೆ ಕ್ರಿ. ಶ. 1509 ರ ನಂತರ ಹದಗೆಟ್ಟ ವಿಜಯನಗರ ಉಮ್ಮತ್ತೂರು ಸಂಬಂಧ ಕೃಷ್ಣರಾಯನ ಕಾಲದಲ್ಲಿಯೇ ಸರಿಹೋಯಿ ತೆಂದು ಭಾವಿಸಲು ಯಾವ ನಿಖರ ಮಾಹಿತಿಯೂ ದೊರೆಯುವುದಿಲ್ಲ. ಡಾ|| ಅ. ಸತ್ಯ ನಾರಾಯಣ ಅವರು ಕೂಡ ಇದೇ ಶಾಸನದ ಆಧಾರದ ಮೇಲೆ ಗಂಗರಾಜನ ಮಗನನ್ನು ಕುಮಾರ ವೀರ್ಯ, ಕುಮಾರಯ್ಯ

ನೊಂದಿಗೆ ಸಮೀಕರಿಸುತ್ತಾರೆ. ಆದರೆ ಬೇರೆ ಯಾವ ಆಕರಗಳಿಂದಲೂ ಈ ಸಮೀಕರಣಕ್ಕೆ ಪುಷ್ಟಿ ಸಿಗುವುದಿಲ್ಲ. ಕೇವಲ ಹೆಸರಿನ ಸಾಮ್ಯತೆಯೇ ಇದಕ್ಕೆ ಮೂಲ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಕೃಷ್ಣರಾಯನ ಕಾಲಾನಂತರ ಅಧಿಕಾರಕ್ಕೆ ಬಂದ ಉಮ್ಮತ್ತೂರಿನ ಮಲ್ಲರಾಜನ ಕೆಲವು ಶಾಸನಗಳು ಲಭ್ಯವಿದ್ದು ಅವು ವಿಜಯ ನಗರ ಸಾಮ್ರಾಟ ಅಚ್ಯುತರಾಮರಾಯಯನ ಕಾಲವನ್ನು ನಿರ್ದೇಶಿಸುತ್ತವೆ ಮತ್ತೆ ಅಚ್ಯುತ ರಾಮರಾಯನ ಕಾಲದಲ್ಲಿ ಸಹ ಸ್ವತಂತ್ರನಾಗಲು ಯತ್ನಿಸಿದ ಮಲ್ಲರಾಜನು ಕೂಡ ಶಿಕ್ಷಿಸಲ್ಪಟ್ಟನು. ಈ ಹಂತದಲ್ಲಿ ಗಮನಿಸಿದಾಗ ನಮಗೆ ಕಾಣುವ ಮತ್ತೊಂದು ರಾಜ ಮನೆತನ ಮೈಸೂರು ಅರಸರು (ಒಡೆಯರು). ಈವರೆಗೆ ಪ್ರಕಟವಾಗಿರುವ ಎಲ್ಲ ಆಕರಗಳು ಮೈಸೂರು ಸಂಸ್ಥಾನ ಕ್ರಿ. ಶ. 1399ರಲ್ಲಿಯೇ ಪ್ರಾರಂಭವಾಯಿತೆಂದು ಉಲ್ಲೇಖಿಸುತ್ತಾರೆ. ಅಲ್ಲದೆ ಮೈಸೂರು ಒಡೆಯರಿಗೆ ಮತ್ತು ಉಮ್ಮತ್ತೂರಿನ ಅರಸರಿಗೆ ವೈರತ್ವವಿದ್ದುದನ್ನು ಉಲ್ಲೇಖಿಸುತ್ತಾರೆ. ಶ್ರೀ ನಿರ್ಮಲರಾಜು 'ದಕ್ಷಿಣ ಕರ್ನಾಟಕದ ಅರಸು ಮನೆತನಗಳು' ಹೊತ್ತಗೆಯಲ್ಲಿ ಪ್ರಕಟಿಸಿರುವ 'ಉಮ್ಮತ್ತೂರು ಪಾಳೆಯ ಗಾರರು'ಲೇಖನದಲ್ಲಿ ಉಮ್ಮತ್ತೂರಿನ ಅರಸರ ಪ್ರಾಬಲ್ಯವನ್ನು ಹೇಳುತ್ತ ಹೀಗೆ ಉಲ್ಲೇಖಿಸುತ್ತಾರೆ : "ಮೈಸೂರು ಒಡೆಯರಿಗೆ ಪ್ರಬಲ ಎದುರಾಳಿಗಳಾಗಿ ಆಳ್ವಿಕೆ ನಡೆಸಿದರು". ಡಾ. ಬಿ. ಆರ್. ಗೋಪಾಲ್‌ರವರ '*Mynor Dynastics of South India*' ಕೃತಿಯಲ್ಲಿ ಉಮ್ಮ ತ್ತೂರಿನ ಪಾಳೆಯಗಾರರ ಬಗ್ಗೆ ಒಂದು ಅಭಿಪ್ರಾಯವಿದೆ. ಅದರಲ್ಲಿ ಈ ಬಗೆಗಿನ ವಿವರಗಳಿಲ್ಲ. ಮೈಸೂರು ಅರಸರ ಶಾಸನಗಳು ಈವರೆಗೆ ನಂಬಿರು ವಂತೆ ಪ್ರಾರಂಭವಾಗುವುದು ಕ್ರಿ. ಶ. 1601ರಲ್ಲಿ ಶ್ರೀರಂಗಪಟ್ಟಣವನ್ನು ಆಕ್ರಮಿಸಿದ ರಾಜ ಒಡೆಯರ ನಂತರ. ಈ ದಿಸೆಯಲ್ಲಿ ಮೈಸೂರು ಒಡೆಯರ ಶಾಸನ ಗಳನ್ನು ಅಧ್ಯಯನ ಮಾಡುವಾಗ ಕೆಲವು ವಿಶೇಷ ಶಾಸನಗಳು ಕಂಡು ಬಂದಿವೆ.

ಇತ್ತೀಚೆಗೆ ಶ್ರೀ ದೇವರಾಜಸ್ವಾಮಿಯವರು *ಇತಿಹಾಸ ದರ್ಶನ*ದಲ್ಲಿ ಪ್ರಕಟಿಸಿರುವ ರಾಜ ಒಡೆಯರ ಶಾಸನದ ಕಾಲ ಕ್ರಿ. ಶ. 1614 . ಆದರೆ ಈವರೆಗೆ ಪ್ರಕಟವಾಗಿರುವ ಎಲ್ಲ ಶಾಸನಗಳಲ್ಲಿಯೂ ಮೂರನೆಯ ಬೆಟ್ಟದ ಚಾಮರಾಜ ಒಡೆಯರನ್ನು ಪ್ರಾರಂಭದ ಒಡೆಯರೆಂದು, ಮೂಲ ಪುರುಷನೆಂದು ಗುರುತಿಸುತ್ತವೆ. ಆದರೆ ಇತರ ಅರೆ ಐತಿಹಾಸಿಕ ಕೃತಿಗಳು ಯದುರಾಜನಿಂದ ಬೆಟ್ಟದ ಚಾಮರಾಜ ಒಡೆಯರ್‌ವರೆಗಿನ ವಂಶಾವಳಿಯನ್ನು ಕೊಡುತ್ತವೆ.

ಅವು ರಾಜ ಒಡೆಯರ್‌ನ ಆನಂತರದ ಕಾಲದಲ್ಲಿ ಪ್ರಕಟವಾದವುಗಳು. ಈ ಹಂತ ದಲ್ಲಿ ಶ್ರೀರಂಗಪಟ್ಟಣ ಮತ್ತು ಮೈಸೂರು ಪ್ರದೇಶದಲ್ಲಿ ಕಂಡುಬರುವ ವಿಜಯನಗರ ಕಾಲದ ಮೂರು ಶಿಲಾಶಾಸನಗಳು ಗಮನ ಸೆಳೆಯುತ್ತವೆ. ಈ ಮೂರು ಶಾಸನಗಳಿಗೂ, ಉಮ್ಮತ್ತೂರು ಸಂಸ್ಥಾನದ ಮೇಲಿನ ಕೃಷ್ಣರಾಯನ ದಾಳಿಗೂ ನೇರ ಸಂಬಂಧ ಕಲ್ಪಿಸ

ಬಹುದಾಗಿದೆ. ಕೃಷ್ಣರಾಯನು ಕ್ರಿ. ಶ. 1512 ರಲ್ಲಿ ಶಿವನಸಮುದ್ರ ಮತ್ತು ಶ್ರೀರಂಗಪಟ್ಟಣವನ್ನು ವಹಿಸಿಕೊಂಡ ನಂತರ ಈ ಪ್ರದೇಶದಲ್ಲಿ ಕೇಂದ್ರೀಕೃತ ಆಡಳಿತಕ್ಕೆ ಬದಲಾಗಿ ವಿಕೇಂದ್ರೀಕೃತ ಆಡಳಿತವನ್ನು ನಾಯಂಕರ ಪದ್ಧತಿಯ ಆಚರಣೆಯಿಂದ ಪ್ರಬಲ ಗೊಳಿಸಿದನು. ಹಾಗೆ ಶ್ರೀರಂಗಪಟ್ಟಣ ಮತ್ತು ಮೈಸೂರು ಪ್ರದೇಶದಲ್ಲಿ ಅಧಿಕಾರಕ್ಕೆ ಬಂದವರೆಂದರೆ ಸಾಳ್ವ ಗೋವಿಂದರಾಜ, ಬೆಲವತ್ತೆಯ ಶಾಸನದಲ್ಲಿ ಕಂಡುಬರುವ ವೀರಪ್ಪೊಡೆಯನ ಮಕ ಚಿಕ್ಕ ಒಡೆಯ ಆಹಗೂ ಮೈಸೂರು ಸಂಸ್ಥಾನದ ಸೆಮ್ಮಟ್ಟಿ ತಿಮ್ಮರಾಜ. ಕ್ರಿ. ಶ. 1598 ಬೆಳಗೊಳದ ಶಾಸನ ಆತ್ರೇಯ ಗೋತ್ರದ ಆಶ್ವಲಾಯನ ಸೂತ್ರದ ಮೈಸೂರು ಚಾಮರಾಜ ಒಡೆಯರ ಮಕ್ಕಳು ಬೆಟ್ಟದ ಚಾಮರಾಜ ಒಡೆಯರ್ ಎಂಬ ಉಲ್ಲೇಖಿಸುತ್ತದೆ. ಅಂದರೆ ಕ್ರಿ. ಶ. 1598ರಲ್ಲಿ ಮೈಸೂರಿನಲ್ಲಿ ಬೆಟ್ಟದ ಚಾಮರಾಜ ಒಡೆಯರು ಆಳ್ವಿಕೆ ನಡೆಸುತ್ತಿದ್ದರೆಂದು ಖಚಿತವಾಗುತ್ತದೆ. ಅದೇ ಶಾಸನವು ಶ್ರೀರಂಗಪಟ್ಟಣವನ್ನು ಆಳುತ್ತಿದ್ದ ರಾಮರಾಜಯ್ಯನು ಬೆಟ್ಟದ ಚಾಮರಾಜ ಒಡೆಯರ್‌ಗೆ ಕೊಟ್ಟ ಗ್ರಾಮವನ್ನು ಬೆಟ್ಟದ ಚಾಮರಾಜ ಒಡೆಯರ್ ರಾಮಾನುಜರ ಕೂಟಕ್ಕೆ ಕೊಟ್ಟ ದತ್ತಿಯನ್ನು ಉಲ್ಲೇಖಿಸುತ್ತದೆ. ಶಾಸನವನ್ನು ಹಾಕಿಸಿರುವ ವ್ಯಕ್ತಿ ಬೆಟ್ಟದ ಚಾಮರಾಜ ಒಡೆಯ. ಆದರೆ ತಮ್ಮ ಸಾಮ್ರಾಜ್ಯಾಧಿಪತಿ ವಿಜಯನಗರದ ಅರಸ ವೆಂಕಟಪತಿ ಮಹಾ ರಾಯನನ್ನು ಮೊದಲು ಉಲ್ಲೇಖಿಸಿರುವುದರಿಂದ ಶಾಸನವನ್ನು ವಿಜಯನಗರದ ಅರಸರ ಶಾಸನವೆಂದು ಪಟ್ಟಿಮಾಡಲಾಗಿದೆ. ಶಾಸನ ದಾನಿಯನ್ನು ರಾಜ ಒಡೆಯರ ಸೋದರನಾದ ಚಾಮರಾಜ ಒಡೆಯರ್ ಎಂದೂ, ಆತನ ತಂದೆಯನ್ನು ಬೋಳ ಚಾಮರಾಜ ಅಥವಾ ನಾಲ್ಕನೆಯ ಚಾಮರಾಜ ಒಡೆಯರ್ ಎಂದೂ ನಿರೂಪಿಸಬಹುದು. ಕ್ರಿ. ಶ. 1528 ಜೂನ್ 29 ರ ಶ್ರೀರಂಗಪಟ್ಟಣದ ಶಾಸನ ಮೈಸೂರು ಅರಸರ ಬಿರುದುಗಳನ್ನು ಹೊಂದಿ ರುವ ತಿಮ್ಮರಾಜ ಮತ್ತು ಬೋಜಯ್ಯ ದೇವನನ್ನು ಉಲ್ಲೇಖಿಸುತ್ತದೆ.

ಶಾಸನದಲ್ಲಿ ಕಂಡುಬರುವಗೋತ್ರ ಸೂತ್ರಗಳು ಮೈಸೂರು ಅರಸರ ಗೋತ್ರ ಸೂತ್ರಗಳು ಹಾಗೂ ಬಿರುದುಗಳನ್ನು ಆಧರಿಸಿ ಪ್ರಸ್ತುತ ಶಾಸನದ ತಿಮ್ಮರಾಜನನ್ನು ಮೂರನೆಯ ಬೆಟ್ಟದ ಚಾಮರಾಜ ಒಡೆಯರ್‌ನೊಂದಿಗೆ ಮತ್ತು ಆತನ ಮಗ ಬೋಗಯ್ಯ ದೇವನನ್ನು ಕ್ರಿ. ಶ. 1598 ಶಾಸನದ ನಾಲ್ಕನೆಯ ಚಾಮರಾಜನೊಂದಿಗೆ ಅಥವಾ ಬೆಟ್ಟದ ಚಾಮರಸನೊಂದಿಗೆ ಸಮೀಕರಿಸಬಹುದಾಗಿದೆ. ಅಂದರೆ ಮೈಸೂರು ಅರಸರು ಕ್ರಿ. ಶ. 1512 ರ ನಂತರ ಈ ಪ್ರದೇಶದಲ್ಲಿ ಅಧಿಕಾರಕ್ಕೆ ಬಂದಿರುವುದು ಖಚಿತವಾಗುತ್ತದೆ. ಕಾರಣ ಕ್ರಿ. ಶ. 1528 ರ ಶಾಸನವು ಕೃಷ್ಣರಾಯರ ತಾಯಿ ನಾಗಲಾಂಬಿಕೆಯ ಹೆಸರಿನಲ್ಲಿ ಅಗ್ರ ಹಾರವನ್ನು ನಿರ್ಮಿಸಿ ಕೆಸರೆ ಮತ್ತು ವೀರನಗೆರೆ ಪ್ರದೇಶದ ಹುಟ್ಟುವಳಿ ಯನ್ನು ಅದಕ್ಕೆ ಬಿಟ್ಟುಕೊಟ್ಟಿರುವುದನ್ನು ಉಲ್ಲೇಖಿಸುತ್ತದೆ. ಅರಸ ತನಗೆ ಮಾಡಿದ ಮಹತ್ಕಾರ್ಯಕ್ಕೆ ಅಲ್ಪ ಕಾಣಿಕೆಯೇನೋ ಎಂಬಂತೆ ಆತನ ತಾಯಿಗೆ ಪುಣ್ಯವಾಗಲೆಂದು

ಈ ಅಗ್ರಹಾರವನ್ನು ನಿರ್ಮಿಸಿದ್ದಾರೆ. ಹಾಗಾಗಿ ಮೈಸೂರು ಅರಸರು ಉಮ್ಮತ್ತೂರಿನೊಂದಿಗೆ ವೈರತ್ವ ಸಾಧಿಸುವುದರ ಗಹನತೆ ತಿಳಿದು ಬರುವುದಿಲ್ಲ. ಈ ವೈರತ್ವದ ಎಳೆಯನ್ನು ಹುಡುಕುತ್ತಾ ಉಮ್ಮತ್ತೂರಿನ ನಾಯಕರು ಮತ್ತು ಮೈಸೂರು ಅರಸರ ಪ್ರಾರಂಭಿಕ ಅರಸರ ಹೆಸರುಗಳಲ್ಲಿನ ಸಾಮ್ಯತೆ ಮತ್ತು ಸಂಸ್ಕೃತಿಗಳ ಸಾಮ್ಯತೆಯನ್ನಾಧರಿಸಿ ಉಮ್ಮತ್ತೂರಿನ ಮೂಲವನ್ನು ಹುಡುಕಲಾರಂಭಿಸಿದೆ.

ಒಂದು ಹಂತದಲ್ಲಿ 'ಹುರ'ದ ನಾಯಕರಿಗೂ, ಉಮ್ಮತ್ತೂರಿನ ನಾಯಕರಿಗೂ ಇರುವ ಸಂಬಂಧ ಖಚಿತವಾಗುತ್ತದೆ. *ಮೈಸೂರು ಗೆಜೆಟಿಯರ್* ಹೇಳುವಂತೆ ಹುರದ ನಾಯಕರ ವಂಶಾವಳಿ ಇಮ್ಮಡಿ ರಾಯನಿಂದ ಪ್ರಾರಂಭವಾಗುತ್ತದೆ. ಈತ ಉಮ್ಮತ್ತೂರಿನ ರಾಜನೆಂಬುದು ಶ್ರೀ ಸೀತಾರಾಮ ಜಾಗೀರ್‌ದಾರ್, ಡಾ. ಬಿ. ಆರ್. ಗೋಪಾಲ್, ಶ್ರೀ ಹಯವದನ ರಾವ್, ಆರೋಕಿಯ ಸ್ವಾಮಿಯವರ ಉಲ್ಲೇಖಗಳಿಂದ ಮತ್ತು *ಎಪಿಗ್ರಾಫಿಯ ಸಂಪುಟ*ಗಳಿಂದ ಖಚಿತವಾಗುತ್ತದೆ. ಹುರದ ನಾಯಕರಿಗೂ, ಮೈಸೂರು ಅರಸರಿಗೂ ವೈವಾಹಿಕ ಸಂಬಂಧವಿದ್ದುದನ್ನು "ಕಂಠೀರವ ನರಸರಾಜ ವಿಜಯಂ" ಉಲ್ಲೇಖಿಸುತ್ತದೆ. ಅಂದ ಮೇಲೆ ಇವರಿಬ್ಬರ ನಡುವಿನ ವೈರತ್ವದ ಸೆಲೆ ಕಾಣುವುದಿಲ್ಲ. ಈ ಹಂತದಲ್ಲಿ ಉಮ್ಮತ್ತೂರಿನ ನಾಯಕರ ಮೂಲ ಪುರುಷರ ಹೆಸರಿನಲ್ಲಿ ಉಂಟಾಗಿರುವ ಗೊಂದಲವೊಂದು ನಮ್ಮ ಗಮನ ಸೆಳೆಯುತ್ತದೆ. ಶ್ರೀ ಜಾಗೀರ್‌ದಾರ್ ಅವರು ಹೇಳು ವಂತೆ ಪೆಸಾಳಿ ಹನುಮ ಉಮ್ಮತ್ತೂರು ನಾಯಕರ ಮೂಲಪುರುಷ. ಪ್ರಾರಂಭಿಕ ಉಮ್ಮತ್ತೂರಿನ ನಾಯಕರು ಗಜಬೇಂಟಕಾ, ಪೆಸಾಳಿ ಹನುಮ, ಜವಾದಿ ಕೋಲಾಹಲ ಮುಂತಾದ ಬಿರುದುಗಳನ್ನು ಹೊಂದಿದ್ದು ಅವರ ಶಾಸನಗಳಿಂದ ಖಚಿತವಾಗುತ್ತದೆ. ಆದರೆ ಪೆಸಾಳಿ ಹನುಮನೆಂದರೆ ಸ್ವಾಮಿ ಕಾರ್ಯ ನಿರ್ವಹಣೆಯಲ್ಲಿ ಹನುಮಂತಿರುವವನು ಎಂದು *ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು* ಹೇಳುತ್ತದೆ.

ಉಮ್ಮತ್ತೂರಿನ ಮೂಲವನ್ನು ಗುರುತಿಸುತ್ತಾ ಶ್ರೀ ಜಾಗೀರ್‌ದಾರ್ ಕೆಂಬಾವಿಯ ಶಾಸನದಲ್ಲಿ ಬರುವ "ಹೊನಗುಂದ ನಾಮಗ್ರಾಮ ಮಹಾಪ್ರಭು ಪೆಸಣೆ ಹನುಮಂತ ಚಾಧರೆಯಸೋಜ ನಾಚಯ್ಯಕಲಿ ದೇವಲಬ್ಧವರಪ್ರಸಾದಿ ಮಹದೇವಶ್ರೇಷ್ಠಿ ಸೂನು ನಿಸಿದ್ಧಿಕಾದ್ಯನೇಕ ಗುಣಗಣಾಲಂಕೃತನ" ಈ ಮೇಲಿನ ಉಲ್ಲೇಖದಲ್ಲಿನ ಪೈಕಿ ಹನುಮ ಚೌಧರೆಯನ್ನು ಉಮ್ಮತ್ತೂರು ವಂಶಾವಳಿಯ ಹನುಮಪ್ಪ ಒಡೆಯನೊಂದಿಗೆ ಸಮೀ ಕರಿಸಿ ಪೆಸಣೆ ಹನುಮಂತ (ಚೌಧರಿ)ಕ್ರಿ. ಶ. 1340ರ ಕಾಲದವನೆಂದು ಗುರುತಿಸ ಲಾಗುತ್ತದೆ. ಪೆಸಣೆ ಹನುಮಂತನ ಪ್ರಾಚೀನತೆಯನ್ನು ಗಮನಿಸಿದಾಗ 11ನೆಯ ಶತಮಾನ ದಲ್ಲಿಯೇ ವಿಶಿಷ್ಟ ಬಿರುದಾಗಿ ಬಳಕೆಯಾಗಿರುವ ಉಲ್ಲೇಖಗಳು ಉಪಲಬ್ಧವಿವೆ. ಜಯಸಿಮ್ಹದೇವ ಪೇಸಣ ಹನುವನ್ತ (*MAR* 1929,pp.53-65, 1081), ಚಾಲುಕ್ಯ 2ನೆಯ ಜಗದೇಕ ಮಲ್ಲನ ಹಿರೇಹಳ್ಳಿಯ ಶಾಸನದಲ್ಲಿ ಜಗದೇಕಮಲದೇವ ಪೇಶಣ ಹಾನ್ಮನ್ತರಪ್ಪ ಶ್ರೀ ಮಹಾಪ್ರಧಾನಂ ಕನ್ನಡ ಸಂಸ್ಥಿವಿಗ್ರಹಿ ಪಿರಿಯ ದಂಣ್ಣನಾಯ...

ಎಂದು ಉಲ್ಲೇಖಿಸಲ್ಪಟ್ಟಿದೆ (*KI* Vol IV : II -4 ; Circa 12th Century). ಇಲ್ಲಿ ಸಹ ಪೇಶಣ ಹನುಮನ್ತ ಬಿರುದಾಗಿ ಉಲ್ಲೇಖಿತವಾಗಿದೆ. ಗದಗ ತಾಲೂಕು ಕುರ್ತಕೋಟಿಯ ಕಲ್ಯಾಣಿ ಚಾಲುಕ್ಯ ತ್ರಿಭುವನ ಮಲ್ಲದೇವನ (ವಿಕ್ರಮಾದಿತ್ಯ VI)ಶಾಸನದಲ್ಲಿ ಆ ಸಾಗರಮಂ ದಾಂಡಿ ಮಹೀಸುತೆಯಣ ಕಣ್ಡು ಲಂಕೆಯಂ ಸುಟ್ಟ ಮಹಾಸಾಸಿಗವೆನಲಿನ್ನೂರ್ವರ ಪೇಸಣ ಹನುಮಂತನೆನಿಪ ನಾವಿದ ದಾಸ ಎಂಬಲ್ಲಿ ಕೂಡ ಪೇಸಣ ಹನುಮನ ಉಲ್ಲೇಖವಿದೆ. (*SII* Vol. XI, Pt I, II, P. 154-157, 7th August, 1087 AD).

ಕ್ರಿ. ಶ. 1223 ರ ಚನ್ನರಾಯಪಟ್ಟಣ ತಾಲೂಕಿನ ಶಾಸನದಲ್ಲಿ ಕಡುಗಲಿ ದಣ್ಣ ನಾಥವಿಕನಾತ್ಮಜ ಪೇಷಣ ಹಣ್ (ಣು) ಮ ಬಲ್ಲಿಗನ್ಮತ್ತು ಕ್ರಿ. ಶ. 1225 ಕ್ಕೆ ಸಂದುವ ಹೊಳಲ್ಕೆರೆಯ ಶಾಸನದಲ್ಲಿ ಪೇಸಾಣೆ ಹನುಮ ಮೋಹರ ಮುರಾರಿ ಎಂಬ ಉಲ್ಲೇಖಗಳು ಉಪಲಬ್ಧವಿದೆ. ಕ್ರಿ. ಶ. 1226 ರ (ಕೂಡಲಗಿ ತಾ. ಬಳ್ಳಾರಿ ಜಿಲ್ಲೆ) ಹೊಯ್ಸಳ ರಾಜ ಮೂರನೇ ವೀರ ನರಸಿಂಹ ಶಾಸನದಲ್ಲಿ ಮೊನೆಯೊಳು ಮತ್ತರಖಳ್ಗಂ ಮನೆಯೊಳು ಮನು ಮಂತ್ರಸಿದ್ಧಸಂಕಟದೊಳು ಮತ್ತಮವೆನಿಪ ಪತಿಹಿತಂ ರಾಯನೃಸಿಂಹನನಚಿನಚ್ಚು ಪೇಸಣ ಹನುಮಂ || (*SII* IX : i ; 343-11, 1226 AD) , ಪೇಸಣ ಹನುಮ, ಪೇಷಣ ಹನುಮ, ಪೇಸಣಿ ಹನುಮ, ಪೆಸಾಣಿ ಹನುಮ, ಪೇಸಾಳಿ ಹನುಮ ಮುಂತಾದ ಪದಪ್ರಯೋಗ ಬಳಕೆಯಲ್ಲಿದೆ. ಕ್ರಿ. ಶ. 1291ರ ಕಡೂರು ತಾಲೂಕು, ಬಾಣೂರು ಅಗ್ರಹಾರದ ಶಾಸನದಲ್ಲಿ ರಾಯದಂತನಾಥ ಪಸಣಿ ಹನುಮ ಶ್ರೀಮನುಮಹಾಪಸಾಯಿಕರುಮಪ್ಪ ಎಂದು ಉಲ್ಲೇಖಿಸಿದೆ. (*EC*, XII : ಕಡೂರು 127) ಪೆಸಾಳಿ ಹನುಮನ ಬಗೆಗಿನ ಈ ಉಲ್ಲೇಖಗಳನ್ನು ಗಮನಿಸಿದಾಗ ಅದು ನಿಶ್ಚಯವಾಗಿ ಬಿರುದಾಗಿ ಬಳಸಲ್ಪಟ್ಟ ಖಚಿತ ಉಲ್ಲೇಖಗಳಿವೆ ಎಂದ ಮೇಲೆ ಕೆಂಬಾವಿಯ ಪೆಸಣಿ ಹನುಮನಿಗೂ ಪ್ರಾಚೀನ ಶಾಸನಗಳಲ್ಲಿನ ನಾವಿದದಾಸ ಪೆಸಾಳಿ ಹನುಮ, ಕನ್ನಡ ಸಂಧಿವಿಗ್ರಹ ಪೆಸಾಳಿ ಹನುಮ ಮತ್ತು ಇತರರನ್ನು ಕೇವಲ ಬಿರುದನ್ನಾಧರಿಸಿ ಸಮೀಕರಿಸಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಕೆಂಬಾವಿಯ ಪೆಸಣಿ ಹನುಮಂತ ಬಿರುದಾಂಕಿತ ಹುನಗುಂಟೆ ಗ್ರಾಮ ಪ್ರಭು ಪೆಸಣಿ ಹನುಮಂತ ಚೌಧರಿ ಯವರನ್ನು ಸಹ ಉಮ್ಮತ್ತೂರು ನಾಯಕರು ಮೂಲ ಪುರುಷರಾದ ಹನುಮಪ್ಪ ಒಡೆಯರೊಂದಿಗೆ ಸಮೀಕರಿಸಲು ಸಾಧ್ಯವಿಲ್ಲ. ಕಾರಣ ಕೆಂಬಾವಿ ಶಾಸನದ ಇತರ ಯಾವ ಅಂಶಗಳು ನಮ್ಮನ್ನು ಈ ದಿಸೆಯಲ್ಲಿ ಚಿಂತಿಸುವಂತೆ ಮಾಡುವುದಿಲ್ಲ. ಅಲ್ಲದೇ ಪೆಸಣಿ ಹನುಮಂತ ಚೌಧರೆ ಮತ್ತು ಉಮ್ಮತ್ತೂರಿನ ನಾಯಕ ಒಂದೇ ಚಿಕ್ಕರಾಯನ ನಡುವಿನ ಸಂಬಂಧ ತಿಳಿದು ಬರುವುದಿಲ್ಲ. ಉಮ್ಮತ್ತೂರು ನಾಯಕರ ಬೇರೆ ಯಾವ ಪ್ರಶಸ್ತಿಗಳೂ ಕೆಂಬಾವಿಯ ಶಾಸನದಲ್ಲಿ ಉಪಲಬ್ಧವಿಲ್ಲ. ಶ್ರೀ ಜಾಗೀರ್‌ದಾರರು ಉಲ್ಲೇಖಿಸಿರುವ 'ಗುರುದೇವ' ಪತ್ರಿಕೆಯವರು ಪ್ರಕಟಿಸಿರುವ ಶಾಸನ ಪಾಠಕ್ಕೂ, ಶ್ರೀಮತಿ ಹನುಮಾಕ್ಷಿ ಗೋಗಿಯವರು 'ಸುರಪುರ ತಾಲೂಕಿನ ಶಾಸನಗಳು' ಗ್ರಂಥದಲ್ಲಿ ಪ್ರಕಟಿಸಿರುವ ಶಾಸನ ಪಾಠಕ್ಕೂ ವ್ಯತ್ಯಾಸವಿದೆ. ಹೊನಗುಂಟಿ ನಾಮ ಗ್ರಾಮ ಮಹಾಪ್ರಭು ಪೆಸಣಿ ಹನುಮಂತ ಚೌಧರೆಯ

ಸೋಭನಾಭಯ್ಯಕಳು ಎಂದು ಸೀತಾರಾಮ ಜಾಗೀರ್‌ದಾರ್ 'ಗುರುದೇವ' ಪತ್ರಿಯನ್ನಾಧರಿಸಿ ಪ್ರಕಟಿಸಿದ್ದಾರೆ. ಗೋಗಿಯವರು ಹೊನಗುಂದ ಸಾಮಗ್ರಾಮ ಮಹಾ ಪ್ರಭು ಬಿಸಣಿ ಹನುಮಂತ ಚೌಧರೆಯಸೋಜನಾಚಯ್ಯ ಕಲಿದೇವ ಲಬ್ಧ ವರಪ್ರಸಾದಿ ಎಂದು ಓದಿದ್ದಾರೆ. ಟಿಪ್ಪಣಿಯನ್ನು ಕೊಡುವ ಸಂದರ್ಭದಲ್ಲಿ ಬಿಸಣಿ ಹನುಮಂತ ಚೌಧೊರೆ ಎಂದು ಉಲ್ಲೇಖಿಸುತ್ತಾರೆ. ಈ ಎರಡು ಉಲ್ಲೇಖಗಳಲ್ಲೂ ಒಂದು ಅಂಶ ವನ್ನು ಗಮನಿಸಬೇಕಾದ್ದೇನೆಂದರೆ ಚೌಧರೆಯ ನಂತರ ಬರುವ ವ್ಯಕ್ತಿ ನಾಮ. ಗೋಗಿಯವರು ಸೋಜನಾಚಯ್ಯನೆಂದು ಉಲ್ಲೇಖಿಸಿದರೆ 'ಗುರುದೇವ' ಪತ್ರಿಕೆಯಲ್ಲಿ 'ಸೋಭನಾಭಯ್ಯಕಳು' ಎಂದಿರುವುದು. ಅಂದರೆ ಶಾಸನವನ್ನು ಈ ರೀತಿ ವ್ಯಾಖ್ಯಾನಿಸ ಬಹುದು. ಹೊನಗುಂಟಿ ಗ್ರಾಮದ ಮಹಾಪ್ರಭು ಪೆಸಣಿ ಹನುಮಂತ ಚೌಧರೆ ಅಥವಾ ಚಾಧೊರೆ ಅಂದರೆ ಚಾಧರೆ ಚೌಧರೆಯಾಗಿ ಅನಂತರದ ದಿನಗಳಲ್ಲಿ ಮಾರ್ಪಾಡಾಗಿರ ಬಹುದು. ಅಥವಾ ಚಾಧರೆ ಅಂದರೆ ನಾಲ್ಕು ಧರೆಗಳ ಒಡೆಯನೆಂದೋ ಅಥವಾ ಆ ಪದ ಚಾಧರೆ ಸ್ಥಳ ನಾಮವನ್ನು ನಿರ್ದೇಶಿಸುತ್ತಿರಬಹುದು. ಹೀಗೆ ಅರ್ಥೈಸಿದಾಗಲೂ ಪೆಸಣಿ ಹನುಂತನಿಗೂ, ಉಮ್ಮತ್ತೂರಿನ ಹನುಮಪ್ಪ ನಾಯಕನಿಗೂ ಸಂಬಂಧವೇರ್ಪಡಿಸ ಲಾಗುವುದಿಲ್ಲ.

ಪೇಷಣದ ಸಂಸ್ಕೃತದ ಮೂಲ ಪದದಿಂದ ಪೇಷದಿಂದ ಉತ್ಪತ್ತಿಯಾಗಿದೆ. ಪೇಷ -ಪೇಷಣ ಎಂದರೆ ಅರೆಯುವುದು, ಪುಡಿ ಮಾಡುವುದು, ಬೀಸುವುದು ಹಾಗೂ ಹಿಟ್ಟು ಮಾಡುವುದು ಮುಂತಾದ ಅರ್ಥಗಳನ್ನು ಹೊಂದಿದೆ (*ಸಂಸ್ಕೃತ ನಿಘಂಟು*, ಗೀತಾ ಬುಕ್ ಹೌಸ್, ಮೈಸೂರು - 2006) ಹನುಮಂತನಂತೆ ಶತ್ರುಗಳನ್ನು ನಾಶಮಾಡಿದವನು ಎನ್ನುವ ಅರ್ಥದಲ್ಲಿ ಪೇಷಣ ಹನುಮ ಬಳಕೆಗೆ ಬಂದಿದೆ. ಪೇಷಣದ 'ಷ'ಕಾರ 'ಸ'ಕಾರವಾಗಿ 'ಶ'ಕಾರವಾಗಿ ಸಹ ಬಳಸಲ್ಪಟ್ಟಿದೆ. ಅಲ್ಲದೆ 'ವ'ಕಾರ 'ಬ'ಕಾರ ಸಹ ಪ್ರಯೋಗವಾಗಿದೆ. ಉದಾಹರಣೆಗೆ ಪೇಸಣ ಹನುಮ, ಪೇಷಣ ಹನುಮ, ಪೇಸಣ ಹನುಮ, ಪೇಸಣಿ ಹನುಮ ಮತ್ತು ಪೇಸಾಳಿ ಹನುಮ.

ಪೇಷಣ ಹನುಮ ಎರಡು ಪದಗಳಿಂದಾದ ಬಿರುದು. ಪೇಷಾಣ ವೀರತನವನ್ನು, ಶೌರ್ಯವನ್ನು ಸಂಪಾದಿಸಿದರೆ ಹನುಮ ಪದ ಸ್ವಾಮಿನಿಷ್ಠೆಯನ್ನು, ರಾಜಭಕ್ತಿಯನ್ನು ಸೂಚಿಸುತ್ತದೆ. ಅಂದ ಮೇಲೆ ಶತ್ರುಗಳನ್ನು ಹನುಮಂತನಂತೆ ಪುಡಿಮಾಡುವ ಸ್ವಾಮಿನಿಷ್ಠ ಸೇವಕನೆನಿಸುತ್ತದೆ. ಕುರ್ತಕೋಟಿಯ ಶಾಸನದಲ್ಲಿನ ನಾವಿದ ದಾಸ ಪೆಸಾಣಿ ಹನುಮ ನೆಂಬ ಬಿರುದು ಧರಿಸಿದ್ದನು. ಅದರ ಪೂರ್ವದಲ್ಲಿ ಆತ ಮಹಾ ಸಾಹಸಿಗರಾದ ಇನ್ನೂರು ಜನರನ್ನು ಸದೆಬಡಿಯುವ ಸಾಮರ್ಥ್ಯ ಹೊಂದಿದ್ದನೆಂದು ಸೂಚಿಸುವ ಮಹಾಸಾಸಿ ಗಳನೆನ್ನಲಿನ್ನೂರ್ವರ ಪೇಸಣ ಹನುಮಂತನೆನಿಪ ಎಂದಿರುವುದು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವಾಗಿದೆ. ಹಿರೇಹಳ್ಳಿಯ ಶಾಸನದಲ್ಲಿ ಮಹಾಪ್ರಧಾನ ಕನ್ನಡ ಸಂಧಿ ವಿಗ್ರಹಿ ಗೆ ಪೇಷಣಹಾನ್ಮಂತ ಎಂಬ ಬಿರುದಿರುವುದರಿಂದ ಆತ ಕೆಲವು ಮಾತಿ ನಿಂದಲೇ

ವಿರೋಧಗಳನ್ನು ಗೆಲ್ಲುವುದರ ಮೂಲಕ ತನ್ನ ಸ್ವಾಮಿನಿಷ್ಠೆಯನ್ನು ತೋರಿಸು ತ್ತಿದ್ದನೆಂಬ ಅರ್ಥದಲ್ಲಿ ಈ ಪದ ಬಳಕೆಯಾಗಿರುವುದಾಗಿ ತೋರುತ್ತದೆ. ಈ ಎಲ್ಲ ದಾಖಲೆಗಳು ನಮಗೆ ಉಮ್ಮತ್ತೂರಿನ ನಾಯಕರುಗಳನ್ನು ಕೆಂಬಾವಿ ಶಾಸನದ ಪೆಸಣಿ ಹನುನನೊಂದಿಗೆ ಸಮೀಕರಿಸಲು ಸಾಧ್ಯವಾಗುವ ಕುರುಹುಗಳನ್ನು ನೀಡುವುದಿಲ್ಲ.

ಉಮ್ಮತ್ತೂರು ನಾಯಕರ ರಾಜ್ಯ ವ್ಯಾಪ್ತಿ, ಅವರು ಅಧಿಕಾರಕ್ಕೆ ಬಂದ ಕಾಲ ಇತ್ಯಾದಿಗಳ ಹಿನ್ನೆಲೆಯಲ್ಲಿ ಇದನ್ನು ಮತ್ತೊಮ್ಮೆ ಪರಿಶೀಲಿಸುವುದು ಅವಶ್ಯಕ. ಒಟ್ಟಿನಲ್ಲಿ ಉಮ್ಮತ್ತೂರು ನಾಯಕರಿಗೂ, ಕೆಂಬಾವಿ ಶಾಸನದ ಪೆಸಣಿ ಹನುಮನಿಗೂ ಯಾವುದೇ ಸಂಬಂಧವಿಲ್ಲ. ಉಮ್ಮತ್ತೂರಿನ ನಾಯಕರು ವಿಜಯನಗರದ ಸಂಸ್ಥಾನದಲ್ಲಿ ಸಾಮಾನ್ಯ ಆಡಳಿತಗಾರರಾಗಿ ತಮ್ಮ ಆಡಳಿತವನ್ನು ಪ್ರಾರಂಭಿಸಿ ಪೆನುಗೊಂಡೆಯವರೆಗೆ ವಿಶಾಲ ರಾಜ್ಯವನ್ನು ತಮ್ಮದಾಗಿಸಿಕೊಂಡು ವಿಜಯನಗರದ ಅರಸರಿಗೆ ಕಂಟಕಪ್ರಾಯರಾದರು. ಮತ್ತೆಂದೂ ಅವರು ವಿಜಯನಗರ ಸಾಮ್ರಾಜ್ಯಕ್ಕೆ ಆಪ್ತರಾಗಲೇ ಇಲ್ಲ.

೧೭. ದೇವರಾಯಪುರಗಳು

ಸುಂಕಂ ಗೋವರ್ಧನ

ವಿಜಯನಗರದ ಅರಸು ಮನೆತನಗಳಲ್ಲಿ ಸಂಗಮ ವಂಶದ ಎರಡನೆಯ ದೇವರಾಯನು ಸಾಹಿತ್ಯಕ, ಸಾಂಸ್ಕೃತಿಕ ಹಾಗೂ ರಾಜಕೀಯವಾಗಿ ಅತ್ಯಂತ ಪ್ರಸಿದ್ಧ ಹಾಗೂ ಪರಿಣಾಮ ಕಾರಿ ಅರಸ. ವಿಜಯರಾಯ ಹಾಗೂ ನಾರಾಯಣಾಂಬಿಕೆಯ ಮಗನಾಗಿ ಜನಿಸಿದ ಈತ ೧೪೨೪ ರಲ್ಲಿ ಚಕ್ರವರ್ತಿಯಾಗಿ ತನ್ನ ತಂದೆಯ ಸಿಂಹಾಸನಕ್ಕೆ ಬಂದನು. ಇವನನ್ನು ಶಾಸನಗಳು ಶ್ರೀಮನ್ಮಹಾರಾಜಾಧಿರಾಜ, ರಾಜಪರಮೇಶ್ವರ, ಗಜಬೇಂಟೆಕಾರ, ಮೂರು ರಾಯರ ಗಂಡ, ಪೂರ್ವಪಶ್ಚಿಮ ಸಮುದ್ರಾಧಿಪತಿ, ಇಳಿಂತಿರೈಕೊಂಡ, ಪರರಾಯ ಭಯಂಕರ, ಹಿಂದೂರಾಯ ಸುರತ್ರಾಣ ಮುಂತಾದ ಬಿರುದುಗಳಿಂದ ಹೊಗಳಿವೆ. ಈತನು ತನ್ನ ಕಾಲದಲ್ಲಿ ಬಹುಮನಿ ಸುಲ್ತಾನರೊಡನೆ, ಕಳಿಂಗದ ಅರಸರೊಂದಿಗೆ, ಸಿಂಹಳ ತೆಲಂಗಾಣ, ಕೇರಳ ಮುಂತಾದ ಭಾಗಗಳ ಮೇಲೆ ಪರಾಕ್ರಮದಿಂದ ಹೋರಾಡಿದ.

ದೇವರಾಯ ಮಹಾರಾಯನು ೧೪೨೪ರಲ್ಲಿ ಪಟ್ಟಕ್ಕೆ ಬಂದು ೧೪೪೬ರಲ್ಲಿ[1] ನಿಧನವಾಗುವರೆಗೂ ನಾಡಿನ ಸಂಸ್ಕೃತಿಯ ವಿಷಯದಲ್ಲಿ ಅತ್ಯಂತ ಆಸ್ಥೆಯನ್ನು ವಹಿಸಿದ್ದನು. ಆದರೆ ಈತನು ತನ್ನ ತಾತನಾದ ದೇವರಾಯ- ೧ ನೇ ಕಾಲದಿಂದಲೇ ಯುವರಾಜನಾಗಿ ಅಧಿಕಾರದಲ್ಲಿ ಇದ್ದುದಕ್ಕೆ ದ. ಕ. ಜಿಲ್ಲೆಯ ಮಂಗಳೂರು ತಾಲ್ಲೂಕಿನ ಪಾವಂಜೆಯ ಮಹಾಲಿಂಗೇಶ್ವರ ದೇವಾಲಯದಲ್ಲಿರುವ ಕ್ರಿ. ಶ. ೧೪೧೨ರ ಏಪ್ರಿಲ್ ೨೬ ರ ಶಾಸನವೇ ಸಾಕ್ಷಿಯಾಗಿದೆ. [2] ಮೊದಲನೆಯ ದೇವರಾಯ ಹಾಗೂ ತಂದೆಯಾದ ವಿಜಯರಾಯನ ಕಾಲದಲ್ಲಿ ಅಂದರೆ ಕ್ರಿ. ಶ. ೧೪೧೭ ರಿಂದಲೇ ಈತನು ಅಧಿಕಾರದಲ್ಲಿದ್ದನು. ನಂತರ ೧೪೨೪ ರಲ್ಲಿ ಚಕ್ರವರ್ತಿಯಾದನು.

ದೇವರಾಯನು ಶುದ್ಧಶೈವನಾಗಿ ಅನೇಕ ಬ್ರಾಹ್ಮಣರಿಗೆ, ಜೈನರಿಗೆ, ವೀರರಿಗೆ ವ್ಯಾಪಾರಸ್ಥರಿಗೆ, ಪ್ರವಾಸಿಗಳಿಗೆ ಅನೇಕ ದಾನದತ್ತಿಗಳನ್ನು ನೀಡಿದ್ದಾನೆ. ಅನೇಕರಿಗೆ ಹಲವಾರು ಊರುಗಳನ್ನು ದಾನ ನೀಡಲಾಗಿದೆ. ಕೆಲವರಿಗೆ ಊರಿನ ಭಾಗಗಳನ್ನು ಉಂಬಳಿಯಾಗಿ ನೀಡಲಾಗಿದೆ. ಕೆಲವು ವಿಶೇಷ ಸಂದರ್ಭಗಳಲ್ಲಿ ಅನೇಕರಿಗೆ ನಾಡಿನ ಬಗ್ಗೆ, ಪ್ರಭುತ್ವದ ಬಗ್ಗೆ, ಸಂಸ್ಥಾನದ ಬಗ್ಗೆ ನಿಷ್ಠೆಯುಳ್ಳವರನ್ನು ಗುರುತಿಸಿ, ನಾಡಿಗಾಗಿ ಪ್ರಾಣತೆತ್ತವರಿಗಾಗಿ ಅನೇಕ ದಾನ ದತ್ತಿಗಳನ್ನು ನೀಡಲಾಗಿದೆ. ಈ ರೀತಿಯ ದಾನಗಳಲ್ಲಿ ಅತ್ಯಂತ ವಿಶೇಷವಾದದ್ದೆಂದರೆ ತನ್ನ ಹೆಸರಿಗೆ ಪ್ರತಿನಾಮಧೇಯವಾದ ದೇವರಾಯ

ಪುರ, ಪ್ರತಾಪದೇವರಾಯಪುರ, ಪ್ರೌಢರಾಯಪುರ, ಪ್ರೌಢಪ್ರತಾಪರಾಯಪುರ, ತ್ರಯಂಬಕಪುರ ಎಂದು ಹಲವಾರು ಗ್ರಾಮಗಳಿಗೆ ಹೆಸರಿಟ್ಟು ಅಗ್ರಹಾರಗಳನ್ನಾಗಿ ಪರಿವರ್ತಿಸಿ ವೇದವಿದರೂ,ವೈದಿಕ ಜ್ಞಾನ ಸಂಪತ್ತನ್ನು ಹೊಂದಿದ ಬ್ರಾಹ್ಮಣರಿಗೆ ನೀಡಿದ ದಾನವೇ ಆಗಿದೆ.

ಕ್ರಿ. ಶ. ೧೪೨೨ರ ನವೆಂಬರ್ ೧೨ರ ಗುರುವಾರದಂದು ಹಾಕಲಾಗಿರುವ ಆಂಧ್ರದ ಕಡಪ ಜಿಲ್ಲೆಯ ಕಾಮಲಾಪುರಂ ತಾಲ್ಲೂಕಿನ ಪೆದ್ದ ಚಪ್ಪಲ್ಲಿಯ ಶಾಸನವು [೬] ಈವರೆಗೆ ನಮಗೆ ಸಿಕ್ಕಿರುವ ದೇವರಾಯನ ಶಾಸನಗಳಲ್ಲಿ ಪ್ರೌಢರಾಯಪುರವೆಂದು ನಾಮಕರಣ ಮಾಡಿರುವ ಮೊದಲ ಶಾಸನ. ಈ ಶಾಸನದ ಪ್ರಕಾರ ಉದಯಾಚಲ (ಉದಯಗಿರಿ) ರಾಜ್ಯದ ತುಮುಕಿನಾಡಿನ ನಂದಿಗೊಂಟಸ್ಥಳದ ಚಪ್ಪಲ್ಲಿ ಸಮೀಪದ ಜೊಯಪುರವನ್ನು ಪ್ರೌಢರಾಯಪುರ ಎಂದು ಪ್ರತಿನಾಮಕರಣ ಮಾಡಿ ಅಗ್ರಹಾರವನ್ನಾಗಿ ಪರಿವರ್ತಿಸಿ ಯಜುರ್ವೇದಿಗಳಾದ ಷಡಂಗವಿದರಾದ ಶ್ರೀವತ್ಸಗೋತ್ರದ ಆದಿತ್ಯ ಭಟ್ಟನಿಗೆ, ಕಾಶ್ಯಪಗೋತ್ರದ ಗಂಗಾಧರನಿಗೆ, ಹಾರಿತಿ ಗೋತ್ರದ ಅಮರೇಶ ಯಜುರ್ವೇದಿಗೆ, ಮಾಧವ, ಲಕ್ಷ್ಮಣಾರ್ಯರಿಗೆ ವೃತ್ತಿಗಳನ್ನು ವಿಂಗಡಿಸಿ ವಿವರವಾದ ಗಡಿಮೇರೆಗಳನ್ನು ಗುರುತಿಸಿ ದಾನ ನೀಡಿದ್ದಾನೆ.

ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ವೆಂಕಟಾಪುರದಲ್ಲಿದ್ದ ತಾಮ್ರಶಾಸನವು [೭] ಕ್ರಿ. ಶ. ೧೪೨೬ ರ ಡಿಸೆಂಬರ್ ೧೫ ರದ್ದು. ಪೆನುಗೊಂಡೆ ರಾಜ್ಯದ ಮೊರ್ಜವಾಡ ಸ್ಥಳದಲ್ಲಿದ್ದ ಬನಿರೆರು ಗ್ರಾಮವನ್ನು ದೇವರಾಯಪುರವೆಂದು ಹೆಸರು ಬದಲಿಸಿ ನಾನಾಗೋತ್ರದ ನಾನಾ ಬ್ರಾಹ್ಮಣರಿಗೆ ವೃತ್ತಿಗಳನ್ನು ವಿಂಗಡಿಸಿ ಅವರಲ್ಲಿ ಪ್ರಧಾನವಾದ ದೇಚಾರ್ದ್ಯಾರಿಗೆ ಮಕರಸಂಕ್ರಮಣದ ದಿನದಂದು ಸರ್ವಮಾನ್ಯವಾಗಿ ನೀಡಲಾಗಿದೆ.

ತುಮಕೂರು ಜಿಲ್ಲೆಯ ದೇವರಾಯನ ಪ್ರಥಮ ಶಾಸನ ೧೪೨೭ರ ಏಪ್ರಿಲ್ ೨೨ ಸೋಮವಾರದ್ದು. [೮] ಇದೇ ತಾಲ್ಲೂಕಿನ ಸತ್ಯಮಂಗಲದ ಶಾಸನದ ಪ್ರಕಾರ ತುಂಗಭದ್ರಾ ನದೀ ತೀರದ ವಿರೂಪಾಕ್ಷನ ಸನ್ನಿಧಿಯಲ್ಲಿ ನೀಡಲಾದ ಮಹಾದಾನ ಸಮಯದಲ್ಲಿ ಘನಶೈಲ ಮಹಾರಾಜ್ಯರ ಆನೆಬಿದ್ದ ಸರಸೀಮನಿ ಮೊರ್ತ್ತಗಲ್ಲು ನಾಡಿನ ಸತ್ಯಮಂಗಲ ಎಂಬ ಗ್ರಾಮವನ್ನು ಅಗ್ರಹಾರವನ್ನಾಗಿ ಮಾಡಿ ದೇವರಾಯಪುರ ಎಂದು ಪ್ರತಿನಾಮಕರಣ ಮಾಡಿ ೬೪ ವೃತ್ತಿಗಳನ್ನಾಗಿ ವಿಂಗಡಿಸಿ ಅಮ್ಮಾಜನ ನಾನಾ ಗೋತ್ರದ ಬ್ರಾಹ್ಮಣರಿಗೆ ನೀಡಲಾಗಿದೆ.

ದಾವಣಗೆರೆ ಜಿಲ್ಲೆಯ ಹರಿಹರದ ತಾಮ್ರಶಾಸನವೊಂದು [೯] ಕ್ರಿ. ಶ. ೧೪೨೭ ರ ಡಿಸೆಂಬರ್ ೩೦ ಮಂಗಳವಾರದ್ದು. ಚಂದ್ರಗುತ್ತಿ ರಾಜ್ಯದ ರಟ್ಟೆಹಳ್ಳಿ ಸೀಮೆಗೆ ಸೇರಿದ

ಮಾಕನೂರು ಗ್ರಾಮವನ್ನು ಪ್ರತಾಪ ದೇವರಾಯಪುರ ಎಂದು ಹೆಸರಿಟ್ಟು ಆನಂದರಾಮ ವಿಠಲಾಚಾರ್ಯನ ಮೊಮ್ಮಗನೂ, ದೇವರಾಚಾರ್ಯನ ಮಗನೂ ಆದ ವಿಠಲಾರ್ಯನಿಗೆ ನೀಡಲಾಗಿದೆ.

ಕೋಲಾರ ಜಿಲ್ಲೆಯ ಗುಡಿಬಂಡೆ ತಾಲ್ಲೂಕಿನ ಚೋಳೇನಹಳ್ಳಿಯ ಕ್ರಿ. ಶ. ೧೪೨೯ರ ಆಗಸ್ಟ್ ೧೪ ರ ಶುಕ್ರವಾರದ ಶಾಸನವು [೭] ಪೆನುಗೊಂಡೆ ರಾಜ್ಯದ ರೊದ್ದ ದೇಶದ ತುಂಬೆಕಲ್ಲು ಪ್ರಾಂತ್ಯದ ಹೆಸರಾಂತ ಗ್ರಾಮವಾದ ಚೊಲಿಶೆಟ್ಟಿ ಹಳ್ಳಿಯನ್ನು ದೇವರಾಯ ಮಹಾರಾಯನು ತ್ರಯಂಬಕಪುರ ಎಂದು ಪ್ರತಿನಾಮಕರಣ ಮಾಡಿ ಅಗ್ರಹಾರವನ್ನಾಗಿಸಿ ಕಾಶ್ಯಪಗೋತ್ರದ ಯಜುಶ್ಶಾಖೆಯ ಭುವನಗುರುಗಳಾದ ಶ್ರೀಕ್ರಿಯಾಶಕ್ತಿ ಗುರುಗಳಿಗೆ ಒಂದು ವೃತ್ತಿಯನ್ನು ಸೇರಿ ಅನೇಕ ಬ್ರಾಹ್ಮಣರಿಗೆ ವೃತ್ತಿ ಧರ್ಮಗಳನ್ನು ವಿಂಗಡಿಸಿ ದಾನ ನೀಡಿದ್ದಾರೆ.

ಕ್ರಿ. ಶ. ೧೪೩೦ ರ ಅಕ್ಟೋಬರ್ ೨೮ ರ ಶ್ರೀರಂಗಪಟ್ಟಣದ ಶಾಸನವೊಂದು [೮] ಪ್ರತಾಪ ದೇವರಾಯನು ತೋರಿನಾಡುವೇಂಠೆಯ ಮೇನಾಪುರ ಮಾಗಣೆಯ ಚಂದಿಗಾಲ ಗ್ರಾಮವನ್ನು ಪ್ರತಾಪದೇವರಾಯಪುರವೆಂದು ಮರುಹೆಸರಿಟ್ಟು ತನ್ನ ಸುತ್ತಮುತ್ತಲ ಗ್ರಾಮಗಳಾದ ಬೆಲವಾಡಿ, ನಗುಲನಹಳ್ಳಿ, ತಾಣಪನಹಳ್ಳಿ, ನೆಲಾಪುರ ಗ್ರಾಮಗಳೊಡನೆ ಅನೇಕ ವೃತ್ತಿಗಳಾಗಿ ವಿಂಗಡಿಸಿ ಅನೇಕ ಬ್ರಾಹ್ಮಣರಿಗೆ ದಾನ ನೀಡಲಾಗಿದೆ.

ಕ್ರಿ. ಶ. ೧೪೩೧ ರ ಆಗಸ್ಟ್ ೩೧ ರಂದು ದೇವರಾಯ ಮಹಾರಾಯನ ಆಜ್ಞೆಯಂತೆ ಅವನ ಮಹಾಪ್ರಧಾನಿಯಾದ ಮಂಗಪ್ಪ ದಣ್ಣಾಯಕರ ಮಕ್ಕಳು ಪ್ರತಾಪರಾಯರು ದೇವರಾಯರಿಗೆ ಆಯುಸ್ಸು, ಆರೋಗ್ಯ ಲಭಿಸಲೆಂದು ಸಕನಸಮುದ್ರದ ಊರ ಮುಂದಿನ ಸೋಮೇಶ್ವರ ದೇವರಿಗೆ ಭೂಮಿ ದಾನ ನೀಡಿ, ಶಿವನಸಮುದ್ರಕ್ಕೆ ಕೆಳಗಿರುವ ಯಲಹಂಕ ನಾಡಿನ ದೇವಸಮುದ್ರ ಗ್ರಾಮದ ಕಾಲುವಳ್ಳಿ ವಿರೂಪಾಕ್ಷಪುರವನ್ನು ವಿಜಯದೇವರಾಯ ಪುರ ಎಂದು ಪ್ರತಿನಾಮಕರಣ ಮಾಡಿ ಅಗ್ರಹಾರವನ್ನಾಗಿ ಪರಿವರ್ತಿಸಿ ದೇವರ ಅಂಗರಂಗ ಪೂಜೆಗಾಗಿ ಪಾತ್ರದ ಜನ, ನಟವತಿ ಜನ, ಮದ್ದಳೆಕಾರರು, ಸಿತಾರನ ಜನ, ಉಪಾಂಗದ ಜನ, ಕಂಸಾಳೆ ಜನರಿಗೆ ಎರಡು ಹೊತ್ತು ಅಂಗರಂಗ ಭೋಗವನ್ನು ನಡೆಸಲು ದೇವ ಸಮುದ್ರ ಕೆರೆಯ ಕೆಳಗೆ ಗದ್ದೆಗಳನ್ನು ನೀಡಲಾಗಿದೆ. [೯]

ಆಂಧ್ರದ ಹಿಂದೂಪುರ ತಾಲ್ಲೂಕಿನ ಲೇಪಾಕ್ಷಿಯಲ್ಲಿರುವ ಕ್ರಿ. ಶ. ೧೪೩೪ ರ ಅಕ್ಟೋಬರ್ ೧೪ ಗುರುವಾರದ ಶಾಸನವು [೧೦] ಕಾರ್ತೀಕ ಮಾಸದ ಉತ್ಥಾನ ದ್ವಾದಶಿ ಯಂದು ಉತ್ತರ ಪಿನಾಕಿನಿ ನದೀ ದಂಡೆಯ ಕಲ್ಲೂರು ಗ್ರಾಮವನ್ನು ಪ್ರೌಢರಾಯಪುರ ಎಂದು ಮರು ನಾಮಕರಣ ಮಾಡಿ ಅಲ್ಲಿನ ವೇದ ವಿದ್ವಾಂಸರೂ ಅಶ್ವಲಾಯನ ಸೂತ್ರದ ವಸಿಷ್ಠ ಗೋತ್ರದವರೂ ಆದ ನೃಸಿಂಹಾರಾಧ್ಯರಿಗೆ ದಾನವನ್ನು ನೀಡಲಾಗಿದೆ. ಇದೇ

ಲೇಪಾಕ್ಷಿಯ ಶಾಸನ ಕ್ರಿ.ಶ. ೧೪೪೦ ಫೆಬ್ರುವರಿ ೨ ಮಂಗಳವಾರದಂದು ಗಣಾದ್ರಿರಾಜ್ಯದ ತುಂಬಿಕಲ್ಲು ಸ್ಥಳ ಕೊಟ್ಟೂರು ಗ್ರಾಮವನ್ನು ಪ್ರೌಢದೇವರಾಯಪುರ ಎಂದು ಪ್ರತಿನಾಮಕರಣ ಮಾಡಿ ಬ್ರಾಹ್ಮಣನಾದ ದೇವಣಾರ್ಯನಿಗೆ ದಾನವನ್ನು ನೀಡಿದ್ದನ್ನು ಹೇಳುತ್ತದೆ. [೧೧]

ದೇವರಾಯನ ಬಗೆಗಿನ ಅತ್ಯಂತ ಮಹತ್ವದ ಶಾಸನವೊಂದು ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಗೋವಿನಹಳ್ಳಿಯಲ್ಲಿದ್ದು ಇದರ ಕಾಲ ೧೪೪೫ರ ಏಪ್ರಿಲ್ ೧೮. [೧೨] ಇಮ್ಮಡಿ ದೇವರಾಯನು ಹೃದಯ ರೋಗಿಯಾಗಿದ್ದುದನ್ನು ದಾಖಲಿಸುವ ಈ ಶಾಸನವು ಭಾರದ್ವಾಜ ಗೋತ್ರದ ಮಲ್ಲದೀಕ್ಷಿತನ ಮಗನಾದ ನಾಗನಾಥಾರ್ಯ ಸೂರಿ (ನಾಗಭಟ್ಟ) ಎಂಬ ವೈದ್ಯನು ಕಾಶಿ ಮೊದಲಾದ ತೀರ್ಥಗಳನ್ನು ಸಂದರ್ಶಿಸಿ, ತೀರ್ಥ ಕ್ಷೇತ್ರಗಳಲ್ಲಿ ಲಕ್ಷಸ್ನಾನವನ್ನು ಮಾಡಿ, ಅನೇಕ ಜನ ಬ್ರಾಹ್ಮಣರಿಗೆ ಅನ್ನ ಸಂತರ್ಪಣೆ ಮಾಡಿ ಅನೇಕ ದಾನಗಳನ್ನು ನೀಡಿ ನಿಯಮಾನುಸಾರ ಭಕ್ತಿಯಿಂದ ಆಚರಣೆ ಮಾಡಿ ಹಿಂದಿರುತ್ತಾನೆ.

ಬಂದನಂತರ ವಿದ್ವಾಂಸರೊಡನೆ, ಪಾರಂಪರಿಕ ಶಾಸ್ತ್ರಗಳನ್ನು ಅಭ್ಯಾಸ ಮಾಡಿ ದೇವರಾಯನಿಗೆ ಚಿಕಿತ್ಸೆಯನ್ನು ನೀಡಿ ಗುಣಮುಖನನ್ನಾಗಿಸುತ್ತಾನೆ. ಅರಸನು ಸಂತೋಷದಿಂದ ಚಂದ್ರಮೌಳೇಶ್ವರನ ಸನ್ನಿಧಿಯಲ್ಲಿ ನಾಗಭಟ್ಟನಿಗೆ ವೇಲಾಪುರಿ ಮಹಾಕ್ಷೇತ್ರದ (ಬೇಲೂರು) ಗೋವಹಳ್ಳಿ ಮತ್ತು ಬೊಮ್ಮಹಳ್ಳಿ ಗ್ರಾಮಗಳನ್ನು ದೇವರಾಯಪುರ ಎಂದು ಮರುನಾಮಕರಣ ಮಾಡಿ ದಾನವನ್ನು ನೀಡಲಾಗದೆ. ಇಷ್ಟಾಗಿಯೂ ದೇವರಾಯನು ಪೂರ್ಣ ಪ್ರಮಾಣದಲ್ಲಿ ಗುಣಮುಖನಾದಂತೆ ತೋರುವುದಿಲ್ಲ. ಆದರೆ ಈ ಕಾಲದಲ್ಲಿ ತಾತ್ಕಾಲಿಕ ಉಪಶಮನವಂತೂ ಖಂಡಿತ ಆಗಿದೆ.

ಕ್ರಿ. ಶ. ೧೪೪೮ ರ ಫೆಬ್ರವರಿ ೨ ಶುಕ್ರವಾರದಂದು ಗುಂಡ್ಲುಪೇಟೆ ತಾಲ್ಲೂಕಿನ ತ್ರಯಂಬಕಪುರ ಶಾಸನವು ದಾಖಲಿಸಿರುವಂತೆ [೧೩] ತುಂಗಭದ್ರಾ ನದೀತೀರದಲ್ಲಿ ತನ್ನ ತಂದೆಯಿಂದ ವಿಜಯನಗರ ಸಿಂಹಾಸನವನ್ನು ಪಡೆದ ಮಲ್ಲಿಕಾರ್ಜುನನು ತನ್ನ ತಂದೆಯಾದ ದೇವರಾಯನ ದಿವ್ಯ ಸ್ಮೃತಿಗಾಗಿ ಹಂಪೆಯ ವಿರೂಪಾಕ್ಷನ ಸನ್ನಿಧಿಯಲ್ಲಿ ಗೋದ್ವಾದಶಿ ಪುಣ್ಯ ಕಾಲದಲ್ಲಿ ಹೊಯಿಸಣ ದೇಶದ, ಹೊಸಪಟ್ಟಣ ರಾಜ್ಯದಲ್ಲಿರುವ ಆರಂದ ದ್ವಾಲಿ ವೇಂಠೆಯ ಕೊತ್ತಂಗಾಲ ಸ್ಥಳದ ಕಾಡನೂರು ಗ್ರಾಮವನ್ನು ಕಲ್ಲೋಟಿ, ಕೇತಹಳ್ಳಿ, ಸಮೇತವಾಗಿ ಪ್ರೌಢದೇವರಾಯಪುರ ಎಂದು ಪ್ರತಿನಾಮಕರಣ ಮಾಡಿ ೩೪೮ ನಿಷ್ಕಗಳನ್ನು ಮಾಡಿ ಈ ಶಾಸನವನ್ನು ಬರೆದ ಕಶ್ಯಪ ಗೋತ್ರದ ದ್ವೇದಿಕೇಸರಿ ಭಟ್ಟನ ಮಗನಾದ ನೃಸಿಂಹನಿಗೂ ಸೇರಿ ನಾನಾ ಗೋತ್ರದ ಬ್ರಾಹ್ಮಣರಿಗೆ ದಾನ ನೀಡಿದ್ದನ್ನು ದಾಖಲಿಸುವುದರ ಮೂಲಕ ದೇವರಾಯನ ಹೆಸರಿನಲ್ಲಿ ಆಗುತ್ತಿದ್ದ ಪುರಗಳ ಪರಂಪರೆಗೆ ಮಂಗಳ ಹಾಡಲಾಯಿತು.

ಈ ಮೇಲೆ ಹೇಳಿದ ಎಲ್ಲಾ ಶಾಸನಗಳೂ ಖಚಿತವಾದ ತೇದಿ ವಿವರವನ್ನು ಹೊಂದಿದ್ದು ದೇವರಾಯನೇ ತನ್ನ ಹೆಸರಿನಲ್ಲಿ ಹಂಡೆಯಲ್ಲಿ ನಿಂತು ವಿರೂಪಾಕ್ಷನ ಸನ್ನಿಧಿಯಲ್ಲಿ ದಾನವನ್ನು ನೀಡಿದ್ದಾನೆ. ಈ ದಾನಗಳನ್ನು ಕೇವಲ ಒಬ್ಬ ವ್ಯಕ್ತಿಗೆ ನೀಡದೇ ಇಡೀ ಅಗ್ರಹಾರದ ಪ್ರಮುಖರಿಗೆ ನೀಡಲಾಗಿದೆ. ಈ ಎಲ್ಲಾ ಗ್ರಾಮಗಳು ದೇವರಾಯಪುರ ಗಳೆಂದು ಪ್ರಸಿದ್ಧವಾಗಿ ಅಸ್ತಿತ್ವದಲ್ಲಿತ್ತು. ದೇವರಾಯಪುರಗಳಾಗಿ ಪ್ರತಿನಾಮಕರಣ ಮಾಡಿದ್ದರೆ ಸ್ಪಷ್ಟವಾದ ಮಾಹಿತಿ ಈ ಶಾಸನಗಳಲ್ಲಿದೆ. ಇನ್ನೊಂದು ವಿಶೇಷವಾದ ಸಂಗತಿ ಯೆಂದರೆ ಹುಣ್ಣಿಮೆ, ಸಂಕ್ರಾಂತಿ, ಶಿವರಾತ್ರಿಯಂದು ನೀಡಿದ ಕೆಲವು ಮೂರು ಶಾಸನ ಗಳನ್ನು ಹೊರತುಪಡಿಸಿ ಬಹುತೇಕ ಶಾಸನಗಳು ದ್ವಾದಶಿಯಂದು ನೀಡಲಾಗಿದೆ. ದೇವರಾಯನ ಹಲವಾರು ಶಾಸನಗಳು ದೇವರಾಯಪುರಗಳಾಗಿದ್ದು ದ್ವಾದಶಿಯಂದೇ ಏಗದ ಎಂಬುದು ಖಚಿತವಾಗಿ ಹೇಳಲಾಗದ ವಿಶೇಷವಾಗಿದೆ. ನಂತರ ಮಲ್ಲಿಕಾರ್ಜುನನು ತನ್ನ ತಂದೆಯ ನಂತರ ತನ್ನ ರಾಜ್ಯಭಾರದ ಆರಂಭದ ಶುಭ ಸಮಾರಂಭದಲ್ಲಿ ತಂದೆಯ ನೆನಪಿಗೆ ಮಾಡಿದ ಪ್ರೌಢದೇವರಾಯಪುರ ಕೂಡ ದ್ವಾದಶಿಯಂದೇ ನೀಡಿರುವುದು ಸೋಜಿಗ.

ಆದರೆ ಮುಂದಿನ ಒಂದು ಶತಮಾನದ ಶಾಸನಗಳಲ್ಲಿ ದೇವರಾಯಪುರ ಎಂದು ಪ್ರತಿನಾಮಕರಣಗೊಂಡ ಕೆಲವು ಗ್ರಾಮಗಳು ದೊರಕುತ್ತದೆ. ಆದರೆ ಅದನ್ನು ರಾಯಪುರವನ್ನಾಗಿ ಮಾಡಿದ ಖಚಿತವಾದ ಶಾಸನಗಳು ನಷ್ಟವಾಗಿವೆ. ಆದಾಗ್ಯೂ ಆ ಎಲ್ಲಾ ದೇವರಾಯಪುರಗಳು ದೇವರಾಯನಿಂದ ಹಾಗೂ ದೇವರಾಯನ ನೆನಪಿಗೆ ಅವನ ಮಗನಾದ ಮಲ್ಲಿಕಾರ್ಜುನನು ಮಾಡಿರುವದಂತೂ ಖಚಿತವಾಗಿದೆ. ಆದರೆ ಆ ಶಾಸನಗಳು ಸಿಗಬೇಕಷ್ಟೆ. ಅಂತಹ ಕೆಲವು ಗ್ರಾಮಗಳನ್ನು ಈ ಮುಂದೆ ಪರಿಶೀಲಿಸಬಹುದು.

ಮುಳಬಾಗಿಲು ತಾಲ್ಲೂಕಿನ ಗುಡಿಪಲ್ಲಿಯ ಈಶ್ವರ ದೇವಾಲಯದ ಅಪೂರ್ಣ ಶಾಸನವು [೧೪] ಈ ಗುಡಿಪಲ್ಲಿಯ ದೇವರಾಯಪುರವೆಂಬ (ಕ್ರಿ. ಶ. ೧೪೩೬ ಫೆಬ್ರವರಿ ೨೦) ಪ್ರತಿನಾಮಧೇಯವಾಗಿದೆ ಎಂದು ದಾಖಲಿಸುತ್ತದೆ. ಇದೇ ಗುಡಿಪಲ್ಲಿಯ ರಾಮದೇವರ ದೇವಾಲಯದ ಮಂಟಪದ ಮೇಲಿರುವ ಶಾಸನಸಹ (೧೫೨೫) ಈ ಗುಡಿಪಲ್ಲಿಯ ಪ್ರತಿನಾಮಧೇಯ ಪ್ರತಾಪದೇವರಾಯಪುರ ಎನ್ನುತ್ತದೆ. [೧೫]

ಜನವರಿ ೧೧, ೧೪೫೩ ರ ಕೂರಗಲ್ಲು ಶಾಸನವು ತಂದೆ ಮಕ್ಕಳಾದ ದೇವರಾಯ ಹಾಗೂ ಮಲ್ಲಿಕಾರ್ಜುನರಿಗೆ ಧರ್ಮವಾಗಬೇಕೆಂದು ಹಿರಿಯಪುರ, ಚಿಕ್ಕಪುರ, ಮಲ್ಲಿನಾಥಪುರ ಹಾಗೂ ದೇವರಾಯಪುರಗಳ ಸುಂಕವನ್ನು ಮನ್ನ ಮಾಡಿರುವ ಮಾಹಿತಿಯನ್ನು ಹೊಂದಿದೆ. [೧೬]

ಕೋಲಾರ ತಾಲ್ಲೂಕಿನ ಮುದವಾಡಿಯ ಊರಬಾಗಿಲಲ್ಲಿರುವ ಶಾಸನವು ಕ್ರಿ. ಶ. ೧೪೮೨ ರಲ್ಲಿ ಮುಳುವಾಯಿ ರಾಜ್ಯದಲ್ಲಿದ್ದ ಮುದವಾಡಿಯು ದೇವರಾಯಪುರವಾಗಿ ಪ್ರತಿನಾಮಧೇಯವನ್ನು ಹೊಂದಿರುವುದನ್ನು ತಿಳಿಸುತ್ತದೆ.[೭]

೨೦ ನೇ ಮಾರ್ಚಿ ೧೪೮೮ ರ ಯೀರೇದೇವನಪುರ ಶಾಸನವು [೮] ತಗಡೂರು ಸ್ಥಳದ ಬದಣಿವಾಳಿದ ಕಾಲುವಳ್ಳಿಯಾದ ದೇವರಾಯಪುರವನ್ನು, ೧೫ ನೇ ಶತಮಾನದ ಕಾಳಮ್ಮನ ಗುಡಿ ಊರಿನ ಮಲ್ಲಿಕಾರ್ಜುನನ ಕಾಲದ ಶಾಸನವೊಂದು [೯] ದೇವರಾಯಪುರ ವನ್ನು, ೪ ಆಗಸ್ಟ್ ೧೫೨೭ ರ ಮಸಹಳ್ಳಿಯ ಶಾಸನವು [೨೦] ಹುಕೊಡೆಯ ಸೀಮೆಯ ಬಯನಾಡ ಸ್ಥಳದ ಮಸಣಿಹಳ್ಳಿಯ ಕಾಲುವಳ್ಳಿಯ ದೇವರಾಯಪುರವನ್ನು ದಾಖಲಿಸು ತ್ತದೆ. ಈ ಎಲ್ಲವೂ ದೇವರಾಯನಿಂದ ನಿರ್ಮಿತವಾದ ಪುರಗಳೇ ಆದರೆ ಇದರ ನಿರ್ಮಾಣದ ಶಾಸನಗಳಿಲ್ಲ. ಕೇವಲ ಹೆಸರುಗಳು ಮಾತ್ರ ಉಳಿದು ಬಂದಿದೆ.

ಅಡಿಟಿಪ್ಪಣಿಗಳು

೧. ಶ್ರವಣಬೆಳಗೊಳದ ಶಾಸನದ ಪ್ರಕಾರ ದೇವರಾಯನು ಅಂತ್ಯವಾದದ್ದು ೧೪೪೬ ಮೇ ೨೪ ಮಂಗಳವಾರ. ಆದರೆ ೧೪೪೯ ರವರೆಗಿನ ಕೊಡಕುಣಿ ಹಾಗೂ ಬಾರಕೂರಿನ ಶಾಸನಗಳು ದೇವರಾಯನು ೧೪೪೯ ರವರೆಗೆ ಬದುಕಿದ್ದಿರಬಹುದೆಂದು ತೋರುತ್ತದೆ ಎಂದು ಡಾ|| ಡಿ. ವಿ. ಪರಮಶಿವಮೂರ್ತಿಯವರು ಅಭಿಪ್ರಾಯ ಪಡುತ್ತಾರೆ. (*ಪ್ರೌಢದೇವರಾಯನ ಶಾಸನಗಳು* -ಮುನ್ನುಡಿ)

೨. Dr. H. M. Nagaraju ; *Devaraya II and his times,* (ಪು. ೧೦) 1991, Mysore

೩. ಡಾ||ಡಿ. ವಿ. ಪರಮಶಿಮೂರ್ತಿ ; *ಪ್ರೌಢದೇವರಾಯನ ಶಾಸನಗಳು* : ಪು. ೪೩೫

೪. *ಅದೇ.* ಪು. ೪೮೧

೫. *ಅದೇ.* ಪು. ೬೬

೬. *ಅದೇ.* ಪು. ೬೦

೭. *ಅದೇ.* ಪು. ೮೮

೮. *ಎಪಿಗ್ರಾಫಿಯಾ ಕರ್ನಾಟಿಕಾ* (ಪರಿಷ್ಕೃತ) ; ಸಂ VI- ಶ್ರೀರಂಗಪಟ್ಟಣ ೨೫

೯. *ಪ್ರೌಢದೇವರಾಯನ ಶಾಸನಗಳು,* ಪು. ೧೬೬

೧೦. *ಅದೇ.* ಪು. ೪೬೩

೧೧. *ಅಲ್ಲೇ.* ಪು. ೪೬೩

೧೨. *ಎಪಿಗ್ರಾಫಿಯಾ ಕರ್ನಾಟಿಕಾ* (ಪ) ; ಸಂ IX - ಬೇಲೂರು ೫೭೬

೧೩. *ಎ. ಕ* (ಪ) - ಸಂ III - ಗುಂಡ್ಲುಪೇಟೆ ೧೪೭

ಇವಲ್ಲದೆ ಇನ್ನೂ ಹಲವಾರು ಲೇಖಕರು ಗ್ರಂಥಗಳು (ಬೇರೆ ಬೇರೆ ಭಾರತೀಯ ಮತ್ತು ಆಂಗ್ಲ ಭಾಷೆಗಳಲ್ಲಿ) ಲಭ್ಯವಿದೆ.

64. ವಿಜಯನಗರ ಅಧ್ಯಯನ ಸಂ. ೧೦ (2005) ಪು. 21.

65. *ಅದೇ.* ಪು. 22.

65. ಶೃಂಗೇರಿಗೆ ಸಂಬಂಧಿಸಿದಂತೆ ಮೇಲೆ ಉದಹರಿಸಿರುವ ಗ್ರಂಥಗಳನ್ನು ನೋಡಿ.

67. ವಿಜಯನಗರದ ಅಧ್ಯಯನ, ಸಂ. ೧೦(2005) ಪು. 22.

68. ಎ.ಕೆ. ಶಾಸ್ತ್ರೀ: 1. *ಶೃಂಗೇರಿ ಧರ್ಮ ಸಂಸ್ಥಾನ* (1983)

2. *ಶೃಂಗೇರಿ ಮಠದ ಕಡತಗಳಲ್ಲಿಯ ಆಯ್ದ ಚಾರಿತ್ರಿಕ ದಾಖಲೆಗಳು* (ಎರಡು ಸಂಪುಟಗಳಲ್ಲಿ)

3. *A History of Shringeri*

4. *Selections from the Kadatas of Shringeri Matha*

5. *The Records of the shringeri Dharama Samasthana* (2009)

69. *ವಿಜಯ ನಗರ ಅಧ್ಯಯನ* ಸಂ. ೧೦(2005) ಪು. 24

70. ಆದರೆ ಕೇವಲ ಒಬ್ಬಿಬ್ಬರು ಲೇಖಕರ ಮಾಹಿತಿಯನ್ನಾಧರಿಸಿ ಅವರ ಸುತ್ತಾ ಸುತ್ತುವ ಬದಲು ವಿವಿಧ ಮೂಲಗಳಿಂದ ಈಗ ಲಭ್ಯವಿರುವ ಅಧಿಕಾಧಿಕ ಮಾಹಿತಿಯನ್ನು ಸಂಗ್ರಹಿಸಿ, ವಿಶ್ಲೇಷಿಸಿ, ಅಳವಡಿಸಿಕೊಂಡು ಅವುಗಳನ್ನು ಲೇಖನದಲ್ಲಿ ಸೂಕ್ತವಾಗಿ ದಾಖಲಿಸಬೇಕು.

71. ಈ ವಿಷಯಕ್ಕೆ ಸಂಬಂಧಿಸಿದಂತೆ ನೋಡಿ. ಡಾ. ಕೆ.ವಿ. ರಮೇಶ ಅವರ ಗ್ರಂಥ '*A History of South Kanara*' Dharwar, 1970;

72. ಇಲ್ಲಿ ವಿದ್ಯಾರಣ್ಯರ ಕುರಿತಾಗಿಯೇ ಹಲವಾರು ಶಿಲಾ ಶಾಸನಗಳು ದೊರೆತಿವೆ. ಅವುಗಳ ಬಗೆಗಿನ ಸಂಕ್ಷಿಪ್ತ ವಿವರಣೆಯನ್ನು ಒಂದು ಲೇಖನದಲ್ಲಿ ಮಾಡಿದ್ದೇನೆ. (ರಾಷ್ಟ್ರೀಯ ವಿಚಾರ ಸಂಕೀರ್ಣವೊಂದರಲ್ಲಿ ಮಂಡಿಸಿದ ಪ್ರಬಂಧ ಇದು - ನೋಡಿ.

Quarterly Journal of the Mythic Society - Vol. XCVII
No.2. April - June, 2006 Pp. 54-69.

೧೮.ಹಕ್ಕ ಬುಕ್ಕ ಇತಿವೃತ್ತ ವಿಚಾರ: ಕೆಲವು ಹೊಸ ಸಂಗತಿಗಳು

ಡಾ. ಎಫ್. ಟಿ. ಹಳ್ಳಿಕೇರಿ

ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪನೆ ಮಾಡಿದ ಸಂಗಮ ವಂಶದ ಹಕ್ಕ ಬುಕ್ಕರ ಇತಿವೃತ್ತದ ಬಗೆಗೆ ಸಮಗ್ರವಾದ ಅಧ್ಯಯನ ನಡೆದಿಲ್ಲವೆಂದೇ ಹೇಳಬೇಕು. ಇತಿಹಾಸ ತಜ್ಞರು, ಪಾಶ್ಚಾತ್ಯ ಪ್ರವಾಸಿಗರು ಹಾಗೂ ದೇಶೀಯ ವಿದ್ವಾಂಸರು ವಿಜಯನಗರ ಅರಸುಮನೆತನ ಕುರಿತು ಹೇಳುವಾಗ ಹಕ್ಕಬುಕ್ಕರೆಂಬ ಸಂಗಮ ವಂಶಜರು ವಿಜಯ ನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರು ಎಂದಷ್ಟೇ ಹೇಳಿ ಮುಂದೆ ಹೋಗಿದ್ದಾರೆ. ಸಂಗಮ ವಂಶಜರಾದ ಹಕ್ಕಬುಕ್ಕರ ಹೆಸರುಗಳ ಮೂಲ, ಮನೆತನದ ಹಿನ್ನೆಲೆ, ಯಾವ ಸಮುದಾಯಕ್ಕೆ ಸೇರಿದವರು ಇತ್ಯಾದಿ ವಿಚಾರಗಳ ಬಗೆಗೆ ಲಭ್ಯ ಆಕರಗಳು ಹಾಗೂ ಕ್ಷೇತ್ರಕಾರ್ಯದ ಹಿನ್ನೆಲೆಯಲ್ಲಿ ಪ್ರಸ್ತುತ ಸಂಪ್ರಬಂಧದಲ್ಲಿ ಕೆಲವು ಹೊಸ ಸಂಗತಿಗಳನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ.

೧. ಹಕ್ಕ ಬುಕ್ಕ ಹೆಸರಿನ ಮೂಲರೂಪ

ಜನಮಾನಸದಲ್ಲಿ ಹಕ್ಕ ಬುಕ್ಕ ಎಂಬ ಹೆಸರು ಪ್ರಚಲಿತದಲ್ಲಿವೆ. ಹಕ್ಕ ಬುಕ್ಕ ಹೆಸರಿನ ಮೂಲಗಳ ಬಗೆಗೆ ಚರ್ಚಿಸಿದವರು ಡಾ. ಎಂ. ಎಂ. ಕಲುಬುರ್ಗಿಯವರು. ಲೇಖನ (ಮಾರ್ಗ ಸಂ. ೩, ಹಕ್ಕಬುಕ್ಕ, ಪುಟ ೨೧೯, ಕರ್ನಾಟಕ ಬುಕ್ ಏಜನ್ಸಿ, ಬೆಂಗಳೂರು, ೧೯೯೮)ವೊಂದರಲ್ಲಿ "ಬಹುಶಃ ಇದರ (ಹಕ್ಕ) ಮೂಲರೂಪ ಹೂವುಗಳ(ಹೂವುಕ). ಪುಷ್ಪ ಅರ್ಥದ ಹೂವು ಪದವನ್ನು ವ್ಯಕ್ತಿನಾಮಗಳಿಗೆ ಬಳಸುತ್ತಿದ್ದುದಕ್ಕೆ ಶಾಸನಗಳಲ್ಲಿ ಹೂವಿನಶೆಟ್ಟಿ ಮೊದಲಾದ ಉದಾಹರಣೆಗಳು ಸಿಗುತ್ತವೆ. ಈಗಲೂ ಹೂವಪ್ಪ ಹೆಸರು ಹಳ್ಳಿಗಳಲ್ಲಿ ಪ್ರಚಲಿತವಿದೆ. ಬೂತುಕ> ಬೂವುಕ> ಬುಕ್ಕ ರೀತಿಯಲ್ಲಿ ಹೂವುಕ>ಹೂವಕ>ಹುಕ್ಕ ಆಗಿರಬಹುದು" ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ವಿಷಯವಾಗಿ ಕೂಲಂಕಷವಾಗಿ ಆಕರಗಳನ್ನು ವಿಶ್ಲೇಷಣೆಗೊಳಪಡಿಸುವುದು ಅಗತ್ಯವಿದೆ ಎಂದು ನನಗೆ ಅನ್ನಿಸಿತು. ಈ ಹಿನ್ನೆಲೆಯಲ್ಲಿ ಕಾವ್ಯ ಶಾಸನ ಮತ್ತಿತರೆ ದಾಖಲೆಗಳಲ್ಲಿ ಈ ಹೆಸರು ನಾನಾ ರೀತಿಯಾಗಿ ಉಲ್ಲೇಖ ಗೊಂಡಿರುವುದನ್ನು ನಾವು ಗುರುತಿಸಬಹುದು. ಅಂದಾಜು ನೂರೈವತ್ತು ಶಾಸನೋಲ್ಲೇಖಗಳನ್ನು ಗಮನಿಸಿ ಹೇಳುವುದಾದರೆ ಹಕ್ಕನ ಮೂಲ ಹೆಸರು ಹರಿಯಪ್ಪ

ವೊಡೆಯರ್, ವೀರಹರಿಯಪ್ಪೊಡೆಯರ್, ಅರಿಯಪ್ಪ ಉಟ್ಟೈಯ, ಹರಿಯಮಂಟೆಯ, ಹುಕ್ಕಂಣವೊಡೆಯ, ಯರಿಯಪ್ಪ ಉಡೈಯಾರ್, ಹರಿಹರರಾಯ ಎಂದು ಕರೆಯಲಾಗಿದೆ. ಬುಕ್ಕ ಎಂಬುದು ಬುಕ್ಕಣ್ಣೊಡೆಯರ್, ಬುಕ್ಕರಾಯ, ಬುಕ್ಕಣ್ಣರಾಯ, ಬುಕ್ಕಪ್ಪನಾಯಕ ಇತ್ಯಾದಿ ಹೆಸರಿನಿಂದ ಕರೆಯಲಾಗಿದೆ. (ಹೆಚ್ಚಿನ ಮಾಹಿತಿಗಾಗಿ ವಸುಂಧರಾ ಫಿಲಿಯೋಜಾ ಅವರ *ವಿಜಯನಗರ ಸಾಮ್ರಾಜ್ಯ ಸ್ಥಾಪನೆ* ಕೃತಿಯ ಅನುಬಂಧವನ್ನು ಗಮನಿಸಬಹುದು). ಈ ಎಲ್ಲ ವಿವರಗಳನ್ನು ಅವಲೋಕಿಸಿದಾಗ ಹರಿಯೊಪ್ಪೊಡೆಯರ್ > ಹರಿಯಪ್ಪ > ಹರಿಹರ > ಹರಿಹರ > ಹಕ್ಕ ಎಂದೂ, ಬುಕ್ಕಣ್ಣೊಡೆಯರ್ > ಬುಕ್ಕಣ್ಣ > ಬುಕ್ಕಪ್ಪ >ಬುಕ್ಕರಾಯ > ಬುಕ್ಕ ಎಂದೂ ಆಗಿರಬಹುದು. ಅಲ್ಲದೇ ಈಗಾಗಲೇ ಹೇಳಿದಂತೆ ಇವರಿಬ್ಬರನ್ನು ಹುಕ್ಕಬುಕ್ಕ ಎಂದು ಜೊತೆ ಯಾಗಿಯೇ ಕರೆಯಲಾಗುತ್ತಿದೆ. ಹುಕ್ಕದ ಸರಿಯಾದ ರೂಪ ಹಕ್ಕ. ಇನ್ನು ಮುಂದೆ ಹಕ್ಕ ಎಂದೇ ಕರೆಯಬೇಕು.

ಹರಿಯಪ್ಪ ಹೆಸರಿನ ದೈವವನ್ನು ಕುರುಬರು ಆರಾಧಿಸುತ್ತಿರುವುದನ್ನು ಕರ್ನಾಟಕದ ಕೆಲವು ಭಾಗಗಳಲ್ಲಿ ಈಗಲೂ ಕಾಣಬಹುದು. ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲೂಕಿನ ಸೊಲ್ಲಾಪುರ ಹಾಗೂ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯ ಯಳನಾಡು ಗ್ರಾಮದ ಕುರುಬರ ಓಣಿಯಲ್ಲಿ ಹರಿಯಪ್ಪ ಹೆಸರಿನ ದೇವಾಲಯಗಳಿವೆ. ಆ ಎರಡೂ ಗ್ರಾಮಕ್ಕೆ ಕ್ಷೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ಹರಿಯಪ್ಪ ದೈವದ ಬಗೆಗೆ ವಿಚಾರಿಸಿದಾಗ ಅಲ್ಲಿ ಕುರುಬ ಸಮುದಾಯ ದವರು "ನಾವು ಮೊದಲು ಹಂಪೆಯ ವಿಜಯನಗರ ಸಾಮ್ರಾಜ್ಯದಲ್ಲಿದ್ದವರು. ಸಾಮ್ರಾಜ್ಯ ಪತನವಾದ ನಂತರ ಈ ಕಡೆ ವಲಸೆ ಬಂದವರು. ನಮ್ಮ ಪೂರ್ವಿಕರ ಕಾಲದಿಂದಲೂ ನಾಯಕನಾದ ಹರಿಯಪ್ಪನ ಸ್ಮರಣೆಗಾಗಿ ಇಲ್ಲಿ ದೇವಾಲಯವನ್ನು ನಿರ್ಮಾಣ ಮಾಡಿ ಆತನನ್ನು ಆರಾಧಿಸುವ ಪೂಜಿಸುವ ಪರಿಪಾಠವನ್ನು ಇಟ್ಟುಕೊಂಡಿದ್ದೇವೆ" ಎಂದು ಹೇಳಿದರು. ಅಲ್ಲದೇ ಈಗಲೂ ಈ ಸಮುದಾಯದ ಕೆಲವರು ಹುಟ್ಟಿದ ತಮ್ಮ ಮಗುವಿಗೆ ಹರಿಯಪ್ಪ ಎಂಬ ಹೆಸರನ್ನಿಡುವ ಪದ್ಧತಿಯಿದೆ. ಈ ಎಲ್ಲ ಸಂಗತಿಗಳನ್ನು ಪರಾಮರ್ಶಿಸಿದಾಗ ಹಕ್ಕಬುಕ್ಕರ ಮೂಲ ಹೆಸರು ಹರಿಯೊಪ್ಪೊಡೆಯರ್ ಬುಕ್ಕಣ್ಣೊಡೆಯರ್ ಎಂಬುದು ಸ್ಪಷ್ಟವಾಗುತ್ತದೆ.

೦೨. ಹಕ್ಕ ಬುಕ್ಕರು ಕುರುಬ ಸಮುದಾಯದ ಒಡೆಯರ ಪಂಗಡಕ್ಕೆ ಸೇರಿದವರು

ಹಕ್ಕಬುಕ್ಕರು ಕುರುಬ ಸಮುದಾಯಕ್ಕೆ ಸೇರಿದವರೆಂಬುದು ಬಹುತೇಕ ಎಲ್ಲ ಇತಿಹಾಸತಜ್ಞರ ಅಭಿಪ್ರಾಯವಾಗಿದೆ. ಇದಕ್ಕೆ ಸಂಬಂಧಿಸಿದಂತೆ ಶಾಸನ, ಕಾವ್ಯ,

ಪುರಾಣ, ಕೈಫಿಯತ್ತು, ವಿದೇಶಿ ಮತ್ತು ಸ್ವದೇಶಿ ಪ್ರವಾಸಿಗರ ದಿನಚರಿ, ಗೆಝೆಟಿಯರ್, ವಾರ್ಷಿಕ ವರದಿಗಳು ಪೂರಕ ಮಾಹಿತಿಗಳನ್ನು ಒದಗಿಸುತ್ತವೆ. ಅವು ಹೀಗಿವೆ.:

ಅ. ಶಾಸನಗಳು.

೧. ವಿಜಯನಗರಕ್ಕೆ ಸಂಬಧಿಸಿದ ಶಾಸನ (ಉಲ್ಲೇಖ : ವಿ. ಆರ್. ಹನುಮಂತಯ್ಯ ಅವರ *ವಿಜಯನಗರ ಸಾಮ್ರಾಜ್ಯ ಚರಿತ್ರೆ* ಪುಟ. ೧೫, ೧೯೫೨) ವೊಂದರಲ್ಲಿ ಹರಿಹರರಾಯ ಮತ್ತು ಬುಕ್ಕರಾಯರು "ಕ್ಷೀರಸಾಗರ ಸಂಭವಃ" ಎಂಬುದಾಗಿ ಉಕ್ತವಾಗಿದೆ. ಕುರುಬರಿಗೆ ಹಾಲುಮತದವರು, ಕ್ಷೀರವಂಶದವರು ಇತ್ಯಾದಿಯಾಗಿ ಕರೆಯಲಾಗುತ್ತಿದೆ. ಆದ್ದರಿಂದ ಇವರು ಕುರುಬ ಸಮುದಾಯಕ್ಕೆ ಸೇರಿದವರೆಂಬುದು ಸ್ಪಷ್ಟವಾಗುತ್ತದೆ.

೨. ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ತಾಳಿಕಟ್ಟೆ ಗ್ರಾಮದ ಹಳ್ಳದ ಗುಡಿಯಲ್ಲಿ ನೆಟ್ಟಿರುವ ಶಾಸನ (*ಎಪಿಗ್ರಾಫಿಯ ಕರ್ನಾಟಿಕ* ಸಂಪುಟ ೧೧, ನಂ. ೭೬, ಪುಟ ೩೪೫)ದಲ್ಲಿ ಬುಕ್ಕರಾಯ ಮುಂತಾದ ಕುರುಬರು ವಿಜಯನಗರವನ್ನಾಳಿದ ಬಗೆಗೆ ಉಲ್ಲೇಖವಿದೆ. ಈ ಗ್ರಾಮದಲ್ಲಿ ಕುರುಬರ ಸಂಖ್ಯೆ ಅಧಿಕಪ್ರಮಾಣದಲ್ಲಿದೆ. ಅವರ ಪೂರ್ವಜರು ಹಂಪಿಯ ಪ್ರದೇಶದಿಂದ ವಲಸೆ ಬಂದು ಇಲ್ಲಿ ನೆಲೆಸಿದವರೆಂದು ಇಲ್ಲಿನ ಕುರುಬ ಸಮುದಾಯದವರು ಹೇಳಿಕೊಳ್ಳುತ್ತಾರೆ.

೩. ವಿಜಯನಗರದ ಸಂಗಮ ವಂಶಜರಾದ ಹಕ್ಕಬುಕ್ಕ ಕಂಪಣ್ಣ ಮಾರಪ್ಪ ಮುದ್ದಪ್ಪರಿಗೆ ಕ್ರಮವಾಗಿ ಹರಿಯಪ್ಪೊಡೆಯರ್, ಬುಕ್ಕಣ್ಣೊಡೆಯರ್, ಕಂಪಣ್ಣೊಡೆಯರ್, ಮಾರಪ್ಪೊಡೆಯರ್ ಹಾಗೂ ಮುದ್ದಪ್ಪೊಡೆಯರ್ ಎಂದು ಅನೇಕ ಶಾಸನ (*ಎಪಿಗ್ರಾಫಿಯ ಕರ್ನಾಟಿಕ* ಸಂಪುಟ, ೬, ಶೃಂಗೇರಿ ೧) ಗಳಲ್ಲಿ ಕರೆಯಲಾಗಿದೆ. ಇದರಿಂದ ಇವರು ಕುರುಬ ಸಮುದಾಯದ ಉಪಪಂಗಡಗಳಲ್ಲಿ ಒಂದಾದ ಒಡೆಯರ ಪಂಗಡಕ್ಕೆ ಸೇರಿದವರು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಆ. ಕಾವ್ಯಗಳು

ಅ. ಲಿಂಗಣ್ಣ ಕವಿಯ ಕೆಳದಿನೃಪವಿಜಯ

"..... ಉತ್ತರದೇಶದಿಂದ ಸಹೋದರರಾದ ಹರಿಹರ ಬುಕ್ಕರೆಂಬ ಬಡಕ್ಷತ್ರಿಯರುಂ ಈ ದಕ್ಷಿಣ ರಾಜ್ಯಕೈತಂದು ಕುರುಬರಲ್ಲಿ ನಂಟತನವಂ ಮಾಡಿ ಹೆಣ್ಣ ತಂದು ಮದುವೆಯಾಗಿ ಸುಖವಾಸಿಗಳಾಗಿರುತ್ತುಮಿರಲಾಗಿ ಅವರೊಳ್ ಪಿರಿಯನಾದ ಹರಿಹರಗೆ ನೀನುಂ ಬುಕ್ಕನು. ಸಹ ವಿದ್ಯಾರಣ್ಯರ ಬಳಿಗೆ ಹೋಗಿ

ಆಶ್ರಯಿಸಲಾಗಿ ಮಹದೈಶ್ವರ್ಯ ಬಂದೀತೆಂದು ಸ್ವಪ್ನವಾಗಲಾಗಿ ಆ ಮೇಲೆ ಆ ಹರಿಹರಬುಕ್ಕರ್ ಹಂಪೆಗೆ ಬಂದು ವಿದ್ಯಾರಣ್ಯರಂ ಕಂಡು ಸಂಧಿಸಿ ಸ್ವಪ್ನಾ ಭಿಪ್ರಾವನುಸಿರಲಾಗಿ ಆಗ ವಿದ್ಯಾರಣ್ಯರ್ ಹಂಪೆಯ ಸ್ಥಳದವರಂ ಕರೆಯಿಸಿ ವಿಚಾರವಂ ಮಾಡಲಾಗಿ ಅವರ್ಪೇಳಿದುದು : ಪೂರ್ವದೊಳ್ ಸೂರ್ಯವಂಶಜನಾದ ತ್ರಿಶಂಕು ಮಹಾರಾಯಂ ಪಂಪಾಕ್ಷೇತ್ರಕ್ಕೆ ಬಂದ ಈ ವಿರೂಪಾಕ್ಷಲಿಂಗಂ ಪ್ರಾದುರ್ಭವಲಿಂಗವೋ ಪ್ರತಿಷ್ಠಾ ಲಿಂಗವೋ ಯೆಂದು ಕೇಳಿದಲ್ಲಿ ಈ ಲಿಂಗಂ ಜ್ಯೋತಿರ್ಮಯವಾದ ಲಿಂಗಂ, ಈ ಲಿಂಗದ ಮಹಿಮೆಯಂ ಪೇಳ್ವುದಕ್ಕೆ ಬ್ರಹ್ಮ ದೇವರಿಗಾದರೂ ಅಸಾಧ್ಯಮೆಮ್ಮಪಾಡೇನೆನಲಾಗಿ ಆ ಮಾತಂ ಕೇಳ್ದು ಆ ತ್ರಿಶಂಕು ಮಹಾರಾಯಂ ಪ್ರತಿಷ್ಠಾಲಿಂಗವೋ ಯೆಂದು ಕೇಳ್ದ ದೋಷನಿವೃತ್ತಿಗೋಸುಗಂ ಕೃಷ್ಣವೇಣಿ ನದೀತೀರಮಾರಭ್ಯ ಸೇತುಪರ್ಯಂತಂ ಮೂರುವರೆಕೋಟಿ ರಾಜ್ಯವನೀ ವಿರೂಪಾಕ್ಷದೇವರ್ಗೆ ಧಾರೆಯನೆರೆದನೆಂದು ಸ್ಥಳದವರ್ಪೇಳಲ್ ಆ ಮಾತಂ ಕೇಳ್ತಾ ವಿದ್ಯಾರಣ್ಯರ್ ಹರಿಹರಬುಕ್ಕರಂ ಕರೆದು ಈ ರಾಜ್ಯಕ್ಕೆಲ್ಲಂ ವಿರೂಪಾಕ್ಷಸ್ವಾಮಿಯೆ ಕರ್ತಂ, ನೀಂ ಆ ದೇವರ ಭಕ್ತರಾಗಿ ವರ್ತಿಸುತ್ತುಂ ಶ್ರೀವಿರೂಪಾಕ್ಷನೆಂದೊಪ್ಪವಂ ಹಾಕಿ ನಡೆಕೊಂಡು ಸದ್ಧರ್ಮದಿಂದ ರಾಜ್ಯವನಾಳಿಕೊಂಡಿರ್ಪುದೆಂದು ಕಟ್ಟಳೆಯಂ ರಚಿಸಿ ಆ ಹರಿಗರಗೆ ಹರಿಹರರಾಯನೆಂದು ಪೆಸರಿಟ್ಟು ವಿದ್ಯಾನಗರವೆಂಬ ಪಟ್ಟಣಮಂ ನಿರ್ಮಾಣಂ ಮಾಡಿಸುವ ಕಾಲದಲ್ಲಿಯಾ ಪಟ್ಟಣದ ಕೆಸರ್ಗಲ್ಲ ಮುಹೂರ್ತ ಕಾಲದಲ್ಲಿ ವಿಧಿವಶದಿಂದೊರ್ವ ದಾಸನೂದಿದ ಶಂಖಧ್ವನಿಯಂ ವಿದ್ಯಾರಣ್ಯರ್ ನಿಯಾಮ ಕಂಗೈದ ಲಗ್ನಂ ವ್ಯತ್ಯಾಸವಾಗಲಾಗಿ ಈ ಪಟ್ಟಣಂ ಕೆಲವು ವರ್ಷದ ಮೆಲೆ ತುರುಷ್ಕರಾಧೀನಾದೀ ತೆಂದು ವಿದ್ಯಾರಣ್ಯಾತ್ಮಕ ಕಾಲಜ್ಞಾನವೆಂದು ಕೆಲವು ಕಾಲಜ್ಞಾನ ಗ್ರಂಥವಂ ಬರೆಸಿ, ಆ ವಿದ್ಯರಣ್ಯರ್ ಸ್ವಸ್ತಿಶ್ರೀವಿಜಯಾಭ್ಯುದಯ ಶಾಲಿವಾಹನ ಶಕ ೧೨೫೮ನೆಯ ಸಂವತ್ಸರದಲ್ಲಿ ಆ ವಿದ್ಯಾನಗರೀ ರತ್ನ ಸಿಂಹಾಸನದಲ್ಲಿ ಹರಿಹರರಾಯಂಗೆ ಪಟ್ಟಮಂಕಟ್ಟಿ ನಿಲಿಸಿದರ್...."

(ಸಂ. ಆರ್. ಶಾಮಾಶಾಸ್ತ್ರಿ, *ಕೆಳದಿನೃಪವಿಜಯಂ*, ಪು. ೧೬, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ. ವಿ., ಮೈಸೂರು ೧೯೭೩)

ಆ. ದೇವಚಂದ್ರ ವಿರಚಿತ ರಾಜಾವಳಿ ಕಥಾಸಾರ,

"..... ಉತ್ತರದೇಶದ ತುಂಗಭದ್ರಾ ತಟದೊಳ್ ರಾಜಿಸುತಿಪ್ಪ ವಿದ್ಯಾನಗರಿಯನಾಳ್ವ ಹರಿಹರ ವೀರಬುಕ್ಕರ್ ಮೊದಲಾದ ಕುರುಂಬರಾಯ ರಿಂದಿತ್ತ...."

(ಸಂ. ಬಿ. ಎಸ್. ಸಣ್ಣಯ್ಯ, ರಾಜಾವಳಿ ಕಥಾಸಾರ, ಪುಟ ೩೨೫, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ. ವಿ. ಮೈಸೂರು, ೧೯೮೮)

ಇ. ತಿರುಮಲಾರ್ಯ ವಿರಚಿತ ಚಿಕದೇವರಾಜರ ವಂಶಾವಳಿ

"ಮೊದಲೊಳ್ ಹರಿಹರ ಬುಕ್ಕರ್ ಮೊದಲೆನಿಸಿದರರಸುಗೆಗೆಯ್ದು ಪಸರಿಸಿ ಜಸಮಂ ಪದಪಿ ಕುಱುಂಬರಾಯರ್ ಪದಿಮೂವರ್ ಬರ್ದಿಲವೇಱೆ ಬಣ್ಣಂಬಡೆದರ್...."

(ಸಂ:ಎಂ. ಎ. ರಾಮಾನುಜಯ್ಯಂಗಾರ್, *ಚಿಕದೇವರಾಜರ ವಂಶಾವಳಿ* ೨-೧೩, ಮದ್ರಾಸ್ ವಿಶ್ವವಿಶ್ವವಿದ್ಯಾಲಯ, ಮದ್ರಾಸ್, ೧೯೧೯)

ಈ. ಕೆಳದಿ ಬಸವರಾಜ ವಿರಚಿತ *ಶಿವತತ್ವ ರತ್ನಾಕರ* ಕೃತಿಯಲ್ಲಿ "ವಿಜಯನಗರ ಸಂಸ್ಥಾಪಕರು ಹೊಂದಿದ್ದ ಒಡೆಯರ್ ಎಂಬ ಹೆಸರಿನಿಂದ ಅವರು ಮೇಷಪಾಲ ಅಥವಾ ಕುರುಬ ಜನಾಂಗಕ್ಕೆ ಸೇರಿದವನು " ಎಂದು ಹೇಳಲಾಗಿದೆ.

(ಸಂ: ಮಲ್ಲೇಪುರಂ ಜಿ. ವೆಂಕಟೇಶ, *ಶಿವತತ್ವ ರತ್ನಾಕರ,* ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೯)

ಉ. ಕಾಶೀ ಲಕ್ಷ್ಮಣಶಾಸ್ತ್ರೀ ವಿರಚಿತ ಗುರುವಂಶ ಕಾವ್ಯ

"ಬಲ್ಲಾಳಕ್ಷಿತಿಪಾಲಕೇನ ವಿಜಿತೌ ಯುದ್ಧೇನ ಮಧ್ಯೆ ಮಹಾ
ವಲ್ಲೀಭೃದ್ವಿಪಿನಸ್ಯ ಚಕ್ರತುರಿಮೌ ಶ್ರಾಂತ್ಯೋಪದೇಶಂ ಚಿರಂ
ನಿದ್ರಾಣ ಸಹಜಾಂಕಗೋ ಹರಿಹರಕ್ಷೋಣೀಭೃದೇಷ ಕ್ಷಣಂ
ಭದ್ರಂ ರೇವಣಸಿದ್ಧಯೋಗ್ಯಧಿಗಮಃ ಸ್ವಪ್ನಂ ತದಾಪ್ನೋತ್ತರಾಂ."

(ಪ್ರಕಟಣೆ: ಶೃಂಗೇರಿ ಮಠ, ಶ್ರೀರಂಗಂ, ೧೯೬೭)

ಊ. ಸರ್ವಜ್ಞನ ಕಾಲಜ್ಞಾನ ವಚನ

"ಕುರುಬ ಕುಲದೊಳಗೊಬ್ಬ| ಧರಣಿಪಾಲಕ ಹುಟ್ಟಿ
ಉರವಣಿಸಿ ಕದನ ಹೆಚ್ಚಲು|ಹಂಪೆಯಲಿ ಕರಿಯ ಮೆಟ್ಟುವನು"

(ಸಂ. ತಿಪ್ಪೇರುದ್ರಸ್ವಾಮಿ ಎಚ್, **ಸರ್ವಜ್ಞನ ವಚನಗಳು**, ಡಿ. ವಿ. ಕೆ. ಮೂರ್ತಿ ಮೈಸೂರು, ೧೯೭೫)

ಎ. ಚನ್ನಪ್ಪಕವಿಯ 'ಶರಣಲೀಲಾಮೃತ'

"ಸುರಿತಾಳನವರೆದೂ|ಸಿರಿವರೆಯೆ ರಾಮನನು
ಕುರುಬರಿಗೆ ಪಟ್ಟ|ಹದಿಮೂರು ಜನತನಕ
ಬರಸಿಡಿಲು ಉರಿಫಾಳಿ|ಮೆರೆವ ತುರುಕರ ಧಾಳಿ

ಧರೆಯ ತುಂಬುವ ಧೂಳಿ|ಶರಣರಿದ ಕೇಳಿ''

(ಶರಣಲೀಲಾಮೃತ)

ಇ. ಕೈಫಿಯತ್ತುಗಳು

''ಶಕ ೧೨೫೮ ನೆಯ ಧಾತು ಸಂವತ್ಸರದಲ್ಲಿ ವಿದ್ಯಾರಣ್ಯಸ್ವಾಮಿ ಅನುಗ್ರದಿಂದ್ದಾ ವಿಜಯನಗರದ ಸಂಸ್ಥಾಪದ ಕೆಳಗೆ ಹರಿಹರರಾಯರು ಮೊದಲು ಮಾಡಿಕೊಂಡು ೧೩ ಮಂದಿ ಕುರುಬರು ವಿಜಯನಗರದಲ್ಲಿ ವಿದ್ಯಾರಣ್ಯರ ಅನುಗ್ರಹದಿಂದಾ ಶಿಂಹ್ವಾಸನ ಮಾಡಿಕೊಂಡು ಅನೇಕ ದಿವಸ ಆಳಿದರು.''

(ಸಂ:ಎಂ. ಎಂ. ಕಲಬುರ್ಗಿ, ಕರ್ನಾಟಕದ ಕೈಫಿಯತ್ತುಗಳು, ಪುಟ, ೧೧೮ , ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೪)

ಈ. ವಿದೇಶಿ ವಿದ್ವಾಂಸರ ಅಭಿಪ್ರಾಯಗಳು

೧. ರಾಬರ್ಟ್ ಸಿವೆಲ್

''ಅವರಿಬ್ಬರೂ ಸಹೋದರರು ಕುರುಬ ಜಾತಿಯ ಹಿಂದೂಗಳಾಗಿದ್ದರು. ಗಾಢ ಧಾರ್ಮಿಕ ಭಾವನೆಯುಳ್ಳವರಾಗಿದ್ದರು. ವಾರಂಗಲ್ಲಿನ ರಾಜನ ಭಂಡಾರದಲ್ಲಿ ಸೇವೆ ಗೈಯುತ್ತಿದ್ದರು. ಅದು ೧೩೨೩ ರಲ್ಲಿ ಲೂಟಿಯಾಗಿ ವಿನಾಶ ಹೊಂದಿದಾಗ ಅಲ್ಲಿಂದ ಕಾಲುಕಿತ್ತರು ಮತ್ತು ಆನೆಗುಂದಿಯ ಚಿಕ್ಕ ರಾಜನಲ್ಲಿ ಸೇವೆ ಕೈಕೊಂಡರು. ಅವರು ಮತ್ತು ಅವರ ದೊರೆಗಳು ಸೂರೆ ಮಾಡುತ್ತಿದ್ದ ಮುಸ್ಲಿಮರ ನಡತೆಯಿಂದ ಭಯ ಹಾಗೂ ಜಿಗುಪ್ಸೆಪಟ್ಟು ತಮ್ಮ ದೇಶಕ್ಕಾಗಿ ಮತ್ತು ತಮ್ಮ ಧರ್ಮಕ್ಕಾಗಿ ಪಣತೊಟ್ಟರು. ಸಹೋದರರು ಆನೆಗೊಂದಿಯಲ್ಲಿ ಅನುಕ್ರಮವಾಗಿ ಅಮಾತ್ಯ ಮತ್ತು ಭಂಡಾರಿ ಹುದ್ದೆಗಳಿಗೆ ಏರಿದರು. ದಿಲ್ಲಿಯ ಮಹಮ್ಮದನ ಸೋದರಳಿಯ ಬಹಾಉದ್ದೀನನಿಗೆ ರಾಜ ಆಶ್ರಯವಿತ್ತುದರಿಂದ ೧೩೩೪ ರಲ್ಲಿ ಸುಲ್ತಾನ ದಾಳಿಯಿಟ್ಟ. ಬತೂತಾ ಹೇಳಿರುವಂತೆ ಆನೆಗೊಂದಿ ಪತನಗೊಂಡಿತು ಮತ್ತು ಆ ರಾಜ್ಯವನ್ನಾಳಲು ಮಲಿಕ್‌ನನ್ನು ತನ್ನ ಪ್ರತಿನಿಧಿಯಾಗಿ ಹಿಂದೆ ಬಿಟ್ಟು ಸುಲ್ತಾನ ಮರಳಿದ. ಜನರು ತನಗಿಂತ ಬಲಶಾಲಿಯಾಗಿರುವುದನ್ನು ಮಲಿಕ್ ಕಂಡುಕೊಂಡ. ಕೊನಗೆ ಸುಲ್ತಾನ ರಾಜ್ಯವನ್ನು ಹಿಂದೂಗಳಿಗೆ ತಿರುಗಿಕೊಟ್ಟ. ಮೊದಲು ಅಮಾತ್ಯ ಮತ್ತು ಭಂಡಾರಿ ಇಬ್ಬರೂ ಸಹೋದರರನ್ನು ಅನುಕ್ರಮವಾಗಿ ರಾಜ ಮತ್ತು ಅಮಾತ್ಯ ಪದವಿಗೇರಿಸಿಸಿದ. ಇವರೇ ಒಂದನೆಯ ಹರಿಹರ ಮತ್ತು ಬುಕ್ಕ''.

(ಅನುವಾದ: ಸದಾನಂದ ಕನವಳ್ಳಿ, **ಮರೆತು ಹೋಗಿರುವ ಮಹಾಸಾಮ್ರಾಜ್ಯ**, ಪುಟ, ೨೩, ೧೯೬೨)

೨. ಗಸ್ಟೌ ಅಪರ್ಟ್

"ಕುರುಂಬರ ಮತ್ತೊಂದು ಶಾಖೆಯವರೇ ವಿಜಯನಗರವೆಂಬ ರಾಜ್ಯವನ್ನು ಸ್ಥಾಪಿಸಿದವರೆದು ಈಗಲೂ ಜನಜನಿತವಾಗಿದೆ".

(The Original Inhabitants if India, p-260)

೩. ಎಚ್. ವಿಲ್ಸನ್

"ಈ ರಾಜಪುತ್ರರು ಕುರುಮರ ಅಥವಾ ಕುರುಬರ ಜಾತಿಗೆ ಸೇರಿದವರು".

(ಉಲ್ಲೇಖ: ವಿ. ಆರ್. ಹನುಮಂತಯ್ಯನವರ *ವಿಜಯನಗರ ಸಾಮ್ರಾಜ್ಯ ಚರಿತ್ರೆ*, ಪುಟ, ೫, ಬೆಂಗಳೂರು, ೧೯೫೨)

೪. ಮಿ. ಕೌಟೋ

"ಮಾಧವಾಚಾರ್ಯರು ಅರಣ್ಯದಲ್ಲಿ ಸನ್ಯಾಸಾಶ್ರಮದಲ್ಲಿರುವಾಗ ಬುಕ್ಕನೆಂಬ ಬಡ ಕುರುಬನು ಪ್ರತಿದಿನವೂ ಅವರಿಗೆ ಊಟ ತರುತ್ತಿದ್ದನು. ಹೀಗಿರುವಾಗ ಒಂದು ದಿನ ಆ ಬ್ರಾಹ್ಮಣನು ಅವನಿಗೆ -ನೀನು ಇಡೀ ಹಿಂದೂಸ್ಥಾನದ ಅಧಿಪತಿಯಾಗುವಿ ಎಂದು ಹೇಳಿದನು. ಇದನ್ನು ಉಳಿದ ಕುರುಬರು ಕೇಳಿ ಅವನೊಡನೆ ತುಂಬಾ ಆದರ ಮರ್ಯಾದೆಗಳಿಂದ ವರ್ತಿಸತೊಡಗಿ ಅವನನ್ನು ತಮ್ಮ ನಾಯಕನನ್ನಾಗಿ ಮಾಡಿಕೊಂಡು ಕ್ರಮೇಣ ಅವನನ್ನು ಅರಸನೆಂದು ಕರೆಯಹತ್ತಿದನು. ಅವನು ತನ್ನ ನೆರೆಹೊರೆಯವರಾದ ಕನ್ನಡ ತೆಲುಗು ಕೊಂಗು ವರಾಟ ನಾಗಪಟ್ಟಣ ಬಡಗ ಮೊದಲಾದವರನ್ನು ಗೆದ್ದು ಸರ್ವಾಧಿಪತಿಯಾಗಿ ಬುಕ್ಕರಾಯನೆಂದು ಕರೆಯಲ್ಪಟ್ಟನು".

(ಡೆಕಡಾ Vi-I. V. C. 4)

ಉ. ಗ್ಯಾಝೆಟಿಯರ್‌ಗಳು

1. ***Gazetteer of Southern India,*** p -98, 1855

"...ಈ ಪಟ್ಟಣವನ್ನೂ ಮತ್ತು ಲೆಖ್ಖವಿಲ್ಲದಷ್ಟು ಆಭರಣಗಳನ್ನೂ ಅಪಾರವಾದ ದ್ರವ್ಯವನ್ನೂ ತಾನು ತಪಸ್ಸು ಮಾಡುತ್ತಿದ್ದ ಕಾಲದಲ್ಲಿ ಹಾಲನ್ನು ತಂದುಕೊಡುತ್ತಿದ್ದ ಆ ಪ್ರಾಂತ್ಯದಲ್ಲಿ ವಾಸವಾಗಿದ್ದ ಬುಕ್ಕನೆಂಬ ಕುರುಬರವನಿಗೆ ಕೊಟ್ಟು, ಆ ರಾಜ್ಯಕ್ಕೆ ಪಟ್ಟಾಭಿಷಿಕ್ತನನ್ನಾಗಿ ಮಾಡಿದರು. ಈ ಅರಸರಿಗೆ ರಾಯರು ಎಂಬ ಬಿರುದನ್ನು ವಿದ್ಯಾರಣ್ಯ ಮಹಾನುಭಾವರೇ ಅನುಗ್ರಹಿಸಿದರು. ಅಂದಿನಿಂದ ಬುಕ್ಕರಾಯ ಹರಿಹರ ರಾಯರೆಂಬ ಹೆಸರಾದವು. ಇಷ್ಟೇ ವಿಜಯನಗರ ರಾಜ್ಯದ ಮೂಲಕ ಚರಿತ್ರೆಯು."

2. ***Manual of Ballary District Gazetter,*** **p-107, 1896**

"ವಿದ್ಯಾರಣ್ಯರು ಒಂದು ಪಟ್ಟಣವನ್ನು ಕಟ್ಟಿ ಅದನ್ನು ತಾವು ತಪಸ್ಸು ಮಾಡುತ್ತಿದ್ದ ಕಾಲದಲ್ಲಿ ಪ್ರತಿದಿನವೂ ಹಾಲನ್ನು ತಂದುಕೊಡುತ್ತಿದ್ದ ಬುಕ್ಕನೆಂಬ ಕುರುಬರವನಿಗೆ ರಾಜ್ಯಾಭಿಷೇಕವನ್ನು ಮಾಡಿ ತಾವೇ ಮಂತ್ರಿಗಳಾಗಿದ್ದುಕೊಂಡು ತಮ್ಮ ತಪಃಪ್ರಭಾವದಿಂದ ಆ ರಾಜ್ಯವನ್ನು ಘನತೆಗೆ ತಂದರು. ಹೀಗೆ ವಿದ್ಯಾರಣ್ಯರಿಂದ ಸ್ಥಾಪಿತವಾದ ಪಟ್ಟಣವನ್ನು ವಿದ್ಯಾನಗರಿ ಎಂದೂ ಬರಬರುತ್ತ ವಿಜನಗರವೆಂದೂ ಕರೆಯಲ್ಪಟ್ಟಿತು".

3. *Jon Kelsal, The Manual of the Administration of the Madras Presidency,* Vol-I, p-148, 1886

".....ಕ್ರಿ. ಶ. ೧೩೩೬ರಲ್ಲಿ ಕೃಷ್ಣಾ ಡಿಸ್ಟ್ರಿಕ್ಟ್‌ಗೆ ಸೇರಿದ ದಕ್ಷಿಣದಲ್ಲಿ ಒಂದು ಪ್ರಬಲವಾದ ಹಿಂದೂ ರಾಜ್ಯವು ಹಕ್ಕ ಬುಕ್ಕರೆಂಬ ಇಬ್ಬರು ಸಹೋದರರಿಂದ ಸ್ಥಾಪಿಸಲ್ಪಟ್ಟಿತು. ಇವರಿಬ್ಬರೂ ಕರ್ನಾಟಕದಲ್ಲಿ ಆಳುತ್ತಿದ್ದ ಒಬ್ಬ ಸಣ್ಣ ಸಂಸ್ಥಾನೀಕನಾದ ಸಂಗಮನೆಂಬ ಕುರುಬರಾಜನ ಮಕ್ಕಳಾಗಿರುವರು."

ಊ. ಇತಿಹಾಸತಜ್ಞರ ಅಭಿಪ್ರಾಯಗಳು

೧. ಎಂ. ಶಾಮರಾವ್

"ಹಕ್ಕಬುಕ್ಕರು ಜಾತಿಯಲ್ಲಿ ಕುರುಬ (Shepherds) ರೆಂದು ತಿಳಿದು ಬರುತ್ತದೆ".

(ಮೈಸೂರು ಸಂಸ್ಥಾನದ ಚರಿತ್ರೆ, ಭಾಗ ೨, ೧೮೯೪)

೨. ಬಿ. ಸೂರ್ಯನಾರಾಯಣ ರಾವ್

"ಕ್ರಿ. ಶ. ೧೩೨೩ ರಲ್ಲಿ ವಾರಂಗಲ್ ದೊರೆಯ ಬಳಿ ಹಿಂದೂಧರ್ಮಕ್ಕೆ ಸೇರಿದ ಕುರುಬ ಜನಾಂಗದ ಇಬ್ಬರು ಸೋದರ(ಹಕ್ಕಬುಕ್ಕ)ರು ಭಂಡಾರದ ಉಸ್ತುವಾರಿ ಕೆಲಸದಲ್ಲಿದ್ದರು. ಇವರಿಗೆ ತಮ್ಮ ಧರ್ಮದ ಬಗ್ಗೆ ಅಪಾರವಾದ ನಂಬಿಕೆ ಮತ್ತು ಶ್ರದ್ಧೆಗಳಿದ್ದವು. ಮುಂದೆ ಇದೇ ಹೊತ್ತಿಗೆ ಆ ರಾಜ್ಯವು ನಾಶವಾಗಿ ಮತ್ತೆ ಧ್ವಂಸಕ್ಕೆ ಒಳಗಾದಾಗ ಇವರು ಆನೆಗೊಂದಿಯ ರಾಜನಲ್ಲಿ ಸೇವಾನಿರತರಾದರು".

(ಬಿ. ಸೂರ್ಯನಾರಾಯಣ ರಾವ್ ಅವರ **The Never to be Forgotten Empire,** ಅನುವಾದ: ಬಾಲಸುಬ್ರಹ್ಮಣ್ಯ *ಮರೆಯಲಾಗದ ಮಹಾಸಾಮ್ರಾಜ್ಯ,* ಪುಟ. ೨೭, ೨೦೦೦)

೨. ಎಂ. ಜಿ. ನಂಜುಂಡಾರಾಧ್ಯ

"ವಿಜಯನಗರದ ಅರಸರ ಮೂಲಪುರುಷರು ಜಾತಿಯಲ್ಲಿ ಕುರುಬ ಜನಾಂಗಕ್ಕೆ ಸೇರಿದವರೆಂಬ ಬಗ್ಗೆ ಈ ಗ್ರಂಥದಲ್ಲಿ ಅನೇಕ ವಿದ್ವಾಂಸರ ಉಕ್ತಿಗಳನ್ನು, ಶಾಸನ ಆಧಾರಗಳನ್ನು ಸಂಗ್ರಹಿಸಲಾಗಿದೆ. ಇಂದೂರು ಹೋಳ್ಕರ್ ರಾಜವಂಶವೂ ಸಹ ಇದೇ ಜನಾಂಗಕ್ಕೆ ಸೇರಿದ ಬಗ್ಗೆ ಇದೇ ಲೇಖಕರು ಬರೆದಿರುವ ಇತರ ಗ್ರಂಥಗಳಲ್ಲಿ ಹೆಚ್ಚಾದ ಸಮರ್ಥನೆಯು ಕಂಡುಬರುತ್ತದೆ."

(ವಿ. ಆರ್. ಹನುಮಂತಯ್ಯನವರ *ವಿಜಯನಗರ ಸಾಮ್ರಾಜ್ಯ ಚರಿತ್ರೆ* ಕೃತಿಗೆ ಬರೆದು ಮುನ್ನುಡಿಯಲ್ಲಿ ಪುಟ. iv, ಬೆಂಗಳೂರು, ೧೯೫೨)

೩. ಪಂಡಿತ ಕಾಶೀನಾಥಶಾಸ್ತ್ರಿಗಳು

"ಹುಕ್ಕ ಬುಕ್ಕ ಸಹೋದರರು ಶ್ರೀ ರೇವಣಸಿದ್ಧನ ಅಸಾಧಾರಣ ಭಕ್ತರು. ಇವರಿಗೆ ಯಾವಾಗಲೂ ಶ್ರೀ ರೇಣುಕನ ಧ್ಯಾನವಲ್ಲದೆ, ಮತ್ತಾವ ಧ್ಯಾನವೂ ಇರುತ್ತಿರಲಿಲ್ಲ. ಇವರು ಹಾಲುಮತದವರು. ಅನಾದಿಕಾಲದಿಂದ ಇಂದಿನವರೆಗೂ ಹಾಲುಮತ ದವರಿಗೆಲ್ಲ ಶ್ರೀ ರೇವಣಸಿದ್ಧೇಶ್ವರರೇ ಕುಲದೇವರೆಂಬುದು ಸರ್ವರಿಗೂ ತಿಳಿದ ವಿಷಯವೇ ಆಗಿದೆ. ಶ್ರೀ ರೇವಣಸಿದ್ಧೇಶ್ವರನಲ್ಲಿ ಇವರಿಗೆ ಅಸಾಧಾರಣ ಭಕ್ತಿಯಿದ್ದು ದಕ್ಕೆ ಇದೇ ಮೂಲಕಾರಣವು."

(*ವಿಜಯನಗರ ಸಾಮ್ರಾಜ್ಯವೂ ಶ್ರೀ ರೇಣುಕಾಚಾರ್ಯರೂ*, ಪುಟ. ೭, ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ. ಪಂ. ಮಹಾದೇವಯ್ಯನವರು, ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕಲ್ ಪ್ರೆಸ್ ಮೈಸೂರು, ೧೯೭೪, ಚತುರ್ಥ ಮುದ್ರಣ)

೪. ಡಾ. ವಸುಂಧರಾ ಫಿಲಿಯೋಜಾ

"ಹಕ್ಕ, ಬುಕ್ಕ, ಕಂಪಣ್ಣ (ಮೂಲದಲ್ಲಿ ಕೆಂಪಣ್ಣ ಎಂದಿರಬೇಕು), ಮಾರಪ್ಪ, ಮುದ್ದಪ್ಪ ಎಂಬ ಹೆಸರುಗಳನ್ನು ನೋಡಿದರೆ ಈ ವಂಶಸ್ಥರು ಬಹುಶಃ ಕುರುಬರಂತಹ ಜಾತಿಗೆ ಸೇರಿರಬೇಕು ಎಂದೆನಿಸುವುದು. ಅವರು ಕುರುಬರಾದಾಗ್ಯೂ ರಾಜ್ಯವನ್ನು ಕಟ್ಟಿ ಅನೇಕ ವರುಷ ಆಳಿದ್ದರಲ್ಲಿ ಅಚ್ಚರಿಯೆನಿಲ್ಲ".

(*ವಿಜಯನಗರ ಸಾಮ್ರಾಜ್ಯ ಸ್ಥಾಪನೆ*, ಪುಟ, ೫ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೦)

೫. ಡಾ. ಎಂ. ಎಂ. ಕಲಬುರ್ಗಿ

"ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದ ಹುಕ್ಕಬುಕ್ಕರು ಕುರುಬರೆಂಬುದನ್ನು, ಹಂಪೆಯ ಸುತ್ತಮುತ್ತ ಕುರುಬರ ಸಂಖ್ಯೆ ಅಧಿಕ ಸಂಖ್ಯೆಯಲ್ಲಿರುವುದನ್ನು ನೆನೆದರೆ......"

(*ಮಾರ್ಗ* ೩, ಪುಟ ೨೨೧, ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು, ೧೯೯೮)

೬. ಡಾ. ಮಾದೇಗೌಡ

"ಒಂದು ರಾಜಕೀಯ ವ್ಯವಸ್ಥೆ ಅಥವಾ ರಾಜ್ಯಸ್ಥಾಪನೆ ಕಾರ್ಯ ದಂತಕತೆಗಳು ಅಥವಾ ಪುರಾಣ ಕತೆಗಳು ವಿವರಿಸುವ ಹಾಗೆ ದಿಢೀರನೆ ಜರುಗುವ ಸಂಗತಿಯಲ್ಲ. ಅದಕ್ಕೆ ಸಾಕಷ್ಟು ಪೂರ್ವಸಿದ್ಧತೆ, ಸಂಘಟನೆ, ಬದ್ಧತೆ, ಸಮರ್ಥ ನಾಯಕತ್ವ ಮುಂತಾದವುಗಳು ಪ್ರಮುಖ ಅಂಶಗಳಾಗಿರುತ್ತವೆ. ಇದಕ್ಕೆ ಪೂರಕವಾಗಿ ಕೊನೆಯ ಹೊಯ್ಸಳ ಅರಸರು ಮತ್ತು ವಾರಂಗಲ್ಲಿನ ಸಂಸ್ಥಾನಗಳಲ್ಲಿ ಹಕ್ಕಬುಕ್ಕರು ರಾಜಕೀಯ ಸೇವೆ ಕೈಗೊಂಡು ಈ ದೀರ್ಘ ಆಡಳಿತ ಮತ್ತು ಸೈನಿಕ ಅನುಭವ ಪಡೆದಿದ್ದು ಅಂದಿನ ಸಮಕಾಲೀನ ರಾಜಕೀಯ ಸವಾಲುಗಳನ್ನು ಎದುರಿಸುವ ಸಕಲ ಅರ್ಹತೆಯನ್ನು ಪಡೆದಿದ್ದರು. ಇವರು ಕೇವಲ ಬೋರೆ ಮೇಲೆ ಕುರಿಕಾಯುವ ಕುರಿಗಾಹಿಗಳಾಗಿರದೆ, ಆ ಪಂಡಗದಲ್ಲೇ ಸುಮಾರು ೨೦೦ ವರ್ಷಗಳ ಅವಧಿಯಲ್ಲಿ ಉಚ್ಚವರ್ಗವಾಗಿ ರೂಪುಗೊಂಡು ಕುರುಬ ಒಡೆಯರ ವರ್ಗದಿಂದ ಬಂದವರಾಗಿದ್ದು ರಾಜ್ಯ ನಿರ್ಮಾಣ ಕಾರ್ಯವನ್ನು ಯಶಸ್ವಿಯಾಗಿ ರೂಪಿಸಲು ಎಲ್ಲಾ ಅರ್ಹತೆಗಳನ್ನೂ ಪಡೆದಿದ್ದರೆಂಬುದು ಸಮಂಜಸವಾಗಿ ಕಂಡುಬರುತ್ತದೆ".

(*ವಿಜಯನಗರ ಸಾಮ್ರಾಜ್ಯ ಸಂಸ್ಥಾಪಕರ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ*, ಪುಟ ೧೨, ೧೯೯೯)

ಮೇಲಿನ ಎಲ್ಲ ಆಕರಗಳನ್ನು ಮತ್ತು ವಿದ್ವಾಂಸರ ಅಭಿಪ್ರಾಯಗಳನ್ನು ಅವಲೋಕಿಸಿದಾಗ ಹಕ್ಕಬುಕ್ಕರ ಇತಿವೃತ್ತ ಕುರಿತಂತೆ ಕೆಲವು ಸಂಗತಿಗಳನ್ನು ಕೆಳಗಿನಂತೆ ಕ್ರೋಡೀಕರಿಸಬಹುದು.

೧. ವಿಜಯನಗರ ಸಾಮ್ರಾಜ್ಯ ಸ್ಥಾಪಕರಾದ ಹಕ್ಕಬುಕ್ಕರ ಮೂಲ ಹೆಸರು ಹರಿಯಪ್ಪೊಡೆಯರ್ ಬುಕ್ಕಣ್ಣೊಡೆಯರ್ ಎಂಬುದು ಉಲ್ಲೇಖಿತ ಆಕರಗಳಿಂದ ದೃಢಪಡುತ್ತದೆ.

೨. ಹರಿಯಪ್ಪೊಡೆಯನ ನೆನಪಿಗಾಗಿ ಕುರುಬರು ತಾವು ವಾಸಿಸುವ ಓಣಿಗಳಲ್ಲಿ ಹರಿಯಪ್ಪ ದೇವಾಲಯವನ್ನು ಸ್ಥಾಪಿಸಿ ಆರಾಧಿಸುತ್ತಿರುವುದು ಆತನ ಬಗೆಗಿದ್ದ ಗೌರವ ಭಕ್ತಿಯ ಪ್ರತೀಕಗಳಾಗಿವೆ.

೩. ಶಾಸನಗಳಲ್ಲಿ ಉಕ್ತವಾದಂತೆ ಹರಿಯಪ್ಪೊಡೆಯರ್, ಬುಕ್ಕಣ್ಣೊಡೆಯರ್ ಮುಂತಾದ ಸಂಗಮನ ವಂಶಜರು ಕುರುಬ ಸಮುದಾಯದಲ್ಲಿರುವ ಒಡೆಯರು ಎನ್ನುವ ಪಂಗಡಕ್ಕೆ ಸೇರಿದವರೆಂಬುದು ಖಚಿತವಾಗುತ್ತದೆ.

೪. ಕುರುಬರ ಕುಲಗುರುವಾದಂಥ ರೇವಣಸಿದ್ಧೇಶ್ವರ ಹಕ್ಕನ ಕನಸಿನಲ್ಲಿ ಬಂದು ಸಾಮ್ರಾಜ್ಯ ಸ್ಥಾಪಿಸಲು ಆಶೀರ್ವಾದ ಮಾಡಿದ ಸಂಗತಿಯನ್ನು ಕೆಳದಿ ಬಸವರಾಜನ ಶಿವತತ್ವ ರತ್ನಾಕರ ಹಾಗೂ ಕಾಶೀ ಲಕ್ಷ್ಮಣಶಾಸ್ತ್ರಿ ರಚಿತ ಗುರುವಂಶ ಕಾವ್ಯ ತಿಳಿಸುತ್ತದೆ. ಇದರಿಂದ ಹಕ್ಕಬುಕ್ಕರು ರೇವಣಸಿದ್ಧೇಶ್ವರನ ಅನುಯಾಯಿಗಳಾದ ಒಡೆಯರ ಪಂಗಡಕ್ಕೆ ಸೇರಿದವರೆಂಬುದು ಇನ್ನೂ ಸ್ಪಷ್ಟವಾಗುತ್ತದೆ.

೫. ಹಕ್ಕಬುಕ್ಕರು ಓರಂಗಲ್, ಹೊಯ್ಸಳ ಅರಸುಮನೆತನ, ಆನೆಗೊಂದಿಯಲ್ಲಿ ರಾಜ್ಯಭಾರ ಮಾಡಿ ಕೊನೆಗೆ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಕಾರಣವಾದ ಸಂಗತಿಗಳು ಚರಿತ್ರೆಯಿಂದ ನಮಗೆ ತಿಳಿದುಬರುತ್ತದೆ.

೬.ಹಕ್ಕಬುಕ್ಕರು ಓರಂಗಲ್‌ನಲ್ಲಿ ರಾಜ್ಯಭಾರ ಮಾಡಿದ ನೆನಪಿಗಾಗಿ ಕುರುಬರ ಕೇರಿಗಳಲ್ಲಿ ರೇವಣಸಿದ್ಧೇಶ್ವರ ಮಠವಿರುವ ಪಕ್ಕದಲ್ಲಿ ಓರಂಗಲ್ಲಮ್ಮನ ದೇವಸ್ಥಾನವಿರುವುದನ್ನು ಈಗಲೂ ಕಾಣಬಹುದು. ಉದಾಹರಣೆಗೆ ತುಮಕೂರು ಜಿಲ್ಲೆ ತುರುವೆಕೆರೆ, ಚಿಕ್ಕನಾಯ್ಕನಹಳ್ಳಿ, ಚಿತ್ರದುರ್ಗ ಜಿಲ್ಲೆ ಹರ್ತಿಕೋಟೆ ಕುರುಬರ ಕೇರಿ ಗಳಲ್ಲಿ ರೇವಣಸಿದ್ಧೇಶ್ವರ ಮಠ ಮತ್ತು ಓರಂಗಲ್ಲಮ್ಮ ದೇವಸ್ಥಾನಗಳಿವೆ. ನಿರ್ದಿಷ್ಟ ಸಮಯದಲ್ಲಿ ಕುರುಬರು ಇಲ್ಲಿ ಸಮಾವೇಶಗೊಂಡು ಜಾತ್ರೆ ಉತ್ಸವಗಳನ್ನು ತಪ್ಪದೇ ನಡೆಸಿಕೊಂಡು ಬರುತ್ತಾರೆ.

೭. ವ್ಯಾಪಕವಾದ ಕ್ಷೇತ್ರಕಾರ್ಯ ಕೈಗೊಂಡು ಇನ್ನೂ ಹೊಸ ಹೊಸ ಸಂಗತಿಗಳನ್ನು ಶೋಧಿಸಿ ಹಕ್ಕಬುಕ್ಕರ ಸಮಗ್ರವಾದ ಚರಿತ್ರೆಯನ್ನು ಮರುರೂಪಿಸಲು ಇಂದು ಅಗತ್ಯವಾಗಿದೆ.

೧೯. ಹೊಸಪಟ್ಟಣ ಮತ್ತು ವಿರೂಪಾಕ್ಷಪಟ್ಟಣ : ಸ್ಥಳ ಶೋಧನೆ

ಡಾ. ಕೂ. ಸ. ಅಪರ್ಣ

ಸಂಗಮ ಅರಸರ ಇತಿಹಾಸದ ಅಧ್ಯಯನಕ್ಕೆ ತೊಡಗಿದಾಗ ಆ ಕಾಲದ ಶಾಸನಗಳಲ್ಲಿ ಉಲ್ಲೇಖವಾಗಿರುವ ವಿರೂಪಾಕ್ಷಪಟ್ಟಣ ಮತ್ತು ಹೊಸಪಟ್ಟಣ - ಇವೆರಡೂ ಸ್ಥಳಗಳು ಗಮನ ಸೆಳೆಯುತ್ತವೆ. ಇವು ಆಡಳಿತಾತ್ಮಕವಾಗಿ ಪ್ರಮುಖ ಸ್ಥಳಗಳಾಗಿದ್ದರಿಂದ ಇತಿಹಾಸ ರಚನೆಯಲ್ಲಿ ಇವುಗಳಿಗಿದ್ದ ಸ್ಥಳಗಳನ್ನು ಗುರುತಿಸಿಕೊಳ್ಳುವುದು ಮುಖ್ಯವಾಗುತ್ತದೆ. ವಿರೂಪಾಕ್ಷಪಟ್ಟಣ ಮತ್ತು ಹೊಸಪಟ್ಟಣಗಳನ್ನು ಉಲ್ಲೇಖಿಸುವ ಶಾಸನಗಳನ್ನು ಕಾಲಾನುಕ್ರಮದಲ್ಲಿ ಈ ಕೆಳಗಿನಂತೆ ಗಮನಿಸಬಹುದಾಗಿದೆ.

ಹೊಸಪಟ್ಟಣ

1. ವೀರಬಲ್ಲಾಳದೇವರ್ಸರು *ಹೊಸವೀಡಿನೊಳು* ಸ(ಸು) ಖ ಸಂಕಥಾ ವಿನೊದದಿಂದ ರಾಜ್ಯಂಗೆಯ್ಯುತ್ತಮಿ(ರೆ) [ಎಕ. 10, ಗೌರಿಬಿದನೂರು 49 (ಕೆಂಕೆರೆ) ಕ್ರಿಶ.1300].
2. '*ಪುದುಪಟ್ಟೆ ಬೀಡಿನ* ಉಲ್ಲೇಖ [ಎಕ.10, ಕೋಲಾರ 173, (ಮಟ್ನಹಳ್ಳಿ) ಕ್ರಿಶ. 1321(ತಮಿಳು)].
3. ಶ್ರೀ ವೀರಬಲ್ಲಾಳ ದೇವರಸರು ಹೊಸಬೆಟದಲಿ ಸುಖದಿಂದ ಪ್ರೀತ್ವಿರಾಜ್ಯಂಗೇವಲ್ಲಿ [ಎಕ. 9, ನೆಲಮಂಗಲ 9(ಮಂಠಾಳು) ಕ್ರಿಶ. 1377].
4. ಶ್ರೀ ವೀರಬಲ್ಲಾಳದೇವರಸರು *ಹೊಸನಾಡಿನಲ್ಲಿ* ಸುಖಸಂ...ಗೆಯುತ್ತಮಿರಲು (*ಎಕ.* 9 ದೊಡ್ಡಬಳ್ಳಾಪುರ 43-ಶಾಕಲದೇವನಪುರ - ಕ್ರಿಶ.1340)[1].
5. ಪೂರ್ವಪಶ್ಚಿಮದಕ್ಷಿಣಸಮುದ್ರಾಧಿಪತಿ ಶ್ರೀ ವೀರ ಬುಕ್ಕಣವೊಡೆಯರು ಹೊಯಿಸಳಾನ್ವಯ ಮಹೀಮಂಡಲಮಂ ನಿಜಭುಜ ಮಂಡನವಾಗಿ ಪಾಲಿಸುತ *ಹೊಸಪಟ್ಟಣದಲಿ* ಸುಖಸಂ.... ರಾಜ್ಯಂಗೆಯ್ಯುತ್ತ (*MAR* 1925-84ಗೌರಿಬಿದನೂರು ತಾ. ಹುಣಸನಹಳ್ಳಿ ಕ್ರಿಶ. 1354)
6. ಪೂರ್ವಪಶ್ಚಿಮ ಸಮುದ್ರಾಧಿಪತಿ ಶ್ರೀ ವೀರ ಬುಕ್ಕರಾಯವೊಡೆಯರು ಹೊಯ್ಸಳ ದೇಶದೊಳಗಣ ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತಂ ನಿಜಗಲಿಕಟಕ

ರಾಯ ರಾಜಧಾನಿ *ಹೊಸಪಟ್ಟಣದಲು* ಸುಖಸ... ಗೆಯ್ಯುತ್ತ [ಎಕ.11, ಚಿತ್ರದುರ್ಗ-2 (ಚಿತ್ರದುರ್ಗ) ಕ್ರಿ.ಶ. 1355].

7. ಶ್ರೀಮದ್ರಾಜಗುರು.... ಮೌನಪಾಚಾರ್ಯ ಶ್ರೀ ಹೊಸಊರ... ಶಿಷ್ಯನೂಲವಾಗಿ... ಸೆಟ್ಟಿಯ ನಿಷಿಧಿ [ಎಕ. 12(ಪ) ಕಡೂರು 214 (ಸಕ್ಕರೆಪಟ್ಟಣ) ಕ್ರಿ.ಶ. 1360].

8. ಇಂತು ಹೊಯ್ಸಳ ಭೂವಿಭುಲಕ್ಷ್ಮೀಲಪನಮುಂ ಶ್ರೀ ವೀರಬುಕ್ಕರಾಯ ಸಾವ್ರಾಜ್ಯರಮಾರಮಣೀಯವಿಲಾಸದರ್ಪಣೋಪಮವೆನಿಸಿ ಸೊಗಯಿಸುವ *ಹೊಸಪಟ್ಟಣದೊಳು* [ಎಕ.12(ಪ) ಕಡೂರು 212 (ಸಕ್ಕರೆಪಟ್ಟಣ)-ಒಂದನೇ ಬುಕ್ಕನಕಾಲ][2].

9. ವೀರಬುಕ್ಕರಾಯನು ಪೃಥ್ವೀರಾಜ್ಯವ ಮಾಡುವ ಕಾಲದಲಿ... ಆನೆಯ ಗೊಂದಿ ಹೊಸಪಟ್ಟಣ ಪೆನುಗೊಂಡ ಕಲ್ಲೆಹದ.....[ಎಕ.2(ಪ)ಶ್ರಬೆ. 475 ಕ್ರಿಶ.1368].

10. ಶ್ರೀಮಲ್ಲಕ್ಷ್ಮೀ ಸೇನಾಭಟ್ಟಾರಕರವರ ಶ್ರೀಮತ ಮಾನಸೇನ ದೇವರ ನಿಷಿಧಿಯ.... *ಶ್ರೀಮುತ್ತದ ಹೊಸಊರ* ಬೈಚಸೆಟ್ಟಿಯ ಮಕ್ಕಳು [ಎಕ12(ಪ) ಕಡೂರು 213 ಸಕ್ಕರೆಪಟ್ಟಣ ಕ್ರಿ.ಶ.1405-06].

11. *ಹೊಸಪಟ್ಟಣದ* ಲಖಿಂಣವೊಡೆಯರ ನಿರೂಪದಿಂ.... (ಎಕ. 11 ಹೊಳಲ್ಕೆರೆ 75, (ರಾಮಗಿರಿ) ಕ್ರಿಶ. 1410).

12. ಹೋಸಲದೇಶೇ *ಹೊಸಪಟ್ಟಣ* ರಾಜ್ಯಕೇ ಆರಂದವ್ಯಾಲಿಕಾವೇಂಠೇ ಕೊತ್ತಂಗಾಲಸ್ಥಳೇ ಶುಭೇ ಕಾಡಸೂರಾಖ್ಯಕಂ ಗ್ರಾಮಂ [ಎಕ.3(ಪ) ಗುಂಡ್ಲು ಪೇಟೆ 147 (ತ್ರಿಯಂಬಕಪುರ) ಕ್ರಿ.ಶ.1448].

ವಿರೂಪಾಕ್ಷಪಟ್ಟಣ

13. ವೀರಬಲ್ಲಾಳದೇವರು *ವಿರುಪಾಕ್ಷಪಟ್ಟಣದ* ನೆಲೆವೀಡಿನಲಿ ಸುಖಸಂಕಥಾ ವಿನೋದದಿಂ ರಾಜ್ಯಂಗೈಯಿಉತ್ತಿರೆ [ಎಕ. 10(ಪ)ಅರಸೀಕೆರೆ 103 (ಜೆಸಿಪುರ) ಕ್ರಿ.ಶ.1330]

14. ಶ್ರೀ ವೀರನಾರಸಿಂಹ್ವ ದೇವರ ಕುಮಾರ ಶ್ರೀ ವೀರಬಲ್ಲಾಳ ದೇವರ್ಸರೂ ಶ್ರೀಮನ್ಮಮಹಾಪ್ರಧಾನಂವೊಂನಣ್ಣನವರ ಮಕ್ಕಳು ರಾಮೆಯ ದಂಣ್ಣಾಯ್ಕರೂ *ಶ್ರೀ ವಿರೂಪಾಕ್ಷಹೊಸದುರ್ಗದ*ಲ್ಲಿಸುಖಸಂ.... ಪೃಥ್ವೀರಾಜ್ಯಂಗೆಯ್ವುತಿದ್ದಲ್ಲಿ [ಎಕ.12, ಗುಬ್ಬಿ-30(ಸಂಪಿಗೆ)ಕ್ರಿಶ. 1331]

15. ಶ್ರೀವೀರಬಲ್ಲಾಳ ದೇವರಸರು ನಿಜದ ವೀರದ ಏಕರಾಯ ರಾಯ ರಾಜವಾಗಿ ಶ್ರೀ ವೀರವಿಜಯ ವಿರೂಪಾಕ್ಷಪುರದಲ್ಲಿ ನೆಲೆವೀಡಾಗಿ ಸುಖರಾಜ್ಯಂಗೆಯುತ್ತಿರಲು [ಎಕ.9, ಹೊಸಕೋಟೆ 43 (ಕೊರಟಿ) ಕ್ರಿ.ಶ.1339].

16. ಶ್ರೀವೀರಬಲ್ಲಾಳ ದೇವರು ವಿರುಪಾಕ್ಷದ...ದಲು ಸುಕರಾಜ್ಯಂಗೆಯುವಲು [ಎಕ.9, ದೇವನಹಳ್ಳಿ 21 (ಮುದಗುರಕಿ) ಕ್ರಿ.ಶ.1342].

17. ಆ ವಿರೂಪಾಕ್ಷಪುರದ ಬ್ರಾಹ್ಮಣರಿಗೆ ನಡವಬಾಳು [SII.XXVII (Coondapoor) No. 47 (Paduvari) 1360 AD].

ಹೀಗೆ ಒಟ್ಟು 17 ಶಾನಗಳು ಇವೆ[೨೪]. ಇವುಗಳಲ್ಲಿ ವಿರೂಪಾಕ್ಷಪಟ್ಟಣವನ್ನು 5 ಶಾಸನಗಳು ಉಲ್ಲೇಖಿಸಿದೆ ಹಾಗೂ ಇವು ಹಾಸನ, ಬೆಂಗಳೂರು ಮತ್ತು ತುಮಕೂರು, ದಕ್ಷಿಣಕನ್ನಡ ಜಿಲ್ಲೆಗಳಲ್ಲಿವೆ. ಇವುಗಳ ಕಾಲಾವಧಿಯು ಕ್ರಿ.ಶ. 1330 ರಿಂದ ಕ್ರಿ.ಶ. 1342 ಆಗಿದೆ (1360ರಲ್ಲಿ ಒಮ್ಮೆ ಪ್ರಾಸಂಗಿಕವಾಗಿ ಬಂದಿದೆ). ಉಳಿದಂತೆ, 12 ಶಾಸನಗಳು ಹೊಸಪಟ್ಟಣವನ್ನು ಉಲ್ಲೇಖಿಸಿವೆ. ಇವು ಕೋಲಾರ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ತಲಾ 3, ಚಿತ್ರದುರ್ಗ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ತಲಾ 2, ಹಾಸನ ಜಿಲ್ಲೆಯಲ್ಲಿ 1, ಮೈಸೂರು ಜಿಲ್ಲೆಯಲ್ಲಿ 1- ಹೀಗೆ ಹಂಚಿಹೋಗಿವೆ. ಈ ಯಾವ ಉಲ್ಲೇಖಗಳೂ ಬಳ್ಳಾರಿ ಜಿಲ್ಲೆಯಲ್ಲಿ ದೊರೆತಿಲ್ಲವೆಂಬುದನ್ನು ಮುಖ್ಯವಾಗಿ ಗಮನಿಸಬೇಕಾಗಿದೆ. ಇವುಗಳ ಕಾಲದ ಹರಹು ಕ್ರಿಶ.1300 ರಿಂದ 1448ರವರೆಗೆ ಇದ್ದು, ಕ್ರಿ.ಶ.1365ರ ನಂತರ 4 ಉಲ್ಲೇಖಗಳು ಮಾತ್ರ ದೊರೆತಿದ್ದು, ಇವುಗಳ ಕಾಲದ ಅಂತರ ಹೆಚ್ಚಾಗಿದೆ. ಆಡಳಿತ ಪ್ರದೇಶವನ್ನು ಉಲ್ಲೇಖಿಸಿರುವ ದೃಷ್ಟಿಯಿಂದ ಕ್ರಿಶ. 1365ರವರೆಗಿನ ಉಲ್ಲೇಖಗಳು ಮಾತ್ರ ಗಮನಾರ್ಹ ವಾಗಿವೆ. ಮೂರನೇ ಬಲ್ಲಾಳನ ಕಾಲದಲ್ಲಿ ವಿರೂಪಾಕ್ಷಪಟ್ಟಣ ಮತ್ತು ಹೊಸಪಟ್ಟಣ - ಎರಡರ ಉಲ್ಲೇಖಗಳೂ ಇದ್ದರೆ, ಬುಕ್ಕನ ಕಾಲದಲ್ಲಿ ಹೊಸಪಟ್ಟಣದ ಉಲ್ಲೇಖ ಮಾತ್ರವೇ ಇದೆ (ಪ್ರಾಸಂಗಿಕವಾಗಿ ಒಮ್ಮೆ ಮಾತ್ರ ವಿರೂಪಾಕ್ಷಪುರದ ಉಲ್ಲೇಖವಿದೆ).

ಹೊಸಪಟ್ಟಣಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, 'ಹೊಸವೀಡು'ಎಂಬ ಉಲ್ಲೇಖವು ಕ್ರಿಶ.1300ರ ಕೆಂಕೆರೆಯ ಶಾಸನದಲ್ಲಿ ದೊರೆತಿದ್ದು (ಕ್ರಸಂ.1), ವೀರ ಬಲ್ಲಾಳ(ಮೂರನೇ ಬಲ್ಲಾಳ)ನು ಹೊಸವೀಡಿನಿಂದ ಆಡಳಿತ ನಡೆಸುತ್ತಿದ್ದನೆಂದು ಅದರಲ್ಲಿ ಹೇಳಿದೆ. ನಂತರ ಕ್ರಿ.ಶ. 1321ರ ತಮಿಳುಶಾಸನದಲ್ಲಿ ಇದು 'ಪುದುಪಡೈವೀಡು' ಎನಿಸಿದೆ (ಕ್ರಸಂ.2). ಕ್ರಿ.ಶ. 1340ರ ಶಾಕಲದೇವನಪುರದ ಶಾಸನದಲ್ಲಿ 'ಹೊಸನಾಡು' ಎಂಬ ಉಲ್ಲೇಖವಿದ್ದು, ವೀರಬಲ್ಲಾಳನ ಆಳ್ವಿಕೆಯಲ್ಲಿ

ಹೇಳಿದೆ (ಕ್ರಸಂ.4). ಕ್ರಿ.ಶ.1340ರ ನಂತರ ದೊರೆಯುವ ಮೊದಲ ಶಾಸನವೇ ಕ್ರಿಶ.1354ರ ಬುಕ್ಕನ ಆಳ್ವಿಕೆಯ ಶಾಸನವಾಗಿದೆ. ಬುಕ್ಕನ ಆಳ್ವಿಕೆಯನ್ನು ಹೇಳುವ 4 ಶಾಸನಗಳು (ಕ್ರಸಂ. 5-6, 8-9) 'ಹೊಸಪಟ್ಟವಣ " ಎಂದು ಉಲ್ಲೇಖಿಸಿವೆ. ಇವುಗಳ ಕಾಲದ ಹರಹು ಕ್ರಿ.ಶ. 1354ರಿಂದ 1365ರವರೆಗೆ. ಈ ನಂತರ ಹೊಸಪಟ್ಟಣದ ಉಲ್ಲೇಖ ಅಪರೂಪ ಅಥವಾ ಎಲ್ಲೋ ಒಂದೊಂದು ಇವುಗಳ ಹೊಸ ಊರು (ಕ್ರ.ಸಂ.7) ಮುತ್ತದ ಹೊಸೂರು (ಕ್ರ.ಸಂ. 10), ಹೊಸಪಟ್ಟಣ, (ಕ್ರಸಂ11), ಹೊಸ ಪಟ್ಟಣರಾಜ್ಯ (ಕ್ರಸಂ.12) ಎಂದು ಉಲ್ಲೇಖಿಸಿವೆ. ಇವುಗಳಲ್ಲಿ, ಮೊದಲನೆಯ ಉಲ್ಲೇಖವು ಒಂದನೇ ಬುಕ್ಕನ ಕಾಲದ್ದಾಗಿದ್ದರೆ, ಉಳಿದವು ಕ್ರಮವಾಗಿ ಕ್ರಿ.ಶ. 1405- 06, ಕ್ರಿ.ಶ. 1410 ಮತ್ತು ಕ್ರಿ.ಶ.1448ರದ್ದಾಗಿದ್ದು ಕಾಲದ ಅಂತರ ಹೆಚ್ಚಾಗಿರುವುದನ್ನಿಲ್ಲಿ ಗಮನಿಸಬಹುದು. ಇವಾವುವೂ ಯಾವುದೇ ರಾಜನನ್ನು ಉಲ್ಲೇಖಿಸುತ್ತಿಲ್ಲ ವೆಂಬುದೂ ಗಮನಾರ್ಹವಾಗಿದೆ. ಅಂದರೆ, ಕ್ರಿಶ: 1365ರ ಉಲ್ಲೇಖವೇ ಕೊನೆಯ ಪ್ರಮುಖ ಉಲ್ಲೇಖ ಎಂದು ಹೇಳಬಹುದಾಗಿದೆ.

ಹೊಸಪಟ್ಟಣ ಮತ್ತು ವಿರೂಪಾಕ್ಷಪಟ್ಟಣಗಳನ್ನು ಕ್ರಮವಾಗಿ ವಿಜಯನಗರ ಮತ್ತು 'ವಿರೂಪಾಕ್ಷತೀರ್ಥ'(=ಹಂಪೆ) ಎಂದು ಕೆಲವು ವಿದ್ವಾಂಸರು ಗುರುತಿಸಿದ್ದಾರೆ. ಕೆಲವು ವಿದ್ವಾಂಸರಲ್ಲಿ ಹೊಸಪಟ್ಟಣ ಮತ್ತು ವಿರೂಪಾಕ್ಷಪಟ್ಟಣ ಎರಡೂ ಹಂಪೆಯೇ ಎಂಬ ಅಭಿಪ್ರಾಯವೂ ಇದೆ. ಎಸ್. ಕೆ. ಐಯ್ಯಂಗಾರ್ (ಪು.22), ಪಿ. ಬಿ. ದೇಸಾಯಿ, ವಸುಂಧರಾ ಫಿಲಿಯೋಜಾ (ಪು. 49), ವಿಲಿಯಂ ಕೋಯೆಲ್ಹೊ(ಪು.246-48), ಶ್ರೀನಿವಾಸಾಚಾರ್ (ಪು.೨೭), ಬರ್ಟನ್ ಸ್ಟೇನ್ (ಪು. 31-32), ಎಸ್. ಶ್ರೀಕಂಠಯ್ಯ (ಪು.27), ಲ. ನ. ಸ್ವಾಮಿ(ಪು.291), ಕೆ. ಎಂ. ಸುರೇಶ್ (ಪು.2) ಮುಂತಾದವರೆಲ್ಲರೂ ಇದೇ ಅಭಿಪ್ರಾಯವನ್ನು ಹೊಂದಿದ್ದಾರೆ. ಲ. ನ. ಸ್ವಾಮಿ, ಬಾ. ರಾ. ಗೋಪಾಲ್ (ಪು. 11) ಮತ್ತು ಹೆರಾಸ್ (qtd.Saletore, p.90) ಅವರುಗಳು, ತುಂಗಭದ್ರೆಯ ಉತ್ತರಕ್ಕೆ ಬಲ್ಲಾಳನ ಕಾಲದ ಹೊಸಪಟ್ಟಣವಿದೆ ಯೆಂದೂ, ದಕ್ಷಿಣಕ್ಕೆ ಹರಿಹರನ ಕಾಲದ ಹೊಸಪಟ್ಟಣವಿದೆಯೆಂದೂ ಹೇಳಿದ್ದಾರೆ[3]. ವಾಲ್ಟರ್ ಎಲಿಯಟ್ ಅವರು 'ಹೊಸಪಟ್ಟಣ'ವೆಂದರೆ, 'ವಿಜಯನಗರ' ಎಂದು ಬಹಳ ಹಿಂದೆಯೇ ಹೇಳಿದ್ದು[4], ಬೇರೆ ಬೇರೆ ಕಾರಣಗಳಿಗೆ, ಅದೇ ಅಭಿಪ್ರಾಯ ಇಂದಿಗೂ ಮುಂದುವರಿದಿದೆ. ಮೂರನೇ ಬಲ್ಲಾಳನು ತುಂಗಭದ್ರೆಯ ದಕ್ಷಿಣದಲ್ಲಿ ಒಂದು ನೆಲೆವೀಡನ್ನು ಸ್ಥಾಪಿಸಿದ ನೆಂಬ ಅಭಿಪ್ರಾಯದಿಂದ ಹಾಗೂ ಹಂಪೆಗೆ ವಿರೂಪಾಕ್ಷತೀರ್ಥವೆಂಬ ಹೆಸರಿದ್ದು, ನಾಲ್ಕನೇ ಬಲ್ಲಾಳನಿಗೆ ವಿರೂಪಾಕ್ಷಬಲ್ಲಾಳ ನೆಂಬ ಹೆಸರಿರುವುದರಿಂದ (ಇನ್ನೂ ಕೆಲವು ಕಾರಣಗಳಿವೆ) ಹೀಗೆ ಸಮೀಕರಿಸಲಾಗುತ್ತದೆ. ಆದರೆ, ಶಾಸನಗಳನ್ನು

ವಿಸ್ತೃತವಾಗಿ ಬೇರೆ ಬೇರೆ ಹಿನ್ನೆಲೆಗಳಿಂದ ಅಭ್ಯಾಸ ಮಾಡಿದರೆ, ಈ ಬಗ್ಗೆ ಅನುಮಾನ ಬರುತ್ತದೆ. ಕಾರಣ,

೧. ಹೊಸವೀಡು/ಹೊಸನಾಡಿನ ಮೊದಲ ಉಲ್ಲೇಖ ದೊರೆಯುವುದು - ಗೌರಿ ಬಿದನೂರು ತಾ. ನ. ಕೆಂಕೆರೆಯಲ್ಲಿ ಮತ್ತು ವಿರೂಪಾಕ್ಷಪಟ್ಟಣದ ಮೊದಲ ಉಲ್ಲೇಖ ದೊರೆಯುವುದು - ಅರಸೀಕರೆ ತಾ. ನ. ಜೆ. ಸಿ. ಪುರದಲ್ಲಿ. ಪಟ್ಟಿಯಲ್ಲಿರುವಂತೆ, ಯಾವ ಶಾಸನಗಳನ್ನು ಗಮನಿಸಿದರೂ, ಯಾವುವೂ ಹಂಪೆಯಲ್ಲಾಗಲೀ, ಬಳ್ಳಾರಿ ಜಿಲ್ಲೆಯಲ್ಲಾಗಲೀ ದೊರೆತಿಲ್ಲ, ಮಾತ್ರವಲ್ಲ, ಉತ್ತರ ಕರ್ನಾಟಕದಲ್ಲೆಲ್ಲೂ ಇಲ್ಲ.

2. ಮೂರನೇ ಬಲ್ಲಾಳನಿಗೂ ಹಂಪೆ ಪರಿಸರಕ್ಕೂ ಹೆಚ್ಚಿನ ಸಂಬಂಧವಿದ್ದಂತೆ ತೋರುವುದಿಲ್ಲ. ಇವನು ಉತ್ತರ ಕರ್ನಾಟಕವನ್ನು ವಶಪಡಿಸಿಕೊಳ್ಳುವುದು - ಕ್ರಿಶ. 1337ರಲ್ಲಿ. ಅದರ ಉಲ್ಲೇಖವೂ ದಕ್ಷಿಣದ ಚಾಮರಾಜನಗರ ತಾ.ನಲ್ಲಿದೆ[5]. ಹೊಸ ವೀಡಿನ ಉಲ್ಲೇಖವು ಕ್ರಿಶ. 1300 ರಲ್ಲೇ ಇದೆ; ಆದ್ದರಿಂದ ಅದನ್ನು ಉತ್ತರಾನ್ವಯ ಮಾಡಲಾಗುವುದಿಲ್ಲ. ಸೊಂಡೂರು ತಾಲೂಕಿನ ರಾಮಘಡದ ವೀರ ಗಲ್ಲು ಶಾಸನವು ಮೂರನೇ ಬಲ್ಲಾಳ ಮತ್ತು ಕಂಪಿಲರ ನಡುವಿನ ಯುದ್ಧಕ್ಕೆ ಸಂಬಂಧಿ ಸಿದ್ದು, ಅದರಲ್ಲಿ ಬಲ್ಲಾಳನ ನೆಲೆವೀಡಿನ ಉಲ್ಲೇಖವಿಲ್ಲ. ಅಲ್ಲದೆ, ಈ ಬಲ್ಲಾಳನ ಕಾಲದ ಯಾವ ಶಾಸನಗಳೂ ಹಂಪೆಯಲ್ಲಿಲ್ಲ.

3. ಪ್ರಾಸಂಗಿಕವಾಗಿ ಬಂದಿರುವ ಒಂದನ್ನು ಬಿಟ್ಟರೆ, ಮೂರನೇ ಬಲ್ಲಾಳನ ಕಾಲಾವಧಿಯ ನಂತರ 'ವಿರೂಪಾಕ್ಷಪಟ್ಟಣ'ದ ಉಲ್ಲೇಖಗಳು ದೊರೆಯುವುದಿಲ್ಲ. ಅಂತೇ ಸಂಗಮರು ಕ್ರಿ. ಶ. 1366 ರಲ್ಲಿ ಆನೆಗೊಂದಿಗೆ, ಅನಂತರ ವಿಜಯನಗರಕ್ಕೆ ಹೋದನಂತರ[6], ಅವರ ಆಳ್ವಿಕೆಯ ತಾಣವಾಗಿ 'ಹೊಸಪಟ್ಟಣ'ದ ಉಲ್ಲೇಖಗಳೂ ದೊರೆಯುವುದಿಲ್ಲ. ಈ ನಂತರವೂ ಮುಂದುವರಿದ ಹಂಪೆ-ವಿಜಯನಗರಗಳ ಬಗ್ಗೆ ಈ ರೀತಿಯ ಉಲ್ಲೇಖಗಳು ದೊರೆಯದಿರುವುದೂ ಗಮನಾರ್ಹವಾಗಿದೆ. ಹೀಗಾಗಿ, ಇವು ಹಂಪೆ/ವಿಜಯನಗರವನ್ನು ಸೂಚಿಸುತ್ತಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಮೇಲೆ ಹೇಳಿದ ಅಂಶಗಳನ್ನು (ಇನ್ನೂ ಕೆಲವು ಕಾರಣಗಳನ್ನು ಮುಂದೆ ಹೇಳಿದ್ದೇನೆ) ಗಮನಿಸಿದರೆ, ವಿರೂಪಾಕ್ಷಪಟ್ಟಣ/ಹೊಸಪಟ್ಟಣವೆಂದರೆ, ಹಂಪೆ/ ವಿಜಯನಗರ ಅಲ್ಲ ಎಂಬುದು ಸಾಬೀತಾಗುತ್ತದೆ. ಈ ಹಿಂದೆಯೇ ಕೆಲವು ವಿದ್ವಾಂಸರು ಈ ವಿಚಾರವನ್ನು ಗಮನಿಸಿದ್ದು, ಕೆಲವರು, ಅದು ಯಾವುದಿರಬಹುದು ಎಂಬ ಬಗ್ಗೆ ಕೆಲವು ಸೂಚನೆಗಳನ್ನು ನೀಡಿದ್ದಾರೆ. ಆ ಸೂಚನೆಗಳ ಹಿನ್ನೆಲೆಯಲ್ಲಿ ಮತ್ತು ನನ್ನ ಊಹೆಗಳ ಹಿನ್ನೆಲೆಯಲ್ಲಿ ಕ್ಷೇತ್ರಕಾರ್ಯವನ್ನು ಮಾಡಿ ಕಂಡುಬಂದ ಕೆಲವು ಸಾಕ್ಷ್ಯಗಳನ್ನು ಮುಂದಿಟ್ಟುಕೊಂಡು, ಹೊಸಪಟ್ಟಣ ಮತ್ತು ವಿರೂಪಾಕ್ಷಪಟ್ಟಣಗಳು ಯಾವುದಾಗಿರ

ಬಹುದೆಂಬುದನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಿದ್ದೇನೆ. ಈ ಹುಡುಕಾಟದಲ್ಲಿ ಇವುಗಳನ್ನು ಉಲ್ಲೇಖಿಸುವ ಶಾಸನಗಳು ದೊರೆತ ಸ್ಥಳಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದ್ದೇನೆ.

'ಹೊಸವೀಡು' ಎಂದು ಬಲ್ಲಾಳನ ಶಾಸನಗಳಲ್ಲಿ ಕರೆಯಲ್ಪಟ್ಟು, 'ಹೊಸಪಟ್ಟಣ' ವೆಂದು ಸಂಗಮರಲ್ಲೂ ಕೆಲಕಾಲ ಮುಂದುವರಿದ ಈ ಊರು ಯಾವುದು ಎಂದು ಗುರುತಿಸಬೇಕಾಗಿದೆ. ಬಲ್ಲಾಳನ ಕಾಲದ ಶಾಸನೋಲ್ಲೇಖಿಗಳು ಈ ಬಗ್ಗೆ ಸೂಚನೆ ನೀಡದಿದ್ದರೂ, ಸಂಗಮರ ಕಾಲದ ಎರಡು ಶಾಸನಗಳಲ್ಲಿ ಈ ಬಗ್ಗೆ ಸೂಚನೆ ಇದೆ. ಹೊಸಪಟ್ಟಣವು ಹೊಯ್ಸಳ ದೇಶದೊಳಗಿತ್ತು ಎಂದು ಚಿತ್ರದುರ್ಗದ ಶಾಸನವು ಸೂಚಿಸಿದ್ದರೆ (ಕ್ರ. ಸಂ. 6) , ಅದು ಹೊಯ್ಸಳ ಸಾಮ್ರಾಜ್ಯಲಕ್ಷ್ಮಿಯ ಮುಖದಂತೆ, ಬುಕ್ಕರಾಯನ ಸಾಮ್ರಾಜ್ಯ ಲಕ್ಷ್ಮಿಯ ಕನ್ನಡಿಯಂತೆ ಶೋಭಿಸುತ್ತಿತ್ತು ಎಂದು ಸಕ್ಕರೆ ಪಟ್ಟಣದ ಶಾಸನವು (ಕ್ರ. ಸಂ. 8) ಸೂಚಿಸಿದೆ. ಇದರಿಂದ, ಹೊಯ್ಸಳನಾಡಿನಲ್ಲಿದ್ದ ಮತ್ತು ಮೂರನೇ ಬಲ್ಲಾಳ ಮತ್ತು ಬುಕ್ಕರಾಯ-ಇವರಿಬ್ಬರ ಕಾಲದಲ್ಲೂ ರಾಜಧಾನಿಯಾಗಿದ್ದ 'ಹೊಸಪಟ್ಟಣ'ವನ್ನು ಹುಡುಕಬೇಕಾಗಿದೆ.

ಹೊಸಪಟ್ಟಣವನ್ನು ವಿಜಯನಗರವೆಂದು ಗುರುತಿಸಿರುವ ಎಸ್. ಶ್ರೀಕಂಠಯ್ಯ ಅವರು, ರೈಸ್ ಹೇಳುವಂತೆ ಅದನ್ನು ಇಂದಿನ ಮೈಸೂರು ದೇಶದಲ್ಲಿ ಹುಡುಕಬಾರದೆಂದೂ, ಆದರೆ ರೈಸ್ ಹೇಳುವುದು ಹಳೆಯ ಹೊಸಪಟ್ಟಣ ಎಂದೂ ಹೇಳಿದ್ದಾರೆ?[7] ಇಲ್ಲಿ ಹುಡುಕುತ್ತಿರುವುದು ಹಳೆಯ ಹೊಸಪಟ್ಟಣವನ್ನೇ. ಆದುದರಿಂದ ಅದು ಮೈಸೂರು ದೇಶದಲ್ಲಿದೆ ಎಂದು ಅವರೂ ಹೇಳಿದಂತಾಯಿತು. ರೈಸ್ ಅವರು ಹೊಸವೀಡು, ಹೊಸಬೆಟ್ಟ, ಹೊಸನಾಡು ಮುಂತಾದುವು ನಾಲ್ಕನೇ ಬಲ್ಲಾಳನಿದ್ದ ಸ್ಥಳ ಎಂದಿದ್ದಾರೆ[8]. ಅವರು, ಚಿತ್ರದುರ್ಗದಲ್ಲಿರುವ ಹೊಸದುರ್ಗ ಅಥವಾ ಗೋರಿಬಿದನೂರಿಲ್ಲಿರುವ ಹೊಸೂರು ಎಂಬುದೇ ಹೊಸಪಟ್ಟಣವಾಗಿರಬಹುದೆಂದೂ ಇನ್ನೊಂದೆಡೆ ಊಹಿಸಿದ್ದಾರೆ[9]. ಹಿರಿಯೂರು ಸೀಮೆಯಲ್ಲಿ ಹೊಸೂರು ಸ್ಥಳ, ಬಸವಾಪಟ್ಟಣ ಸ್ಥಳ (ಸಂಗಮರ ನೆಲೆವೀಡಾಗಿದ್ದ ಸ್ಥಳ) ಗಳು ಇರುವುದಾಗಿ ತಿಳಿದು ಬರುತ್ತದೆ[10]. ಚಿತ್ರದುರ್ಗ ಜಿಲ್ಲೆಯಲ್ಲಿನ ಉಲ್ಲೇಖವು ಸ್ವಲ್ಪ ತಡವಾಗಿ (ಕ್ರಿ. ಶ. 1355) ಬರುವುದರಿಂದ ಹೊಸಪಟ್ಟಣವನ್ನು ಚಿತ್ರದುರ್ಗದ ಬದಲು, ಅವರೇ ಸಂಶಯಪಟ್ಟಿರುವಂತೆ, ಕೋಲಾರ ಜಿಲ್ಲೆಯ ಗೌರಿಬಿದನೂರು ತಾ. ನ ಹೊಸೂರನ್ನು ಇಲ್ಲಿ ಗಮನಿಸಬಹುದಾಗಿದೆ.

ಕೋಲಾರ ಜಿಲ್ಲೆಯ ಗೆಜೆಟಿಯರ್‌ನಲ್ಲಿ (ಪು. 540) , ಬಲ್ಲಾಳ (III) ನಿಗೆ ಹೊಸವೀಡು ಒಂದು ನೆಲೆವೀಡಾಗಿತ್ತೆಂದು ಹೇಳಲಾಗಿದೆಯಲ್ಲದೇ, ಅವನೇ ಅದನ್ನು ನಿರ್ಮಿಸಿ 'ಹಳೇಬೀಡು' ಹೆಸರಿನ ಹಿನ್ನೆಲೆಯಲ್ಲಿ ಇದನ್ನು 'ಹೊಸವೀಡು' ಎಂದು ಕರೆದನೆಂದೂ ಹೇಳಿದೆ. ಅಂತೇ ಹೊಸಪಟ್ಟಣವು ಕ್ರಿ. ಶ. 1355ರಲ್ಲಿ ನಿರ್ಮಿಸಲ್ಪಟ್ಟು ಅದು ಆರಂಭದ ಅರಸರ ಕಾಲದ ವಿಜಯನಗರ ಸಾಮ್ರಾಜ್ಯದ ಎಲ್ಲೆಯ ಪಟ್ಟಣ ಗಳಲ್ಲೊಂದಾಗಿದ್ದು, ನೆಲೆವೀಡಾಗಿತ್ತೆಂದೂ ಇದೆ. ಆರಂಭದಲ್ಲಿ 'ಹೊಸವೀಡು' ಎಂದಿದ್ದಿದ್ದು, ಕ್ರಿ. ಶ. 1354 ರ ಹೊತ್ತಿಗೆ ಹೊಸಪಟ್ಟಣ ಎಂದಾಗುವುದರಿಂದ ಇದು ಪರಿಶೀಲನಾರ್ಹವಾಗಿದೆ. ಆದರೆ, ಅಲ್ಲಿ ಹೇಳಿರುವಂತೆ, ಹೊಸಪಟ್ಟಣವು ಕ್ರಿ. ಶ. 1355 ರಲ್ಲಿ ಸ್ಥಾಪನೆಯಾದದ್ದಲ್ಲ. ಅದಕ್ಕೂ ಮುಂಚೆಯೇ ಹೊಸಪಟ್ಟಣದ ಉಲ್ಲೇಖವಿದೆ. ಅಲ್ಲದೆ, ಬಲ್ಲಾಳ ಮತ್ತು ಬುಕ್ಕ ಇಬ್ಬರ ಕಾಲದಲ್ಲಿ ಇದ್ದದ್ದು ಒಂದೇ ಹೊಸಪಟ್ಟಣವೇ ಹೊರತು, ಎರಡು ಹೊಸಪಟ್ಟಣಗಳು ಸ್ಥಾಪನೆಯಾಗಲಿಲ್ಲ. ಈ ಪಟ್ಟಿಯಲ್ಲಿನ ಬಲ್ಲಾಳನ ಶಾಸನಗಳೂ ಕೋಲಾರ (ಮತ್ತು ಬೆಂಗಳೂರು) ಜಿಲ್ಲೆಯಲ್ಲಿ ದೊರೆತಿವೆ. ಹೀಗಾಗಿ 'ಹೊಸವೀಡು' ಎಂದು ಮೊದಲು ಉಲ್ಲೇಖಗೊಂಡಿರುವ ಗೌರಿಬಿದನೂರು ತಾ. ನ. ಹೊಸೂರನ್ನು ಇಲ್ಲಿ ಗಮನಿಸಿದೆ.

ಕ್ಷೇತ್ರಕಾರ್ಯದಲ್ಲಿ ಕಂಡುಬರುವಂತೆ, ಈ ಹೊಸೂರಿನಲ್ಲಿ ಗಂಗರ ಕಾಲದ ಅವಶೇಷಗಳು, ಕ್ರಿ. ಶ. 11-12 ನೇ ಶತಮಾನದ ವೀರಗಲ್ಲು, ಕಾಳಿ, ದುರ್ಗ ಶಿಲ್ಪಗಳೂ ದೊರೆತಿವೆ. ವಿಜಯನಗರ ಕಾಲದ ಕಂಬಗಳು, ನಂತರ ಕಾಲದ ವೀರಭದ್ರ, ಮಹಾ ಬಲೇಶ್ವರ ದೇವಾಲಯಗಳಿವೆ. ಈ ಊರಿನ ಬಳಿ ಇರುವ ಮುದಿಗೆರೆಯ ಚನ್ನಕೇಶವ ದೇವಾಲಯದಲ್ಲಿ ಹೊಯ್ಸಳ ಮತ್ತು ವಿಜಯನಗರ -ಎರಡೂ ಕಾಲದ ರಚನೆಗಳಿವೆ. ಇಲ್ಲಿ ಕೊತ್ವಾಲದಿನ್ನೆ, ಕುದುರೆ ಬ್ಯಾಲ್ಯ - ಈ ಪ್ರದೇಶಗಳಿದ್ದು, ಒಂದು ಸ್ಥಳವನ್ನು ಇಲ್ಲಿ 'ಕೋಟೆ ಪ್ರದೇಶ'ಎಂದೇ ಕರೆಯುತ್ತಾರೆ. ಹಿಂದಿನ ಕಾಲಕ್ಕೆ ಇಲ್ಲಿ ಒಂದು ಮರಳಿನ ದಿಣ್ಣೆ ಇದ್ದು, ಇದನ್ನು ವಿಜಯನಗರದ ಅರಮನೆ ಪ್ರದೇಶ ಎನ್ನುತ್ತಿದ್ದರಂತೆ. ಈಗ ಅಲ್ಲಿ ಮಸೀದಿ ಇದೆ. ಮಹಮ್ಮದೀಯರ ದಾಳಿಯ ಸಂದರ್ಭದಲ್ಲಿ ಇಲ್ಲಿ ಬಲ್ಲಾಳನು ನೆಲೆವೀಡನ್ನು ಸ್ಥಾಪಿಸಿದ. ಆದ್ದರಿಂದ 'ಹೊಸವೀಡು' ಎನಿಸಿತು ಎಂಬ ಅಭಿಪ್ರಾಯವೂ ಇದೆ. ಮುದಿಗೆರೆಯ ಸ್ಥಳೀಕರು ಹೇಳಿದಂತೆ, ಹಕ್ಕನು ಅಲ್ಲಿ ವಾಸವಾಗಿದ್ದನು ಹಾಗೂ ಬುಕ್ಕನು ಪೆನುಗೊಂಡೆ ಯಲ್ಲಿದ್ದನು. ಹೀಗೆ ಇಲ್ಲಿ ರಾಜಧಾನಿ/ಅರಮನೆಯ ವಾತಾವರಣದ ಸೂಚನೆ ಇದೆ. ಮೂರನೇ ಬಲ್ಲಾಳ ಮತ್ತು ಸಂಗಮರ ಆರಂಭಕಾಲದ ಒಟ್ಟಾರೆ ಶಾಸನಗಳು ಈ ಜಿಲ್ಲೆಯಲ್ಲಿ ಹೆಚ್ಚಾಗಿ ದೊರೆತಿವೆ. ಬಲ್ಲಾಳನ ಯಶಸ್ವಿಯಾಗಿ ದೇವರಿಗೆ ದಾನ ನೀಡಿದ

ಉಲ್ಲೇಖಗಳು ಇಲ್ಲಿ ದೊರೆತಿವೆ[11]. ಅಲ್ಲದೆ, ಇವನ ಹೆಸರಿನಲ್ಲಿ ದಂಡನಾಯಕನೊಬ್ಬನು 'ಬಲ್ಲಾಳಪುರ' ಮಾಡಿದ ಉಲ್ಲೇಖವೂ ಇಲ್ಲಿದೆ[12]. ಇದರಿಂದ, ಮೂರನೇ ಬಲ್ಲಾಳನ ಗಮನವು ಈ ಪ್ರದೇಶದಲ್ಲಿ ಕೇಂದ್ರೀಕೃತವಾಗಿತ್ತೆಂದೂ ಹೇಳಬಹುದು. ಮೂರನೇ ಬಲ್ಲಾಳನ ಮನೆಮಗನಂತಿದ್ದ ಬಲ್ಲಪ್ಪ ದಣ್ಣಾಯಕನ ಉಲ್ಲೇಖಗಳೂ, ಅವನ ಯಶಸ್ಸಿಗೆ ನೀಡಿದ ದಾನ ಉಲ್ಲೇಖಗಳೂ ಇಲ್ಲಿ ದೊರೆತಿವೆ. ಸಂಗಮರ ಶೃಂಗೇರಿ ಭೇಟಿಯ ನಂತರದ ಸಮಯದಲ್ಲೇ ದೊರೆತಿರುವ 3 ಶಾಸನಗಳಲ್ಲಿ 2 ಶಾಸನಗಳು ಈ ಜಿಲ್ಲೆಯದೇ ಆಗಿವೆ[13]. ಮಾತ್ರ ವಲ್ಲದೆ, ನಂತರದ ಕಾಲದಲ್ಲೂ ಈ ಪ್ರದೇಶವು ರಾಜಕೀಯವಾಗಿ ಮುಖ್ಯವಾಗಿರು ತ್ತದೆ. ಈ ಜಿಲ್ಲೆಯಲ್ಲಿ ವಿಠಲಾಪುರ, ವಿರೂಪಾಕ್ಷಿ, ಶೃಂಗೇರಿ, ಹಂಪಸಂದ್ರ ಎಂಬ ಊರುಗಳೂ, ಮುಳಬಾಗಿಲಿನಲ್ಲಿ ವಿದ್ಯಾಶಂಕರ ಮತ್ತು ವಿಠಲ ದೇವಾಲಯಗಳೂ ಇದ್ದು, ಈ ಜಿಲ್ಲೆಯೂ ಒಂದು ಪ್ರಮುಖ ಸ್ಥಾನವಾಗಿತ್ತೆಂಬುದನ್ನು ಸ್ಪಷ್ಟಪಡಿಸುತ್ತಿವೆ. ಈ ಕಾರಣವಾಗಿ ಹೊಸೂರು ಗ್ರಾಮವು ಬಲ್ಲಾಳ ಮತ್ತು ಸಂಗಮರ ಕಾಲದಲ್ಲಿ ಒಂದು ನೆಲೆವೀಡಾಗಿದ್ದಿರಬೇಕು[14].

ವಿರೂಪಾಕ್ಷಪಟ್ಟಣ ಮತ್ತು ಹೊಸಪಟ್ಟಣವನ್ನು ಬೇರೆ ಬೇರೆಯಾಗಿ ಗುರುತಿಸಿರುವ ವೆಂಕಟರಮಣಯ್ಯ ಅವರು ಇವು ಹಂಪೆ-ವಿಜಯನಗರವಲ್ಲ ಎಂದು ಹೇಳಿದ್ದಾರೆ. ಅಲ್ಲದೆ, ಕೃಷ್ಣರಾಜಪೇಟೆ ತಾಲ್ಲೂಕಿನ ಹೇಮಾವತಿ ನದಿಯ ಮಧ್ಯದಲ್ಲಿರುವ ದ್ವೀಪವೇ 'ಹೊಸಪಟ್ಟಣ' ಎಂದು ಗುರುತಿಸಿದ್ದಾರೆ. ಇದಕ್ಕೆ ಆಧಾರವಾಗಿ ಈಗ ಅಲ್ಲಿ ಅಣೆಕಟ್ಟು ಕಟ್ಟಿದ್ದಾರೆಂದೂ, ಅಲ್ಲಿ ಹಳೆಯ ಪಾಳುಕೋಟೆ ಇರುವುದೆಂದೂ ಹೇಳಿದ್ದಾರೆ. ಅಲ್ಲದೆ, ಇದರ ಪಕ್ಕದಲ್ಲಿ ಕ್ರಿ. ಶ. 1666 15 ರ ಶಾಸನವು ಹೇಳುವ ಹೊಯ್ಸಳ ದೇಶದೊಳಗಿನ 'ಭೇರಿಯ'ಗ್ರಾಮವು ಇರುವುದೆಂದು ಹೇಳಿದ್ದಾರೆ. ಜೈನ - ವೈಷ್ಣವ ಸಂಘರ್ಷದ ಶಾಸನವು (ಕ್ರ. ಸಂ. 9) ಹೇಳುವ 'ಹೊಸಪಟ್ಟಣ' ವನ್ನೂ ಗಮನಿಸಿ, ಜೈನಕೇಂದ್ರವಾದ ಶ್ರವಣಬೆಳಗೊಳವೂ, ವೈಷ್ಣವ ಕೇಂದ್ರವಾದ ಮೇಲುಕೋಟೆಯೂ ಹತ್ತಿರದಲ್ಲಿರುವುವೆಂಬುದನ್ನೂ ಇದಕ್ಕೆ ಕಾರಣವಾಗಿ ನೀಡುತ್ತಾರೆ[16]. ಆದರೆ, ಮೈಸೂರು ಜಿಲ್ಲೆಯ ಯಾವ ಸಮಕಾಲೀನ ಶಾಸನದಲ್ಲೂ 'ಹೊಸಪಟ್ಟಣ'ದ ಉಲ್ಲೇಖವಿಲ್ಲ. ಜೈನ-ವೈಷ್ಣವ ಸಂಘರ್ಷ ಇಲ್ಲಿ ನಡೆಯಲಿಲ್ಲ. ಈ ಸಂಘರ್ಷದ ಶಾಸನಕ್ಕೆ ಮೊದಲೇ ಹೊಸಪಟ್ಟಣದ ಉಲ್ಲೇಖವಿದೆ. ಜೊತೆಗೆ ಆ ಶಾಸನದಲ್ಲೂ ಹೊಸಪಟ್ಟಣವು ನೆಲೆವೀಡಾಗಿ ಉಲ್ಲೇಖಿತವಾಗಿಲ್ಲ ಮತ್ತು ಈ ಹೊತ್ತಿಗೆ ಸಂಗಮರು ವಿಜಯನಗರದಲ್ಲಿರುತ್ತಾರೆ. ಆದ್ದರಿಂದ ಇದು ಹೊಸಪಟ್ಟಣ ವಿದ್ದ ಸ್ಥಳವಲ್ಲ.

ವಿಜಯನಗರವು ಹಸ್ತಿನಾವತೀ ಅಥವಾ ಹೊಸಪಟ್ಟಣ ಅಲ್ಲ ಎಂದಿರುವ ಬಿ. ಎ. ಸಾಲೆತೂರ್ ಅವರು, ಹೊಸಪಟ್ಟಣವು, ವಿಜಯನಗರವು ನಿರ್ಮಾಣವಾಗುವ

ಮೊದಲು ಕ್ರಿ. ಶ. 1354-55ರಲ್ಲಿದ್ದ ರಾಜಧಾನಿ ಎಂದಿದ್ದಾರೆ. ಅಲ್ಲದೆ, ಮೂರನೇ ಬಲ್ಲಾಳನು ಯುವರಾಜ್ಯಾಭಿಷೇಕ ಮಾಡಿದ ಸ್ಥಳವೇ ಹೊಸಪಟ್ಟಣ ಎಂದು ಗುರುತಿಸಿದ್ದಾರೆ [17]. ಹೊಸಪಟ್ಟಣ-ವಿರೂಪಾಕ್ಷತೀರ್ಥ ಮತ್ತು ವಿಜಯನಗರ -ಹಂಪಿ ಎರಡೂ ಬೇರೆ ಬೇರೆ ಎಂದಿರುವ ಬಿ. ನರಸಿಂಹಯ್ಯ ಅವರು, ದೋರಸಮುದ್ರವು ಮಲ್ಲಿಕಾಫರನ ದಾಳಿಯಲ್ಲಿ ಹಾಳಾದ ಮೇಲೆ, ದೋರಸಮುದ್ರದ ಬಳಿಯಲ್ಲೇ ಒಂದು ಹೊಸರಾಜಧಾನಿಯನ್ನು ನಿರ್ಮಿಸಿರಬಹುದೆಂದಿದ್ದಾರೆ[18]. ಸಕ್ಕರೆಪಟ್ಟಣ ಶಾಸನದ (ಕ್ರ. ಸಂ. 8) ಬಗ್ಗೆ ಬರೆಯುತ್ತಾ ಶ್ಯಾಮಾಶಾಸ್ತ್ರಿಯವರು, ಈ ಶಾಸನವಿರುವ ಸಕ್ಕರೆ ಪಟ್ಟಣ ಅಥವಾ ಅದರ ಅಕ್ಕಪಕ್ಕದ ಒಂದು ಗ್ರಾಮವು ಹೊಸಪಟ್ಟಣ ವಾಗಿರಬೇಕೆಂದು ಹೇಳಿದ್ದಾರಲ್ಲದೆ, ಇಲ್ಲಿನ ಮತ್ತೊಂದು ಶಾಸನವು (ಕ್ರ. ಸಂ. 7) ಹೇಳುವ 'ಹೊಸವೂರು' ಎಂದರೆ, ಹೊಸಪಟ್ಟಣವೇ ಇರಬೇಕೆಂದು ಊಹಿಸಿದ್ದಾರೆ[19]. ನರಸಿಂಹಯ್ಯ ಅವರು ಹೇಳಿದಂತೆ ಈ ಊರು ದೋರಸಮುದ್ರದ ಹತ್ತಿರದಲ್ಲೇ ಇದ್ದು, ಸಕ್ಕರೆಪಟ್ಟಣ ಸ್ಥಳವು ಈ ಹಿನ್ನೆಲೆಯಲ್ಲಿ ಶೋಧನಾರ್ಹವಾಗಿದೆ.

ಹೊಸಪಟ್ಟಣವನ್ನು ಉಲ್ಲೇಖಿಸುವ ಸಕ್ಕರೆಪಟ್ಟಣದ ಪ್ರಮುಖ ಶಾಸನವು ಒಂದು ಮನೆಯ ಮುಂದೆ ಇರುವ ಶಾಸನವಾಗಿದ್ದು, ಈಗ ಲಭ್ಯವಿಲ್ಲ. 19 ಸಾಲಿನ ಈ ಶಾಸನವು ಲಕ್ಷ್ಮೀಸೇನ ಭಟಾರಕರ ನಿಷಿಧಿ ಶಾಸನವಾಗಿದೆ (ಕ್ರ. ಸಂ.8) . ಈ ಶಾಸನದಲ್ಲಿ ಉಲ್ಲೇಖವಾಗಿರುವ ಲಕ್ಷ್ಮೀಸೇನ ಭಟಾರಕರನ್ನು ಅವರ ಶಿಷ್ಯರಾದ ಮಾನಸೇನ ದೇವರ ನಿಷಿಧಿ ಶಾಸನದಲ್ಲೂ ಉಲ್ಲೇಖಿಸಲಾಗಿದೆ (ಕ್ರಂ. ಸಂ. 10). ಈ ಶಾಸನದ ಕಲ್ಲು ಈಗ ದೊರೆತಿದ್ದು[20], ಮೇಲೆ ಹೇಳಿದ ಶಾಸನವೂ ಅಲ್ಲೇ ಇದ್ದಿರಬೇಕು. ಮಾನಸೇನ ದೇವರ ನಿಷಿಧಿ ಶಾಸನದಲ್ಲಿ 'ಮುತ್ತದ ಹೊಸ ಊರು' ಎಂದೂ, ಇಲ್ಲಿಯದೇ ಬಸದಿಯ ಹಿಂದಿದ್ದ ಇನ್ನೊಂದು ಶಾಸನದಲ್ಲಿ (ಕ್ರ. ಸಂ. 7) 'ಹೊಸ ಊರು' ಎಂದೂ ಉಲ್ಲೇಖಗಳಿವೆ. ಶ್ಯಾಮಾಶಾಸ್ತ್ರಿಯವರು ಹೇಳಿದಂತೆ, ಹೊಸಪಟ್ಟಣವನ್ನೇ ಇಲ್ಲಿ 'ಹೊಸವೂರು' ಎಂದಿರುವುದು ಸ್ಪಷ್ಟವಾಗಿದೆ. ಹೊಸವೀಡು /ಹೊಸಪಟ್ಟಣವನ್ನು ಬೇರೆ ಬೇರೆ ಕಾಲದ ಶಾಸನಗಳು ಉಲ್ಲೇಖಿಸಿದ್ದರೂ. ಈ 3 ಶಾಸನಗಳು ಒಂದೇ ಸ್ಥಳದಲ್ಲಿ (ಸಕ್ಕರೆ ಪಟ್ಟಣ) ದೊರೆತಿರುವುದು ಗಮನಾರ್ಹ ವಾಗಿದೆ[20ಅ]. ಸಕ್ಕರೆಪಟ್ಟಣವು ಹೊಯ್ಸಳ ನಾಡಿಗೆ ಸೇರಿದ ಪ್ರದೇಶವೇ ಆಗಿದ್ದು, ಹೊಸಪಟ್ಟಣ ಸ್ಥಳವನ್ನು ಇಲ್ಲಿ ಹುಡುಕಬಹುದಾಗಿದೆ.

ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲೂಕಿನ ಈ ಸಕ್ಕರೆಪಟ್ಟಣವು ಕಡೂರಿನಿಂದ ನೈರುತ್ಯಕ್ಕೆ 17 ಕಿ. ಮೀ. ದೂರದಲ್ಲಿದೆ. ಈ ಸ್ಥಳವನ್ನು ಪರಿಶೀಲಿಸಿದಾಗ ಕಂಡು ಬಂದಂತೆ ಇಲ್ಲಿ 3 - 4 ಕಡೆ ಕೋಟೆಯ ಅವಶೇಷಗಳಿವೆ ಹಾಗೂ ಕಂದಕಗಳಿವೆ.

ಇವು ಊರ ಹೆಬ್ಬಾಗಿಲ ಬಳಿ, ರಂಗನಾಥ ದೇವಾಲಯದೆದುರು, ಅಂತರಘಟ್ಟದಮ್ಮ ದೇವಾಲಯದ ಬಳಿ ಇದ್ದು, ಇವು ವಿಜಯನಗರ ಕಾಲದ್ದೆಂದು ತಿಳಿಯುತ್ತದೆ. ನಾಲ್ಕು ದಿಕ್ಕುಗಳಲ್ಲೂ ಬುರುಜು ಇದ್ದು, ಈಗ ಒಂದು ಮಾತ್ರ ಉಳಿದಿದೆ. ಊರ ಹೆಬ್ಬಾಗಿಲ ಬಳಿ ಒಂದು ಗಣಪತಿ ದೇವಾಲಯವಿದ್ದು ಪ್ರಾಚೀನದ್ದಲ್ಲ ಅದರ ಪಕ್ಕದಲ್ಲಿ ಸುರಂಗ ಮಾರ್ಗವಿದೆ. ಇದರ ಎದುರು ಹೊಯ್ಸಳರ ಕಾಲದ ಕಂಬವಿದೆ. ಒಂದು ಎತ್ತರದ ಪ್ರದೇಶದ ಮೇಲೆ ಒಳಗಿನ ಅರಮನೆಯೂ, ಅದರ ಪಶ್ಚಿಮಕ್ಕೂ ಕೊಳವೂ ಇರುವುದಾಗಿ ಹೇಳಲಾಗಿದೆಯಾದರು [21] ಈಗ ಅದು ಉಳಿದಿಲ್ಲ. ಊರಿಗೆ ಪಶ್ಚಿಮ ದಲ್ಲಿ ಒಂದು ಎತ್ತರವಾದ ದಿಣ್ಣೆಯೂ, ಅದರ ಮೇಲೆ ಫಿರಂಗಿಯೂ ಇದೆ . ಒಂದು ಲೋಹದ ಕಂಬವಿದ್ದು, ಅದು ದೀಪದ ಕಂಬದಂತೆ ಇತ್ತೆಂದು ಹೇಳಲಾಗಿದೆ.

ಊರಿನ ಬಸ್ ನಿಲ್ದಾಣದ ಬಳಿ, ಹೊಯ್ಸಳರ ಕಾಲದ ಒಂದು ಮಂಟಪವಿದ್ದು, ಇದನ್ನು 'ವೀರಬಲ್ಲಾಳನ ಚೌಕಿ'ಎಂದು ಗುರುತಿಸುತ್ತಾರೆ. ಇದು ಕೂಡ ಊರಿನ ಪಶ್ಚಿಮಕ್ಕಿದೆ. ಇಲ್ಲಿ ವೀರಬಲ್ಲಾಳನು ಕುಳಿತು ನ್ಯಾಯತೀರ್ಮಾನ ಮಾಡುತ್ತಿದ್ದ ಎಂದು ಹೇಳುವರು. (ಸ್ಥಳೀಯರು ಹೇಳಿದಂತೆ, ಇದರ ಕೆಳಗಡೆಯಲ್ಲಿ 'ಕೆಂಚರಾಯ' ಎಂಬ ಭೂತದ ದೇವರಿದ್ದು, ತೇರಿಗೆ ಹೋಗುವಾಗ ದೇವರು ಆ ಕಲ್ಲ ಮೇಲೆ ಕೂರುತ್ತಿತ್ತು.) ಈ ಕಲ್ಲು ಚಪ್ಪಡಿಯು 14x14 " ಅಳತೆಯ 9" ದಪ್ಪನೆಯ ಕಲ್ಲು. ಇಲ್ಲಿನ ಸರ್ಕಾರಿ ಆಸ್ಪತ್ರೆಯ ಬಳಿ ಹೊಯ್ಸಳರ ಕಾಲದ ಪಾರ್ಶ್ವನಾರ್ಥನ ಬಿಂಬವಿದೆ ಹಾಗೂ ಬಸದಿಯ ಮುಂದಿದ್ದ ಶಾಸನವೂ ದೊರೆತಿದೆ. ಬಸದಿ ಇದ್ದ ಸ್ಥಳವೆಂದು ಸ್ಥಳೀಯಕು ಗುರುತಿಸಿರುವಲ್ಲಿ (ಈಗ ಮನೆಯುಂತಿದೆ)[22] ಅದರ ಹಿಂದೆ ಪೀಠವೊಂದು ಬಿದ್ದಿದೆ. ಅಲ್ಲೇ ಜೈನರಿದ್ದ ಮನೆಗಳಿವೆ. ಇಲ್ಲಿನ ರಂಗನಾಥಸ್ವಾಮಿಯ ದೇವಾಲಯ ದಲ್ಲೂ ಹೊಯ್ಸಳರ ಕಾಲದ ಕೇಶವ ದೇವರ ಬಿಂಬವಿದೆ.

ಊರಿನ ಪಶ್ಚಿಮದಲ್ಲಿ ಬಲ್ಲಾಳೇಶ್ವರ ದೇವಾಲಯವಿದೆ [23]. ಎತ್ತರ ಪ್ರದೇಶ ದಲ್ಲಿರುವ ಈ ದೇವಾಲಯವು ವಿಸ್ತಾರವಾಗಿದ್ದು, ಬಲ್ಲಾಳನಿಂದ ನಿರ್ಮಿತವೆಂಬ ಐಹಿತ್ಯವಿದೆ (ಶಾಸನವಿಲ್ಲ). ಅದಕ್ಕೆ ತಕ್ಕಂತೆ ಇಲ್ಲಿ ಚೆನ್ನಕೇಶವ[24], ಸೂರ್ಯ, ಕಾಲಭೈರವ ಮುಂತಾದ ಹೊಯ್ಸಳರ ಕಾಲದ ಸುಂದರ ಶಿಲ್ಪಗಳು ಹೊರಗಿನ ಆವರಣದಲ್ಲಿವೆ. ಇದು ತ್ರಿಕೂಟಾಚಲವಾಗಿದ್ದಿರಬೇಕೆಂಬ ಸೂಚನೆಯನ್ನು ಕೆ. ಆರ್. ಗಣೇಶ್ ಅವರು ನೀಡಿದರು. (ಇಷ್ಟೇ ಅಲ್ಲದೆ, ಇಲ್ಲಿ ರಾಮೇಶ್ವರ, ಸೋಮೇಶ್ವರ, ವೀರಭದ್ರ, ಅಂತರಘಟ್ಟದಮ್ಮ, ಕೊಲ್ಲಾಪುರದಮ್ಮ, ಕಾಳಿದೇವಾಲಯಗಳೂ, ವೀರಗಲ್ಲು, ನಿಷಧಿಗಲ್ಲೂ ಇವೆ.) ಬಲ್ಲಾಳೇಶ್ವರ ದೇವಾಲಯದಿಂದ ಮುಂದೆ ಹೋದರೆ, ಊರಿನ ಪಶ್ಚಿಮಕ್ಕೆ ದೊಡ್ಡಮದಗದ ಕೆರೆ ಎನ್ನುವ 'ಅಯ್ಯನಕೆರೆ'ಇದೆ. ಇದು ತುಂಬ ವಿಸ್ತಾರ

ವಾದ ದೊಡ್ಡಕೆರೆ, ಕಡೂರಿಗೆ ಇದೇ ನೀರಿನ ಆಸರೆ. ಇದರ ಸುತ್ತ ದೊಡ್ಡ ದೊಡ್ಡ ಗಿರಿಗಳಿದ್ದು, ಈ ಕೆರೆಯು ಬಾಬಾ ಬುಡನ್‌ಗಿರಿಯ ತಪ್ಪಲಲ್ಲಿದೆ. ಕೆರೆ ಮತ್ತು ಕೆರೆಯ ಸುತ್ತಲಿನ ವೈಶಾಲ್ಯತೆಯು ಆಹ್ಲಾದಕರವಾಗಿದೆ (ಇದನ್ನು ರುಕ್ಮಾಂಗದರಾಯ ನಿರ್ಮಿಸಿದನೆಂಬ ಹೇಳಿಕೆ ಇದೆ.) ಈ ಕೆರೆಯ ನಿರ್ಮಾಣದ ಬಗ್ಗೆ ಶಾಸನವಿಲ್ಲ. ಆದರೆ, ಇದರ ಮುಂದಿರುವ ಶಾಸನದ ಕಾಲ ಕ್ರಿ. ಶ. 1158 [25]. ಬಹುಶಃ ಆ ಹೊತ್ತಿಗೆ ಈ ಕೆರೆ ಇದ್ದಿರಬೇಕೆಂದು ಊಹಿಸಬಹುದಾಗಿದೆ. ಇವುಗಳನ್ನು ಗಮನಿಸಿದರೆ, ಹೊಯ್ಸಳರ ಕಾಲದ ಅನೇಕ ಸ್ಮಾರಕ ಅವಶೇಷಗಳು ಅಳಿದಿರುವುದು, ಉಳಿದಿರುವುದು ಸ್ಪಷ್ಟ ವಾಗುತ್ತದೆ. ಮುಖ್ಯವಾಗಿ, ಕೋಟೆ, ಅರಮನೆ ಮುಂತಾದ ರಾಜ ಸಂಬಂಧೀ ಸ್ಮಾರಕಗಳು ಅಲ್ಪಮಟ್ಟಿಗೆ ಮಾತ್ರ ಉಳಿದಿದೆಯಾದರೂ ಅವು ಹಿಂದೆ ಇದ್ದದ್ದು ಗಮನಕ್ಕೆ ಬರುತ್ತದೆ. ಇದರೊಂದಿಗೆ, ಸುಂದರ ಬಿಂಬಗಳಿಂದ ಕೂಡಿದ ಬಲ್ಲಾಳೇಶ್ವರ ಎಂಬ ದೊಡ್ಡ ದೇವಾಲಯವಿರುವುದು ಮತ್ತು ಅಲ್ಲಿನ ವಿಸ್ತಾರ ಆವರಣ ಮತ್ತು ತುಂಬ ವಿಸ್ತಾರವಾದ ಅಯ್ಯನಕೆರೆ ಮತ್ತು ಆ ಸುತ್ತಲಿನ ಸ್ಥಳ-ಇವೆಲ್ಲವೂ ಸಕ್ಕರೆಪಟ್ಟಣವು ಹೊಯ್ಸಳರ ಕಾಲದಲ್ಲಿ ರಾಜಧಾನಿ ಆಗಿತ್ತೆಂಬುದಕ್ಕೆ ಸೂಚನೆ ನೀಡುತ್ತಿವೆ.

ಬುಕ್ಕನಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಈ ತಾಲೂಕಿನ ಕಬ್ಬಳ್ಳಿಯಲ್ಲಿ ಅವನ ಹೆಸರಿರುವ ಶಾಸನವಿದೆ[26]. ಸಕ್ಕರೆ ಪಟ್ಟಣದ ಸಮೀಪದಲ್ಲಿಯೇ ಉತ್ತರಕ್ಕೆ ದೊಡ್ಡಬುಕ್ಕಸಾಗರ, ಚಿಕ್ಕಬುಕ್ಕಸಾಗರಗಳೆಂಬ ಊರುಗಳಿವೆ. ದೊಡ್ಡ ಬುಕ್ಕಸಾಗರದಲ್ಲಿ ದೊಡ್ಡಕೆರೆ ಇದೆ. ಚಿಕ್ಕಬುಕ್ಕಸಾಗರದಲ್ಲಿ ಏನೂ ಉಳಿದಿಲ್ಲ. ಕಡೂರು ತಾ.ನಲ್ಲೇ ಬುಕ್ಕಮಲ್ಲನ ಹಳ್ಳಿ (ಯಳ್ಳಂಬಳಸೆಯಿಂದ 1-½ ಕಿ. ಮೀ), ಬುಕ್ಕನ ಗುಂಡಿ ಎಂಬ ಊರುಗಳಿವೆ (ಬುಕ್ಕನ ಗುಂಡಿಯಲ್ಲಿ ಈಗ ಏನೂ ಉಳಿದಿಲ್ಲವೆಂದು ಹೇಳಿದರು). ಇಲ್ಲಿಂದ ಮೇಲೆ, ತರೀಕೆರೆ ತಾ. ಗೆ ಸೇರಿದ ಅಜ್ಜಂಪುರದಲ್ಲಿ ಬುಕ್ಕನ ಕಾಲದ್ದೆಂದು ಹೇಳುವ ದೇವಾಲಯವಿದ್ದು, ಅದನ್ನು ಹನುಮಪ್ಪನಾಯಕನು ಮತ್ತೆ ನಿರ್ಮಾಣ ಮಾಡಿದ ಎಂದು ಗೆಜೆಟಿಯರ್‌ನಲ್ಲಿದೆ. ಅದೇ ತಾಲೂಕಿನಲ್ಲಿ 'ಬುಕ್ಕಾಂಬುದಿ' ಎಂಬ ಊರಿದೆ (ತರೀಕೆರೆಯಿಂದ 37 ಕಿ. ಮೀ.) ; ಕ್ರಿ. ಶ. 1555ರ ಶಾಸನದಲ್ಲಿ [27] ಈ ಊರಿನ ಉಲ್ಲೇಖವಿದೆ. ಅಂದಮೇಲೆ ಈ ಮೊದಲೇ (ಹೆಸರು ಸೂಚಿಸುವಂತೆ ಬುಕ್ಕನ ಕಾಲದಲ್ಲೇ) ಈ ಊರು ಇದ್ದಿರಬೇಕು. ಈ ಊರಿನ ಹೊರ ಪರಿಸರವು ಒಂದು ಸೈನ್ಯವು ನಿಲ್ಲುವಷ್ಟು ವಿಸ್ತಾರವಾಗಿದೆ. ಇಲ್ಲಿ ಒಂದು ದೊಡ್ಡ ಕೆರೆಯೂ ಇದೆ. ಬುಕ್ಕನ ಸತಿ ಮೂಗುತಿ ಮಾರಿ ಇದನ್ನು ಕಟ್ಟಿಸಿದಳೆಂಬ ಐತಿಹ್ಯವಿದೆ. ಈ ಕೆರೆಯನ್ನು ಬುಕ್ಕನು ಪುನರ್ನಿರ್ಮಿಸಿದ್ದು, ಅದು ಅವನ ಹೆಸರಿನಲ್ಲೇ ಉಳಿಯಿತು

ಎಂದು ಗೆಜೆಟಿಯರ್ ನಲ್ಲಿದೆ. ಅಂತೇ, ಇಲ್ಲಿನ ಬೆಟ್ಟದ ಮೇಲಿನ ವಿರೂಪಾಕ್ಷ ದೇವಾಲಯವನ್ನು ನಿರ್ಮಿಸಿದ್ದಾನೆ. ಇವೆಲ್ಲವೂ ಬುಕ್ಕನ ಹೆಸರಿಗೇ ಅಂಟಿ ಕೊಂಡಿರುವುದನ್ನಿಲ್ಲಿ ಗಮನಿಸಬಹುದು. ಅಲ್ಲದೆ, ಈ ಪರಿಸರದ ಕೆಲವು ಅವಶೇಷಗಳು ಸಂಗಮರ ಕಾಲದ್ದೇ ಆಗಿದ್ದು, ಇವುಗಳು ಒಂದನೇ ಬುಕ್ಕನ ಕಾಲದಿಂದಲೇ ಇದ್ದವೆಂದು ಹೇಳಬಹುದಾಗಿದೆ[28]. ಹೀಗಾಗಿ, ಈ ಪ್ರದೇಶದಲ್ಲಿ ಬುಕ್ಕನ ಆಳ್ವಿಕೆ ಇತ್ತೆಂಬುದಕ್ಕೆ ಇವು ಸಾಕ್ಷಿಯಾಗಿವೆ. ಇದರಿಂದ, ತನ್ನ ಕಾಲದಲ್ಲಿ ಬುಕ್ಕನು ಸಕ್ಕರೆ ಪಟ್ಟಣದ ಉತ್ತರ ಭಾಗಗಳೆಡೆಗೆ ಹೆಚ್ಚು ಗಮನ ಹರಿಸಿರುವುದು ಇಲ್ಲಿ ಸ್ಪಷ್ಟವಾಗಿದೆ.

ಮಯಮತವು, 'ನರಪತಿ'ಮತ್ತು 'ಪಾರ್ಷ್ಣೇಯರಾಜ' [29] ರ ಅರಮನೆಯ ಪಟ್ಟಣದ ಪಶ್ಚಿಮದ ಪಶ್ಚಿಮದಲ್ಲಿರಬೇಕೆಂದು ಹೇಳಿದೆ. ಅಲ್ಲದೆ, ಒಂದು ರಾಷ್ಟ್ರದ ಮಧ್ಯಭಾಗದಲ್ಲಿದ್ದು, ನದಿಯ ಪಕ್ಕದಲ್ಲಿರುವ ಹಾಗೂ ಜನಭರಿತವಾದ ಪಟ್ಟಣವನ್ನು 'ಕೇವಲ'ಪ್ರಕಾರದ್ದು ಎಂದಿರುವ ಮಯಮತವು, ಆ ಪಟ್ಟಣದಲ್ಲಿ ಅರಮನೆಯು ಇದ್ದರೆ, ಅದನ್ನು 'ರಾಜಧಾನಿ' ಎಂದು ಗುರುತಿಸಿದೆ;ಎಲ್ಲ ವರ್ಗದ ಜನರೂ, ಎಲ್ಲ ದೇವರ ಆಲಯಗಳೂ ಇರಬೇಕೆಂದಿದೆ[30]. ಅಂತೇ, ಪತ್ತನ (=ಪಟ್ಟಣ)ಎಂದರೆ, ಹೊರದೇಶ ದಿಂದ ಸಾಮಗ್ರಿಗಳು ಬರಬೇಕು, ಎಲ್ಲಾ ವರ್ಗದ ಜನರಿರಬೇಕು, ಅಂಗಡಿ ಗಳು ಮತ್ತು ಅನೇಕ ವರ್ತಕರಿಂದ ಕೂಡಿರಬೇಕು -ಎಂದೂ ಅದು ಹೇಳಿದೆ[31]. ಈ ಹಿನ್ನೆಲೆಯಲ್ಲಿ ಗಮನಿಸಿದರೆ, ಸಕ್ಕರೆಪಟ್ಟಣವು ಹೊಯ್ಸಳ ದೇಶದ ಮಧ್ಯಭಾಗ ದಲ್ಲಿಲ್ಲದಿದ್ದರೂ, ಪಕ್ಕದಲ್ಲಿ ನದಿ ಹರಿಯುತ್ತಿದೆ. ಅರಮನೆ ಇರುವುದರಿಂದ 'ರಾಜಧಾನಿ' ಎನ್ನಬಹುದಾಗಿದೆ. ಅಲ್ಲದೆ, ರಾಜಸಂಬಂಧೀ ಅವಶೇಷಗಳೆಲ್ಲವೂ ಪಟ್ಟಣದ ಪಶ್ಚಿಮ ದಿಕ್ಕಿನಲ್ಲಿರುವುದು ಗಮನಾರ್ಹ ಅಂಶವಾಗಿದೆ (ಅರಮನೆಯೂ ಪಶ್ಚಿಮ ದಿಕ್ಕಿನಲ್ಲೇ ಇದ್ದಿರಬೇಕು). ಈ ಊರಿನ ಸುತ್ತ ಹತ್ತಿರಲ್ಲಿದಲ್ಲೇ ಇರುವ ಊರಿನ ಹೆಸರುಗಳು ವರ್ತಕರಿಗೆ ಸಂಬಂಧಿಸಿದ್ದಾಗಿವೆ. ಪಟ್ಟಣಗೆರೆ (ಕಡೂರಿನ ಉ. ಕ್ಕೆ 4ಕಿ. ಮೀ.), ಕಂಚುಗಾರನಹಳ್ಳಿ, ಚಿರಕರಹಳ್ಳಿ (=ಚಿನ್ನಕಾರರದು?) ಮುಂತಾದ ಊರುಗಳನ್ನಿಲ್ಲಿ ನೆನೆಯಬಹುದು. ಅಲ್ಲದೆ ಉಪ್ಪವಳ್ಳಿ [32] ಉಪ್ಪಳ್ಳಿ ಚಿಕ್ಕಮಗಳೂರಿನಿಂದ ನೈ.ಕ್ಕೆ 3 ಕಿ.ಮೀ.) ಉಪ್ಪುಹಳ್ಳಿ [33], ಉಪ್ಪಿನರಾಚಪ್ಪ, ಗೋದಿಯಡಪ್ಪ [34], ಸಕ್ಕರೆಪಟ್ಟಣ [35], ಸಕ್ಕೆಗಾವುಂಡ[36] ಮುಂತಾದ ಹೆಸರುಗಳು ವರ್ತಕ ಸಂಬಂಧಿ ಯಾಗಿರುವುದನ್ನು ಗಮನಿಸಬಹುದು. ಒಂದೊಂದು ಕಸುಬಿಗೂ ಸಂಬಂಧಿಸಿದಂತೆ ಪ್ರತ್ಯೇಕವಾಗಿ ವ್ಯವಸ್ಥಿತವಾಗಿ ಜಾಗಗಳನ್ನು ಗೊತ್ತು ಮಾಡಲಾಗಿತ್ತೆಂಬುದನ್ನು ಸಕ್ಕರೆಪಟ್ಟಣದಲ್ಲಿ ಗಮನಿಸಬಹುದು. ಉದಾಹರಣೆಗೆ, ಕೂಲಿಗಾರರ ಬೀದಿ, ದೇವಾಂಗ ಶೆಟ್ಟರ ಬೀದಿ, ಮಡಿವಾಳರ ಬೀದಿ, ಮಾಪಿಳ್ಳೇರ ಬೀದಿ ಮುಂತಾದವು ಗಳನ್ನು ಹೇಳಬಹುದು.

ಶೃಂಗೇರಿಯ ಶಾಸನದಲ್ಲಿ [37]. 'ಸಖರೆಪಟ್ಟಣದ ಗುರಿಕಾರರ', ಎಂದಿದ್ದು,ಆ ಕಸುಬಿನವರೂ ಇಲ್ಲಿದ್ದುದರ ಸೂಚನೆ ಇದೆ. ಇವೆಲ್ಲವೂ ಸಕ್ಕರೆ ಪಟ್ಟಣವು ರಾಜಧಾನಿ ಪಟ್ಟಣವಾಗಿತ್ತೆಂಬುದಕ್ಕೆ ಪೂರಕವಾಗಿವೆ[38].

ಈ ಪ್ರದೇಶ ಹೊರಮೈಯನ್ನು ಒಟ್ಟಾರೆಯಾಗಿ ಗಮನಿಸಿದರೆ, ಇದು ರಾಜಧಾನಿ ನಿರ್ಮಾಣಕ್ಕೆ ಅನುಕೂಲಕರ ಪ್ರದೇಶವೆನಿಸುತ್ತದೆ. ಇದರ ಪಶ್ಚಿಮಕ್ಕೆ ಪರ್ವತಗಳಿರುವುದಲ್ಲದೆ, ಅಯ್ಯನಕೆರೆ ಮತ್ತು (ಕಡೂರಿನ) ಮದಗದ ಕೆರೆಗಳು ಈ ಪ್ರದೇಶಕ್ಕೆ ನೀರಿನ ಆಸರೆಯಾಗಿವೆ. ಹತ್ತಿರದಲ್ಲೇ ವೇದಾವತಿ ನದಿಯೂ ಹರಿಯುತ್ತದೆ. ಕಡೂರು ತಾಲೂಕಿನ ಪ್ರದೇಶವು ಕಡಿಮೆ ಮಳೆಯ ಪ್ರದೇಶವಾಗಿದ್ದರೂ ಇಲ್ಲಿನ ಅಂತರ್ಜಲವು ಚೆನ್ನಾಗಿದ್ದು, ಶಕ್ತಿಯುತವಾಗಿರುವುದು ಎಂದು ಗೆಜಿಟಿಯರ್‌ನಿಂದ ತಿಳಿದುಬರುತ್ತದೆ. ಹೀಗಾಗಿ ಈ ಸ್ಥಳದಲ್ಲಿ ರಾಜಧಾನಿ ಇದ್ದಿತೆಂದು ಹೇಳುವುದರಲ್ಲಿ ತಪ್ಪೇನಿಲ್ಲ. ಅಂದರೆ, ಈಗಾಗಲೇ ಗಮನಿಸಿರುವಂತೆ, ಈ ಸಕ್ಕರೆಪಟ್ಟಣವು ಹೊಯ್ಸಳರ ಕಾಲದಿಂದ ಒಂದು ರಾಜಧಾನಿಯಾಗಿತ್ತೆಂದು ಹೇಳಬಹುದಾಗಿದೆ. ಸಕ್ಕರೆಪಟ್ಟಣದಲ್ಲಿ ಈಗ ದೊರೆತಿರುವ ಮೊದಲ ಶಾಸನವೇ ಬುಕ್ಕನ ಕಾಲದ್ದಾಗಿದ್ದು, ಅದೂ ಹೊಸೂರನ್ನೇ ಉಲ್ಲೇಖಿಸುತ್ತಿರುವುದು ಗಮನಾರ್ಹವಾಗಿದೆ. ಸಕ್ಕರೆಪಟ್ಟಣದ ಬಳಿ ಅದೇ ಹೋಬಳಿಗೆ ಸೇರಿದಂತೆ 'ಹೊಸಹಳ್ಳಿ' ಎಂಬ ಊರೂ ಇದೆ. ಹೀಗಾಗಿ, ಕಡೂರು ತಾ. ನ. ಇಂದಿನ ಸಕ್ಕರೆ ಪಟ್ಟಣವನ್ನೇ ಮೂರನೇ ಬಲ್ಲಾಳ ಮತ್ತು ಬುಕ್ಕನ ಕಾಲದ ಶಾಸನೋಕ್ತ ರಾಜಧಾನಿ 'ಹೊಸಪಟ್ಟಣ' ಎನ್ನಬಹುದಾಗಿದೆ.

ಸಕ್ಕರೆ ಪಟ್ಟಣವನ್ನೇ ಹೊಸಪಟ್ಟಣ ಎಂದು ಗುರುತಿಸಿದ ಮೇಲೆ, ಹೊಸಪಟ್ಟಣ ಎಂಬ ಹೆಸರು ಏನಾಯಿತೆಂಬ ಪ್ರಶ್ನೆ ಏಳುತ್ತದೆ. 'ಹೊಸಪಟ್ಟಣ'ಉಲ್ಲೇಖದ ಶಾಸನವಿರುವ ಸಕ್ಕರೆಪಟ್ಟಣವೇ ಹೊಸಪಟ್ಟಣ ಎಂದು ಹೇಳಿದ್ದ ಶ್ಯಾಮಾಶಾಸ್ತ್ರಿಗಳ ಅಭಿಪ್ರಾಯವನ್ನು 'ಆ ಊರ ಹೆಸರು (ಸಕ್ಕರೆ ಪಟ್ಟಣ) ಹೊಸಪಟ್ಟಣ ಎಂದಿಲ್ಲ'ಎಂಬ ಕಾರಣಕ್ಕಾಗಿ, ವೆಂಕಟರಮಣಯ್ಯ ಅವರು ತಳ್ಳಿಹಾಕಿದ್ದಾರೆ [39]. ಆದರೆ, 5-6 ಶತಕಗಳ ಅಂತರದಲ್ಲಿ ಊರು ಏನಾಗಿರಬಹುದು ಎಂಬ ಹಿನ್ನೆಲೆಯಲ್ಲಿ ಇದನ್ನು ಗಮನಿಸಬೇಕಾಗುತ್ತದೆ. ಈ ಊರಿನಲ್ಲಿ ದೊರೆಯುವ ಮೊದಲ ಶಾಸನವೇ ಕ್ರಿ. ಶ. 1360 ರದ್ದಾಗಿದ್ದು, ಇದರಲ್ಲಿ 'ಹೊಸ ಊರು' ಎಂದಿದೆ (ಕ್ರ. ಸಂ. 7);ನಂತರದಲ್ಲಿ ದೊರೆತಿರುವುದೇ ಬುಕ್ಕ ಮತ್ತು ಹೊಸಪಟ್ಟಣವನ್ನು ಉಲ್ಲೇಖಿಸುವ (ಕ್ರಿ. ಶ. 1366ರ ಮುಂಚಿನ [40]) ಶಾಸನ (ಕ್ರ. ಸಂ. 8) . ಈ ಎರಡೂ ಶಾಸನ ಕಾಲದ ಸಾಮೀಪ್ಯವು ಹೊಸೂರು ಮತ್ತು ಹೊಸಪಟ್ಟಣ ಎರಡೂ ಒಂದೇ ಎಂದು ಸೂಚಿಸಿದೆ. ನಂತರದಲ್ಲಿ ದೊರೆಯುವ ಕ್ರಿ. ಶ. 1390 ರ ಶಾಸನದಲ್ಲಿ ಊರಿನ ಉಲ್ಲೇಖವೇ ಇಲ್ಲ. ಈ

ನಂತರದ ಕ್ರಿ. ಶ. 1405-06ರ ಶಾಸನದ ಹೊತ್ತಿಗೆ ಇದು 'ಮುತ್ತದ ಹೊಸ ಊರು' (ಕ್ರ. ಸಂ. 10) ಎಂದಾಗಿದೆ [41]. ಇದಾದ ಮೇಲೆ ನಾಲ್ಕು ಶತಕಗಳ ಕಾಲ ಈ ಊರಿನಲ್ಲಿ ಯಾವುದೇ ಶಾಸನ ದೊರೆತಿಲ್ಲ. ಈ ನಂತರದ ಕ್ರಿ. ಶ. 1812 ರ ಶಾಸನಗಳಲ್ಲಿ ಇದನ್ನು ಮಾಧ್ವೀಕಪುರಿ[42]. ಸಕ್ಕರೆಪಟ್ಟಣ'[43] ಎಂದು ಗುರುತಿಸಲಾಗಿದೆ. ಮಾಧ್ವೀಕ ಎಂದರೆ ' ಮಧು' ಎಂಬ ಅರ್ಥವಿದ್ದು, ಸಿಹಿ ಎಂಬ ಅರ್ಥದಲ್ಲಿ ಕನ್ನಡದಲ್ಲಿ ಇದನ್ನು 'ಸಕ್ಕರೆ ಪಟ್ಟಣ' ಎಂದು ಕರೆದಿರಬಹುದಾಗಿದೆ. ಇದರೊಂದಿಗೆ , ಕ್ರಿ. ಶ. 1737 ರಲ್ಲೇ ಇದನ್ನು 'ಸಖರೆಪಟ್ಟಣ'ಎಂದಿರುವುದು ಶೃಂಗೇರಿಯ ಒಂದು ಶಾಸನದಿಂದ 44 ತಿಳಿದುಬರುತ್ತದೆ.

ಎ.ಕ. 11(ಪ)ರ ಪ್ರಸ್ತಾವನೆಯಲ್ಲಿ ಆ ಸಂಪುಟದ ಶಾಸನಗಳು ಹೇಳುವಂತೆ (ಶೃಂಗೇರಿ, ಮೂಡಿಗೆರೆ ಮತ್ತು ಚಿಕ್ಕಮಗಳೂರು ತಾಲೂಕುಗಳು) ಆ ಪ್ರದೇಶಗಳಲ್ಲಿ ಅನೇಕ ಗಡಿವಿವಾದಗಳು ನಡೆಯುತ್ತಿತ್ತೆಂದೂ, ಹೊಯ್ಸಳರ ಕಾಲದ ಅನೇಕ ಕಾಳೆಗದ ಶಾಸನಗಳು ದೊರೆತಿವೆ ಎಂದೂ ಹೇಳಲಾಗಿದೆ. ಅದೇ ಜಿಲ್ಲೆಗೆ ಸೇರಿದ ಆ ಪ್ರದೇಶದಲ್ಲೂ ಆ ರೀತಿಯ ಕಾಳೆಗಗಳಾಗಿದ್ದು ಅಥವಾ ಬೇರಾವುದೋ ಕಾರಣಕ್ಕೆ ಊರುಗಳು ಹಾಳಾಗಿರುವ ಸಾಧ್ಯತೆ ಇದೆ. ಹತ್ತಿರದಲ್ಲೇ ಇರುವ ಬ್ರಹ್ಮಸಮುದ್ರ, ವಿರುಪನಹಳ್ಳಿ ಮುಂತಾದೆಡೆಗಳಲ್ಲಿ (ಯಾವ ಕಾರಣಕ್ಕೋ) ಊರುಬಿಟ್ಟು ವಲಸೆ ಹೋಗಿದ್ದಾರೆ. ಇಂದಿನ ಸಕ್ಕರೆಪಟ್ಟಣದಲ್ಲೂ ಸು. 15-16 ನೇ ಶತಮಾನದಲ್ಲಿ, ಇಂತಹುದೇನೋ ನಡೆದು ಊರು ಹಾಳಾಗಿರಬಹುದು. [44ಅ]. ಆದರೆ ಕಾಲಾನಂತರ ದಲ್ಲಿ ಊರು ಅಭಿವೃದ್ಧಿಗೊಂಡಿದೆ.

ಸ್ಥಳೀಕರೊಬ್ಬರು, ಈ ಊರನ್ನು ಕಟ್ಟಿ (ಪುನರ್ನಿರ್ಮಿಸಿ) ಸು. 286 ವರ್ಷ ಗಳಾಯಿತೆಂದು ಹೇಳಿದರು. ಅಂದರೆ, ಅವರ ಪ್ರಕಾರ ಸು. 1720-25 ರಲ್ಲಿ ಕಟ್ಟಿರ ಬೇಕು. ಇದನ್ನು ನಿರ್ಮಿಸಿದವನು ರುಕ್ಮಾಂಗದನ ಮಗನಾದ ಸಖರಾಯನೆಂಬ ಹೇಳಿಕೆ ಇದೆ. ಇವನು ಪಾಳೆಯಗಾರ, ಹಳೇಬೀಡು ದೊರೆಗಳ ಸಾಮನಂತನ ಮಗನೆಂಬ ಹೇಳಿಕೆಗಳೂ ಇವೆ. ಇವನು ಊರನ್ನು ಕಟ್ಟಿದನೆಂಬ ಕಾರಣವಾಗಿ ಈ ಊರನ್ನು 'ಸಖರಾಯಪಟ್ಟಣ' ಎನ್ನಲಾಯಿತು ಎಂದೂ ಹೇಳಲಾಗಿದೆ. ಚಿಕ್ಕಮಗಳೂರು ತಾ. ನ. ಸಾದರನಹಳ್ಳಿಯ ಕ್ರಿ. ಶ. 16-17 ನೇಶತಮಾನದ ಶಾಸನದಲ್ಲಿ [45] 'ಶಕುನಿನಾಯಕ'[46] ಎಂಬುವವನ ಉಲ್ಲೇಖವಿದೆ. ಇವನು ಈ ಊರನ್ನು ಪುನರ್ನಿರ್ಮಿಸುವ ಸಂದರ್ಭ ದಲ್ಲಿ ಬಹುಶಃ ಈ ಊರಿಗೆ 'ಸಕ್ಕರೆಪಟ್ಟಣ'ಎಂಬ ಹೆಸರು ಬಂದಿದೆ. ಇಲ್ಲಿನ ಹತ್ತಿರದ ಊರುಗಳಲ್ಲಿ ಉಪ್ಪುವಳ್ಳಿ, ಉಪ್ಪಿನರಾಚಪ್ಪ ಮುಂತಾದ ಹೆಸರುಗಳು ಈಗಾಗಲೇ ಇದ್ದುದರಿಂದ ಅದಕ್ಕೆ ಸರಿಗಟ್ಟುವಂತೆ ಇದನ್ನು 'ಸಕ್ಕರೆ ಪಟ್ಟಣ'ಎಂದು ಹೆಸರಿಸಿರ ಬೇಕು.

ಈ ಸಕ್ಕರೆ ಪಟ್ಟಣದ ಪಕ್ಕದಲ್ಲೇ ಇದೇ ಹೋಬಳಿಗೆ ಸೇರಿದ 'ಹೊಸಹಳ್ಳಿ' ಎಂಬ ಊರಿದೆ (ಕಡೂರಿನಿಂದ 26 ಕಿ. ಮೀ.). ಅಲ್ಲಿ ಪ್ರಾಚೀನವಾದುದೇನ ಉಳಿದಿಲ್ಲ ವೆಂದು ಹೇಳಿದರು. ಬಹುಶಃ ಅದು ಹಳೆಯ ಹೆಸರ ಹೊಸವೂರಾಗಿರಬೇಕು. ಅಂದರೆ ಈ ಹೊಸಹಳ್ಳಿಯ ಪ್ರಾಚೀನ ಕಾಲದಲ್ಲಿ ಸಕ್ಕರೆಪಟ್ಟಣದೊಂದಿಗೇ ಸೇರಿದ್ದಾಗಿದ್ದು (?)[47], ಈ ಭಾಗ ಹಾಳಾದ ಮೇಲೆ ಅದೇ ಹೆಸರಿನಲ್ಲಿ ಈಗಿನ ಊರಿರುವ ತಾಣಕ್ಕೆ ಸ್ಥಳಾಂತರ ಗೊಂಡಿರಬೇಕು. ಹೀಗೆ ಕಾಲಾನುಕ್ರಮದಲ್ಲಿ ಹೊಸಪಟ್ಟಣ ಸ್ಥಾನದಲ್ಲಿ ಸಕ್ಕರೆಪಟ್ಟಣ ಬಂದಿದ್ದು, ಸಕ್ಕರೆ ಪಟ್ಟಣದ ಪ್ರಾಚೀನ ಹೆಸರು ಹೊಸಪಟ್ಟಣ ವಾಗಿತ್ತೆಂದು ಹೇಳಬಹುದಾಗಿದೆ. ಇದರಿಂದ, ವೆಂಕಟರಮಣಯ್ಯ ಅವರು ಹೇಳುವ ಊರಿನ ಹೆಸರಿನ ಸಮಸ್ಯೆ ಪರಿಹಾರವಾಗಿದ್ದು, ಇಂದಿನ ಸಕ್ಕರೆ ಪಟ್ಟಣವೇ ಮೂರನೇ ಬಲ್ಲಾಳ ಮತ್ತು ಬುಕ್ಕನ ಕಾಲದಲ್ಲಿದ್ದ ರಾಜಧಾನಿ ಹೊಸಪಟ್ಟಣ ಎಂದು ಗುರುತಿಸಬಹುದಾಗಿದೆ[47ಅ].

ವಿರೂಪಾಕ್ಷಪಟ್ಟಣದ ಬಗ್ಗೆ ಈಗ ಗಮನಿಸಬಹುದಾಗಿದೆ. ಮೂರನೇ ಬಲ್ಲಾಳನ ಕಾಲದ 4 ಶಾಸನಗಳು (ಕ್ರ. ಸಂ. 13-16) ಮಾತ್ರ ಇದನ್ನು ಉಲ್ಲೇಖಿಸುತ್ತಿವೆ. 'ವಿರೂಪಾಕ್ಷಪಟ್ಟಣ' ಎಂಬ ಉಲ್ಲೇಖವು ಕ್ರಿ. ಶ. 1330 ರ ಜೆ. ಸಿ. ಪುರದ ಶಾಸನ ದಲ್ಲಿದ್ದು, 'ವೀರಬಲ್ಲಾಳದೇವರು ವಿರೂಪಾಕ್ಷ ಪಟ್ಟಣದ ನೆಲೆವೀಡಿನಿಂದ ಆಳುತ್ತಿದ್ದ'ನೆಂದು ಅದು ಹೇಳಿದೆ (ಕ್ರ. ಸಂ. 13) ನಂತರದ ಕ್ರಿ. ಶ. 1331 ರ ಸಂಪಿಗೆಯ ಶಾಸನವು 'ವಿರೂಪಾಕ್ಷಹೊಸದುರ್ಗ'ವೆಂದು ಹೇಳಿರುವುದು ಗಮನಾರ್ಹ ವಾಗಿದೆ (ಕ್ರ. ಸಂ. 16) . ಕ್ರಿ. ಶ. 1339 ಮತ್ತು 1342 ರ, ಕ್ರಮವಾಗಿ ಕೊರಟಿ ಮತ್ತು ಮುದಗುರಕಿಯ ಶಾಸನಗಳು (ಕ್ರ. ಸಂ. 15-16) ಬಲ್ಲಾಳದೇವನು ವೀರವಿಜಯ ವಿರೂಪಾಕ್ಷಪುರದ ನೆಲೆವೀಡು ಮತ್ತು 'ವಿರೂಪಾಕ್ಷಪದ'ದಿಂದ ಆಳುತ್ತಿದ್ದನೆಂದು ತಿಳಿಸಿವೆ. ಕ್ರಿ. ಶ. 1342ರ ನಂತರ ಈ ಉಲ್ಲೇಖಗಳು ದೊರೆಯುವುದಿಲ್ಲ ಕ್ರಿ.ಶ. 1360ರಲ್ಲಿ ವಿರೂಪಾಕ್ಷಪುರದ ಒಂದು ಉಲ್ಲೇಖವಿದೆಯಾದರೂ (ಕ್ರ. ಸಂ. 17) ಅದು ಪ್ರಾಸಂಗಿಕವಾಗಿ ಬಂದಿದೆಯೇ ಹೊರತು, ಆಡಳಿತಾತ್ಮಕ ವಿಷಯವಾಗಿ ಬಂದಿಲ್ಲ. ವಿರೂಪಾಕ್ಷಪಟ್ಟಣವನ್ನು ಉಲ್ಲೇಖಿಸುವ ಎಲ್ಲ ಶಾಸನಗಳೂ ಮೂರನೇ ಬಲ್ಲಾಳನ ಕಾಲದ್ದೇ ಆಗಿರುವುವಲ್ಲದೆ, ಮೂರನೇ ಬಲ್ಲಾಳನ ಕಾಲಾವಧಿಯ ನಂತರ ವಿರೂಪಾಕ್ಷಪಟ್ಟಣದ ಉಲ್ಲೇಖ ಮುಂದುವರಿಯಲಿಲ್ಲ ವೆಂಬುದನ್ನಿಲ್ಲ ಗಮಿನಿಸ ಬಹುದು.

ಈ ವಿರೂಪಾಕ್ಷಪಟ್ಟಣವನ್ನೂ ಅನೇಕ ವಿದ್ವಾಂಸರು 'ಹಂಪೆ' ಎಂದೇ ಗುರುತಿಸುತ್ತಾರೆ. ಹಂಪೆಯ ವಿರೂಪಾಕ್ಷನಿಗೆ 'ವಿಜಯವಿರೂಪಾಕ್ಷ'[48] ಎಂಬ

ಹೆಸರಿದ್ದು, ನಾಲ್ಕನೇ ಬಲ್ಲಾಳನಿಗೂ 'ವೀರವಿಜಯ ವಿರೂಪಾಕ್ಷ ಬಲ್ಲಾಳ'[49], ಹಂಪೆವೊಡೆಯ[50] ಎಂಬ ಹೆಸರೇ ಇರುವುದರಿಂದ ಆ ಹೆಸರು ಹಂಪೆಯ ವಿರೂಪಾಕ್ಷನದೇ ಎಂದು ವಿದ್ವಾಂಸರು ಗುರುತಿಸುತ್ತಾರೆ. ಹೆಸರಿನ ಸಾಮ್ಯವಷ್ಟೇ ಇಲ್ಲಿ ಆಧಾರವಾಗಲಾರದು. ಇವನಿಗೆ ಪಟ್ಟಾಭಿಷೇಕವಾದದ್ದೂ ಹಂಪೆಯಲ್ಲೇ ಎಂಬ ಅಭಿಪ್ರಾಯವಿದೆಯಾದರೂ, ಇದೂ ಕೂಡ ತಪ್ಪು ಗ್ರಹಿಕೆಯಿಂದಾಗಿದೆ. [50ಅ]. ಬಿ. ನರಸಿಂಹಯ್ಯ ಅವರು, ಹೊಯ್ಸಳ ರಾಜ್ಯ ಮತ್ತು ಆ ಸುತ್ತಲ ಪ್ರದೇಶದಲ್ಲಿ ಒಂದೇ ವಿರೂಪಾಕ್ಷ ದೇವಾಲಯವಿರುವುದು ಮತ್ತು ಅದು ಹಂಪೆಯದೇ ಎಂಬ ಊಹೆಯಿಂದ ಈ ಅಭಿಪ್ರಾಯ ಬಂದಿರುವುದಾಗಿ ತಿಳಿಸಿದ್ದಾರೆ. ಅಲ್ಲದೆ, ಚಿಕ್ಕಮಗಳೂರು ತಾಲೂಕಿನ ಹಂಪಾಪುರ ಮತ್ತು ಮುತ್ತಿನಪುರದ ಶಾಸನಗಳ ಹಿನ್ನೆಲೆಯಲ್ಲಿ ಆ ಅಭಿಪ್ರಾಯವನ್ನು ತಳ್ಳಿ ಹಾಕಿದ್ದಾರೆ [51].

ಹಿಂದೆಯೇ ಹೇಳಿದಂತೆ, ಮೂರನೇ ಬಲ್ಲಾಳನಿಗೂ ಹಂಪೆಗೂ ಹೆಚ್ಚಿನ ಸಂಬಂಧ ಇಲ್ಲವೆಂದ ಮೇಲೆ, ಅವನ ಕಾಲದ ವಿರೂಪಾಕ್ಷಪಟ್ಟಣವು ಹಂಪೆಯಾಗಿರುವ ಸಾಧ್ಯತೆಯೂ ಇಲ್ಲ. ವಿರೂಪಾಕ್ಷಪಟ್ಟಣದ ಉಲ್ಲೇಖಗಳು (ಒಂದು ಬಿಟ್ಟು) ಮೂರನೇ ಬಲ್ಲಾಳನ ಕಾಲಕ್ಕೇ ನಿಂತುಹೋಗುವುದರಿಂದ, ಅವನ ಕಾಲದ ವಿರೂಪಾಕ್ಷ ಪಟ್ಟಣವನ್ನೇ ನಾವು ಹುಡುಕಬೇಕಾಗುತ್ತದೆ. ಈ ಸಂಬಂಧದ ಶಾಸನಗಳು ಹಾಸನ, ಬೆಂಗಳೂರು ಹಾಗೂ ತುಮಕೂರು ಜಿಲ್ಲೆಗಳಲ್ಲಿ ದೊರೆತಿವೆ. ತುಮಕೂರು, ಬೆಂಗಳೂರು, ಮೈಸೂರು ಈ ಜಿಲ್ಲೆಗಳಲ್ಲಿ ಹಂಪಾಪುರ /ವಿರೂಪಾಕ್ಷಪುರ ಎಂಬ ಹೆಸರಿನ ಊರುಗಳು ಹೆಚ್ಚಾಗಿರುವುದು ಕರ್ನಾಟಕ ಗ್ರಾಮಸೂಚಿಯಿಂದ ತಿಳಿದು ಬರುತ್ತದೆ. ಹಾಸನ ಮತ್ತು ಮೈಸೂರಿನ ಶಾಸನಗಳಲ್ಲಿ ಇದರ ಉಲ್ಲೇಖವೂ ಇದೆ. ಆದರೆ, ಇಲ್ಲೆಲ್ಲಾ ವಿರೂಪಾಕ್ಷನ ದೇವಾಲಯಗಳು ಇದ್ದಂತೆ ತೋರಿವುದಿಲ್ಲ. ಮೈಸೂರು ಜಿಲ್ಲೆಯ ಗೆಜೆಟಿಯರ್‌ನಲ್ಲಿ ಹಂಪೆವಿರೂಪಾಕ್ಷನ ದೇವಾಲಯವಿರುವ (ವಿಜಯನಗರ ಕಾಲ) ಒಂದು ಹಂಪಾಪುರದ (ಕೆ. ಆರ್. ನಗರ ತಾಲೂಕು) ವಿವರ ಮಾತ್ರ ದೊರೆತಿದ್ದು, ಬೇರೆಲ್ಲಿಯೂ ವಿರೂಪಾಕ್ಷ ದೇವಾಲಯವಿಲ್ಲ. ಈ ವಿರೂಪಾಕ್ಷ ದೇವಾಲಯವೂ ಶಾಸನೋಕ್ತವಾಗಿಲ್ಲ, ಹಾಗೂ ಕಾಲ ತಾಳೆಯಾಗುವುದಿಲ್ಲ. ಬಂಗಾರಪೇಟೆ ತಾಲೂಕಿನ ರಾಮಸಾಗರ (=ಬುಕ್ಕಸಾಗರ) ಮತ್ತು ವಿರೂಪಾಕ್ಷಿಯಲ್ಲಿ ವಿರೂಪಾಕ್ಷ ದೇವಾಲಯ ಗಳಿದ್ದರೂ, ಅವು ವಿಜಯನಗರ ಕಾಲದ್ದಾಗಿದೆ. ಹಾಸನದಲ್ಲಿ ಒಂದು ವಿರೂಪಾಕ್ಷ ದೇವಾಲಯವಿದೆ. ಆದರೆ , ಹೊಯ್ಸಳರ ಕಾಲದಲ್ಲಿ ಇದು ಬಸದಿಯಾಗಿತ್ತೆಂದು ತಿಳಿದುಬರುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ, ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಹಂಪ ಸಾಗರವೂ, ಹೊಸಪೇಟೆ ತಾಲೂಕಿನಲ್ಲಿ ಬುಕ್ಕಸಾಗರ, ಹೊಸೂರು ಮತ್ತು ಹಂಪ

ದೇವನಹಳ್ಳಿ ಗ್ರಾಮಗಳೂ ಇವೆ. ಇದರಲ್ಲಿ, ಹಂಪಸಾಗರದ ವಿಷಯ ಮಾತ್ರ ಸದ್ಯಕ್ಕೆ ದೊರೆತಿದ್ದು ಇಲ್ಲಿ ವಿರೂಪಾಕ್ಷ ದೇವಾಲಯ ಇಲ್ಲ. ತೀರ್ಥಹಳ್ಳಿ ತಾ. ನ ಕವಲೇದುರ್ಗ ದಲ್ಲಿ ವಿರೂಪಾಕ್ಷ, ವಿಜಯವಿಠಲ, ಭುವನೇಶ್ವರಿ ದೇವಾಲಯ ಗಳಿವೆ. ಇದು ಕೂಡ ಹಂಪೆಯ ನೆನಪು ತರುತ್ತದೆ. ಆದರೆ, ಊರಿನ ಹೆಸರು ಹೊಂದುವುದಿಲ್ಲ. ಹೀಗಾಗಿ, ಈ ಬಗ್ಗೆ ಹಂಪೆಯನ್ನು ಬಿಟ್ಟು ಬೇರೆಡೆಯೇ ಗಮನಹರಿಸಬೇಕಾಗುತ್ತದೆ.

ವೆಂಕಟರಮಣಯ್ಯ ಅವರು, ಮಾಗಡಿ ತಾಲೂಕಿನ ವಿರುಪಾಪುರವನ್ನು ವಿರೂಪಾಕ್ಷಪಟ್ಟಣವೆಂದು ಹೇಳಿದ್ದಾರೆ ಹಾಗೂ ವಿರೂಪಾಕ್ಷಪುರದ ಸಂಕ್ಷಿಪ್ತ ರೂಪವೇ 'ವಿರುಪಾಪುರ'ವೆಂದೂ ಹೇಳಿದ್ದಾರೆ. ಈ ವಿರುಪಾಪುರದಲ್ಲಿ ಪ್ರಸಿದ್ಧನಾದ ಗುರುಚಿತ್ತ ದೇವನೆಂಬ ಒಬ್ಬ ಶೈವಗುರು ಇದ್ದನೆಂದೂ, ಬಹುಶಃ ಈ ಕಾರಣಕ್ಕಾಗಿ ಮೂರನೇ ಬಲ್ಲಾಳನು ಇಲ್ಲಿಗೆ ಆಗಾಗ್ಗೆ ಬಂದು ಹೋಗುತ್ತಿದ್ದನೆಂದೂ ಹೇಳಿದ್ದಾರೆ[52]. ಮಾಗಡಿ ತಾಲೂಕಿನಲ್ಲಿ ವಿರುಪಾಪುರವೆಂಬ ಊರು ಈಗಲೂ ಇದೆ (ಕುಣಿಗಲ್ ನಿಂದ 26 ಕಿ. ಮೀ.). ಈ ಸುತ್ತಲಿನ ಪ್ರದೇಶದಲ್ಲಿ ಈ ಬಲ್ಲಾಳನ ಕಾಲದ ಶಾಸನಗಳೂ ದೊರೆ ಯುತ್ತವೆ [53]. ಇದರಿಂದಾಗಿ ಈ ಪ್ರದೇಶವನ್ನು ಗಮನಕ್ಕೆ ತೆಗೆದುಕೊಳ್ಳ ಬಹುದಾಗಿದೆ. ವಿರುಪಾಪುರಕ್ಕೆ ಸೇರಿದ ಹುಲಿಕಲ್ಲು ಊರೊಳಗಿದೆ. ಇಲ್ಲಿ ಗುರುಚಿತ್ತಾ ರಾಧ್ಯರ ಗದ್ದುಗೆಯೂ ಇದೆ. ಇಲ್ಲಿ ಹಳೆಯ ದೇವಾಲಯವಿದ್ದು, ಮುಂದಿನ ರಚನೆ ನಂತರದ ಕಾಲದ್ದು, ಹೊಯ್ಸಳರ ಕಾಲದ ಸರ್ವೇಶ್ವರ, ಜನಾರ್ದನ (ಜೀರ್ಣೋದ್ಧಾರ ವಾಗಿದೆ). ದೇವಾಲಯಗಳೂ ಇಲ್ಲಿವೆ. ಅಲ್ಲದೆ, ಬೆಟ್ಟದ ಮೇಲೆ (ವಿರುಪಾಪುರ) ಸಿದ್ಧರಾಮೇಶ್ವರ ವಿಜಯನಗರ ಕಾಲದ ಸಿದ್ಧೇಶ್ವರ ದೇವಾಲಯವಿದೆ. ಹೊಯ್ಸಳ ಮತ್ತು ವಿಜಯನಗರ ಕಾಲದ ರಚನೆಗಳನ್ನೂ ಇಲ್ಲಿ ಕಾಣಬಹುದು[54]; ಕೋಟೆ ಭಾಗವೂ ಇದೆ. ಆದರೆ, ಬಲ್ಲಾಳನು ಇಲ್ಲಿನ ಮಠಕ್ಕೆ ಬಂದು ಹೋಗುತ್ತಿದ್ದುದರ ಬಗ್ಗೆ ಶಾಸನಗಳಾಗಲೀ, ಹೇಳಿಕೆಗಳಾಗಲೀ ಇಲ್ಲ. ಆದ್ದರಿಂದ ಈ ವಿರುಪಾಪುರ ವನ್ನು ವಿರೂಪಾಕ್ಷಪಟ್ಟಣ ವೆಂದು ಗುರುತಿಸಲು ಸಾಧ್ಯವಿಲ್ಲ. ಹೀಗಾಗಿ ವಿರೂಪಾಕ್ಷ ಪಟ್ಟಣವನ್ನು ಬೇರೆಡೆ ಹುಡುಕಬೇಕಾಗಿದೆ.

ಹಿಂದೆಯೇ ಹೇಳಿದಂತೆ, ರೈಸ್ ಅವರು, ನಾಲ್ಕನೇ ಬಲ್ಲಾಳನಿದ್ದ ಸ್ಥಳವೇ ಹೊಸಪಟ್ಟಣ ಎಂದಿದ್ದಾರೆ. ಆ ಸ್ಥಳ ಇಲ್ಲಿಯದೇ ಆಗಿರಬೇಕೆನಿಸುತ್ತದೆ. ಅಂತೆಯೇ ಮೂರನೇ ಬಲ್ಲಾಳನು ಮಗನಿಗೆ ಪಟ್ಟಾಭಿಷೇಕ ಮಾಡಿದ ಸ್ಥಳವೇ ಹೊಸಪಟ್ಟಣ (= ವಿರೂಪಾಕ್ಷ ಪಟ್ಟಣ?) ಎಂದು ಬಿ. ಎ. ಸಾಲೆತೂರ್ ಅವರು ಹೇಳಿದ್ದಾರೆ. ಮೂರನೇ ಬಲ್ಲಾಳನ ಕಾಲದಲ್ಲಾದ ಕೆಲವು ಘಟನೆ/ದಾಖಲುಗಳನ್ನು ಗಮನಿಸಿದರೆ, ಈ ಬಗ್ಗೆ ನಮಗೆ ಹೆಚ್ಚಿನ ಮಾಹಿತಿ ಸಿಗುತ್ತದೆ. ನಾಲ್ಕನೇ ಬಲ್ಲಾಳನು ತುರುಷ್ಕರ

ಸೆಯೆಯಿಂದ ಬಿಡುಗಡೆಯಾಗಿ ದೆಹಲಿಯಿಂದ ಹಿಂತಿರುಗಿದ ಮೇಲೆ ಕೂಡಲಿಯ ರಾಮನಾಥ ದೇವರಿಗೆ ದಾನಬಿಟ್ಟಿದ್ದಾನೆ [55]. ಈ ನಾಲ್ಕನೇ ಬಲ್ಲಾಳನ ಪಟ್ಟಾಭಿಷೇಕ ದಂದು ನೀಡಿರುವ ದಾನದ ಶಾಸನವು ಚಿಕ್ಕಮಗಳೂರು ತಾಲೂಕಿನ ಹಲಸಬಾಳು ಗ್ರಾಮದಲ್ಲಿದೆ[56] ಎಂಬುದು ಗಮನಾರ್ಹ ಅಂಶವಾಗಿದೆ. ಬಹುಶಃ ಅವನ ಪಟ್ಟಾ ಭಿಷೇಕ ಸ್ಥಳ ಇದೇ ಆಗಿರಬೇಕು. ಈ ಹಲಸಬಾಳು ಗ್ರಾಮದಲ್ಲಿ ವಿರೂಪಾಕ್ಷ ದೇವಾಲಯವೂ ಇದ್ದು (ಅದರ ಮುಂದೆಯೇ ಅವನ ಪಟ್ಟಾಭಿಷೇಕದಂದು ದಾನ ನೀಡಿದ ಕ್ರಿ. ಶ. 1343ರ ಶಾಸನವಿದೆ), ಅದರ ಉಲ್ಲೇಖವು ಕ್ರಿ. ಶ. 1707 ರ ಶಾಸನದಲ್ಲಿದೆ. ನಂತರ ಕಾಲದ ಈ ಶಾಸನದಲ್ಲಿ 'ಹಂಪಸಾಗರ' ಎಂಬ ಉಲ್ಲೇಖವೂ ಇದೆ[57]. ಆದರೆ, ಹಲಸಬಾಳು ಊರಿನ ಹೆಸರು (ಬದಲಾಗಿರದಿದ್ದಲ್ಲಿ) ಈಗಿರುವಂತೆ ವಿರೂಪಾಕ್ಷಪಟ್ಟಣ/ ಹೊಸಪಟ್ಟಣವನ್ನು ನಿರ್ದೇಶಿಸುತ್ತಿಲ್ಲ. ಆದ್ದರಿಂದ ಇದನ್ನು ಗಣನೆಗೆ ತೆಗೆದುಕೊಳ್ಳ ಲಾಗುವುದಿಲ್ಲ.

ಚಿಕ್ಕಮಗಳೂರು ತಾಲೂಕಿನ ಕ್ರಿ. ಶ. 1202 ಮತ್ತು ಕ್ರಿ. ಶ. 1615-16 ರ ಒಂದು ಶಾಸನಗಳನ್ನೂ ಇಲ್ಲಿ ಗಮನಿಸಬೇಕಾಗುತ್ತದೆ. ಮುತ್ತಿನಪುರ ಗ್ರಾಮದ (ಚಿಕ್ಕಮಗಳೂರಿನಿಂದ 20 ಕಿ. ಮೀ. ಉತ್ತರಕ್ಕೆ)ಶಾಸನದಲ್ಲಿ [60] ಕ್ರಿ. ಶ. 1202 ರಲ್ಲಿ ಒಂದು ಬ್ರಹ್ಮೇಶ್ವರ ದೇವಾಲಯ ನಿರ್ಮಾಣವಾಯಿತೆಂದಿದೆ. ಇದೇ ಮುಂದೆ ಪ್ರಸನ್ನ ವಿರೂಪಾಕ್ಷ ದೇವಾಲಯ ಎಂದಾಯಿತು ಎಂದು ಗೆಜೆಟಿಯರ್‌ನಲ್ಲಿದೆ. ಪ್ರಸನ್ನ ವಿರೂಪಾಕ್ಷ ದೇವಾಲಯವನ್ನು ಹೇಳುವ ಈ ಶಾಸನದಲ್ಲಿ [58], ಶ್ರೀ ವೀರಪ್ರತಾಪ ಶ್ರೀ ರಾಮಚಂದ್ರರಾಯರು ಪೃಥ್ವೀ ವಿರೂಪಾಕ್ಷ ನೆಲೆಸಿದ್ದು ಈ ಸ್ವಾಮಿ ಜೀರ್ಣೋ ದ್ಧಾರ ಮಾಡಿದ ವೀರಬಲ್ಲಾಳರಾಯ ಬಂದು ಜೀರ್ಣೋದ್ಧಾರ ಪ್ರತಿಷ್ಟೆಯಂ ಮಾಡಿ ನಿಲ್ಲಿಸಿದ ವೀರಬಲ್ಲಾಳರಾಯರು ಶ್ರೀ ವಿರೂಪಾಕ್ಷ ಸ್ವಾಮಿಗೆ ಅಮೃತಪಡಿ.... ಮುಂತಾದವಕ್ಕೆ ಎಂದಿದೆ; ಅಲ್ಲದೆ, ದೇವರಿಗೆ 11 ಗ್ರಾಮಗಳನ್ನು ದಾನವಾಗಿ ನೀಡಿದ್ದನ್ನು ತಿಳಿಸಿದೆ. ಈ ಶಾಸನದಲ್ಲಿ ಹೇಳಿರುವುದು ಎರಡನೇ ಬಲ್ಲಾಳನೋ ಅಥವಾ ಮೂರನೇ ಬಲ್ಲಾಳನೋ ಸ್ಪಷ್ಟವಾಗಿಲ್ಲ. ಈ ದೇವಾಲಯವು ಹಿಂದೆ ಹೇಳಿ ದಂತೆ, ಕ್ರಿ. ಶ. 1202 ರಲ್ಲಿ ನಿರ್ಮಾಣವಾಯಿತು. ಇದರ ನಿರ್ಮಾತೃ ಎರಡನೇ ಬಲ್ಲಾಳ; ಆದ್ದರಿಂದ, ಇಲ್ಲಿಗೆ ಬಂದು ದೇವಾಲಯವನ್ನು ಜೀರ್ಣೋದ್ಧಾರ ಮಾಡಿದ ವೀರ ಬಲ್ಲಾಳ ಅಂದರೆ, ಬಹುಪಾಲು ಮೂರನೇ ಬಲ್ಲಾಳ ಅಥವಾ ನಾಲ್ಕನೇ ಬಲ್ಲಾಳ. ಆಗಿನಿಂದ ಪ್ರಸಿದ್ಧಿಯಾಗಿದ್ದ ದೇವಾಲಯವು ಯಾವುದೋ ಕಾಲದಲ್ಲಿ ಅಂದರೆ, ಕ್ರಿ. ಶ. 1615 ಕ್ಕೆ ಮುಂಚೆ, ವಿರೂಪಾಕ್ಷ ದೇವಾಲಯ ಎನಿಸಿತು. ಬಲ್ಲಾಳನು, ಶಾಸನ ವಿರುವ ಇದೇ ವಿರೂಪಾಕ್ಷ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದ

ನೆಂಬುದು ಸ್ಪಷ್ಟವಾಗಿದ್ದು, ಅವನು ಇಲ್ಲಿಯ ವಿರೂಪಾಕ್ಷನನ್ನೇ ಪೂಜಿಸುತ್ತಿದ್ದಿರ ಬಹುದಾದ ಸಾಧ್ಯತೆಯನ್ನು ಸೂಚಿಸುತ್ತಿದೆ. ಅಂತೇ, ಈ ದೇವರಿಗೆ 11 ಗ್ರಾಮಗಳನ್ನು ದಾನ ನೀಡಿದನೆಂದ ಮೇಲೆ, ಇದು ಅವನ ಕಾಲದಲ್ಲಿದ್ದ ಪ್ರಮುಖ ದೇವಾಲಯವೇ ಆಗಿರ ಬೇಕು. ಈ ಹಿನ್ನೆಲೆಯಲ್ಲಿ ಗಮನಿಸಿದರೆ, ಚಿಕ್ಕಮಗಳೂರು ಜಿಲ್ಲೆಯಲ್ಲಿಯೂ ವಿರೂಪಾಕ್ಷ ಹೆಸರಿನ ದೇವಾಲಯಗಳಿದ್ದುವಲ್ಲದೆ, ಬಲ್ಲಾಳನ ಕಾಲದಲ್ಲಿ ಇಲ್ಲಿಯ ದೇವಾಲಯಗಳೂ ಪ್ರಮುಖ ಸ್ಥಾನ ಪಡೆದಿದ್ದವೆಂದು ಹೇಳಬಹುದಾಗಿದೆ.

ಪಟ್ಟಿಯಲ್ಲಿರುವಂತೆ, 'ವಿರೂಪಾಕ್ಷಪಟ್ಟಣದ ನೆಲೆವೀಡೆಂದು' ಉಲ್ಲೇಖಿಸುವ ಶಾಸನಗಳು ಚಿಕ್ಕಮಗಳೂರು ಜಿಲ್ಲೆಯಲ್ಲಿ ಇಲ್ಲವಾದರೂ ಹೀಗೆ ಪರೋಕ್ಷವಾಗಿ ಅನೇಕ ವಿವರಗಳು ದೊರೆಯುತ್ತವೆ. ಇಲ್ಲಿನ ಅನೇಕ ದೇವಾಲಯಗಳು ವಿರೂಪಾಕ್ಷನ ಹೆಸರಲ್ಲೇ ಇವೆ; ಇದರೊಂದಿಗೆ ಚಿಕ್ಕಮಗಳೂರು ತಾಲೂಕಿನಲ್ಲೇ ಹಂಪಾಪುರವೂ ಇದೆ. ಮಾತ್ರವಲ್ಲದೇ, ತರೀಕೆರೆ ಮತ್ತು ನರಸಿಂಹರಾಜಪುರ ತಾಲೂಕಿನ ವಿಠಲಾಪುರ ಗಳು, ಕಡೂರು ತಾಲೂಕಿನ ವಿರುಪನಹಳ್ಳಿ, ಹಸ್ತಿನಾಪುರ, ವಿಠಲಾಪುರ -ಇವುಗಳೂ ಕೂಡ ಹಂಪೆ ಮತ್ತು ಹಂಪೆಯ ವಿರೂಪಾಕ್ಷನಿಗೆ ಸಮಾನಂತರವಾಗಿ ಇಲ್ಲೂ ಒಂದು ವಿರೂಪಾಕ್ಷನ ನೆಲೆ ಇರುವುದನ್ನು ಸೂಚಿಸುತ್ತವೆ. ಬೇರೆಡೆಗಳಲ್ಲಿ ಈ ಬಗ್ಗೆ ಕೆಲ ಮಟ್ಟಿಗೆ ನೇರ ಮಾಹಿತಿ ದೊರೆತರೂ, ವಿವಿಧ ದೃಷ್ಟಿಗಳಿಂದ ನೋಡಿದಾಗ ಬಲ್ಲಾಳನ ಕಾಲದಲ್ಲಿ ವಿರೂಪಾಕ್ಷನ ಪ್ರಭಾವ ಇಲ್ಲಿಯಷ್ಟು ದಟ್ಟವಾಗಿರುವಂತೆ ತೋರುವುದಿಲ್ಲ. 'ವಿರೂಪಾಕ್ಷ'ನ ದೇವಾಲಯಗಳು ಈ ಜಿಲ್ಲೆಯಲ್ಲೇ ಹೆಚ್ಚಾಗಿದ್ದು ಮುತ್ತಿನಪುರ, ಹಂಪಾಪುರ, ಹಲಸಬಾಳು, ಬುಕ್ಕಾಂಬುದಿಗಳಲ್ಲೆಲ್ಲಾ ಇವೆ. ಹೀಗಾಗಿ ವಿರೂಪಾಕ್ಷ ಪಟ್ಟಣವು ಈ ಪರಿಸರದಲ್ಲೇ ಇರುವುದೆಂದು ಹೇಳಬಹುದಾಗಿದೆ.

ತರೀಕೆರೆ ತಾಲೂಕು ಕೇಂದ್ರದಿಂದ 37 ಕಿ. ಮೀ. ದೂರದಲ್ಲಿರುವ ಬುಕ್ಕಾಂಬುದಿ ಯಲ್ಲೂ ಪಂಪಾವಿರುಪಾಕ್ಷ ದೇವಾಲಯವಿದೆ. ಇದು ತುಂಬಾ ದೊಡ್ಡ ದೇವಾಲಯ ವಾಗಿತ್ತು ಎಂದು ಹೇಳಬಹುದಾಗಿದೆ. ಈ ದೇವಾಲಯವು ಹೊಯ್ಸಳರ ಕಾಲ ದ್ದಾಗಿದ್ದು, ದೇವಾಲಯದ ಕಂಬ, ವಿತಾನ, ದ್ವಾರಗಳು ಇದನ್ನು ದೃಢೀಕರಿಸು ತ್ತಿವೆ. ನವರಂಗದಲ್ಲಿ ಹೊಯ್ಸಳರ ಕಾಲದ ಶಿಲ್ಪಗಳಿವೆ. ಇಲ್ಲಿ ಇನ್ನೂ 2-3 ದೇವಾಲಯ ಗಳಿದ್ದು, ಬಹುಶಃ ಅಲ್ಲಿನ ಶಿಲ್ಪಗಳನ್ನು ಇಲ್ಲಿ ತಂದಿಟ್ಟಿದ್ದಾರೆ. ಈ ವಿರೂಪಾಕ್ಷ ದೇವಾಲಯದ ಗರ್ಭಗೃಹದಲ್ಲಿ ಉದ್ಭವ ಲಿಂಗವಿದೆ. ಲಿಂಗವು ಸಾಮಾನ್ಯ ವಾಗಿರುವಂತಿರದೆ, ಪಾಣಿವಟ್ಟದೊಳಗೆ ಐದು ಉಬ್ಬುಗಲ್ಲುಗಳು ಸುತ್ತಲೂ ಇವೆ. ಈ ದೇವರ ಉತ್ಸವ ವಿಗ್ರವು ಊರೊಳಗಿದ್ದು, ಅದಕ್ಕೇ ಪ್ರತ್ಯೇಕ ದೇವಾಲಯವಿದೆ. ಈ ವಿಗ್ರಹವು ಹಂಪೆಯ ಉತ್ಸವ ವಿಗ್ರಹದಂತಿದೆ ಎಂದು ಹೇಳುತ್ತಾರೆ. ಮೂಲ

ದೇವರ ಹೆಸರು ಮತ್ತು ಉತ್ಸವ ವಿಗ್ರಹ ಎರಡೂ ಹಂಪೆಯನ್ನು ನೆನಪಿಸುತ್ತವೆ. ಹಂಪೆ ಜಾತ್ರೆಯ ಸಮಯದಲ್ಲೇ ಇಲ್ಲೂ ಜಾತ್ರೆ ಆಗುತ್ತದೆ (ಏಪ್ರಿಲ್‌ನಲ್ಲಿ ಎಂದು ಗೆಜೆಟಿಯರ್ ನಲ್ಲಿದೆ). ಈ ಎಲ್ಲ ಕಾರಣಗಳಿಂದ ವಿರೂಪಾಕ್ಷನ ಸ್ಥಾನವಾದ ವಿರೂಪಾಕ್ಷಪಟ್ಟಣ ವನ್ನು (ಹಂಪೆ ಎಂದು ಗುರುತಿಸುವ ಬದಲು) ಚಿಕ್ಕಮಗಳೂರು ಜಿಲ್ಲೆಯಲ್ಲಿ ಹುಡುಕ ಬೇಕಾಗಿದೆ.

ಚಿಕ್ಕಮಗಳೂರು ತಾಲೂಕಿನ ಹಂಪಾಪುರ (ಅಲ್ಲಿಂದ ನೈರುತ್ಯಕ್ಕೆ 5 ಕಿ. ಮೀ.) ದ ಶಾಸನದಲ್ಲಿ 'ಪ್ರತಾಪ ಹರಿಹರಪುರವಾದ ಹಂಪಾಪಟ್ಟಣ' [61] ಎಂಬ ಉಲ್ಲೇಖ ವಿದೆ. ಈ ಶಾಸನವು ಅಲ್ಲಿನ ವಿರೂಪಾಕ್ಷ ದೇಲಾಲಯದ ಮುಂದಿದೆ. ಊರ ಹೆಸರು ಮತ್ತು ದೇವಾಲಯದ ಹೆಸರು, ಬಳ್ಳಾರಿ ಜಿಲ್ಲೆಯ ಹಂಪೆಯನ್ನೇ ಸೂಚಿಸುವಂತೆ ತೋರುವುದಾದರೂ, ಶಾಸನವು ಹೇಳುತ್ತಿರುವುದು ಇಲ್ಲಿನ ಹಂಪಾಪುರವನ್ನೇ ಎಂಬುದು ಸ್ಪಷ್ಟವಾಗಿದೆ. ಈ ಹಿಂದೆಯೇ ಹೇಳಿದಂತೆ ಹಲಸಬಾಳು ಶಾಸನದಲ್ಲೂ ಒಂದು 'ಹಂಪಸಾಗರ'ದ ಉಲ್ಲೇಖವಿದೆ. ಸಂಗಮರ ನಂತರ ಕಾಲದ ಶಾಸನಗಳಲ್ಲಿ ಹಂಪಂಣಭಟ [62], ಸೇನಬೋವನ ಹಂಪರಸ[63], ಹಂಪೆ ಚೆಂನಪ[64], ಹಂಪೆ ಸೇನಬೋವನ ಬರಹ[65] -ಎಂದು ವ್ಯಕ್ತಿನಾಮದಲ್ಲೂ ಹಂಪೆಯ ಹೆಸರು ಸೇರಿರುವುದು ಮುಖ್ಯ ವಾಗಿದೆ.

ಹಂಪಾಪುರವು ಚಿಕ್ಕಮಗಳೂರಿನಿಂದ 5 ಕಿ. ಮೀ. ದೂರದಲ್ಲೂ, ಸಕ್ಕರೆಪಟ್ಟಣ ದಿಂದ ಸುಮಾರು 12 ಕಿ. ಮೀ. ದೂರದಲ್ಲೂ ಇದೆ. ಮೊದಲೇ ಹೇಳಿದಂತೆ ಈ ಹಂಪಾಪುರವು 'ಪ್ರತಾಪ ಹರಿಹರಪುರವಾದ ಹಂಪಾಪಟ್ಟಣ' ಎಂದು ಕ್ರಿ. ಶ. 1411ರಲ್ಲಿ ಉಲ್ಲೇಖಗೊಂಡಿದ್ದು, ಆ ಕಾಲದಿಂದಲೂ (ಅಂದರೆ ಆ ಮೊದಲೂ ಕೂಡ) ಈ ಊರು ಅದೇ ಹೆಸರಿನಲ್ಲೇ ಇತ್ತೆಂಬುದನ್ನು ಸೂಚಿಸುತ್ತಿದೆ. ಈಗ ಇಲ್ಲಿ ಒಂದು ವಿರೂಪಾಕ್ಷ ದೇವಾಲಯವಿದೆ. ಇದನ್ನು ಈಶ್ವರ ದೇವಾಲಯ, ವಿರುಪನ ದೇವಾಲಯ ಎಂದೂ ಕರೆಯುತ್ತಾರೆ. ಈ ದೇವಾಲಯ ಈಗ ಪೂರ್ತಿ ಹಾಳಾಗಿದ್ದು, ಅವಶೇಷಗಳೂ ಹಾಳಾಗಿವೆ. ಲಿಂಗ, ಬಸವಣ್ಣನನ್ನು, ಒಂದು ಮಂಟಪದಂತೆ ಕಟ್ಟಿ, ಅದರಲ್ಲಿ ಇಟ್ಟಿದ್ದಾರೆ. ಬಳಪದ ಕಲ್ಲಿನ ಕೆಲವು ವಾಸ್ತು ಅವಶೇಷಗಳೂ, ಶಿಲ್ಪಗಳೂ ಅಲ್ಲಿವೆ. ಇವು ಹೊಯ್ಸಳರ ಕಾಲದ ಅವಶೇಷ ಎನ್ನಬಹುದು. ಅಂದರೆ, ಮೂರನೇ ಬಲ್ಲಾಳನ ಕಾಲದಲ್ಲೂ ಈ ದೇವಾಲಯ ಇದ್ದಿರಬೇಕು (ಇದಕ್ಕೆ ಹೊಸ ದೇವಾಲಯ ಕಟ್ಟುವ ಯೋಚನೆ ಮುಂದುವರಿದಿದೆಯಾದರೂ ದೇವಾಲಯ ಕಟ್ಟಲಾಗಿಲ್ಲ ಎಂದು ತಿಳಿದು ಬರುತ್ತದೆ.) ಇದು ಹಂಪೆಯಂತೇ ಎಂದು ಸ್ಥಳೀಕರೊಬ್ಬರು ಹೇಳಿದ್ದರು. ಈ ಪಾಳು ವಿರೂಪಾಕ್ಷ ದೇವಾಲಯದೊಂದಿಗೆ, ರಾಜಧಾನಿ ಹೊಸಪಟ್ಟಣ (=ಸಕ್ಕರೆ

ಪಟ್ಟಣ)ಕ್ಕೆ ಹತ್ತಿರದಲ್ಲೇ ಇರುವುದು ಕೂಡ ಇಲ್ಲಿ ಮುಖ್ಯಾಂಶವಾಗಿದೆ. ಹಂಪೆಯ ಹೆಸರನ್ನೂ ಸೂಚಿಸುತ್ತಾ, ವಿರೂಪಾಕ್ಷ ದೇವಾಲಯವೂ ಇರುವ ಈ ಹಂಪಾಪುರವನ್ನೇ ವಿರೂಪಾಕ್ಷಪಟ್ಟಣವೆಂದು ಗುರುತಿಸಬಹುದಾಗಿದೆ. ಹೀಗೆ ಹೊಸಪಟ್ಟಣವೆಂದರೆ, ಕಡೂರು ತಾಲೂಕಿನಲ್ಲಿರುವ ಇಂದಿನ ಸಕ್ಕರೆಪಟ್ಟಣವೆಂದೂ, ವಿರೂಪಾಕ್ಷಪಟ್ಟಣ ವೆಂದರೆ ಚಿಕ್ಕಮಗಳೂರು ತಾಲೂಕಿನಲ್ಲಿರುವ ಇಂದಿನ ಹಂಪಾಪುರವೆಂದೂ ಗುರುತಿಸ ಬಹುದಾಗಿದೆ. ವಿಜಯನಗರ ಮತ್ತು ಹಂಪೆಯು ಇರುವಂತೆಯೇ ಇಲ್ಲೂ ಹೊಸ ಪಟ್ಟಣ ಮತ್ತು ವಿರೂಪಾಕ್ಷಪಟ್ಟಣಗಳು ಜೋಡಿ ಪಟ್ಟಣಗಳಾಗಿದ್ದವೆಂದು ಹೇಳ ಬಹುದಾಗಿದೆ.

ಹೀಗೆ ಸುಮಾನಾಂತರವಾಗಿ ಎರಡೂ ಕಡೆಗಳಲ್ಲಿ ವಿರೂಪಾಕ್ಷನ ಸ್ಥಾನವಿದ್ದರೂ, ಪ್ರಾಚೀನ ಕಾಲದಿಂದಲೂ ಪ್ರಸಿದ್ಧವಾಗಿದ್ದ ಬಳ್ಳಾರಿ ಜಿಲ್ಲೆಯ 'ಪಂಪವಿರೂಪಾಕ್ಷ ತೀರ್ಥ'- ವೊಂದನ್ನೇ ವಿದ್ವಾಂಸರು ಹೆಚ್ಚು ಗಮನಿಸುತ್ತಿದ್ದರು. ಈ ಕಾರಣವಾಗಿ ಹೊಸಪಟ್ಟಣ ಮತ್ತು ವಿರೂಪಾಕ್ಷಪಟ್ಟಣಗಳನ್ನು ಬಳ್ಳಾರಿ ಜಿಲ್ಲೆಯ ವಿಜಯನಗರ-ಹಂಪೆ ಎಂದೇ ಗುರುತಿಸುತ್ತಿದ್ದರು. ಆದರೆ, ಕೆಲವು ವಿದ್ವಾಂಸರು ಮಾತ್ರ ಈ ಬಗ್ಗೆ ಅನುಮಾನ ಹೊಂದಿದ್ದರು; ಸ್ಪಷ್ಟವಾಗಿ ಯಾವ ಪ್ರದೇಶವೆಂದು ಗುರುತಿಸದಿದ್ದರೂ, ಆ ಬಗ್ಗೆ ಕೆಲವು ಸೂಚನೆಗಳನ್ನು ನೀಡಿದ್ದರು. ಪೂರ್ವಸೂರಿಗಳ ಅಭಿಪ್ರಾಯಗಳನ್ನು ಪರಿಶೀಲಿಸಿ, ವಿವಿಧ ಆಧಾರಗಳಿಂದ ಇಲ್ಲಿ ಅಧ್ಯಯನವನ್ನು ಮುಂದುವರಿಸಲಾಗಿದೆ. ಕ್ಷೇತ್ರಕಾರ್ಯ, ಶಾಸನಗಳ ಉಲ್ಲೇಖಗಳು, ಅವುಗಳ ಕಾಲ ಮತ್ತು ದೊರೆತ ಸ್ಥಳ, ಆ ಸಂಬಂಧದ ಇತರ ಶಾಸನಗಳು, ಆ ಸ್ಥಳದ ಹಾಗೂ ಆ ಕಾಲದ ಸ್ಥಿತಿಗತಿಗಳು, ಗ್ರಾಮ ನಾಮ ಮತ್ತು ವ್ಯಕ್ತಿನಾಮಗಳು, ರಾಜಧಾನಿಯ ಲಕ್ಷಣಗಳು, ವಿರೂಪಾಕ್ಷನ ದೇವಾಲಯವಿರುವ ಸ್ಥಳಗಳು, ಸ್ಥಳೀಕರ ಹೇಳಿಕೆಗಳು - ಈ ಎಲ್ಲ ಹಿನ್ನೆಲೆಗಳಲ್ಲಿ ಇಲ್ಲಿ ಹೊಸಪಟ್ಟಣ, ವಿರೂಪಾಕ್ಷಪಟ್ಟಣಗಳನ್ನು ಹುಡುಕಲೆತ್ನಿಸಲಾಗಿದೆ. ಇದರಿಂದ ದಕ್ಷಿಣ ಕರ್ನಾಟಕದಲ್ಲಿ ಹೊಯ್ಸಳ ರಾಜ್ಯದೊಳಗಿನ ಚಿಕ್ಕಮಗಳೂರು ಜಿಲ್ಲೆಯಲ್ಲೂ ಇಂತಹುದೇ ಪರಿಸರವಿತ್ತೆಂಬುದನ್ನು ಈ ಲೇಖನ ಕಂಡುಕೊಂಡಿದೆ. ಅಲ್ಲದೆ, ಹೊಸಪಟ್ಟಣ ಮತ್ತು ವಿರೂಪಾಕ್ಷಪಟ್ಟಣಗಳು ಚಿಕ್ಕಮಗಳೂರು ಜಿಲ್ಲೆಯಲ್ಲೇ ಇದ್ದವೆಂಬುದನ್ನು ಸ್ಪಷ್ಟವಾಗಿ ಗುರುತಿಸಿದೆ. ಇದರಂತೆ, ಮೂರನೇ ಬಲ್ಲಾಳ ಮತ್ತು ಬುಕ್ಕನ ಕಾಲದ ಶಾಸನೋಕ್ತ ಹೊಸಪಟ್ಟಣವೆಂದರೆ ಕಡೂರು ತಾ. ನ ಇಂದಿನ ಸಕ್ಕರೆಪಟ್ಟಣ ಹಾಗೂ ಮೂರನೇ ಬಲ್ಲಾಳನ ಕಾಲದ ಶಾಸನೋಕ್ತ ವಿರೂಪಾಕ್ಷಪಟ್ಟಣ ವೆಂದರೆ, ಚಿಕ್ಕಮಗಳೂರು ತಾ. ನ ಹಂಪಾಪುರ ಎಂದು ನಿರ್ಧರಿಸಿದೆ.

ಅಡಿಟಿಪ್ಪಣಿಗಳು

1. ಆಂಧ್ರಪ್ರದೇಶದ ಕ್ರಿ.ಶ. 1340ರ ಶಾಸನದಲ್ಲಿ (ಕವಿಶಾಸಂ,5, ಭಾಗ-1 ಕಲ್ಯಾಣ ದುರ್ಗ,ಕುಂದುರ್ಪಿ-177)'ಹೊಸ ಹಂಪೆಯ ಪಟ್ಟಣ' ಎಂದಿರುವುದಾಗಿ ಹೇಳ ಲಾಗಿದೆ. ಆದರೆ, ಶಾಸನ ಪಾಠದಲ್ಲಿ ಹೊಸ್ತಾಗಿ ಹಂಪೆಯ ದೊಣೆಯ ತೋಡ್ಸಿ ಎಂದು ಹಾಗೂ 'ವೀರಬಲ್ಲಾಳರಾಯನು ದೋರಸಮುದ್ರದಿಂದ ಆಳುತ್ತಿದ್ದ ಎಂದೂ ಇದೆ.
2. ಈ ಶಾಸನದ ಕಾಲವನ್ನು ಕ್ರಿ.ಶ.1360 ಎಂದು ಆರ್. ನರಸಿಂಹಾಚಾರ್ ಅವರು ಗುರುತಿಸಿದ್ದಾರೆ. (ಶಾಸನಪದ್ಯ ಮಂಜರಿ ಸಂಖ್ಯೆ 330).

2ಅ. ಹಂಪೆ, ಹಸ್ತಿನಾವತಿ, ಹೊಸಹಳ್ಳಿ, ವಿರೂಪಾಕ್ಷ ಮುಂತಾದ ಉಲ್ಲೇಖಗಳು ಕ್ರಿ.ಶ. 15ನೇ ಶತಮಾನದ ನಂತರದ ಶಾಸನಗಳಲ್ಲಿದ್ದಲ್ಲಿ, ಅದನ್ನು ಗಣನೆಗೆ ತೆಗೆದು ಕೊಂಡಿಲ್ಲ.

3. ಆವರಣದಲ್ಲಿರುವ ಪುಟಸಂಖ್ಯೆಗಳು, ಗ್ರಂಥಋಣದಲ್ಲಿರುವ ಆಯಾ ವಿದ್ವಾಂಸರ ಕೃತಿ/ಲೇಖನಗಳ ಪುಟಸಂಖ್ಯೆಯನ್ನು ಸೂಚಿಸುತ್ತವೆ. ಇಲ್ಲಿ ಹೊಸಪಟ್ಟಣವೆಂದರೆ ಹಂಪೆಯಲ್ಲವೆಂಬ ತೀರ್ಮಾನಕ್ಕೆ ಬಂದಿದ್ದು, ಅದನ್ನು ಬೇರೆಡೆ ಹುಡುಕುವ ಉದ್ದೇಶ ವಿರುವುದರಿಂದ, ಹೊಸಪಟ್ಟಣವನ್ನು ವಿಜಯನಗರ ಎಂದು ಗುರುತಿಸಿರುವ ವಿದ್ವಾಂಸರ ಅಭಿಪ್ರಾಯವನ್ನು ಚರ್ಚಿಸಿಲ್ಲ.
4. (Quoted) S. Srikantaiah: *Founders of Vijayanagara* - p.38.
5. *ಎಕ* IV(ಪ) - ಚಾನ. 295 (ನರಸಮಂಗಲ) ಕ್ರಿ.ಶ. 1337.
6. ವಿವರಗಳಿಗೆ ನೋಡಿ : ಡಾ. ಕೂ. ಸ. ಅಪರ್ಣ; 'ಸಂಗಮ ಅರಸರ ಶಾಸನೋಕ್ತ ಪಯಣ' *ವಿಜಯನಗರ ಅಧ್ಯಯನ* ಸಂ. 12, ಪು. 99-113.
7. Srikantaiah : op.cit - p.p. 69-70.
8. *ಎಕ.* 11 ಪ್ರಸ್ತಾವನೆ - ಪು. 24
9. Rice : *Mysore and Coorg from Inscriptions* - p.114.
10. ಹೆಚ್. ಇ. ಬಸವರಾಜಪ್ಪ - ವಿಜಯನಗರ ಕಾಲದ ಚಿತ್ರದುರ್ಗ ಪ್ರದೇಶದ ಆಡಳಿತ ಘಟಕಗಳು ', *ವಿಜಯನಗರ ಅಧ್ಯಯನ* ಸಂ. 5, ಪು. 115-118
11. *ಎಕ* 9 ಕೋಲಾರ 352 ಮತ್ತು 344 (ಶೀತಿ)(ತ) ಕ್ರಿಶ. 1302 ಮತ್ತು 1 1333 ಕ್ರಮವಾಗಿ.
12. *ಎಕ* X, ಗೌರಿಬಿದನೂರು 16(ಹುಣಸಹನಹಳ್ಳಿ) ಕ್ರಿ.ಶ. 1333.
13. *ಎಕ* X ಮಾಲೂರು 39 ಮತ್ತು 61 ಹಳೇಪಾಳ್ಯ ಮತ್ತು ತೃಣಸಿ ಕ್ರಮವಾಗಿ (ತ).
14. ಎಂ. ಜಿ. ನಾಗರಾಜ್ ಅವರೂ ಇದೇ ರೀತಿ ಅಭಿಪ್ರಾಯಪಟ್ಟಿದ್ದಾರೆ (*ಸಾಂಸ್ಕೃತಿಕ ವೀರಶೈವ*, ಪು. 165)

15. ಎಕ4 (ಹಳೆಯ ಆವೃತ್ತಿ), ಯಡತೊರೆ - 54, ಕ್ರಿ.ಶ. 1666(ಉದ್ಧೃತ)[*ಎ.ಕ.* / VI(ಪ ಕೃಷ್ಣರಾಜನಗರ. 87-1606 ಕ್ರಿ.ಶ.)?]

16. N. Venkataramanaiah, Vijayanagara: Origin of the City and Empire pp.39-42.

17. B. A. Saletore: *Social and Political Life Under Vijayanagar* pp.113 & 34.

18. B. Narasimhaiah: *Metropolis Vijayanagar* p.80

19. *Mysore Archaeological Reports* : 1927, pp,62-63

20. ಮನೆಕಟ್ಟುವಾಗ ಸಿಕ್ಕಿದ (ಹಾಗೆ ಹೇಳಿದರು) ಈ ಶಾಸನವು ಈಗ ಸೋಮಶೇಖರ್ ಲಕ್ಷ್ಮೀನಾರಾಯಣ ಅವರ ಮನೆಯ ಮುಂದಿದೆ.(ಭೇಟಿ 19.5.08)

20.ಅ ಇದರೊಂದಿಗೆ ಇನ್ನೂ ಒಂದು ಕ್ರಿಶ.1359ರ ಅಪ್ರಕಟಿತ ಶಾಸನವಿದ್ದು, ಈ 4 ಶಾಸನಗಳೂ ನಿಷಿಧಿ ಶಾಸನವೇ ಆಗಿರುವುದು ಗಮನಾರ್ಹವಾಗಿದೆ (ಈ ಅಪ್ರಕಟಿತ ಶಾಸನವನ್ನು ಡಾ. ಕೆ. ವಸಂತಲಕ್ಷ್ಮಿ ಅವರು *ಕ.ಇ. ಅ.*ಯ 2009ರ ಸಮ್ಮೇಳನದಲ್ಲಿ ಮಂಡಿಸಲಿದ್ದಾರೆ.)

21. *ಚಿಕ್ಕಮಗಳೂರು ಗೆಜೆಟಿಯರ್* ಪು. 618.

22. ಬಸದಿಯು ಗಂಟೆ ಶ್ರೀನಿವಾಸರಾಯ/ಕೇಶವಯ್ಯನವರ ಮನೆಯ ಹತ್ತಿರ ಇತ್ತೆಂದೂ ಹೇಳುವುದುಂಟು.

23. ಇದನ್ನು *ಗೆಜೆಟಿಯರ್*‌ನಲ್ಲಿ 'ಬಲ್ಲೇಶ್ವರ' ದೇವಾಲಯ ಎಂದೂ, ಇಲ್ಲಿನ ಶಾಸನದ ಸ್ಥಳ ನಿರ್ದೇಶನದಲ್ಲಿ 'ಬಳ್ಳೇಶ್ವರ' ಎಂದೂ ಹೇಳಿದೆ.

24. ಚನ್ನಕೇಶವನಿಗೆ ಈಗ ಗುಡಿ ಕಟ್ಟುತ್ತಿದ್ದಾರೆ. (ಭೇಟಿ 19.5.08)

25. ಈ ಕೆರೆಯು ಕ್ರಿ.ಶ. 158ರಲ್ಲಿ ಜೀರ್ಣೋದ್ಧಾರವಾಗಿದೆ ಎಂದು *ಗೆಜೆಟಿಯರ್*‌ನಲ್ಲಿ ಹೇಳಲಾಗಿದೆಯಾದರೂ, ಶಾಸನದಲ್ಲಿ (ಕಡೂರು.4) ಕೆರೆಯ ಉಲ್ಲೇಖವಿಲ್ಲ; ಬೇರೆ ಆಧಾರಗಳಿಂದ ಆ ತೀರ್ಮಾನಕ್ಕೆ ಬಂದಿರಬಹುದು. ಊರು ಉಳಿಸಲು ಈ ಕೆರೆಗೆ ಬಲಿಯಾದವರ ಬಗ್ಗೆ ಕಥೆ ಇದೆ.

26. *ಎಕ.* 12 (ಪ) ಕಡೂರು. 41 (ಕಬ್ಬಳ್ಳಿ) ಬುಕ್ಕನ ಕಾಲ.

27. *ಎಕ.* 12(ಪ)ತರೀಕೆರೆ.75 (ಬುಕ್ಕಾಂಬುದಿ)ಕ್ರಿ.ಶ. 1555.

28. ಸಂಗಮ ಅರಸರಲ್ಲಿ ಇನ್ನೂ ಒಬ್ಬ, ಎರಡನೇ ಬುಕ್ಕ ಎಂದಿದ್ದಾನೆ. ಆದರೆ, ಅವನು ಯಾವುದೇ ಹೆಚ್ಚಿನ ಕಾರ್ಯಗಳನ್ನು ಮಾಡಲಿಲ್ಲ. ಅವರ ಆಡಳಿತಾವಧಿಯೂ ಕಡಿಮೆ (ಕ್ರಿ.ಶ1405-06). ಇಲ್ಲೆಲ್ಲಾ ಹೆಚ್ಚಾಗಿ ದೊರೆಯುತ್ತಿರುವುದು ಒಂದನೇ ಬುಕ್ಕನಿಗೆ ಸಂಬಂಧಿಸಿದ ವಿಷಯಗಳೇ ಆದ್ದರಿಂದ ಇದು ಎರಡನೇ ಬುಕ್ಕನಿಗೆ ಅನ್ವಯ ವಾಗುವುದಿಲ್ಲ.

29. 'ನರಪತಿ' ಎಂದರೆ, ಮೂರು ರಾಷ್ಟ್ರಗಳ ಅಧಿಪತಿ ಎಂದೂ, 'ಪಾರ್ಷ್ಣೇಯರಾಜ' ಎಂದರೆ ಒಂದು ರಾಷ್ಟ್ರದ ಅಧಿಪತಿ ಎಂದೂ ಮಾನಸಾರವು ಹೇಳಿ, 42.7.10; ಅಂತೇ ಚತುಸ್ಸಮುದ್ರಾಧಿಪತಿಯಾದವನನ್ನು 'ಚಕ್ರವರ್ತಿ'ಎಂದೂ ಅದು ಗುರುತಿಸಿದೆ. (42.3).

30. *ಮಯಮತ*: 29.1 ಮತ್ತು 10.19(ಇನ್ನೂ ವಿವರಗಳಿವೆ). ಸಾರ್ವಭೌಮ ಚಕ್ರ ಚಕ್ರವರ್ತಿಯ ಅರಮನೆಯು ಪಶ್ಚಿಮದಲ್ಲಿ ಇರಬಹುದೆಂಬ ಒಂದು ಆಯ್ಕೆಯನ್ನು ಮಾನಸಾರವು ನೀಡಿದೆ. (40.38).

31. ಅದೇ 10.28-29ಎ. ಇಲ್ಲಿ ಇರಬೇಕೆಂದು ಹೇಳಿರುವ ವರ್ತಕರೆಂದರೆ, ಅಮೂಲ್ಯವಾದ ಕಲ್ಲುಗಳು, ಉತ್ತಮವಾದ ವಸ್ತ್ರಗಳು, ಕಾಳುಗಳು, ಗಂಧ ಮುಂತಾದವುಗಳ ವರ್ತಕರು.

32. *ಎಕ.*11(ಪ) ಚಿಮ.26 (ಇಂದಾವಾರ)ಕ್ರಿ.ಶ. 1190-91

33. *ಎಕ*11(ಪ) ಮೂಡ. 102 (ಹೊರನಾಡು)ಕ್ರಿ.ಶ. 1675.

34. *ಎಕ*11(ಪ) ಚಿಮ. 60(ಹಲಸಬಾಳು) ಕ್ರಿ.ಶ.1702

35. *ಎಕ.* 11(ಪ) ಕಡೂರು.210 (ಸಕ್ಕರೆಪಟ್ಟಣ) ಕ್ರಿ.ಶ. 1812

36. *ಎಕ* 11(ಪ) ಕಡೂರು 74.(ಕೇದಿಗೆಗೆರೆ) ಕ್ರಿ.ಶ. 1275.

37. *ಎಕ* 11(ಪ) ಶೃಂಗೇರಿ 39 (ಶೃಂಗೇರಿ) ಕ್ರಿ.ಶ. 1737.

38. ಇಲ್ಲಿನ ಬೀದಿ/ಪಟ್ಟಣಗಳ ಬಗ್ಗೆ ಹೇಳುವಾಗ ಸ್ಥಳೀಕರು ಇದನ್ನು 'ರಾಜಪಟ್ನ' ಎಂದು ಹೇಳಿದರು.

39. Venkataramanayya : Op Cit.p.41.

40. ಈ ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ. ಸಂಗಮ ಅರಸರು ಕ್ರಿ.ಶ. 1366ರ ಹೊತ್ತಿಗೆ ಆನೆಗುಂದಿಗೆ ಹೋಗುವುದರಿಂದ, ಈ ಶಾಸನವನ್ನು ಕ್ರಿ.ಶ. 1366 ಕ್ಕೆ ಮುಂಚಿನ ಕಾಲದ್ದು ಅಥವಾ ಈಗಾಗಲೇ ಹೇಳಿರುವಂತೆ (ಆ.ಟಿ.2) ಕ್ರಿ.ಶ. 1360 ಎಂದು ಗುರುತಿಸಬಹುದಾಗಿದೆ.

41. ಸಂಗಮರ ನಂತರ ಕಾಲದ ಒಂದು ಶಾಸನದಲ್ಲಿ (ನೋಡಿ;ಆ.ಟಿ 58) ಮುತ್ತಿನಪುರವನ್ನು 'ಮುತ್ತಿ'ಎಂದಿದೆ. ಇದನ್ನೂ ಸೇರಿಸಿಕೊಂಡು 'ಮುತ್ತದ ಹೊಸವೂರು' ಎಂದಾಗಿರಬಹುದೇ ಎಂಬ ಅನುಮಾನ ಬರುವುದಾದರೂ, ಆ ಊರು ಸ್ವಲ್ಪ ದೂರದಲ್ಲಿದೆ. ಶೃಂಗೇರಿ ಶಾಸನದ 'ಮುತ್ತೂರ ಸೀಮೆ' ಗೂ ಇದಕ್ಕೂ ಸಂಬಂಧವಿದೆಯೋ ಗೊತ್ತಿಲ್ಲ.

42. *ಎಕ* 12(ಪ)-ಕಡೂರು 209(ಸಕ್ಕರೆಪಟ್ಟಣ) ಕ್ರಿ.ಶ. 1812.

43. *ಅದೇ* ಕ. 210.

44. ಎಕ. 11(ಪ) ಶೃಂಗೇರಿ.39 (ಶೃಂಗೇರಿ) ಕ್ರಿ.ಶ. 1737

44ಅ. ವಿರುಪನಹಳ್ಳಿಯ ಜನ ನಿಡುಘಟ್ಟಕ್ಕೆ ಹೋದರೆಂದು ಸ್ಥಳೀಕರು ಹೇಳಿದರು. ಈ ನಿಡುಘಟ್ಟ, ತರೀಕೆರೆಗಳಲ್ಲಿ ನೆಲೆಸಿರುವ ಜನರು ಸಕ್ಕರೆ ಪಟ್ಟಣದ ಅಂತರ ಘಟ್ಟದಮ್ಮನಿಗೆ ನಡೆದುಕೊಳ್ಳುವುದಾಗಿ ತಿಳಿದುಬರುತ್ತದೆ. ಇದು ಸಕ್ಕರೆ ಪಟ್ಟಣದ ಜನ ಚದುರಿಹೋಗಿರವುದನ್ನು ಸೂಚಿಸುತ್ತಿದೆ.

45. ಅದೇ . ಚಿಮ. 204(ಸಾದರನಹಳ್ಳಿ)ಕ್ರಿಶ. 16-17 ನೇ ಶತಮಾನ.

46. ಸಕ್ಕರೆ ಪಟ್ಟಣದ ರಂಗನಾಥ ದೇವರನ್ನು ಶಕುನಿರಾಯ ಎಂದು ಗುರುತಿಸಿರುವುದು ಇವನ ಹೆಸರಿನಿಂದಲೇ ಇರಬಹುದು. ಸ್ಥಳೀಕರು ಹೇಳುವ ಸಖರಾಯ ಇವನೇ ಇರಬೇಕು.

47. ಇಂದಿನ ಹೊಸಹಳ್ಳಿಯಲ್ಲಿ ಹಿಂದಿನದೇನೂ ಉಳಿದಿಲ್ಲವಾದ್ದರಿಂದ ಹೊಸಹಳ್ಳಿಯು ಸಕ್ಕರೆಪಟ್ಟಣಕ್ಕೆ ಸೇರಿತ್ತೆನ್ನುವುದು ಅನುಮಾನವೇ.

47ಅ. ಇಲ್ಲಿ ರಾಜಧಾನಿಯನ್ನು ಯಾವಾಗ ಮತ್ತು ಏಕೆ ಕಟ್ಟಲಾಯಿತು ಎಂಬ ಪ್ರಶ್ನೆ ಏಳುತ್ತದೆ. ಕ್ರಿ.ಶ. 1316ರಲ್ಲಿ ಮೂರನೇ ಬಲ್ಲಾಳನು ದೋರಸಮುದ್ರದಲ್ಲಿ 'ನೆಲೆ ವೀಡನ್ನು ಕಟ್ಟಿದನು' ಎಂಬ ಉಲ್ಲೇಖವಿದೆ [ಎಕ.7(ಪ) ಮಂಡ್ಯ 60 (ಗುತ್ತಲು)]ಸು. 1328ರಲ್ಲಿ ಮತ್ತೆ ಧಾಳಿಯಾದಾಗ ಅಥವಾ ಅದರ ನಿರೀಕ್ಷೆಯಲ್ಲಿ ಸ್ವಲ್ಪ ಮೊದಲು ಇಲ್ಲಿಗೆ ರಾಜಧಾನಿಯನ್ನು ಬದಲಾಯಿಸಿರಬಹುದು. ವಿಲಿಯಂ ಕೋಯೆಲ್ಹೊ ಅವರು, 'ದೋರಸಮುದ್ರವು ರಾಜಕೀಯವಾಗಿ ಪ್ರಾಮುಖ್ಯವನ್ನು ಕಳೆದುಕೊಂಡಿದ್ದ ರಿಂದ ಬಲ್ಲಾಳನು ರಾಜಧಾನಿಯನ್ನು ಬದಲಾಯಿಸಿದನೆಂದೂ, ತನಗಾಗಿ ಮತ್ತು ತನ್ನ ಸಾಮಂತರು ಪ್ರಧಾನಗಳಿಗಾಗಿ ದಕ್ಷಿಣ ಭಾರತದಲ್ಲೆಲ್ಲಾ ಮುಖ್ಯ ಪ್ರದೇಶ ಗಳಲ್ಲಿ ನೆಲೆವೀಡುಗಳನ್ನು ಸ್ಥಾಪಿಸಿದನೆಂದೂ' ಹೇಳಿದ್ದಾರೆ. (ಪು. 248).ಈ ಕಾರಣ ವಾಗಿಯೂ ಇಲ್ಲಿ ಅವಿಗಾಗಿ ರಾಜಧಾನಿ ನಿರ್ಮಾಣವಾಗಿರುವ ಸಾಧ್ಯತೆಗಳಿವೆ.

48. *SII.* IV-800 (ತಾಡಪತ್ರಿ).

49. *MAR.* 1928, No. 4; ಎಕVI(ಪ)ಚಿಕ್ಕಮಗಳೂರು 57, ಕ್ರಿ.ಶ. 1343.

50. ಎಕ. V(ಪ) ಕೃಷ್ಣರಾಜನಗರ 39 (ಚಿಕ್ಕಹನಸೋಗೆ) ಕ್ರಿ.ಶ. 1342.

50ಅ. ಕ್ರಿಶ. 1340ರ ಶಾಸನದ ಪ್ರಕಾರ (ಬೆಂಗಳೂರು.111) ನಾಲ್ಕನೇ ಬಲ್ಲಾಳನಿಗೆ ಹಂಪೆಯಲ್ಲೇ ಪಟ್ಟಾಭಿಷೇಕವಾಯಿತೆಂದು ಹೇಳುವುದುಂಟು. ಆದರೆ, ಆಗ ಪಟ್ಟವಾದದ್ದು, ಮಯಿಲೆಯ ನಾಯಕನ ಮಗ ಚೆನ್ನನಾಯಕನಿಗೆ, ನಾಲ್ಕನೇ ಬಲ್ಲಾಳ ನಿಗಲ್ಲ ಎಂದು ವಸುಂಧರಾ ಫಿಲಿಯೋಜಾ ಅವರೂ ಹೇಳಿದ್ದಾರೆ. (ವಿಜಯನಗರ ಸಾಮ್ರಾಜ್ಯ ಸ್ಥಾಪನೆ, ಪು. 34)

51. B. Narasimhaiah, Op Cit,p.9.

52. Venkataramanayya; Op-Cit- p45.

53. *ಎಕ.* 9 ನೆಲ, 38 ಅಯಿಗಂಡಪುರ (ತಶ್ರಿ) ಕ್ರಿ.ಶ. 1301.

54. ಆನೆಗೊಂದಿ ಸಂಸ್ಥಾನದ ವಂಶಸ್ಥರು (ತಿರುಮಲ ದೀಕ್ಷಿತರು) ವಿಜಯನಗರ ಹಾಳಾದ ನಂತರ ಇಲ್ಲಿನ ಕೂದೂರಿನಲ್ಲಿ ಬಂದು ನೆಲೆನಿಂತರೆಂದು ಹೇಳಿ, ವಂಶಾವಳಿ ಇಟ್ಟುಕೊಂಡಿದ್ದಾರೆ. ಕೃಷ್ಣಪ್ಪ ಮತ್ತು ಚಿಕ್ಕಪ್ಪಯ್ಯ ಎಂಬ ಪಾಳೇಗಾರರೂ ಹುಲಿಕಲ್ಲಿನಲ್ಲಿ ವಾಸವಾಗಿದ್ದಾರೆ. ಅವರು ಕಟ್ಟಿಸಿರುವ ಮನೆಯ ಸುತ್ತ ಕೋಟೆಯಂತಹ ರಚನೆ ಇದೆ. ಹಳೆಯ ಅರಮನೆ ಇದ್ದಿರಬಹುದೇ ಎಂಬ ಅನುಮಾನ ಬರುತ್ತದೆ. ಈ ಹಿನ್ನೆಲೆಯಲ್ಲಿ ಈ ಪ್ರದೇಶವು ರಾಜವಂಶದ ಸಂಬಂಧ ಹೊಂದಿತ್ತೆಂಬ ಸೂಚನೆ ದೊರೆಯುತ್ತದೆ.

55. *ಎಕ* 13(ಪ) ಶಿವಮೊಗ್ಗ 30 (ಕೂಡ್ಲಿ) ಕ್ರಿ.ಶ. 1313.

56. *ಎಕ.* 11(ಪ) ಚಿಮ. 57 (ಹಲಸಬಾಳು) ಕ್ರಿ.ಶ 1343. ಈ ಶಾಸನವು ಹೇಳುವ ಹಳ್ಳಿ ಹಿರಿಯೂರು, ಬಹುಶಃ ಕಡೂರು ತಾಲೂಕಿನಿಂದ ಈಶಾನ್ಯಕ್ಕೆ 30 ಕಿ. ಮೀ. ದೂರದಲ್ಲಿರುವ ಹಿರಿಯೂರು ಇರಬಹುದೇನೋ!

57. *ಅದೇ.* ಚಿಮ. 60(ಹಲಸಬಾಳು) ಕ್ರಿ.ಶ. 1707.

58. *ಎಕ.* 11(ಪ) ಚಿಮ. 191 (ಮುತ್ತಿನಪುರ) ಕ್ರಿ.ಶ 1615-16.

60. *ಎಕ.* XI(ಪ) ಚಿಮ. 192 (ಮುತ್ತಿನಪುರ) ಕ್ರಿ.ಶ. 1202.

61. *ಎಕ.* 11(ಪ) ಚಿಮ. 67 (ಹಂಪಾಪುರ) ಕ್ರಿ.ಶ. 1411.

62. *ಅದೇ* ಶೃಂಗೇರಿ. 42(ಶೃಂಗೇರಿ) ಕ್ರಿ.ಶ. 1652.

63. *ಅದೇ* ಮೂಡ. 109(ನೂಚೆ) ಕ್ರಿ.ಶ. 1515.

64. *ಅದೇ.* ಚಿಮ. 60(ಹಲಸಬಾಳು) ಕ್ರಿ.ಶ. 1707.

65. *ಅದೇ.* ಮೂಡ. 66 (ಕಳಸ) ಕ್ರಿ.ಶ. 1520

ಆಧಾರ ಗ್ರಂಥಗಳು

ವಸುಂಧರಾ ಫಿಲಿಯೋಜಾ : *ವಿಜಯನಗರ ಸಾಮ್ರಾಜ್ಯ ಸ್ಥಾಪನೆ,* ಬೆಂಗಳೂರು, 1980

ಸದಾನಂದ ಕನವಳ್ಳಿ (ಅನು.) : ರಾಬರ್ಟ್ ಸಿವೆಲ್ - *ಮರೆತು ಹೋಗಿರುವ ಸಾಮ್ರಾಜ್ಯ* - ವಿಜಯನಗರ, ಹಂಪಿ. 1992.

ನಾಗರಾಜ್ ಎಂ. ಜಿ : *ಸಾಂಸ್ಕೃತಿಕ ವೀರಶೈವ,* ಶ್ರೀ ದೇಗುಲಮಠ, ಕನಕಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ, 2005.

ಮುನಿರಾಜಪ್ಪ : *ಮಾಗಡಿ ಸೀಮೆಯ ಇತಿಹಾಸ,* 2005

ಗೋಪಾಲ್ ಬಾ. ರಾ. : *ಕರ್ನಾಟಕ ಇತಿಹಾಸ,* ಮೈಸೂರು 1986.

ಕೊ.ಸ. ಅಪರ್ಣ : *ಸಂಗಮರ ದೇವಾಲಯಗಳು*, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ, ಧಾರವಾಡ, 2009.

ಕೃಷ್ಣಮೂರ್ತಿ ಎಂ. ಸಿ. : *ಸಖರಾಯಪಟ್ಟಣ (ಮಧುಪುರಿ)*, ಬೆಂಗಳೂರು, 2004.

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟಗಳು.

Vijayanagar Inscriptions Volumes - B. R. Gopal *Epigraphia Carnatica Volumes.*

Desai P. B., Srinivasa Ritti etc., : *History of Karnataka* - Dharwar, 1981.

Dikshit G. S. (Ed) : *Early Vijayanagara : Studies in its History and Culture,* Bangalore, 1988.

Satetore B. A. : *Social and Political life under Vijayanagar,* Madras, 1934.

Saletore, R. N. : *Vijayanagara Art,* Delhi 1982.

Srikantayya S. : *Founders of Vijayanagara,* Bangalore, 1938.

Venkataramanayya N. : *Vijayanagara: Origin of the City and Empire,* New Delhi, 1990.

Venkataramanayya N. : *Kampili and Vijayanagar,* Madras, 1929.

Burton Stein : Vijayanagara : *New Cambridge History of India*; Vol. I, Pt. 2, Cambridge University Press, New Delhi, 1999.

George Michell : *Vijayanagara : Courtly Style,* Vol. 3, Manohar American Institute of Indian Studies, New Delhi, 1992.

Narasimhaiah B. : *Metropolis Vijayanagara, Significance of Remaina of Citadel,* Delhi, 1992.

Madhao P. Patil : *Courtly Life under Vijayanagar Rulers,* BRPC(1) Ltd. Delhi, 1999.

Suresh K. M. : *Temples of Hampi and its Environs,* Delhi, 2003.

Rice B. L. : *Mysore and Coorg from Inscriptions.* London, 1909.

Kalmankar (Ed) : *Vijayanagara Empire Six Centenary Commemoration Volume*, Dharwar, 1936.

Willliam Coelho : *Hoysala Vamsa*, IHRI, Bombay, 1950.

Hayavadana Rao : *Mysore Gazeteer*, Vol. II, Pt.5.

Karnataka State Gazetteers : Districts-Kolar, Chikmagalur, Hassan, Bangalore (Rural), Mysore and Tumkur.

District Census Handbook 1971- Kolar, Bangalore and Chikmagalur.

ಲೇಖನಗಳು

ಲ. ನ. ಸ್ವಾಮಿ : 'ಮಹಾನಗರ ರಾಜಧಾನಿ ವಿಜಯನಗರದ ಬೆಳವಣಿಗೆ ಮತ್ತು ರಕ್ಷಣಾ ವ್ಯವಸ್ಥೆ' (ಸಂ) ಆರ್. ಗೋಪಾಲ್, ಚಿಕ್ಕಮಾರೇಗೋಡ ಮುಂ. ಮೈಸೂರು, 2006, ಪು. 86-116.

ಭಾರತಿ ಬಿ. ಆರ್. : 'ಹೊಸೂರು ಗ್ರಾಮ ಪರಿಸರದ ದೇವಾಲಯಗಳು, ಶಾಸನ ಮತ್ತು ಶಿಲ್ಪಾವಶೇಷಗಳು;'(ಸಂ) ಎಂ. ಜಿ. ನಾಗರಾಜ ಮತ್ತು ಪಿ. ವಿ. ಕೃಷ್ಣಮೂರ್ತಿ - *ಇತಿಹಾಸ ದರ್ಶನ*, ಸಂ. 17, ಕ. ಇ. ಅ. ಬೆಂಗಳೂರು 2005, ಪು. 159-162.

ಬಸವರಾಜಪ್ಪ ಹೆಚ್. ಈ. : 'ವಿಜಯನಗರ ಕಾಲದ ಚಿತ್ರದುರ್ಗ ಪ್ರದೇಶದ ಆಡಳಿತ ವಿಭಾಗಗಳು'; (ಸಂ) ಎಂ. ವಿ. ಕೃಷ್ಣಪ್ಪ ಮತ್ತು ಸಿ. ಎಸ್. ಪಾಟೀಲ, *ವಿಜಯನಗರ ಅಧ್ಯಯನ*, ಸಂ. 5, ಮೈಸೂರು, 2000, ಪು. 115-118.

ಕೂ. ಸ. ಅಪರ್ಣ : 'ಸಂಗಮ ಅರಸರ ಶಾಸನೋಕ್ತ ಪಯಣ', *ವಿಜಯನಗರ ಅಧ್ಯಯನ*, (ಸಂ) - ಆರ್. ಗೋಪಾಲ್, ಬಿ. ಎಂ. ಚಿಕ್ಕಮಾರೇಗೌಡ ಮುಂ. *ವಿಜಯನಗರ ಅಧ್ಯಯನ* ಸಂ. 12, ಮೈಸೂರು 2007, ಪು. 99-113.

ಕೂ. ಸ. ಅಪರ್ಣ : 'ಸಂಗಮ ಅರಸರ ಪ್ರಾಚೀನ ಶಾಸನ' (ಸಂ) - ಆರ್. ಗೋಪಾಲ್, ಬಿ. ಎಂ. ಚಿಕ್ಕಮಾರೇಗೌಡ ಮುಂ. *ವಿಜಯನಗರ ಅಧ್ಯಯನ* , ಸಂ. 11, ಮೈಸೂರು, 2006, ಪು. 23-35.

Kottaraiah, C. T. M. : 'Hampe-Vijayanagara, Names through History'- Studies in Place names, Vol. IX, p. 65-70

S. Srinivaschar - Hampi : 'The Fabled Capital of Vijayanagara Empire' in *Karnataka Architecture*'.

S. K. Iyengar : ' Founders of Vijayanagara' *QJMS* XI.1(1920-21), P.21-22.

ಈ ಲೇಖನ ತಯಾರಿಸುವಾಗ, ಸಲಹೆ-ಸೂಚನೆಗಳನ್ನು ನೀಡಿದ ಡಾ. ಕೆ. ಆರ್. ಗಣೇಶ್, ಡಾ. ಅ. ಲ. ನರಸಿಂಹನ್, ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಡಾ. ಕೆ. ವಸಂತಲಕ್ಷ್ಮಿ, ಡಾ. ಹರಿಹರ ಶ್ರೀನಿವಾಸರಾವ್, ಗೋವರ್ಧನ್, ಡಾ. ಜಯಮ್ಮ, ಸ್ಥಳದ ಬಗ್ಗೆ ಮಾಹಿತಿ ನೀಡಿದ ಸಕ್ಕರೆ ಪಟ್ಟಣದ ಶ್ರೀಮತಿ ಶಾಂತಮ್ಮ, ಶ್ರೀ ನಾಯಕ್ ರಾಮಸ್ವಾಮಿ, ಶ್ರೀ ಎಸ್. ಟಿ.ವರದ ರಾಜಯ್ಯ, ಕು. ಮೇಘ, ಕು. ಸುಶ್ಮಿತಾ ಮತ್ತು ಮನೆಯವರು ಹಾಗೂ ಹೊಸೂರು, ಮುದಿಗೆರೆ, ವಿರುಪಾಪುರ ಹುಲಿಕಲ್ಲು, ಕೂದೂರು, ಬುಕ್ಕಾಂಬುದಿ , ಹಂಪಸಂದ್ರ, ಹಂಪಾಪುರ, ಬುಕ್ಕಸಾಗರ ಮುಂತಾದ ಗ್ರಾಮಗಳ ಸ್ಥಳೀಕರು ಮತ್ತು ಕೋಲಾರ ಪತ್ರಿಕೆಯ ಕೆ. ಶಿವರಾಂ, ಶ್ರೀ ಎಂ. ಸಿ. ಕೃಷ್ಣಮೂರ್ತಿ, ವೇ|ಬ್ರ|ಶ್ರೀ ಎಂ. ವೆಂಕಟೇಶಭಟ್ಟರು - ಇವರೆಲ್ಲರಿಗೂ ಅನಂತ ಧನ್ಯವಾದಗಳು.

೨೦.ವಿಜಯನಗರದ ಉತ್ತರ ದಿಕ್ಕಿನ ಬಸವಪಟ್ಟಣ ದ್ವಾರ ಶೋಧನೆ

ಡಾ. ಶರಣಬಸಪ್ಪ ಕೋಲ್ಕಾರ

ಕ್ರಿ. ಶ. ೧೩೩೬ ರಲ್ಲಿ ವಿಜಯನಗರ ಸ್ಥಾಪನೆಯಾದಾಗ ಆನೆಗುಂದಿ ಅದರ ರಾಜಧಾನಿಯಾಗಿತ್ತು. ಸಂಗಮ ಮನೆತನದ ಮೊದಲ ಇಬ್ಬರು ಅರಸರಾದ ಮೊದಲನೆಯ ಹರಿಹರ (ಕ್ರಿ. ಶ. ೧೩೩೬-೧೩೫೬) ಮತ್ತು ಮೊದಲನೆಯ ಬುಕ್ಕ (ಕ್ರಿ. ಶ. ೧೩೫೬-೧೩೭೭)ರು ಆನೆಗುಂದಿಯಿಂದ ಆಡಳಿತ ನಡೆಸಿದರು. ಮೊದಲನೆಯ ಬುಕ್ಕನು ಹಂಪಿ ಬಳಿ ವಿಜಯನಗರ ಪಟ್ಟಣವನ್ನು ಕಟ್ಟಿಸಿ ರಾಜಧಾನಿಯನ್ನು ಆನೆಗುಂದಿಯಿಂದ ಅಲ್ಲಿಗೆ ಸ್ಥಳಾಂತರಿಸಿದನು. ಅಲ್ಲಿಂದ ಕ್ರಿ. ಶ. ೧೫೬೫ ರ ತಾಳಿಕೋಟೆ ಕದನದವರೆಗೂ ವಿಜಯನಗರ ಪಟ್ಟಣವೇ ರಾಜಧಾನಿಯಾಗಿತ್ತು.

ವಿಜಯನಗರದರಸರ ಆನೆಗುಂದಿ ಮತ್ತು ಹಂಪಿಯನ್ನು ತಮ್ಮ ರಾಜಧಾನಿಯನ್ನಾಗಿ ಆಯ್ದುಕೊಂಡಿರುವಲ್ಲಿ ನದಿ ಬೆಟ್ಟಗಳಿಂದ ಕೂಡಿದ ಅದರ ಭೌಗೋಳಿಕ ರಕ್ಷಣಾತ್ಮಕ ಸನ್ನಿವೇಶವನ್ನು ಗಮನದಲ್ಲಿರಿಸಿಕೊಂಡಿದ್ದರೆನ್ನುವುದು ಸ್ಪಷ್ಟ. ಏಕೆದಂರೆ, ಆನೆಗುಂದಿಗೆ ಪೂರ್ವ-ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿ ಸುತ್ತುವರೆದಿರುವ ಬೆಟ್ಟಸಾಲುಗಳಿದ್ದರೆ, ಉತ್ತರಕ್ಕೆ ತುಂಗಭದ್ರಾ ನದಿ ಹರಿದಿದೆ. ಅದರಂತೆ ರಾಜಧಾನಿ ವಿಜಯನಗರಕ್ಕೆ ವರ್ಗಾವಣೆ ಗೊಂಡ ಮೇಲೆ ಅದರ ಉತ್ತರ ದಿಕ್ಕಿನ ಭದ್ರತೆ, ನದಿ ಬೆಟ್ಟಗಳಿಂದ ಮತ್ತಷ್ಟು ಸದೃಢ ವಾಯಿತು. ಹೀಗಾಗಿ ಆನೆಗುಂದಿ ಮತ್ತು ಹಂಪಿಗಳು ಒಂದು ರೀತಿಯಲ್ಲಿ ನೈಸರ್ಗಿಕ ವಾಗಿಯೇ ರಕ್ಷಣಾತ್ಮಕ ನೆಲೆಗಳನ್ನೆಬಹುದು. ಆದಾಗ್ಯೂ ಈ ಎರಡು ನಗರಗಳಿಗೆ ಸುತ್ತಲೂ ಕೋಟೆಗಳನ್ನು ಕಟ್ಟಿದ ಅರಸರು ಮತ್ತಷ್ಟು ಭದ್ರತೆಯನ್ನು ಒದಗಿಸಿದ್ದರು.

ಆನೆಗುಂದಿ-ವಿಜಯನಗರ ಪ್ರವೇಶಕ್ಕೆ ಆಂತರಿಕವಾಗಿ ಕೋಟೆಗಳಲ್ಲಿ ಹಲವು ದ್ವಾರಗಳು, ಬಾಗಿಲುಗಳು ಮತ್ತು ಬಾಹ್ಯವಾಗಿ ದೂರದ ಬೆಟ್ಟ, ಗುಡ್ಡಗಳಲ್ಲಿ ಆರು ಕಣಿವೆದ್ವಾರಗಳಿದ್ದವು. ಕೋಟೆಯ ದ್ವಾರಗಳಲ್ಲಿ ಮೊದಲನೆಯ ಕೋಟೆಯ ಸಿಂಘಾರದ ಹೆಬ್ಬಾಗಿಲು, ಸೋಮವಾರದ ಬಾಗಿಲು, ಗಾಣಿಗಿತ್ತಿ ಜೈನ ದೇವಾಲಯದ ಉತ್ತರಕ್ಕಿರುವ ಬಾಗಿಲು, ಅದೇ ದೇವಾಲಯದ ಆಗ್ನೇಯಕ್ಕಿರುವ ಹೂವಿ ಬಾಗಿಲು ಮತ್ತು ಪ್ರತಿಷ್ಠಿತ ವ್ಯಕ್ತಿಗಳ ಅರಮನೆ ಪ್ರದೇಶಕ್ಕಿರುವ ಬಾಗಿಲುಗಳು. ಎರಡನೆಯ ಕೋಟೆಯ ಭೀಮನ ಬಾಗಿಲು, ಮೂರನೆಯ ಕೋಟೆಯ ಬೇಟೆಗಾರರ ಹೆಬ್ಬಾಗಿಲು ಮತ್ತು ಹೊದೆಯ

ಬಾಗಿಲು, ಕೋಟೆ ಶಂಕರದೇವ ಬಾಗಿಲು, ಜಡೆಯಶಂಕರದೇವರ ದಿಡ್ಡಿ, ಹಂಪಾದೇವಿಯ ದಿಡ್ಡಿ, ಅರೆಶಂಕರ ಬಾಗಿಲು, ರೆಮ್ಮುದಿಡ್ಡಿ, ಉದಯಗಿರಿಯ ಬಾಗಿಲು, ಗುಮ್ಮಟ ಬಾಗಿಲು, ನಾಲ್ಕನೆಯ ಕೋಟೆಯ ಪೆನುಗೊಂಡೆ ಬಾಗಿಲುಗಳು ಮುಖ್ಯವಾಗಿವೆ.[೧]

ಬಾಹ್ಯ ಅಥವಾ ಹೊರಬಾಗಿಲುಗಳಲ್ಲಿ ಪೂರ್ವದಿಕ್ಕಿಗೆ ರಾಮಸಾಗರದ ಕಣಿವೆ ಬಾಗಿಲು, ಆಗ್ನೇಯ ದಿಕ್ಕಿಗೆ ಉಪ್ಪಾರಹಳ್ಳಿ ಬಜಾರದ ಬಾಗಿಲು ದಕ್ಷಿಣ ದಿಕ್ಕಿಗೆ ವಡಿಗೆರೆ ಕೆರೆಯ ಬಳಿಯ ಕೋಟೆಗೆ ಬಾಗಿಲು, ನೈರುತ್ಯಕ್ಕೆ ಹರಪನಹಳ್ಳಿ ಸೀಮೆ ಜೋಳದರಾಶಿ ಗುಡ್ಡದರಾಯರ ಕಣಿವೆ ಬಾಗಿಲು, ಈಶಾನ್ಯ ದಿಕ್ಕಿಗೆ ಹರಪನಹಳ್ಳಿ ಸೀಮೆ ಹೊಸೂರು ಸನೀಹದ ಬೆನಕಾಪುರ ಬಾಗಿಲು ಮತ್ತ ಉತ್ತರ ದಿಕ್ಕಿಗೆ ಬಸವಪಟ್ಟಣದ ಬಾಗಿಲು ಗಳಿದ್ದವೆಂದು ಕಮಲಾಪುರದ ಕೈಫಿಯತ್ತಿನಲ್ಲಿ ಉಲ್ಲೇಖವಿದೆ.[೨] ಈ ದ್ವಾರಗಳಲ್ಲಿ ಉತ್ತರ ದಿಕ್ಕಿನ ಕಣಿವೆ ಬಾಗಿಲಾದ ಬಸವಪಟ್ಟಣದ ಬಾಗಿಲು ನನ್ನ ಕ್ಷೇತ್ರಕಾರ್ಯದಲ್ಲಿ ಶೋಧವಾಗಿದ್ದು, ಅದರ ಕುರಿತು ವಿವೇಚನೆ ಈ ಪ್ರಬಂಧದಲ್ಲಿದೆ.

ಉತ್ತರ ದಿಕ್ಕಿನ ಬಾಗಿಲುಗಳು ಮತ್ತು ಮಾರ್ಗಗಳು

ಬಸವಪಟ್ಟಣ ಬಾಗಿಲಿನ ಪರಿಶೀಲನೆಗೆ ಮುಂಚೆ ವಿಜಯನಗರ ಹಾಗೂ ಆನೆಗುಂದಿ ಗಳ ಉತ್ತರ ದ್ವಾರ ಬಾಗಿಲು ಹಾಗೂ ಮಾರ್ಗಗಳನ್ನು ಗಮನಿಸುವುದು ಸೂಕ್ತ. ವಿಜಯ ನಗರ (ಹಂಪಿ)ದಿಂದ ಆನೆಗುಂದಿಗೆ ನದಿಯಲ್ಲಿ ಮೂರು ಕಡೆ ಸಂಪರ್ಕಮಾರ್ಗಗಳಿದ್ದವು. ಅವುಗಳೆಂದರೆ ಅರೆಶಂಕರ ಬಾಗಿಲು ಮೂಲಕ ತಳವಾರ ಘಟ್ಟದಲ್ಲಿ (ಹರಿಗೋಲ ಪುಟ್ಟಿ ಅಥವಾ ತೆಪ್ಪ) ನದಿಯನ್ನು ದಾಟಿ ಆನೆಗುಂದಿ ಕೋಟೆಯ ಅಂಬಿಗರ ಬಾಗಿಲು ಮೂಲಕ ಆನೆಗುಂದಿಗೆ ತೆರಳುವುದು. ಎರಡನೆಯ ಮಾರ್ಗ ವಿಜಯವಿಠ್ಠಲ ದೇವಾಲಯದ ಹತ್ತಿರ ವಿದ್ದಿತು. ಇಲ್ಲಿ ನದಿಯಲ್ಲಿ ಸೇತುವೆಯಿದ್ದು ಚಂದ್ರಮೌಳೇಶ್ವರ ದೇವಾಲಯವಿರುವ ನಡುಗಡ್ಡೆಯನ್ನು ಸಂಪರ್ಕಿಸುತ್ತಿತ್ತು.

ಇಂದು ಈ ಸೇತುವೆಯ ಕಂಬಗಳು ಮಾತ್ರ ಉಳಿದಿವೆ. ಚಂದ್ರಮೌಳೇಶ್ವರ ದೇವಾ ಲಯದ ನಡುಗಡ್ಡೆಯಿಂದ ಆನೆಗುಂದಿ ಬದಿಯ ಹನುಮನಹಳ್ಳಿಗೆ ನದಿಯ ಇನ್ನೊಂದು ಕವಲಿನಲ್ಲಿ ಪ್ರಾಯಶಃ ಕಾಲುದಾರಿಯ ಮೂಲಕ ದಾಟುತ್ತಿದ್ದರೆಂದು ತೋರುತ್ತದೆ. ಮೂರನೆಯ ದಾರಿ ವಿರೂಪಾಕ್ಷ ದೇವಾಲಯದ ಹಿಂಬದಿಯ ಸ್ನಾನ ಘಟ್ಟದಿಂದ ವಿರುಪಾಪೂರ ನಡುಗಡ್ಡೆಗೆ ಇದ್ದು, ಇಲ್ಲಿಯೂ ನದಿಯ ಮೂಲಕವೇ (ಹರಿಗೋಲ ಪುಟ್ಟಿ ಅಥವಾ ತೆಪ್ಪ) ದಾಟುತ್ತಿದ್ದರು. ವಿರೂಪಾಪುರ ಗಡ್ಡೆಯಿಂದ ನದಿಯ ಇನ್ನೊಂದು ಹರಿವನ್ನು ದಾಟಲು ಎತ್ತರವಾದ ಸೇತುವೆಯನ್ನು ಕಟ್ಟಲಾಗಿತ್ತು. ಹನುಮಾನ್ ಸೇತುವೆ ಎಂದು ಕರೆಯುವ ಇದು ಇಂದು ಶಿಥಿಲವಾಗಿದೆ. ಇನ್ನು ಆನೆಗುಂದಿಯಿಂದ ಉತ್ತರಕ್ಕೆ ಹೊನ್ನಗಸೆ ಮತ್ತು ಕಲ್ಲಗಸೆಗಳು ಇದ್ದವು. ಆನೆಗುಂದಿಗೆ ಬಾಹ್ಯ ಕೋಟೆಗಳಲ್ಲಿ ಗೋರಿ ಬಾಗಿಲು ಮತ್ತು ಕಡೇಬಾಗಿಲುಗಳಿವೆ.

ಬಸವಪಟ್ಟಣ ಕಣಿವೆ ಬಾಗಿಲು

ಗಂಗಾವತಿ ತಾಲ್ಲೂಕಿನ ಸಂಗಾಪುರ ಮತ್ತು ಮಲ್ಲಾಪುರ ಗ್ರಾಮಗಳ ಮಧ್ಯದ ಬೆಟ್ಟದ ಸಾಲಿನಲ್ಲಿ ಒಂದು ಶಿಥಿಲವಾದ ದ್ವಾರಮಂಟಪವಿದೆ. ಸಂಗಾಪುರ ಬದಿಯ ಕರಡಿವಟ್ಟು ಬೆಟ್ಟ ಹಾಗೂ ಮಲ್ಲಾಪುರ ಬದಿಯ ಮದ್ದಿನ ಮನೆಯ ಬೆಟ್ಟಗಳು ಸಂಧಿಸುವ ಕಣಿವೆಯಲ್ಲಿ ಈ ದ್ವಾರ ಮಂಟಪವನ್ನು ನಿರ್ಮಿಸಲಾಗಿದೆ. ಮಂಟಪದಿಂದ ಉತ್ತರಕ್ಕೆ ಸು ೨ ಕಿ. ಮೀ. ದೂರದಲ್ಲಿ ಬೆಟ್ಟದ ಮೇಲೆ ವಾಸಭದ್ರೇಶ್ವರ ದೇವಾಲಯವಿದೆ. ಈ ದೇವಾಲಯ ಪ್ರಾಚೀನ ಪಂಪಾಕ್ಷೇತ್ರದ ಉತ್ತರ ದಿಕ್ಕಿನ ಗಡಿಯಾಗಿತ್ತೆಂದು ಪುರಾಣಗಳಲ್ಲಿ ಉಲ್ಲೇಖವಿದೆ. ಈ ಬೆಟ್ಟದಲ್ಲಿಯ ಪಾಪಯ್ಯ ಸುರಂಗದ ಮೂಲಕ ತುಂಗಭದ್ರಾ ಎಡದಂಡೆ ನಾಲೆ ಹಾದು ಬರುತ್ತದೆ. ದ್ವಾರಮಂಟಪದ ಮುಂಭಾಗದಿಂದ ಅನತಿ ದೂರ ದಲ್ಲಿ ಪ್ರಾಚೀನವಾದ ದೊಡ್ಡ ಕಣಿವೆ ಆಂಜನೇಯ ಮತ್ತು ಹಿಂಭಾಗದಲ್ಲಿ ಚಿಕ್ಕ ಚಿಕ್ಕ ಆಂಜನೇಯ ದೇವಾಲಯಗಳಿವೆ.

ಉತ್ತರ-ದಕ್ಷಿಣಾಭಿಮುಖವಾಗಿರುವ ಈ ದ್ವಾರಮಂಟಪದ ಎರಡು ಬದಿಯ ಅಧಿಷ್ಠಾನ ಭಾಗಗಳು ಮಾತ್ರ ಉಳಿದಿದ್ದು, ಮೇಲಿನ ಮಂಟಪ ಭಾಗ ನಾಶವಾಗಿದೆ. ಇದರ ಕಂಬಗಳು ಸುತ್ತಲೂ ನೆಲದಲ್ಲಿ ಹರಡಿವೆ. ದ್ವಾರಮಂಟಪದ ಎರಡೂ ಬದಿಗೆ ಬೆಟ್ಟದ ಮೇಲೆ ಕೋಟೆಯ ಗೋಡೆ ಉದ್ದಕ್ಕೂ ಇದೆ. ಮಂಟಪದ ಮುಂದಿನ ರಸ್ತೆಗೆ ಕಲ್ಲುಗಳನ್ನು ಹೊದಿಸಲಾಗಿದೆ. ಈ ದ್ವಾರಮಂಟಪದ ಉತ್ತರ ದಿಕ್ಕಿನ ಮುಂಭಾಗದಲ್ಲಿ ಸ್ವಲ್ಪ, ಸ್ವಲ್ಪ ಅಂತರದಲ್ಲಿ ಚಿಕ್ಕ ಕಲ್ಲುಗಳ ನಾಲ್ಕು ಗೋಡೆಗಳನ್ನು ನಿರ್ಮಿಸಲಾಗಿದ್ದು, ಇದೀಗ ಬಹುಮಟ್ಟಿಗೆ ನಾಶವಾಗಿವೆ. ಉತ್ತರದ ಬದಿಯಿಂದ ನೇರವಾಗಿ ದ್ವಾರ ಗೋಚರ ವಾಗದಂತೆ ಗೌಪ್ಯತೆಯ ದೃಷ್ಟಿಯಿಂದ ಈ ಅಡ್ಡ ಗೋಡೆಗಳನ್ನು ನಿರ್ಮಿ ಸಿರಬೇಕೆಂದು ತೋರುತ್ತದೆ. ಮೂರನೆಯ ಹಾಗೂ ನಾಲ್ಕನೆಯ ಗೋಡೆಗಳ ಅಂತರದಲ್ಲಿ ಬೆಟ್ಟದ ಬದಿಗೆ 'ಹಾಲುಭಾವಿ' ಎಂದು ಕರೆಯುವ ಬಾವಿಯೊಂದಿದೆ.

ದ್ವಾರಮಂಟಪದಿಂದ ದಕ್ಷಿಣಕ್ಕೆ ಇರುವ ಪ್ರಾಚೀನ ದಾರಿಯು ಆನೆಗುಂದಿಯ ಕಡೇ ಬಾಗಿಲನ್ನು ಸೇರುತ್ತಿತ್ತೆಂದು ಸ್ಥಳೀಯ ಹಿರಿಯರು ಹೇಳುತ್ತಾರೆ. ಆದರೆ ಆ ರಸ್ತೆಯಿದ್ದಲ್ಲಿ ಇದೀಗ ಗದ್ದೆಗಳಿವೆ. ದ್ವಾರಮಂಟಪದ ಉತ್ತರ ಬದಿಯಲ್ಲಿ ಜನವಸತಿ ಇದ್ದ ಕುರುಹು ಗಳಿವೆ. ಇಲ್ಲಿಯ ದೊಡ್ಡ ಕಣಿವೆ ಆಂಜನೇಯ ದೇವಾಲಯದ ಹತ್ತಿರ ಒಂದು ತ್ರುಟಿತ ಶಾಸನವಿದ್ದು, ಒಂದೆರೆಡು ಅಕ್ಷರಗಳು ಮಾತ್ರ ಗೋಚರಿಸುತ್ತದೆ. ಇಂದು ಗಂಗಾವತಿ ಕೊಪ್ಪಳ ರಸ್ತೆಗೆ ಹೊಂದಿಕೊಂಡಂತೆ ಸ್ಥಳಾಂತರವಾಗಿರುವ 'ಬಸಾಪಟ್ಟಣ' ಗ್ರಾಮವು ಮೂಲದಲ್ಲಿ ಈ ದ್ವಾರಮಂಟಪದ ಮುಂಭಾಗದಲ್ಲಿತ್ತೆಂದು, ತಾಳಿಕೋಟೆ ಯುದ್ಧದ ಸಂದರ್ಭದಲ್ಲಿ ಗ್ರಾಮಸಹಿತ ದ್ವಾರಮಂಟಪ ನಾಶವಾಗಲು ಗ್ರಾಮಸ್ಥರು ಸ್ಥಳಾಂತರ ಗೊಂಡರು ಎಂದು ಗ್ರಾಮಸ್ಥರು ಹೇಳುತ್ತಾರೆ. ಈ ಮಂಟಪದ ಸುತ್ತಲಿನ ಪ್ರದೇಶವನ್ನು

ಇಂದಿಗೂ *ಬಂಗಾರದ ತೇರು* ಬೀದಿ ಎಂದೇ ಕರೆಯುತ್ತಾರೆ. ಹಿಂದೆ ಬಂಗಾರದ ತೇರನ್ನು ಇಲ್ಲಿ ಎಳೆಯುತ್ತಿದ್ದರೆಂದು, ಆ ತೇರನ್ನು ಇಲ್ಲಿಯ ಬೆಟ್ಟಗಳಲ್ಲಿ ಅಡಗಿಸಿಟ್ಟಿದ್ದಾರೆಂದು ಜನರ ನಂಬಿಕೆ.

ಕಮಲಾಪುರ ಕೈಫಿಯತ್ತಿನಲ್ಲಿ ವಿಜಯನಗರದ ದ್ವಾರಗಳ ಬಗ್ಗೆ ಹೇಳುತ್ತಾ, ಉತ್ತರ ದಿಕ್ಕಿಗೆ ತುಂಗಭದ್ರಾತೀರದ ಆಚೆಗೆ ಆನೆಗೂಂದಿ ೨ ಹರಿದಾರಿ ಮೇಲೆ ಬಸವಪಟ್ಟಣದ ದರವಾಜಿಯಲ್ಲಿಗೆ ೨ ಹರದಾರ ಮೇಲೆ ಇದ್ದಿತು[೪] ಎಂದು ಹೇಳಲಾಗಿದೆ. ಈ ವಿವರದ ನ್ವಯ ಪ್ರಸ್ತುತ ಶೋಧವಾಗಿರುವ ಸಂಗಾಪುರ ಕಣಿವೆ ಆಂಜನೇಯ ದೇವಾಲಯದ ಹತ್ತಿರದ ದ್ವಾರಮಂಟಪವೇ ಬಸವಪಟ್ಟಣ ದ್ವಾರೆಂದು ಸ್ಪಷ್ಟವಾಗಿ ಗುರುತಿಸಬಹುದು.

ಬಸವಪಟ್ಟಣ ದ್ವಾರದ ಮಹತ್ವ

ವಿಜಯನಗರದ ಎಲ್ಲಾ ದಿಕ್ಕಿನ ದ್ವಾರಗಳಲ್ಲಿ ಬಸವಪಟ್ಟಣ ದ್ವಾರ ಅತ್ಯಂತ ಮಹತ್ವವಾದುದು. ಏಕೆಂದರೆ ರಾಯಚೂರು ದೋ ಆಬ್‌ನಿಂದ ಆನೆಗುಂದಿ ಮತ್ತು ವಿಜಯನಗರವನ್ನು ಪ್ರವೇಶಿಸಲು ಇದೇ ಏಕೈಕ ಮಾರ್ಗವಾಗಿದೆ ಎನ್ನುವುದು ಈ ಪರಿಸರದ ಭೌಗೋಳಿಕ ಸನ್ನಿವೇಶವನ್ನು ಗಮನಿಸಿದಾಗ ಸ್ಪಷ್ಟವಾಗುತ್ತದೆ. ಪ್ರಸ್ತುತ ಬಳಕೆ ಯಲ್ಲಿರುವ ಗಂಗಾವತಿ -ಆನೆಗುಂದಿ ರಸ್ತೆಯು ಅತೀ ಪ್ರಾಚೀನ ರಸ್ತೆಯಾಗಿರದೆ ನಿಜಾಮ ಕಾಲದ ರಚನೆಯಾಗಿದೆ ಎನ್ನುವುದು ರಸ್ತೆಯ ಸೇತುವೆಯ ಮೇಲಿನ ಬರಹಗಳು ತಿಳಿಸು ತ್ತವೆ. ಅಲ್ಲದೇ ಈ ರಸ್ತೆ ನಿರ್ಮಾಣಕ್ಕೆ ಸಂಗಾಪುರದ ಹತ್ತಿರ ಬೆಟ್ಟವನ್ನು ಕತ್ತರಿಸಿರುವುದು ಮತ್ತು ವಿಜಯನಗರ ಕಾಲದ ಒಂದು ಕೆರೆಯನ್ನು ಮಧ್ಯದಲ್ಲಿ ಮುಚ್ಚಿರುವ ಸಂಗತಿಗಳು ರಸ್ತೆ ಇತ್ತೀಚಿನದೆನ್ನುವುದು ಪುಷ್ಟಿಕರಿಸುತ್ತವೆ. ಪ್ರಸ್ತುತ ಈ ರಸ್ತೆಯನ್ನು ಹೊರತು ಪಡಿಸಿದರೆ ಇಡೀ ೨೫ ಕಿ. ಮೀ. ಉದ್ದದ ಈ ಬೆಟ್ಟಸಾಲಿನಲ್ಲಿ ಉತ್ತರದಿಂದ ದಕ್ಷಿಣಕ್ಕೆ ಇಂದಿಗೂ ಯಾವುದೇ ರಸ್ತೆಯನ್ನು ನಿರ್ಮಿಸಲು ಸಾಧ್ಯವಾಗಿಲ್ಲ.

ಬಸವಪಟ್ಟಣ ದ್ವಾರವಿರುವ ಬೆಟ್ಟಗಳು ಕೊಪ್ಪಳ ಜಿಲ್ಲೆಯಲ್ಲಿ 'ಎಳುಗುಡ್ಡಗಳ ಸಾಲು' ಎಂದೇ ಪ್ರಸಿದ್ಧವಾಗಿವೆ. ಇವು ಪೂರ್ವದಲ್ಲಿ ಗಂಗಾವತಿ ಬಳಿಯ ದೇವಘಾಟದ ಹತ್ತಿರ ತುಂಗಭದ್ರಾ ನದಿಯ ತೀರದಿಂದ ಪ್ರಾರಂಭವಾಗಿ, ದಕ್ಷಿಣಕ್ಕೆ ಕೊಪ್ಪಳ ತಾಲೂಕಿನ ಬೂದಗುಂಪಾ ಕ್ರಾಸ್‌ನ ರಾಷ್ಟ್ರೀಯ ಹೆದ್ದಾರಿ ೧೩ರವರೆಗೆ ಸುಮಾರು ೨೫ ಕಿ. ಮೀ. ಉದ್ದಕ್ಕೆ ಎಡಬಿಡದೇ ವ್ಯಾಪಿಸಿವೆ. ಅದೇ ರೀತಿ ಇವು ನದಿಯ ಎರಡತೀರದಿಂದ ಉತ್ತರಕ್ಕೆ ಸುಮಾರು ೨೦ ಕಿ. ಮೀ. ವಿಸ್ತರಿಸಿವೆ. ಈ ಬೆಟ್ಟಸಾಲುಗಳಲ್ಲಿ ಬಸವಪಟ್ಟಣ ದ್ವಾರವಿರುವ ಕಣಿವೆಯೊಂದನ್ನು ಹೊರತುಪಡಿಸಿದರೆ ಬೇರೆ ಎಲ್ಲೂ ಬೆಟ್ಟವನ್ನು ಉತ್ತರದಿಂದ ದಕ್ಷಿಣಕ್ಕೆ ದಾಟಲು ಸಾಧ್ಯವಿಲ್ಲ. ಇರುವುದೊಂದೆ ಮಾರ್ಗ ಅದೇ ಬಸವ ಪಟ್ಟಣ ದರವಾಜ. ಹಾಗಾಗಿ ಇದು ವಿಜಯನಗರದ ಎಲ್ಲಾ ದ್ವಾರಗಳಿಗಿಂತ ಮಹತ್ವದ್ದು ಎಂದು ಹೇಳಬಹುದು.

ಈ ದ್ವಾರಮಂಟಪದಿಂದ ದಕ್ಷಿಣಕ್ಕೆ ಒಂದು ಸರಳ ರೇಖೆಯಲ್ಲಿ ಕನಕಗಿರಿ, ತಾವರಗೆರೆ, ಮುದಗಲ್, ಗುಲಬರ್ಗಾಗಳಿದ್ದರೆ, ಮುದಗಲ್‌ನಿಂದ ಈಶಾನ್ಯಕ್ಕೆ ರಾಯಚೂರ, ತಾವರಗೇರಿಯಿಂದ ವಾಯವ್ಯಕ್ಕೆ ತಾಳಿಕೋಟೆ ಸನಿಹವಾಗುತ್ತವೆ. ಅಲ್ಲದೆ ಇದೇ ರಸ್ತೆ ಬಿಜಾಪುರವನ್ನು ಸೇರುವ ಇಂದಿನ ರಾಷ್ಟ್ರೀಯ ಹೆದ್ದಾರಿ ೧೩ನ್ನು ಸೇರುತ್ತದೆ. ವಿಜಯನಗರ ಚರಿತ್ರೆಯೊಂದಿಗೆ ಈ ಎಲ್ಲ ಸ್ಥಳಗಳ ಸಂಬಂಧವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಒಟ್ಟಿನಲ್ಲಿ, ಬಸವಪಟ್ಟಣದ್ವಾರದ ಹಿನ್ನೆಲೆಯಲ್ಲಿ ಗಮನಿಸಿದಾಗ ವಿಜಯನಗರದರಸರು ಎಂಥ ನೈಸರ್ಗಿಕವಾದ ಸುಭದ್ರತೆಯ ನೆಲೆಗಳಲ್ಲಿ (ಆನೆಗುಂದಿ, ಹಂಪಿ) ರಾಜಧಾನಿ ನಿರ್ಮಿಸಿದ್ದರೆಂದು ವಿದಿತವಾಗುತ್ತದೆ. ಇಂಥ ಎಲ್ಲಾ ದ್ವಾರಗಳ ಹಿನ್ನೆಲೆಯಲ್ಲಿ ವಿಜಯನಗರದ ರಕ್ಷಣಾ ವ್ಯವಸ್ಥೆಯ ಬಗೆಗೆ ಪ್ರತ್ಯೇಕ ಅಧ್ಯಯನದ ಆವಶ್ಯಕತೆ ಬಿಂಬಿತವಾಗುತ್ತದೆ.


ಆಕರಗಳು

೧) ಚನ್ನಬಸಪ್ಪ ಎಸ್. ಪಾಟೀಲ್: ೧೯೯೯, *ಕರ್ನಾಟಕ ಕೋಟೆಗಳು*, ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೨) ಕಲಬುರ್ಗಿ, ಎಂ. ಎಂ. :೧೯೯೪; *ಕರ್ನಾಟಕದ ಕೈಫಿಯತ್ತುಗಳು*, ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೩) ಓಂ ಸಿದ್ಧಲಿಂಗೇಶ್ವರ ಸ್ವಾಮಿ: ೧೯೦೩ ; *ಪಂಪಾಮಹಾತ್ಮೆ* . ಶ್ರೀ ಗುರು ವೃಷಭಾಶ್ರಮ, ಹೊಳಗುಂದಿ


೪) ಕಲಬುರ್ಗಿ, ಎಂ. ಎಂ. *ಪೂರ್ವೋಕ್ತ*.



ಶಿಥಿಲವಾಗಿರುವ ದ್ವಾರ
ಮಂಟಪದ ಅಧಿಷ್ಠಾನ
ಭಾಗ



ಬಸವಪಟ್ಟಣ ದ್ವಾರ.
ಎರಡೂ ಬದಿಯ ಕೋಟೆ
ಗೋಡೆ



ವಿಜಯ ನಗರದ ಉತ್ತರ ದಿಕ್ಕಿನ ಬಸವಪಟ್ಟಣ
ದ್ವಾರ ಶೋಧನೆ

೨೧.ವಿಜಯನಗರದ ಅಮರನಾಯಕ ಇಮ್ಮಡಿ ಮೇದಿನಿರಾಯ

ಡಾ. ಅಮರೇಶ ಯತಗಲ್

ದಕ್ಷಿಣ ಭಾರತದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯವು ಅತ್ಯಂತ ಪ್ರಬಲ ಹಾಗೂ ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡಿದೆ. ದಕ್ಷಿಣ ಭಾರತದಾದ್ಯಂತ ಹರಡಿದ್ದ ಇವರ ರಾಜ್ಯವು ಆಡಳಿತದ ಅನುಕೂಲಕ್ಕಾಗಿ ಅನೇಕ ವಿಭಾಗಗಳನ್ನು ಹೊಂದಿತ್ತು. ಆ ಆಡಳಿತದ ವಿಭಾಗಗಳೆಂದರೆ ದೇಶ, ರಾಜ್ಯ, ವೇಂಠೆ, ವಳಿತ, ಚಾವಡಿ, ನಾಡು, ಮಾಗಣಿ, ಮಂಡಳ, ಸಂಸ್ಥಾನ, ಸೀಮೆ, ಸ್ಥಳ, ಗ್ರಾಮ-ಇವೆಲ್ಲವುಗಳು ಇವರ ಆಡಳಿತವನ್ನು ಸುಲಭಗೊಳಿಸುವ ಉದ್ದೇಶವನ್ನು ಹೊಂದಿದ್ದವು. ಆಯಾ ಭಾಗದಲ್ಲಿ ತಮ್ಮದೇ ಆದ ಆಡಳಿತದ ವೈಖರಿಯನ್ನು ಹೊಂದಿದ್ದವು.

ಸೀಮೆ ಎಂಬುದು ವಿಜಯನಗರ ಕಾಲದ ಆಡಳಿತದ ವಿಭಾಗದಲ್ಲಿ ಒಂದು. ಹಲವಾರು ಸ್ಥಳಗಳನ್ನು ಒಟ್ಟುಗೂಡಿಸಿ ಅದಕ್ಕೆ ಸೀಮೆ ಎಂದು ಕರೆಯಲಾಗುತ್ತಿತ್ತು. ಇದು ಸಂಸ್ಕೃತದ ಸೀಮ ಎಂಬ ಪದದಿಂದ ಬಂದಿದೆ. ವಿಜಯನಗರ ಕಾಲದಲ್ಲಿ ಆಡಳಿತದ ವಿಭಾಗ ಎಂಬ ಅರ್ಥದಲ್ಲಿ ಪ್ರಯೋಗವಾಗಿದೆ. ಕ್ರಿ. ಶ. ೧೪೦೦ ರ ನಂತರದ ಶಾಸನಗಳಲ್ಲಿ ವಿಜಯನಗರ ಕಾಲದಲ್ಲಿ ಹೆಚ್ಚಿನ ಮಟ್ಟಿಗೆ ಹೊಸದಾಗಿ ಸೇರ್ಪಡೆಯಾದ ಹೊಸ ನಾಡುಗಳೆಲ್ಲವೂ ಸೀಮೆ ಎಂಬ ಪ್ರತ್ಯಯ ಪಡೆದಿವೆ. ಈ ಅರ್ಥದಲ್ಲಿ ಗ್ರಾಮಗಳನ್ನು ಸೇರಿಸಿ, ಸೀಮೆ ಎಂಬ ಪದ ಪ್ರಯೋಗವಾಗಿದೆ. [೧]

ವಿಜಯನಗರದ ಕಾಲದಲ್ಲಿ ಇಂದಿನ ಮಸ್ಕಿಯು ಆಡಳಿತದ ಒಂದು ಭಾಗವಾಗಿತ್ತು. ಅದನ್ನು ಮೊಸಗೆ ಸೀಮೆ ಎಂದು ಕರೆಯುತ್ತಿದ್ದರು. ಇಲ್ಲಿಯ ಅಮರನಾಯಕ ಇಮ್ಮಡಿ ಮೇದಿನಿರಾಯ. ಇಮ್ಮಡಿ ಮೇದಿನರಾಯನನ್ನು ಉಲ್ಲೇಖಿಸುವ ನಾಲ್ಕು ಶಾಸನಗಳು ಮಸ್ಕಿ ಭಾಗದಲ್ಲಿ ಲಭ್ಯವಾಗಿವೆ. ಈ ಶಾಸನಗಳು ಇಮ್ಮಡಿ ಮೇದಿನಿರಾಯ ನೀಡಿದ ದತ್ತಿ ದಾನದ ವಿವರಣೆಯನ್ನು ನೀಡುತ್ತವೆ. ಅಲ್ಲದೆ ಈತನ ಕುರಿತಾದ ಅನೇಕ ಐತಿಹ್ಯಗಳು ಮತ್ತು ಮೌಖಿಕವಾದ ಮಾಹಿತಿಗಳಿವೆ. ಇವುಗಳು ಇಮ್ಮಡಿ ಮೇದಿನಿರಾಯನ ಜನಪರ ಕಾರ್ಯಗಳ ಮೇಲೆ ಬೆಳಕನ್ನು ಚೆಲ್ಲುತ್ತವೆ. ಇಮ್ಮಡಿ ಮೇದಿನಿರಾಯನ ವಂಶಸ್ಥರು ಇಂದಿಗೂ ಬೆಲ್ಲದಮರಡಿ ಎಂಬ ಗ್ರಾಮದಲ್ಲಿ ನೆಲೆಸಿದ್ದಾರೆ. ಬೆಲ್ಲದಮರಡಿ ಗ್ರಾಮವು ಮಸ್ಕಿಯಿಂದ ಪಶ್ಚಿಮಕ್ಕೆ ೭ ಕಿ. ಮೀ. ಅಂತರದಲ್ಲಿದೆ. ಇಲ್ಲಿಯ ಬೆಲ್ಲದಮರಡಿಯ ದೇಸಾಯಿಯರು ಎಂದು ಕರೆಯಲ್ಪಡುವ ಇವರು ಮೇದಿನಿರಾಯ

ತಮ್ಮ ಪೂರ್ವಜನೆಂದು ಹೇಳಿಕೊಳ್ಳುತ್ತಾರೆ. ಇವರು ಗುಜ್ಜಲ ವಂಶದವರು. ಇಮ್ಮಡಿ ಮೇದಿನಿರಾಯನೂ ಗುಜ್ಜಲ ವಂಶದವನು. ಅಲ್ಲದೆ ಇವರು ಕನಕಗಿರಿಯ ಗುಜ್ಜಲ ವಂಶದ ನಾಯಕ ಅರಸರು ತಮ್ಮ ಸಂಬಂಧಿಕರೆಂದು ಹೇಳಿಕೊಳ್ಳುತ್ತಾರೆ. ಹೀಗಾಗಿ ಇವರ ನಡುವಿನ ಸಂಬಂಧಗಳ ಕುರಿತಾದ ಸಂಶೋಧನೆಯ ಅಗತ್ಯತೆ ಇದೆ.

ಬೆಲ್ಲದ ಮರಡಿಯ ದೇಸಾಯಿಯವರ ಮನೆತನದಲ್ಲಿ ಇಂದಿಗೂ ಮೇದಿನಿರಾಯ, ಮೇದಪ್ಪ, ಮ್ಯಾದಪ್ಪ, ಮಾಯಪ್ಪ, ಮೇದವ್ವ, ದೇವಮ್ಮ, ದೇವಕೆಮ್ಮ, ದ್ಯಾವಮ್ಮ ಎಂಬ ಹೆಸರುಗಳನ್ನಿಡುವ ಸಂಪ್ರದಾಯವಿದೆ. ದೇವಮ್ಮ ಎಂಬ ಹೆಸರಿನವಳು ಇಮ್ಮಡಿ ಮೇದಿನಿರಾಯನ ಪತ್ನಿಯಾಗಿದ್ದಳು. ದೈವಾಂಶಸಂಭೂತಳಾದ ಈಕೆ ಮಸ್ಕಿಯ ಅಧಿದೈವ ಮಲ್ಲಿಕಾರ್ಜುನ ಕುರಿತಾಗಿ ಅಪಾರ ಭಕ್ತಿಯುಳ್ಳವಳಾಗಿದ್ದಳು. ಈಕೆಯ ಕುರಿತಾಗಿ ಅನೇಕ ಐತಿಹ್ಯಗಳಿವೆ. ಅವುಗಳಲ್ಲಿ ಒಂದು ಐತಿಹ್ಯ ಇಂತಿದೆ.

"ಮಹಾಶಿವಭಕ್ತೆಯಾದ ದೇವಮ್ಮ ಶ್ರೀಶೈಲದ ಮಲ್ಲಿಕಾರ್ಜುನನ ಪರಮಭಕ್ತೆ ಅನೇಕ ಬಾರಿ ಶ್ರೀಶೈಲಕ್ಕೆ ತೆರಳಿ ಮಲ್ಲಿಕಾರ್ಜುನ ದರ್ಶನವನ್ನು ಪಡೆಯುತ್ತಿದ್ದಳು. ಮಲ್ಲಿಕಾರ್ಜುನನು ಈಕೆಯ ಭಕ್ತಿಗೆ ಮೆಚ್ಚಿ "ನೀನಿದ್ದಲ್ಲಿಗೆ ನಾನು ಬರುತ್ತೇನೆ"ಎಂದು ಹೇಳಿದನು. 'ಆಗಲಿ' ಎಂದಳು ದೇವಮ್ಮ. ಆದರೆ ಮಲ್ಲಿಕಾರ್ಜುನನು 'ನಾನು ನಿನ್ನ ಹಿಂದೆಯೇ ಬರುತ್ತಿರುತ್ತೇನೆ. ನೀನು ಮಾತ್ರ ನನ್ನನ್ನು ತಿರುಗಿ ನೋಡಬಾರದು. ಒಂದು ವೇಳೆ ತಿರುಗಿ ನೋಡಿದರೆ, ನಾನು ಅದೇ ಸ್ಥಲದಲ್ಲಿಯೇ ನೆಲೆಸುತ್ತೇನೆ'ಎಂಬ ಷರತ್ತು ಹಾಕಿದನು. ಆಗಲಿ ಎಂದ ದೇವಮ್ಮ ಬೆಳಗಿನವರೆಗೆಲ್ಲ ಪ್ರಯಾಣ ಬೆಳೆಸಿ, ಬೆಳಿಗ್ಗೆ ಮಸ್ಕಿ ಸಮೀಪಿಸಿದಳು. ಮಲ್ಲಿಕಾರ್ಜುನ ತನ್ನ ಹಿಂದೆ ಬರುತ್ತಿದ್ದಾನೋ, ಇಲ್ಲವೋ ಎಂಬ ಸಂಶಯವುಂಟಾಗಿ ಮರಳಿ ನೋಡಿದಳು. ಹಿಂದೆ ಬರುತ್ತಿದ್ದ ಮಲ್ಲಿಕಾರ್ಜುನನು ಮರೆಯಾದನು. ಆಗ ದೇವಮ್ಮ 'ನಾನೆಂಥ ತಪ್ಪು ಮಾಡಿದೆ, ಓ ದೇವರೆ ನನ್ನನ್ನು ಕ್ಷಮಿಸು. ನಿನ್ನಲ್ಲಿ ನನ್ನನ್ನು ಐಕ್ಯಳಾಗಿಸಿಕೋ'ಎಂದು ಮೊರೆಯಿಟ್ಟಳು. ಕೊನೆಗೆ ಮಲ್ಲಿ ಕಾರ್ಜುನ ಈಕೆಯ ಮೊರೆಗೆ ಓಗೊಟ್ಟು 'ಅಮ್ಮಾ ನನ್ನ ವಾಗ್ದಾನವನ್ನು ಮುರಿದಿ ದ್ದೀಯಾ. ಆದರೂ ಚಿಂತಿಸುವ ಪ್ರಮೇಯವಿಲ್ಲ. ನಾನು ಮಸ್ಕಿಯ ಹಳ್ಳದ ದಂಡೆಯ ಮೇಲಿನ ಎರಡು ಗುಂಡುಗಳ ಮಧ್ಯೆ ಒಡಮೂಡುವೆ. ಅಲ್ಲಿಗೆ ಬಂದು ದರ್ಶನ ಪಡೆ'ಎಂದು ಹೇಳಿ ಅದರಂತೆ ಒಡಮೂಡಿದನು. ಬೆಲ್ಲದಮರಡಿಗೆ ತೆರಳಿ ದೇವಮ್ಮ ಈ ವಿಷವನ್ನು ಎಲ್ಲರಿಗೂ ತಿಳಿಸಿದಳು. ಆಗ ಬಾಜಾ ಬಜಂತ್ರಿ ಸಮೇತ ಮಸ್ಕಿಗೆ ಬಂದ ಭಕ್ತರು ಮಲ್ಲಿಕಾರ್ಜುನ ನೆಲೆಸಿದ ಪುಣ್ಯಸ್ಥಳವನ್ನು ಗುರುತಿಸಿ ಅದಕ್ಕೆ ಮುದ್ದುಮಲ್ಲಿಕಾರ್ಜುನ ಬೆಟ್ಟ ಎಂದು ಹೆಸರಿಟ್ಟರು."[೨]

ಇನ್ನೊಂದು ಐತಿಹ್ಯ ಇಂತಿದೆ : "ಮತ್ತೊಂದು ದಿನ ಮಸ್ಕಿಯ ಮಲ್ಲಿಕಾರ್ಜುನ ಬೆಲ್ಲದಮರಡಿಯ ದೇವಮ್ಮಳ ಸ್ವಪ್ನದಲ್ಲಿ ಬಂದು, 'ನಾನು ಮಸ್ಕಿ ಪಟ್ಟಣದ ದಕ್ಷಿಣಕ್ಕೆ

ಇರುವ ಎತ್ತರವಾದ ಬೆಟ್ಟದಲ್ಲಿ ವಾಸಮಾಡಬೇಕೆಂದಿರುವೆ. ಅದಕ್ಕಾಗಿ ನಿಮ್ಮ ಮನೆಯಲ್ಲಿರುವ ಒಂಬತ್ತು ತಿಂಗಳು ತುಂಬಿದ ಹಸುವನ್ನು ಬಿಡಿರಿ. ಅದು ಯಾವ ಸ್ಥಳಕ್ಕೆ ಬಂದು ಕರುವನ್ನು ಹಾಕುವುದೋ ಆ ಸ್ಥಳದಲ್ಲಿ ನಾನು ನೆಲೆಸುತ್ತೇನೆ'ಎಂದು ಹೇಳಿದನು. ಬೆಳಿಗ್ಗೆ ತನ್ನ ಕನಸಿನ ಸಂಗತಿಯನ್ನು ದೇವಮ್ಮ ಮನೆಯವರಿಗೆಲ್ಲ ತಿಳಿಸಿದಳು. ಅವರ ಮನೆಯಲ್ಲಿನ ನವಮಾಸ ತುಂಬಿದ ಹಸುವನ್ನು ಬಿಟ್ಟರು. ಆ ಹಸು ಮಸ್ಕಿಯ ದಕ್ಷಿಣದ ಬೆಟ್ಟಕ್ಕೆ ಬಂದು ಕರುವನ್ನು ಹಾಕಿತು. ಅಲ್ಲಿ ಶ್ರೀಮಲ್ಲಿಕಾರ್ಜುನನು ಒಡ ಮೂಡಿದನು. ಅನೇಕ ಗ್ರಾಮ, ನಗರಗಳ ಜನರು ಈ ಸ್ಥಳವನ್ನು ನೋಡಿ ದರ್ಶನವನ್ನು ಪಡೆದರು." [೩]

ಇನ್ನೂ ಇಂತಹ ಅನೇಕ ಐತಿಹ್ಯಗಳಿವೆ. ಅವುಗಳನ್ನು ದಾಖಲಿಸುವ, ವಿಶ್ಲೇಷಿಸುವ ಕಾರ್ಯವಾಗಬೇಕಾಗಿದೆ.

ವಿಜಯನಗರದ ಅರಸ ಅಚ್ಯುತದೇವರಾಯನ (ಕ್ರಿ. ಶ. ೧೫೨೯-೧೫೪೨) ಕಾಲದಲ್ಲಿ ಮೊಸಗೆ ಸೀಮೆಯನ್ನು ಇಮ್ಮಡಿ ಮೇದಿನಿರಾಯನಿಗೆ ಅಮರನಾಯಕತನಕ್ಕೆ ನೀಡಿದಾಗ, ಈತ ಅನೇಕ ದೇವರುಗಳಿಗೆ ದಾನ ನೀಡಿದ ಕುರಿತಾಗಿ ಮಸ್ಕಿಯ ಪ್ರವಾಸಿ ಮಂದಿರದ ಮುಂದಿರುವ ಮೂರು ಶಾಸನಗಳು ಮತ್ತು ಸುಲ್ತಾನಪುರದ ಒಂದು ಶಾಸನ ವಿವರಣೆಯನ್ನು ನೀಡುತ್ತವೆ.

ಶಕವರ್ಷ ೧೪೬೦ , ವಿಳಂಬಿ, ಕಾರ್ತಿಕ, ಶು-೧ ಅಂದರೆ ಕ್ರಿ. ಶ. ೨೩. ೧೦. ೧೫೨೦ರ ಶಾಸನವು ಇಂತಿದೆ :

೧. ಶ್ರೀ ಗುರುಭ್ಯೋನಮಃ ಶ್ರೀ ವಿರು
೨. ಪಾಕ್ಷಯ ನಮಃ ನಮಸ್ತುಂಗ
೩. ರಶುಂಬಿ ಚಂದ್ರ ಚಾಮರ ಚಾ
೪. ರವೇ ತ್ರೈಯಿಲೋಕೇ ನಗರಾಂಬ
೫. ಮುಲ ಸ್ತಂಭಾಯ ಸಂಭುವೇ ಜಯ
೬. ಭ್ಯುದಯ ಶಲಿವಾಹನ ಶಕವರು
೭. ಷ ೧೪೬೦ ನೆಯ ವಿಳಂಬ ಸಂವತ
೮. ಸರದ ಕಾರ್ತಿ ಶು ೧ ಲು ಶ್ರೀಮಂನ
೯. ಹರಾಜಾಧಿರಾಜ ರಾಜಪರಮೇಸರ ಶ್ರೀ ವೀರ
೧೦. ಪ್ರತಾಪ ಶ್ರೀ ವೀರ ಅಚುತರಾಯ ಮ
೧೧. ಹರಾಯರು ರಾಜಾಭ್ಯುದಯ

೧೨. ಗೆ ಯಿತಿರಲು ಶ್ರೀಮತು ಗು

೧೩. [ಜಲ] ಯಿಂಮಡಿ ಮೇದಿನಿರಾಯ

೧೪. .... ಸಾರಿದ ಅಮರನಾ

೧೫. [ಯಕ]ತನಕೆ ನಮಗೆ ಪಾಲ್ಸಿದ

೧೬. ಮೊಸಗೆ ಸೀಮೆವಳಗಣ ತಿದಗಿ

೧೭. ಬಾಯಿಯಂಬ ಗ್ರಾಮವನಾ

೧೮. ಆ ಝುರಣೇದ ದೇವರಿಗೆ ಅ

೧೯. ಮ್ರುತದ ಪಡಿಗೆ ಸಮರ್ಪಿ

೨೦. ಸಿ ಕೊಟೀ ಭುದಾನದ ಕ್ರಮ

೨೧. ವೆಂ [ತ] ದರೆ ಅಮರ ಸಾ [ದ]

೨೨. .... [ಆಗ][೪]

(ಶಾಸನದ ಉಳಿದ ಭಾಗ ದೊರೆತಿಲ್ಲ).

ಈ ಶಾಸನದಂತೆ ವಿಜಯನಗರವನ್ನು ಅಚ್ಯುತರಾಯನು ಆಳುತ್ತಿದ್ದಾಗ ಗುಜ್ಜಲ ಇಮ್ಮಡಿ ಮೇದಿನಿರಾಯ ತನ್ನ ಅಧೀನದಲ್ಲಿಯು ಮೊಸಗೆ ಸೀಮೆಗೆ ಸೇರಿದ್ದ ತಿದಿಗಿಬಾವಿಯೆಂಬ ಗ್ರಾಮವನ್ನು ಝುರಣೇದ ದೇವರಿಗೆ ಅಮೃತಪಡಿಗಾಗಿ ಭೂದಾನವನ್ನು ನೀಡಿದ ವಿವರಣೆ ಇದೆ. ಇಂದು ತಿದಿಗಿಬಾವಿಯೆಂಬ ಗ್ರಾಮವು ತೀರ್ಥಬಾವಿಯೆಂದು ಕರೆಯಲ್ಪಡುತ್ತಿದೆ. ಅಚ್ಯುತದೇವರಾಯನ ಕಾಲದ ಸುಲ್ತಾನಪುರದ ಶಾಲಿವಾಹನ ಶಕ ವರ್ಷ ೧೪೫೫ ಹೇಮಳಂಬಿ, ಆಷಾಢಶುದ್ಧ ೧೦, ಸೋಮವಾರ, ಅಂದರೆ ೧೮. ೦೬. ೧೫೩೭ ರ ಶಾಸನವು ಇಮ್ಮಡಿ ಮೇದಿನರಾಯನನ್ನು ಉಲ್ಲೇಖಿಸುತ್ತದೆ. ಅದು ಇಂತಿದೆ:

೧. ನಮಃಸ್ತುಂಗ ಸಿರಶ್ಚುಂಬಿ ಚಂದ್ರಚಾಮರ ಚಾ

೨. ರವೇ ತ್ರೈಳೋಕ್ಯ ನಗರಾಂಭ ಮೂಲಸ್ತಂಭಾಯ ಸಂಭವೇ ||

೩. ಸ್ವಸ್ತಿ ಶ್ರೀ ವಿಜಾದ್ಭುದಯ ಶಾಲಿವಾಹಕ ಶಕವರ್ಷ ೧೪೫೫ ನೆಯ ಹೇಮ

೪. ಳಂಬಿ ಸಂವಛರದ ಆಷಾಡ ನವಮಿ ಸೋಮವಾರದಲೂ
ಶ್ರೀಮನ್ಮಹಾರಾಜಾ

೫. ಧಿರಾಜ ಪರಮೇಶ್ವರ ಶ್ರೀ ವೀರಪ್ರತಾಪ ಯಳ ಅಚ್ಯುತದೇವ ಮ

೬. ಹಾರಾಯರ ಕಾರ್‍ಯ್ಯಕ್ಕೆ ಕರ್ತರಾದ ಶ್ರೀಮನ್ಮಹಾಗುಜ್ಜಲ ಯಿಂಮ

೭. ಡಿ ಮೇದಿನಿರಾಯ ವಡೆಯರೂ ಮೊಸಂಗಿಯ ಭಟ್ಟರ ನಾಗರಾ
೮. ಜನ ಮಗ ಮಲ್ಲಯ್ಯ ರಾಮರಾಜನ ಮಗ ಚ್ಕಿಮಲ್ಲಯ್ಯ ಆ ನಾ
೯. ಗರಾಜನ ಮಗ ಅನಂತಯಗಳಿಗೆ ಕೊಟ್ಟ ಯೀ ದಾನದ ಶಾಸ
೧೦. ನದ ಕ್ರಮವೆಂತೆಂದರೆ | ನಮಗೆ ಆಮರಕೆ ಸಲುವ ಮೊಸಗಿ ಸೀ
೧೧. ಮೆವಳಗಣ ಉದಂಡ ಮೇದಿನಿಪುರವನು ನಮ್ಮ ಅಮ
೧೨. ರನಾಥದೇವರಿಗೆ ಪುಂಣ್ಯವಾಗಬೇಕೂ ಯಂದು ನಿಮಗೆ
೧೩. [ದೇ]ವರ ಮಾನ್ಯ ಅಗ್ರಹಾರವನೂ ಪಾಲಿಸಿದೆ ಉ ಆ ಗ್ರಾಮ
೧೪. ಕ್ಕೆ ಚತುಸ್ಸೀಮೆ ವಿವರ ಮೂಡಲು ಮಾರ್ಲದಿಂನೆ |ಟೆಂಕ್ಕಲು
೧೫. ಮಾಳಲದಿಂನೆ |ಪಡವಲು ಸೀಮೆಹಳ |ಬಡಗಲು ಆವಿ
೧೬. ನಮಡು ಉ |ಚತುಸ್ಸೀಮೆ ಮಧ್ಯದಲಿಯ
೧೭. ಹ ಉದಂಡ ಮೇಧಿನಿಪುರಕೆ ಸಲುವ |ಅಂನು
೧೮. ಬಡ್ಡಿ ಬೇಗಾರ|ನಿಧಿನಿಕ್ಷೇಪ ಜಲಪಾಷಾಣ ಯಕ್ಷಿಣಿ
೧೯. ಆಗಾಮಿ | ಸಿದ್ಧ ಸಾದ್ಯಂಗಳೆಂಬ ಅಷ್ಟಭೋಗಕೆ ಜಲಕೆ
೨೦. ಸಾಮ್ಯವನೂ |ನಿಂಮ್ಮ ಪುತ್ರಪೌತ್ರ ಪಾರಂಪರೆಯಾಗಿ
೨೧. ಆ ಚಂದ್ರಾರ್ಕ ಸ್ಥಾಯಿಗ
೨೨. ಳಾಗಿ | ಸುಖದಲೂ |ಅನುಭ
೨೩. ವಿಸಿಕೊಂಡುಯಿಹುದು ಯ (೦)
೨೪. ದು ಕೊಟ್ಟ ಭೂದಾನ ಶಾಸನ
೨೫. ಉ |ಯಿದಕ್ಕೆ ಯಾರೊಬ್ಬ
೨೬. ರು ತಪ್ಪಿದವರ ಬಾ
೨೭. ಯಿಲಿ ಕತ್ತೆ ತುಂಣ್ಣಿ
೨೮. ಕಲ್ಲುಪ್ಪು || ಮಂಗ
೨೯. ಳ ಮಹಾ ಶ್ರೀ ಶ್ರೀ ಶ್ರೀ || [೫]

ಈ ಶಾಸನ ಹೇಳುವಂತೆ ಅಚ್ಯುತದೇವರಾಯನ ಸಾಮಂತನಾದ ಗುಜ್ಜಲ ಇಮ್ಮಡಿ ಮೇದಿನಿರಾಯ ಒಡೆಯನು ಮಸ್ಕಿಯ ಭಟ್ಟರ ನಾಗರಾಜನ ಮಗ ಮಲ್ಲಯ್ಯ. ರಾಮ ರಾಜನ ಮಗ ಚಿಕ್ಕಮಲ್ಲಯ್ಯ ಮತ್ತು ನಾಗರಾಜನ ಮಗ ಅನಂತಯ್ಯರುಗಳಿಗೆ, ಮಸ್ಕಿ

ಸೀಮೆಯಲ್ಲಿ ಬರುವ ಉದ್ದಂಡ ಮೇದಿನಿಪುರವನ್ನು ಅಮರನಾಥದೇವರಿಗೆ ಪುಣ್ಯವಾಗ ಬೇಕೆಂದು ಅಗ್ರಹಾರವನ್ನಾಗಿ ಪರಿವರ್ತಿಸಿ ದಾನ ನೀಡಲಾಗಿದೆ. ಉದ್ದಂಡ ಮೇದಿನಿಪುರದ ಪೂರ್ವಕ್ಕೆ ಮಾರ್ಲದಿನ್ನಿ, ಪಶ್ಚಿಮಕ್ಕೆ ಸೀಮೆಹಳ್ಳ, ಉತ್ತರಕ್ಕೆ ಆವಿನಮಡುವು, ದಕ್ಷಿಣಕ್ಕೆ ಮೂಡಲದಿನ್ನಿ ಗ್ರಾಮಗಳಿದ್ದವೆಂದು ಇದರಿಂದ ತಿಳಿದುಬರುತ್ತದೆ.

ಶಾಲಿವಾಹನ ಶಕ ವರುಷ ೧೪೫೯, ಹೇಮಳಂಬಿ ಸಂವತ್ಸರ, ಕಾರ್ತಿಕ ಶು ೧, ಅಂದರೆ ಕ್ರಿ. ಶ. ೦೫. ೧೦. ೧೫೩೭ ರ ಶಾಸನವು ಇಂತಿದೆ :

೧. [ಶ್ರೀ ಬಿರು]ಪಾಕ್ಷ ಲಿಂಗಯ್ಯ ನಮಃ ಶ್ರೀ
೨. [ಶುಭಾಗ] ಮಂ ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾ
೩. ಮ [ರ] ಚಾರವೇ ತ್ರಿಲೋಕೇ ನಗರರಂಭ ಮೂಲ
೪. ಸ್ತಂಭಯಾ ಸಂಭವೇ ಜ [ಯಾದ್ಬು]ದಯ [ಶಾ]
೫. ಲಿವಾಹನ ಶಕ ವರುಷ [೧] ೪೫೯ ನೆಯ
೬. ಹೇಮ [ಳಂ] ಬಿ ಸಂವತ್ಸರದ ಕಾರ್ತಿ
೭. ಕ ಶು ೧ ಲು ಶ್ರೀಮಂನಾಹ
೮. ರಾಜಾಧಿರಾಜ ರಾಜ ಪ
೯. ರಮೇಸ್ವರ ಶ್ರೀ ವೀರಪ್ರತಾಪ
೧೦. ಶ್ರೀ ವೀರ ಅಚುತರಾಯ
೧೧. ರು ರಾಜಾಭುದಯಂಗೆ
೧೨. ಯಿತಂತಿರತಿರಲಿ ಶ್ರೀಮ
೧೩. ತು ಗುಜಲ ಯಿಂಮಡಿ
೧೪. ಮೇದಿನಿರಾಯಗೆ ಸ್ವಾಮಿ
೧೫. ನಮಗೆ ಅವುರನಾ
೧೬. ಯಶಕತನಕೆ ಪಾಲ್ಸಿದ
೧೭. ಮೊಸಗೆಯ ಮುಲಸ್ತಾ
೧೮. ನದ ಶ್ರೀ ಮಲ್ಲಿಕಾರ್ಜುನದೇ
೧೯. ವರ ಅಮುತ್ರಪಡಿಗೆ ಸ
೨೦. ಮರ್ಪಿಸಿದ ಕೊಟ ಭು

೨೧. ದಾನದ ಕ್ರಮವೆಂತೆಂದ
೨೨. ರೆ ಗಂಜಿ ಪರಪತನೂ
೨೩. ಮಾಡುವ ಯೆರೆಯಹೆ
೨೪. ಲನ ಗ್ರಾಮಗೊಳಗದಲಿ
೨೫. ಯಿಕುಳ ೫೨ ಯಿ [ಕು]ಳದ
೨೬. ಭೂಮಿಯನು ಸಹಿರಂ
೨೭. [ಣು]ಕ ದಾನಧಾರ ಪೂ [ರ್ವ]
೨೮. ಕವಾಗಿ ಸಮರ್ಪಿಸಿದ [ಪದ]
೨೯. ಯೇಕೇವ ಭಗನೀ ಲೋಕೇ ಸ
೩೦. ರ್ವೇಸಾಮೇವ ಭೂಭುಜಂ
೩೧. ನ ಭೋಗ್ಯಾನಕರ ಗ್ರಾಂಹ್ಯಾ
೩೨. ದೇವದತ ವಸುಂಧರಾ|| ಃ

ವಿಜಯನಗರದ ಅರಸ ಅಚ್ಯುತರಾಯನು ಆಳುತ್ತಿರುವಾಗ ಗುಜ್ಜಲ ಇಮ್ಮಡಿ ಮೇದಿನಿರಾಯನು ತನ್ನ ಕೈಕೆಳಗಿನ ಮೊಸಗೆಯ ಮೂಲಸ್ಥಾನ ದೇವರಾದ ಮಲ್ಲಿಕಾರ್ಜುನನಿಗೆ ಯೆರೆಯಹೆಲನ ಗ್ರಾಮದಲ್ಲಿ ಇಕ್ಕುಳ ಭೂಮಿಯನ್ನು ದಾನವಾಗಿ ನೀಡಿದ ವಿವರವಿದೆ.

ಕ್ರಿ. ಶ. ೫ ೧೦. ೧೫೩೭ ರ ಶಾಸನವು ಈ ರೀತಿ ಇದೆ :

೧. ಶ್ರೀ ಬಿರುಪಾಕ್ಷ ಲಿಂಗಯಂ ನಮಃ
೨. ಮಳಂಬಿ ಸಂವತ್ಸರದ ಕಾರ್ತಿಕ
೩. ಶುಧ ೧ ಪಾದೆಯಲಿ ಶ್ರೀಮಂನುಮಹ
೪. ಗುಜಲ ಯಿಂಮಡಿ ಮೇದಿನಿರಾ
೫. ಯ ವಡೆಯರು ಹಂಪೆಯ ರು
೬. ದ್ರಪಾದ ಮಟಪತಿ ವಡೆಯರಿ
೭. ಗೆ ಮೊಸಗೆ ಸೀಮೆಯ ವಳಗೆ [ಕೊಟ್ಟ]
೮. ಭುವಿ ಅಂಬಂಟಿಗುಡದಿ ೪೨
೯. ಗೋನಹಳಲಿ ೮೧ [ಸಿ] ದು ಬಾವು

೧೦. ರದಲಿ ೮೧ ಪರವಾಪುರಲಿ ೮೧

೧೧. ಯಿಷ್ಟನು ಧಾರಪೂರ್ವಕವಾಗಿ

೧೨. ಕೊಟರೂ ವಿರೂಪಾಕ್ಷ ದೇವರಿ

೧೩. ಗೆ ಪುಂಣ್ಯವಾಗಲಿ ಯಂದಾ

೧೪. ಕೊಟ ಭು [ದಾ]ನದ ಸಸನ ॥

ವಿಜಯನಗರ ಸಾಮ್ರಾಜ್ಯವನ್ನು ಅಚ್ಯುತರಾಯನು ಆಳುತ್ತಿದ್ದಾಗ, ಗುಜ್ಜಲ ಇಮ್ಮಡಿ ಮೇದಿನಿರಾಯನು ತಮ್ಮ ಆಳ್ವಿಕೆಯ ಮೊಸಗೆಗೆ ಸೇರಿದ ಹಲವು ಗ್ರಾಮಗಳನ್ನು ಹಂಪೆಯಲ್ಲಿದ್ದ ರುದ್ರಪಾದ ಮಠಪತಿ ಒಡೆಯರಿಗೆ ದಾನವಾಗಿ ನೀಡಿದ ವಿವರವಿದೆ. ಮೊಸಗೆಯ ಸೀಮೆಗೆ ಸೇರಿದ ಅಂಬಟಿಗುಡ್ಡದಲ್ಲಿ - ೪೨ , (ಇಂದಿನ ಬೈಲಗುಡ್ಡ, ಲಿಂಗಸೂಗೂರು ತಾಲೂಕು), ಗೋನ್ಹಾಳದಲ್ಲಿ - ೮೧, (ಇಂದಿನ ಗೋನಾಳ, ಸಿಂಧನೂರು ತಾಲೂಕು)· ಸಿದುಬಾವುರುದಲ್ಲಿ(?) ಪೂರ್ವಾಪುರದಲ್ಲಿ -೮೧ (ಇಂದಿನ ಪುರಾಪುರ, ಸಿಂಧನೂರು ತಾಲೂಕು) ಇಷ್ಟನ್ನು ದಾನವಾಗಿ ಕೊಡುತ್ತಾನೆ ಅದು ಮತ್ತರದಲ್ಲಿ ಕೊಟ್ಟನೋ, ಇಕ್ಕುಳದಲ್ಲಿ ಕೊಟ್ಟನೋ ತಿಳಿದುಬರುವುದಿಲ್ಲ. ಶಾಸನದ ಕೊನೆಯಲ್ಲಿ ವಿರೂಪಾಕ್ಷ ದೇವರಿಗೆ ಪುಣ್ಯವಾಗಲಿ ಎಂದು ಕೊಟ್ಟ ಭೂದಾನದ ಶಾಸನವೆಂದು ಹೇಳಿರುವುದನ್ನು ಕಾಣಬಹುದಾಗಿದೆ.

ಸಾನಬಾಳದಲ್ಲಿ ದೊರೆತಿರುವ ಶಾಸನದಲ್ಲಿ ಗುಜ್ಜಲ ಮುಮ್ಮಡಿ ಮೇದಿನಿರಾಯನ ಉಲ್ಲೇಖವಿದೆ ಅದು ಇಂತಿದೆ :

೧. ಞವಿಳಂಬಿಸಂವಂ

೨. ಶ್ರೀಮನಾಂ ಮಹಾರಾ

೩. ಯ [ರಯತ] ಸಿರೋಮಣಿ ಆ

೪. ಕ್ಷಿತ ರಾಯ ಭುಜದ

೫. ಡಂ ಶ್ರೀಮನ್ಮಾಹ

೬. ಗುಜಲ ಮುಂಮಡಿ

೭. ಮೇದಿನಿರಾಯ ವಡ

೮. ಯರು ಡೋಂಭರಾ

೯. ಭಂಡಿ ಹನುಮಂತ ನಾ

೧೦. ಯ್ಕರಿಗೆ ಮೊಸಗೆ ಸೀ

೧೧. ೦ಮೆ ವಳ [ಗ] ಣ ಚಿಕ್ಕ ಶಾ

೧೨. ನಬಾಳ ನಿನಾಗೆ ವು

೧೩. ಬಳಿ ಕೊಠೆವು ಅನು

೧೪. ..... ದೊಂಬರ

೧೫. ಹನುಮಂತ ನಾಯ್ಕ

೧೬. ನಮಕಳು ಕತೆ......

೧೭. ಕೆಳಮಾಗೆ

೧೮. ಹನುಮಂತ ನಾಯ್ಕನ [೮]

ಗುಜ್ಜಲವಂಶದ ಮುಮ್ಮಡಿ ಮೇದಿನಿರಾಯನು ದೊಂಬರಬಂಡಿ ಹನುಮಂತ ನಾಯಕನಿಗೆ ಮಸ್ಕಿ ಸೀಮೆಯಲ್ಲಿನ ಚಿಕ್ಕಸಾನಬಾಳ ಗ್ರಾಮವನ್ನು ಉಂಬಳಿಯಾಗಿ ಬಿಟ್ಟಿರುವ ವಿವರಣೆ ಈ ಶಾಸನದಲ್ಲಿದೆ. ಮುಮ್ಮಡಿ ಮೇದಿನಿರಾಯನು ಬಹುಶಃ ಇಮ್ಮಡಿ ಮೇದಿನಿರಾಯನ ಮೊಮ್ಮಗನಾಗಿರಬೇಕು.

ಮೇದಿನಿರಾಯನು ಮಸ್ಕಿಯ ಮಲ್ಲಿಕಾರ್ಜುನ ದೇವರ ಜಾತ್ರೆಯನ್ನು ತಾನೇ ಮುಂದೆ ನಿಂತು ನೆರವೇರಿಸುತ್ತಿದ್ದನು. ಪ್ರತಿವರ್ಷ ಈ ದೇವರಿಗೆ ಮೇದಿನಿರಾಯನ ಮನೆಯಿಂದ ಎಣ್ಣೆ, ಬೆಣ್ಣೆ, ಬಣ್ಣ ಸುಣ್ಣ ಹೋಗುತ್ತಿತ್ತು. ಈತನು ಕಾಯಿ ಕರ್ಪೂರ ನೀಡಿದ ಬಳಿಕವೇ ತೇರು ಎಳೆಯುತ್ತಿತ್ತು. ಇದರ ಕುರಿತಾಗಿ ಭಜನೆ ಹಾಡಿನಲ್ಲಿ ಬರುವ ನುಡಿಯೊಂದು ಇಂತಿದೆ :

"ಮಲ್ಲಯ್ಯನ ತೇರಿನ ಕಡೆ ಹೊಂಟಾರೋ
ಮೇದಣ್ಣರಾಯರು ಪೂಜೆ ಸಲ್ಲಿಸ್ಯಾರೋ
ಕೈಯ್ಯ ಮುಗದಾರೋ, ತೇರು ಸಾಗಿಸ್ಯಾರೋ
ಜೈ ಜೈ ಅಂದಾರೊ, ತೇರಿಗೆ ಕೈಯ್ಯ ಮುಗಿದಾರೊ [೯]

ಮೇದಿನಿರಾಯನು ಮಾಡಿದ ಜನಸೇವಾ ಕಾರ್ಯಗಳ ಕುರಿತಾದ ಭಜನೆ ಹಾಡಿನ ನುಡಿ ಇಂತಿದೆ :

ಬಾವಿಯ ನೀರನ್ನು ಹರಿಸಿ
ಜಮಮನದ ಬಾಯಾಗ ನೀ ಉಳಿದಿದ್ದ
ಮೇದಿನಿರಾಯಪ್ಪ ಮತ್ತೊಮ್ಮೆ ನೀ
ಹುಟ್ಟಿಬಾರಪ್ಪ, ಬೇಗ ನೀನು ಬಾರಪ್ಪ [೧೦]

ಇನ್ನೂ ಸಂಪೂರ್ಣವಾಗಿ ಕ್ಷೇತ್ರ ಕಾರ್ಯವನ್ನು ಕೈಗೊಂಡರೆ, ಇಂತಹ ಅನೇಕ ಮಾಹಿತಿಗಳು ಲಭ್ಯವಾಗಬಹುದು. ಈ ಮನೆತನದವರು ಅನೇಕರಿಗೆ ತಮ್ಮ ಹೊಲಗಳನ್ನು ದಾನವಾಗಿ ನೀಡಿದ್ದರಿಂದ ಇಂದು ಆರ್ಥಿಕವಾಗಿ ದುರ್ಬಲರಾಗಿದ್ದಾರೆ. ಇಂದಿಗೂ

ಮಸ್ಕಿಯ ಸಮೀಪ ಮಾನ್ಯದ ಹೊಲ ಎಂಬ ಹೊಲವನ್ನು ಅನೇಕರು ಅನುಭೋಗಿಸುತ್ತಿದ್ದಾರೆ. ಇದನ್ನು ಬೆಲ್ಲದ ಮರಡಿಯ ದೇಸಾಯಿಯರು ಮಸ್ಕಿ ಶೆಟ್ಟಿಗಳಿಗೆ ನೀಡಿದ್ದಾರೆ ಎಂದು ಹೇಳುತ್ತಾರೆ.[೧೧]

ಅಡಿಟಿಪ್ಪಣಿಗಳು

೧. ಡಾ. ಕೆ. ಜಿ. ಭಟ್‌ಸೂರಿ :ಹಂಪಿಯ ಶಾಸನಗಳಲ್ಲಿ ವಿಜಯನಗರ ಕಾಲದ ಆಡಳಿತ ವಿಭಾಗಗಳು, *ವಿಜಯನಗರ ಅಧ್ಯಯನ* ಸಂಪುಟ -೯, ೨೦೦೩, ಪುಟ ೩೧೫

೨. ಶ್ರೀ ಜಂಪಣ್ಣ ದೊರೆ, ಬೆಲ್ಲದಮರಡಿ (ವಯಸ್ಸು ೮೦) ಇವರ ಹೇಳಿಕೆಯಿಂದ

೩. ಅವರೇ.

೪. ಡಾ. ದೇವರಕೊಂಡಾರೆಡ್ಡಿ ಮತ್ತು ಇತರರು (ಸಂ) : *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* -೭ (ರಾಯಚೂರು ಜಿಲ್ಲೆ), ಕ. ವಿ. ವಿ. ಹಂಪಿ -೨೦೦೩, ಪುಟ - ೧೭೧-೧೭೨.

೫. ಡಾ. ಅಮರೇಶ ಯತಗಲ್ ; *ಇತಿಹಾಸ ಇಂಚರ*, ೨೦೦೭, ಪುಟ ೬೮-೭೦.

೬. ಡಾ. ದೇವರಕೊಂಡಾರೆಡ್ಡಿ ಮತ್ತು ಇತರರು (ಸಂ) : ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -೭ (ರಾಯಚೂರು ಜಿಲ್ಲೆ), ಕ. ವಿ. ವಿ. ಹಂಪಿ ೨೦೦೩, ಪುಟ ೧೬೯-೧೭೧.

೭. *ಅದೇ.* ಪುಟ ೧೭೩-೧೭೮.

೮. *ಎ. ಪಿ. ಜಿ. ಎ. ಎಸ್.* ನಂ. ೯, ಸಂ.ಪಿ. ಬಿ. ದೇಸಾಯಿ, *ಶಾಸನ ಸಂಪುಟ* I & II ಮತ್ತು Channabassappa S. Patil and Vinoda C. Patil : *Inscriptions of Raichur District*, 1998, p- 66

೯. ಶ್ರೀ ಜಂಪಣ್ಣ ದೊರೆ, ಬೆಲ್ಲದಮರಡಿ (ವಯಸ್ಸು ೮೦) ಇವರ ಹೇಳಿಕೆಯಿಂದ.

೧೦. ಅವರೇ.

೧೧. ಹುಲಗಪ್ಪ ಬೆಲ್ಲದಮರಡಿ (ವಯಸ್ಸು ೭೫) ಇವರ ಹೇಳಿಕೆಯಿಂದ.

೨೨.ವಿಜಯನಗರ ಸಾಮ್ರಾಜ್ಯದ ಪೆನುಗೊಂಡೆ ರಾಜ್ಯ ಮತ್ತು ಅದರ ಮಹಾಮಂಡಲೇಶ್ವರರು

ಡಾ|| ಡಿ.ಎನ್. ಯೋಗೀಶ್ವರಪ್ಪ

ಪ್ರಾಚೀನ ಮತ್ತು ಮಧ್ಯಕಾಲೀನ ಭೌಗೋಳಿಕ ಪ್ರದೇಶಗಳು ಸಾಮಾನ್ಯವಾಗಿ ಸಾಮಾಜಿಕ ಮತ್ತು ರಾಜಕೀಯ ಚಿತ್ರಣದ ಬದಲಾವಣೆಗಳನ್ನು ಪ್ರತಿಬಿಂಬಿಸುತ್ತವೆ. ನಾವು ಜಾಗರೂಕತೆಯಿಂದ ಶಾಸನಗಳು ಒದಗಿಸುವ ಭೌಗೋಳಿಕ ಮಾಹಿತಿಯನ್ನು ಅಧ್ಯಯನ ಮಾಡಿ ನೋಡಿದಾಗ, ಸೂಕ್ಷ್ಮ ಸ್ತರದಲ್ಲಿನ ಭೌಗೋಳಿಕ ಪ್ರದೇಶಗಳು (ನಾಡು) ಸ್ಥೂಲಸ್ತರದ ಭೌಗೋಳಿಕ ಪ್ರದೇಶಗಳಿಗಿಂತ (ಮಂಡಲ, ರಾಜ್ಯ,ವಳನಾಡು) ಹಲವಾರು ವರ್ಷ ಗಳ ಕಾಲ ಸ್ಥಿರವಾಗಿರುವುದನ್ನು ಕಾಣಬಹುದು. ಸೂಕ್ಷ್ಮಸ್ತರದ (Micro Level) ಪ್ರದೇಶಗಳು ಪ್ರಾಥಮಿಕವಾಗಿ 'ಸಾಮಾಜಿಕ ಭೌಗೋಳಿಕ ಪ್ರದೇಶಗಳು' ಮಾಧ್ಯಮಿಕವಾಗಿ 'ಆಡಳಿತಾತ್ಮಕ ಪ್ರದೇಶಗಳಾಗಿವೆ.' ಆದರೆ ಸ್ಥೂಲಸ್ತರದ ಪ್ರದೇಶಗಳು ಪ್ರಾಥಮಿಕವಾಗಿ ಆಡಳಿತಾತ್ಮಕ ಪ್ರದೇಶಗಳಾದರೆ ಮಾಧ್ಯಮಿಕವಾಗಿ ಮಾತ್ರ ಅವು ಸಾಮಾಜಿಕ ಭೌಗೋಳಿಕ ಪ್ರದೇಶಗಳಾಗಿವೆ. ಈ ಹಿನ್ನೆಲೆಯಲ್ಲಿ ಈ ಪ್ರಬಂಧವನ್ನು ಸ್ಥೂಲಸ್ತರದಲ್ಲಿ (Micro Level)ಬರುವ ವಿಜಯ ನಗರ ಸಾಮ್ರಾಜ್ಯದ ಆಡಳಿತಾತ್ಮಕ ಅಂಗವಾದ, ತುಮಕೂರು ಪ್ರದೇಶದಲ್ಲಿ ಬರುವ ರಾಜ್ಯಗಳನ್ನು ಕುರಿತಂತೆ - ವಿಶೇಷವಾಗಿ ಪೆನುಗೊಂಡೆ ರಾಜ್ಯ - ಪ್ರಬಂಧ ರಚಿಸುವ ಪ್ರಯತ್ನ ಮಾಡಲಾಗಿದೆ.

ವಿಜಯನಗರ ಸಾಮ್ರಾಜ್ಯದ ಆಡಳಿತಾತ್ಮಕ ವಿಭಾಗಗಳನ್ನು ಕುರಿತಂತೆ ಸಾಲೆತೊರೆ, ಎನ್.ವೆಂಕಟರಮಣಯ್ಯ ಮತ್ತು ಟಿ.ವಿ.ಮಹಾಲಿಂಗಂರವರು ತಮಗೆ ದೊರಕಿರುವ ಆಕರಗಳ ಸಹಾಯದಿಂದ ಅಧ್ಯಯನ ಮಾಡಿದ್ದಾರೆ. ಆದರೆ ಈ ಅಧ್ಯಯನಗಳು ಕೇವಲ ವಿಜಯನಗರ ಸಾಮ್ರಾಜ್ಯದ ಆಡಳಿತಾತ್ಮಕ ವಿಭಾಗಗಳ ಬಗೆಗೆ ಸ್ಥೂಲ ಚಿತ್ರಣವನ್ನು ನೀಡುತ್ತವೆ. ಅವು ಪ್ರತಿಯೊಂದು ವಿಭಾಗದ ಸೂಕ್ಷ್ಮ ಚಿತ್ರಣವನ್ನು ನೀಡುವುದರಲ್ಲಿ ವಿಫಲವಾಗಿವೆ. ಇದಕ್ಕೆ ಅಪವಾದ ಅಪವಾದವೆಂಬಂತೆ ಡಾ. ಕೆ.ವಿ. ರಮೇಶ್‌ರವರು ಬಾರಕೂರು ರಾಜ್ಯ ಒಂದನ್ನೇ ಕುರಿತಂತೆ ಆಳವಾದ ಅಧ್ಯಯನ ನಡೆಸಿದ್ದಾರೆ.[1] ಇದೇ ವಿದ್ವಾಂಸರು ತಮ್ಮ ಮತ್ತೊಂದು ಲೇಖನದಲ್ಲಿ[2]ಇಡೀ ಕರ್ನಾಟಕ ರಾಜ್ಯದ ವ್ಯಾಪ್ತಿಯಲ್ಲಿ ಬರುವ ವಿಜಯನಗರ ಕಾಲದ ರಾಜ್ಯಗಳನ್ನು ಕುರಿತಂತೆ ಅಧ್ಯಯನ ನಡೆಸಿದ್ದಾರೆ. ಆದರೆ ಒಂದೇ ರಾಜ್ಯವನ್ನು ಕುರಿತಂತೆ ಅಧ್ಯಯನ ಮಾಡಿರುವ ಪ್ರಯತ್ನಗಳು ತೀರಾ ಕಡಿಮೆ.

ಆದುದರಿಂದ ನಾನು ಪೆನುಗೊಂಡೆ ರಾಜ್ಯ ಕುರಿತಂತೆ ಅಧ್ಯಯನ ಮಾಡುವ ಪ್ರಯತ್ನ ಮಾಡಿದ್ದೇನೆ.

ವಿಜಯನಗರ ಸಾಮ್ರಾಜ್ಯವನ್ನು ಆಡಳಿತಾತ್ಮಕ ದೃಷ್ಟಿಕೋನದಿಂದ ಅನೇಕ ಪ್ರಾಂತ್ಯಗಳನ್ನಾಗಿ ವಿಭಜಿಸಲಾಗಿತ್ತು. ಅವುಗಳನ್ನು ರಾಜ್ಯಗಳೆಂದು ಕರೆಯಲಾಗುತ್ತಿತ್ತು. ಹೀಗೆ ಸಾಮ್ರಾಜ್ಯದ ಉನ್ನತ ಮಟ್ಟದ ವಿಭಾಗವೇ ರಾಜ್ಯ. ಅತ್ಯಂತ ಕೆಳಹಂತವೇ ಗ್ರಾಮವಾಗಿತ್ತು. ಇವುಗಳ ಮಧ್ಯೆ ವಳಿತ, ವೇಂಠೆ, ಸ್ಥಳ, ಕಂಪಣ, ಸೀಮೆ, ಮಾಗಣಿ, ನಾಡು ಮೊದಲಾದ ವಿಭಾಗಗಳು ಬರುತ್ತವೆ. ಆದರೆ ಇವುಗಳ ಸರಿಯಾದ ಶ್ರೇಣೀಕರಣ ನೀಡುವುದು ಕಷ್ಟ. ಮೂರು ಅಥವಾ ನಾಲ್ಕು ಹಂತಕ್ಕಿಂತ ಹೆಚ್ಚಿನ ಶ್ರೇಣೀಕರಣ ನೀಡುವುದಕ್ಕೆ ದಾಖಲೆಗಳು ಸಾಲದು. ವಿಜಯನಗರ ಸಾಮ್ರಾಜ್ಯದಲ್ಲಿ ಆಂಧ್ರ, ತಮಿಳು ನಾಡು, ಕರ್ನಾಟಕ ಪ್ರದೇಶಗಳಲ್ಲಿ 42 ರಾಜ್ಯಗಳನ್ನು ಗುರ್ತಿಸಲಾಗಿದೆ.[3] ಚಕ್ರವರ್ತಿ ಕೃಷ್ಣದೇವರಾಯನ ಕಾಲದಲ್ಲಿ ಕರ್ನಾಟಕದಲ್ಲಿ 24 ರಾಜ್ಯಗಳನ್ನು ಡಾ.ಎ.ವಿ. ವೆಂಕಟರತ್ನಂರವರು ಗುರ್ತಿಸಿದ್ದಾರೆ.[4] ಇವುಗಳಲ್ಲಿ ಹೈವೆ ರಾಜ್ಯ, ನಗಿರೆ ರಾಜ್ಯ, ಹಾಡುವಳ್ಳಿ ರಾಜ್ಯ, ಬಾರಕೂರು ರಾಜ್ಯ, ಮಂಗಳೂರು ರಾಜ್ಯ, ಕಳಸಕಾರ್ಕಳ ರಾಜ್ಯ, ಆರಗ ರಾಜ್ಯ, ಚಂದ್ರಗುತ್ತಿ ರಾಜ್ಯ, ಹೊಯ್ಸಣ ರಾಜ್ಯ, ಪೆನೆಗೊಂಡೆ ರಾಜ್ಯ, ನಿಡುಗಲ್ ರಾಜ್ಯ, ಸದಳಿಯ ರಾಜ್ಯ, ಮುಳುಬಾಗಿಲು ರಾಜ್ಯ, ನಲ್ಲೂರು ರಾಜ್ಯ, ಚನ್ನಪಟ್ಟಣ ರಾಜ್ಯ, ಮಗರನಾಡು ರಾಜ್ಯ, ಕುಂದರ್ಪಿ ರಾಜ್ಯ, ಅರಳುಹಾಳ ರಾಜ್ಯ, ತೆರೆಕಣಾಂಬಿ ರಾಜ್ಯ, ಜೊತೆಗೆ ಹಸ್ತಿನಾವತಿ ವಳಿದ, ಯಕ್ಕಟಿ ಸೀಮೆ, ವಸುಧಾರೆಯ ಸೀಮೆ, ಹೊನ್ನವಳ್ಳಿ ಸೀಮೆ, ಹಾಸನ ಸೀಮೆ, ಚಂಗನಾಡು, ಕೋಟೆ ಸೀಮೆಗಳನ್ನು ಅವರು ರಾಜ್ಯದ ಗುಂಪಿಗೆ ಸೇರಿಸಿದ್ದಾರೆ. ಆದರೆ ಇವುಗಳು ರಾಜ್ಯಕ್ಕಿಂತ ಚಿಕ್ಕ ವಿಭಾಗಗಳು ಎಂಬುದನ್ನು ಮರೆಯ ಬಾರದು. ಈ ರಾಜ್ಯಗಳಲ್ಲಿ ಪ್ರಸ್ತುತ ತುಮಕೂರು ಜಿಲ್ಲೆಯ ಪ್ರದೇಶಗಳು ಅಂದಿನ ಪೆನುಗೊಂಡೆ ರಾಜ್ಯ, ಮಗರನಾಡು, ನಿಡುಗಲ್ ರಾಜ್ಯದ ವ್ಯಾಪ್ತಿಯೊಳಗೆ ಸೇರಿದ್ದವು.

ಮಗರ ನಾಡು ರಾಜ್ಯ	:	ಚಿಕ್ಕನಾಯ್ಕನಹಳ್ಳಿ, ತಿಪಟೂರು ಪ್ರದೇಶಗಳು
ನಿಡುಗಲ್ ರಾಜ್ಯ	:	ಪಾವಗಡ ಪ್ರದೇಶದ ಪಶ್ಚಿಮ ಭಾಗ
ಪೆನುಗೊಂಡೆ ರಾಜ್ಯ	:	ಸಿರಾ, ಪಾವಗಡ, ಮಧುಗಿರಿ ತಾಲ್ಲೂಕುಗಳು, ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕು ಪ್ರದೇಶ, ಪೆನುಗೊಂಡೆ ತಾಲ್ಲೂಕು

ಪೆನುಗೊಂಡೆ ರಾಜ್ಯವು ಮೊದಲು ಕ್ರಿ.ಶ. 1415 ರಲ್ಲಿ ಉಲ್ಲೇಖವಾಗಿದೆ.[5] ಅದರಲ್ಲಿ ಪೆನುಗೊಂಡೆಯನ್ನು ಮಹಾರಾಜ್ಯ[6] ಎಂದೂ ಕರೆಯಲಾಗಿದೆ. ಆಗ ವಿಜಯ ನಗರದಲ್ಲಿ ಪ್ರತಾಪ ದೇವರಾಯನ ಆಳ್ವಿಕೆ ಇತ್ತು. ಆದ್ದರಿಂದ ಅವನ ಕಾಲದಲ್ಲೇ ವಿಜಯನಗರ ಸಾಮ್ರಾಜ್ಯದ ಆಡಳಿತ ವಿಭಾಗವಾದ ರಾಜ್ಯದ ಸ್ಥಾನಮಾನವನ್ನು ಪೆನುಗೊಂಡೆ

ಪಡೆದುಕೊಂಡಿತ್ತೆಂದು ಶಾಸನಾಧಾರದಿಂದ ಹೇಳಬಹುದು. ಈ ಶಾಸನವೊಂದೇ ಅಲ್ಲದೆ ಅನೇಕ ಶಾಸನಗಳೂ ಕೂಡ ಪೆನುಗೊಂಡೆ ರಾಜ್ಯವಾಗಿತ್ತೆಂಬುದನ್ನು ಈ ಕೆಳಗಿನ ಪಟ್ಟಿಯಿಂದ ಗಮನಿಸಬಹುದು.

ಹೆಸರು	ಜಿಲ್ಲೆ	ತಾಲ್ಲೂಕು	ಕಾಲ	ಶಾಸನ
ಪೆನುಗೊಂಡ ಮಹಾರಾಜ್ಯ	ತುಮಕೂರು	ಮಧುಗಿರಿ	1415	ಎಕ 12 ಮಧುಗಿರಿ 83
ಪೆನುಗೊಂಡ ರಾಜ್ಯ	ಅನಂತಪುರ	ನಂದ್ಯಾಲ	1503	ಎಸ್ಐ.ಐ 16,41
ಪೆನುಗೊಂಡೆ ರಾಜ್ಯ	ತುಮಕೂರು	ಮಧುಗಿರಿ	1510	ಎಕ 12 ಮಧುಗಿರಿ 64
ಪೆನುಗೊಂಡೆ ರಾಜ್ಯ	ತುಮಕೂರು	ಪಾವಗಡ	1512	VI ಕೆ. ಎನ್. 2200
ಪೆನುಗೊಂಡ ರಾಜ್ಯ	ತುಮಕೂರು	ಪಾವಗಡ	1513	ಎಕ 12 ಪಾವಗಡ5
ಪೆನುಗೊಂಡ ರಾಜ್ಯ	ಅನಂತಪುರ	ಹಿಂದೂಪುರ	1534	ಎಸ್ಐಐ 9,567
ಪೆನುಗೊಂಡ ರಾಜ್ಯ	ಕೋಲಾರ	ಬಾಗೇಪಲ್ಲಿ	1537	ಎಕ 10 ಬಾಗೇಪಲ್ಲಿ 4
ಪೆನುಗೊಂಡ ರಾಜ್ಯ	ಅನಂತಪುರ	ಹಿಂದೂಪುರ	1537	ಎಸ್ಐಐ 9, 577
ಪೆನುಗೊಂಡ ರಾಜ್ಯ	ತುಮಕೂರು	ಗುಬ್ಬಿ	1537	ಎಕ 12 ಗುಬ್ಬಿ 59
ಪೆನುಗೊಂಡ ರಾಜ್ಯ	ತುಮಕೂರು	ಮಧುಗಿರಿ	1555	ಎಕ 12 ಮಧುಗಿರಿ 78
ಪೆನುಗೊಂಡ ರಾಜ್ಯ	ತುಮಕೂರು	ಪಾವಗಡ	1558	ಎಕ 12 ಪಾವಗಡ 21
ಪೆನಗೊಂಡ ರಾಜ್ಯ	ತುಮಕೂರು	ಮಧುಗಿರಿ	1569	ಎಕ 12 ಮಧುಗಿರಿ 10
ಪೆನುಗೊಂಡ ರಾಜ್ಯ	ತುಮಕೂರು	ತುಮಕೂರು	1591	ಎಕ 12 ತುಮಕೂರು 1

ಪೆನುಗೊಂಡ ರಾಜ್ಯದ ಕೊನೆಯ ಉಲ್ಲೇಖ ಕ್ರಿ,ಶ. 1571ರ ಶಾಸನದಲ್ಲಿ ಲಭ್ಯವಾಗಿದೆ. ನಂತರದ ಶಾಸನಗಳಲ್ಲಿ ಈ ವಿಚಾರದ ಬಗ್ಗೆ ಮಾಹಿತಿ ಇಲ್ಲ. ಕಾರಣ ಏನೆಂದರೆ ಕ್ರಿ.ಶ. 1565 ತಾಳಿಕೋಟೆ ಕದನದಲ್ಲಿ ವಿಜಯನಗರದ ದೊರೆಗಳು ಪರಾಭವ ಹೊಂದಿ ತಮ್ಮ ರಾಜಧಾನಿಯನ್ನೇ ಪೆನುಗೊಂಡೆಗೆ ಬದಲಾಯಿಸಿದ್ದುದು ಗೊತ್ತಿರುವ ಸಂಗತಿಯೇ ಆಗಿದೆ. ತಮ್ಮ ನೆಲೆವೀಡು ಅಲ್ಲಿಗೆ ಸ್ಥಳಾಂತರಗೊಂಡ ನಂತರ ಕೇಂದ್ರ ಪ್ರಭುತ್ವ ದುರ್ಬಲಗೊಂಡು ಸಾಮಂತಾಧಿಕಾರಿಗಳೆಲ್ಲಾ ಸ್ವತಂತ್ರಗೊಂಡರು. ವಿಭಾಗೀಯ ಸ್ಥಾನಮಾನ ಪಡೆದಿದ್ದ ಪೆನುಗೊಂಡೆ ಕ್ರಿ.ಶ.1565ನಂತರ ಸಾಮ್ರಾಜ್ಯದ ರಾಜಧಾನಿಯಾಗಿ ಮಾರ್ಪಟ್ಟಿತು. ಒಟ್ಟಿನಲ್ಲಿ ಶಾಸನಗಳ ಆಧಾರದ ಮೇಲೆ ಹೇಳುವುದಾದರೆ ಪೆನುಗೊಂಡೆಯು ಕ್ರಿ.ಶ.1415ರಿಂದ ಕ್ರಿ,ಶ.1571ರವರೆಗೆ 'ರಾಜ್ಯ'ಸ್ಥಾನಮಾನವನ್ನು ಪಡೆದುಕೊಂಡಿತ್ತೆಂದು ಹೇಳಬಹುದು.

ಇಂತಹ ರಾಜ್ಯದೊಳಗೆ ಅನೇಕ ನಾಡು, ಸೀಮೆ, ಸ್ಥಳಗಳು ಅಂತರ್ಗತವಾಗಿದ್ದ ವೆಂಬುದನ್ನು ಮುಂದಿನ ಪಟ್ಟಿಯಿಂದ ತೋರಿಸಬಹುದು.

ಹೆಸರು	ಜಿಲ್ಲೆ	ತಾಲ್ಲೂಕು	ಕಾಲ	ಶಾಸನ ಸಂಖ್ಯೆ
1. ಮಾಲುಕೆ ನಾಡು	ತುಮಕೂರು	ಮಧುಗಿರಿ	1554	ಎಕ 12 ಮಧುಗಿರಿ 78
2.ನಿಡುಗಲ್ ನಾಡು	ತುಮಕೂರು	ಪಾವಗಡ	1554	ಎಕ 12 ಪಾವಗಡ 39
3.ಸಿರಾ ನಾಡು	ತುಮಕೂರ	ಸಿರಾ	1040-1773	ಎಕ 12 ಶಿರಾ 62
4.ವಿರೂಪ ಸಮುದ್ರ ಸೀಮೆ	ತುಮಕೂರು	ಪಾವಗಡ	1426	ಎಕ 12 ತುಮಕೂರು 11
5.ಮಿಡಗೇಶಿಸೀಮೆ	ತುಮಕೂರು	ಮಧುಗಿರಿ	1500	ಎಕ 12 ಮಧುಗಿರಿ 106
6.ಸಿದ್ದಾಪುರ ಸೀಮೆ	ತುಮಕೂರು	ಮಧುಗಿರಿ	1510	ಎಕ 12 ಮಧುಗಿರಿ 64
7.ಬಿದುರೆ ಸೀಮೆ	ತುಮಕೂರು	ಗುಬ್ಬಿ	1537	ಎಕ 12 ಗುಬ್ಬಿ 59
8.ಕೋಳಾಲ ಸೀಮೆ	ತುಮಕೂರು	ಕೊರಟಗೆರೆ	1539	ಎಕ12ತುಮಕೂರು50
			1543	ಅದೇ 59
9.ನಿಡಗಲ್ಲು ಸೀಮೆ	ತುಮಕೂರು	ಪಾವಗಡ	1515	ಎಕ 12 ಪಾವಗಡ 62
			1557	ಎಕ 12 ಶಿರಾ 31
10.ದೊಡ್ಡೇರಿ ಸೀಮೆ	ತುಮಕೂರು	ಮಧುಗಿರಿ	1569	ಎಕ12ಮಧುಗಿರಿ10
11.ಬಿಜ್ಜವರ ಸ್ಥಳ	ತುಮಕೂರು	ಮಧುಗಿರಿ	1418	ಎಕ 12 ಮಧುಗಿರಿ 20
12.ಘಂಡಿಕೋಟ ಸ್ಥಳ	ತುಮಕೂರು	ಪಾವಗಡ	1437	ಎಕ 12 ಮಧುಗಿರಿ 64
13.ತಯಿಲಗೆರೆ ಸ್ಥಳ	ತುಮಕೂರು	ಪಾವಗಡ	1554	ಎಕ 12 ಪಾವಗಡ 39

ಹೀಗೆ ಈ ಪೆನುಗೊಂಡೆ ರಾಜ್ಯಕ್ಕೆ ಪ್ರಸ್ತುತ ತುಮಕೂರು ಜಿಲ್ಲೆಯಲ್ಲಿ 3 ನಾಡು 7 ಸೀಮೆ 3 ಸ್ಥಳಗಳು ಸೇರಿದ್ದವು. ಇವುಗಳ ಸಂಖ್ಯೆ ಹೆಚ್ಚಿರಲೂಬಹುದು ಆದರೆ ಇದುವರಗೆ ದೊರಕಿರುವ ಶಾಸನಗಳ ಆಧಾರದ ಮೇಲೆ ಇವುಗಳನ್ನು ಗುರ್ತಿಸಲಾಗಿದೆ.

ತುಮಕೂರು ಜಿಲ್ಲೆಯಲ್ಲಿ ಪಾಳೆಯಗಾರ ನಾಯಕ ಮನೆತನಗಳು ಸದೃಢವಾಗಿ ಸ್ಥಾಪನೆಯಾಗುವ ಮೊದಲು ವಿಶೇಷವಾಗಿ ಪೆನುಗೊಂಡೆ ರಾಜ್ಯಕ್ಕೆ ಸೇರಿದ ಭಾಗವಾಗಿದ್ದ ಮಧುಗಿರಿ, ಪಾವಗಡ, ಸಿರಾ ಪ್ರಾಂತ್ಯಗಳಲ್ಲಿ ಆನೇಕ ಊಳಿಗಮಾನ್ಯ ರಾಜವಂಶದವರು ಅಧಿಕಾರ ನಡೆಸುತ್ತಿದ್ದರು. ಪಾವಗಡ, ಮಧುಗಿರಿ, ಸಿರಾ ಪ್ರಾಂತ್ಯದ ಶಾಸನಗಳು ಇಂತಹ ವಂಶಗಳ ಬಗೆಗೆ ಮಾಹಿತಿಯನ್ನು ನೀಡುತ್ತವೆ. ಈ ರಾಜರು ತಮ್ಮದೇ ಆದ ಬಿರುದು ಮತ್ತು ಪ್ರಾಂತ್ಯಗಳನ್ನು ಹೊಂದಿರುತ್ತಿದ್ದರು. ಅವರ ಹೆಸರುಗಳನ್ನು ಈ ಮುಂದಿನ ಪಟ್ಟಿಯಿಂದ ತೋರಿಸಬಹುದು.

ಹೆಸರು	ಕಾಲ	ಶಾಸನ ಸಂಖ್ಯೆ
ಶ್ರೀ ಮನ್ಮಹಾಮಂಡಲೇಶ್ವರ ರಾಮರಾಜಯ್ಯ ಅರಸು	1509	ಎಕ 12 ಸಿರಾ 106
ಶ್ರೀ ಮನ್ಮಹಾಮಂಡಲೇಶ್ವರ ವೀರಹಿರಿಯ ಮಲ್ಲಯ್ಯ ಒಡೆಯರು	1512	ಎಕ 12 ಸಿರಾ 110
ಶ್ರೀ ಮನ್ಮಹಾಮಂಡಲೇಶ್ವರ ವೀರ ಚಿಕ್ಕ ಒಡೆಯರು	1495	ಎಕ12ಸಿರಾ103
ಶ್ರೀ ಮನ್ಮಹಾಮಂಡಲೇಶ್ವರ ರಾಮಪ್ಪರಾಜದೇವ ಚೋಳ ಮಹಾಅರಸು	1481	ಎಕ 12 ಮಧುಗಿರಿ 1
ಶ್ರೀ ಮನ್ಮಹಾಮಂಡಲೇಶ್ವರ ಕನ್ನರಸನ ರಾಜಯ ವಿಠಲೇಶ್ವರ	1544	ಎಕ 12 ಮಧುಗಿರಿ 88
ಶ್ರೀ ಮನ್ಮಹಾಮಂಡಲೇಶ್ವರ ಮರಿಯ ಮಹಾಅರಸು	1540	ಎಕ 12 ಮಧುಗಿರಿ 66
ಶ್ರೀ ಮನ್ಮಹಾಮಂಡಲೇಶ್ವರ ತಿರುಮಲ ರಾಜಯ್ಯ ಮಹಾ ಅರಸು	1554	ಎಕ 12 ಮಧುಗಿರಿ 78
ಶ್ರೀ ಮನ್ಮಹಾಮಂಡಲೇಶ್ವರ ರಾಜಯ್ಯ ವಿಠಲೇಶ್ವರ	1544	ಎಕ 12 ಮಧುಗಿರಿ 88
ಶ್ರೀ ಮನ್ಮಹಾಮಂಡಲೇಶ್ವರ ರಾಮರಾಜ ತಿರುಮಲ ರಾಜಯ್ಯ	1550	ಎಕ 12 ಪಾವಗಡ 40
ಶ್ರೀ ದೇವ ಮಹಾಅರಸು		
ಶ್ರೀಮನ್ಮಹಾಮಂಡಲೇಶ್ವರ ಮಲ್ಲಿನಾಯಕ	1530	ಎಕ 12 ಪಾವಗಡ 67
ಶ್ರೀಮನ್ಮಹಾಮಂಡಲೇಶ್ವರ ವಿಠಲಯ್ಯ ಮಹಾಅರಸು	1540	ಎಕ 12 ಪಾವಗಡ 24,34,39, ಸಿರಾ 41, ಮಧುಗಿರಿ, 78

ಮೇಲೆ ತಿಳಿಸಿರುವ ಎಲ್ಲಾ ಮಹಾಮಂಡಲೇಶ್ವರರು ಸಿರಾ, ಮಧುಗಿರಿ ಮತ್ತು ಪಾವಗಡ ಪ್ರಾಂತ್ಯಗಳಲ್ಲಿ ಆಳ್ವಿಕೆ ಮಾಡುತ್ತಿದ್ದವರೇ ಆಗಿದ್ದಾರೆ. ಈ ಭಾಗಗಳು ಪೆನು ಗೊಂಡೆ ರಾಜ್ಯದಲ್ಲಿ ಅಂತರ್ಗತವಾಗಿದ್ದವು ಎಂಬುದನ್ನು ಈಗಾಗಲೇ ನೋಡ ಲಾಗಿದೆ. ಈ ಮಹಾಮಂಡಲೇಶ್ವರರಲ್ಲಿ ಅತಿ ಹೆಚ್ಚು ದಿನಗಳ ಕಾಲ ಆಡಳಿತವನ್ನು ಮಾಡಿದವ ನೆಂದರೆ ಶ್ರೀಮನ್ಮಹಾಮಂಡಲೇಶ್ವರ ವಿಠಲಯ್ಯ ದೇವ ಮಹಾ ಅರಸು (ಕ್ರಿ.ಶ.1540-1554)ಆಗಿದ್ದಾನೆ. ಇವನು ಪೆನುಗೊಂಡೆಯಲ್ಲಿದ್ದುಕೊಂಡು ಆಳ್ವಿಕೆ ಮಾಡಿದನು. ಇವನು ಅಚ್ಯುತದೇವರಾಯ ಮತ್ತು ಸದಾಶಿವರಾಯರ ಸಮಕಾಲೀನ ನಾಗಿದ್ದು ಅವರ ನಿರ್ದೇಶನದಂತೆ ಆಡಳಿತ ನಡೆಸಿದನು.

ಮಹಾಮಂಡಲೇಶ್ವರ ವಿಠಲಯ್ಯದೇವ ಮಹಾಅರಸು

ಮಹಾಮಂಡಲೇಶ್ವರ ಪದದ ಶಬ್ದಶಃ ಅರ್ಥ ವಿಸ್ತಾರವಾದ ಭೂಮಿಗೆ ಅಥವಾ ವಿಭಾಗಕ್ಕೆ ಒಡೆಯ ಎಂದಾಗುತ್ತದೆ.ಇವರು ಕೆಲವೊಮ್ಮೆ ಒಂದು ಅಥವಾ ಅದಕ್ಕಿಂತ ಹೆಚ್ಚು ವಿಭಾಗವನ್ನು ಆಳುತ್ತಿದ್ದರು . ವಿಸ್ತಾರವಾದ ಸಾಮ್ರಾಜ್ಯದ ಆಡಳಿತವನ್ನು ಚಕ್ರ ವರ್ತಿಯೊಬ್ಬನೇ ನಡೆಸುವುದು ಅಸಾಧ್ಯ. ಈ ಕಾರಣಕ್ಕಾಗಿ ಮತ್ತು ಸಾಮ್ರಾಜ್ಯದ ಆಡಳಿತ ಸೌಲಭ್ಯಕ್ಕಾಗಿ ಅವನು ವಿಶಾಲವಾದ ರಾಷ್ಟ್ರದಲ್ಲಿ ವಿಭಾಗಿಸಲಾದ ಮಂಡಳಗಳಿಗೆ ವಂಶ ಪಾರಂಪರ್ಯದಿಂದ ಬಂದ ಮಂಡಲೇಶ್ವರರೇ ತನ್ನ ಕೈಕೆಳಗೆ ಮುಂದುವರಿಯಲು ಅನುಮತಿ ನೀಡುತ್ತಿದ್ದನು. ಚಕ್ರವರ್ತಿಗೆ ಅಧೀನರಾಗಿ ಇವರು ಸಾಕಷ್ಟು ಅಧಿಕಾರ ಸ್ವಾತಂತ್ರ್ಯವನ್ನು ಪಡೆದಿದ್ದರು.

ಇಂತಹ ಗುಂಪಿಗೆ ವಿಜಯನಗರ ಸಾಮ್ರಾಜ್ಯದ ಮಹಾಮಂಡಲೇಶ್ವರ ವಿಠಲಯ್ಯ ದೇವ ಮಹಾಅರಸು ಸೇರಿದ್ದಾನೆ. ಇವನ ಹೆಸರನ್ನು ಐದು ಶಾಸನಗಳು ಉಲ್ಲೇಖಿಸು ತ್ತವೆ.[7] 'ಮಹಾಮಂಡಲೇಶ್ವರ'ಎಂಬ ಪದ ಆ ವ್ಯಕ್ತಿಯ ಊಳಿಗಮಾನ್ಯ ಸ್ಥಾನಮಾನವನ್ನು ತಿಳಿಸುತ್ತದೆ. ಇದರ ಜೊತೆಗೆ ಅವನಿಗಿದ್ದ ಮತ್ತೊಂದು ಬಿರುದೆಂದರೆ 'ಮಹಾಅರಸು'. ಇದರಿಂದ 'ವಿಠಲಯ್ಯದೇವ' ಸಾಮಾನ್ಯವಾದ ನಾಯಕನಾಗಿರದೆ, ಅವನೊಬ್ಬ ಮೊದಲ ಶ್ರೇಣಿಯಲ್ಲಿ ಊಳಿಗಮಾನ್ಯ ನಾಯಕನಾಗಿದ್ದನು ಎಂದು ಹೇಳಬಹುದು. ಈ ವ್ಯಕ್ತಿಯ ಅಧೀನದಲ್ಲಿ ಆನೇಕ ಊಳಿಗಮಾನ್ಯ ನಾಯಕರು ಇದ್ದರು. ಉದಾಹರಣೆ:

'ಶ್ರೀ ಮನ್ಮಹಾಮಂಡಲೇಶ್ವರ ವಿಠಲಯ್ಯದೇವ ಮಹಾಅರಸುಗಳು ಮಹಾ ಮಂಡಲೇಶ್ವರ ಗುಜು ನಡುವಿನ ರಾಜ ಅಡಕ ಮಹಾಅರಸುಗಳಿಗೆ' ಇದರಿಂದ ವಿಠಲಯ್ಯ ದೇವ ಮಹಾಅರಸುಗಳಿಗೆ ಗುಜ್ಜನಡುವಿನ ರಾಜ ಅಡಕ ಮಹಾಅರಸು ಅಧೀನನಾಗಿದ್ದ ನೆನ್ನಬಹುದು. ಆದ್ದರಿಂದಲೇ ಇವನಿಗೆ 'ಮಹಾಮಂಡಲೇಶ್ವರ' ಮತ್ತು 'ಮಹಾಅರಸು' ಎಂಬ ಬಿರುದುಗಳು ಇದ್ದವೆನ್ನಬಹುದು.ರಾಜ ಅಡಕನು ಕೂಡಾ 'ಮಹಾಅರಸು' ಮತ್ತು'ಮಹಾಮಂಡಲೇಶ್ವರ' ಎಂಬ ಎರಡು ಬಿರುದುಗಳನ್ನು ಹೊಂದಿದ್ದರೂ ಅವನ ಅಧೀನನಾಗಿದ್ದನು. ಇದರಿಂದ ವಿಠಲಯ್ಯ ದೇವ ಮಹಾ ಅರಸು ಹೆಚ್ಚು ಪ್ರಭಾವಶಾಲಿ ಯಾದ ಮಹಾಮಂಡಲೇಶ್ವರನಾಗಿದ್ದ ಎನ್ನಬಹುದು.

ಕ್ರಿ,ಶ. 1554ರ ಶಾಸನವೊಂದು ಮಹಾಮಂಡಲೇಶ್ವರ ರಾಮರಾಜ ವಿಠಲಯ್ಯದೇವ ಮಹಾಅರಸುಗಳು ಪತಿಕೊಂಡ ಕೃಷ್ಣಯ್ಯದೇವ ಮಹಾಅರಸುಗಳಿಗೆ ತುಮುಕುಂಟೆ ಗ್ರಾಮವನ್ನು ಅಮರ ಮಾಗಣಿಯನ್ನಾಗಿ ಕೊಟ್ಟಿದ್ದನ್ನು ದಾಖಲಿಸುತ್ತದೆ.[9] ಈ ಶಾಸನದಲ್ಲಿ ಪತಿಕೊಂಡ ಕೃಷ್ಣಯ್ಯದೇವ 'ಮಹಾಅರಸು' ಎಂಬ ಬಿರುದನ್ನು ಹೊಂದಿದ್ದರೂ ಮಹಾ ಮಂಡಲೇಶ್ವರ ಎಂಬ ಬಿರುದನ್ನು ಪಡೆದುಕೊಂಡಿಲ್ಲದಿರುವುದು, ವಿಠಲಯ್ಯದೇವ ಮಹಾ ಅರಸುವಿಗೆ ಅಧೀನನಾಗಿದ್ದುದನ್ನು ಸೂಚಿಸುತ್ತದೆ. ಹೀಗೆ ಈ ಶಾಸನದಲ್ಲಿ ವಿಜಯನಗರ

ಸಾಮ್ರಾಜ್ಯದಲ್ಲಿ ಊಳಿಗಮಾನ್ಯ ಚಿತ್ರಣದ ಶ್ರೇಣೀ ವ್ಯವಸ್ಥೆಯ ಸ್ವರೂಪವನ್ನು ಸೂಚಿಸುವಂತಿದೆ. ಈ ಶಾಸನವು ಮಹಾಮಂಡಲೇಶ್ವರ ವಿಠಲಯ್ಯದೇವ ಮಹಾಅರಸು ಪತಿಕೊಂಡ ಕೃಷ್ಣಯ್ಯ ದೇವ ಮಹಾಅರಸುಗಳಿಗೆ ನಿಡುಗಲ್ ನಾಡಿನೊಳಗಣ ತಯಿಲಿಗೆರೆ ಸ್ಥಳದ ತುಮುಕುಂಟೆ ಗ್ರಾಮವನ್ನು ಅಮರ ಮಾಗಣಿಯಾಗಿ ಕೊಟ್ಟಿದ್ದನು. ಆ ಗ್ರಾಮದ ಕೋಟೆ ಶಿಥಿಲವಾಗಿ ಹೋಗಿದ್ದರಿಂದ, ಅದನ್ನು ಜೀರ್ಣೋದ್ಧಾರ ಮಾಡಲು ತಿಮ್ಮನ ಬೋವಿಗೆ ಮಗ ಧರ್ಮಗೋಡನಿಗೆ ಅಲ್ಲಿನ ಕೋಟೆ, ಕಟ್ಟೆ, ಕಾಲುವೆಗಳನ್ನು ಅಗೆಸಲು ಭೂದಾನ ನೀಡಿದ್ದನ್ನು ತಿಳಿಸುತ್ತದೆ.[10] ಇದರಿಂದ ಈ ಪ್ರಾಂತ್ಯದಲ್ಲಿ ಉಪ-ಊಳಿಗಮಾನ್ಯ ಪದ್ಧತಿ ಇತ್ತು ಎಂದು ಹೇಳಬಹುದು.

ಮಹಾಮಂಡಲೇಶ್ವರ ವಿಠಲಯ್ಯ ದೇವ ಮಹಾಅರಸು ವಿಜಯನಗರ ಚಕ್ರವರ್ತಿಗಳೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದನು. ಇದನ್ನು ಕ್ರಿ,ಶ.1550ರ ಪಾವಗಡ ಶಾಸನವು ದಾಖಲಿಸಿದೆ. ಈ ಮಹಾ ಅರಸು ಕೋಣನಕುರಿಕೆ ಗ್ರಾಮಕ್ಕೆ ವಿಠಲಾಪುರ ಎಂದು ನಾಮಕರಣ ಮಾಡಿ ಅಲ್ಲಿನ ತಿರುವೆಂಗಳನಾಥ ದೇವರಿಗೆ ಆ ಗ್ರಾಮದ ಆದಾಯವನ್ನು ದಾನವಾಗಿ ನೀಡಿದ್ದನ್ನು ದಾಖಲಿಸಿದೆ.[11] ಈ ದಾನದ ಉದ್ದೇಶ ತನ್ನ ಅಧಿರಾಜ ಸದಾಶಿವರಾಯನಿಗೆ ಪುಣ್ಯಪ್ರಾಪ್ತಿಯಾಗಲಿ ಎಂಬುದಾಗಿದೆ. ಈ ದಾನ ತನ್ನ ಅಧಿರಾಜನೊಂದಿಗಿನ ಅಧೀನತ್ವದ ಮೈತ್ರಿಯನ್ನು ತೋರಿಸುವ ಒಂದು ಮಾರ್ಗವಾಗಿದೆ. ಈ ಮಹಾಮಂಡಲೇಶ್ವರ ಹಾಕಿಸಿದ ಎಲ್ಲಾ ಶಾಸನಗಳೂ ತನ್ನ ಅಧಿರಾಜನನ್ನು ಉಲ್ಲೇಖಿಸಿರುವುದರಿಂದ ಇವನಿಗೆ ಈ ಪ್ರಾಂತ್ಯದಲ್ಲಿ ಆಡಳಿತ ನಡೆಸಲು ಪೂರ್ಣ ಸ್ವಾತಂತ್ರ್ಯವಿರಲಿಲ್ಲ ಮತ್ತು ಆಡಳಿತವೆಲ್ಲವೂ ವಿಜಯನಗರದ ಚಕ್ರವರ್ತಿಗಳ ಹೆಸರಿನಲ್ಲಿಯೇ ನಡೆಯುತ್ತಿತ್ತೆನ್ನಬಹುದು. ಈ ಮಹಾಮಂಡಲೇಶ್ವರನ ಇನ್ನೊಂದು ವಿಶೇಷವೇನೆಂದರೆ ಇವನ ಮಗನ ಕೂಡ ಮಹಾಮಂಡಲೇಶ್ವರನಾಗಿ ಆಳ್ವಿಕೆ ಮಾಡುತ್ತಿದ್ದುದಾಗಿದೆ.

'ಶ್ರೀ ಮನ್ಮಹಾಮಂಡಲೇಶ್ವರ ರಾಮರಾಜಯ್ಯ ವಿಠಲದೇವ ಮಹರಾಜಲುಂಗಾನಿ ಕೊಮಾರುಂಡು ತಿರುಮಲರಾಜಯವಾರು ಪೆನುಗೊಂಡ ದುರ್ಗಮಲಂನು ಸುಖಾನ ರಾಜ್ಯೆಂಚ್ಯೆಯ್ಯಂಗಾನು'*ಇದರಿಂದ ಇವನ ಮಗ ತಿರುಮಲ ರಾಜಯ್ಯನು ಕೂಡಾ ಪೆನುಗೊಂಡೇ ರಾಜ್ಯದ ಮಹಾಮಂಡಲೇಶ್ವರನಾಗಿದ್ದನು. ಇವನ ತಂದೆ ರಾಮರಾಜಯ್ಯ ಅವನೂ ಕೂಡಾ ಮಹಾಮಂಡಲೇಶ್ವರನಾಗಿದ್ದನು. ಆದ್ದರಿಂದ ಇವನ ಕುಟುಂಬ ವರ್ಗದವರೆಲ್ಲಾ ವಿಜಯನಗರ ಸಾಮ್ರಾಜ್ಯದಲ್ಲಿ ಮಹಾಮಂಡಲೇಶ್ವರರೇ ಆಗಿದ್ದಾರೆ.

ರಾಮರಾಜ ವಿಠಲಯ್ಯದೇವ ಮಹಾಅರಸು ಕೇವಲ ಪಾವಗಡ, ಸಿರಾ, ಮಧುಗಿರಿ ಪ್ರದೇಶದ ಜೊತೆಗೆ ಚಳ್ಳಕೆರೆ ಪ್ರದೇಶದ ನಿರ್ವಹಣೆಯನ್ನು ಕೂಡ ಮಾಡುತ್ತಿದ್ದನು. ಚಳ್ಳಕೆರೆಯ ಕ್ರಿ.ಶ.1553ರ ಶಾಸನವೊಂದು ರಾಮರಾಜ ವಿಠಲಯ್ಯದೇವ ಮಹಾಅರಸುಗಳು ವಿಜಯನಗರದ ಚಕ್ರವರ್ತಿ ಸದಾಶಿವರಾಯರ ಆಳ್ವಿಕೆಯ ಸಮಯದಲ್ಲಿ

ದೊಡ್ಡೇರಿಯ ನಾಡಗೌಡ ಬಾವರ ಸೆಟ್ಟಿಗೆ ಭೂ ದತ್ತಿಯನ್ನುನೀಡಿದ್ದನ್ನು ದಾಖಲಿಸಿದೆ.[13]ಇದರಿಂದ ಈ ಮಹಾಮಂಡಲೇಶ್ವರ ಒಂದಕ್ಕಿಂತ ಹೆಚ್ಚು ಪ್ರದೇಶಗಳಲ್ಲಿ ಆಡಳಿತ ನಡೆಸುತ್ತಿದ್ದನೆಂದು ಹೇಳಬಹುದು.

ರಾಮರಾಜ ವಿಠಲಯ್ಯ ದೇವ ಮಹಾಅರಸುಗಳು ಕ್ರಿ.ಶ.1544ರಲ್ಲಿ ವಿಜಯನಗರದ ಚಕ್ರವರ್ತಿ ಸದಾಶಿವರಾಯರು ಹೊರಡಿಸಿದ ಆಜ್ಞೆಯನ್ನು ಹೇಗೆ ಜಾರಿಗೊಳಿಸಿದರು ಎಂಬುದನ್ನು ಈ ಶಾಸನವು ತಿಳಿಸುತ್ತದೆ.

'ಸ್ವಸ್ತಿಶ್ರೀ ಜಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು 1466 ನೇ ಕ್ರೋಧಿ ಸಂವತ್ಸರದ ಕಾರ್ತೀಕ ಶು 1ಸೋಮ್ಯವಾರದಲ್ಲೂ 1 ಸದಾಶಿವರಾಯರ ನಿರೂಪದಿಂ ಶ್ರೀ ಮನ್ಮಾಮಂಡಲೇಶ್ವರ ರಾಮರಾಜಯ್ಯ ವಿಠಲದೇವಯ್ಯ ಮಹಾಅರಸುಗಳು ನಾಯಿಂದರಿಗೆ ಕೊಟ್ಟ ಶಾಸನ. ಪೂರ್ವದಲ್ಲಿ ನಿಮಗೆ ತೆರಿಗೆ ಕಾಣಿಕೆ ಬೇಡಿಗೆರಾ ಪಂಚಾದಾಯ ನಾವು ನಿಮಗೆ ಸೀಮೆಯೊಳಗೆ ಹಂನೆರಡು ಆಯಗಾರರ ಸಂಗಡ ನಿಮಗೆ ಸಲುವಂಥಾ ಸ್ವಾಮ್ಯ ಕೆರೆಯ ಬಾಹ.. ಸ್ವಾಮ್ಯನ ಮುಂತಾದ ಸ್ವಾಮ್ಯವನು ಅನುಭವಿಸಿ ಕೊಂಡು ಸರ್ವಮಾನ್ಯ.'[14]

ಬರಗೂರು ಸೀಮೆಯ 12 ಆಯಗಾರರ ಸಂಗಡ ಅಲ್ಲಿನ ನಾಯಿಂದರಿಗೆ ಅವರಿಗೆ ಸಲ್ಲುವಂತಾ ಭೂಮಿಯನ್ನು ಸರ್ವಮಾನ್ಯ ಮಾಡಿದ್ದ ವಿಚಾರ ದಾಖಲಾಗಿದೆ. ಒಟ್ಟಿನಲ್ಲಿ ಸದಾಶಿವರಾಯರ,ನಿರೂಪಗಳನ್ನು ಚಾಚೂ ತಪ್ಪದೆ ಪಾಲಿಸುತ್ತಾ ಅವರ ಜೊತೆ ಮಧುರ ಬಾಂಧವ್ಯವನ್ನು ಏರ್ಪಡಿಸಿಕೊಂಡಿದ್ದನು ಎಂದು ಹೇಳಬಹುದು. ಇದರ ಜೊತೆಗೆ ವಿಠಲಯ್ಯ ದೇವ ಮಹಾಅರಸುಗಳು ಬರಗೂರು ಸೀಮೆಯ ನಾಯಿಂದರ ಮತ್ತು ಆಯಗಾರರ ವಿಶ್ವಾಸವನ್ನು ಅವರಿಗೆ ಅನುಕೂಲ ಮಾಡಿಕೊಡುವುದರ ಮೂಲಕ ಪಡೆದುಕೊಂಡು ಜನಪ್ರಿಯರಾದರು.

ರಾಮರಾಜಯ್ಯ ವಿಠಲಯ್ಯ ದೇವ ಮಹಾಅರಸರು ಈ ಭಾಗದ ಕೃಷಿ ಮೂಲಗಳನ್ನು ವಿಸ್ತರಿಸಲು ಪ್ರಯತ್ನಿಸಿದರು. ಕೆರೆಗಳನ್ನು ನಿರ್ಮಿಸುವುದಕ್ಕೆ ಉತ್ತೇಜನ ನೀಡಿದರು. ಅದೇ ಉದ್ದೇಶಕ್ಕೋಸ್ಕರ ತಮ್ಮ ಅಧಿರಾಜರ ಅನುಮತಿ ಪಡೆದು ಕಟ್ಟು ಕೊಡಿಗಿಯನ್ನು ನೀಡಿದರು. ಉದಾಹರಣೆಗೆ, ಕೋಣನಕುರಿಕೆ ಗ್ರಾಮದ ಮುತ್ತಗದ ಮರದ ಹಳ್ಳದ ಕಡೆಯ ಕೆರೆಯ ಹಿಂದಿನ ಒಂದು ಖಂಡುಗ ಗದ್ದೆಯನ್ನು ಗುಜ್ಜನಡುವಿನ ಬೊಂಮಸೆಟ್ಟಿ ಮಗ ತಂಮ್ಮಸೆಟ್ಟಿಗೆ ಕಟ್ಟುಕೊಡಗಿಯಾಗಿ ನೀಡಿದ್ದನ್ನು ಕ್ರಿ.ಶ.1550ರ ಶಾಸನವು ದಾಖಲಿಸಿದೆ.[15]ಇದರಿಂದ ಇವನಿಗೆ ಇಂತಹ ಸಾರ್ವಜನಿಕ ಕೆಲಸ ಕಾರ್ಯಗಳನ್ನು ಮಾಡಲು ಭೂ ದತ್ತಿಗಳನ್ನು ನೀಡಲು ಅಧಿಕಾರವಿತ್ತು. ಇದಕ್ಕೆ ತಮ್ಮ ಅಧಿಕಾರ ಬೆಂಬಲ ಸದಾ ಇರುತ್ತಿತತ್ತೆಂದು ಹೇಳಬಹುದು.

ವಿಠಲಯ್ಯ ದೇವ ಮಹಾಅರಸರು ವಿಜಯನಗರ ಚಕ್ರವರ್ತಿಗಳ ಅಧೀನದಲ್ಲಿದ್ದರೂ ಅವರ ಅನುಮತಿಯನ್ನು ಪಡೆದುಕೊಂಡು ಗ್ರಾಮಗಳನ್ನು ಉಂಬಳಿ ಹಾಕುವ ಮತ್ತು ಅಮರ ಮಾಗಣೆಯಾಗಿ ನೀಡುವ ಅಧಿಕಾರ ಹೊಂದಿದ್ದರೆಂಬುದನ್ನು ಈ ಕೆಳಗಿನ ಶಾಸನಗಳಿಂದ ಅರಿಯಬಹುದು.

ಉದಾ:

1 ಶ್ರೀಮಾನ್ ಮಹಾಮಂಡಲೇಶ್ವರ ರಾಮರಾಜ ವಿಠಲಯ್ಯದೇವ ಮಹಾಅರಸುಗಳು ಪತಿಗೊಂಡ ಕೃಷ್ಣಯ್ಯ ದೇವ ಮಹಾಅರಸುಗಳಿಗೆ ಅಮರ ಮಾಗಣೆಗೆ ಪಾಲಿಸಿದ ನಿಡುಗಲ್ ನಾಡೊಳಗಣ ತಯಿಲಗೆರೆ ಸ್ಥಳದ ತುಮುಕುಂಟೆ ಗ್ರಾಮ.[16]

2.ವಿಠಲಯ್ಯ ದೇವ ಮಹಾಅರಸುಗಳು ಮಹಾಮಂಡಲೇಶ್ವರ ಗುಜನಡುವಿನ ರಾಜ ಅಡಕ ಮಹಾಅರಸುಗಳಿಗೆ ಉಂಬಳಿಕೆಯಾಗಿ ಕೊಟ್ಟ ಗುಜ್ಜನಡು.[17]

ವಿಠಲಯ್ಯದೇವ ಮಹಾಅರಸು ಈ ಪ್ರಾಂತ್ಯದಲ್ಲಿ ತನ್ನ ಅಧಿಕಾರ ನಡೆಸುತ್ತಿದ್ದ ಕಾಲಕ್ಕಿಂತ ಸ್ವಲ್ಪ ಮೊದಲು ಸ್ವತಂತ್ರವಾಗಿ ಕಾರ್ಯ ನಿರ್ವಹಿಸಿದ ಮಹಾಮಂಡಲೇಶ್ವರರಿದ್ದಾರೆ. ಅವರು:

1. ಮನ್ಮಹಾಮಂಡಲೇಶ್ವರ ಶ್ರೀ ವೀರಚಿಕ್ಕವೊಡೆಯರು[18]
2. ಮನ್ಮಹಾಮಂಡಲೇಶ್ವರ ಶ್ರೀರಾಮರಾಜಯರಸ[19]
3. ಮನ್ಮಹಾಮಂಡಲೇಶ್ವರ ವೀರ ಹಿರಿಯ ಮಲ್ಲಯ್ಯ ಒಡೆಯ[20]

ಮೇಲೆ ಹೆಸರಿಸಿರುವ ಎಲ್ಲಾ ಮಹಾಮಂಡಲೇಶ್ವರರೂ ತಾವು ಹಾಕಿಸಿದ ಶಾಸನಗಳಲ್ಲಿ ತಮ್ಮ ಅಧಿರಾಜರನ್ನು ಉಲ್ಲೇಖಿಸದೆ ಹಾಕಿಸಿದ ಶಾಸನಗಳಾಗಿವೆ. ಆದ್ದರಿಂದ ಅವರಿಗೆ ತಮ್ಮ ಪ್ರಾಂತ್ಯಗಳಲ್ಲಿ ಜನೋಪಯೋಗಿ ಕೆಲಸಗಳಿಗೆ ದಾನ ಮಾಡುವ ಸ್ವಾತಂತ್ರ್ಯವಿತ್ತೆನ್ನಬಹುದು. ಇಂತಹ ಕಾರ್ಯವನ್ನು ಕೈಗೊಂಡವರಲ್ಲಿ ಉಲ್ಲೇಖಿಸಬಹುದಾದ ಹೆಸರೆಂದರೆ ವೀರ ಹಿರಿಯ ಮಲ್ಲಯ್ಯವೊಡೆಯರದಾಗಿದೆ. ಈ ಮಹಾಮಂಡಲೇಶ್ವರರು ವಿಜಯನಗರದ ಕೃಷ್ಣದೇವರಾಯನ ಸಮಕಾಲೀನರಾಗಿದ್ದು, ಸಿರಾ ಭಾಗದಲ್ಲಿ ಆಳ್ವಿಕೆ ನಡೆಸುತ್ತಿದ್ದರು. ಇವರು ಸಿರಾದಡುವಿನಲ್ಲಿ ಕೆರೆ ಕಟ್ಟಿಸಿದ ಉಲ್ಲೇಖವಿದೆ. ಕೆರೆಯನ್ನು ನಿರ್ಮಿಸುವುದರ ಮೂಲಕ ಕೃಷಿ ವಿಸ್ತರಣೆ ಮಾಡಿದರು. ಇದರಿಂದ ಅವರ ಖಜಾನೆಗೆ ಬರುತ್ತಿದ್ದ ಆದಾಯವನ್ನು ಹೆಚ್ಚಿಸಿಕೊಂಡರು. ಈ ಸಂದರ್ಭದಲ್ಲಿ ಅವರು ರಾಮಯ್ಯ ಎಂಬಾತನಿಗೆ ಕಟ್ಟುಕೊಡಗಿ ನೀಡಿದರು.

'ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರುಷ 1434ನೆಯ ಅಂಗೀರಸ ಸಂವತ್ಸರ ಕಾರ್ತಿಕ ಶು 5ಶ್ರೀಮನ್ ಮಹಾಮಂಡಲೇಶ್ವರ ಶ್ರೀ ವೀರ ಹಿರಿಯ ಮಲ್ಲಯ್ಯ ಒಡೆಯರ ಓಭಳ ಒಡೆಯರು-ಜನ ಮಕ್ಕಳು ರಾಮಯ್ಯಗಳಿಗೆ ಕೊಟ್ಟು ಕಟ್ಟುಕೊಡಗಿ'.

ಈ ಸಂದರ್ಭದಲ್ಲಿ ಅವರು ತಮ್ಮ ಅಧಿರಾಜನನ್ನು ಉಲ್ಲೇಖಿಸದೆ ದಾನ ನೀಡಿದ್ದಾರೆ. ಆದ್ದರಿಂದ ಇವರಿಗೆ ಇಂತಹ ಕಾರ್ಯ ಮಾಡಲು ಕೃಷ್ಣದೇವರಾಯ ಆತನಿಗೆ ಸಂಪೂರ್ಣ ಅಧಿಕಾರ ನೀಡಿದ್ದನೆನ್ನಬಹುದು.

ಈ ಮೇಲಿನ ಎಲ್ಲಾ ಚರ್ಚೆಗಳಿಂದ ನಾವು ಕೆಲವು ತೀರ್ಮಾನಗಳನ್ನು ಮಾಡಬಹುದು. ಒಂದನೆಯದಾಗಿ ಪಾವಗಡ, ಸಿರಾ, ಮಧುಗಿರಿ ಪ್ರದೇಶವು ವಿಜಯ ನಗರದ ಊಳಿಗ-ಒಕ್ಕೂಟ ಸ್ಥಾಪನೆಗೆ ಮುಖ್ಯವಾದ ಸ್ಥಾನವನ್ನು ಪಡೆದುಕೊಂಡಿತ್ತು. ಆರ್ಥಿಕ ದೃಷ್ಟಿಯಿಂದ ಗಮನಹರಿಸಿದಾಗ ಈ ಪ್ರದೇಶ ಬೇರೆ ಇನ್ನಿತರೆ ಪ್ರದೇಶಗಳಿಗಿಂತ ಶ್ರೀಮಂತವಾಗಿರಲಿಲ್ಲ. ಇಲ್ಲಿ ಒಣ ಬೇಸಾಯವನ್ನೇ ಮಾಡಲಾಗುತ್ತಿತ್ತು. ಕೃಷಿ ಮಳೆಯಾ ಧಾರಿತವಾಗಿತ್ತು. ಆದರೂ ಮಿಲಿಟರಿ ಮತ್ತು ಆಯಕಟ್ಟಿನ ದೃಷ್ಟಿಯಿಂದ ನೋಡಿದಾಗ ಈ ಪ್ರದೇಶ ಮಹತ್ವದ್ದೆನಿಸಿದೆ. ಏಕೆಂದರೆ ಈ ಪ್ರದೇಶ ಹೆದ್ದಾರಿಯ ಆಸುಪಾಸಿನಲ್ಲಿ ಇರುವುದರಿಂದ ವಿಜಯನಗರ ಚಕ್ರವರ್ತಿಗಳು ಈ ಪ್ರದೇಶದ ನಾಯಕರ ಕಡೆ ಆಸಕ್ತಿಯನ್ನು ತಾಳಿದ್ದರು.

ಎರಡನೆಯದಾಗಿ, ಈ ಪ್ರದೇಶದ ಶಾಸನಗಳು ಅನೇಕ ಮಹಾಮಂಡಲೇಶ್ವರರನ್ನು ಉಲ್ಲೇಖಿಸುತ್ತವೆ. ಇಲ್ಲಿ ಉನ್ನತ ಶ್ರೇಣಿಯ ಮಹಾಮಂಡಲೇಶ್ವರರು ಇದ್ದರು. ಇದರಿಂದ ಈ ಪ್ರದೇಶ ಅತಿ ಹೆಚ್ಚು ಊಳಿಗಮಾನ್ಯತೆಯಿಂದ ಕೂಡಿತ್ತೆನ್ನಬಹುದು. ಆದರೆ ಈ ರೀತಿಯ ನಿಲವು ವಿಜಯನಗರ ಸಾರ್ವಬೌಮರ ಉದ್ದೇಶಪೂರ್ವಕ ನೀತಿಯಾಗಿತ್ತೆ ಎಂದು ಹೇಳುವುದು ಕಷ್ಟ. ಆದಾಗ್ಯೂ ಈ ಪ್ರದೇಶದಲ್ಲಿ ಯಾರೊಬ್ಬರನ್ನೂ ಪ್ರಾಬಲ್ಯ ಹೊಂದಲು ಬಿಡದೆ ಇರುವ ತಂತ್ರಗಾರಿಕೆ ದೃಷ್ಟಿಯಿಂದ ಅನೇಕ ಊಳಿಗಮಾನ್ಯ ನಾಯಕ ರುಗಳನ್ನು ನೇಮಕ ಮಾಡುವ ಮೂಲಕ ನಿಯಂತ್ರಣ ಸಾಧಿಸಿದ್ದರೆನ್ನಬಹುದು. ಇಂತಹ ನೀತಿಯನ್ನು ಅವರು ಅನುಸರಿಸಲು ಈ ಪ್ರದೇಶ ಪ್ರಾಕೃತಿಕವಾಗಿ ಆಯಕಟ್ಟಿನ ಸ್ಥಳವಾಗಿದ್ದುದೇ ಕಾರಣವಾಗಿದೆ ಎನ್ನಬಹುದು.

ಮೂರನೆಯದಾಗಿ, ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದವರೆಲ್ಲಾ ಮಹಾಮಂಡಲೇಶ್ವರ ಮತ್ತು ಮಹಾಅರಸ ಎಂಬ ಬಿರುದುಗಳನ್ನು ಪಡೆದವರೇ ಆಗಿದ್ದಾರೆ. ಇವರೆಲ್ಲಾ ವಿಜಯನಗರ ಸ್ರಾಮಾಜ್ಯ ತಾಳಿಕೋಟೆ ಕದನದಲ್ಲಿ ಪರಾಭವಗೊಳ್ಳುವವರೆಗೂ ಪ್ರಬಲ ರಾಗಿದ್ದಿರು. ಅನಂತರ ಅಮರನಾಯಕ ಮನೆತನಗಳು ಪ್ರಾಬಲ್ಯ ಪಡೆದವು.

ನಾಲ್ಕನೆಯದಾಗಿ, ಈ ಪ್ರದೇಶದ ಮಹಾಮಂಡಲೇಶ್ವರರ ಅಧ್ಯಯನದಿಂದ ಮಹಾಮಂಡಲೇಶ್ವರ ವ್ಯವಸ್ಥೆ ಹೇಗೆ ಕಾರ್ಯ ನಿರ್ವಹಿಸುತ್ತಿತ್ತು ಎಂದು ಅರಿಯ ಬಹುದು. ಮಹಾಮಂಡಲೇಶ್ವರ ಅಧಿಕಾರವು ಅಧಿರಾಜರ ಉತ್ತಮ ಸಂಬಂಧದ ಮೇಲೆ ಅವಲಂಬಿ ತವಾಗಿತ್ತು. ಎಲ್ಲಿಯವರೆಗೆ ಅವರು ವಿಜಯನಗರಕ್ಕೆ ನಿಷ್ಠರಾಗಿರುತ್ತಿದ್ದರೋ ಅವರು ಅಧಿಕಾರದಲ್ಲಿ ಮುಂದುವರಿಯುತ್ತಿದ್ದರು. ಅವಿಧೇಯರಾದವರನ್ನು ಬಂಧಿಸಿ

ಸೆರೆಮನೆಗೆ ಹಾಕಲಾಗುತ್ತಿತ್ತು. ಈ ಪ್ರದೇಶದ ಆಯಕಟ್ಟು ಸಾರ್ವಭೌಮರಿಗೆ ಇವರ ಮೇಲೆ ಹೆಚ್ಚು ನಿಯಂತ್ರಣ ಇಟ್ಟುಕೊಳ್ಳಲು ಪ್ರಚೋದನೆ ನೀಡಿತ್ತೆನ್ನಬಹುದು,

ಕೊನೆಯದಾಗಿ, ಈ ಪ್ರದೇಶದ ನಿಯಂತ್ರಣದ ಕೇಂದ್ರ ಬಿಂದು ಒಂದು ಭಾಗ ಪೆನುಗೊಂಡೆಯಾದರೆ ಅಂತಿಮ ಭಾಗ ವಿಜಯನಗರವಾಗಿತ್ತು. ಪೆನುಗೊಂಡೆ ರಾಜ್ಯದ ಸ್ಥಾನಮಾನವನ್ನು ಪದೆದುಕೊಂಡು ಆನೇಕ ಸೀಮೆ, ಸ್ಥಳ, ನಾಡುಗಳು ಅದರಲ್ಲಿ ಅಂತರ್ಗತವಾಗಿದ್ದವು. ಒಟ್ಟಿನಲ್ಲಿ ಈ ಪ್ರದೇಶದಲ್ಲಿ ನಿಡಗಲ್ಲು, ಪಾವಗಡ, ಮಧುಗಿರಿ, ರತ್ನಗಿರಿ ಪಾಳೆಯಪಟ್ಟುಗಳು ಪ್ರಾಬಲ್ಯ ಸಂಪಾದಿಸುವವರಿಗೆ ಈ ಮಹಾಮಂಡಲೇಶ್ವರರೇ ಪ್ರಬಲರಾಗಿದ್ದು ವಿಜಯನಗರದ ಪತನದೊಂದಿಗೆ ತಾವು ಪತನಗೊಂಡರೆನ್ನಬಹುದು.

ಟಿಪ್ಪಣಿಗಳು

1. ಕೆ.ವಿ.ರಮೇಶ್-*A History of South Kanara*-1970
2. ಕೆ.ವಿ.ರಮೇಶ್-'Vijayanagara and Territorial Re-adjustments in Karnataka' *Kannada Studies*- Vol. 3 No. 1, University of Mysore.
3. ವೈ. ಸುಬ್ಬರಾಯಲು-Mapping Administrative Division of the Vijyanagar State(Unpublished Article)
4. ಎ.ವಿ.ವೆಂಕಟರತ್ನಂ-*Local Government in Vijayanagar Empire* - ಪು. 10 ಪ್ರಸಾರಾಂಗ, ಮೈಸೂರು ವಿ.ವಿ.1972.
5. ಎಕ 12 ಮಧುಗಿರಿ 83 ಕ್ರಿ.ಶ.1415
6 ಅದೇ, ಪ್ರತಾಪ ದೇವರಾಯ ವಿಜಯನಗರದಲ್ಲಿ ಆಳ್ವಿಕೆ ಮಾಡುತ್ತಿದ್ದಾಗ ಪೆನುಗೊಂಡೆ ಮಹಾರಾಜ್ಯದ ದೊಡ್ಡ ನಾಡಿನ ನಲ್ಲೂರು ಗ್ರಾಮವನ್ನು ಚಕ್ರವರ್ತಿ ಪ್ರತಾಪದೇವರಾಯನು ವಿರೂಪಾಕ್ಷಮ ಸನ್ನಿಧಿಯಲ್ಲಿ ತಿಮ್ಮಯಾಚಾರ್ಯನಿಗೆ ದಾನ ನೀಡಿದನೆಂದು ಶಾಸನ ತಿಳಿಸುತ್ತದೆ.
7. ಎಕ.12 ಪಾವಗಡ 24 ಕ್ರಿ.ಶ 1540
ಸಿರಾ 41, ಕ್ರಿ,ಶ1544
ಪಾವಗಡ 34, ಕ್ರಿ.ಶ. 1550
ಪಾವಗಡ 39, ಕ್ರಿ.ಶ.1554
ಮಧುಗಿರಿ78,ಕ್ರಿ.ಶ1554
8. ಎಕ 12. ಪಾವಗಡ24ಕ್ರಿ.ಶ.1540
9. ಎಕ 12. ಪಾವಗಡ 39 ಕ್ರಿ,ಶ1554
10. ಅದೇ
11. ಎಕ.12. ಪಾವಗಡ34ಕ್ರಿ.ಶ.1550.
12. ಎಕ 12. ಪಾವಗಡ 78 ಕ್ರಿ.ಶ,1556
13. ಎಕ 12. ಚಳ್ಳಕೆರೆ 9 ಕ್ರಿ.ಶ.1553

14. ಎಕ 12 ಸಿರಾ 51 ಕ್ರಿ.ಶ1545
15. ಎಕ. 12. ಪಾವಗಡ 34 ಕ್ರಿ.ಶ.1550
16. ಎಕ.12 ಪಾವಗಡ 39 ಕ್ರಿ.ಶ.1554
17. ಎಕ.12 ಪಾವಗಡ 24 ಕ್ರಿ.ಶ.1554
18. ಎಕ.12.ಸಿರಾ103 ಕ್ರಿ.ಶ.1495
19. ಎಕ.12 ಸಿರಾ 106 ಕ್ರಿ.ಶ.1509
20. ಎಕ.12 ಸಿರಾ 110 ಕ್ರಿ.ಶ.1512.

೨೩. ವಿಜಯನಗರ ದೇಗುಲಗಳ ಸ್ತಂಭಗಳು

ಡಾ. ಎಸ್. ಎನ್. ಶಿವರುದ್ರಸ್ವಾಮಿ

ದಕ್ಷಿಣ ಭಾರತದ ಮಧ್ಯಯುಗದಲ್ಲಿ ಬೃಹತ್ ಸಾಮ್ರಾಜ್ಯವನ್ನು ನಿರ್ಮಿಸಿದವರು ವಿಜಯನಗರದ ಅರಸರು. ಇದು ಅನೇಕ ಭಾಷೆಗಳು ಮತ್ತು ಪರಂಪರೆಗಳನ್ನು ಪಡೆದು ಕೊಂಡಿದ್ದ ಸಾಮ್ರಾಜ್ಯ. ಇವುಗಳನ್ನು ಒಳಗೊಂಡಂತೆ ಏಕತೆಯನ್ನು ಸಾಧಿಸಿದ ಹೆಗ್ಗಳಿಕೆ ಇಲ್ಲಿನ ಅರಸರಿಗೆ ಸಲ್ಲುತ್ತದೆ. ಸಂಗಮನ ಮಕ್ಕಳಾದ ಹರಿಹರ ಮತ್ತು ಬುಕ್ಕರು ವಿಜಯನಗರ ಸಾಮ್ರಾಜ್ಯವನ್ನು 1336 ರಲ್ಲಿ ಇಂದಿನ ಹಂಪಿಯಲ್ಲಿ ಸ್ಥಾಪಿಸಿದರು. ಇದು ಮುಂದೆ 225 ವರ್ಷಗಳಿಗೂ ಅಧಿಕ ಕಾಲ ವೈಭವಯುತವಾಗಿ ಮೆರೆದು 1565ರ ರಕ್ಕಸ -ತಂಗಡಿ ಕದನದಲ್ಲಿ ಅತ್ಯಂತ ಶೋಚನೀಯವಾಗಿ ಅಂತ್ಯವಾಯಿತು. ಈ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯವು ಸಾಹಿತ್ಯ, ಕಲೆ, ವಾಸ್ತು ಮುಂತಾದ ಕ್ಷೇತ್ರಗಳಲ್ಲಿ ಅದ್ಭುತ ಸಾಧನೆಗಳನ್ನು ಮಾಡಿತು. ಮಾನವನ ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ನಿರಂತರವಾಗಿ ಪ್ರಗತಿಯನ್ನು ಸಾಧಿಸಲಾಯಿತು.

ವಾಸ್ತು ಕ್ಷೇತ್ರದಲ್ಲೂ ಇದು ದೈತ್ಯ ಸಾಧನೆಯ ಯುಗ! ವಿಜಯನಗರದ ಕಾಲದಲ್ಲಿ ಸುಮಾರು 1800ಕ್ಕೂ ಹೆಚ್ಚು ದೇವಾಲಯಗಳು ಕರ್ನಾಟಕದ ಉದ್ದಗಲಕ್ಕೂ ನಿರ್ಮಾಣ ವಾದವು. ಹಂಪಿ ಪಟ್ಟಣ ಒಂದರಲ್ಲೇ 1200 ದೇಗುಲಗಳು ರಚನೆ ಆಗಿವೆ.[1] ಗಾತ್ರ ಮತ್ತು ಗುಣಮಟ್ಟದಲ್ಲಿ ಮಹೋನ್ನತ ದೇವಾಲಯಗಳು ಅತ್ಯಧಿಕ ಸಂಖ್ಯೆಯಲ್ಲಿ ನಿರ್ಮಾಣವಾದವು. ಸಾಮಾನ್ಯವಾಗಿ ವಿಜಯನಗರ ದೇವಾಲಯಗಳು ಗರ್ಭಗೃಹ, ಅಂತರಾಳ, ಮುಖಮಂಟಪ, ರಂಗಮಂಟಪ ಮತ್ತು ಮಹಾರಂಗಮಂಟಪಗಳನ್ನು ಹೊಂದಿರುತ್ತದೆ. ಇವುಗಳ ಜೊತೆಗೆ ದೇವಾಲಯಗಳ ಸಂಕೀರ್ಣವು ದ್ವಾರಮಂಟಪ, ಕಲ್ಯಾಣಮಂಟಪ, ಡೋಲೋತ್ಸವಮಂಟಪ, ವಸಂತಮಂಟಪ ಮುಂತಾದ ಚಲುವಿನ ವಾಸ್ತು ಕಟ್ಟಡಗಳನ್ನು ಒಳಗೊಂಡಿರುತ್ತದೆ. ದೇವಾಲಯದ ಬಹುಭಾಗ ಮತ್ತು ದೇವಾಲಯದ ಸುತ್ತಲೂ ಇರುವ ಕಟ್ಟಡಗಳು ಸ್ತಂಭಗಳ ಮೇಲೆ ನಿಂತಿರುತ್ತವೆ. ಸ್ತಂಭಗಳು ದೇವಾಲಯಗಳ ಪ್ರಮುಖ ಹಾಗೂ ಜೈವಿಕ ಅಂಗಗಳಾಗಿರುತ್ತವೆ. ಇವು ದೇವಾಲಯಗಳ ವಾಸ್ತು ಮತ್ತು ಶಿಲ್ಪಸಂಪತ್ತಿನ ದೃಷ್ಟಿಯಿಂದ ಪ್ರಮುಖ ಸ್ಥಾನವನ್ನು ಪಡೆದುಕೊಂಡಿವೆ. ಸ್ತಂಭಗಳು ದೇವಾಲಯಗಳ ಮಾಡನ್ನು ಎತ್ತಿ ಹಿಡಿಯುತ್ತವೆ ಹಾಗೂ ಉನ್ನತ ಆಕಾರವನ್ನು ನೀಡುತ್ತವೆ. ಗರ್ಭಗುಡಿಗಳಿಗೆ ವಿಮಾನಗಳು ಔನ್ನತ್ಯವನ್ನು ನೀಡಿದರೆ, ಸ್ತಂಭಗಳು ಆಂತರಿಕವಾಗಿ ಬೃಹದಾಕಾರವನ್ನು ಒದಗಿಸುತ್ತವೆ.

ವಿಜಯನಗರದ ದೇವಾಲಯಗಳಲ್ಲಿ ಸ್ತಂಭಗಳು ವಿಶೇಷವಾಗಿ ಶಿಲ್ಪ ಸಂಪತ್ತಿನ ಚಿತ್ರಣಕ್ಕೆ ವಿಪುಲ ಅವಕಾಶವನ್ನು ಕಲ್ಪಿಸುತ್ತವೆ. ಹೊಯ್ಸಳ ದೇಗುಲಗಳಲ್ಲಿ ಸ್ತಂಭಗಳ ಮೇಲೆ ಶಿಲ್ಪಚಿತ್ರಣ ಇಲ್ಲವೆಂಬಷ್ಟು ವಿರಳ. ಆದರೆ ವಿಜಯನಗರದ ದೇವಾಲಯಗಳಲ್ಲಿ ಶಿಲ್ಪಗಳು ರೂಪುಗೊಂಡಿರುವುದೇ ಕಂಬಗಳ ಮೇಲೆ. ಸ್ತಂಭಗಳು ವಿಜಯನಗರದ ದೇಗುಲಗಳಲ್ಲಿ ವಾಸ್ತುವಿನ ಜೈವಿಕ ಅಂಶವೂ ಹೌದು, ಶಿಲ್ಪಗಳನ್ನು ಮೂಡಿಸುವ ಚಲುವಿನ ಮಾಧ್ಯಮವೂ ಆಗಿವೆ. ವಿಜಯನಗರದ ಕಾಲದಲ್ಲಿ ಶಿಲ್ಪಗಳನ್ನು ಕೆತ್ತಿರುವುದು ಕೇವಲ ಸ್ತಂಭಗಳ ಮೇಲೆ ಎಂಬುದು ವಿಶೇಷವಾದ ಸಂಗತಿ. ಶಿಲ್ಪಗಳನ್ನು ದೇಗುಲಗಳ ಗೋಡೆಗಳ ಮೇಲೆ ಕಂಡರಿಸಿರುವುದಾದರೂ, ಅಂತಹ ಉದಾಹರಣೆಗಳು ಅತ್ಯಂತ ವಿರಳ.

ದಕ್ಷಿಣ ಭಾರತದ ಧಾರ್ಮಿಕ ವಾಸ್ತುವಿನ ಪ್ರಮುಖ ಲಕ್ಷಣ ವಿವಿಧ ವಿನ್ಯಾಸಗಳ ಸ್ತಂಭಗಳು. ಚೋಳರ ಕಾಲದಲ್ಲಿ ಸೌಂದರ್ಯದಿಂದ ಕೂಡಿದ ಸ್ತಂಭಗಳ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಿದಂತೆ ಕಾಣುವುದಿಲ್ಲ. ಆದರೂ ಚೋಳ ಅರಸರು ಇತರ ರಾಜವಂಶಗಳ ಕಾಲದ ಸ್ತಂಭಗಳನ್ನು ನೋಡಿ ಆಕರ್ಷಿತರಾದುದುಂಟು. ತಾವು ಗೆದ್ದ ಅನೇಕ ಪ್ರದೇಶಗಳ ಸ್ತಂಭಗಳನ್ನು ತಂದು ತಮ್ಮ ದೇಗುಲಗಳಲ್ಲಿ ಪ್ರತಿಷ್ಠಾಪಿಸಿ ದರು. ಒಂದನೇ ರಾಜೇಂದ್ರನು ನೊಳಂಬಪಲ್ಲವರ ಸ್ತಂಭಗಳನ್ನು ತಂದು ತಿರುವಾಯೂರ್ ದೇಗುಲದಲ್ಲಿ ಅಳವಡಿಸಿದ. ವಿಜಯನಗರದ ಅರಸರ ಕಾಲದಲ್ಲಿ ಸ್ತಂಭಗಳು ಅದ್ಭುತ ಸೌಂದರ್ಯದ ವಸ್ತುಗಳಾದವು. [2]

ವಿಜಯನಗರದ ದೇವಾಲಯಗಳ ಒಳಗೆ, ತೆರೆದ ಮಹಾರಂಗಮಂಟಪಗಳು, ಉಪಗುಡಿಗಳು, ಕಲ್ಯಾಣಮಂಟಪಗಳು, ನೂರ್ಕಾಲ ಮಂಟಪಗಳು (ಇವುಗಳನ್ನು ಕಲ್ಯಾಣೋತ್ಸವ ಶಯನೋತ್ಸವ ಮುಂತಾದ ವಾರ್ಷಿಕ ವಿಧಿವಿಧಾನಗಳ ಆಚರಣೆಗಳಲ್ಲಿ ಬಳಸಲಾಗುತ್ತಿತ್ತು), ತುಲಾಭಾರ ಮಂಟಪಗಳು, ವಸಂತ ಮಂಟಪಗಳು ಮುಂತಾದ ಕಟ್ಟಗಳ ನಿರ್ಮಾಣದಲ್ಲಿ ಸ್ತಂಭಗಳನ್ನು ವಿಪುಲವಾಗಿ ಹಾಗೂ ವ್ಯಾಪಕವಾಗಿ ಬಳಸ ಲಾಗಿದೆ. ಸ್ತಂಭಗಳ ನಿರ್ಮಾಣದಲ್ಲಿ ನಿರಂತರವಾಗಿ ಬದಲಾವಣೆಗಳು ಮುಂದುವರೆದಿವೆ. ಈ ಬದಲಾವಣೆಗಳು ಮೂಡಿಸಿದ್ದು ಸ್ತಂಭಗಳ ಸೌಂದರ್ಯವನ್ನು ಉತ್ತಮ ಪಡಿಸುವುದಕ್ಕೆ ಹಾಗೂ ದೇವಾಲಯಗಳ ವೈಭವವನ್ನು ಅಧಿಕಗೊಳಿಸುವುದಕ್ಕೆ. ಇದರ ಫಲವಾಗಿ ಬಹು ಮಾದರಿಯ, ಬಹು ವಿನ್ಯಾಸದ ಸ್ತಂಭಗಳು ರಚನೆ ಆದವು.

ವಿಜಯನಗರದ ದೇವಾಲಯಗಳ ಸ್ತಂಭಗಳನ್ನು ಅವುಗಳ ವಿನ್ಯಾಸ ಮತ್ತು ನಿರೂಪಣೆಗಳನ್ನು ಅನುಸರಿಸಿ, ಅನೇಕ ಮಾದರಿಗಳನ್ನಾಗಿ ವರ್ಗೀಕರಿಸಬಹುದು. ಈ ಸಾಮ್ರಾಜ್ಯದ ಆರಂಭದ ಕಾಲದಲ್ಲಿ ಹಿಂದಿನ ಕಲಾಶೈಲಿಗಳ ಪ್ರಭಾವ ಸ್ತಂಭಗಳ ರಚನೆಯ ಮೇಲೆ ಆಗಿರುವುದನ್ನು ಕಾಣಬಹುದು. ಸಾಮ್ರಾಜ್ಯದ ಉತ್ತರ ಭಾಗದಲ್ಲಿ - ಹಂಪಿಯ ಹೇಮಕೂಟದ ದೇಗುಲಗಳಲ್ಲಿ ಅರಳಿದ ಸ್ಥಳೀಯ ಕಲಾಪರಂಪರೆಯ ಪ್ರಭಾವ

ಕಲ್ಯಾಣದ ಚಾಲುಕ್ಯ ಮತ್ತು ಕಾಕತೀಯರ ಕಲಾ ಶೈಲಿಗಳ ಪ್ರಭಾವವನ್ನು ಅಲ್ಲಿನ ದೇಗುಲಗಳ ಸ್ತಂಭಗಳ ಮೇಲಿದೆ. ದಕ್ಷಿಣ ಕರ್ನಾಟಕದಲ್ಲಿ ವಿಜಯನಗರದ ಕಾಲದ ಆರಂಭದಲ್ಲಿ ನಿರ್ಮಾಣವಾದ ದೇಗುಲಗಳಲ್ಲಿ ಹೊಯ್ಸಳರ ಕಲಾಶೈಲಿಯ ಪ್ರಭಾವವಿದೆ. ದಿನಗಳು ಕಳೆದಂತೆ, ವಿವಿಧ ಕಲಾ ಶೈಲಿಯ ಅಂಶಗಳು ಮಿಳಿತವಾಗಿ ಮಾದರಿಯಾದ ವಿಜಯನಗರದ ಶೈಲಿ ರೂಪುಗೊಂಡಿತು. ಇದು ವಿಜಯನಗರದ ದೇವಾಲಯಗಳ ಸ್ತಂಭಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ವಿಜಯನಗರದ ದೇವಾಲಯಗಳ ಸ್ತಂಭಗಳನ್ನು ಐದು ವರ್ಗಗಳನ್ನಾಗಿ ಮಾಡಬಹುದು:

I ಆರಂಭದ ಸ್ತಂಭಗಳು

II ಸಾಮಾನ್ಯ ಸ್ತಂಭಗಳು

III ನಿರ್ದಿಷ್ಟ ವರ್ಗದ (Standard Type) ವರ್ಗದ ಸ್ತಂಭಗಳು

IV ಸಂಯುಕ್ತ ಸ್ತಂಭಗಳು

V ಅಲಂಕಾರಿಕ ಸ್ತಂಭಗಳು

I ಆರಂಭದ ಸ್ತಂಭಗಳ ವರ್ಗ

ವಿಜಯನಗರದ ದೇವಾಲಯಗಳ ಬೆಳವಣಿಗೆಯ ಆರಂಭದ ಹಂತದಲ್ಲಿ ಅಲ್ಲಿನ ಸ್ತಂಭಗಳಲ್ಲಿ ವಿಭಿನ್ನತೆಯನ್ನು ಕಾಣಬಹುದು. ಇದಕ್ಕೆ ಪ್ರಾದೇಶಿಕ ಕಲಾಶೈಲಿಗಳ ಪ್ರಭಾವವೇ ಕಾರಣ. ಇದರ ಫಲವಾಗಿ ಮೂರು ಪ್ರಾದೇಶಿಕ ಭಿನ್ನತೆಯನ್ನು ಅಥವಾ ಉಪವರ್ಗಗಳನ್ನು ಗುರುತಿಸಬಹುದು:

1. ಹಂಪಿಯನ್ನು ಕೇಂದ್ರವಾಗಿಟ್ಟುಕೊಂಡು, ವಿಜಯನಗರ ಸಾಮ್ರಾಜ್ಯದ ಉತ್ತರದಲ್ಲಿ ಕಲ್ಯಾಣದ ಚಾಲುಕ್ಯರು ಮತ್ತು ಕಾಕತೀಯರ ವಾಸ್ತುಶೈಲಿಯ ಪ್ರಭಾವ ಸಾಕಷ್ಟಿದೆ. [3] ಇವರ ಕಾಲಕ್ಕೆ ಸೇರಿದ ದೇಗುಲಗಳು ಹೇಮಕೂಟ ಮತ್ತು ವಿರೂಪಾಕ್ಷ ದೇವಾಲಯದ ಸುತ್ತ ಇವೆ. ಈ ದೇವಾಲಯಗಳ ಕಂಬಗಳ ಮಾದರಿಯ ಪ್ರಭಾವ ವಿಜಯನಗರದ ಆರಂಭದ ದೇವಾಲಯಗಳಲ್ಲೂ ಮುಂದುವರೆದಿದೆ. ಹಂಪಿಯ ಸಿಂಗಾರದ ಹೆಬ್ಬಾಗಿಲ ಹತ್ತಿರವಿರುವ ಬಾಲಕೃಷ್ಣದೇಗುಲ, ಆನೆಲಾಯದ ಹಿಂದೆ ಇರುವ ಶೈವ ಮತ್ತು ಜೈನ ದೇಗುಲಗಳು, ಸೋಮವಾರಬಾಗಿಲ ಹತ್ತಿರ ಇರುವ ಜೈನ ದೇವಾಲಯಗಳು ಮತ್ತು ತುಂಗಭದ್ರಾ ನದಿಯ ದಂಡೆಯಲ್ಲಿರುವ ಕೆಲ ದೇವಾಲಯಗಳಲ್ಲಿ ಈ ತೆರನಾದ ಸ್ತಂಭಗಳನ್ನು ಕಾಣಬಹುದು. ಅವುಗಳ ಲಕ್ಷಣಗಳು ಈ ಕೆಳಕಂಡಂತೆ ಇವೆ. ಕಂಬಗಳ ಈ ಲಕ್ಷಣಗಳನ್ನು ಮುಂದಿನಂತೆ ಹೆಸರಿಸಲಾಗಿದೆ:

1. ಪೀಠ
2. ಜಂಪಾ -ಸ್ತಂಭದ ಆಯತಾಕಾರದ ಕಲ್ಲಿನ ದಿಮ್ಮಿಯ ಭಾಗ
3. ಪಟ್ಟಿಕಾ -ಅಷ್ಟಮುಖ ಮತ್ತು ಹದಿನಾರು ಮುಖಗಳ ವೃತ್ತಾಕಾರದ ಭಾಗ
4. ಚತುರಶ್ರ -ಕಂಬದ ಘನಾಕಾರದ ಭಾಗ
5. ಲಶುನ -ದುಂಡಾದ ಲಶುನದ ದಳಗಳಿಂದ ಅಲಂಕೃತವಾದ ಭಾಗ
6. ಕುಂಭ -ದುಂಡಾದ ಲಂಬ ಪಟ್ಟಿಕೆಗಳಿಂದ ಇರುವ ಭಾಗ
7. ಪಾಲಿ -ಕಮಲದ ದಳಗಳಿಂದ ಅಲಂಕೃತವಾಗಿ ಫಲಕವನ್ನು ಹೊಂದಿರುವ ಭಾಗ
8. ಕೋನೀಕೃತ ಚಾಚು ಪೀಠ (Angled Brakeets)

ಈ ವರ್ಗದ ಸ್ತಂಭಗಳು ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಆದ ನೂರು ವರ್ಷಗಳವರೆಗೆ ರಚನೆ ಆಗುತ್ತಿದ್ದವು. ಅನಂತರ ಅವುಗಳ ನಿರ್ಮಾಣ ನಿಂತುಹೋಯಿತು. ಈ ತೆರನಾದ ಕಂಬಗಳನ್ನು ದಪ್ಪನಾಗಿ ಹಾಗೂ ಸಪೂರವಾಗಿ ರೂಪಿಸಲಾಗುತ್ತಿತ್ತು. ಪುನಃ ಹದಿನಾರನೇ ಶತಮಾನದಲ್ಲಿ, ಬದಲಾವಣೆಯ ಅಪೇಕ್ಷೆಯಿಂದ, ಈ ತೆರನಾದ ಕಂಬಗಳು ಹಂಪಿಯ ತಿರುವೆಂಗಳನಾಥ (ಅಚ್ಯುತ) ದೇವಾಲಯದ ಅಮ್ಮನವರ ಗುಡಿಯ ಮುಖಮಂಟಪದಲ್ಲಿ ರಚನೆ ಆದವು. ಇವು ಕಲೆಯ ಅತ್ಯುತ್ತಮ ನಮೂನೆಗಳಾಗಿವೆ.

2. ಇದೇ ಸಮಯದಲ್ಲೇ ಮೇಲೆ ತಿಳಿಸಿದ ಉಪವರ್ಗಕ್ಕಿಂತ ಭಿನ್ನವಾದ ಮತ್ತೊಂದು ಮಾದರಿಯ ಕಂಬಗಳನ್ನು ಹಂಪಿ ಮತ್ತಿತರ ಸ್ಥಳಗಳಲ್ಲಿ ಕಾಣಬಹುದು. ಅವುಗಳ ಲಕ್ಷಣಗಳು ಹೀಗಿವೆ. ಇವುಗಳನ್ನು ಕಂಬಗಳ ಕೆಳಭಾಗದಿಂದ ತಿಳಿಸಿದೆ.

1. ಸ್ತಂಭದ ಕೆಳಭಾಗದಲ್ಲಿರುವ ಆಯತಾಕಾರದ ಶಿಲಾ ದಿಮ್ಮಿ
2. ಲಂಬವಾಗಿರುವ ಪಟ್ಟಿಗಳಿಂದ ಅಲಂಕೃತವಾದ ಸಪೂರವಾದ ಉದ್ದನೆಯ ಕಂಬದ ಭಾಗ
3. ಲಶುನಾ, ಕುಂಭ, ಪಾಲಿ, ಫಲಕ
4. ಕೋನೀಕೃತ ಚಾಚು ಪೀಠ

ಈ ಸ್ತಂಭಗಳಿಗೆ ಪೀಠ ಅಥವಾ ಅಧಿಷ್ಠಾನಗಳಿರುವುದಿಲ್ಲ. ಈ ತೆರನಾದ ಸ್ತಂಬಗಳನ್ನು ಹಂಪಿಯ ಜೈನ ದೇಗುಲಗಳಲ್ಲಿ ಹಾಗೂ ಕಮಲಾಪುರದ ಗಾಣಗಿತ್ತಿ (ಕುಂತು ಜಿನನಾಥ) ಜಿನಾಲಯದಲ್ಲಿ ಬಳಸಲಾಗಿದೆ. ಇವು ಗಾಣಗಿತ್ತಿ. ಜಿನಾಲಯದ ಮುಂದಿರುವ ಮಾನಸ್ತಂಭವನ್ನು ಪೂರ್ಣವಾಗಿ ಹೋಲುತ್ತವೆ. ಶ್ರವಣಬೆಳ್ಗೊಳದ ಚಾವುಂಡರಾಯ ಬಸದಿಯ ಮುಖಮಂಟಪದಲ್ಲಿರುವ ಸ್ತಂಭಗಳಿಗೂ ಈ ಹಂಪಿಯ ಜೈನ ದೇಗುಲಗಳ

ಸ್ತಂಭಗಳಿಗೂ ಸಾಕಷ್ಟು ಸಾದೃಶ್ಯವಿದೆ. ಇದರಿಂದ ಗಂಗರ ಪ್ರಭಾವವನ್ನು ಇಲ್ಲಿ ಕಾಣಬಹುದು. [4] ಹೊಯ್ಸಳರ ಕಾಲದಲ್ಲಿ ನಿರ್ಮಾಣವಾದ ತೊಣ್ಣೂರಿನ ದೇಗುಲದಲ್ಲೂ ಈ ತೆರನಾದ ಸ್ತಂಭಗಳು ಇರುವುದನ್ನು ಗಮನಿಸಬಹುದು. ಇದೇ ತೆರನಾದ ಸ್ತಂಭಗಳನ್ನು- ಸ್ವಲ್ಪ ಅಲಂಕೃತವಾದುವನ್ನು -ಹಂಪಿಯ ಪ್ರಸನ್ನ ವಿರೂಪಾಕ್ಷ (The Undaground Temple), ಬಿಂಡಿಗನವಿಲೆಯ ಕೇಶವ, ಗೊರೂರಿನ ನರಸಿಂಹ, ತ್ರ್ಯಯಾಂಬಕಪುರದ ತ್ರ್ಯಯಾಂಬಕೇಶ್ವರ, ಗುಂಡ್ಲೆಪೇಟೆಯ ವರದರಾಜ ಮತ್ತು ಗೋಪಾಲಕೃಷ್ಣ ಮುಂತಾದ ದೇವಾಲಯಗಳಲ್ಲಿ ಕಾಣಬಹುದು. ಈ ಸ್ತಂಭಗಳ ಮೇಲಿರುವ ಕೋನೀಕೃತ ಚಾಚುಪೀಠವು ಅಗತ್ಯಗಿಂತ ದೊಡ್ಡದಾಗಿರುವುದನ್ನು ಗಮನಿಸಬಹುದು.

3. ಕರ್ನಾಟಕದ ದಕ್ಷಿಣ ಭಾರದಲ್ಲಿ ವಿಜಯನಗರದ ಆರಂಭದ ದೇಗುಲಗಳಲ್ಲಿ ಹೊಯ್ಸಳರ ಪ್ರಭಾವವನ್ನು ಗುರುತಿಸಬಹುದು. ಹಾಸನ ಜಿಲ್ಲೆಯ ಅರಸೀಕೆರೆಯ ಮಲೆ ಮಲ್ಲೇಶ್ವರ ದೇಗುಲವನ್ನು ಕ್ರಿ. ಶ. 1368 ರಲ್ಲಿ ವಿಜಯನಗರದ ಅಧಿಕಾರಿಗಳು ನಿರ್ಮಿಸಿದ್ದರು.[5] ಇದರಲ್ಲಿ ಹೊಯ್ಸಳ ದೇವಾಲಯಗಳ ಶೈಲಿಯ ಪ್ರಭಾವವನ್ನು ಕಾಣುತ್ತೇವೆ. ಗರ್ಭಗುಡಿಯ ಮೇಲಿರುವ ವಿಮಾನದ ಭಾಗವನ್ನು ಇಟ್ಟಿಗೆ ಮತ್ತು ಗಾರೆಯಿಂದ ಕಟ್ಟಲಾಗಿದೆ. ಇದರ ಕಂಬಗಳನ್ನು ಹೊಯ್ಸಳ ವಾಸ್ತು ಶೈಲಿಯಲ್ಲಿ ರಚಿಸಲಾಗಿದೆ. ಅದರ ಲಕ್ಷಣಗಳು ಈ ಕೆಳಕಂಡಂತೆ ಇವೆ:

1. ಚೌಕಾಕಾರದ ಪೀಠ
2. ಕಂಬದ ಕೆಳಭಾಗದಲ್ಲಿ ಆಯತಾಕಾರದ ದಿಮ್ಮಿ, ಚರಕಿ ಯಂತ್ರದಿಂದ ಕಡೆದ ದುಂಡಾಕೃತಿಗಳು
3. ಪಾಲಿ ಮತ್ತು ಫಲಕ
4. ಕೋನೀಕೃತ ಚಾಚುಪೀಠ

ಈ ಸ್ತಂಭಗಳಲ್ಲಿ ಹೊಯ್ಸಳ ಅಂಶಗಳನ್ನು ಅಳವಡಿಸಿರುವುದಕ್ಕೆ ಪ್ರಾದೇಶಿಕ ಭಿನ್ನತೆಯೇ ಕಾರಣ. ಈ ಪ್ರದೇಶದ ವಿಜಯನಗರದ ಆರಂಭದ ದೇವಾಲಯಗಳಲ್ಲಿ ಹೊಯ್ಸಳ ಶೈಲಿಯ ಪ್ರಭಾವ ಎದ್ದು ಕಾಣುತ್ತದೆ. ಇಂತಹ ದೇವಾಲಯಗಳಲ್ಲಿ ಗಂಡಸಿಯ ಕೇಶವ ದೇಗುಲ ಮತ್ತು ಸಂತೇಬಾಚಹಳ್ಳಿಯ ವೀರನಾರಾಯಣಸ್ವಾಮಿ ದೇಗುಲಗಳನ್ನು ಹೆಸರಿಸಬಹುದು.

II ಸಾಮಾನ್ಯ ವರ್ಗದ ಸ್ತಂಭಗಳು

ಈ ವರ್ಗದ ಸ್ತಂಭಗಳನ್ನು ಕರ್ನಾಟಕದ ಉದ್ದಗಲಕ್ಕೂ ಚದುರಿದಂತೆ ಇರುವ ವಿಜಯನಗರದ ದೇವಾಲಯಗಳಲ್ಲಿ ಸಾಮಾನ್ಯವಾಗಿ ಕಾಣಬಹುದು. ಇವುಗಳನ್ನು

ಚೌಕಾಕಾರದ ಪೀಠದ ಮೇಲೆ ಇಡಲಾಗಿದೆ. ಈ ಕಂಬಗಳನ್ನು ಮೂರು ಘನಾಕೃತಿಗಳಾಗಿ ವಿಭಜಿಸಲಾಗಿದೆ. ಈ ಘನಾಕೃತಿಯ ಮೇಲೇರಿದಂತೆ ಕೆಳಗಿನದಕ್ಕಿಂತ ಆಕೃತಿಯಲ್ಲಿ ಸ್ವಲ್ಪ ಮಟ್ಟಿಗೆ ಕಿರಿದಾಗುತ್ತವೆ. ಈ ಘನಾಕೃತಿಗಳ ನಡುವೆ ಅಷ್ಟಮುಖ ಮತ್ತು ಹದಿನಾರು ಮುಖಗಳ ಲಂಬಪಟ್ಟಿಗಳಿದ್ದು ಈ ಭಾಗ ದುಂಡಾಗಿರುತ್ತದೆ. ಕಂಬದ ಮೇಲೆ ಕೋನೀಕೃತ ಚಾಚುಪೀಠವಿರುತ್ತದೆ. ಚಾಚುಪೀಠದ ನಾಲ್ಕು ಚಾಚುಗಳಲ್ಲೂ ಪಾರ್ಶ್ವದಲ್ಲಿ 45^0 ಗಳಿಗೆ ಕತ್ತರಿಸಲಾಗಿದೆ. ಇವುಗಳ ಮೇಲೆ ಗಂಗ ಮತ್ತು ಚೋಳರ ಪ್ರಭಾವವನ್ನು ಕಾಣಬಹುದು.[6] ಕಂಬದ ಘನಾಕೃತಿಗಳ ಮೇಲೆ ತೆಳುವಾದ ಉಬ್ಬುಗೆತ್ತನೆಗಳು ಇರಬಹುದು ಅಥವಾ ನಯಗೊಳಿಸಿರಬಹುದು. ವಿಜಯನಗರದ ಕಾಲದ ಬಹುತೇಕ ದೇವಾಲಯಗಳಲ್ಲಿ ಈ ತೆರನಾದ ಸ್ತಂಭಗಳನ್ನು ನಿಲ್ಲಿಸಲಾಗಿದೆ. ಸರಳ ಹಾಗೂ ಕಿರಿಯ ದೇವಾಲಯಗಳ ನಿರ್ಮಾಣಕ್ಕೂ ಈ ಮಾದರಿಯ ಸ್ತಂಭಗಳು ಬಳಕೆ ಆಗಿರುವುದುಂಟು.

ವಿಜಯನಗರ ಸಾಮ್ರಾಜ್ಯವು 1565ರಲ್ಲಿ ರಕ್ಕಸತಂಗಡಿ ಯುದ್ಧದಲ್ಲಿ ಪತನವಾದಾಗ ಪಾಳೆಗಾರರು ಕರ್ನಾಟಕದಲ್ಲಿ ಸ್ವತಂತ್ರವಾಗಿ ತಲೆಯೆತ್ತಿದರು. ಅವರ ಆಳ್ವಿಕೆಯ ಭೂಪ್ರದೇಶ ಅತಿ ಚಿಕ್ಕದಾಗಿತ್ತು ಹಾಗೂ ಅವರ ವಾರ್ಷಿಕ ವರಮಾನವೂ ಅತ್ಯಲ್ಪವಾಗಿತ್ತು. ಅವರು ನಿರಂತರವಾಗಿ ನೆರೆಯ ಪಾಳೇಗಾರರೊಂದಿಗೆ ಘರ್ಷಣೆಯಲ್ಲಿ ತೊಡಗಿದ್ದರು. ಇವುಗಳಿಂದ ಅವರ ಆರ್ಥಿಕ ಸಂಪನ್ಮೂಲ ಬಹು ಕಡಿಮೆ ಆಗಿತ್ತು. ಅವರ ಕಾಲದಲ್ಲಿ ಹೇಳಿಕೊಳ್ಳುವಂತಹ ಉತ್ತಮ ಗುಣಮಟ್ಟದ ಅಥವಾ ಉನ್ನತ ದೇಗುಲಗಳ ನಿರ್ಮಾಣವಾಗಲಿಲ್ಲ. ಅವರ ದೇಗುಲಗಳ ಸಾಮಾನ್ಯ ವರ್ಗದ ಸ್ತಂಭ ಗಳನ್ನು ಬಳಸಿ ಕಟ್ಟಲಾಗಿದೆ.

III ನಿರ್ದಿಷ್ಟ ವರ್ಗದ ಸ್ತಂಭಗಳು (Standard Type)

'ವಿಜಯನಗರದ ಮಾದರಿ' - ಎಂದು ಹೇಳಲಾಗುವ ಸ್ತಂಭಗಳು ಇವು. ಇವುಗಳನ್ನು ಬಹುತೇಕ ವಿಜಯನಗರದ ದೇವಾಲಯಗಳಲ್ಲಿ ಕಾಣಬಹುದು. ಈ ಸ್ತಂಭಗಳನ್ನು ಮೂರು ಘನಾಕೃತಿಗಳಾಗಿ ವಿಭಜಿಸಲಾಗಿದೆ. ಇವು ಮೇಲೇರಿದಂತೆ ಕೆಳಗಿನ ಘನಾಕೃತಿಗಿಂತ ಆಕಾರದಲ್ಲಿ ಕಿರಿದಾಗಿರುತ್ತದೆ. ವೃತ್ತಾಕಾರದ ಭಾಗವಿರುತ್ತದೆ. ಈ ಸ್ತಂಭಗಳನ್ನು ಪೀಠಗಳ ಮೇಲೆ ಪ್ರತಿಷ್ಠಾಪಿಸಿರುವುದುಂಟು. ಪೀಠಗಳು ಇಲ್ಲದಿದ್ದರೆ, ಕಂಬದ ಕೆಳಭಾಗದಲ್ಲಿ ಪೀಠದ ಆಕೃತಿಯನ್ನು ರೂಪಿಸಿರುವುದುಂಟು. ಘನಾಕೃತಿಗಳ ಮೇಲೆ ದೇವದೇವತೆಯರು, ದೈವಿಕ ಚಿಹ್ನೆ, ಹೂವಿನ ಸುರುಳಿಗಳು, ಉಪದೇಶಗಳು, ಮಿಥುನ ಚಿತ್ರಗಳು -ಇವುಗಳನ್ನು ಉಬ್ಬುಗೆತ್ತನೆಯಲ್ಲಿ ಮೂಡಿಸಲಾಗಿರುತ್ತದೆ. ಕಂಬಗಳ ಮೇಲೆ ಚಾಚುಪೀಠವಿದ್ದು, ಅವುಗಳ ನಾಲ್ಕು ಚಾಚುಗಳ ಅಡಿಯಲ್ಲಿ ಲೋಲಕಗಳು (Pecndant buds) ಇರುತ್ತವೆ. ಇವುಗಳು ವಿಜಯನಗರದ ಜನಪ್ರಿಯ ಮಾದರಿ ಕಂಬಗಳು. ಇಂತಹ ಕಂಬಗಳು ಹದಿನೈದನೇ ಶತಮಾನದ ಮಧ್ಯದಲ್ಲಿ ನಿರ್ಮಾಣವಾದ ಹಂಪಿಯ ರಾಮಚಂದ್ರ (ಹಜಾರ

ರಾಮ) ದೇಗುಲದಿಂದ ಆರಂಭವಾಯಿತು. ಈ ಲೋಲಕಗಳು ಕದಳಿಪುಷ್ಪದ ಮೊಗ್ಗಿನಂತೆ ಇರುವುದು ವಿಜಯನಗರದ ದೇಗುಲಗಳ ಕಂಬಗಳ ವಿಶಿಷ್ಟ ಲಕ್ಷಣ. ವಿಜಯನಗರದ ಕಲಾಕಾರರು ಚೋಳರ ಕಾಲದ ಕೋನೀಕೃತ ಚಾಚುಪೀಠವನ್ನು ಕದಳೀಪುಷ್ಪ ಅಥವಾ ತಲಕೆಳಗಾದ ಕಮಲದ ಮೊಗ್ಗಿನ ಬೋದುಗೆಯಾಗಿ ಅಭಿವೃದ್ಧಿಪಡಿಸಿದರು -ಎಂದು ಜೆ. ದುಬ್ರೆಲ್ ಅವರು ಅಭಿಪ್ರಾಯ ಪಡುತ್ತಾರೆ. ಟಿ. ವಿ. ಮಹಾಲಿಂಗಂರವರು ಪುಷ್ಪ ಬೋದಿಗೆಯ ಪೂರ್ವ (ಅಥವಾ ಮುನ್ನಿನ) ರೂಪವು ಚೋಳರ ಅಂತಿಮ ಹಂತದಲ್ಲಿ ಆರಂಭವಾಯಿತೆಂದು ತಿಳಿಸುತ್ತಾರೆ. [8] ಈ ಚಿಂತನೆ ಉಚಿತವೆನಿಸದು. ಈ ತೆರನಾದ ಪುಷ್ಪ ಬೋದಿಗೆಗಳು ತಮಿಳುನಾಡಿನಲ್ಲಿ ಮಾತ್ರವೇ ಬೆಳವಣಿಗೆ ಆಗಿರಲಿಲ್ಲ. ಕರ್ನಾಟಕ ದಲ್ಲೂ ವಿಕಾಸವಾಗುತ್ತಿತ್ತು. ಇದನ್ನು ಕೋಲಾರ ಜಿಲ್ಲೆಯ ಕುರಡುಮಲೆಯ ಸೋಮೇಶ್ವರ ದೇವಸ್ಥಾನದಲ್ಲಿ ಗುರುತಿಸಬಹುದು. ಈ ದೇಗುಲವನ್ನು ದ್ರಾವಿಡ ಮಾದರಿಯಲ್ಲಿ ಹದಿಮೂರನೇ ಶತಮಾನದ ಅಂತ್ಯದಲ್ಲಿ ಅಥವಾ ಹದಿನಾಲ್ಕನೇ ಶತಮಾನದ ಆರಂಭದಲ್ಲಿ ನಿರ್ಮಿಸಿರಬೇಕು. ವಿಜಯನಗರದ ಕಲಾಕಾರರು ಕದಳಿಪುಷ್ಪ ಬೋದಿಗೆಯನ್ನು ಅಭಿವೃದ್ಧಿಪಡಿಸಿದರು. ಇದು ವಿಜಯನಗರ ದೇವಾಲಯಗಳ ಪ್ರಮುಖ ಮತ್ತು ವಿಶಿಷ್ಟ ಲಕ್ಷಣವಾಯಿತು. ಇದು ಹದಿನಾರನೇ ಶತಮಾನದ ವೇಳೆಗೆ ಕದಳಿ ಪುಷ್ಪ ಬೋದಿಗೆ ವಿಸ್ತೃತವಾಗಿ ಅಲಂಕೃತವಾಯಿತು. ಈ ತೆರನಾದ ಕಂಬಗಳು ನಿರ್ದಿಷ್ಟ ವರ್ಗವಾಗಿ ಬೆಳವಣಿಗೆಯಾಯಿತು. ವಿಜಯನಗರದ ಬಹುತೇಕ ಉನ್ನತ ದೇವಾಲಯಗಳಲ್ಲಿ ಪುಷ್ಪ ಬೋದಿಗೆಯ ಕಂಬಗಳನ್ನು ನಿರ್ಮಿಸಲಾಗಿದೆ.[9]

IV ಸಂಯುಕ್ತ ಸ್ತಂಭಗಳು

ಸಂಯುಕ್ತ ಸ್ತಂಭಗಳು ಅಗಾಧ ಶಿಲ್ಪಸಮೃದ್ಧಿ ಮತ್ತು ಜೈವಿಕ ಅಂಶಗಳಿಂದ ವಿಜಯನಗರದ ದೇವಾಲಯದಲ್ಲೇ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿವೆ. ಇವು ಮೂಲತಃ ವಿಜಯನಗರದ ಕಲಾಕಾರರ ಅಸದೃಶ ಕೊಡುಗೆಗಳು. ಈ ಸ್ತಂಭಗಳಲ್ಲಿ ಉಪಸ್ತಂಭಗಳು (Colonnettes) ಮತ್ತು ಪೌರಾಣಿಕ ಪ್ರಾಣಿಗಳನ್ನು ಮೂಲ ಸ್ತಂಭದಿಂದ, ಸ್ತಂಭದ ಎತ್ತರಪ್ಕೂ ಮುಂಚಾಚಿದಂತೆ ಕೆತ್ತಿರುತ್ತದೆ. ಇದರ ಮೂಲ ಕಂಬವನ್ನು ಮೂರು ಘನಾಕೃತಿಗಳಾಗಿ ವಿಭಜಿಸಲಾಗಿರುತ್ತದೆ. ವಿಭಜಿತ ಭಾಗಗಳು 8-16-8 ಮುಖಗಳ ಲಂಬ ಪಟ್ಟಿಗಳಿಂದ ಅಲಂಕೃತವಾಗಿರುತ್ತವೆ. ಈ ಘನಾಕೃತಿಗಳನ್ನು ದೇವ -ದೇವತೆಗಳ ಉಬ್ಬುಗೆತ್ತನೆಗಳಿಂದ ಸಿಂಗರಿಸಲಾಗಿದೆ. ಸಂಯುಕ್ತ ಸ್ತಂಭಗಳನ್ನು ಏಕಶಿಲೆಯಿಂದ ಕಡೆಯಲಾಗಿದೆ. ವಿಜಯನಗರದ ದೇವಾಲಯಗಳ ಮಹಾರಂಗಮಂಟಪ ಗಳು ಸ್ತಂಭರಾಜಿಯಿಂದ ಕೂಡಿರುತ್ತವೆ. ಈ ಸ್ತಂಭರಾಜಿಯಲ್ಲಿ ಬಾಹ್ಯ ಪಂಕ್ತಿಗಳು ಸಂಯುಕ್ತ ಸ್ತಂಭಗಳಿಂದ ಆವೃತವಾಗಿರುತ್ತವೆ ಹಾಗೂ ದೇವಾಲಯದ ಸುತ್ತಲಿನ ಆವರಣಕ್ಕೆ ಅಭಿಮುಖವಾಗಿರುತ್ತವೆ. ಕೆಲವೊಮ್ಮೆ ಮಹಾರಂಗಮಂಟಪ ಅಥವಾ ಕಲ್ಯಾಣಮಂಟಪದ

ಒಳಭಾಗದಲ್ಲೂ ಸಂಯುಕ್ತ ಸ್ತಂಭಗಳಿದ್ದು, ಅವು ಆಯಾಮಂಟಪ ಗಳ ಒಳ ಆವರಣ ವನ್ನು ನೋಡುತ್ತಿರುತ್ತವೆ. ಅತ್ಯಂತ ಸುಂದರವಾದ ಸಂಯುಕ್ತ ಸ್ತಂಭಗಳನ್ನು ಹಂಪಿಯ ವಿರೂಪಾಕ್ಷ, ವಿಠಲ, ಕೃಷ್ಣ, ತಿರುವೆಂಗಳನಾಥ ದೇವಾಲಯ ಗಳಲ್ಲಿ, ಕೋಲಾರದ ಸೋಮೇಶ್ವರ ದೇಗುಲ, ಗುಂಡ್ಲುಪೇಟೆಯ ವಿಜಯನಾರಾಯಣ, ಶೃಂಗೇರಿಯ ವಿದ್ಯಾಶಂಕರ, ಅನಂತಶಯನ ಗುಡಿಯ ಅನಂತ ಪದ್ಮನಾಭ, ಕಮಲಾ ಪುರದ ಮಾಲ್ಯ ವಂತ ರಘುನಾಥ, ಮತ್ತು ಕಮಲಾಪುರ ರಘುನಾಥ (ಪಟ್ಟಾಭಿರಾಮ) ಮುಂತಾದ ದೇವಾಲಯಗಳಲ್ಲಿ ಕಾಣಬಹುದು. ಸಂಯುಕ್ತ ಸ್ತಂಭಗಳಲ್ಲೂ ಹಲವಾರು ಉಪಮಾದರಿಗಳನ್ನು ಈ ಕೆಳಕಂಡಂತೆ ವರ್ಗೀಕರಿಸಬಹುದು.

A. ಉಪಸ್ತಂಭಗಳಿಂದ ಕೂಡಿದ ಸಂಯುಕ್ತ ಸ್ತಂಬಗಳು : ಸಂಯುಕ್ತ ಸ್ತಂಭದ ಕಾಂಡವು (Shaft) ನಿರ್ದಿಷ್ಟ ವರ್ಗದ ಸ್ತಂಭಗಳಂತೆ (Standard Type) ಇದ್ದು, ಮೂರು ಘನಾಕೃತಿಯನ್ನು ಒಳಗೊಂಡಿರುತ್ತದೆ. ಈ ಸ್ತಂಭವು ಒಂದರಿಂದ ನಾಲ್ಕು ಉಪಸ್ತಂಭಗಳನ್ನು ಪಡೆದಿರುತ್ತದೆ. ಇವು ಕಾಂಡದಿಂದ ಮುಂಚಾಚಿದ್ದು, ಇವುಗಳ ಪೀಠವೂ ಸಹ ಕಾಂಡದ ಪೀಠದಿಂದ ಮುಂದೆ ವಿಸ್ತರಣೆ ಆಗಿರುತ್ತದೆ. ಉಪಸ್ತಂಭಗಳ ಪೀಠವು ಕುಳಿತ ಸಿಂಹಗಳ ಉಬ್ಬುಗೆತ್ತನೆಯಿಂದ ಅಲಂಕೃತವಾಗಿರುತ್ತದೆ. ಉಪಸ್ತಂಭಗಳು ಹ್ರಸ್ವ ಚಿತ್ರಗಳಿಂದ ಅಲಂಕೃತವಾದ ಪೀಠ, ಅಷ್ಟಮುಖ ಪಟ್ಟಿಗಳಿಂದ ರೂಪಿತವಾದ ಸಪೂರವಾದ ಕಾಂಡ ಮತ್ತು ಬೋದಿಗೆ (Capitals) ಯಿಂದ ಕೂಡಿರುತ್ತದೆ. ಬೋದಿಗೆಯು ಮಾಲಬಂಧ, ಅಷ್ಟಮುಖ ಕುಂಬ, ಪಾಲಿ ಮತ್ತು ಫಲಕಗಳಿಂದ ಅಲಂಕೃತವಾಗಿರುತ್ತವೆ. ಉಪಸ್ತಂಭಗಳ ಮೇಲೆ ಸುರುಳಿ ಅಲಂಕಾರದಿಂದ ಕೂಡಿದ ಬೋದಿಗೆಯನ್ನು ಚಿತ್ರಿಸಲಾಗಿರುತ್ತದೆ. ಉಪಸ್ತಂಭದ ಈ ಭಾಗದಲ್ಲಿ ಪ್ರಸ್ತಾರ (Entablature) ಇರುತ್ತದೆ. ಮೂರು ಉಪಸ್ತಂಭಗಳಿರುವ ಸಂಯುಕ್ತ ಸ್ತಂಭವನ್ನು ಮಹಾರಂಗ ಮಂಟಪ ಮತ್ತು ಕಲ್ಯಾಣ ಮಂಟಪದ ಮೂಲೆಗಳಲ್ಲಿ ಇಡಲಾಗಿರುತ್ತದೆ. ಸಂಯುಕ್ತ ಸ್ತಂಭಗಳನ್ನು ಹಂಪಿಯ ದೇಗುಲಗಳು, ಶೃಂಗೇರಿಯ ವಿದ್ಯಾಶಂಕರ, ಕೋಲಾರದ ಸೋಮೇಶ್ವರ ಅನಂತಶಯನ ಗುಡಿಗಳಲ್ಲಿ ಕಾಣಬಹುದು. ಕಲ್ಯಾಣ ಮಂಟಪಗಳಲ್ಲಿ ಉಪಸ್ತಂಭಗಳ ಬದಲಿಗೆ ಶಿಲಾಬಾಲಿಕೆಯರನ್ನು ಇಡಲಾಗಿರುತ್ತದೆ. ಇಂತಹ ಉದಾಹರಣೆಗಳನ್ನು ಕೋಲಾರದ ಸೋಮೇಶ್ವರ ಮತ್ತು ನಂದಿಯ ಭೋಗನಂದಿ ದೇವಾಲಯಗಳ ಕಲ್ಯಾಣಮಂಟಪಗಳಲ್ಲಿ ಕಾಣಬಹುದು.

ಗಜಯಾಳಿ ಸ್ತಂಭಗಳು

ಈ ಸ್ತಂಭಗಳಲ್ಲಿ ಕಾಂಡದ ಭಾಗ ನಿರ್ದಿಷ್ಟ ವರ್ಗದ ಸ್ತಂಭದಂತೆ ಇರುತ್ತದೆ. ಉಪಸ್ತಂಭಗಳ ಬದಲು ಕಾಂಡದ ಮುಂದೆ ಚಾಚಿರುವ ಪೂರ್ಣ ಪ್ರಮಾಣದ ಗಜಯಾಳಿ ಶಿಲ್ಪಗಳು ಇರುತ್ತವೆ. ಇವು ಮುಂಗಾಲನ್ನು ಮೇಲೆತ್ತಿ ತೆರೆದ ದವಡೆಯೊಂದಿಗೆ

ವೀರಾವೇಶವನ್ನು ವ್ಯಕ್ತಪಡಿಸುತ್ತಿರುವಂತೆ ಕಾಣುತ್ತವೆ. ಗಜಯಾಳಿಯ ಪಾದದಡಿಯಲ್ಲಿ ಮಕರ ಪ್ರಾಣಿಗಳಿದ್ದು, ಅದರ ಮೇಲೆತ್ತಿದ ಬಾಯಿಯಿಂದ ಸುರುಳಿಯಲಂಕಾರ ಹೊರಬಂದಂತೆ ಚಿತ್ರಿತವಾಗಿರುತ್ತದೆ. ಯಾಳಿಯು ಸಿಂಹದ ಮುಖ ಮತ್ತು ಆನೆಯ ಸೊಂಡಿಲನ್ನು ಹೊಂದಿದೆ. ಮಕರಗಳು ಕಾಂಡದಿಂದ ಮುಂಚಾಚಿದ ತ್ರಿಪಟ್ಟಿಕೆಯ ಪೀಠದ ಮೇಲಿವೆ. ಗಜಯಾಳಿಯ ಮೇಲೆ ಹ್ರಸ್ವ ಪ್ರಸ್ತಾರವಿದ್ದು, ಅದರ ಮೇಲೆ ನಿರ್ದಿಷ್ಟ ಅಂತರದಲ್ಲಿ ಕೀರ್ತಿಮುಖಕೂಡುಗಳನ್ನು ಅಲಂಕರಿಸಲಾಗಿರುತದೆ. ಕೀರ್ತಿಮುಖ ಪಟ್ಟಿಕೆಯನ್ನು ಎತ್ತಿ ಹಿಡಿದಂತೆ ವೀರರು ಅಥವಾ ದೇವಗಣವನ್ನು ಚಿತ್ರಿಸಿರುವುದುಂಟು. ಇದರ ಮೇಲೆ ಪುಷ್ಪ ಅಥವಾ ವರ್ಣಗಳು ಸುರುಳಿಯ ಚಿತ್ರಣದಿಂದ ಕೂಡಿದ ಬೋದಿಗೆಗಳು ಇರುತ್ತವೆ. ಇವಿಷ್ಟನ್ನು ಒಂದೇ ಶಿಲೆಯಿಂದಲೇ ಕೊರೆದು ಮಾಡಿರಲಾಗುತ್ತದೆ. ಮಹಾರಂಗ ಮಂಟಪಕ್ಕೆ ಪ್ರವೇಶ ಕಲ್ಪಿಸುವಲ್ಲಿ ಎರಡು ಗಜಯಾಳಿ ಸ್ತಂಭಗಳನ್ನು ನಿಲ್ಲಿಸಲಾಗಿರುತ್ತದೆ. ಅದರ ಮುಂದೆ ಸೋಪಾನಗಳಿರುತ್ತವೆ. ಮಹಾರಂಗಮಂಟಪಕ್ಕೆ ಎಲ್ಲೆಲ್ಲಿ ಪ್ರವೇಶಾವ ಕಾಶವಿರುತ್ತದೊ, ಅಲ್ಲೆಲ್ಲ ಎರಡು ಗಜಯಾಳಿ ಸ್ತಂಭಗಳಿರುತ್ತದೆ. ಹಂಪಿಯ ವಿರೂಪಾಕ್ಷ, ವಿಠಲ, ಕೃಷ್ಣ, ಅಚ್ಯುತ, ಕಮಲಪುರ, ಅನಂತಶಯನ ಗುಡಿ ಮುಂತಾದ ಸ್ಥಳಗಳ ವಿಜಯನಗರದ ದೇವಾಲಯಗಳ ಮಹಾರಂಗಮಂಟಪಗಳಲ್ಲಿ ಗಜಯಾಳಿ ಸ್ತಂಭಗಳನ್ನು ಕಾಣಬಹುದು.

ವಿವಿಧ ವಿನ್ಯಾಸದ ಸಂಯುಕ್ತ ಸ್ತಂಭಗಳು : ಸಂಯುಕ್ತ ಸ್ತಂಭಗಳನ್ನು ವಿವಿಧ ವಿನ್ಯಾಸದಲ್ಲಿ ಅತ್ಯಂತ ಆಕರ್ಷಕವಾಗಿ ಕಂಡರಿಸಲಾಗಿದೆ. ಹಂಪಿಯ ವಿಠ್ಠಲ ದೇಗುಲ ಒಂದರಲ್ಲೇ ದಿಗ್ಭ್ರಾಂತಿ ಪಡಿಸುವಷ್ಟು ಸಂಯುಕ್ತ ಸ್ತಂಭಗಳು ರಚನೆ ಆಗಿವೆ. ಕೋಲಾರದ ಸೋಮೇಶ್ವರ ದೇವಾಲಯದಲ್ಲೂ ಬಹು ವಿನ್ಯಾಸಗಳ ಸಂಯುಕ್ತ ಸ್ತಂಭಗಳನ್ನು ಕಾಣಬಹುದು:

1) ಸಂಯುಕ್ತ ಸಂಭದ ನಾಲ್ಕು ಮುಖಗಳಲ್ಲಿ (ದಿಕ್ಕುಗಳಲ್ಲಿ)ಮುಂಚಾಚಿದಂತೆ ಒಂದರಿಂದ ನಾಲ್ಕು ಉಪಸ್ತಂಭಗಳನ್ನು ಕೆತ್ತಲಾಗಿದೆ. ಇವುಗಳನ್ನು ನಾಲ್ಕು ದಿಕ್ಕುಗಳಲ್ಲೂ ಮುಂಚಾಚಿದ ಪೀಠದ ಮೇಲೆ ನಿಲ್ಲಿಸಿದಂತೆ ಕಡೆಯಲಾಗಿದೆ. ಪೀಠಗಳ ಮೇಲೆ ದೇವಗಣಗಳ ಶಿಲ್ಪಗಳನ್ನು ಕೆತ್ತಲಾಗಿದೆ. ಉಪಸ್ತಂಭಗಳ ಮೇಲೆ ಪ್ರಸ್ತರವಿರುತ್ತವೆ.

2) ಸಂಯುಕ್ತ ಸ್ತಂಭದ ಕಾಂಡದ ನಾಲ್ಕು ದಿಕ್ಕುಗಳಲ್ಲಿ ಮುಂಚಾಚಿರುವ ಉಪಸ್ತಂಭಗಳ ಬದಲು ಪೂರ್ಣ ಪ್ರಮಾಣದ ಶಿಲ್ಪಗಳನ್ನು ರೂಪಿಸಿರುವುದುಂಟು. ಹಂಪಿಯ ವಿಠ್ಠಲ ದೇವಾಲಯದಲ್ಲಿ ನರಸಿಂಹ, ತ್ರಿವಿಕ್ರಮ ಮುಂತಾದ ಶಿಲ್ಪಗಳು ಇರುತ್ತವೆ. ಇವುಗಳ ಜೊತೆಗೆ ಸ್ತ್ರೀಯರು, ವಾದ್ಯ ನುಡಿಸುವವರು, ವೀರಾವೇಶದಿಂದ ನುಗ್ಗುವಂತಿರುವ ಕುದುರೆಗಳು ಮುಂತಾದ ಶಿಲ್ಪಗಳನ್ನು ಮೂಡಿಸಿರುತ್ತಾರೆ. ಇವೆಲ್ಲ ವನ್ನು ಒಂದೇ ಶಿಲೆಯಲ್ಲಿ ಕೆತ್ತಿ, ಸಂಯುಕ್ತ ಸ್ತಂಭಗಳನ್ನು ತಯಾರಿಸಿ ರುವುದುಂಟು.

V. ಆಲಂಕಾರಿಕ ಸ್ತಂಭಗಳು

ಈ ಬಗೆಯ ಸ್ತಂಭಗಳು ಚೌಕಾರವಾಗಿ ಸಪೂರವಾಗಿರುವ ಕಾಂಡಗಳನ್ನು ಒಳಗೊಂಡಿರುತ್ತವೆ. ಈ ಸ್ತಂಭಗಳ ನಾಲ್ಕು ಮುಖಗಳ ಮೇಲೆ ದೇವಾಲಯಗಳ ಕಿರುಗಾತ್ರದ ವಿಮಾನಗಳನ್ನು ಲಂಬವಾಗಿ ಮತ್ತು ಸಮಾನಾಂತರ ಪಟ್ಟಿಕೆಗಳಲ್ಲಿ ಸ್ತಂಭದ ಮೇಲೆ ಸ್ವಲ್ಪವೂ ಸ್ಥಳವನ್ನು ಬಿಡದಂತೆ ಕೆತ್ತಿರುತ್ತಾರೆ. ವಿಮಾನದ ಅಧಿಷ್ಠಾನ, ಭಿತ್ತಿ, ದೇವಕೋಷ್ಠ, ಗೋಪುರ -ಇವೆಲ್ಲವೂ ಚಿತ್ರಿತವಾಗಿರುತ್ತವೆ. ಅಲಂಕೃತ ಸ್ತಂಭಗಳನ್ನು ಪೀಠದ ಮೇಲಿಡಲಾಗುತ್ತದೆ ಹಾಗೂ ಸ್ತಂಭದ ಮೇಲ್ತುದಿಯಲ್ಲಿ ಪುಷ್ಪ ಬೋದಿಗೆ ಇರುತ್ತದೆ. ಈ ತೆರನಾದ ಸ್ತಂಭಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆಯುವುದಿಲ್ಲ. ಇವುಗಳನ್ನು ಸಾಮಾನ್ಯವಾಗಿ ಕಲ್ಯಾಣ ಮಂಟಪಗಳಲ್ಲಿ ಕಾಣಬಹುದು. ಹಂಪಿಯ ವಿಠ್ಠಲ ದೇಗುಲದ ಕಲ್ಯಾಣಮಂಟಪದಲ್ಲಿ ವಿರೂಪಾಕ್ಷ ದೇಗುಲದ ಮಹಾರಂಗ ಮಂಟಪದಲ್ಲಿ, ಸಿಂಗಾರದ ಹೆಬ್ಬಾಗಿಲಿನ ಹತ್ತಿರ ಇರುವ ಚಿಕ್ಕ ವೈಷ್ಣವ ದೇವಾಲಯದಲ್ಲಿ, ಕೋಲಾರ ಜಿಲ್ಲೆಯ ವಕ್ಕಲೇರಿಯ ಮಾರ್ಕಂಡೇಶ್ವರ ದೇಗುಲ ಮುಂತಾದ ದೇಗುಲಗಳಲ್ಲಿ ಈ ತೆರನಾದ ಸ್ತಂಭಗಳನ್ನು ನಿಲ್ಲಿಸಲಾಗಿದೆ.

ದೀಪಮಾಲೆಯ ಕಂಬಗಳು

ವಿಜಯನಗರದ ದೇವಾಲಯದ ಸಂಕೀರ್ಣದಲ್ಲಿ ವಿವಿಧ ವಾಸ್ತು ಕಟ್ಟಡಗಳ ರಚನೆಗೆ ಸ್ತಂಭಗಳು ಅಗತ್ಯ ಎಂಬುದು ತಿಳಿದಿದ್ದೇ . ಇವಷ್ಟೇ ಅಲ್ಲದೆ ಪ್ರತ್ಯೇಕವಾಗಿ ಸ್ತಂಭಗಳು ದೇವಾಲಯದ ಸಂಕೀರ್ಣದಲ್ಲಿ ಮತ್ತು ಅದರಾಚೆ ನೋಡಲು ಸಿಗುತ್ತವೆ. ದೀಪಮಾಲೆಯ ಕಂಬಗಳು ವೈವಿಧ್ಯಮಯವಾದ ಮಾದರಿಯಲ್ಲಿ ದೇವಾಲಯದ ಮುಂದೆ ಸ್ಥಾಪನೆ ಆಗಿವೆ. ಉಯ್ಯಾಲೆ ಮಂಟಪದ ಕಂಬಗಳು ಕಲಾತ್ಮಕವಾಗಿ ಅಥವಾ ಸರಳವಾಗಿ, ಕೆಲವೊಮ್ಮೆ ಒರಟಾಗಿ ಇರುವುದುಂಟು. ವಸಂತ ಮಂಟಪಗಳು ಕೊಳದ ಮಧ್ಯೆ ನಾಲ್ಕು ಸ್ತಂಭಗಳಿಂದ ರಚನೆಯಾಗಿ ಸುಂದರ ದೃಶ್ಯಾವಳಿಯನ್ನು ಸೃಜಿಸುವುದುಂಟು.

ವಿಜಯನಗರದ ಕಾಲದಲ್ಲಿ ದೀಪಸ್ತಂಭವನ್ನು ದೇವಾಲಯದ ಮುಂದೆ ದೇವಾಲಯದ ಅಕ್ಷರೇಖೆಯಲ್ಲಿ ಪ್ರತಿಷ್ಠಾಪಿಸುವುದು ಜನಪ್ರಿಯವಾದ ಹಾಗೂ ಪವಿತ್ರವಾದ ಸೇವೆ. ವಿಜಯನಗರದ ದೇವಾಲಯವಷ್ಟೇ ಅಲ್ಲದೆ, ತತ್ ಪೂರ್ವದ ದೇವಾಲಯದ ಮುಂದೆಯೂ, ಅವುಗಳನ್ನು ನಿಲ್ಲಿಸಲಾಗುತ್ತಿತ್ತು. ಇದನ್ನು ರಾಜ ಮನೆತನದವರು, ಅಧಿಕಾರಿಗಳು, ದಂಡನಾಯಕರು, ವರ್ತಕರು ಮತ್ತು ಸಾಮಾನ್ಯ ಜನರು ಸ್ಥಾಪಿಸಿದ್ದರು. ಹಬ್ಬಹರಿದಿನಗಳಲ್ಲಿ ಈ ಕಂಬಗಳ ದೀಪಗಳನ್ನು ಬೆಳಗಿಸಲಾಗು ತ್ತಿತ್ತು.

ದೀಪಮಾಲೆಯ ಕಂಬಗಳು ಅಥವಾ ದೀಪಸ್ತಂಭಗಳನ್ನು ಏಕಶಿಲೆಯಲ್ಲಿ ನಿರ್ಮಿಸಲಾಗುತ್ತಿತ್ತು. ಇವುಗಳನ್ನು ವೇದಿಕೆಯ ಮೇಲೆ ನಿಲ್ಲಿಸಲಾಗುತ್ತಿತ್ತು. ವೇದಿಕೆಯು ಅಧಿಷ್ಠಾನವನ್ನೂ, ಕೆಲವೊಮ್ಮೆ ಉಪಪೀಠವನ್ನೂ ಹೊಂದಿರುತ್ತಿತ್ತು. ದೀಪಮಾಲೆಯ

ಸ್ತಂಭಗಳು ವಿಭಿನ್ನ ವಿನ್ಯಾಸಗಳಲ್ಲಿ ರಚನೆ ಆಗಿವೆ. ಇವು ಚೌಕಾಕಾರದ ಪೀಠವನ್ನು ಮೇಲೇರಿದಂತೆ ಚೌಕಾಕಾರದಿಂದ ಅಷ್ಟಮುಖ ಆಕಾರದವರೆಗೆ ಸಪೂರವಾಗಿ ಇರುವ ಕಾಂಡವನ್ನು ಹೊಂದಿರುತ್ತವೆ. ಈ ತೆರನಾದ ದೀಪಸ್ತಂಭವನ್ನು ಕೋಲಾರದ ಸೋಮೇಶ್ವರ, ಹೊಸಕೋಟೆಯ ಆಂಜನೇಯ, ಹಂಪಿಯ ಹೇಮಕೂಟದ ಶೈವ ದೇಗುಲಗಳ, ನಾಗಮಂಗಲದ ಕೇಶವ ಮುಂತಾದ ದೇವಾಲಯಗಳ ಮುಂದೆ ನಿಲ್ಲಿಸಲಾಗಿದೆ. ಕೆಲಸ್ತಂಭಗಳಲ್ಲಿ ಚೌಕಾಕಾರ ಮತ್ತು ಅಷ್ಟಮುಖ ಭಾಗಗಳನ್ನು ಒಂದಾದ ಮೇಲೆ ಮತ್ತೊಂದರಂತೆ ಮೂಡಿಸಲಾಗಿರುತ್ತದೆ. ಇವು ಕಂಬಗಳನ್ನು ಹತ್ತುವುದಕ್ಕೆ ಅವಕಾಶವನ್ನು ಕಲ್ಪಿಸುತ್ತವೆ. ಈ ಬಗೆಯ ಸ್ತಂಭಗಳನ್ನು ಹಂಪಿಯ ವಿರೂಪಾಕ್ಷ ಮತ್ತು ನರಸಿಂಹ, ಕೋಲಾರ ಜಿಲ್ಲೆಯ ಇರುಗಪ್ಪನ ಹಳ್ಳಿ ಮುಂತಾದ ಸ್ಥಳಗಳಲ್ಲಿ ಕಾಣಬಹುದು. ಅನೇಕ ಸ್ತಂಭಗಳಲ್ಲಿ ಮೇಲೆ ಹತ್ತುವುದಕ್ಕೆ ಅನುವಾಗುವಂತೆ ಸಣ್ಣ ಸಣ್ಣ ಮುಂಚಾಚುವಿನ ಕುಪ್ಪೆಗಳನ್ನು ರೂಪಿಸಿರುತ್ತಾರೆ. ಇಂತಹ ವಿನ್ಯಾಸದ ಕಂಬಗಳನ್ನು ಹಂಪಿಯ ಉದ್ದಾನ ವೀರಭದ್ರ (ಅಥವಾ ಮುದ್ದು ವೀರಣ್ಣ) ಮುಂತಾದ ದೇಗುಲಗಳಲ್ಲಿ ಕಾಣಬಹುದು. ದೀಪಮಾಲೆಯ ಸ್ತಂಭಗಳು ಮೂರರಿಂದ ಹದಿನಾಲ್ಕು ಮೀಟರ್‌ಗಳವರೆಗೆ ಎತ್ತರವಾಗಿರುವುದುಂಟು. ಇವುಗಳನ್ನು ಗ್ರ್ಯಾನೈಟ್ ಕಗ್ಗಲ್ಲಿನಿಂದ ಮಾಡಲಾಗುತ್ತದೆ. ಕಂಬಗಳ ತುದಿಯಲ್ಲಿ ಕಬ್ಬಿಣದ ದೀಪಗಳನ್ನು ಹಾಕಿ ಭದ್ರಪಡಿಸಿರುತ್ತಾರೆ. ಇಂತಹ ಕಬ್ಬಿಣದ ದೀಪಮಾಲೆಯನ್ನು ಹಂಪಿಯ ವಿರೂಪಾಕ್ಷ ದೇಗುಲದ ತೇರು ಬೀದಿಯ ಕೊನೆಯ ಅಂಚಿನಲ್ಲಿ, ಬಸವಣ್ಣನ ಮುಂದೆ ಇರುವ ಕಂಬದಲ್ಲಿ ಇಂದಿಗೂ ನೋಡಲು ಸಿಗುತ್ತದೆ. ಅಲ್ಲಿನ ವಿಠ್ಠಲ ದೇವಾಲಯದ ಮುಂದೆ ಸುಂದರವಾದ ದೀಪಸ್ತಂಭ ಮತ್ತು ಅದರ ಕುಡಿಯಲ್ಲಿ ಕಬ್ಬಿಣದ ದೀಪಗಳು ಹತ್ತೊಂಬತ್ತನೇ ಶತಮಾನದವರೆಗೂ ಇದ್ದವು.[10] ಇಂದು ಈ ಸ್ತಂಭ ತುಂಡುಗಳಾಗಿ ಮುರಿದ ದೇವಾಲಯದ ಮುಂದೆ ಬಿದ್ದಿದೆ.

ವಿಜಯನಗರ ಸಾಮ್ರಾಜ್ಯದ ಆರಂಭದ ಕಾಲದಲ್ಲಿ ನಿರ್ಮಾಣವಾದ ಸ್ತಂಭಗಳು ಒರಟಾಗಿವೆ. [11] ಇವುಗಳನ್ನು ಸರಳವಾಗಿ ರಚಿಸಿದ ವೇದಿಕೆಯ ಮೇಲೆ ನಿಲ್ಲಿಸಲಾಗಿದೆ. ಕೆಳಭಾಗದಲ್ಲಿ ಆಯತಾಕಾರದ ಭಾಗವನ್ನು, ಮೇಲೆ ಘನಾಕೃತಿ ಮತ್ತು ಅಷ್ಟಮುಖಾಕೃತಿಗಳು ಒಂದರ ಮೇಲೆ ಮತ್ತೊಂದು ಬರುವಂತೆ ವಿನ್ಯಾಸಗೊಳಿಸಲಾಗಿದೆ. ತುದಿಯಲ್ಲಿ ತಾಡಿ, ಪಾಲಿ ಮತ್ತು ಫಲಕವನ್ನು ವಿನ್ಯಾಸಗೊಳಿಸಲಾಗಿದೆ. ಫಲಕದ ನಾಲ್ಕು ಮೂಲೆಗಳಲ್ಲಿ ದೀಪಗಳನ್ನು ನೇತುಹಾಕಲು ಕಬ್ಬಿಣದ ಕೊಕ್ಕೆಗಳನ್ನು ಹಾಕಲಾಗಿದೆ. ಇಂತಹ ಕಂಬಗಳನ್ನು ವಿಜಯನಗರ ಸ್ಥಾಪನೆಯಾದ ಐವತ್ತು ವರ್ಷಗಳವರೆಗೂ ನಿರ್ಮಿಸಲಾಗುತ್ತಿತ್ತು.

ಹದಿನಾಲ್ಕನೇ ಶತಮಾನದ ಅಂತ್ಯದ ವೇಳೆಗೆ ಕಂಬದ ವಿನ್ಯಾಸದ ಬದಲಾವಣೆ ಕಾಣಿಸಿಕೊಂಡಿತು. ಹೇಮಕೂಟದ ಎರಡಂತಸ್ತಿನ ಕಟ್ಟಡದ ಹಿಂದೆ ಇರುವ ದೀಪಸ್ತಂಭಕ್ಕೆ

ಅಧಿಷ್ಠಾನವನ್ನು ಒದಗಿಸಿದೆ. ಕಂಬದ ಕೆಳಭಾಗದಲ್ಲಿ ಆಯತಾಕಾರದ ಭಾಗ, ಮೇಲೇರಿದಂತೆ ಸಪೂರವಾದ ಅಷ್ಟಮುಖ ಲಂಬ ಪಟ್ಟಿಕೆಗಳ ಭಾಗವನ್ನು ವಿನ್ಯಾಸಗೊಳಿಸಲಾಗಿದೆ.[12] ಇದೇ ತೆರನಾದ ಕಂಬವನ್ನು ಒಂದನೇ ದೇವರಾಯನ ಮಂತ್ರಿಯಾದ ಬೈಚ ದಂಡ ನಾಯಕನು ಬೇಲೂರಿನ ಚೆನ್ನಕೇಶವ ದೇವಾಲಯದ ಸಂಕೀರ್ಣದಲ್ಲಿ ನಿರ್ಮಿಸಿದ.[13] ಇದರಲ್ಲಿ ದೀಪಸ್ತಂಭಗಳ ರಚನೆಯಲ್ಲಾದ ಪ್ರಗತಿಯನ್ನು ಗುರುತಿಸಬಹುದು.

ಹೇಮಕೂಟದ ಮೇಲೆ ಮತ್ತೊಂದು ದೀಪದ ಕಂಬವಿದೆ. ಇದನ್ನು ಕ್ರಿ. ಶ. 1428 ರಲ್ಲಿ ಪ್ರಖ್ಯಾತ ಮಾಧವ ಮಂತ್ರಿ ಮಗ ಶಶಿಧರನು ಸ್ಥಾಪಿಸಿದ. [14] ಇದರ ವಿನ್ಯಾಸ ಮತ್ತಷ್ಟು ಸುಧಾರಿಸಿದೆ. ಇದನ್ನು ಚೌಕಾಕಾರದ ವೇದಿಕೆಯ ಮೇಲೆ ನಿಲ್ಲಿಸಿದೆ. ಕಂಬದ ಎತ್ತರಕ್ಕೆ ಲಂಬವಾಗಿ ಅರ್ಧ ಭಾಗದಲ್ಲಿ ಚೌಕಾಕಾರ ಮತ್ತು ಅಷ್ಟಮುಖ ಆಕಾರಗಳನ್ನು ಒಂದರ ಮೇಲೆ ಮತ್ತೊಂದು ಬರುವಂತೆ ರೂಪುಗೊಳಿಸಲಾಗಿದೆ. ಇನ್ನರ್ಧ ಭಾಗದಲ್ಲಿ ಅಷ್ಟಮುಖ ಮತ್ತು ಹದಿನಾರು ಮುಖದ ಪಟ್ಟಿಗಳು ಸಪೂರವಾಗಿ ಕೆಳಗಿರಿಸಿದ ಮೇಲಿನವರೆಗೂ ಸಾಗುತ್ತವೆ. ಇದರ ತುದಿಯಲ್ಲಿ ಮೂಲಬಂಧ, ತಾಡಿ, ಪಾಲಿ ಮತ್ತು ಫಲಕಗಳಿವೆ.

ಕ್ರಿ.ಶ.1450 ರ ನಂತರ ಚಲುವಿನ ದೀಪಸ್ತಂಭಗಳು ರಚನೆ ಆದವು. ಅಲಂಕಾರವಾಗಿ ವಿಸ್ತೃತಗೊಳಿಸಿದ ಅಧಿಷ್ಠಾನಗಳನ್ನು ಸ್ತಂಭಗಳಿಗೆ ಒದಗಿಸಲಾಯಿತು. ಕೆಲವೊಮ್ಮೆ ಅಧಿಷ್ಠಾನಗಳಿಗೆ ಉಪಪೀಠಗಳನ್ನು ಸಹ ಅಳವಡಿಸಲಾಗಿದೆ. ಕಂಬಗಳ ಕೆಳಭಾಗ ಚೌಕಾಕಾರ ಅಥವಾ ಆಯತಾಕಾರದಲ್ಲಿದ್ದು ಮೇಲ್ಭಾಗವು ಲಂಬವಾದ ಅಷ್ಟಮುಖ ಪಟ್ಟಿಗಳಿಂದ ಕೂಡಿರುತ್ತವೆ. ಈ ಪಟ್ಟಿಗಳು ಪರ್ಣಸಮೂಹಗಳ ಸುರುಳಿ ಅಲಂಕಾರಗಳಿಂದ ಆವೃತವಾಗಿರುತ್ತವೆ. ಕಂಬದ ತುದಿಯಲ್ಲಿ ಕುಂಬ, ಪಾಲಿ ಫಲಕ ಗಳಿರುತ್ತವೆ. ಫಲಕಕ್ಕೆ ಕಬ್ಬಿಣದ ದೀಪಗಳನ್ನು ನೇತುಹಾಕಿರುತ್ತಾರೆ. ಇದೊಂದು ದೀಪ ಸ್ತಂಭಗಳ ನಿರ್ದಿಷ್ಟ ಮಾದರಿಯಾಗಿ ಜನಪ್ರಿಯವಾಗಿದೆ. ಇಂತಹ ಸುಂದರ ಕಂಬಗಳನ್ನು ಚದುರಿದಂತೆ ಕರ್ನಾಟಕದಲ್ಲಿ ಕಾಣಬಹುದು. ತುಮಕೂರು ಜಿಲ್ಲೆಯ ಪಂಕಜನಹಳ್ಳಿಯ ಮಲ್ಲಿಕಾರ್ಜುನ, ಹಂಪಿಯ ರಾಮಚಂದ್ರ, ವಿಠ್ಠಲ, ನಾಗಮಂಗಲದ ಕೇಶವ, ಸಂಪಿಗೆಯ ಮಲ್ಲಿಕಾರ್ಜುನ, ತೆರಕಣಾಂಬಿಯ ವರದರಾಜ, ತ್ರ್ಯಯಂಬಕರಪುರದ ತ್ರ್ಯಯಂಬಕೇಶ್ವರ ಮುಂತಾದ ದೇಗುಲಗಳಲ್ಲಿ ಈ ತೆರನಾದ ದೀಪಸ್ತಂಭಗಳನ್ನು ಕಾಣಬಹುದು.

ಚಾಮರಾಜ ನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೋಕಿನ ತ್ರ್ಯಯಂಬಕಪುರದ ತ್ರ್ಯಯಂಬಕೇಶ್ವರ ದೇವಾಲಯದ ಮುಂದೆ ವಿಶಿಷ್ಟವಾದ ರೀತಿಯಲ್ಲಿ ದೀಪಸ್ತಂಭವನ್ನು ಸ್ಥಾಪಿಸಲಾಗಿದೆ. ಕಂಬವನ್ನು ಎತ್ತರವಾದ ಅಧಿಷ್ಠಾನದ ಮೇಲೆ ನಿಲ್ಲಿಸಲಾಗಿದೆ. ಇದು ಸುಮಾರು 14 ಮೀಟರುಗಳಷ್ಟು ಎತ್ತರವಿದೆ. ಕೆಳಭಾಗದಲ್ಲಿ ಚೌಕಾಕಾರದ ಭಾಗ, ಮೇಲೆ ಹದಿನಾರು ಮುಖದ ಲಂಬ ಪಟ್ಟಿಕಗಳಿಂದ ಕೂಡಿದ ಸಪೂರವಾದ ಭಾಗ ಹಾಗೂ

ಮೂಲಬಂಧ, ತಾಡಿ, ಪಾಲಿ, ಫಲಕ ಮತ್ತು ಕಬ್ಬಿಣದ ದೀಪಗಳು, ಇವುಗಳನ್ನು ಈ ದೀಪಸ್ತಂಭದಲ್ಲಿ ಅಳವಡಿಸಲಾಗಿದೆ. ಕೆಳಗಿನ ಚೌಕಾಕಾರದ ಮೇಲೆ ವಾದ್ಯಗಳನ್ನು ನುಡಿಸುತ್ತಿರುವ ಪುರುಷರು ಮತ್ತು ನೃತ್ಯಗಾತಿಯರನ್ನು ಚಿತ್ರಿಸಲಾಗಿದೆ. ಈ ಚಿತ್ರಣಗಳ ಉಬ್ಬುಗೆತ್ತನೆ ಬಹುಮಟ್ಟಿಗೆ ಹಂಪಿಯ ರಾಮಚಂದ್ರ ದೇಗುಲ ಪ್ರಾಕಾರದ ಬಾಹ್ಯ ಭಾಗದಲ್ಲಿ ರಚಿಸಿರುವ ಚಿತ್ರಣವನ್ನು ಹೋಲುತ್ತವೆ. ಸ್ತಂಭದ ಅಧಿಷ್ಠಾನ ಅಥವಾ ವೇದಿಕೆಯ ನಾಲ್ಕು ಮೂಲೆಗಳನ್ನು ಆರಡಿ ಎತ್ತರ ಸ್ತಂಭಗಳನ್ನು ನಿಲ್ಲಿಸಿ, ಮಂಟಪವನ್ನು ರಚಿಸಲಾಗಿದೆ. ಮಂಟಪದ ಮಾಡಿನ ಮಧ್ಯದಲ್ಲಿ ದೀಪಸ್ತಂಭ ತೂರಿ, ಮೇಲೇರಿದಂತೆ ಕಾಣುತ್ತದೆ. ಇಂತಹ ವಿಲಕ್ಷಣ ಸ್ತಂಭವನ್ನು ಕರ್ನಾಟಕದ ಯಾವ ಭಾಗದಲ್ಲೂ ಕಾಣುವುದಿಲ್ಲ. ಹಿರಿಯೂರಿನ ತೇರುಮಲ್ಲೇಶ್ವರ ದೇವಸ್ಥಾನದ ದೀಪಸ್ತಂಭ ಕಲಾತ್ಮಕ ವಾದುದು. ಇದು 14 ಮೀಟರ್‌ಗಳಷ್ಟು ಎತ್ತರವಾಗಿದೆ. ಇದು ಅಧಿಷ್ಠಾನ ಮತ್ತು ಉಪಪೀಠದ ಮೇಲೆ ನಿಲ್ಲಿಸಲಾಗಿದೆ. ಸ್ತಂಭದ ಕೆಳಭಾಗವು ಆಯತಾಕಾರ ವಾಗಿಯೂ, ಮೇಲ್ಭಾಗ ಅಷ್ಟಮುಖ ಮತ್ತು ಹದಿನಾರು ಮುಖಗಳ ಲಂಬ ಪಟ್ಟಿಕೆಗಳಿಂದ ಕೂಡಿ ಸಪೂರವಾಗಿದೆ. ತುದಿಯಲ್ಲಿ ನಾಲ್ಕು ಕಂಬಗಳಿಂದ ಕೂಡಿದ ಸಣ್ಣ ಮಂಟಪದ ಆಕೃತಿ ಇದ್ದು, ಇದರಲ್ಲಿ ನಂದಿಯನ್ನು ಇಡಲಾಗಿದೆ. ಇದಕ್ಕೆ ಎಂಟು ಕಬ್ಬಿಣದ ದೀಪ ಗಳನ್ನು ಸೇರಿಸಲಾಗಿದೆ. ಕೆಳಗಿನಿಂದ ಕಂಬದ ಉದ್ದಕ್ಕೂ ಕಂಬದಲ್ಲಿ ಕುಪ್ಪೆಗಳ ಮುಂಚಾಚುಗಳಿವೆ. ಇವು ಹತ್ತುವುದಕ್ಕೆ ಮೆಟ್ಟಿಲುಗಳ ರೀತಿಯಲ್ಲಿ ಸಹಕಾರಿಯಾಗಿವೆ. ಹಂಪಿಯ ಮುದ್ದು ವೀರಣ್ಣ (ಅಥವಾ ಉದ್ಧಾನ ವೀರಭದ್ರ) ದೇಗುಲದ ದೀಪಸ್ತಂಭವು ಹಿರಿಯೂರಿನ ತೇರುಮಲ್ಲೇಶ್ವರ ದೇಗುಲದ ದೀಪಸ್ತಂಭದಂತೆ ಇದೆ. ಆದರೆ ಇದು ಆಕೃತಿಯಲ್ಲಿ ಚಿಕ್ಕದು.

ಉಪಸಂಹಾರ

ವಿಜಯನಗರ ಕಾಲದ ದೇವಾಲಯಗಳ ಸ್ತಂಭಗಳು ಅಲ್ಲಿನ ವಾಸ್ತುವಿನ ಪ್ರಮುಖ ಲಕ್ಷಣಗಳು. ಇವು ದೇವಾಲಯಗಳ ಜೈವಿಕ ಅಂಶಗಳು ಆಗಿವೆ. ಇವು ದೇವಾಲಯದ ವಾಸ್ತುವಿನ (Tectonic) ರಚನೆಯ ಅಗತ್ಯ ಅಂಶಗಳಾಗಿವೆ. ದೇವಾಲಯಗಳು ಪೂರ್ಣ ವಾಗಿ ನಿಂತಿರುವುದು ಕಂಬಗಳ ಮೇಲೆ. ಅದೇ ಸಮಯದಲ್ಲಿ ದೇವಾಲಯದ ಚಲುವಿನ ಅಂಶಗಳೂ ಆಗಿವೆ. ಆದ್ದರಿಂದ ಬೇರಾವುದೇ ಪ್ರಾದೇಶಿಕ ಶೈಲಿಯಲ್ಲಿ ಕಾಣಬರದಷ್ಟು ಸ್ತಂಭಗಳ ಮಾದರಿಯನ್ನು ವಿಜಯನಗರದ ಕಾಲದಲ್ಲಿ ಕಾಣಬಹುದು. ದೇವಾಲಯಗಳ ಶಿಲ್ಪಿ ಸಂಪತ್ತು ಕಿಕ್ಕಿರಿದು ರಚನೆ ಆಗಿರುವುದು ಕಂಬಗಳ ಮೇಲೆ ಹೊಯ್ಸಳ ದೇವಾಲಯ ಗಳಲ್ಲಿ ಗೋಡೆಗಳನ್ನು ಶಿಲ್ಪ ರಚನೆಗೆ ಮಾಧ್ಯಮವಾಗಿ ಬಳಸಿಕೊಂಡರೆ, ವಿಜಯನಗರದ ರೂವಾರಿಗಳು ಸ್ತಂಭಗಳು ಘನಾಕೃತಿಗಳನ್ನು ಶಿಲ್ಪ ನಿರೂಪಣೆಗೆ ಮಾಧ್ಯಮವಾಗಿ ಬೆಳೆಸಿ ಕೊಂಡರು. ಆದ್ದರಿಂದ ವಿಜಯನಗರದ ಸ್ತಂಭಗಳು ವಾಸ್ತು ಮತ್ತು ಶಿಲ್ಪ ಎರಡು ಅಂಶಗಳನ್ನು ತನ್ನಲ್ಲಿ ಮೇಳವಿಸಿಕೊಂಡಿವೆ. ಸಂಯುಕ್ತ ಸ್ತಂಭಗಳು ವಿಜಯನಗರದ

ಅನುಪಮ ಕೊಡುಗೆಗಳಾಗಿವೆ. ಇದು ಮುಂದೆ ತಮಿಳುನಾಡಿನಲ್ಲಿ ವಿಸ್ತೃತವಾದ ಬೆಳವಣಿಗೆಯನ್ನು ಕಂಡರೆ, ಕರ್ನಾಟಕದಲ್ಲಿ ವಿಜಯನಗರದ ಪತನದೊಂದಿಗೆ ಕಣ್ಮರೆ ಯಾಯಿತು. ದೇವಾಲಯಗಳ ವಾಸ್ತುವಿಗೆ ಪೂರಕವಾಗಿ ಅಷ್ಟೇ ಅಲ್ಲದೆ, ದೇವಾಲಯಗಳ ಮುಂದೆ ಬೆಳಕಿಗಾಗಿ ಸುಂದರವಾದ ದೀಪಸ್ತಂಭ ರಚನೆಯಾದವು. ದೇವಾಲಯಗಳ ಮುಂದೆ ಉಯ್ಯಾಲೆಕಂಬಗಳ ವೇದಿಕೆಯಲ್ಲೂ ಸುಂದರ ಕಂಬಗಳು ರಚನೆ ಆಗಿವೆ. ಆದರೆ ಅವುಗಳು ವಿರಳ. ಜೈನ ಬಸದಿಗಳ ಮುಂದೆ ಮಾನಸ್ತಂಭಗಳು ರಚನೆ ಆದರೂ, ಅವುಗಳ ಸಂಖ್ಯೆ ಬಹು ಕಡಿಮೆ. ಹಂಪಿಯ ವಿಠ್ಠಲ ದೇಗುಲದ ಪಕ್ಕದಲ್ಲಿರುವ ತುಲಾಭಾರವು ವಾಸ್ತವವಾಗಿ ಪಕ್ಕದ ದೇವಾಲಯದ ಸಂಕೀರ್ಣದ ಉಯ್ಯಾಲೆ ಮಂಟಪವೇ. ಇದರ ಕಂಬಗಳು ಸುಂದರವಾದ ರಚನೆಗಳಾಗಿವೆ. ಕಂಬಗಳು ವಿಜಯನಗರದ ವಾಸ್ತುವಿನ ಚೆಲುವಿನ ಅಂಶಗಳಾಗಿವೆ.

ಟಿಪ್ಪಣಿಗಳು

1. ಶಿವರುದ್ರಸ್ವಾಮಿ, ಎಸ್. ಎನ್. *Vijayanagara Temples in Karnataka,* ಮೈಸೂರು, 1996, ಪು. 18
2. ರಮೇಶನ್, ಎನ್. *Temples of Tadapatri*, ಹೈದ್ರಾಬಾದ್, 1976, ಪು. 6-7
3. Wagoner, *P. B. Mode and Meaning in the Architecture of Early Medieval Telangana* -1000 -1300), ಪು. 103-112 & 317
4. ಶಿವರುದ್ರಸ್ವಾಮಿ, ಎಸ್. ಎನ್. ಅದೇ. ಪು. 107, 116
5. *E. C.* X (1997), 1
6. ಶಿವರಾಮಮೂರ್ತಿ, *The Cola Temples*, ನವದೆಹಲಿ, 1978, ಪು. 10 &11
7. Jouveau - *Dubreuiel, Dravidian Architecture* ಪಾಂಡಿಚೆರಿ, 1920 , ಪು. 39-41
8. ಮಹಾಲಿಂಗಂ, ಟಿ. ವಿ. *Indian Temple Complex*, ಧಾರವಾಡ, 1970, ಪು. 45
9. ಶಿವರುದ್ರಸ್ವಾಮಿ, ಎಸ್. ಎನ್, *ಅದೇ*, ಪು, 128
10. ಗ್ರೀನ್‌ಲಾ ಛಾಯಾ ಚಿತ್ರಗಳು - 1988, ಪ್ರ. 21 ನಾಗರಾಜರಾವ್. ಎಂ. ಎಸ್. *Vijayanagara*, ಮೈಸೂರು,
11. ಶಿವರುದ್ರಸ್ವಾಮಿ, *ಅದೇ*, ಪು. 129
12. *A RSIE*, 1907, 501
13. *EC*, IX (1990) Bl., 30; Fritz 80 Michell (Ed) *New Light on Hampi, 2006,* ಪು. 12-24
14. *VPR.*, 1984-87, No. 24, ಪು. 32

೨೪.ವಿಜಯನಗರ ಕಾಲದ ವಾಸ್ತುಶಿಲ್ಪ ಮೂರ್ತಿಶಿಲ್ಪ

ಪ್ರೊ. ಶಕುಂತಲಾ ಸಿಂಧೂರ

ಕರ್ನಾಟಕ ರಾಜ್ಯದಲ್ಲಿ ಶಿಲ್ಪ ವಾಸ್ತುಗಳು ಪಡೆದ ದೀರ್ಘಕಾಲದ ಪರಂಪರೆಯು ಚಿತ್ರಕಲೆಗೆ ದೊರಕಿರುವುದಿಲ್ಲ. ವಾಸ್ತು, ಶಿಲ್ಪ ಕ್ಷೇತ್ರಗಳಿಗೆ ವಿಜಯನಗರದ ಅರಸರು ಅರ್ಪಿಸಿದ ಕೊಡುಗೆಗಳು ಕರ್ನಾಟಕದ ಇತಿಹಾಸದಲ್ಲೇಕೆ, ಭಾರತದ ಸಮಗ್ರ ಇತಿಹಾಸ ದಲ್ಲಿಯೇ ಮಹತ್ತರವೂ ಅನನ್ಯವೂ ಆಗಿದೆ. ಇವರ ಕಾಲದಲ್ಲಿ ನಿರ್ಮಾಣವಾದಷ್ಟು ಅಸಂಖ್ಯಾತ ದೇಗುಲಗಳು ಭಾರತದ ಯಾವುದೇ ರಾಜವಂಶ ಅಥವಾ ಸಾಮ್ರಾಜ್ಯದ ಕಾಲದಲ್ಲಿಯೂ ಕಟ್ಟಿರಲಿಲ್ಲ. ಕೇವಲ ಸಂಖ್ಯಾಬಲವಷ್ಟೇ ಈ ಕಾಲದ ವಾಸ್ತುವಿನ ಹೆಚ್ಚುಗಾರಿಕೆಯಾಗದೆ. ಅವು ಗುಣಾತ್ಮಕವಾಗಿಯೂ ಬೆಳೆದಿವೆ. ಇವು ಸ್ವೋಪಜ್ಞತೆಯಿಂದ ಕೂಡಿ, ಜೀವಂತಿಕೆಯನ್ನು ಹೊರಸೂಸುವ ಮಾಧ್ಯಮಗಳಾಗಿವೆ. ಸುಂದರವಾದ ಹಲವಾರು ಅರಮನೆಗಳು ನಾಗರಿಕ ಕಟ್ಟಡಗಳು, ಲಷ್ಕರಿ ವಾಸ್ತುಗಳಾದ ಕೋಟೆಕೊತ್ತಲ ಗಳು ಮತ್ತು ಕಾವಲು ಗೋಪುರಗಳು ಹಾಗೂ ನೀರಾವರಿ ಕಟ್ಟಡಗಳನ್ನು ಅಧಿಕ ಸಂಖ್ಯೆಯಲ್ಲಿ ಕಟ್ಟಲಾಗಿದೆ. ಇವೆಲ್ಲವೂ ಅಗಾಧತೆಗೆ ಮತ್ತು ಭವ್ಯತೆಗೆ ಹೆಸರುವಾಸಿ ಯಾಗಿವೆ. ಇದು ಶೌರ್ಯ ಮತ್ತು ಧೀರೋಧಾತ್ತ ಯುಗ. ರಾಷ್ಟ್ರೀಯ ಅಂಶವಾದ ಇದನ್ನು ಈ ಕಾಲದ ದೇಗುಲಗಳಲ್ಲಿ ಕಾಣಬಹುದು. ಹೊರಗಿನ ಅದರಲ್ಲಿಯೂ ಮುಸ್ಲಿಮರ ಧಾಳಿಗಳನ್ನು ತಡೆಯುವುದು ಅಂದಿನ ಆಡಳಿತ ವ್ಯವಸ್ಥೆಯ ಪ್ರಮುಖ ಅಂಶವಾಗಿತ್ತು. ಆದ್ದರಿಂದ ಯುದ್ಧೋತ್ಸಾಹಿ ಗುಣಗಳು ವಿಜಯನಗರದ ದೇಗುಲಗಳಲ್ಲಿ ಮೈದಳೆದವು. ಇದರ ಪರಿಣಾಮವಾಗಿ ವಿಶಾಲವಾದ ದೇವಾಲಯ ಸಮುಚ್ಚಯಗಳು ನಿರ್ಮಾಣವಾದವು. ಯುದ್ಧದೇವತೆಗಳಾದ ವೀರಭದ್ರ, ಭೈರವ, ಕಾರ್ತಿಕೇಯ, ನರಸಿಂಹ ಮುಂತಾದವರಿಗೆ ವಿಜಯನಗರದ ದೇವಾಲಯಗಳಲ್ಲಿ ಪ್ರಾಧಾನ್ಯ ದೊರೆಯಿತು.

ದೇವಾಲಯಗಳು

ವಿಜಯನಗರದ ದೇವಾಲಯಗಳು ದ್ರಾವಿಡ ವಾಸ್ತು ಪರಂಪರೆಯ ಪ್ರಮುಖವಾದ ಹಾಗೂ ಸತ್ವಪೂರ್ಣವಾದ ಹಂತ. ವಿಜಯನಗರದ ದೇವಾಲಯಗಳ ಅಧ್ಯಯನ ಕೇವಲ ಹಂಪಿಗೆ ಸೀಮಿತವಾದುದೆಂಬ ಭಾವನೆ ಬಹುಕಾಲವಿತ್ತು. ಈ ಕಾಲದ ಸಾವಿರಾರು ದೇವಸ್ಥಾನಗಳು ಕರ್ನಾಟಕವೂ ಸೇರಿದಂತೆ ಸಮಗ್ರ ದಕ್ಷಿಣ ಭಾರತದಲ್ಲಿ ಪ್ರೇಕ್ಷಣೀಯ ತಂಗುದಾಣಗಳಾಗಿವೆ.

ವಿಜಯನಗರ ದೇವಾಲಯ ಸಮುಚ್ಚಯದ ಪ್ರಧಾನ ದೇಗುಲವು ಗರ್ಭಗೃಹ, ಅಂತರಾಳ, ಮುಖಮಂಟಪ, ರಂಗಮಂಟಪ, ಮತ್ತು ಮಹಾರಂಗ ಮಂಟಪಗಳಿಂದ ಕೂಡಿದೆ. ರಂಗಮಂಟಪದ ಎರಡೂ ಪಾರ್ಶ್ವಗಳಲ್ಲಿ ಪಾರ್ಶ್ವಮಂಟಪಗಳಿವೆ. ಇವುಗಳಲ್ಲೆಲ್ಲಾ ಮಹಾರಂಗಮಂಟಪವು ತೆರೆದ ಸ್ತಂಭಪಂಕ್ತಿಯ ಕಟ್ಟಡವಾಗಿದೆ. ರಂಗಮಂಟಪ ಮತ್ತು ಮಹಾರಂಗಮಂಟಪ ಸ್ತಂಭಗಳಲ್ಲಿ ಉಪಸ್ತಂಭಗಳನ್ನೂ, ಇನ್ನೂ ಕೆಲವು ಸ್ತಂಭಗಳಲ್ಲಿ ಭವ್ಯವಾದ ಯಾಳಿಗಳನ್ನು ಕೆತ್ತಿರುತ್ತಾರೆ. ಇವುಗಳನ್ನು ಸಂಯುಕ್ತ ಸ್ತಂಭಗಳನ್ನುತ್ತಾರೆ. ಇವು ವಿಜಯನಗರ ದೇವಾಲಯಗಳ ವೈಶಿಷ್ಟ್ಯ. ದೊಡ್ಡ ದೇಗುಲ ಗಳಲ್ಲಿ ಗರ್ಭಗುಡಿಗೆ ಪ್ರದಕ್ಷಿಣ ಪಥವೂ ಇರುವುದುಂಟು. ವಿಜಯನಗರದ ದೇವಾಲಯ ಗಳನ್ನು ಸಾಮಾನ್ಯವಾಗಿ ಕಗ್ಗಲ್ಲಿನಿಂದ (ಗ್ರಾನೈಟ್) ಕಟ್ಟಿದ್ದಾರೆ. ದೇವಾಲಯಗಳ ಮೇಲ್ಭಾಗದಲ್ಲಿ ಕೈಪಿಡಿಗೋಡೆ ಮತ್ತು ಗೋಪುರಗಳ ಶಿಖರಗಳನ್ನು ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಿದ್ದಾರೆ.

ವಿಜಯನಗರದ ದೇವಾಲಯಗಳನ್ನು ಎತ್ತರವಾದ ಅಧಿಷ್ಠಾನ ಮತ್ತು ಉಪಪೀಠ ಗಳ ಮೇಲೆ ನಿರ್ಮಿಸಲಾಗಿದೆ. ಇವುಗಳ ವಿವಿಧ ಪಟ್ಟಿಕೆಗಳು ಸುಂದರವಾದ ಕೆತ್ತನೆಗಳಿಂದ ಅಲಂಕೃತವಾಗಿವೆ. ದೇವಾಲಯದ ಹೊರಗೋಡೆಗಳನ್ನು ಸಾಮಾನ್ಯವಾಗಿ ಆಕರ್ಷಕವಾದ ಅರೆಗಂಬಗಳು, ಕುಂಭಪಂಜರಗಳು ಮತ್ತು ಕೋಷ್ಠಗಳಿಂದ ಅಲಂಕೃತ ಗೊಳಿಸಲಾಗಿದೆ. ದೇವಾಲಯದ ಮೇಲಿರುವ ಕೈಪಿಡಿಗೋಡೆಯ ಕೂಟಕೋಷ್ಠ ಮತ್ತು ವಿಗ್ರಹಗಳಿಂದ ಆವೃತವಾದ ಶಾಲಾಕೋಷ್ಠಗಳಿಂದ ಕೂಡಿದೆ. ಇವುಗಳನ್ನು ಗಾರೆ ಗಚ್ಚಿನಿಂದ ಮಾಡ ಲಾಗಿದೆ. ದೇವಾಲಯ ಸಮುಚ್ಚಯವು ಪ್ರಧಾನ ದೇಗುಲ, ದೇವಿಗುಡಿ, ಕಲ್ಯಾಣ ಮಂಟಪ, ನೂರ್ಕಾಲಮಂಟಪ, ಪರಿವಾರದೇವತೆಗಳ ಗುಡಿಗಳು, ಉಯ್ಯಾಲೆ ಮಂಟಪ ಮುಂತಾದ ಕಟ್ಟಡಗಳನ್ನು ಒಳಗೊಂಡಿದೆ. ಪ್ರಧಾನದೇಗುಲದ ಮುಂದೆ ಶೈವಾಲಯ ವಾದರೆ ನಂದಿಮಂಟಪ, ವೈಷ್ಣವಾಲಯವಾದರೆ ಗರುಡ ಮಂಟಪ, ಮುಂದೆ ಬಲಿಪೀಠ ಮತ್ತು ಧ್ವಜಸ್ತಂಭಗಳಿರುತ್ತವೆ. ಗರುಡಮಂಟಪಕ್ಕೆ ಹಂಪಿಯ ವಿಠ್ಠಲದೇಗುಲ ದಲ್ಲಿರುವಂತೆ ಚಕ್ರಗಳಿರುವುದು ಉಂಟು. ವಿಶಾಲವಾದ ದೇವಾಲಯದ ಸಂಕೀರ್ಣವನ್ನು ಎತ್ತರವಾದ ಪ್ರಾಕಾರವು ಸುತ್ತುವರಿದಿರುತ್ತದೆ. ದೇವಾಲಯದ ಮುಂಭಾಗದ ಪ್ರಾಕಾರ ದಲ್ಲಿ ಸಪೂರವೂ ಎತ್ತರವೂ ಆದ ದೂರದಿಂದಲೇ ಭಕ್ತಜನರನ್ನು ಆಕರ್ಷಿಸುವ ಗೋಪುರವಿರುತ್ತದೆ. ಪ್ರಾಕಾರದ ಪಾರ್ಶ್ವಗೋಡೆಗಳಲ್ಲಿ ಗೋಪುರ ಗಳಿರುವುದುಂಟು. ಈ ಗೋಪುರಗಳನ್ನು ರಾಯಗೋಪುರಗಳೆಂದು ಕರೆಯುತ್ತಾರೆ. ರಾಯಗೋಪುರಗಳ ನಿರ್ಮಾಣವನ್ನು ಆರಂಭಿಸಿದವನು ಎರಡನೇ ಪ್ರೌಢದೇವರಾಯ, ಇದನ್ನು ಉಜ್ವಲವಾಗಿ ಬೆಳೆಸಿದವನು ಕೃಷ್ಣದೇವರಾಯ. ಇವು ವಿಜಯನಗರ ದೇವಾಲಯಗಳ ಗುಣಲಕ್ಷಣಗಳು.

ವಿಜಯನಗರ ಸಾಮ್ರಾಜ್ಯದ ಕೇಂದ್ರ ಹಂಪಿ. ಹಂಪಿಯ ಕೇಂದ್ರ ವಿರೂಪಾಕ್ಷ ದೇಗುಲ. ಇದು ಸಾಮ್ರಾಜ್ಯದ ನಿಯಂತ್ರಣ, ಕೇಂದ್ರವಾದಂತೆ, ವಿಜಯನಗರ ದೇಗುಲದ ವಾಸ್ತುವಿನ ಉಗಮದ ಕೇಂದ್ರವೂ ಆಗಿತ್ತು. ಈ ಕಾಲದ ದೇಗುಲ ಪರಂಪರೆ ಇಲ್ಲಿಂದಲೇ ಪ್ರಾರಂಭವಾಯಿತು. ಇದು ಪ್ರಧಾನ ಗುಡಿ, ಪರಿವಾರ ದೇವತೆಗಳ ಗುಡಿಗಳು, ಕಲ್ಯಾಣ ಮಂಟಪ ಮತ್ತು ಪ್ರಾಕಾರ ಹಾಗೂ ಗೋಪುರಗಳನ್ನು ಹೊಂದಿದೆ. ಇದರ ರಾಯ ಗೋಪುರಗಳನ್ನು ಇಮ್ಮಡಿ ದೇವರಾಯನೂ ಕಿರಿಯ ಗೋಪುರ ಮತ್ತು ಚಲುವಿನ ಮಹಾರಂಗ ಮಂಟಪವನ್ನು ಕೃಷ್ಣದೇವರಾಯನೂ ಕಟ್ಟಿಸಿದ್ದಾರೆ.

ಹಂಪಿಯ ವಿಠ್ಠಲ, ಕೃಷ್ಣ, ಅಚ್ಯುತ (ತಿರುವೆಂಗಳನಾಥ), ಮಾಲ್ಯವಂತ ರಘುನಾಥ, ಕುಂತುಜಿನಾಥ, ಉದ್ಧಾನ ವೀರಭದ್ರ (ಮುದ್ದುವೀರಣ) ಮುಂತಾದ ದೇಗುಲಗಳು ಮುಖ್ಯವಾದವು. ಇಲ್ಲಿ ಮತ್ತೊಂದು ಮುಖ್ಯವಾದ ಹಾಗೂ ಅತ್ಯಂತ ಚಲುವಿನ ದೇಗುಲ ವೆಂದರೆ ಹಜಾರರಾಮ ಅಥವಾ ರಾಮಚಂದ್ರ ದೇಗುಲ. ಕಮಲಾಪುರದ ರಘುನಾಥ, ಅನಂತಶಯನ ಗುಡಿಯ ಅನಂತಪದ್ಮನಾಭ, ತಿಮ್ಮಲಾಪುರದ ಶಿವ ಮತ್ತು ಗೋಪಿನಾಥ, ಕೋಲಾರದ ಸೋಮೇಶ್ವರ, ಮುಳುಬಾಗಲಿನ ವಿಠ್ಠಲ, ಮುಳಬಾಗಲಿನ ಹತ್ತಿರವಿರುವ ವಿರೂಪಾಕ್ಷಿಪುರದ ಪ್ರಸನ್ನ ವಿರೂಪಾಕ್ಷ, ಶೃಂಗೇರಿಯ ವಿದ್ಯಾಶಂಕರ, ಬಾಗೇಪಲ್ಲಿಯ ಹತ್ತಿರವಿರುವ ಗಡಿದಂ ವೆಂಕಟರಮಣ ದೇಗುಲಗಳು ಸುಂದರವಾಗಿವೆ. ತ್ರಯಿಂಬಕಪುರದ ತ್ರಿಯುಂಬಕೇಶ್ವರ ದೇಗುಲ, ಮೂಡಬಿದರೆಯ ತ್ರಿಭುವನ ಚೂಡಾಮಣಿ (ಸಾವಿರ ಕಂಬದ) ಬಸದಿ, ಲೇಪಾಕ್ಷಿಯ ವೀರಭದ್ರ ತಾಡಪತ್ರಿಯ ಚಿಂತಲರಾಯ ವೆಂಕಟರಮಣ ಮತ್ತು ರಾಮಲಿಂಗೇಶ್ವರ ದೇಗುಲಗಳು ಪ್ರಸಿದ್ಧವಾಗಿವೆ. ಇವೆಲ್ಲವೂ ಬೃಹದಾಕಾರದ ಭವ್ಯ ಹಾಗೂ ಚೆಲುವಿನ ದೇಗುಲಗಳು, ಹಂಪಿ ಯೊಂದರಲ್ಲಿಯೇ 1200 ದೇಗುಲಗಳಿವೆ. ಹಂಪಿಯ ಹೊರಗೆ ಕರ್ನಾಟಕದಲ್ಲಿ ಸು. 600 ರಷ್ಟು ವಿಜಯನಗರ ಕಾಲದ ದೇಗುಲಗಳು ಕಾಣಲು ಸಿಗುತ್ತವೆ.

ಹಂಪಿಯ ದೇವಸ್ಥಾನಗಳಲ್ಲಿಯೇ ಅತ್ಯಂತ ಸುಂದರವಾದ ದೇವಾಲಯಗಳೆಂದರೆ ವಿಠ್ಠಲ ಮತ್ತು ವಿರೂಪಾಕ್ಷ ದೇಗುಲಗಳು. 15 ನೇ ಶತಮಾನದ ಕೊನೆಗೆ ವಿಠಲ ದೇಗುಲ ನಿರ್ಮಿಸಲಾಯಿತು. ಮುಂದೆ ಕೃಷ್ಣದೇವರಾಯ ಮತ್ತು ಅಚ್ಯುತರಾಯರು ಇದನ್ನು ವಿಸ್ತರಿಸಿದರು. ಈ ದೇವಾಲಯ ಸಂಕೀರ್ಣವು 152 ಮೀ x 94.5 ಮೀ ಉದ್ದಗಲದ ಪ್ರಾಕಾರದ ಒಳಗಡೆ ನಿರ್ಮಾಣವಾಗಿದೆ. ಇಲ್ಲಿನ ಪ್ರಧಾನ ದೇಗುಲವನ್ನು ವಿಠ್ಠಲನಿಗೆ ಅರ್ಪಿಸಲಾಗಿದೆ. ಇದು ಗರ್ಭಗುಡಿ, ಪ್ರದಕ್ಷಿಣ ಪಥ, ಅಂತರಾಳ, ಮುಖಮಂಟಪ, ರಂಗಮಂಟಪ ಮತ್ತು ಮಹಾರಂಗ ಮಂಟಪವನ್ನು ಹೊಂದಿದೆ. ಈ ದೇಗುಲದ ಪ್ರಧಾನ ವಾದ ಹಾಗೂ ವಿಶ್ವವಿಖ್ಯಾತವಾದ ಭಾಗವೇ ಮಹಾರಂಗಮಂಟಪ. ಇದು ಚಲುವಾದ ಸಂಯುಕ್ತ ಕಂಬಗಳಿಂದ ಕೂಡಿದೆ. ಉಪಸ್ತಂಭಗಳಿಂದ ಕೂಡಿದ ಸ್ತಂಭಗಳು, ಯಾಳಿ

ಸ್ತಂಭಗಳು, ನೃತ್ಯಗಾರರನ್ನೂ ಒಳಗೊಂಡ ಸ್ತಂಭಗಳು ಮನಮೋಹಕವಾಗಿವೆ. ಸ್ತಂಭಗಳ ಉಪಸ್ತಂಭಗಳಿಂದ ಸಂಗೀತದ ರಾಗಗಳನ್ನು ಹೊರಡಿಸಬಹುದು. ಉದಯಗಿರಿಯ ತಿಮ್ಮರಾಜು ಎಂಬ ಮಂಡಲೇಶ್ವರನು ಈ ಮಂಟಪವನ್ನು ಕ್ರಿ. ಶ. 1545 ರಲ್ಲಿ ನಿರ್ಮಿಸಿದನು. ಪ್ರಧಾನ ದೇಗುಲವಲ್ಲದೆ ಇನ್ನೂ ಅನೇಕ ಗುಡಿಗಳು ಈ ದೇವಾಲಯದ ಸಂಕೀರ್ಣದಲ್ಲಿವೆ. ಅಮ್ಮನವರ ಗುಡಿ (ದೇವಿ ಗುಡಿ),ಕಲ್ಯಾಣ ಮಂಟಪ ಮತ್ತು ಪರಿವಾರ ದೇವತೆಗಳ ಆಲಯಗಳಿವೆ. ದೇವಾಲಯದ ಮುಂದೆ ಸುಂದರವಾದ ಕಲ್ಲಿನ ರಥವಿದೆ. ಇದು ವಾಸ್ತವವಾಗಿ ಗರುಡಮಂಟಪ. ಚಾಲನೆಯ ಸಂಕೇತವಾಗಿ ಇದಕ್ಕೆ ಚಕ್ರಗಳಿವೆ. ಹಿಂದೊಮ್ಮೆ ಇದಕ್ಕೆ ಗೋಪುರವಿತ್ತು. ಕ್ರಿ. ಶ. 1881ರ ಸುಮಾರಿನಲ್ಲಿ ಬ್ರಿಟಿಷ್ ಇಂಜಿನಿಯರೊಬ್ಬ ಗೋಪುರದಿಂದ ರಥಕ್ಕೆ ಅಪಾಯ ಒದಗಬಹುದೆಂಬ ಅಜ್ಞಾನದಿಂದ ಗೋಪುರವನ್ನು ಕೆಡವಿದನು. ಪ್ರಾಕಾರದ ಪೂರ್ವದ್ವಾರದಲ್ಲಿ ದ್ವಾರ ಗೋಪುರವಿದೆ. ಇದನ್ನು ಕೃಷ್ಣದೇವರಾಯ ನಿರ್ಮಿಸಿದನು. ಪ್ರಾಕಾರದ ಉತ್ತರ ಮತ್ತು ದಕ್ಷಿಣದಲ್ಲಿ ಸುಂದರವಾದ ದ್ವಾರಮಂಟಪಗಳಿವೆ. ವಿಜಯನಗರದ ದೇವಾಲಯ ದಲ್ಲಿಯೇ ಇದು ಅಪೂರ್ವವಾದ ದೇಗುಲ. ಚಲುವು ಮತ್ತು ಶೌರ್ಯ ಈ ದೇಗುಲದಲ್ಲಿ ಉನ್ನತವಾಗಿ ಅರಳಿದೆ.

ವಿಜಯನಗರ ಕಾಲದ ದೇವಾಲಯಗಳ ಮತ್ತೊಂದು ಪ್ರಮುಖ ಸಮುಚ್ಚಯವನ್ನು ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ತಿಮ್ಮಲಾಪುರದಲ್ಲಿ ಕಾಣಬಹುದು. ಇಲ್ಲಿರುವ ಶಿವಾಲಯ ತ್ರಿಕೂಟಾಚಲ. ಸಮಗ್ರ ದಕ್ಷಿಣ ಭಾರತದಲ್ಲಿಯೇ ಈ ಕಾಲದಲ್ಲಿ ದೊರೆಯುವ ತ್ರಿಕೂಟಾಚಲವೆಂದರೆ ಇದೊಂದೆ. ಈ ದೇವಾಲಯದಲ್ಲಿ ಕೆತ್ತಿರುವ ಶಿಲ್ಪಗಳನ್ನು ಇನ್ನೆಲ್ಲಿಯೂ ಕಾಣುವುದಿಲ್ಲ. ಇಲ್ಲಿರುವ ಗೋಪಿನಾಥ ದೇವಾಲಯ ನಿಜಕ್ಕೂ ನಯನಾಕರ್ಷಕವಾದುದು. ಇದೇ ಊರಿನ ಮಲ್ಲಿಕಾರ್ಜುನ ದೇವಾಲಯದಲ್ಲಿ ಸುಂದರವಾದ ದೇವಕೋಷ್ಠವಿದೆ. ಇದರ ಗಾರೆಯ ಗೋಪುರವನ್ನು ಈಗ್ಗೆ ಕೆಲವರ್ಷಗಳ ಹಿಂದೆ ನಾಶಪಡಿಸಲಾಗಿದೆ. ಇವುಗಳನ್ನು ಪ್ರಾಂತಾಧಿಪತಿ ಹಾಗೂ ಸಂಗೀತಗಾರನಾದ ಬಯಕಾರ ರಾಮಪ್ಪನು ನಿರ್ಮಿಸಿದ್ದಾನೆ. ಹೀಗೆ ದೇಗುಲಗಳ ವಾಸ್ತು ನಿರ್ಮಾಣದಲ್ಲಿ ಸಾಮ್ರಾಜ್ಯವು ಅಪಾರವಾದ ಕೊಡುಗೆಗಳನ್ನು ಅರ್ಪಿಸಿದೆ.

ಮೂರ್ತಿ ಶಿಲ್ಪ

ಮೂರ್ತಿಶಿಲ್ಪ ಕ್ಷೇತ್ರಕ್ಕೆ ವಿಜಯನಗರ ಕೊಡುಗೆ ಅಪಾರವಾದದ್ದು. ಈ ಕಾಲದ ಶಿಲ್ಪಗಳನ್ನು ಯಥೇಚ್ಛವಾಗಿ ದೇಗುಲಗಳ ಕಂಭಗಳ ಘನಾಕೃತಿಗಳ ಮೇಲೆ ಹಾಗೂ ಕೈಪಿಡಿ ಗೋಡೆಗಳ ಮೇಲೆ ಕಾಣಬಹುದು. ಅಪರೂಪಕ್ಕೆ ದೇವಾಲಯಗಳ ಗೋಡೆಗಳು ಮತ್ತು ಅಧಿಷ್ಠಾನಗಳ ಮೇಲೂ ಶಿಲ್ಪಗಳನ್ನು ಕೆತ್ತಲಾಗಿದೆ. ಹಂಪಿಯ ಹಜಾರರಾಮ ಅಥವಾ ರಾಮಚಂದ್ರ ದೇಗುಲದ ಮೇಲೆ ರಾಮಾಯಣದ ಘಟನೆಗಳನ್ನು ನಾಟಕೀಯ

ವಾಗಿ ಹಾಗೂ ಸುಂದರವಾಗಿ ಕೆತ್ತಲಾಗಿದೆ. ಇಲ್ಲಿನ ವಿಠ್ಠಲ ದೇವಾಲಯದ ಪಕ್ಕದಲ್ಲಿ ರಾಮವಿಠ್ಠಲ ದೇವಾಲಯವಿದೆ. ಇಲ್ಲಿಯೂ ರಾಮಾಯಣವನ್ನು ಹಂತಹಂತವಾಗಿ ಚಿತ್ರಿಸಲಾಗಿದೆ. ಇಲ್ಲಿನ ವಿರೂಪಾಕ್ಷ ದೇವಾಲಯ ಮತ್ತು ದೇವರಗುಡಿಪಲ್ಲಿಯ ಗಡಿದಂ ವೆಂಕಟರಮಣ ದೇಗುಲದ ಗೋಡೆಗಳ ಮೇಲೂ ಶಿಲ್ಪಗಳನ್ನು ಕಾಣಬಹುದು. ಮೇಲೆ ತಿಳಿಸಿರುವಂತೆ ದೇವಾಲಯಗಳ ಕಂಭಗಳು ಶಿಲ್ಪಸಂಪತ್ತನ್ನು ಮೈದುಂಬಿಕೊಂಡಿವೆ. ಶಿವಪುರಾಣಗಳಲ್ಲಿ ತಿಳಿಸಿರುವ ಶಿವಲೀಲೆಗಳು, ವೈಷ್ಣವ ಪುರಾಣಗಳಲ್ಲಿ ತಿಳಿಸಿರುವ ವಿಷ್ಣುವಿನ ಶಿಲ್ಪಗಳು, ಭಾಗವತ, ದಶಾವತಾರ, ರಾಮಾಯಣ ಮತ್ತು ಮಹಾಭಾರತದ ಘಟನೆಗಳನ್ನು ಚಿತ್ರಿಸಲಾಗಿದೆ. ಸಮಕಾಲೀನ ಸಾಮಾಜಿಕ ಘಟನೆಗಳನ್ನು ನೃತ್ಯಗಾರರು ಮತ್ತು ಸಂಗೀತಗಾರರ ಶಿಲ್ಪಗಳನ್ನೂ ಕೆತ್ತಲಾಗಿದೆ. ಹಂಪಿಯ ಯೋಗಲಕ್ಷ್ಮೀ ನರಸಿಂಹ ಶಿಲ್ಪ ಪ್ರಸಿದ್ಧವಾದುದು. ಇದೊಂದು ಬೃಹತ್ ಶಿಲ್ಪ. ಇದು ಮುಕ್ಕಾಗಿದ್ದರೂ ಇದರ ಸೌಂದರ್ಯ ಇನ್ನೂ ಕುಗ್ಗಿಲ್ಲ. ಇದನ್ನು ಅನೇಕರು ತಪ್ಪಾಗಿ ಉಗ್ರನರಸಿಂಹನೆಂದು ಕರೆದಿದ್ದಾರೆ. ಉಗ್ರನರಸಿಂಹ ಅಥವಾ ವಿದ್ಯಾರಣ್ಯ ನರಸಿಂಹನ ಶಿಲ್ಪವನ್ನು ಹಂಪಿಯ ವಿಠ್ಠಲ ದೇಗುಲದ ಕಲ್ಯಾಣ ಮಂಟಪದ ಕಂಭದ ಮೇಲೆ ಶಕ್ತಿಯುತವಾಗಿ ಕೆತ್ತಲಾಗಿದೆ. ಭಿಕ್ಷಾಟನಾ ಮೂರ್ತಿಯ ಉಬ್ಬುಗೆತ್ತನೆಗಳನ್ನು ಅದೇ ದೇಗುಲದಲ್ಲಿ ಹಾಗೂ ಕುರುಡಮಲೆ (ಕೋಲಾರಜಿಲ್ಲೆಯ) ಯ ಮಹಾಗಣಪತಿ ದೇವಾಲಯದಲ್ಲಿ ನಯನ ಮನೋಹರವಾಗಿ ಚಿತ್ರಿಸಲಾಗಿದೆ. ಹಂಪಿಯ ಕಡಲೆಕಾಳು ಮತ್ತು ಸಾಸಿವೆಕಾಳು ಗಣಪತಿಗಳು ಹೆಸರಿನಿಂದ ಸಣ್ಣದಾಗಿ ಕಂಡರೂ ಬೃಹದಾಕಾರದ ಸುಂದರ ವಿಗ್ರಹಗಳು, ತಿಮ್ಮಲಾಪುರದ ಶಿವಾಲಯದಲ್ಲಿ ಅಪರೂಪದ ಶಿಲ್ಪಗಳನ್ನು ಕೆತ್ತಲಾಗಿದೆ. ಇಲ್ಲಿನ ಸ್ವಾಭಿಷೇಕ ಮೂರ್ತಿಯು ದುರ್ಲಭವಾದ ಶಿಲ್ಪ. ಇಲ್ಲಿ ಹಲವಾರು ನಾಯನಾರರ ಶಿಲ್ಪಗಳನ್ನು ಮೂಡಿಸಲಾಗಿದೆ. ಅವುಗಳಲ್ಲೆಲ್ಲ ಚಿರಪರಿಚಿತವಾಗಿರುವುದು ಬೇಡರ ಕಣ್ಣಪ್ಪನ ಶಿಲ್ಪ. ಇದೇ ಊರಿನ ಗೋಪಿನಾಥ ದೇವಾಲಯದ ಪೂಜಾ ಮೂರ್ತಿಯಂತೂ ಕಲ್ಪನೆಗೂ ಮೀರಿದ ಅಪೂರ್ವವಾದ ಸೌಂದರ್ಯವನ್ನು ಒಳಗೊಂಡ ವಿಶಿಷ್ಟವಾದ ಶಿಲ್ಪ. ಇಂತಹ ಸುಂದರ ಮೂರ್ತಿಯನ್ನು ವಿಜಯನಗರದಲ್ಲೆಲ್ಲೂ ಕಾಣಲು ಸಾಧ್ಯವಿಲ್ಲ. ವಿಜಯನಗರದ ಶಿಲ್ಪವು ಸತ್ವಶಾಲಿಯಾದದ್ದು ಹಾಗೂ ಅಮೋಘವಾದದ್ದು.

ಅರಮನೆಗಳು ಮತ್ತು ನಾಗರಿಕ ಕಟ್ಟಡಗಳು

ಈ ಕಾಲದ ರಾಜಧಾನಿಗಳಲ್ಲಿ ಅರಮನೆಗಳು ಮತ್ತು ನಾಗರಿಕ ಕಟ್ಟಡಗಳು ಸಾಕಷ್ಟು ಸಂಖ್ಯೆಯಲ್ಲಿ ದೊರೆಯುತ್ತವೆ. ಇವುಗಳು ಅರಮನೆಗಳು, ಕೋಟೆಕೊತ್ತಲಗಳು, ಕಾವಲು ಗೋಪುರಗಳು, ಬಾವಿಗಳು, ಸ್ನಾನದ ಗೃಹಗಳು, ಗೋರಿಗಳು, ಉದ್ಯಾನಗಳು, ರಥ ಬೀದಿಗಳನ್ನು ಒಳಗೊಂಡಿವೆ. ಇವುಗಳನ್ನು ಕಲ್ಲು ಇಟ್ಟಿಗೆ ಮತ್ತು ಗಾರೆಯನ್ನು ಉಪಯೋಗಿಸಿ ನಿರ್ಮಿಸಲಾಗಿದೆ. ಇವುಗಳ ಮೇಲೆ ಇಸ್ಲಾಮಿ ವಾಸ್ತುವಿನ ಪ್ರಭಾವ ದಟ್ಟ

ವಾಗಿದೆ. ವಿಜಯನಗರ ಅಥವಾ ಹಂಪಿಯಲ್ಲಿ ಇಂದಿಗೂ ಉಳಿದಿರುವ ಅರಮನೆಯ ಅವಶೇಷಗಳಲ್ಲಿ ಮುಖ್ಯವಾದುದು ಕಮಲಮಹಲ್. ಇದೂ ಸೇರಿದಂತೆ ಹಲವಾರು ಕಟ್ಟಡಗಳ ಅವಶೇಷಗಳನ್ನು ಎತ್ತರದ ಕೋಟೆಯ ಗೋಡೆಯೊಂದು ಸುತ್ತುವರೆದಿದೆ. ಇದನ್ನು ಸ್ಥಳೀಯವಾಗಿ ರಾಣಿವಾಸದ ಸ್ಥಳವೆಂದು ಕರೆಯುತ್ತಾರೆ. ಸಮಕಾಲೀನ ಗ್ರಂಥಗಳಲ್ಲಿ ತಿಳಿಸಿರುವ ಅಳಿಯ ರಾಮರಾಯರ ಅರಮನೆಯಾದ ರತ್ನಕೂಟವೇ ಇದು ಆಗಿರುವುದು ಗಮನಿಸಬೇಕಾದ ಸಂಗತಿ. ಇಲ್ಲಿನ ಕಮಲ್‌ಮಹಲ್ 2 ಅಂತಸ್ತಿನ ಅರಮನೆ. ಭವ್ಯತೆ ಮತ್ತು ಬೆಡಗನ್ನು ಸರಿಸಮನಾಗಿ ಮೇಳವಿಸಿಕೊಂಡಿರುವ ಅಪೂರ್ವ ಕಟ್ಟಡ. ಇದನ್ನು ಸರ್ವತೋಭದ್ರ ಅಧಿಷ್ಠಾನದಲ್ಲಿ ವಿನ್ಯಾಸಗೊಳಿಸಲಾಗಿದೆ. ಇದು ಬೃಹತ್ ಕಂಬಗಳ ತೆರೆದ ಕಟ್ಟಡ. ಚೂಪಾದ ಕಮಾನುಗಳು ಮಕರ ತೋರಣದೊಂದಿಗೆ ಸಂಗಮಗೊಳ್ಳುತ್ತವೆ. ಇದರ ಅಲಂಕರಣೆ ಕಣ್ಸೆಳೆಯುವಂತಿದೆ ಇದರ ಮೇಲಂತಸ್ತು ಮುಚ್ಚಿದ್ದು, ಕಿಟಕಿಗಳಿಂದ ಕೂಡಿದೆ. ಇದುರ ಪಕ್ಕದಲ್ಲೇ ಎರಡು ಅರಮನೆಗಳ ಮೇಲುಪಾಯಗಳಿವೆ. ಮೂರು ಹಂತಗಳಿಂದ ಕೂಡಿದ್ದು, ಅತ್ಯಂತ ಎತ್ತರದ ಹಾಗೂ ಭವ್ಯವಾದ ಅರಮನೆಯ ಮೇಲುಪಾಯಾಗಿದೆ. ಇಷ್ಟು ಎತ್ತರದ ಅಧಿಷ್ಠಾನವುಳ್ಳ ಅರಮನೆಯ ಅವಶೇಷವನ್ನು ಹಂಪಿಯಲ್ಲಿ ಬೇರೆಡೆ ಕಾಣಲು ಸಿಗುವದಿಲ್ಲ. ಇದು ರಾಜನ ಮುಖ್ಯ ಅರಮನೆ ಎನ್ನುವುದರಲ್ಲಿ ಅನುಮಾನವಿಲ್ಲ. ಮತ್ತೊಂದು ಅರಮನೆಯು ನೀರಿನಿಂದ ಸುತ್ತಲೂ ಆವೃತವಾಗಿತ್ತು. ಇದು ಅಂದು ಮೋಹಕತೆಯಿಂದ ಕೂಡಿದ ಅರಮನೆಯಾಗಿರ ಬೇಕು. ಇಲ್ಲೇ ಅರಸನ ಖಾಸಗಿ ಭಂಡಾರದ ಕಟ್ಟಡ ಉತ್ತಮಸ್ಥಿತಿಯಲ್ಲಿದೆ. ಈ ಕಟ್ಟಡಗಳ ಸಮುಚ್ಚಯವನ್ನು ಕಾಯಲು ಮೂರು ಅಂದವಾದ ಕಾವಲು ಗೋಪುರಗಳಿವೆ.

ರಾಣಿವಾಸದ ಕಟ್ಟಡಗಳಿಂದ ಮುಂದೆ ಹೋದರೆ ಆನೆಲಾಯವಿದೆ. ಇದು ಹಂಪಿ ಯಲ್ಲಿ ದೊರೆಯುವ ಕಟ್ಟಡಗಳಲೆಲ್ಲ ವೈಭವ ಪೂರ್ಣವಾದುದು. ಇದು ಆಯತಾಕಾರದ ಕಟ್ಟಡ. ಇದು 11 ಕೊಠಡಿಗಳನ್ನೊಳಗೊಂಡಿದೆ. ಇವುಗಳಲ್ಲಿ ಒಂದೊಂದು ತನ್ನದೇ ಆದ ಲಾಲಿತ್ಯದಿಂದ ಕೂಡಿದ ಗುಮ್ಮಟವನ್ನು ಒಳಗೊಂಡಿದೆ. ಇದರ ಪಕ್ಕದಲ್ಲಿಯೇ ಕುದುರೆ ಲಾಯವೆಂದು ಕರೆಯಲಾದ ಸುಂದರ ಕಟ್ಟಡವಿದೆ. ಇದು ಅರಮನೆಯ ಕಛೇರಿ ಆಗಿದ್ದಿರಬಹುದು.

ರಾಣಿವಾಸದ ಅರಮನೆಯ ಪೂರ್ವಕ್ಕೆ ಅರಮನೆಗಳ ಸಮುಚ್ಚಯದ ಪ್ರಧಾನ ಭಾಗವಿದೆ. ಇಲ್ಲಿಯೇ ಇತಿಹಾಸ ಪ್ರಸಿದ್ಧವಾದ ಮಹಾನವಮಿ ದಿಬ್ಬವಿದೆ. ಇದು ಮೂರು ಹಂತಗಳ ವಿಶಾಲವಾದ ಉನ್ನತ ವೇದಿ. ಇದನ್ನು ಮಹಾನವಮಿ ಹಬ್ಬದ ವಿಧಿ ವಿಧಾನ ಗಳನ್ನು ಆಚರಿಸಲು ಉಪಯೋಗಿಸುತ್ತಿರಬೇಕು. ಇದರ ಹೊರಭಾಗದ ಗೋಡೆಗಳನ್ನು ಚಲುವಿನ ಶಿಲ್ಪಗಳಿಂದ ಸಿಂಗರಿಸಲಾಗಿದೆ. ಮಹಾನವಮಿ ದಿಬ್ಬ ಪೂರ್ವಕ್ಕೆ ಕರಿಕಲ್ಲಿನ ಮೆಟ್ಟಿಲುಗಳಿಂದ ಕೂಡಿದ ಅತ್ಯಂತ ಸುಂದರವಾದ ಪುಷ್ಕರಣಿಯನ್ನು 1985 ರಲ್ಲಿ ಪತ್ತೆ

ಹಚ್ಚಲಾಗಿದೆ. ಇದರ ಸೋಪಾನಗಳ ಜೋಡಣೆಯಲ್ಲಿ ಲಾಲಿತ್ಯವನ್ನು ಕಾಣಬಹುದು. ಇದಕ್ಕೆ ಕಮಲಾಪುರದ ಕೆರೆಯಿಂದ ನೀರನ್ನು ಕಲ್ಲಿನ ದೋಣಿಗಳಿಂದ ಪೂರೈಸಲಾಗುತ್ತಿತ್ತು. ಇಲ್ಲಿಯೇ ಅತ್ಯಂತ ದೊಡ್ಡದಾದ ಕಲ್ಯಾಣಿ ಇದೆ. ಇದು ಅರಮನೆಯ ಆವರಣಕ್ಕೆ ನೀರನ್ನು ಒದಗಿಸುತ್ತಿತ್ತು. ಮಹಾನವಮಿಯ ಉತ್ತರಕ್ಕೆ ರಾಜರ ಸಭಾಭವನವಿದೆ ಇದು ಅಂದು 100 ಅಂದದ ಕಂಭಗಳಿಂದ. ಅಲಂಕೃತವಾಗಿತ್ತು. ಕಂಬಗಳನ್ನು ನಿಲ್ಲಿಸಲು ಕಲ್ಲಿನ ಪೀಠಗಳನ್ನು ಇಡಲಾಗಿದೆ. ಇದಕ್ಕೆ ಅರಸರು ಪೂರ್ವದಿಂದ ಪ್ರವೇಶಿಸುತ್ತಿದ್ದರು. ಕೃಷ್ಣದೇವರಾಯನ ಆಸ್ಥಾನವು ಭುವನ ವಿಜಯವೆಂದು ಪ್ರಸಿದ್ಧವಾಗಿದೆ. ಈ ಸಭಾ ಭವನವೇ ಭುವನ ವಿಜಯವಾಗಿರಬಹುದು. ಇದರ ಉತ್ತರಕ್ಕಿರುವ ಪ್ರದೇಶದಲ್ಲಿ ಹಲವಾರು ಅರಮನೆಗಳ ಅವಶೇಷಗಳಿವೆ. ಅಬ್ದುರ್ ರಜಾಕನ ಹೇಳಿಕೆಗಳನ್ನು ಅನುಸರಿಸಿ ಇವುಗಳನ್ನು ದಣ್ಣಾಯಕ ಭವನ ಮತ್ತು ಟಂಕಸಾಲೆಯೆಂದು ಗುರುತಿಸಿದರೂ ಅನುಮಾನವೇ. ಇವು ನಿಜಕ್ಕೂ ಅರಸರ ಅರಮನೆ ಗಳು. ಇದರ ಪಕ್ಕದಲ್ಲಿ ಹಾಯುವ ಕಿರಿದಾರಿಯಿಂದ ಅರಸರು ಮತ್ತು ಅವರ ಮನೆಯವರು ರಾಮಚಂದ್ರ ದೇಗುಲಕ್ಕೆ ಪೂಜೆಗಾಗಿ ಬರುತ್ತಿದ್ದರು. ಇಲ್ಲಿಯೇ ಒಂಬತ್ತು ಅಂಕಣದ ಅರಮನೆಯ ಸುಂದರವಾದ ಕಟ್ಟಡ ಹಾಗೂ ಕಾವಲು ಗೋಪುರವಿದೆ.

ಮಹಾನವಮಿ ದಿಬ್ಬದಿಂದ ದಕ್ಷಿಣಕ್ಕೆ ರಾಣಿಯರ ಸ್ನಾನ ಗೃಹವಿದೆ. ಇದನ್ನು ರಾಣಿಯರು ಸ್ನಾನಕ್ಕಾಗಿ ಉಪಯೋಗಿಸುತ್ತಿದ್ದರೆಂಬುದು ಅನುಮಾನವೇ. ಅದೇನೆ ಇರಲಿ, ಇದೊಂದು ಅಪಾರ ಚಲುವಿನ ಕಟ್ಟಡ. ಹೊರಭಾಗ ಸರಳವಾಗಿದೆ. ಒಳಭಾಗದಲ್ಲಿ ಆಕರ್ಷಕ ಬಾಲ್ಕನಿಗಳಿವೆ. ನೀರು ಶೇಖರವಾಗುವ ಭಾಗ ಚೌಕಾಕಾರವಾಗಿ ಪ್ರತಿಭಾಗವೂ 15.24 ಮೀ ಉದ್ದವಿದ್ದು 1.83 ಮೀ ಆಳವಿದೆ. ಇದರ ಹತ್ತಿರದಲ್ಲಿಯೇ ಅಷ್ಟಮುಖದ ಜಲಗೃಹವಿದೆ. ಇವಲ್ಲದೇ ಹಲವಾರು ಸುಂದರವಾದ ಹೆಬ್ಬಾಗಿಲುಗಳಿವೆ. ಅವುಗಳಲ್ಲಿ ಭೀಮನ ಬಾಗಿಲು, ಶೃಂಗಾರದ ಹೆಬ್ಬಾಗಿಲು, ಸೋಮವಾರದ ಬಾಗಿಲು, ಇಸ್ಲಾಮಿಕ್ ಶೈಲಿಯ ದೊಡ್ಡ ಗುಮ್ಮಟದ ಹೆಬ್ಬಾಗಿಲು ಮುಂತಾದವು ಪ್ರಮುಖವಾಗಿವೆ. ಹಂಪಿಯ ಹತ್ತಿರವಿರುವ ಮಲಪನ ಗುಡಿಯಲ್ಲಿ ಇಸ್ಲಾಮಿ ಶೈಲಿಯಲ್ಲಿ ನಿರ್ಮಾಣವಾಗಿರುವ ಬಾವಿಯು ಜೀರ್ಣಾವಸ್ಥೆಯಲ್ಲಿದ್ದರೂ, ಅದರ ವೈಭವಪೂರ್ಣವಾದ ಚಲುವು ಕುಗ್ಗಿಲ್ಲ. ವಿಜಯನಗರದಲ್ಲಿ ಮುಸ್ಲಿಂ ಪ್ರದೇಶವೊಂದಿತ್ತು. ಹಂಪಿ ಹತ್ತಿರವಿರುವ ಕಡಿರಾಮಪುರದ ಮುಸ್ಲಿಮರ ಎರಡು ಸುಂದರವಾದ ಗೋರಿಗಳು ಆ ಅಂಶವನ್ನು ಪುಷ್ಟೀಕರಿಸುತ್ತವೆ.

ವಿಜಯನಗರ ಕಾಲದ ಅರಮನೆಗಳನ್ನು ಆನೆಗೊಂದಿ, ಪೆನುಕೊಂಡ ಮತ್ತು ಚಂದ್ರಗಿರಿಯಲ್ಲಿ ಕಾಣಬಹುದು. ಇವು ಇಂದಿಗೂ ಸುಸ್ಥಿತಿಯಲ್ಲಿ ಉಳಿದಿವೆ. ಆನೆಗೊಂದಿಯ ಗಗನ ಮಹಲು ಆ ಕಾಲದ ಉತ್ತಮ ಕಟ್ಟಡಗಳಲ್ಲೊಂದು. ಇದು ರಚನೆಯಲ್ಲಿ ಕಮಲ ಮಹಲನ್ನು ಹೋಲುತ್ತದೆ. ಪೆನುಕೊಂಡದಲ್ಲಿರುವ ಅರಮನೆಯಲ್ಲಿ

ಸಹ ಗಗನ ಮಹಲೆಂದು ಕರೆಯುತ್ತಾರೆ. ಇದು ಸುಂದರವಾದ ಕಟ್ಟಡವಾದರೂ ತೀರಾ ನಿರ್ಲಕ್ಷ್ಯಕ್ಕೀಡಾಗಿದೆ. ಚಂದ್ರಗಿರಿಯ ರಾಜಮಹಲ್ ಮತ್ತು ರಾಣಿ ಮಹಲ್ ಗಳು ಸೊಗಸಾಗಿವೆ. ಇವೆರಡು ಅರಮನೆಗಳು ಮಧ್ಯಯುಗದ ಅರಮನೆಗಳ ಭವ್ಯತೆ ಮತ್ತು ಮೋಹಕತೆಯನ್ನು ಮೈತುಂಬಿಕೊಂಡಿವೆ. ಇಲ್ಲಿನ ರಾಜಮಹಲ್ ಮೂರಂತಸ್ತಿನ ಉಜ್ವಲವಾದ ಕಟ್ಟಡ.

ಹಂಪೆಯಲ್ಲಿರುವ ಸೌಧಗಳಲ್ಲದೆ ವಿಜಯನಗರದ ದೇವಾಲಯಗಳ ತಾಡಪತ್ರಿ, ಲೇಪಾಕ್ಷಿ, ಕುಂಭಕೋಣ ಮತ್ತು ಶ್ರೀರಂಗಂ ಮುಂತಾದ ಕಡೆಗಳಲ್ಲೂ ಕಂಡುಬರುತ್ತವೆ.

ರಾಜಧಾನಿಯಲ್ಲಿರುವ ಕೆಲವು ಧಾರ್ಮಿಕವಲ್ಲದ ರಚನೆಗಳಾದ ಕಮಲ ಮಹಲ್, ಆನೆಯ ಲಾಯ ಮೊದಲಾದವುಗಳ ಮೇಲೆ ಮುಸ್ಲಿಂ ವಾಸ್ತುಶಿಲ್ಪದ ಪ್ರಭಾವವಿದೆ. ಈ ಇಟ್ಟಿಗೆ ಗಾರೆಯ ರಚನೆಗಳಲ್ಲಿ ಮುಸ್ಲಿಂ ಕಮಾನು ಮತ್ತು ಗಮಟಗಳಿವೆ. ಆದರೆ ಕಮಲ ಮಹಲ್‌ನಲ್ಲಿ ಅಲಂಕರಣಾ ವಿನ್ಯಾಸಗಳು ಶುದ್ಧ ಭಾರತೀಯ ವಾದವುದ ಗಳು.

ವಿಜಯನಗರ ಕಾಲದಲ್ಲಿ ದಕ್ಷಿಣ ಭಾರತದ ಕಲೆಯು ಶ್ರೀಮಂತ ಅಭಿವ್ಯಕ್ತಿಯ ಪರಿಪೂರ್ಣತೆ ಮತ್ತು ಸ್ವಚ್ಛಂಧತೆಗಳನ್ನು ಕಂಡಿತು. ಇಂಥ ಅಭಿವ್ಯಕ್ತಿಯು ಸಾಮ್ರಾಜ್ಯದ ಘನಧ್ಯೇಯದ ಸಾಮಾನ್ಯ ಪ್ರಜ್ಞೆಗನುಗುಣವಾಗಿತ್ತು. ಇಸ್ಲಾಂನ ಆಕ್ರಮಣದ ವಿರುದ್ಧ ಹಿಂದೂ ಧರ್ಮದ ಉಳಿದು ಬಂದಂಥ ಅಂಶಗಳ ರಕ್ಷಣೆ ಮತ್ತು ಪ್ರಗತಿಯೇ ಈ ಘನ ಧ್ಯೇಯ.

ವಿಜಯನಗರದ ಮೂರ್ತಿಶಿಲ್ಪವು ಬೆಣಚುಕಲ್ಲಿನದು. ಅದು ಸರಳ ಮತ್ತು ಗಂಭೀರವಾದುದು. ಹೊಯ್ಸಳರ ಕಾಲದ ವಿಪುಲ ಅಲಂಕರಣವೂ ಬಳಪದ ಕಲ್ಲಿನ ಮಾಧ್ಯಮವೂ ವಿಜಯನಗರದ ಕಾಲದಲ್ಲಿಲ್ಲ. ಪ್ರಾಚೀನ ಕರ್ನಾಟಕದ ಶಿಲ್ಪಗಳ ಸರಳತೆ ಮತ್ತು ನಿರುದ್ವಿಗ್ನತೆ ಮತ್ತೆ ಅಲ್ಲಿ ಕಂಡುಬರುತ್ತದೆ. ವಿಜಯನಗರದಲ್ಲಿನ ನರಸಿಂಹನ ಭಾರಿ ಪ್ರತಿಮೆ ಮತ್ತು ವಿಠಲ ಮಂದಿರದಲ್ಲಿನ ಕಲ್ಲಿನ ರಥ ಆ ಕಾಲದ ಶಿಲ್ಪಿಗಳ ಕೌಶಲ್ಯದ ಉತ್ತಮ ನಿದರ್ಶನಗಳು. ತಿರುಪತಿಯಲ್ಲಿರುವ ಆ ಕಾಲದ ಕೃಷ್ಣದೇವ ಮತ್ತು ಅವನ ರಾಣಿಯರ ಹಾಗೂ ಎರಡನೆಯ ವೆಂಕಟನ ಕಂಚಿನ ಪ್ರತಿಮೆಗಳ ಚೋಳರ ಕಾಲದ ರೌಂಜ ಶಿಲ್ಪವು ವಿಜಯನಗರದ ಕಾಲದಲ್ಲಿಯೂ ಮುಂದುವರಿಯಿತೆಂದು ಸಾಕ್ಷ್ಯಾಧಾರಗಳು ಅರುಹುತ್ತವೆ.

ಆಧಾರ ಗ್ರಂಥಗಳು

1) ಕರ್ನಾಟಕದ ಪ್ರೌಢ ಇತಿಹಾಸ ಮತ್ತು ಸಂಸ್ಕೃತಿ -ಡಾ. ಎಸ್.ಎನ್. ಶಿವರುದ್ರಸ್ವಾಮಿ ಪೌರಸ್ತ್ಯ ಪ್ರಕಾಶನ ತಿಪಟೂರು -ಮೈಸೂರು, ಅಧ್ಯಾಯ -17 ಪು. - 274 - 284

2) *Hampi Ruins* - ಲಾಂಗ್ ಹರ್ಸ್ಟನ್ - 1917 ರ ಪ್ರಕಟಣೆ

3) - ಜಾರ್ಜ್ ಮಿಷಲ

4) *Vijayanagara Temples in Karnataka* - Dr. S. N. ಶಿವರುದ್ರಸ್ವಾಮಿ.

5) *ಭಾರತೀಯ ಸಂಸ್ಕೃತಿಯ ಸಮೀಕ್ಷೆ* -ಡಾ. H. V. ಶ್ರೀನಿವಾಸ ಮೂರ್ತಿ ಮತ್ತು ಡಾ. ಸೂರ್ಯನಾಥ ಕಾಮತ್.

೨೫. ವಿಜಯನಗರ ಕಾಲದ ಶಾಸನೋಕ್ತ ಲಕ್ಷ್ಮೀಕಾಂತ ದೇವಾಲಯ

ಡಾ. ಬಿ. ನಂಜುಂಡಸ್ವಾಮಿ

ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆ ಸಾಂಸ್ಕೃತಿವಾಗಿ ಬಹಳ ಶ್ರೀಮಂತವಾದ ಪ್ರದೇಶ. ತುಮಕೂರು ನಗರವನ್ನು ಸಾಂಸ್ಕೃತಿಕವಾಗಿ ಎರಡು ವಿಭಾಗಗಳಾಗಿ ಅಭ್ಯಾಸ ಮಾಡಲಾಗುತ್ತದೆ. ಕೋಟೆ ಪ್ರದೇಶ ಮತ್ತು ಪೇಟೆ ಪ್ರದೇಶ ಎಂದು. ಕೋಟೆ ಇದ್ದ ಜಾಗದಲ್ಲಿ ಈಗ ಕೋಟೆ ಉಳಿದಿಲ್ಲ. ಕೋಟೆ ಬಾಗಿಲಲ್ಲಿ ಇದ್ದ ಆಂಜನೇಯ ದೇವಸ್ಥಾನ, ಚಿಕ್ಕಪೇಟೆ ಮುಖ್ಯ ರಸ್ತೆಯಲ್ಲಿ ಇದ್ದು, ಬಾಗಿಲು ಆಂಜನೇಯ ಎಂದು ಕರೆಯಲಾಗುತ್ತದೆ. ಅದು(ಕೋಟೆ)ಬಾಗಿಲು ಆಂಜನೇಯ. ಈ ದೇವಾಲಯಕ್ಕೆ ಹೊಂದಿಕೊಂಡಂತೆ ಇರುವಂತಹದು 'ಸಂಗಮೇಶ್ವರ ದೇವಾಲಯ.' ಆ ದೇವಾಲಯದ ನಂತರ ಕೋಟೆ ವೀರಭದ್ರಸ್ವಾಮಿ ದೇವಸ್ಥಾನವನ್ನು ನೋಡಬಹುದು. ಇದೇ ಪ್ರದೇಶದಲ್ಲಿ ಕೋಟೆ ಕೊಲ್ಲಾಪುರದಮ್ಮ ದೇವಾಲಯವಿದೆ. ಚಿಕ್ಕಪೇಟೆ ಸಮೀಪ ಇರುವ ರಾಘವೇಂದ್ರಸ್ವಾಮಿ ಮಠದಲ್ಲಿ ಕೋಟೆ ಬಾಗಿಲು ಆಂಜನೇಯ ದೇವಾಲಯವಿದೆ. ತುಮಕೂರಿನ ಹಳೆಯ ಮಾರ್ಕೆಟ್ ಹತ್ತಿರ ಇರುವ ಕೋಟೆ ಆಂಜನೇಯ ದೇವಾಲಯ ಉಳಿದುಬಂದಿದೆ. ಈ ಬಾಗಿಲುಗಳ ಲೆಕ್ಕದಲ್ಲಿ ತುಮಕೂರಿನ ಕೋಟೆಗೆ ನಾಲ್ಕು ಬಾಗಿಲುಗಳು ಇದ್ದಿರಬೇಕು. ನಮಗೆ ಮೂರು ಬಾಗಿಲು ಬಗ್ಗೆ ಮಾಹಿತಿ ಸಿಕ್ಕಿದೆ. ಎಲ್ಲಾ ಬಾಗಿಲುಗಳಲ್ಲಿ ಆಂಜನೇಯನನ್ನು ಕೋಟೆ ರಕ್ಷಣಾರ್ಥವಾಗಿ ಪ್ರತಿಷ್ಠೆ ಮಾಡುವ ಸಂಪ್ರದಾಯದಂತೆ ಇಲ್ಲಿಯೂ ಸ್ಥಾಪನೆಗೊಂಡಿರಬೇಕು. ಹಳೆಯ ಊರು ಬಹಳ ರಕ್ಷಣಾತ್ಮಕ ಪ್ರದೇಶದಲ್ಲಿ ಚಿಕ್ಕಪೇಟೆ, ಅಗ್ರಹಾರ, ಪಂಚಾಂಗದವರ ಬೀದಿ, ಯಜಮಾನರ ಬೀದಿ, ದಿವಾನರ ಬೀದಿ, ಹತ್ತಾರು ದೇವಸ್ಥಾನಗಳು ಇದ್ದು ಕಾಲಕ್ರಮೇಣ ತುಮಕೂರು ನಗರವೇ ಎರಡು ಭಾಗವಾಗಿ ಕೋಟೆ ಪ್ರದೇಶ ಬೇರೆ, ಪೇಟೆ ಪ್ರದೇಶ ಬೇರೆ ಎಂದು ವ್ಯವಹರಿಸಿದೆ. ಕೋಟೆ ಪ್ರದೇಶ ವೀರಶೈವ ಸಮಾಜದ ಯಜಮಾನರು ಇದ್ದರೆ, ಪೇಟೆ ಪ್ರದೇಶಕ್ಕೂ ಬೇರೆ ಯಜಮಾನರು ಇದ್ದರು. ಎರಡೂ ಕಡೆ ನಂದಿಧ್ವಜ ವ್ಯವಸ್ಥೆ ಬೇರೆ, ಬೇರೆ. ಗೌರಿ ಹಬ್ಬದ 'ದೇಶದ ಗೌರಿ' ಪ್ರತಿಷ್ಠೆ ಪೂಜೆ ಬೇರೆ ಬೇರೆ ಇದು ಹಲವು ಸಾರಿ ಪೈಪೋಟಿಗೂ ಕಾರಣವಾಗಿತ್ತು. ಅಗ್ನಿವಂಶ ಕ್ಷತ್ರಿಯರು ಇಂದಿಗೂ ಕೋಟೆ ಕೊಲ್ಲಾಪುರದಮ್ಮ ದೇವಾಲಯ, ಪೇಟೆ ಕೊಲ್ಲಾಪುರದಮ್ಮ ದೇವಾಲಯದ ಜಾತ್ರೆಗಳನ್ನು ಬೇರೆ ಬೇರೆ ಮಾಡುತ್ತಾರೆ. ವಿಜಯನಗರದ ಅರಸರ ಕಾಲದಲ್ಲಿ ಸಾಕಷ್ಟು ಅಭಿವೃದ್ದಿಗೊಂಡು

ತುಮಕೂರು ಕೋಟೆ ಪ್ರದೇಶದ ಚಿಕ್ಕಪೇಟೆಯ ರಸ್ತೆಗೆ ಹೊಂದಿಕೊಂಡಂತೆ ಇರುವ ವೃತ್ತದಲ್ಲಿ ಈ ಶಾಸನೋಕ್ತ ಲಕ್ಷ್ಮೀಕಾಂತ ದೇವಾಲಯವಿದೆ.

ಲಕ್ಷ್ಮೀಕಾಂತ ದೇವಾಲಯ ಬಹಳ ವಿಶಾಲವಾದ ದೇವಾಲಯ 200 ಅಡಿ ಉದ್ದ 150 ಅಡಿ ಅಗಲವಿದೆ. ಈಗ ಇರುವ ದೇವಾಲಯದ ವಾಸ್ತು ವಿಜಯನಗರ ಶೈಲಿಯನ್ನು ಹೋಲುತ್ತದೆ. ದೇವಾಲಯಕ್ಕೆ ಭವ್ಯವಾದ ಮಹಾದ್ವಾರ ನಿರ್ಮಾಣ ಮಾಡಿದ್ದು, ಈ ಮೊದಲು ರಾಜಗೋಪುರ ನಿರ್ಮಾಣಮಾಡುವ ಉದ್ದೇಶ ಇತ್ತು ಎಂದು ತೋರುತ್ತದೆ. ರಾಜಕೀಯ ಏರುಪೇರುಗಳಿಂದ ಸಾಧ್ಯವಾಗಲಿಲ್ಲ. ಮಹಾದ್ವಾರ ಭವ್ಯವಾಗಿದ್ದು, ಈಗ ಅದರ ಇಕ್ಕೆಡೆ ಅಂಗಡಿ ಮಳಿಗೆ ನಿರ್ಮಿಸಿರುವುದರಿಂದ ಅದರ ಭವ್ಯತೆ ನಮಗೆ ತಿಳಿದು ಬರುವುದಿಲ್ಲ. ಮಹಾದ್ವಾರದ ಎಡಗಡಯೆ ಎರಡನೆಯ ಕಂಬದಲ್ಲಿ ಗಣಪತಿ ಉಬ್ಬು ಶಿಲ್ಪವನ್ನು ಕಂಬದ ಮಧ್ಯಬಾಗದಲ್ಲಿಕಾಣಬಹುದು. ದೇವಾಲಯಕ್ಕೆ ಪ್ರದಕ್ಷಿಣಾ ಪಥವಿದ್ದು ದೇವಾಲಯದ ಬಲಭಾಗದಲ್ಲಿ ಬಹಳ ಪ್ರಾಚೀನವಾದ ನಾಗಶಿಲ್ಪವಿದ್ದು, ನಾಗಶಿಲ್ಪವನ್ನು ಬಂಡೆಯಮೇಲೆ ಬಿಡಿಸಿದ್ದಾರೆ. ಅದೇ ಸ್ಥಳದಲ್ಲಿ ಎರಡು ಗಣಪತಿ ಮತ್ತು ಆಂಜನೇಯ ವಿಗ್ರಹಗಳನ್ನು ನೋಡಬಹುದು. ಲಕ್ಷ್ಮೀಕಾಂತನ ಎದುರು ಶಿಲಾಗರುಡಕಂಭವಿದ್ದು, ಗರುಡಕಂಭದಲ್ಲಿ ಅಂಜಲಿಬದ್ಧನಾಗಿರುವ ಆಂಜನೇಯ ವಿಗ್ರಹ ನೋಡಬಹುದು. ಆ ನಂತರ ಸಣ್ಣ ಬಲಿಪೀಠ, ನಂತರ ಮರದ ಧ್ವಜ ಸ್ತಂಭವಿದೆ. ಅದರ ಮುಂದೆ ಅಂಜಲಿಬದ್ಧನಾಗಿರುವ ಆಂಜನೇಯ ಸುಮಾರು ಎರಡು ಅಡಿಎತ್ತರದ ವಿಗ್ರಹವನ್ನು ಕಿರಿಯ ಕೋಷ್ಠದಲ್ಲಿ ಪ್ರತಿಷ್ಠೆ ಮಾಡಲಾಗಿದೆ. ದರ ಮುಂದೆ ವಿಳೇದೆಲೆ ಆಕಾರದ ಒಂದು ಬೃಹತ್ ಕಲ್ಲಿನ ಯಜ್ಞಕುಂಡವಿದೆ. ಅದರ ಸುತ್ತ ಶಾಸನವಿದೆ. ಅರ್ಚಕರ ಪ್ರಕಾರ ಈ ಯಜ್ಞಕುಂಡ ಹೋದ ಶತಮಾನದ್ದು. ಶಾಸನ ಬಹಳ ಅಸ್ಪಷ್ಟವಾಗಿರುವುದ ರಿಂದ ಓದಲು ಬಹಳ ಕಷ್ಟ.

ಮುಖ ಮಂಟಪದ ಇಕ್ಕೆಡೆ ಆನೆ ಇರುವ ಐದು ಮೆಟ್ಟಿಲುಗಳು ಇವೆ. ಮುಖ ಮಂಟಪವು ಹದಿನಾರು ಬೃಹತ್ ಕಂಬಗಳಿಂದ ನಿರ್ಮಾಣವಾಗಿದೆ. ಮುಖಮಂಟಪದ ಕಂಬಗಳು ಚೌಕಾಕಾರದ್ದು ನೋಡಲು ನಯನ ಮನೋಹರವಾಗಿದೆ. ಮುಖಮಂಟಪಕ್ಕೆ ಪ್ರತ್ಯೇಕವಾದ ಅಧಿಷ್ಠಾನವಿದ್ದು, ಇದು 'ಕಪೋತಬಂಧ'ಪ್ರಕಾರದ್ದಾಗಿದೆ. ಸುತ್ತಲೂ ಗೋಡೆ ಇದ್ದು ಮುಂಭಾಗ ಮಾತ್ರ ತೆರೆದಿದೆ. ಮುಖಮಂಟಪದಲ್ಲಿನ ಮಧ್ಯದ ಕಂಭಗಳು 'ಸಂಯೋಗಸ್ತಂಭ'ವೆಂಬ ಪ್ರಕಾರಕ್ಕೆ ಹತ್ತಿರವಾಗಿದೆ. ಹಂಪೆಯ ದೇವಾಲಯಗಳಂತೆ ಇದರಲ್ಲಿ ಒಂದು ಕಂಬದಸುತ್ತ ಬಿಡಿ, ಕಂಭದ ರಚನೆ ಇರದೆ ಅವು ಮೂಲಕಂಭಕ್ಕೆ ಸೇರಿಕೊಂಡಂತಿದೆ. ಇದರ ಮೇಲೆ ಪುಷ್ಪಬೋದಿಗೆಯೂ, ವಿತಾನದಲ್ಲಿ ಕಮಲದ ಅಲಂಕರಣವೂ ಇದೆ. ಮುಖಮಂಟಪದ ಮುಂಭಾಗದಲ್ಲಿ ಸಾಲಾಗಿ ನಾಲ್ಕು ಕಂಭಗಳಿವೆ. ಇದು ಸಿಂಹಸವಾರರಿಂದ ಕೂಡಿದ್ದು, ಬಿಡಿಯಾಗಿ ರಚಿಸಲ್ಪಟ್ಟ 'ಏಕಪಾನ ಸಂಯೋಗ

ಸ್ತಂಭ'ವಾಗಿದೆ. ಈ ಮೊದಲು ಕಂಭಗಳ ಮಧ್ಯೆ ಗೋಡೆ ಇರಲಿಲ್ಲ, ನಂತರ ರಕ್ಷಣಾರ್ಥ ವಾಗಿ ಕಟ್ಟಿದ್ದಾರೆ. ಕಂಭದ ಅಲಂಕಾರಿಕೆಗಳು ಎಡಭಾಗ, ಬಲಭಾಗ ಮತ್ತು ಮಂಟಪದ ಮುಂಭಾಗ ಸ್ಪಷ್ಟವಾಗಿ ಗೊತ್ತಾಗುತ್ತದೆ.

ನವರಂಗಕ್ಕೆ ಪೂರ್ವ ಮತ್ತು ಉತ್ತರಾಭಿಮುಖವಾಗಿ ಎರಡೂ ಕಡೆಯಿಂದಲೂ ದ್ವಾರವಿದ್ದು ಪೂರ್ವಾಭಿಮುಖವಾಗಿ ದ್ವಾರದ ದ್ವಾರಪಾಲಕರು ಸುಮಾರು ನಾಲ್ಕು ಅಡಿ ಎತ್ತರವಿದ್ದು, ಬಹಳ ಮಾಟವಾದ ಕೆತ್ತನೆ ಉಳ್ಳದಾಗಿದೆ. ದ್ವಾರದಲ್ಲಿ ಗಂಗೆ, ಯಮುನೆಯರಿಂದ ಕೂಡಿದ ಬಳ್ಳಿ ಶಾಖೆಯ ಉಬ್ಬುಶಿಲ್ಪವಿದ್ದು ದ್ವಾರದ ಶಿರೋಭಾಗದಲ್ಲಿ ಗಜಲಕ್ಷ್ಮೀ ಕೆತ್ತನೆ ಇದೆ. ಉತ್ತರದ್ವಾರದ ದ್ವಾರಪಾಲಕರ ಕೆತ್ತನೆಯು ಸುಂದರವಾಗಿದೆ. ತ್ರಿಭಂಗಿಯಲ್ಲಿ ಇರುವ ಉತ್ತರಬಾಗಿಲಿನ ದ್ವಾರಪಾಲಕರು ಸುಮಾರು ಎರಡುವರೆ ಅಡಿ ಎತ್ತರವಿದ್ದು, ದ್ವಾರದಲ್ಲಿ ಯಾವುದೇ ವಿಧವಾದ ಅಲಂಕಾರಿಕೆಗಳು ಇಲ್ಲ.

ನವರಂಗದ ಬೃಹತ್ ಕಂಬಗಳಲ್ಲಿ ಆನೇಕ ಉಬ್ಬುಶಿಲ್ಪವಿದ್ದು, ಬಹಳಷ್ಟು ಶಿಲ್ಪ ಗಳು ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡಿವೆ. ಕೇಶವ, ಗಣಪತಿ, ನೃತ್ಯಗಾತಿ, ಆಂಜನೇಯ, ಹಸು ಲಿಂಗದ ಮೇಲೆ ಹಾಲು ಕರೆಯುವಂತಹದು. ಶರಭ, ಆನೆ, ರಾಮಾನುಜಾಚಾರ್ಯರು, ಸುಖಾಸೀನ ವಿಷ್ಣುಮೂರ್ತಿ, ಯೋಗಾನರಸಿಂಹ, ಕಾಳಿಂಗ ಮರ್ದನ ಕೃಷ್ಣ, ಬೆಣ್ಣೆ ಕೃಷ್ಣ ಮುಂತಾದ ಅಸ್ಪಷ್ಟ ಉಬ್ಬು ಚಿತ್ರಗಳನ್ನು ನೋಡಬಹುದು. ಗರ್ಭಗುಡಿಯ ಬಲಕ್ಕೆ ಸಣ್ಣ ಗರ್ಭಗುಡಿಯಲ್ಲಿ ಉತ್ತರಾಭಿಮುಖವಾಗಿ 'ವಿಷ್ವಕ್ಸೇನ' ಪೂರ್ವಭಿಮುಖವಾಗಿ, 1.ಪೊಯ್ಯಾಳ್ವಾರ್ 2.ಪೆರಿಯಾಳ್ವಾರ್ 3.ನಮ್ಮಾಳ್ವಾರ್ ವಿಗ್ರಹಗಳು ಇವೆ.

ಈ ಆಳ್ವಾರುಗಳು ರಾಮಾನುಜಾಚಾರ್ಯರ ಕಾಲಕ್ಕಿಂತ ಹಿಂದೆ ಇದ್ದವರು. ವಿಗ್ರಹ ಗಳ ಮೇಲು ಭಾಗ ಗೋಡೆಯಲ್ಲಿ ವಿಶೇಷವಾಗಿ ತ್ರಿಕೊನ ಗೂಡುಗಳು, ತ್ರಿಕೋನ ಆಕಾರ ದಲ್ಲಿ ಬಿಡಿಸಲಾಗಿದೆ. ಎಡಭಾಗದ ಗರ್ಭಗುಡಿಯಲ್ಲಿ ದೊಡ್ಡದಾದ ಪೀಠವಿದ್ದು ಪೀಠದ ಮುಂಭಾದದ ಗರುಡನ ಉಬ್ಬು ಶಿಲ್ಪವಿದೆ. ಈ ಪೀಠದ ಮೇಲೆ ಇತ್ತೀಚೆಗೆ ಸುಮಾರು ನೂರೈವತ್ತು ವರ್ಷಗಳ ಹಿಂದೆ ಲಕ್ಷ್ಮೀವಿಗ್ರಹವನ್ನು ಪ್ರತಿಷ್ಠೆ ಮಾಡಲಾಗಿದೆ. ಈ ಪೀಠದ ಮೇಲೆ ಇದ್ದ ವಿಗ್ರಹ ಯಾವುದು? ಆ ಬಗ್ಗೆ ಮಾಹಿತಿ ಇಲ್ಲ. ಅರ್ಧ ಮಂಟಪದಲ್ಲಿ ಉತ್ಸವ ಮೂರ್ತಿಗಳನ್ನು ಇಡಲಾಗಿದೆ. ಶ್ರೀದೇವಿ, ಭೂದೇವಿ ವಿಗ್ರಹ ಗಳನ್ನು ಕಳ್ಳರು ಕದ್ದು ಕರಗಿಸಿ ಬಿಟ್ಟರು. ಕೇಶವ ವಿಗ್ರಹ ಮಾತ್ರ ಪುರಾತನವಾದ್ದದ್ದು. ಶ್ರೀದೇವಿ -ಭೂ ದೇವಿ ವಿಗ್ರಹ ಸುಮಾರು ನೂರೈವತ್ತು ವರ್ಷಗಳ ಹಿಂದೆ ಮತ್ತೆ ಮಾಡಿಸಿರುವಂತಹದು. ಗರ್ಭಗುಡಿ ಸ್ವಲ್ಪ ವಿಸ್ತಾರವಾಗಿದೆ. ಗರ್ಭಗುಡಿಯ ಭಿತ್ತಿಯಲ್ಲಿ ಭುವನೇಶ್ವರಿ ಇದೆ. ನಯನ ಮನೋಹರವಾದ ಲಕ್ಷ್ಮೀಕಾಂತ ವಿಗ್ರಹವನ್ನು ಪೀಠದ ಮೇಲೆ ಸ್ಥಾಪನೆ ಮಾಡಲಾಗಿದೆ. ಪೀಠದ ಮುಂಭಾಗ ಗರುಡನ ಉಬ್ಬುಶಿಲ್ಪವಿದೆ.

ಸ್ಥಾಪನೆಗೊಂಡಿರುವ ಲಕ್ಷ್ಮೀಕಾಂತ ಸ್ವಾಮಿಯ ವಿಗ್ರಹವು ಸುಮಾರು ನಾಲ್ಕೂವರೆ ಅಡಿ ಎತ್ತರವಿದೆ. ಮೂರೂವರೆ ಅಡಿ ಅಗಲವಿದೆ, ಸುಖಾಸೀನ ಮೂರ್ತಿ. ಸ್ವಾಮಿಯ ತೊಡೆಯ ಮೇಲೆ ಅಮ್ಮನವರು ಕುಳಿತಿ ದ್ದಾರೆ. ಈ ವಿಗ್ರಹ ಸುಮಾರು ಹದಿನಾಲ್ಕನೇ ಶತಮಾನದ್ದು. ಲಕ್ಷ್ಮೀಕಾಂತ ಲಲಿತಾಸನ ಭಂಗಿಯಲ್ಲಿ ಕುಳಿತ್ತಿದ್ದಾನೆ. ಕಿರೀಟ ಧರಿಸಿದ ಸ್ವಾಮಿಯ ಕಿವಿಗಳಲ್ಲಿ ಮಕರಕುಂಡಲವಿದೆ. ಕತ್ತಿನಲ್ಲಿ ಅಡ್ಡಿಕ್ಕೆ, ದೊಡ್ಡಪದಕದ ಹಾರ, ಉರಹಾರವಿದೆ. ಯಜ್ಞೋಪವೀತ ಧರಿಸಿರುವ ಸ್ವಾಮಿ ಬಲಕೈಯಲ್ಲಿ ಚಕ್ರ, ಎಡದ ಕೈಯಲ್ಲಿ ಶಂಖ, ಬಲದಕೈಯಲ್ಲಿ ಕಮಲವನ್ನು ಹಿಡಿದುಕೊಂಡು ಎಡಗೈಯೊಂದು ಲಕ್ಷ್ಮೀಯ ಕಟಿಯನ್ನು ಆವರಿಸಿದೆ. ಬಲಗಾಲನ್ನು ಕೆಳಚಾಚಿ ಭೂಮಿ ಪಾದಸ್ಥನಾಗಿದ್ದು, ಎಡಗಾಲನ್ನು ಮಡಚಿ ಕುಳಿತಿದ್ದಾನೆ. ಲಕ್ಷ್ಮೀದೇವಿಯ ಸ್ವಾಮಿಯ ಎಡತೊಡೆಯಮೇಲೆ ಕುಳಿತಿದ್ದು ಬಲಗೈ ಸ್ವಾಮಿಯನ್ನು ಬಳಸಿದೆ. ಎಡಕೈಯಲ್ಲಿ ಪದ್ಮವನ್ನು ಹಿಡಿದಿದ್ದಾಳೆ. ಕೀರಿಟಧಾರಿಣಿಯಾಗಿ , ಕಂಠಿಹಾರ, ಉರಹಾರ, ಸ್ತನಬಂಧ, ಒಡ್ಯಾಣ ಮುಂತಾದ ಆಭರಣಗಳನ್ನು ಧರಿಸಿದ್ದಾಳೆ. ಕಾಲಿನಲ್ಲಿ ಕಾಲಂದಿಗೆ, ಕಿರುಗೆಜ್ಜೆ ಮತ್ತು ಆಲಂಕಾರಿಕ ವಸ್ತುಗಳಿಂದ ಶೃಂಗರಿಲ್ಪಟ್ಟಿದೆ. ಪ್ರಭಾವಳಿ ಯಲ್ಲಿ ಸೂಕ್ಷ್ಮವಾಗಿ ದಶಾವತಾರಗಳನ್ನು ಕೆತ್ತಲಾಗಿದೆ. ರಥಸಪ್ತಮಿಯ ದಿನ ಪ್ರತಿವರ್ಷ ಜಾತ್ರಾ ಮಹೋತ್ಸವ ನೆರವೇರುತ್ತದೆ. ಆ ದಿನ ತುಮಕೂರಿನ ಜಾತ್ರಾಸಂತೆ ದೇವಸ್ಥಾನದ ಹತ್ತಿರವೇ ನಡೆಯುತ್ತದೆ. ಸಂತೆ ಸುಂಕ ದೇವಸ್ಥಾನ ದ ಜಾತ್ರೆಗೆ ಉಪಯೋಗಿಸಲ್ಪಡುತ್ತಾ ಇತ್ತು. ತುಮಕೂರಿನಲ್ಲಿ 1905ರ ಸುಮಾರಿನಲ್ಲಿ ಪ್ರಾರಂಭವಾದ ಥಿಯೋಸಫಿಕಲ್ ಲಾಡ್ಜ್ ಹೆಸರು, 'ಲಕ್ಷ್ಮೀಕಾಂತ ಲಾಡ್ಜ್' ಎಂದು ಹಯವದನರಾಯರು ಈ ಕೆಳಕೆಂಡಂತೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು.

Mysore Gzeetteer Volume 5. C.Hayavadan Rao 1930 pp. 550-551.

The Lakshmikantha Temple at the place which faces east is a Dravidian Structure consisting of a Garbhgraha of Adytum a sukanasi or vestibule, a navaranga or central hall, a mukha mantapa or front hall and a prakara or enclosure. The Navaranga has a second entrance on the north. The god Lakshmikanta is a seated figure. About 4.5 feet high, with the goddess seated on his left thigh. The temple appears to be older than A.D.1560 as evidenced by inscription on the wall to the right of the Navaranga entrance (*E.C.*X1 Tumkur-4) which records a grant to it in that year Jagannathadevamaha Arasu a subordinate of the Vijayanagar King, Sadasiva Raya.

*E.C.*XI ತುಮಕೂರು - 4


ತುಮಕೂರಿನಲ್ಲಿ ಲಕ್ಷ್ಮೀಕಾಂತ ದೇವಸ್ಥಾನದಲ್ಲಿರುವ ಕಲ್ಲು

1. ಸ್ವಸ್ತಿಶ್ರೀ ಜಯಾದ್ಯುದಯ ಶಾಲಿವಾಹನಶಕ ವರ್ಷಂಬುಲು 1482 ನ. ರೌದ್ರಿನಾಮ ಸಂವತ್ಸರ ಕಾರ್ತಿ.
2. ಕ.ಶ 12ಲು ಮದ್ರಾಜಾಧಿರಾಜ ಪರಮೇಶ್ವರ ಶ್ರೀ ವೀರಸದಾಶಿವ ರಾಯಮಹಾರಾಯಲು
3. ವಿಜಯನಗರ ಪುರವರ ರತ್ನಸಿಂಹಾಸನಾರೊಡಲ್ಯೆ ಪೃಥವಿ ಸಾಂಮ್ರಾಜ್ಯಂ ಚೇಸ್ತುಂಡುಗಾನು ಶ್ರೀಮನ್ಮಹಾಮಂ
4. ಡಲೇಶ್ವರಅತ್ರೇಯಗೋತ್ರಂ ಅಶ್ವಲಾಯನಸೂತ್ರ ಶ್ರೀದೇವಪ್ಪ--------- ದಾಸಿಗ ರಾಜಗಾರಿ ಪುತ್ರಲು
5. ಜಗನಾತಯ ದೇವರು ಮಹರಾಜಲು-----ರಾಜ್ಯಂ-----
6. ------ಕುಮಾರುಚ------ನಾದರಸುಖನ್ನಖಂ-----ಕ್ಷೇತ್ರ ಸುಖಂಚರುವಲ ಕೀರ್ತಿ.

ಈ ಶಾಸನ ಲಕ್ಷ್ಮೀಕಾಂತ ದೇವಾಲಯದ ಮುಖಮಂಟಪದಲ್ಲಿ ಪೂರ್ವಾಭಿಮುಖ ವಾಗಿ ಇರುವ ಶಿಲಾಗೋಡೆಯ ಮೇಲೆ ಕೊರೆದಿದೆ. ಕಾಡುಕಲ್ಲಿನ ಮೇಲೆ ಆಳವಾಗಿ ಕೆತ್ತದೆ ಇರುವುದರಿಂದ ಶಾಸನ ಅಧ್ಯಯನಕ್ಕೆ ಬಹಳ ಕಷ್ಟವಾಗಿದೆ. ಆರು ಸಾಲಿನ ಈ ಶಾಸನ ಕನ್ನಡ ಲಿಪಿ ತೆಲುಗು ಭಾಷೆಯಲ್ಲಿದೆ. ಶ್ರೀ ವೀರಸದಾಶಿವರಾಯನ ಕಾಲ[1542-1565, ವಿಜಯನಗರದಲ್ಲಿ, ಪೆನುಗೊಂಡೆಯಲ್ಲಿ 1565-1570ರ ಕಾಲಮಾನದವರೆಗೆ ರಾಜ್ಯವಾಳಿದ]ವಿಜಯನಗರದ ಸಾಮ್ರಾಜ್ಯದ ಅಧೀನನಾಗಿದ್ದ ಶ್ರೀಮನ್ ಮಹಾ ಮಂಡಲೇಶ್ವರ ಆತ್ರೇಯ ಗೋತ್ರಂ ಆಶ್ವಲಾಯನ ಸೂತ್ರದ ಶ್ರೀ ದೇವಪ್ಪ----ದಾಸಿಗ ರಾಜರಿ ಪುತ್ರ ಜಗನಾಥದೇವರು ರಾಜ್ಯವಾಳುತ್ತಾ ಇದ್ದಾಗ ಈ ಶಾಸನವನ್ನು ಹಾಕಿಸಲ್ಪ ಟ್ಟಿದೆ. ಮುಂದಿನ ಭಾಗ ಓದಲು ಸಾಧ್ಯವಿಲ್ಲದೆ ಇರುವುದರಿಂದ ಸಂಪೂರ್ಣವಾದ ವಿವರ ಲಭ್ಯ ಇಲ್ಲ.

ಈ ಶಾಸನದಲ್ಲಿ ಪ್ರಸ್ತಾಪಗೊಂಡಿರುವ ಮಾಂಡಲಿಕ ಆತ್ರೇಯ ಗೋತ್ರ ಆಶ್ವಲಾಯನ ಸೂತ್ರ ಶ್ರೀದೇವಪ್ಪದಾಸಿಗರಾಜಗಾರಿ ಪುತ್ರ 'ಜಗನಾತೆಯದೇವರು'ಈ ಮಂಡಲೇಶ್ವರನ ಬಗ್ಗೆ ಆಕರಗಳನ್ನು ಸಂಗ್ರಹಿಸಬೇಕಾಗಿದೆ. ಚನ್ನಪಟ್ಟಣದ ಪಾಳೇಗಾರರಲ್ಲಿ ಜಗದೇವರಾಯನ ಪ್ರಸ್ತಾಪ ಬರುತ್ತದೆ. ಇವರದು ಚತುರ್ಥಕುಲ ವಿಷ್ಣುವರ್ಧನ ಗೋತ್ರಕ್ಕೆ ಸೇರಿದವರು ಎಂದು ಪ್ರಸ್ತಾಪಗೊಂಡಿರುವುದರಿಂದ ತುಮಕೂರು ಲಕ್ಷ್ಮೀಕಾಂತ ದೇವಾಲಯದ ಶಾಸನದಲ್ಲಿ ಉಲ್ಲೇಖಗೊಂಡಿರುವ ಮಾಂಡಲೀಕ 'ಜಗನಾಥಯ ದೇವರು' ಬಗ್ಗೆ ವಿವರ ಸಂಗ್ರಹಿಸಬೇಕಾಗಿದೆ.

ತುಮಕೂರು ನಗರದ ಲಕ್ಷ್ಮೀಕಾಂತ ದೇವಾಲಯ ವಿಜಯನಗರ ಸಾಮ್ರಾಜ್ಯದ ಪಳೆಯುಳಿಕೆಯಾಗಿ, ತುಮಕೂರು ನಗರದಲ್ಲಿ ಉಳಿದುಕೊಂಡು ಬಂದಿದೆ. ಅದರ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯ.



ಲಕ್ಷ್ಮೀಕಾಂತ ದೇವಾಲಯದ ವಿಮಾನ ಗೋಪುರ ಮತ್ತು ಗರ್ಭಗೃಹ




ತುಮಕೂರು ಲಕ್ಷ್ಮೀಕಾಂತ ವಿಗ್ರಹ



ನವರಂಗದ ದ್ವಾರ
ಗಜಲಕ್ಷ್ಮೀ
ಜಯ - ವಿಜಯ

ದೇವಸ್ಥಾನದ
ಬಲಭಾಗದ ಗೋಡೆ





ಲಕ್ಷ್ಮೀಕಾಂತ
ದೇವಾಲಯದ ನವರಂಗ

೨೬. ವಿಜಯನಗರ ವಾಸ್ತು ನಿರ್ಮಾಣಕ್ಕೆ ಉಪಯೋಗಿಸಿದ ಕಲ್ಗಣಿಗಳು

ಟಿ.ಎಂ. ಕೇಶವ, ಎಂ.ವಿ.ವಿಶ್ವೇಶ್ವರ

ವಿಜಯನಗರದ ಅಭೂತಪೂರ್ವ ಕಟ್ಟಡಗಳನ್ನು ನೋಡಿ ಬೆರಗುಪಟ್ಟವರಿಗೆ, ಆ ಕಾಲದ ಕಟ್ಟಡಗಳ ನಿರ್ಮಾಣಕ್ಕೆ ಬಳಸಿದ ನಿರ್ಮಾಣ ಸ್ಥಳದಲ್ಲೇ ದೊರೆತ ಕಲ್ಗಣಿಗಳು, ನೆಲೆಗಳು ಅಂದಿನ ವಾಸ್ತುಶಿಲ್ಪಿಗಳ, ಕಲ್ಲು ವೊಡ್ಡರ ಕಲ್ಲಿನ ಬಗೆಗಿದ್ದ ತಿಳುವಳಿಕೆ, ಮಾಹಿತಿ, ಅದನ್ನು ಬೇಕಾದ ಅಳತೆಗೆ ಕಂಡರಿಸುವ ಪರಿಣತಿ, ಅವಶ್ಯಕ, ಅಳತೆಗೆ ತಕ್ಕಂತೆ ಅವುಗಳನ್ನು ಬೇರ್ಪಡಿಸಿಟ್ಟುಕೊಳ್ಳುವ ಬಗೆಗೆ ಸಾಕಷ್ಟು ಮಾಹಿತಿಗಳು ರಾಜವಾಡೆಯ ಆಸುಪಾಸಿನ ಗುಡ್ಡಗಳಲ್ಲಿ, ನೆಲಸ್ತರದ ಶಿವಾಲಯ -ಪ್ರಸನ್ನ ವಿರೂಪಾಕ್ಷ ದೇವಾಲಯ, ಹೇಮಕೂಟ, ಜನಾನ (ಅಂತಪುರ)ಸಮುಚ್ಚಯದ ಉತ್ತರ ದಿಕ್ಕಿನಲ್ಲಿರುವ ಗುಡ್ಡದಲ್ಲಿ, ರಾಜ ಪ್ರಮುಖರ ವಸತಿ ಸಮುಚ್ಚಯದ ಬಳಿ ಹೇರಳವಾಗಿ ಕಾಣಸಿಗುತ್ತವೆ.

ಇದೇ ನಿಟ್ಟಿನಲ್ಲಿ, ಇತ್ತೀಚೆಗೆ, ಕರ್ನಾಟಕದ ಇನ್ನೊಂದು ವಿಶ್ವಪರಂಪರೆ ತಾಣವಾದ ಪಟ್ಟದಕಲ್ಲಿನ ಸ್ಮಾರಕ ಸಮುಚ್ಚಯಕ್ಕೆ ಕಲ್ಲುಗಳನ್ನೊದಗಿಸಿದ ಕಲ್ಗಣಿಗಳ ಸಂಶೋಧನೆ ಬೆಳಕಿಗೆ ಬಂದಿರುವುದು ಗಮನಾರ್ಹ (ಎಸ್.ವಿ. ವೆಂಕಟೇಶಯ್ಯ ಮತ್ತು ಎಂ.ವಿ. ವಿಶ್ವೇಶ್ವರ ಪಟ್ಟದಕಲ್ಲಿನ ಪರಿಸರದಲ್ಲಿ ಪ್ರಾಚೀನ ಕಲ್ಗಣಿಯ ಶೋಧ ; ಪ್ರಭಾಕರ ಕೆ. ಎಸ್. ಸಂ. ಶ್ರೀವಲ್ಲಭ-ಚಾಲುಕ್ಯ ಉತ್ಸವ, ೨೦೦೬, ವಿಚಾರ ಸಂಕರಣ ಪ್ರಬಂಧಗಳು, ಪು. ೪೨೨-೪೩೦) ಇದರಿಂದ ಒಂದು ವಾಸ್ತು ಸಂಕೀರ್ಣ ನಿರ್ಮಿತಿಯಲ್ಲಿ ಅಂದಿನ ವಾಸ್ತುಶಿಲ್ಪಿಗಳು ಹೇರಳವಾಗಿ ದೊರಕುತ್ತಿದ್ದ ಮೂಲಸಾಮಗ್ರಿಯನ್ನು ಉಪಯೋಗಿಸುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಇದರೊಂದಿಗೆ ಈ ಗಣಿಗಳಿಂದ ಹೊರತೆಗೆದ ಕಲ್ಲುಗಳನ್ನು ನಿರ್ಮಿತಿಯ ಸ್ಥಳಕ್ಕೆ ಸಾಗಿಸಲು ಬೇಕಾದ ಮಾನವಶಕ್ತಿ, ಚಕ್ಕಡಿ, ಬಂಡಿ,ಆನೆ, ಕುದುರೆ, ಎತ್ತು ಇತ್ಯಾದಿ ತರಬೇತಿ ಹೊಂದಿದ ಜೈವಿಕ ಸಂಪನ್ಮೂಲಗಳ ಜಮಾವಣೆ, ಅಲ್ಲಿಯೇ ಕೆಲಸ ಮಾಡುವರಿಗಾಗಿ ಬೇಕಾಗುವ ನೀರಿನ ವ್ಯವಸ್ಥೆ ಕೆಲಸಕ್ಕೆ ಬೇಕಾದ ಭಾರವಾದ ಸುತ್ತಿಗೆ, ಬಡಿಗೆ, ಕೊರೆಯುಳಿ, ಸನ್ನೆ ಕೋಲು ಮತ್ತಿತರ ಸಾಮಗ್ರಿ ಸರಂಜಾಮುಗಳನ್ನು ಸೂಕ್ತವಾಗಿ ಹೊಂದಿಸಿಕೊಳ್ಳುತ್ತಿದ್ದರು,

ಹಂಪೆಯ ಪರಿಸರ

ವಿಜಯನಗರ ರಾಜಧಾನಿ ಸಮುಚ್ಚಯ ಒಂದು ರೀತಿಯ ನಾಟಕೀಯವೆನಿಸುವ ರುದ್ರರಮಣೀಯ ಪರಿಸರದಲ್ಲಿ ನಿರ್ಮಿತವಾಗಿದೆ. ಚಿತ್ರ-ವಿಚಿತ್ರಾಕಾರದ , ರಕ್ಕಸ ಗಾತ್ರದ ವಿವಿಧ ಭಂಗಿಗಳಲ್ಲಿ ಸ್ತಬ್ಧಗೊಂಡ ಜೀವ-ಜಂತುಗಳಂತೆ ಕಂಡು ಬರುವ ಕಣಶಿಲೆಯ ಬೆಟ್ಟ ಸಾಲುಗಳ, ಬಾಗು, ಬಳಕು ಹಾಗೂ ವಿಸ್ಮಯಗೊಳಿಸುವ ತಿರುವುಗಳು ಇವುಗಳೆಡೆಯಲ್ಲಿ ಹಾಸು-ಹೊಕ್ಕಾಗಿ, ಕೆಲವೊಮ್ಮೆ ಮಂದಗತಿಯಿಂದ, ಮಗದೊಮ್ಮೆ ಆಕ್ರೋಶಗೊಂಡ ತುಂಗಭದ್ರೆಯ ಹರಿವಿನ ಲಾವಣ್ಯಮಯ ಏರಿಳಿತಗಳಿಂದ ಕೂಡಿದ ಭೌಗೋಳಿಕ ಪರಿಸರ ರಾಜಧಾನಿಗೆ ಅದ್ಭುತ ಸ್ವಾಭಾವಿಕ ಮತ್ತು ನೈಸರ್ಗಿಕ ರಕ್ಷಣೆಯನ್ನು ಒದಗಿಸಿದೆ. ಸಹಜವಾಗಿ ಈ ಪರಿಸರದಲ್ಲಿ ಕಟ್ಟಡ ಸಮುಚ್ಚಯ ನಿರ್ಮಾಣಕ್ಕೆ ಹಾಗೂ ವಸತಿಗೆ ಯೋಗ್ಯವಾದ ಹಾಗೂ ಸಾಕಷ್ಟು ಜಲಸಂಗ್ರಹಣೆಗೆ ಅನುಕೂಲತೆ ಇರುವ ಸಮತಟ್ಟಾದ ಪ್ರದೇಶ ದೊರೆಯುವುದು ಇಕ್ಕಟ್ಟಾದ ಕಣಿವೆಗಳಲ್ಲಿಯೇ. ಈ ಸ್ಥಳಗಳಲ್ಲಿ ನಡೆದಿರುವ ಬೃಹದ್ ಕಾಮಗಾರಿಗಳಿಗೆ ಅಗತ್ಯವಾದ ಅಗಾಧ ವಾಸ್ತುಸಾಮಗ್ರಿಯನ್ನು ನಿರ್ಮಾಣ ಸ್ಥಳಕ್ಕೆ ದೂರದಿಂದ ಸಾಗಿಸುವುದು ದುಸ್ಸಾಧ್ಯವಾದುದರಿಂದ ಅವುಗಳನ್ನು ಅನತಿ ದೂರದಲ್ಲಿಯೇ ಪಡೆದುಕೊಳ್ಳ ಬೇಕಾದ ಅನಿವಾರ್ಯತೆಗೆ ಅಂದಿನ ಸ್ಥಪತಿಗಳು ಹೊಂದಿಕೊಳ್ಳಬೇಕಾಯಿತು. ಹೀಗಾಗಿ ವಿಜಯನಗರ ಕಾಲದ ಬಹುತೇಕ ಕಲ್ಲುಗಣಿಗಳು ಆಯಾ ಕಟ್ಟಡಗಳ ಸಮುಚ್ಚಯದ ಸನಿಹದಲ್ಲೇ ಇವೆ.

ಈ ನಿಟ್ಟಿನಲ್ಲಿ, ಇಂತಹ ನೆಲೆಗಳಲ್ಲಿ ನಿರಂತರ ಗಣಿಗಾರಿಕೆ ನಡೆದಿದ್ದ ಕೆಲವು ಕುರುಹುಗಳನ್ನು ಸಂರಕ್ಷಿತ ಸ್ಮಾರಕಗಳ ಬಳಿಯಲ್ಲಿ ಈಗಲೂ ಕಾಣಬಹುದು.

ಗಣಿಗಳಿರುವ ನಿವೇಶನ ಮತ್ತು ಲಕ್ಷಣಗಳು

ನಿವೇಶನಗಳು

ವಿಜಯನಗರ ಕಾಲದ ಬಹುತೇಕ ಕಲ್ಲುಗಣಿಗಳು ಆಯಾ ಧಾರ್ಮಿಕ, ಸಾಮಾಜಿಕ ಕಟ್ಟಡಗಳ ಸಮುಚ್ಚಯಗಳ ಸನಿಹದಲ್ಲೇ ಇವೆ. ಅವುಗಳಲ್ಲಿ.

೧. ಹೇಮಕೂಟದ ದೇಗುಲಗಳ ಬಳಿ, ಅಲ್ಲಿಯೇ ದಕ್ಷಿಣ ಭಾಗದಲ್ಲಿರುವ ಸಾಸಿವೆ ಕಾಳು ಗಣೇಶನ ಪೂರ್ವ ಹಾಸು ಬಂಡೆ ಬಳಿ ಇರುವ ಕಲ್ಲೊಡ್ಡರ ಹಾಜರಾತಿ ಅಥವಾ ತಯಾರಿಸಬೇಕಾದ ತಯಾರಿಸಲಾದ ಕಲ್ಲುಗಳ ಮಾಹಿತಿ.

೨. ಕೋಟೆಯ ಆವರಣದ ನೆಲ ಸ್ತರದ ಶಿವಾಲಯದ ಉತ್ತರ ದಿಕ್ಕಿನಲ್ಲಿ

೩. ರಾಜಮಾನ್ಯ ಪ್ರಮುಖರ ವಸತಿ ಸಂಕೀರ್ಣದ ಬಳಿ

೪. ರಾಜಪ್ರಾಂಗಣದಲ್ಲಿ

೫. ಜನಾನ(ಅಂತಃಪುರದ)ಉತ್ತರ ದಿಕ್ಕಿನಲ್ಲಿರುವ ಗುಡ್ಡದಲ್ಲಿ

೬. ಗುಡ್ಡಗಳಲ್ಲಿ ಹಾದುಹೋಗುವ ವಿವಿಧ ಮಾರ್ಗಗಳು ಹಾಗೂ ಇನ್ನಿತರ ಸ್ಥಳಗಳನ್ನು ಹೆಸರಿಸಬಹುದು.

ಲಕ್ಷಣಗಳು

೧. ಹಂತ-ಹಂತವಾಗಿ ಕಲ್ಲು ಚಪ್ಪಡಿಗಳನ್ನು ಹೊರತೆಗೆದ, ಸಮಾನಾಂತರದಲ್ಲಿರುವ ವಿವಿಧ ಗಾತ್ರದ ಕುಣಿಗಳು ಮತ್ತು ಅವುಗಳನ್ನು ತೆಗೆದ ನಂತರ ಸಮತಟ್ಟಾದ ನೆಲಕ್ಕೆ ಅತೀವ ಜತನದಿಂದ ಇಳಿಸಲು ಉಪಯೋಗಿಸಿದ ಮೂಲ ಬಂಡೆಯಲ್ಲಿ ರೂಪಿಸಿದ ಕಲ್ಕೊಕ್ಕೆಗಳು.

೨. ಉದ್ದೇಶಪೂರ್ವಕವಾಗಿ ಗಣಿಗಾರಿಕೆಗೆ ಆಯ್ದುಕೊಂಡ ಉಳಿಯ ಗುರುತಿರುವ ಬಂಡೆಗಳ ಸಮೂಹ.

೩. ಬೃಹದ್ ಬಂಡೆಗಳನ್ನು ಆವಶ್ಯಕ ಗಾತ್ರಗಳಿಗೆ ಕತ್ತರಿಸಿ ಸಾಗಾಣಿಕೆಗೆ ಅನುವುಗೊಳಿಸಿ ಅಲ್ಲಿಯೇ ಉಳಿಸಿರುವ ಕುರುಹುಗಳಿರುವ ಸ್ಥಳ.

೪. ಕತ್ತರಿಸಲು ಸಜ್ಜುಗೊಳಿಸಿದ, ಅರೆಬರೆ ಕಂಡರಿಸಿದ ಹೆಬ್ಬಂಡೆಗಳು.

೫. ಸಜ್ಜುಗೊಳಿಸಿ ಅಲ್ಲಿಯೇ ಉಳಿಸಿರುವ ಕಲ್ಲುಗಳು.

೬. ಕಲ್ಲೊಡ್ಡರ ಹಾಜರಾತಿ ಅಥವಾ ಪೂರೈಸಿದ(ಸರಬರಾಜು ಮಾಡಿದ)ಕಲ್ಲುಗಳ ಲೆಕ್ಕಾಚಾರವನ್ನು ಸೂಚಿಸುವ ಚಿನ್ಹೆಗಳು.

೭. ಹಂಪೆಯಲ್ಲಿ ಕಾಣಸಿಗುವ ಅನೇಕ ದೇವತಾಮೂರ್ತಿಗಳ ಮಾದರಿ ಶಿಲ್ಪಗಳನ್ನು ಕಡೆದಿರಿಸಿದ ಅಥವಾ ವೈಯಕ್ತಿಕ ಪೂಜೆಗಾಗಿ ಸ್ಥಪತಿ, ಶಿಲ್ಪಿ ಅಥವಾ ಕಲ್ಕುಟಿಗರು ರಚಿಸಿಕೊಂಡ ಇಷ್ಟ ದೇವತಾ ಶಿಲ್ಪಿಗಳಿರುವ ಬಂಡೆಗಳು.

ಹೇಮಕೂಟದ ಬಂಡೆಗಳಲ್ಲಿ ಹೆಚ್ಚಾಗಿ ನಮಗೆ ನೆಲ ಹಾಸುಬಂಡೆಯು ಪ್ರಸ್ತುತ ಕಾಣಸಿಗುತ್ತಿದ್ದು ಕೆಲವೊಂದು ನಿಲಿಸು ಹೆಬ್ಬಂಡೆಗಳೂ ಕಾಣಸಿಗುತ್ತವೆ. ನೆಲ ಹಾಸುಬಂಡೆಗಳನ್ನು ನೋಡಿದಾಗ ಅಲ್ಲಿಲ್ಲಿ ವಾಸ್ತು ನಿರ್ಮಿತಿಗೆ ಬೇಕಾದ ಚಪ್ಪಡಿಗಳನ್ನು ಮಾತ್ರ ಕಂಡರಿಸಿರುವುದನ್ನು ಕಾಣುತ್ತೇವೆ. ಗಾತ್ರದಲ್ಲಿ, ಸಾಮಾನ್ಯ ಕಂದಬ ನಾಗರ ಶೈಲಿಯಲ್ಲಿ ಸಣ್ಣ ಸಣ್ಣ ಗುಡಿಗಳನ್ನು ನಿರ್ಮಾಣ ಮಾಡಿದ್ದರಿಂದ ಹಾಗೂ ಬೃಹದ್ ದೇಗುಲಗಳ ನಿರ್ಮಾಣಕ್ಕೆ ತೊಡಗಿಸಿಕೊಳ್ಳುತ್ತಿದುದರಿಂದ ಹಾಗೂ ಸ್ಥಳಾವಕಾಶದ ಕೊರತೆಯಿಂದ ಹಾಗೂ ಪರಿಸರದಲ್ಲಿ ನಮಗೆ ಹೆಚ್ಚಿನ ಕಟ್ಟಡಗಳು ಬಂದಿರುವುದರಿಂದ ಹೆಚ್ಚಿನ ಮಾಹಿತಿ ದೊರಕಿಸಿಕೊಳ್ಳುವುದು ಸ್ವಲ್ಪ ದುಸ್ತರ. ಆದರೂ ಕಟ್ಟಡ ನಿರ್ಮಾಣ ಹಂತದಲ್ಲಿ ಕೆಲವೊಮ್ಮೆ ಮೂಲ ಬಂಡೆಗಳನ್ನು ಕೊರೆದು ಕಟ್ಟಡಗಳ ಬುನಾದಿಗೆ ಸಮಪ್ರಮಾಣದ ನೆಲ ಸ್ತರ ಒದಗಿಸಿಕೊಳ್ಳುವ ಪ್ರಯತ್ನವನ್ನು ಕಾಣಬಹುದು.

ಕೋಟೆಯ ಆವರಣದಲ್ಲಿ ನೆಲಸ್ತರದ ಶಿವಾಲಯದ ಉತ್ತರ ಹಾಗೂ ವಾಯುವ್ಯ ದಿಕ್ಕಿನಲ್ಲಿ (ಚಿತ್ರ ೧ : ೧) ಪರಿಸರದಿಂದ ಅಷ್ಟೇನೂ ಎತ್ತರವಿಲ್ಲದ ಗುಡ್ಡದಲ್ಲಿ ನಿರ್ಮಾಣಕ್ಕಾಗಿ ಕಲ್ಲುಗಳನ್ನು ಕತ್ತರಿಸಿ, ಸ್ಥಳದಲ್ಲೇ ಅವುಗಳನ್ನು ಸಾಗಿಸಲು ಅನುವಾಗುವ ಗಾತ್ರಕ್ಕೆ ಸಜ್ಜುಗೊಳಿಸಿಟ್ಟ ಕಲ್ಲುಗಳನ್ನು ಕಾಣಬಹುದು (ಚಿತ್ರ ೧: ೪) ಇದರೊಂದಿಗೆ ಒಂದು ಹೆಬ್ಬಂಡೆಯನ್ನು ಸಮ ಪ್ರಮಾಣದ ಆರು ನೀಳ-ಹೋಳುಗಳನ್ನಾಗಿಸಿ ಮುಂದಿನ ಕಾರ್ಯಕ್ಕಾಗಿ ಅನುವುಗೊಳಿಸಿರುವುದನ್ನು ಕಾಣಬಹುದು. (ಚಿತ್ರ ೨:೨ ಮತ್ತು೪) ಚುನಾಯಿತ ಬಂಡೆಗಳಲ್ಲಿ ಉಳಿಯ ಗುರುತುಗಳನ್ನು, ಹಾಗೂ ತಂಡಾದ ದೊಡ್ಡ ಗಾತ್ರದ ಕಲ್ಲುಗಳನ್ನು ಜತನದಿಂದ ನೆಲಮಟ್ಟಕ್ಕೆ ಇಳಿಸಲು ಅನುವಾಗುವ ಕೊಕ್ಕೆ ಕುಣಿಗಳನ್ನು ಹಾಗೂ ಗೂಟ ಕುಣಿಗಳನ್ನೂ (ಚಿತ್ರ ೩ :೧ ರಿಂದ ೩) ಗುರತಿಸಬಹುದು.

ಇದೇ ರೀತಿ ಗಣ್ಯ ವ್ಯಕ್ತಿಗಳ ಸಮುಚ್ಚಯದ ಬಳಿ ಹೆಬ್ಬಂಡೆಯನ್ನು ಉಪಯೋಗಿಸಿ ಉಂಡುಗಳನ್ನಾಗಿ ಕತ್ತರಿಸಲು ನಡೆಸಿರುವ ತಯಾರಿಯನ್ನು ನಾವು (ಚಿತ್ರ ೨:೧ ಮತ್ತು ೩) ಈಗಲೂ ಕಾಣಬಹುದು. ಇಲ್ಲಿ ಆವಶ್ಯಕತೆಗೆ ತಕ್ಕ ಬಂಡೆಯನ್ನು ಆಯ್ಕೆ ಮಾಡಿ ಅದರಲ್ಲಿ ಮೂಲ ಬಂಡೆಯ ಹೊರ ಪದರವನ್ನು ಭಾರವಾದ ಸುತ್ತಿಗೆಯ ಬಡಿತದಿಂದ ತೆಗೆದು ಹಾಕಿ ಒಂದು ಸಣ್ಣ ೧೦ ರಿಂದ ೨೦ ಸೆ.ಮೀ. ಅಗಲದ ಮತ್ತು ಸುಮಾರು ೫ ರಿಂದ ೭ ಸೆ.ಮಿ. ಆಳದ ಸೂತ್ರ ನಾಲೆಯನ್ನು ಬಿಡಿಸಿ ಅದರಲ್ಲಿ ಪ್ರಾಯೋಗಿಕ ಉಳಿ ಕೆತ್ತನೆಯನ್ನು ಕಾಣುತ್ತೇವೆ. (ಚಿತ್ರ ೨:೧) ಚಿತ್ರ ೨:೩ ರಲ್ಲಿ ಕಂಡುಬರುವಂತೆ ಉಳಿಯ ಹತ್ತಿರ-ಹತ್ತಿರದ ಗುರುತನ್ನು ಪೂರ್ಣ ಪ್ರಮಾಣದಲ್ಲಿ ಬೇಕಾದ ಗಾತ್ರದ ಬಂಡೆಯನ್ನು ಬೇರ್ಪಡಿಸಲು ಸಜ್ಜುಗೊಳಿಸಿರುವು ದನ್ನು ಕಾಣಬಹುದು. ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಈ ಬಂಡೆ ನೆಲಮಟ್ಟದಲ್ಲಿ ಸಮತಟ್ಟಾದ ಪ್ರದೇಶದಲ್ಲಿ ಇರುವುದು ಮತ್ತು ಕಂಡರಿಸಿದ ಬಂಡೆ ನೆಲಕ್ಕೆ ಬಿದ್ದರೂ ಹೆಚ್ಚಿನ ಘಾಸಿಗೆ ಈಡಾಗದೇ ಆವಶ್ಯಕತೆ ಗನುಗುಣವಾಗಿ ಸಾಕಷ್ಟು ಪ್ರಮಾಣದ ಇರುವ ಕಲ್ಲು ದೊರಕುತ್ತದೆ. ಹಾಗೆ ಅಕಸ್ಮಾತ್ ಖತಿಗೊಂಡರೂ ಅವು ಗಳನ್ನು ಭರ್ತಿಗೆ ಅಥವಾ ಚಕ್ಕೆಯ ರೂಪದಲ್ಲಿ ಉಪಯೋಗಿಸಲು ಬರುತ್ತಿತ್ತು. ಹೀಗೆ ಉಳಿಯ ಕೆಲಸ ಮಾಡಿದ ಬಂಡೆಗಳು ನೀಳವಾಗಿ ಹೋಳಾಗುತ್ತಿದ್ದವು. ಅವುಗಳನ್ನು ಭಾರವಾದ ಸನ್ನೆ ಕೋಲುಗಳಿಂದ ಇನ್ನಷ್ಟು ಬಿಡಿಸಿಕೊಳ್ಳುತ್ತಿದ್ದರು. (ಚಿತ್ರ ೪ : ೧ ಮತ್ತು ೨).


ರಾಜಪ್ರಾಂಗಣದ ಪೂರ್ವ ಭಾಗದಲ್ಲಿ, ಮಹಾ ನವಮಿ ದಿಬ್ಬದ ಬಳಿ ನಮಗೆ ಬಂಡೆಗಳನ್ನು ಕತ್ತರಿಸಿ ಅಲ್ಲಲ್ಲಿಯೇ ಕಟ್ಟಡ ನಿರ್ಮಾಣಕ್ಕಾಗಿ ಬಳಸಿರುವುದನ್ನು ಕಾಣುತ್ತೇವೆ, ಈ ನಿಟ್ಟಿನಲ್ಲಿ ಗಮನಿಸುತ್ತ ಹೋದರೆ ರಾಜಪ್ರಾಂಗಣದ ಆವರಣ ಗೋಡೆಯನ್ನು ಬಂಡೆಗಳ ಮೇಲೆಯೆ ಅನುಸರಿಸಿ, ಆಸರಿಸಿ ಕಟ್ಟಿರುವುದು, ಹಾಗೂ ಇದೇ ಪ್ರಾಗಂಣದ ಉತ್ತರ ಗೋಡೆಗೆ ಹೊಂದಿಕೊಂಡಂತೆ ಇರುವ ಬಂಡೆಗಳನ್ನು ಕತ್ತರಿಸಿ ಸ್ಥಳಾವಕಾಶ ಮಾಡಿಕೊಂಡಿರುವುದೂ ಕಂಡು ಬರುತ್ತವೆ.

ಜನಾನ(ಅಂತಃಪುರದ)ದ ಉತ್ತರ ದಿಕ್ಕಿನಲ್ಲಿರುವ ಗುಡ್ಡದಲ್ಲಿ ಕೂಡ ನಮಗೆ ಕಲ್ಲುಗಳನ್ನು ಹೊರ ತೆಗೆದಿರುವ ಗುರುತುಗಳು ಸಾಕಷ್ಟು ಪ್ರಮಾಣದಲ್ಲಿ ಕಂಡು ಬರುತ್ತವೆಯಲ್ಲದೆ ಆರಿಸಿದ ಬಂಡೆಗಳಿಂದ ಕಲ್ಲನ್ನು ಹೊರತೆಗೆಯಲು ನೆರೆ ಅಥವಾ ಪಕ್ಕದಲ್ಲಿನ ಬಂಡೆಯಲ್ಲಿ ಭಾರವಾದ ಕಲ್ಲುಗಳನ್ನು ಇಳಿಸಲು ಅನುವಾಗುವಂತೆ ಕೊಕ್ಕೆಗಳನ್ನು ಮಾಡಿರುವುದನ್ನು ಈಗಲೂ ಕಾಣಬಹುದು. (ಚಿತ್ರ ೫:೧ ಮತ್ತು ೨;ರೇಖಾ ಚಿತ್ರ ೧)

ಪದೇ ಪದೇ ಉಪಯೋಗಿಸಲ್ಪಡುತ್ತಿದ್ದ ವಸ್ತುಗಳಾದ ವಿವಿಧ ಗಾತ್ರದ ಭಾರದ ಸುತ್ತಿಗೆ, ಉಳಿ, ಸನ್ನೆಕೋಲು, ರಾಟೆ ಚಕ್ರ, ಬಡಿಗೆ, ಹಗ್ಗ, ಇತ್ಯಾದಿ ಪರಿಕರಗಳು ಸ್ಥಳ ಪರಿಶೋಧನೆಯಲ್ಲಿ ಸಿಗದೇ ಹೋದರೂ ಅವುಗಳನ್ನು ಪ್ರಯೋಗಿಸಿದೆ ಕಲ್ಲನ್ನು ಕಂಡರಿಸಿ, ಹೊರತೆಗೆದು ಸಾಗಿಸಲಾಗುತ್ತಿರಲಿಲ್ಲ ಎಂಬುದು ಸತ್ಯ. ಕಮಲಾಪುರ ವಸ್ತು ಸಂಗ್ರಹಾಲಯದಲ್ಲಿ ಇಂದಿಗೂ ಕೆಲವು ಭಾರವಾದ, ಅಗಲ ತಲೆಯ, ಸುಮಾರು ೩೦ ಸೆ. ಮೀ. ಉದ್ದದ ಉಳಿಗಳನ್ನು ಹಾಗೂ ಮೊಳೆಗಳನ್ನು ಕಾಣಬಹುದು. (ಚಿತ್ರ ೫: ೨)


ವಿಜಯನಗರ ಕಾಲದ ಶಾಸನಗಳು, ಇತಿಹಾಸ, ನಾಗರಿಕ, ರಕ್ಷಣಾ ಹಾಗೂ ಧಾರ್ಮಿಕ ವಾಸ್ತು, ಉತ್ಖನನ ಮುಂತಾದ ವಿಷಯಗಳ ಬಗೆಗೆ ಕನ್ನಡ, ಆಂಗ್ಲ ಮತ್ತಿತರ ಭಾಷೆಗಳಲ್ಲಿ ಅನೇಕ ವಿದ್ವತ್ ಪೂರ್ಣ ಗ್ರಂಥ ಹಾಗೂ ಲೇಖನಗಳು ಪ್ರಕಟವಾಗಿವೆ. ಹಾಗಿದ್ದರೂ ಈ ವಿಷಯದ ಬಗ್ಗೆ ಯಾವುದೇ ಮಾಹಿತಿ ಪ್ರಕಟವಾಗದೇ ಇರುವುದು ಆಶ್ಚರ್ಯಕರವಾಗಿದೆ. ಈ ಹಿನ್ನಲೆಯಲ್ಲಿ, ಹಂಪೆಯ ಪರಿಸರದಲ್ಲಿ ನಡೆಸಿರುವ ಪ್ರಾಥಮಿಕ ಸ್ಥಳ ಪರಿಶೋಧನೆಯಲ್ಲಿ ಅನೇಕ ಅಮೂಲ್ಯ ಮಾಹಿತಿಗಳು ಬೆಳಕಿಗೆ ಬಂದಿವೆ. ವಿಶೇಷ ಸ್ಥಳ ಪರಿಶೋಧನೆ ಮತ್ತು ಸ್ಥಳದಲ್ಲಿಯೇ ಉಳಿದ ಶಿಲಾ ಖಂಡಗಳ, ನಿರ್ದಿಷ್ಟ ಅಳತೆ ಹಾಗೂ ಅಲ್ಲಿಲ್ಲಿ ಕಂಡುಬರುವ ವಿವಿಧ ಬಗೆಯ ಕುಳಿಗಳ ಅಳತೆ ಮತ್ತು ರಾಜ್ಯ ಹಾಗೂ ಕೇಂದ್ರ ಪುರಾತತ್ವ ಇಲಾಖೆಗಳು ಕೈಕೊಂಡ ಉತ್ಖನನಗಳಲ್ಲಿ ದೊರೆತಿರುವ ಕಬ್ಬಿಣದ ಗಣಿಗಾರಿಕೆಗೆ ಉಪಯೋಗಿಸಿರಬಹುದಾದ ಉಪಕರಣಗಳ ಅಳತೆ ಮುಂತಾದವುಗಳಿಂದ ವಿಜಯನಗರ ಕಾಲದ ಕಲ್ಗಣಿಗಾರಿಕೆಗೆ ಸಂಬಂಧಪಟ್ಟಂತೆ ಸವಿಸ್ತಾರ ವಾದ ತಾಂತ್ರಿಕ ಮಾಹಿತಿಯಿಂದ ವಾಸ್ತು ನಿರ್ಮಿತಿಯ ತಾಂತ್ರಿಕತೆ, ವಸ್ತು ಸಾಮಗ್ರಿ ಹಾಗೂ ಅವುಗಳ ಗುಣ ವಿಶೇಷ ಇತ್ಯಾದಿಗಳ ಬಗ್ಗೆ ಉತ್ತಮ ಒಳ ನೋಟವನ್ನು ಪಡೆಯಬಹುದು.



































೨೭.ವಿಜಯನಗರ ಸಾಮ್ರಾಜ್ಯದಲ್ಲಿ ನೀರಾವರಿ ಕಾಲುವೆಗಳು - ಒಂದು ವಿಶ್ಲೇಷಣೆ

ಡಾ. ಟಿ. ವಿ. ನಾಗರಾಜ

ಜಲ ಸಂಗ್ರಹಾರಗಳನ್ನು ನಿರ್ಮಿಸಿಕೊಳ್ಳುವ ಪರಿಪಾಠ ಪಾರಂಪರಿಕವಾಗಿ ಬೆಳೆದು ಬಂದಿದೆ. ಕೆರೆ, ಕಟ್ಟೆ, ಕೊಳ, ಪುಷ್ಕರಣಿಗಳನ್ನು ನಿರ್ಮಿಸಿಕೊಂಡು ಲಭ್ಯವಿರುವ ಮಳೆಯ ನೀರನ್ನು ಸಂಗ್ರಹಿಸಿಕೊಳ್ಳುವ ವಿಧಾನದ ಹಲವಾರು ಬಗೆಯ ಆವಿಷ್ಕಾರಗಳು ರೂಪುಗೊಳ್ಳುತ್ತ ಬಂದಿದೆ. ವಿಜಯನಗರದ ಸಾಮ್ರಾಜ್ಯದ ರಾಜಧಾನಿ, ಆದ ಕಾರಣದಿಂದಲೇ ಆ ಕೇಂದ್ರ ಪ್ರದೇಶದಲ್ಲಿ (Core-region) ಮತ್ತು ಅದರ ಪರಿಸರದಲ್ಲೆ ನೀರಾವರಿ ಕಾಮಗಾರಿಗಳು ಆದ್ಯತೆ ಪಡೆದವು. ರಾಜ್ಯಾಧಿಕಾರದ ಕೇಂದ್ರಬಿಂದು ಅಷ್ಟೇ ಅಲ್ಲದೆ ಜನಸಂಖ್ಯಾ ಬಾಹುಳ್ಯ ವುಳ್ಳ ಮಧ್ಯಕಾಲಿನ ನಗರ ಪ್ರದೇಶವೂ ಆಗಿದ್ದ ಹಿನ್ನೆಲೆಯಲ್ಲಿ ಸ್ವಾಭಾವಿಕವಾಗಿ ಕೃಷಿ ಮತ್ತು ನೀರಾವರಿ ಚಟುವಟಿಕೆಗಳು ಮಹತ್ವ ಪಡೆದಿವೆ. ಈಗಾಗಲೇ ನಡೆದಿರುವ ಅಧ್ಯಯನಗಳ ದೃಷ್ಟಿಯಿಂದ ಗಮನಿಸಿದಾಗಲೂ ಈ ವಿಶಿಷ್ಟತೆ ಹಾಗು ಆದ್ಯತೆಗಳು ಗೋಚರಿಸುತ್ತವೆ. ದೇಶೀಯ ಹಾಗು ವಿದೇಶಿ ವಿದ್ವಾಂಸರುಗಳೂ ವಿಜಯನಗರ ನೀರಾವರಿ ಎಂದಾಕ್ಷಣ ಹಂಪಿ ಮತ್ತು ಅದರ ಪರಿಸರಕ್ಕೆ ಒತ್ತು ಕೊಟ್ಟಿರುವುದು ಕಂಡು ಬರುತ್ತದೆ. ಪ್ರಸಕ್ತ ಅಧ್ಯಯನದಲ್ಲಿ ನೀರಾವರಿ ಚೌಕಟ್ಟಿನ ಪ್ರಮುಖ ಭಾಗವಾಗಿರುವ ಕಾಲುವೆಗಳನ್ನು ಕುರಿತಂತೆ ವಿಶ್ಲೇಷಿಸುವ ಸಂದರ್ಭದಲ್ಲಿ, ಸುಮಾರು ಎರಡು ಶತಮಾನಗಳಿಗೂ ಮಿಗಿಲಾಗಿ, ಇಡೀ ದಕ್ಷಿಣ ಭಾರತದಾದ್ಯಂತ ತನ್ನ ಪ್ರಭುತ್ವ ಹೊಂದಿದ್ದ ವಿಜಯನಗರ ಸಾಮ್ರಾಜ್ಯದ ಅಧೀನ ಪ್ರದೇಶಗಳಲ್ಲಿನ (Peripheral region) ನೀರಾವರಿ ಚೌಕಟ್ಟಿನಲ್ಲಿ ಬರುವ ಕಾಲುವೆಗಳನ್ನು ಕುರಿತಂತೆ ವಿಶ್ಲೇಷಣೆ ನಡೆಸುವ ಪ್ರಯತ್ನ ಪ್ರಸ್ತುತ ಪ್ರಬಂಧದಲ್ಲಿ ಮಾಡಲಾಗಿದೆ.

ನಿರ್ಮಾಣವಾದ ಕೆರೆ, ಕಟ್ಟೆಗಳಿಗೆ ನೀರಿನ ಹರಿವಿನಲ್ಲಿ ಕೊರತೆ ಉಂಟಾದಾಗ, ಆ ಕೆರೆ-ಕಟ್ಟೆ ಪರಿಸರದ ಜಲಾನಯನ ಪ್ರದೇಶದಲ್ಲಿ ಬಿದ್ದ ನೀರನ್ನು ಪೂರಕ ಕಾಲುವೆಗಳ (Feeding Channels) ನಿರ್ಮಿಸಿಕೊಳ್ಳುವ ಮೂಲಕ ತುಂಬಿಸಿಕೊಳ್ಳಲು, ಹರಿವಿನ ದಿಕ್ಕನ್ನು ಬದಲಿಸಿರುವ ಅಥವಾ ಹೊಸದಾಗಿ ಸೇರಿಸುವಂತಹ ಕಾಮಗಾರಿಯ ತಂತ್ರಗಾರಿಕೆ ಒಂದು ಪ್ರಮುಖ ಆವಿಷ್ಕಾರವೇ ಆಗಿದೆ. ಈ ಹಿನ್ನೆಲೆಯಲ್ಲಿ ಭೂಮೇಲ್ಮೈನ ಸ್ವಾಭಾವಿಕ ಹಳ್ಳ, ಕೊಳ್ಳ, ಕಾಲುವೆಗಳಲ್ಲದೆ, ಕೃತಕವಾಗಿ ಜಲಾನಯನ ಪ್ರದೇಶದ ಜಲ ಸಂಪನ್ಮೂಲಗಳನ್ನು ಸಂಗ್ರಹಾಗಾರಗಳಿಗೆ ಹಾಗೂ ಕೃಷಿ ಚಟುವಟಿಕೆಗಳಿಗೆ ಬಳಸಿಕೊಳ್ಳುವ

ಪರಿಕ್ರಮ ಗಮನಾರ್ಹವೆನಿಸಿದೆ. ಈ ಕುರಿತಂತೆ ಸಾಮ್ರಾಜ್ಯದಾದ್ಯಂತ ದೊರಕಿರುವ ಹಲವಾರು ಶಾಸನಗಳು ಉಪಯುಕ್ತವೆನಿಸಿವೆ. ಈ ಹಿನ್ನೆಲೆಯಲ್ಲಿ ಹಂಪೆ ಮತ್ತು ಅದರ ಪರಿಸರದ ಕಾಲುವೆಗಳನ್ನು ಹೊರತುಪಡಿಸಿ, ಅಧೀನ ಪ್ರದೇಶಗಳಲ್ಲಿನ ಕಾಲುವೆಗಳ ನಿರ್ಮಾಣ, ದುರಸ್ತಿ ಹಾಗು ನಿರ್ವಹಣೆಗೆ ಸಂಬಂಧಿಸಿದಂತೆ ಒತ್ತುಕೊಡಲಾಗಿದೆ.

ಪ್ರಾಚೀನ ಸಂಸ್ಕೃತಿ ಮತ್ತು ನಾಗರಿಕತೆಗಳ ಉಗಮ ಹಾಗು ವಿಕಸನ ಪ್ರಕ್ರಿಯೆಯಲ್ಲಿ ಕೃಷಿಗೆ ಪೂರಕವಾಗಿ ನೀರಾವರಿ ಚಟುವಟಿಕೆಗಳು ಮಹತ್ವ ಪಡೆಯುತ್ತ ಬಂದಿದೆ. ನೀರಾವರಿ ಚಟುವಟಿಕೆಗಳಲ್ಲಿ ರಾಜರು, ಸಾಮಂತರು, ಅಧಿಕಾರಿಗಳು, ವ್ಯಾಪಾರಿಗಳು ಅಲ್ಲದೆ ಸ್ಥಳೀಯ ನಾಯಕರು ಹಾಗು ಜನಸಮುದಾಯಗಳು ಸಕ್ರಿಯವಾಗಿ ಪಾಲ್ಗೊಳ್ಳುವುದರೊಂದಿಗೆ ವಿಸ್ತರಣೆ ಹೊಂದುತ್ತಾ ಬಂದಿವೆ. ಈ ತೆರನಾದ ಚಟುವಟಿಕೆಗಳು "ಧಾರ್ಮಿಕ ಉತ್ಕೃಷ್ಟತೆ" ಅಥವಾ "ಸಪ್ತ ಸಾಮಂತನ"ಎಂದು ಪರಿಭಾವಿಸಲಾಗಿದ್ದಿತು. ಧಾರ್ಮಿಕ ಮಹೋನ್ನತಿಯ ಉದ್ದೇಶಗಳ ಪ್ರತೀಕವಾಗಿ ಕೃಷಿ-ನೀರಾವರಿ ಚಟುವಟಿಕೆಗಳು ಪ್ರೋತ್ಸಾಹ ಪಡೆದವು. ಇಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ವ್ಯಕ್ತಿಗಳ ಸಾಮಾಜಿಕ- ರಾಜಕೀಯ ಪ್ರತಿಷ್ಠೆ ಹೆಚ್ಚಿಸಿತು. ವಿಜಯನಗರದ ಸಾಮ್ರಾಜ್ಯದ ಆಳ್ವಿಕೆಯ ಸಂದರ್ಭದಲ್ಲಿ ಕೃಷ್ಣದೇವರಾಯ ನೀರಾವರಿ ಚಟುವಟಿಕೆಗಳನ್ನು ಕೈಗೊಂಡರೆ. ಕೃಷಿ ಪ್ರಗತಿ ಹೊಂದಿ ರಾಜ್ಯದ ಆದಾಯ ಅಭಿವೃದ್ಧಿಯಾಗುತ್ತದೆ ಎಂದು ಅಪೇಕ್ಷೆ ಪಟ್ಟರೂ ಸಹ, ವಿಜಯನಗರ ಸಾಮ್ರಾಜ್ಯವೂ ಸೇರಿದಂತೆ ದಕ್ಷಿಣ ಭಾರತದ ಯಾವ ಸಾಮ್ರಾಜ್ಯವೂ ನೀರಾವರಿ ಇಲಾಖೆಯನ್ನೇ ಹೊಂದಿರಲಿಲ್ಲ. ಈ ಕಾಲಘಟ್ಟಗಳಲ್ಲಿ ಬಹುತೇಕ ಸ್ಥಾನೀಯ ಹಂತದ ಅಧಿಕಾರಿವರ್ಗ-ಸಮುದಾಯಗಳೇ ನಿರ್ಣಾಯಕ ಪಾತ್ರ ವಹಿಸಿರು ವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಬರ್ಟನ್ ಸ್ಟೈನ್ ಸಹ"ದಕ್ಷಿಣ ಭಾರತದ ಇತಿಹಾಸದಲ್ಲಿ ಕೃಷಿಕ ಗುಂಪುಗಳು ಸ್ಥಳೀಯ ಮಟ್ಟದಲ್ಲಿ ಸಂಘಟನೆಗೊಂಡುದು. ನಾಡುಗಳ ಸಂಖ್ಯೆ ವೃದ್ಧಿಯಾದುದು ಕಂಡುಬರುತ್ತದೆ ಎಂದು ಹೇಳುತ್ತಾ ರೈತ ಗುಂಪುಗಳು ಒಂದು ಹೊಸ ಪ್ರದೇಶವನ್ನು ವಶಪಡಿಸಿಕೊಂಕು ಅಥವಾ ಒಂದು ಪ್ರದೇಶದಲ್ಲಿ ಕಾಡನ್ನು ಕಡಿದು ಕೃಷಿಗೆ ಒಳಪಡಿಸಿ ನೆಲೆ ನಿಂತು ನೀರಾವರಿ ವ್ಯವಸ್ಥೆಯನ್ನು ಹುಟ್ಟು ಹಾಕಿದ ಹಾಗೂ ಕೃಷಿ ಮತ್ತು ನೀರಾವರಿ ಸಂಪನ್ಮೂಲಗಳ ಸಹಾಯಕದಿಂದ ಒಂದು ಸ್ಥಿರವಾದ, ಸಾಮಾಜಿಕ ಹಾಗು ಆರ್ಥಿಕ ವ್ಯವಸ್ಥೆಯನ್ನು ರೂಪಿಸಿದರು ಎಂದು ಅಭಿಪ್ರಾಯಪಟ್ಟು ಆ ಗುಂಪುಗಳು ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಪ್ರಕರಣೆಗಳು ನೀರಾವರಿ ಚೌಟ್ಟಿಗೆ ಒತ್ತುಕೊಟ್ಟವು.[1]

ನದಿ ಹರಿವನ್ನು ಕೃಷಿ ಬಳಕೆಗಾಗಿ ಕಾಲುವೆಗಳನ್ನು ತೋಡಿ ನಿರ್ಮಿಸಿರುವ ಕಾಮಗಾರಿ ಗಳು ಸಾಮ್ರಾಜ್ಯದ ಆರಂಭಿಕ ದಶಕಗಳಲ್ಲ ಕಂಡುಬಂದಿವೆ. ಕೃಷಿ ಭೂಮಿಗೆ ನೀರನ್ನು ಒದಗಿಸುವ ಕಾರ್ಯಕ್ಕೆ ಕಾಲುವೆ ತೋಡಿಸಿರುವುದನ್ನು ಕ್ರಿ . ಶ. 1468ರ ಶಾಸವೊಂದು

ಉಲ್ಲೇಖಿಸುತ್ತದೆ. [2] ಕ್ರಿ. ಶ. 1584ರ ದಕ್ಷಿಣ ಆರ್ಕಾಟ್ ಜಿಲ್ಲೆಯ ಶಾಸನವೊಂದರಲ್ಲಿ ಉದಯಗಿರಿಯ ಅಚ್ಯುತಪ್ಪನಾಯಕನು ಆದಿವರಾಹಸ್ವಾಮಿ ದೇವಾಲಯದ ಶ್ರೀ ಭವನದ ರಾವವಾರುರವರಿಂದ ದೇವಾಲಯಕ್ಕೆ ಅರ್ಪಿತವಾದ ಕೈಂಕರ್ಯಗಳಲ್ಲಿ ¼ ಪಾಲನ್ನು, ತನ್ನ, ಸ್ವಂತ ವೆಚ್ಚದಿಂದ ಕಾಡನ್ನು ಕಡಿದು, ಭೂಮಿಯನ್ನು ಸಾಗುವಳಿ ಯೋಗ್ಯವನ್ನಾಗಿಸಿ, ಕೆರೆಗಳನ್ನು ಕಟ್ಟಿಸಿ, ಕಾಲುವೆಗಳನ್ನು ನಿರ್ಮಿಸಿ, ಗಿಡಮರಗಳನ್ನು ನೆಡೆಸುವುದಕ್ಕಾಗಿ ಪಡೆದುದನ್ನು ದಾಖಲಿಸಿದೆ. ಹೀಗಾಗಿ ನೀರಾವರಿ ಕಾಮಗಾರಿಗಳು ಜನ ಉಪಯೋಗಿ ನೆಲೆಯಲ್ಲಿ ಸಮಗ್ರ ಕಾರ್ಯರೂಪಿ ಸ್ವರೂಪ ಹೊಂದಿದ್ದವು. ಇಲ್ಲಿ ಸ್ಥಾನಿಕ ಒಡೆಯ ನೋರ್ವ ತನ್ನ ನಾಯಕತ್ವದಲ್ಲಿ ಸಂಪನ್ಮೂಲಗಳನ್ನು ರೂಢಿಸಿ ಕೊಂಡು, ಈ ತೆರನಾದ ಸಮಗ್ರ ಕೃಷಿ ವಿಸ್ತರಣೆಗೆ ನೀರಾವರಿ ಮೂಲುಗಳನ್ನು ಕಲ್ಪಿಸಿ, ದೇವಾಲಯದ ಕೈಂಕರ್ಯಗಳಲ್ಲಿನ ಒಂದು ಭಾಗವನ್ನು ಪಡೆಯುವುದು, ಧಾರ್ಮಿಕ ಚಟುವಟಿಕೆಗಳಲ್ಲಿ ಗುರುತಿಸಿಕೊಳ್ಳುತ್ತಾ ಸಾಮಾಜಿಕ-ಧಾರ್ಮಿಕ ಪ್ರತಿಷ್ಠೆಗೆ ಅರ್ಹವಾಗುವ ಪರಿಕ್ರಮವಾಗಿ ಇರಬಹುದಾದ ಸಾಧ್ಯತೆಯೇ ಸರಿ! ಕ್ರಿ. ಶ. 1584ರ ದಕ್ಷಿಣ ಆರ್ಕಾಟ್ ಜಿಲ್ಲೆಯ ಶಾಸನವೊಂದರಲ್ಲಿ[4] ತಿರುವಮತ್ತೂರು ದೇವಾಲಯದ ಟ್ರಸ್ಟಿಗಳು ಮತ್ತು ಬಂಡಾರಿಗಳು ಶಿವ ಮತ್ತು ವಿಷ್ಣು ದೇವಾಲಯದ ಟ್ರಸ್ಟಿಗಳೊಂದಿಗೆ ಒಪ್ಪಂದವೇರ್ಪಡಿಸಿಕೊಳ್ಳುತ್ತಾರೆ. ಈ ಒಪ್ಪಂದದಂತೆ ತಿರುವಮತ್ತೂರು ಗ್ರಾಮಸ್ಥರು ತಮ್ಮ ಕೆರೆಗೆ ನೀರನ್ನು ಹಾಯಿಸಿ ಕೊಳ್ಳಲು ಪೆರೆಂಬಾಕಂ ಗ್ರಾಮದ ಎಲ್ಲೆಗಳಲ್ಲಿ ಕಾಲುವೆ ತೋಡಿಕೊಳ್ಳಲು ಮುನ್ನೂರು ಕುಳಿ ಭೂಮಿಯನ್ನು ಪರಿಹಾರವಾಗಿ ನೀಡಿ ಅನುಮತಿ ಪಡೆಯುತ್ತಾರೆ. ಇಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಭೂಮಿ ಪಡೆದು ಅದಕ್ಕೆ ಪರಿಹಾರ ರೂಪದಲ್ಲಿ ಭೂಮಿಯನ್ನು ನೀಡುವ ಪ್ರಕ್ರಿಯೆಯು ಗಮನ ಸೆಳೆಯುತ್ತದೆ. ಧಾರ್ಮಿಕ ಮಹೋನ್ನತಿಯ ಹಿನ್ನೆಲೆಯಲ್ಲಿ ನೀರಾವರಿ ಕಾಮಗಾರಿಗಳು ಜಾರಿಗೊಂಡಿರು ವುದು ಪ್ರಾಚೀನ ಕಾಲದಿಂದಲೂ ಮುಖ್ಯ ಆಶಯವಾಗಿರು ವಂತೆ ಪ್ರಮುಖ ಲಕ್ಷಣವೂ ಆಗಿದೆ. ಕ್ರಿ. ಶ. 1469 ರ ತಿರುಮಲದ ಶಾಸನ [5] ಕಂಡಾರ್ಯೆ ರಾಮಾನುಜಯ್ಯಂಗಾರ್ ಎರಡು ಕಾಲುವೆಗಳನ್ನು ತೋಡಿಸುವ ಮೂಲಕ ಕೈಂಕರ್ಯಗಳನ್ನು ದೇವರಿಗೆ ನಡೆಸಿಕೊಟ್ಟಿರುವುದನ್ನು ಉಲ್ಲೇಖಿಸಿದೆ. ತಿರು ಮಲದ ಮತ್ತೊಂದು ಶಾಸನ ದೇವಾಲಯದ ಗ್ರಾಮಗಳಿಗೆ ಕಾಲುವೆ ತೋಡಿಸಿ, ಕೈಂಕರ್ಯ ಗಳಿಗೆ ಅವಕಾಶ ಕಲ್ಪಿಸಿ ರುವುದನ್ನು ದಾಖಲಿಸಿದೆ. ಕ್ರಿ. ಶ. 1474 ರ ತಿರುಮಲದ ಶಾಸನ[6] ಸ್ತಾನತ್ತರ್‌ರವರು, ತಿರುವೆಂಕಟನಲ್ಲಿರಿಗೆ ಕಾಲುವೆ ತೋಡಿಸಿದ್ದಕ್ಕಾಗಿ, ಶ್ರೀ ವೆಂಕಟೇಶನಿಗೆ ಉಭಯ ಸೇವೆ ಸಲ್ಲಿಸುವ ಅವಕಾಶ ಪಡೆದಿದ್ದನ್ನು ದಾಖಲಿಸಿದೆ. ನರಸನಾಯಕ ಎಂಬುವನು ತನ್ನ ತಾಯಿಯ ನೆನಪಿನಲ್ಲಿ 'ಕಟ್ಟುಕಾಲುವೆ'ಯೊಂದನ್ನು ನಿರ್ಮಿಸಿದನೆಂದು ಕಡಪಾ ಜಿಲ್ಲೆಯ 1494ರ ಶಾಸನ ದಾಖಲಿಸಿದೆ.[7] ತನ್ನ ಮಗ ಪುಣ್ಯಕ್ಕಾಗಿ ಕೇಶವನೇನಿ ಗುರು ಎರಡು

ಕಾಲುವೆಗಳನ್ನು ತೋಡಿಸಿ, ಕೆರೆಯ ಏರಿಯನ್ನು ಭದ್ರಪಡಿಸಿದ ಎಂದು ನೆಲ್ಲೂರು ಜಿಲ್ಲೆಯ ಕ್ರಿ. ಶ. 1494 ರ ಶಾಸನ ಉಲ್ಲೇಖಿಸಿದೆ.[8] ಕ್ರಿ. ಶ. 1506 ರ ಶಾಸನದಲ್ಲಿ ಅಪ್ಪ ಪಿಳ್ಳೆ ಎಂಬುವರು ನೀರಾವರಿ ಕಾಲುವೆಯನ್ನು ತೋಡಿಸಿ, "ದೇವಾಲಯ ಗ್ರಾಮದಲ್ಲಿ" ದೇವರ ಕೈಂಕರ್ಯಕ್ಕೆ ದೇಣಿಗೆ ನೀಡಿದ್ದನ್ನು ದಾಖಲಿಸಿದೆ. [9] ಕ್ರಿ. ಶ. 1512 ರ ತಿರುಮಲ ಶಾಸನದಲ್ಲಿ ತಿರುಮಾಡಿ ನಾಯಕರ್ ಪರಿತಿಪೂತ್ತೂರಿನಲ್ಲಿ ಕಾಲುವೆ ತೋಡಿಸಿ, ದೇವಾಲಯಕ್ಕೆ ಸೇವಾಕೈಂಕರ್ಯಗಳನ್ನು ಕೈಗೊಂಡ ಎಂದು ದಾಖಲಿಸುತ್ತದೆ.[10] ಕ್ರಿ. ಶ. 1515 ರ ಶಾಸನದಲ್ಲಿ ವಡಮಿಲ್ಲೈ ಅನುಗೋಳ್ ಮಡಿಯಾರಿನಲ್ಲಿ ನೀರಾವರಿ ಕಾಲುವೆ ತೋಡಿಸಲು ಹಣ ನೀಡಿದನ್ನು ಹಾಗೂ ಅದರ ಆದಾಯದಲ್ಲಿ ದೇವಿಗೆ ನಿತ್ಯ ಪೂಜೆಗೆ ಸಲ್ಲಿಕೆ ನೀಡಿದನ್ನು ದಾಖಲಿಸುತ್ತದೆ.[11] ಕ್ರಿ. ಶ. 1515 ರ ಮತ್ತೊಂದು ಶಾಸನದಲ್ಲಿ ಕರುಣಿಕ ಬಸವರಾಸಾರ್ ಹೊಸ ಕಾಲುವೆಯನ್ನು ಮಣಿಯತ್ಕನ ಪಟ್ಟಿ ಗ್ರಾಮದಲ್ಲಿ ನಿರ್ಮಿಸಿ, ಶ್ರೀ ಕೃಷ್ಣದೇವರಾಯನ ಹೆಸರಿಗೆ ಪುಣ್ಯವಾಗಲೆಂದು ಅರ್ಪಿಸಿದ್ದು ದಾಖಲಾಗಿದೆ.[12] ಕ್ರಿ. ಶ. 1521 ರ ಶಾಸನದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಶ್ರೀ ಕೃಷ್ಣದೇವರಾಯ ಅಣೆಕಟ್ಟನ್ನು ನಿರ್ಮಿಸಿ, ಕರ್ರಗಲ್ ಮತ್ತು ಬಸವಣ್ಣ ಕಾಲುವೆಗಳನ್ನು ನಿರ್ಮಿಸಿದನೆಂದು ದಾಖಲಿಸಿದೆ.[13]

ಸಾಮ್ರಾಜ್ಯದ ಆಡಳಿತ ಚೌಕಟ್ಟಿನಲ್ಲಿ ಪ್ರತ್ಯೇಕವಾದ 'ನೀರಾವರಿ ಇಲಾಖೆ' ಇರಲಿಲ್ಲ. ಬಹುತೇಕ ಪ್ರಭುತ್ವ ಪ್ರಾಯೋಜಕತ್ವದ ಕಾಮಗಾರಿಗಳು ರಾಜಧಾನಿ, ಮತ್ತು ಕೇಂದ್ರಾಡಳಿತ ಪರಿಸರದಲ್ಲೆ ಕೇಂದ್ರೀಕೃತಗೊಂಡಿರುವುದನ್ನು ಹಲವು ಅಧ್ಯಯನಗಳು ಗುರುತಿಸಿವೆ. ಹಾಗಿದ್ದರೂ ಸಹ ಅಧೀನ ಪ್ರದೇಶಗಳಲ್ಲಿ ಅಧಿಕಾರಿಗಳು, ಸಾಮಂತರು, ವ್ಯಾಪಾರಸ್ಥರು ಹಾಗು ಖಾಸಗಿ ವ್ಯಕ್ತಿಗಳಲ್ಲದೆ ದೇವಾಲಯಗಳೂ ಸಹ ಇಂತಹ ನೀರಾವರಿ ಕಾಮಗಾರಿಗಳನ್ನು ಕೈಗೊಂಡಿರುವುದಕ್ಕೆ ಹಲವು ಶಾಸನಗಳು ಬೆಳಕುಚೆಲ್ಲುತ್ತವೆ.. ಶಾಸನದಲ್ಲಿ [14] ನೀರಾವರಿ ಕಾಮಗಾರಿ ಕೈಗೊಂಡಿದ್ದನ್ನು ಉದ್ದೇಶಿಸಿ, ಅದಕ್ಕಾಗಿ 'ನಾಲ್ಕು ನೂರು ಪಣಂ'ವೆಚ್ಚ ಮಾಡಲಾಗಿದೆ ಎಂದು ಉಲ್ಲೇಖಿಸುತ್ತದೆ. ಇಲ್ಲಿ ಕಾಮಗಾರಿ ಸ್ವರೂಪ ಮತ್ತು ಪ್ರಮಾಣ ಉಲ್ಲೇಖಿತವಾಗಿಲ್ಲವಾದರೂ ಸಹ, ವೆಚ್ಚದ ಮೊತ್ತ ಉಲ್ಲೇಖಿತಗೊಂಡಿರುವುದು ಆಗಿನ ಕಾಲಘಟ್ಟಕ್ಕೆ ಒಂದು ದೊಡ್ಡ ಪ್ರಮಾಣದ ಕಾಮಗಾರಿಯಾಗಿದ್ದಿರು ಎಂದು ಪರಿಭಾವಿಸಬಹುದಾಗಿದೆ. ಕ್ರಿ. ಶ. 1486 ರ ಒಂದು ಶಾಸನದಲ್ಲಿ ದೇವಾಲಯದಿಂದ ಸ್ವಲ್ಪ ತುಂಡು ಭೂಮಿಗಳನ್ನು ಮಾರಾಟ ಮಾಡಿ, ಕ್ರೋಢೀಕರಿಸಿದ ಸಂಪನ್ಮೂಲಗಳಿಂದ ನದಿಯಿಂದ ಪೂರಕ ನಾಲೆಗಳನ್ನು ತೋಡಿಸಿ, ತಿರುಮನ್ನರ ಕೆರೆಗೆ ನೀರನ್ನು ಪಡೆಯುವ ಉದ್ದೇಶದ ಕಾಮಗಾರಿಯನ್ನು ಪ್ರಸ್ತಾಪಿಸುತ್ತದೆ. [15] ಹೀಗಾಗಿ ಸ್ಥಳೀಯ ಹಂತದಲ್ಲಿ ಸಂಪನ್ಮೂಲ ಕ್ರೋಢೀಕರಣವಾದ ಒಂದು ಮಾದರಿ ಗೋಚರವಾಗುತ್ತದೆ.

ಕ್ರಿ. ಶ. 1337-38 ರ ಶಾಸನವೊಂದು ಹರಿಗೆಯ ಪೊಲಿನಾಯ್ಕ ಎಂಬುವನು (ಮಹಾ ನಾಯಕಚಾರ್ಯ ಲಿಕಿತ ನಾಯಕ) ಬಿರೂರವೆ ನದಿಯಿಂದ, ತನ್ನ ಗ್ರಾಮದ ಕೆರೆಗೆ 'ಕಟ್ಟು ಕಾಲುವೆ'ಯೊಂದನ್ನು ತೋಡಿಸಿರುವುದು ದಾಖಲಾಗಿದೆ. [16] ಕ್ರಿ. ಶ. 1385ರ ಶಾಸನದಲ್ಲಿ ಭಿಕ್ಷಾವೃತ್ತಿಯ ಸಿದ್ದಾಯಾದಿವಾನಗುರು ಎಂಬುವನು ಎರಡು ಹಳ್ಳಿಗಳನ್ನು ಸೇರಿಸಿ, ದೇವರಾಯ ನದಿ ಹರಿವನ್ನು ಉತ್ತಮಪಡಿಸಿದ ಎಂದು ಕರ್ನೂಲ್ ಜಿಲ್ಲೆಯ ಶಾಸನ ದಾಖಲಿಸಿದೆ [17]

ಕ್ರಿ. ಶ. 1638 ರ ಶಾಸನದಲ್ಲಿ ವೆಂಕಟಪ್ಪನಾಯಕ ಕೆರೆಯೊಂದನ್ನು ನಿರ್ಮಿಸಿ, ಅದಕ್ಕೆ 'ಚೆನ್ನಸಾಗರಂ' ಎಂದು ಕರೆದು, ಪಾಲಾರ್ ನದಿಯಿಂದ 'ಕಟ್ಟು ಕಾಲುವೆ' ಯೊಂದನ್ನು ನಿರ್ಮಿಸಿದನೆಂದು ದಾಖಲಿಸಿದೆ. [18]

ನೀರಾವರಿ ಕಾಲುವೆಗಳ ನಿರ್ಮಣ ಪ್ರಕ್ರಿಯೆಯಷ್ಟೇ ಅವುಗಳ ದುರಸ್ತಿ ಮತ್ತು ನಿರ್ವಹಣೆ ಸಹ ಮಹತ್ವ ಪಡೆದಿದೆ. ಈ ಕುರಿತಂತೆ ಪ್ರಾತಿನಿಧಿಕವೆಂಬಂತೆ ಕೆಲವೇ ಶಾಸನಗಳಾದರೂ ಉಪಥಯುಕ್ತವೆನಿಸಿದೆ. ಕ್ರಿ. ಶ. 1409ರ ಶಾಸನ ಅವಿಲಾಳಿ ನದಿಯಿಂದ ಸಾಗುವ ಹಳೆಯ ಕಾಲುವೆಯೊಂದನನು ಚಂದ್ರಗಿರಿಯ ನಿವಾಸಿ ಮಾಧನಸಾಸರ್ ಪುನರ್‌ಜೀವನಗೊಳಿಸಿದ್ದನ್ನು ಉಲ್ಲೇಖಿಸಿದೆ. [19] ಇದೇ ತೆರನಾದ ದುರಸ್ತಿಕಾರ್ಯ ಕೈಗೊಂಡಿದ್ದಕ್ಕಾಗಿ ಕುಚುಪುಲ್ಲಿದ ರೆಡ್ಡಿಗಳಿಗೂ ಮತ್ತು ಕರಣಿಕರಿಗೂ ನಾರಯಣಗುರು ಎಂಬುವನು ಭೂಮಿಯನ್ನು ದಾನವಾಗಿ ನೀಡಿರುವುದು ದಾಖಲಾಗಿದೆ. [20] ಕಟ್ಟಿಮಾದು ಶ್ರೀರಂಗರಾಜು ಎಂಬುವನು ಹೂಳು ತುಂಬಿಕೊಂಡಿದ್ದಂತಹ ಕಾಲುವೆಗಳನ್ನು ಪುನಃ ಶ್ಚೇತನಗೊಳಿಸಿದ ಸಂದರ್ಭವನ್ನು ಉಲ್ಲೇಖಿಸಿ, ಅನ್ನದಾನ ಕೈಗೊಳ್ಳುವ ಉದ್ದೇಶದಿಂದ ಭೂದಾನ ಕೈಗೊಂಡಿರುವುದು ಉಲ್ಲೇಖಿತಗೊಂಡಿದೆ. [21] ಚಂಗಲ್ ಪೇಟೆ ಜಿಲ್ಲೆಯ ಪರಂಪರೆಯಲ್ಲಿ ನೀರಾವರಿ ಕಾಲುವೆಯೊಂದನ್ನು ಇರಗುಪ್ಪ ದಂಡನಾಯಕನ ಮಗ ಮಲ್ಲಪ್ಪ ಒಡೆಯ ದುರಸ್ತಿಗೊಳಿಸಿದ್ದನ್ನು ಕ್ರಿ. ಶ. 1396 ರ ಶಾಸನದಲ್ಲಿ ಉಲ್ಲೇಖಿತ ಗೊಂಡಿದೆ. [22] ಅನಂತಪುರದ ಜಿಲ್ಲೆಯ ಶಾಸನವೊಂದರಲ್ಲಿ ಇರಗಪ್ಪ ಡಣ್ಣಾಯಕ ಚೂಲೆಯಪ್ಪ ಒಡೆಯನ ಆದೇಶದ ಮೇರೆಗೆ ಬ್ರಾಹ್ಮಣನೋರ್ವ, ಹೂಳು ತುಂಬಿ ಕೊಂಡಿದ್ದಂಥ ಕಾಲುವೆಯನ್ನು ಪುನಃ ತೋಡಿಸಿದ್ದನ್ನು ದಾಖಲಿಸಿದೆ.[23] ಇಲ್ಲಿ ಅಧಿಕಾರವರ್ಗದ ಆದೇಶಾನುಸಾರ ಕಾಮಗಾರಿ ಜಾರಿಗೊಳಿಸುವುದು ಗಮನಾರ್ಹ ಅಂಶಗಳಲ್ಲಿ ಒಂದಾಗಿದೆ.

ವಿಜಯನಗರ ಸಾಮ್ರಾಜ್ಯದ ನೀರಾವರಿ ಚೌಕಟ್ಟಿನಲ್ಲಿ ಬಳಕೆಯಾಗಿರಬಹುದಾದ ತಾಂತ್ರಿಕ ಕೌಶಲ್ಯದ ಸ್ವರೂಪ ಮತ್ತಿತರ ವಿವರಗಳು ಕುರಿತಂತೆ ಹಲವು ಶಾಸನಗಳಲ್ಲಿ ಉಲ್ಲೇಖಿತವಾಗಿರು ಪ್ರಸ್ತಾಪ ಆ ಕಾಲಘಟ್ಟದ ತಾಂತ್ರಿಕ ಕೌಶಲ್ಯದ ಕೆಲವೇ ಲಕ್ಷಣಗಳ ನ್ನಾದರೂ ಗ್ರಹಿಸಿಕೊಳ್ಳಲು ಸಹಾಯಕವಾಗಿವೆ. ಕ್ರಿ. ಶ. 1357 ರ ಅರಕಲಗೂಡಿನ ಶಾಸನದಲ್ಲಿ ವಡ್ಡಬ್ಯೆವಹಾರಿ ಮಹಾದೇವಣ್ಣ ಲಕ್ಷ್ಮೀಪುರದ 'ರಾಜಕಾಲುವೆ'ಯನ್ನು

ತೋಡಿದ್ದನ್ನು ಉಲ್ಲೇಖಿಸುತ್ತದೆ.[24] ಇಲ್ಲಿ ಕಾಮಗಾರಿ ನಿರ್ವಹಿಸಿದ ಕುಶಲಕರ್ಮಿ ಉಲ್ಲೇಖಗೊಂಡಿದ್ದು, ಪ್ರಾಯೋಜಕರ ವಿವರಗಳು ಇಲ್ಲವಾದರೂ ಕಾಮಗಾರಿ ನಿರ್ವಹಿಸಿದ ಕುಶಲ ಕರ್ಮಿಯೇ ಪ್ರಾಯೋಜನಕನೆ?ಎನ್ನುವ ಪ್ರಶ್ನೆಗೆ ಸ್ಪಷ್ಟತೆ ಇಲ್ಲ. ಈ ಕಾಲಘಟ್ಟದ ವೇಳೆಗೆ ವಿಶೇಷವಾಗಿ ನದಿ ಹರಿವನ್ನು ತನ್ನ ಗತಿ/ದಿಕ್ಕನ್ನು ಬದಲಿಸುವಂತಹ ಅಥವಾ ದೂರದ ಅಗತ್ಯತೆ ಮತ್ತು ಆವಶ್ಯಕತೆಗಳಿಗೆ ಪೂರೈಸಲು ನೀರನ್ನು ಹರಿಸುವಂತಹ ತಂತ್ರಜ್ಞಾನದ ಆವಿಷ್ಕಾರಗೊಂಡಿರುವುದು ಗಮನಾರ್ಹ ಅಂಶಗಳಲ್ಲಿ ಒಂದಾಗಿದೆ. ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಶಾಸನವೊಂದರಲ್ಲಿ ಸಂಗಯ್ಯಭಟ್ಟ ಎಂಬ ದಶಸೂತ್ರ ದಾರ/ಜಲಸೂತ್ರದಾರ ಸಿರುವಾರ ಕೇರೆಗೆ ಹೇಗೆ ನದಿಯಿಂದ ನೀರನ್ನು ಪೆನುಗೊಂಡೆಗೆ ಸಾಗಿಸುವ ಕಾಮಗಾರಿ ಕುರಿತಂತೆ ಉಲ್ಲೇಖಿಸುತ್ತದೆ. [25]

ಇಮ್ಮಡಿ ಬುಕ್ಕನ ಮಗಳಾದ ಬೊಮ್ಮಾದೇವಿ ಪೆದ್ದಬೋವಿ ಮತ್ತು ಚಿನ್ನಬೋವಿ ಎಂಬ ಓಜರಿಗೆ ತಿರುಮಣಿ ಕೆರೆಗೆ ಕಾಲುವೆ ತೋಡಲು ಆದೇಶಿದ್ದನ್ನು ಉಲ್ಲೇಖಿಸುತ್ತದೆ. ಇಲ್ಲಿ ಮಹಿಳಾ ಪ್ರಾಯೋಜತ್ವದ ನೇತೃತ್ವ ವಹಿಸಿರುವುದರ ಜೊತೆಗೆ ಕಾಲುವೆ ನಿರ್ಮಾಣದ ಕೌಶಲ್ಯ ಹೊಂದಿದ್ದ ಸ್ಥಳೀಯ ಮಟ್ಟದ ಕುಶಲಕರ್ಮಿ ಪರಿಣಾತರನ್ನು ದಾಖಲಿಸುತ್ತದೆ. ಬಳ್ಳಾರಿ ಜಿಲ್ಲೆಯ ಶಾಸನವೊಂದರಲ್ಲಿ ಮಲ್ಲಪ್ಪನಾಯಕ ಕೆರೆ ಕಟ್ಟಿಸಿ, ಕಾಲುವೆಗಳನ್ನು ತೋಡಿಸಿದ್ದಕ್ಕಾಗಿ 'ಬೊಯಿಗಳು' ಕಲ್ಲು ಕೆಲಸ ಮತ್ತು ಮಣ್ಣಿನ ಕಾಮಗಾರಿ ನಿರ್ವಹಣೆಗಾಗಿ ಭೂದಾನಗಳನ್ನು ನೀಡಿದ್ದು ಉಲ್ಲೇಖಿತಗೊಂಡಿದೆ. [26] ಕ್ರಿ. ಶ. 1550 ರ ಶಾಸನ ವೊಂದರಲ್ಲಿ ಪೂರ್ವಭಾವಿ ಸಿದ್ಧತೆಗಳನ್ನು ಕಾಲುವೆ ತೋಡಲು ಕೈಗೊಳ್ಳ ಲಾಗಿತ್ತು ಎಂದು ದಾಖಲಿಸಿದೆ. [27] ಆದರೆ ಯಾವ ಬಗೆಯ ಪೂರ್ವಭಾವಿ ಕಾರ್ಯ ಎಂಬುದರ ಬಗ್ಗೆ ಶಾಸನದಲ್ಲಿ ಸ್ಪಷ್ಟತೆ ಇಲ್ಲ. ಪ್ರಾಯಶಃ ಸಮೀಕ್ಷೆ ಕಾರ್ಯ, ಸಲಕರಣೆ ಗಳ ಪೂರೈಕೆ, ಅಗತ್ಯ ಸಂಪನ್ಮೂಲ ಕ್ರೋಡೀಕರಣ, ಹಾಗೂ ತಾಂತ್ರಿಕ ಪರಿಣಿತರನ್ನು ಒದಗಿಸಿ ಕೊಳ್ಳುವ-ಇತ್ಯಾದಿಗಳಾಗಿರಬೇಕು. ಕಾಲುವೆ ನಿರ್ಮಾಣದಂತಹ ಕಾಮಗಾರಿಗಳಿಗೆ ಪ್ರೋತ್ಸಾಹದಾಯಕ ರೂಪದಲ್ಲಿ ಭೂದಾನಗಳನ್ನು ನೀಡಿರುವುದು ಉಂಟು. ಅನಂತಪುರದ ಶಾಸನದಲ್ಲಿ ಕಾಲುವೆ ನಿರ್ಮಿಸಿದ್ದಕ್ಕಾಗಿ ಭೂದಾನ ನೀಡಿರುವುದು ದಾಖಲಾಗಿದೆ. ಕ್ರಿ. ಶ. 1564 ಕಡಪಾ ಶಾಸನದಲ್ಲಿ ಲಿಂಗರೆಡ್ಡಿ ಪಾಂಡುರಂಗ ಅನಂತಯ್ಯ ಮತ್ತು ಪಾಪಯ್ಯ (ಎಲ್ಲರೂ ಕರಣಿಕರು) ಅನಂತಪುರದ ಕಾಲುವೆ ನಿರ್ಮಿಸಿದ್ದಕ್ಕಾಗಿ ವರದಯ್ಯ ದೇವಚೌಡ, ಮಹಾರಾಜನಿಂದ 'ದಶವಾದ'ಪಡೆದಿರುವುದನ್ನು ದಾಖಲಿಸಿದೆ. [28] ಕ್ರಿ. ಶ. 1530 ರ ಶಾಸನದಲ್ಲಿ ಕುಚಬಿಪ್ಪ ಗ್ರಾಮದ ಹಲವು ಮಂದಿಗೆ, ಮಹಾನಾಯಕ ಚಾರ್ಯನಾರಸ ನಾಯನಗಾರವ ಅಂತರಗಂಗೆ ಕಾಲುವೆ ತೋಡಿದ್ದಾಕ್ಕಾಗಿ 'ದಶವಾದ' ನೀಡಿರುವುದನ್ನು ದಾಖಲಿಸಿದೆ. [29]

ವಿಜಯನಗರ ಸಾಮ್ರಾಜ್ಯದಲ್ಲಿ ನೀರಾವರಿ ಚೌಕಟ್ಟು ಉಚ್ಛ್ರಾಯ ಸ್ಥಿತಿ ತಲುಪುದ್ದಿತು. ಬಹುತೇಕ ರಾಜರು, ಸಾಮಂತರು, ಆಡಳಿತಾಧಿಕಾರಿಗಳು, ವ್ಯಾಪಾರಿಗಳು, ಸ್ಥಾನಿಕರು ಪ್ರೋತ್ಸಾಹಿಸಿದ ಪರಿಣಾಮವಾಗಿ ಸ್ಥಳೀಯ ನಾಯಕತ್ವ ಮತ್ತು ಜನ ಸಮುದಾಯಗಳು ನೀರಾವರಿ ಕಾಮಗಾರಿಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಚೌಕಟ್ಟಿನ ಅಭಿವೃದ್ಧಿ ಹೊಂದಿ, ಸಾಮ್ರಾಜ್ಯದ ಕೃಷಿ-ಆರ್ಥಿಕಾಭಿವೃದ್ಧಿಯಲ್ಲಿ ನಿರ್ಣಾಯಕ ಪಾತ್ರ ವಹಿಸಿತು. ಮಧ್ಯಕಾಲೀನ ಆರ್ಥಿಕಾಭಿವೃದ್ಧಿಯಲ್ಲಿ ಕೃಷಿ ಚಟುವಟಿಕೆಗಳು ಚೇತೋಹಾರಿಯಾಗಿ ಪರಿಣಮಿಸಲು, ದಕ್ಷಿಣ ಭಾರತದ ನದಿ ಜಾಲದೊಂದಿಗೆ ಕಾಲುವೆ, ಕೆರೆ-ಕಟ್ಟೆಗಳು ಮುಖ್ಯ ಪಾತ್ರವಹಿಸಿದವು. ಧಾರ್ಮಿಕ ಮಹೋನ್ನತಿ ಜೊತೆಗೆ ಸಾಮಾಜಿಕ-ರಾಜಕೀಯ ಪ್ರತಿಷ್ಠೆಯಾಗಿ ಪ್ರಾಯೋಜಕರು ಪಾಲ್ಗೊಂಡರೆ, ಅಗತ್ಯ ಮತ್ತು ಬದುಕಿಗಾಗಿ ಸ್ಥಳೀಯ ಸಮುದಾಯಗಳು ಪಾಲ್ಗೊಂಡವು. ಕೃಷಿ ಚಟುವಟಿಕೆಗಳು ವಿಸ್ತರಣೆಯಲ್ಲಿ ಕಾಲುವೆಗಳು ನೀರಾವರಿ ಸಂಪರ್ಕದ ಸಾಧ್ಯತೆಗಳನ್ನು ಹೆಚ್ಚಿಸುವ ಮೂಲಕ ಮಹತ್ವದ ಪಾತ್ರ ವಹಿಸಿದೆ.

ಉಲ್ಲೇಖಗಳು

1. ಬರ್ಟನ್ ಸ್ಟೈನ್ : The State and Agrarian order in Medival India - A Hisorigraphical Critique Essays on SOUTH INDIA. (Ed) Burton Stein. Asian Studies. Honalulu.
2. *ಎಫಿಗ್ರಾಫಿಕ ಕರ್ನಾಟಿಕ* III -ಶ್ರೀರಂಗಪಟ್ಟಣ -139
3. *South Indian Inscriptions.* Vol VI- No 225. P. 295
4. *ARSIE*- 1922 -APP. C. No 9- P. 52
5. *Thirumala TTDI* - Vol II No 5 T. T. P. 70
6. *Ibid* No-345. T. T. P-103
7. Cuddapha. P. V. P. Sastry - Inscriptions of Andhrapradesh No. 53. PP - 63-64
8. Nelluru. N.D. Vol. II-Dansi (97) p-293
9. *Tirumala T TDI* - Vol III No 605- TT. p-16
10. *Ibid* No 288 GT. P-103
11. *Ibid* No 1o8 G. T. P-103
12. *Ibid* No 311. T. T. P-213.
13. *Bellary Dist Manual* p. 23
14. *Tirumala, T T DI.* Vol 1 No 351 G T P-170
15. South Arecot ARSIE 706-1922
16. *Ananthpur ARSIE*-1926. P. 112- Pava 41
17. Kurnool, *S. I. I.* Vol XVI. P-7. No. 7. 270 of 1905
18. North Arcot. V. Rangacharya - *Madras Incriptions* Vol I. No. 243-P-62-261 of 1906
19. *Thirumala TTDI.* Vol I No- 92 TTP -1885
20. Cudaopha- V. Rangacharya, *Madras Inscriptions* Vol I No 524 P. 621.

21. *ARSIE* - 1937-38- APP No 218. P-30
22. *ARSIE* 1922- Para 50- P- 78
23. *ARSIE* 1926- APP - C. No 306. P-63
24. ಎ. ಕ. ಹಾಸನ V ಅರಕಲಗೂಡು - 68
25. *Ibid* ಕೋಲಾರ ಗೌರಿಬಿದನೂರು.
26. *ARSIE* 727 of 1919 APP- B . P-50
27. North Arcotf V. Raghavacharya. *Madras Inscription.* Vol- I No 616. P. 106-417 of 1905
28. Cudappa- *S. I. I.* Vol XVI - No 277 P-277-434 of 1911.
29. Cudappa. P. V. P. Saostry. Inscription of A. P. No 106-pp 132-134

ಗ್ರಂಥ ಋಣ

1. *Irrigation in the Vijayanager empire* by M. L. Savaswathi: An un puslished Thesis susmitted to University of Mysoore 1984,
2. *ಕರ್ನಾಟಕದಲ್ಲಿ ಕೆರೆ ನೀರಾವರಿ* - G. S. Dixit ಮತ್ತು ಇತರರು. ಅನು : ನೀಲತ್ತ ಹಳ್ಳಿ ಕಸ್ತೂರಿ. ಕನ್ನಡ ವಿ. ವಿ. ಹಂಪಿ.
3. Mahalingam. T. B. Irrigations under Vijayanagar Dr. B. S. Krishna swmi Iyangar Commemoration Volume. Madras.
4. Gopal B. R. *Vijayanagara Incritptions* 3 Vols. Mysore. 1990.

೨೮. ಹಂಪಿಯ ಸಮುನ್ನತ ಸ್ಮಾರಕಗಳ ಅಧಿಷ್ಠಾನಗಳು: ಒಂದು ಸಮೀಕ್ಷೆ (ಅಧ್ಯಯನ)

ಡಾ.ಎಸ್. ಕೆ. ಜೋಶಿ

'ವಿಜಯನಗರ' ವೈಭವೋಪೇತ ಸಾಮ್ರಾಜ್ಯ. ಏಶಿಯದ ಮಧ್ಯಯುಗೀನ ಸಾಮ್ರಾಜ್ಯಗಳಲ್ಲಿ ಕೀರ್ತಿ -ಶ್ರೀಮಂತ -ಶಿರಮುಡಿ. 'A City with which for richness and magnificence no known western capital could compare....'

ಎಂದು ಉದ್ಗರಿಸಿದ್ದಾರೆ. ಅದಕ್ಕೆ ಭೆಟ್ಟಿ ನೀಡಿದ ಪಶ್ಚಿಮದ ಇತಿಹಾಸಕಾರರು. ಇದು ವಿಜಯನಗರದ ಬಗ್ಗೆ ಅಭಿಮಾನಪಡುವ ದರ್ಶನದ ನುಡಿ.

ಅಂಥ ವಿಜಯನಗರ ಸಾಮ್ರಾಜ್ಯದ 'ರಾಜಧಾನಿ ಹಂಪಿ'. ಪಂಪಾಕ್ಷೇತ್ರ - ಕೀರ್ತಿಶೇಷ ಶಿಲ್ಪವೈಭವದ ಆಗರ, ಸಾಂಸ್ಕೃತಿಕ ರಾಜಧಾನಿ ಎಂದು ಕೂಡ ನಾಮವೆತ್ತಿದೆ. ನೂರಾರು ಐತಿಹಾಸಿಕ ಕಟ್ಟಡಗಳು ಇಲ್ಲಿನ ಕೋಟೆ -ಗೋಡೆಗಳ ಬಾಹುಗಳಲ್ಲಿ ಬಂಧಿಸಲ್ಪಟ್ಟಿವೆ. ಧಾರ್ಮಿಕ ವಾಸ್ತುಶಿಲ್ಪದ ದೇವಾಲಯಗಳು, ಗೃಹ್ಯವಾಸ್ತುಶಿಲ್ಪದ ಉದ್ದಗಲಗಳ ರಾಜರಾಣಿಯರ ಅರಮನೆಗಳು, ದಂಡನಾಯಕರುಗಳ ನೋಬಲ್ಸಗಳ ವಸತಿ-ವಾಡೆಗಳು, ಹಾಗೂ ಸಾರ್ವಜನಿಕೋಪಯೋಗಿ ವಾಸ್ತುಶಿಲ್ಪದ ಭವ್ಯ ಭವನಗಳು ಇಲ್ಲಿ ಅಳಿದೂ ಇನ್ನೂ ಉಳಿದಿವೆ.

ಈ ವಿವಿಧೋದ್ದೇಶದ ಕಟ್ಟಡಗಳನ್ನು ನಿರ್ಮಿಸಲು ಆಗಿನ ಭೂವಿಜ್ಞಾನಿಗಳು, ಅಭಿಯಂತರು ತಮ್ಮ ಬುದ್ಧಿಕೌಶಲಗಳನ್ನು ಉಪಯೋಗಿಸಿದ್ದಾರೆ ಹಾಗೂ ವಿಜಯನಗರ ಆರ್ಕಿಟೆಕ್ಚರ್ (Vijayanagar School of Architecture) ಎಂಬ ವೈಶಿಷ್ಟ್ಯಪೂರ್ಣ ಅನುಸಂಧಾನವನ್ನೇ ಇಡಿಯಾದ ವಾಸ್ತುಶಾಸ್ತ್ರದ ಜಗತ್ತಿಗೆ ನೀಡಿದ್ದಾರೆ.

ಈ ಮೇಲಣ ಮುಪ್ಪುರಿ ವಾಸ್ತು ಪ್ರಭೇದಗಳಲ್ಲಿ, ಅಂದರೆ ಧಾರ್ಮಿಕ ವಾಸ್ತು (Religious Architecture), ಗೃಹ್ಯ ವಾಸ್ತು (Domestic Architecture) ಹಾಗೂ ಸಾರ್ವಜನೀಯ ವಾಸ್ತು (Secular Architecture) ಗಳಲ್ಲಿ, ಅವುಗಳ ನಿರ್ದಿಷ್ಟ ಬಂಧಗಳಲ್ಲಿ, ಕಟ್ಟಡಗಳ ಸ್ಥಳಾಯ್ಕೆ (Selection of Sites), ಅಡಿಪಾಯ (Foundatious), ವಿನ್ಯಾಸ (Plan layouts), ಕಟ್ಟುವ ಶೈಲಿ ಹಾಗೂ ವಸ್ತುಗಳು (Constructional method and building material), ಇತ್ಯಾದಿಗಳ ವಿವರಣೆ,

ವಿಶ್ಲೇಷಣೆ, ಗುಣಮೌಲ್ಯ ಇತ್ಯಾದಿಗಳ ಪಾರ್ಶ್ವದಲ್ಲಿ ಈ ಪ್ರಬಂಧವನ್ನು ಸಾರಸ್ವತ ಲೋಕಕ್ಕೆ ಪ್ರಚುರಪಡಿಸಲಾಗಿದೆ.

ವಿಜಯನಗರದ ರಾಜಧಾನಿ ಹಂಪಿಯ ಸ್ಥಾಪನೆಯ ಸ್ಥಳಾಯ್ಕೆಯೇ ಒಂದು ವಿಶಿಷ್ಟತೆಯನ್ನು ಪಡೆದಿದೆ ; ಅಲ್ಲಿಯ ಕಟ್ಟಡಗಳ ಸ್ಥಳಾಯ್ಕೆಯಂತೂ ಮತ್ತಿಷ್ಟು ವೈಶಿಷ್ಟ್ಯತೆಯ ವಿಶೇಷವಾಗಿದೆ. ರಾಜಧಾನಿ ಹಂಪಿಯ ಭೌಗೋಲಿಕ ಪರಿಸರ ಹಾಗೂ ಭೂವಿಜ್ಞಾನಿಗಳ ಚಕ್ಷುವಿನಿಂದ ಈಕ್ಷಿಸಿದರೆ,

ಇಡಿ ಹಂಪಿ ಹಾಗೂ ಆನೋಗೊಂದಿ ಪ್ರದೇಶವು ಗಟ್ಟಿಯಾದ ಗ್ರಾನೈಟ್ ಹಾಸುಗಲ್ಲಿನ ಮೇಲೆ ನಿಂತಿದೆ. ಅವುಗಳ ಭೂವಿಸ್ತಾರ ಸುಮಾರು 20ಕಿ. ಮೀ. ಉದ್ದ x 20 ಕಿ. ಮೀ. ಅಗಲದ ಅಳತೆಗಳಲ್ಲಿ ಪಸರಿದೆ. ಮಧ್ಯದಲ್ಲಿ ಅಲ್ಲಲ್ಲಿ ಚೆಂಗನೆ ನೆಗೆದ ತಲುಬಂಡೆಗಳ ಗುಡ್ಡಗಳು. ತಪ್ಪಲು ಪ್ರದೇಶದಲ್ಲಿ ಜನವಸತಿಗಾಗಿ ಹರಡಿದ ಹಸಿರಾದ ಸಪಾಟಾದ ಬಯಲುಗಳು. ಸ್ವಾಭಾವಿಕವಾಗಿ ರಕ್ಷಣೆ ನೀಡುವ ಈ ಗುಡ್ಡಗಳ ಆಚೆ ಉತ್ತರ ಗಡಿಯಲ್ಲಿ 'ಮೀಯಾಂಡಲಿಂಗ್'ರಿವರ್ ತುಂಗಭದ್ರೆ. ತನ್ನ ಒಡಲನ್ನು ಮತ್ತಷ್ಟು ಆಚೆಗೆ ಉತ್ತರಕ್ಕೆ ಸರಿಸಿ, ಚಂದ್ರನ ಕೋರೆಯಂತೆ ವಿಸ್ತಾರವಾದ ಭೂಪ್ರದೇಶವನ್ನು ನೀಡಿ, ಒಂದು ತರಹದ ರಕ್ಷಣಾ -ನೀರಿನ ತೀಕ್ಷ್ಣ ಪಾತಳಿಯನ್ನು (Defence sheet of water) ದಯಪಾಲಿಸಿ, ಮತ್ತೊಂದು ಸ್ವಾಭಾವಿಕ -ಪ್ರಾಕೃತಿಕವಾದ ರಕ್ಷಣೆಯನ್ನು ನೀಡಿದೆ.

ಈ ತರಹದ ಕಲ್ಲು ಹಾಸಿಗೆ, ಚೆಂಗನೆ ಎದ್ದ ಗಿರಿಗಳು ಹಾಗೂ ನದಿ -ನೀರಿನ ಕಾವಲು ಪಾತಳಿ... ಈ ಮೂರೂ ಪ್ರಕೃತಿದತ್ತ ಕೊಡುಗೆಗಳನ್ನು, ಹಂಪಿ ಸ್ಥಾಪಿಸ ಬಯಸಿದ್ದ ಭೂವಿಜ್ಞಾನಿಗಳು ಹಾಗೂ ಕಟ್ಟುವ ಅಭಿಯಂತರು ಸಮೀಪಿಕ್ಷಿಸಿ ಆ ಅಂಥ ಆಯಕಟ್ಟಿನ ತಾಣವನ್ನು ಆಯ್ದ ಸಂಗತಿ ನಿಜಕ್ಕೂ ಅಭಿನಂದನೀಯ. ಆನೆಗೊಂದಿಯ ಉತ್ತರಕ್ಕೆ ಮತ್ತೆ ಮತ್ತೆ ತಲೆ ಎತ್ತಿ ನಿಂತ ಗಿರಿಗಳ ಸಾಲುಗಳು, ಹಾಗೂ ದಕ್ಷಿಣಕ್ಕೆ ಹೊಸಪೇಟೆಯ ಮತ್ತಿಷ್ಟು ದಕ್ಷಿಣಕ್ಕೆ ಎತ್ತರದಲ್ಲಿ ವಿಶಾಲವಾಗಿ ಹರಡಿದ ಗುಡ್ಡಗಳು, ಇವೆರಡು ಪ್ರಾಕೃತಿಕ ಮೇರೆಗಳ ಮಧ್ಯದಲ್ಲಿ ವಿಸ್ತಾರವಾಗಿ ಮೈತಾಳಿದ ಬಯಲು ಪ್ರದೇಶ, ಸ್ವಾಭಾವಿಕವಾದ ವಸತಿ ಸೌಕರ್ಯಕ್ಕೆ (Settlement pattern) ಅನುವು ಮಾಡಿಕೊಟ್ಟಿವೆ.

ಅದಾಗಿ, ಹಂಪಿ-ಆನೆಗೊಂದಿಗಳ ಪ್ರದೇಶವೇ ಒಂದು ಮೂಲತಃ ಗಟ್ಟಿ ಮುಟ್ಟಾದ ಕಲ್ಲಿನ ಹಾಸಿಗೆಯುಳ್ಳ, (Excellent area for laying city foundatioan) ನಗರ ವಾಸ್ತವ್ಯಕ್ಕೆ, ಜನವಸತಿಗೆ ಹೊಸಪೇಟೆಯ ಮತ್ತಿಷ್ಟು ದಕ್ಷಿಣಕ್ಕೆಕೋಟೆ -

ಕೊತ್ತಲಗಳಿಗೆ, ಇನ್ನುಳಿದ ನೂರಾರು ವಿಸ್ತಾರವಾದ ದೇವಮಂದಿರಗಳಿಗೆ, ಅರಮನೆಗಳಿಗೆ, ಕೆರೆ ಕಾಲುವೆ ಬಾಜಾರುಗಳಿಗೆ, ನಿವೇಶನ ಪ್ರದೇಶದಲ್ಲಿ ನೀಳವಾಗಿದೆ.

ಹಂಪಿಯ ಪ್ರದೇಶಕ್ಕೆ, ಅದರ ಪೃಷ್ಟದ ಮೇಲೆ ಕಟ್ಟಲ್ಪಟ್ಟ ನೂರಾರು ದೇವಾಲಯಗಳ ಭಾರವನ್ನು, ಸುತ್ತುವರಿಯಲ್ಪಟ್ಟ ಕೋಟೆಯ ಗೋಡೆಯ ಭಾರವನ್ನು, ಅರಮನೆಗಳ ಬಾಜಾರುಗಳ ಪ್ರವೇಶದ್ವಾರಗಳ ಗೋಪುರಗಳ ಭಾರವನ್ನು ಹೊರುವ ಧಾರ್ಷ್ಟ್ಯ ಬರಬೇಕಾದರೆ, ಅದರ ತಳದಲ್ಲಿ ಹಾಸುಗಲ್ಲಾಗಿರುವ 'ರಾಕ್‌ಬೆಡ್' (Rock - bed) ಕಲ್ಲಿನ ಹಾಸಿಗೆ ಕಾರಣ. ಇಡಿಯಾಗಿ ಹಂಪಿಯಲ್ಲಿ ಕಟ್ಟಲಾದ ಎಲ್ಲ ತರಹದ ಕಟ್ಟಡಗಳಿಗೆ ಉಪಯೋಗಿಸಿದ ಕಲ್ಲುಗಳ ವಜನವು (Weight) ಲಕ್ಷಾಂತರ ಟನ್ ಗಳಷ್ಟಿರಲು ಸಾಕು.

ಈ ಕಲ್ಲುಗಳು, ದೂರದ ಗುಡ್ಡಗಳ ಗಣಿಗಳಿಂದ ಕೊರೆದು ತರಲಾಗಿದ್ದು, ಸೀಮಿತ ಪ್ರದೇಶವಾದ ಹಂಪಿಯ ಪರಿಸರದಲ್ಲಿ ಕಟ್ಟಡಗಳಿಗಾಗಿ ಉಪಯೋಗಿಸಲಾಗಿದೆ. ಹೊಸದಾದ ಭಾರವನ್ನು ಇಲ್ಲಿ ತರಲಾಗಿದ್ದು, ಅವುಗಳನ್ನು ಇಲ್ಲಿ ಇಳಿಸಲಾಗಿದೆ. ಅಂದರೆ, ಒಟ್ಟಾಗಿ, ಲಕ್ಷಾಂತರ ಟನ್ ಭಾರವಾದ ಕಲ್ಲುಗಳನ್ನು ಇಲ್ಲಿ ಕಟ್ಟಡಗಳಿಗೆ ಉಪಯೋಗಿಸಿ, ಭಾರವನ್ನು ತಡೆಯುವ ತಡೆಹಿಡಿಯುವ ಸಹನಶಕ್ತಿಯನ್ನು ನೋಡಲಾಗಿದೆ. Lacs of Tonnes Load Stones are bought here form distant hills. ಹೀಗಾಗಿ ಇಲ್ಲಿಯ ನೆಲದ ಮೇಲೆ ಹೊರಗಿನಿಂದ ಬಂದ ಕಲ್ಲುಗಳ ಭಾರವನ್ನು ಹೊರುವ ಕ್ಷಮತೆ ಅಸದಳ. Externally weight bearing capacity ಹಂಪಿಯ ನೆಲದಲ್ಲಿದೆ. ಇದು ಇದರ ಭೂಗುಣ.... Load bearing capacity ಎಂದೂ ಕರೆಯ ಬಹುದು. ಇದು ಹಂಪಿಯ ನಿರ್ಮಾಪಕರು ಈ ಪರಿಸರದಲ್ಲಿ ಕಂಡ ಗುಣವೈಶಿಷ್ಟ್ಯ, ಗಟ್ಟಿತನ, ಹಾಗೂ ಸ್ಥಳಾಯ್ಕೆಯಲ್ಲಿ ಜಾಣತನ.

ಇನ್ನು ಪ್ರತ್ಯೇಕವಾಗಿ ಧಾರ್ಮಿಕ ಕಟ್ಟಡಗಳ, ಗೃಹ್ಯ ಅರಮನೆಗಳ ಹಾಗೂ ಸಾರ್ವಜನೀಯ ಸೌಧಗಳ ಅಡಿಪಾಯವನ್ನು (Foundation) ಅಭ್ಯಸಿಸಿದಾಗ, ಕಂಡು ಬರವುದೇನೆಂದರೆ: ಕೆಲವೆಡೆಗಳಲ್ಲಿ ಮೃದುಲ ಭೂಮಿಯಿದ್ದರೆ, ಅಲ್ಲಿ 8 ರಿಂದ 10 ಫೂಟ ಆಳವಾಗಿ ಅಗೆದಿದ್ದು, ಕೆಳದಲ್ಲಿ ದಪ್ಪ ಕಲ್ಲು ಹಾಸಿಗೆ ಹಾಕಿ, ಅದರ ಮೇಗಡೆ ಅಡಿಪಾಯದ ಗೋಡೆಯನ್ನು ಕಲ್ಲುಗಳಿಂದ ಏರಿಸಿದ್ದಾಗಿದೆ. ಎಲ್ಲಿ ಕಲ್ಲಿನ ಹಾಸುಗೆ ಸುಲಭವಾಗಿ ಜಮೀನಿನ ಮೇಲೆ ಇದೆಯೋ, ಅಲ್ಲಿ ಅಡಿಪಾಯದ ಅಗಲಳಲೆಯಷ್ಟು ಆ ಕಲ್ಲಿನ ಹಾಸಿಗೆಯಲ್ಲಿ ಚಾಣದಿಂದ ಕಡಿದು-ಕೊರೆದು, ನಿರ್ದಿಷ್ಟಪಡಿಸಿದ ಗೋಡೆಯ ಸ್ತರಗಳನ್ನು ಆ ಕನಿಷ್ಠ ಪಾತಳಿಯಿಂದ ಮೇಲಕ್ಕೆ ಕಟ್ಟುತ್ತ ಬರಲಾಗಿದೆ.

ಈ ಮೇಲಣ ರಚನೆಯಿಂದ ವಿಶಾಲವೂ ವಿಸ್ತಾರವೂ ಆದ ಕಟ್ಟಡಗಳ ಅಧಿಷ್ಠಾನದಲ್ಲಿ ಇಡೀ ಕಟ್ಟಡದ ಭಾರವು ಎಲ್ಲ ಕಡೆಗೂ ಸಮಾನವಾಗಿ ಬೀಳುವಂತೆ ನೋಡಿಕೊಳ್ಳಲಾಗಿದೆ. ಲೋಡ್ ಬೆಯರಿಂಗ್ ವಿಧಾನವನ್ನು ಸಮನಾಗಿ ಹಂಚಿ, ಕಟ್ಟಡವು ಸಮತೋಲವನ್ನು ಕಾಯ್ದುಕೊಳ್ಳುತ್ತದೆ, ಹಾಗೂ ಕಟ್ಟಡವು ಮೇಲೆ ಏಳುತ್ತಿದ್ದಂತೆ, ಯಾವುದೇ ಕಡೆಗೆ ವಾಲುವ ಅವಕಾಶವೇ ಇಲ್ಲ (No scope for tilt in the Super sturcture).

ಸಾಮಾನ್ಯವಾಗಿ, ವಿಜಯನಗರ ಶೈಲಿಯ ಕಟ್ಟಡಗಳು-ಧಾರ್ಮಿಕವೇ ಇರಲಿ, ಗೃಹ್ಯವೇ ಇರಲಿ, ಅಥವಾ ಸಾರ್ವಜನೀಯವೇ ಆಗಿರಲಿ -ಅಗಲಳತೆಗಳಲ್ಲಿ ಬಹಳಷ್ಟು ವಿಶಾಲವೂ ಭವ್ಯವೂ ಉನ್ನತವೂ ಆಗಿವೆ. ಅದಾಗಿ ಇವುಗಳ ಅಡಿಪಾಯಕ್ಕೆ ಮಹತ್ವ ಕೊಟ್ಟಂತೆ, ವಿನ್ಯಾಸಕ್ಕೂ, ಉಪಯೋಗಿಸುವ ಕಟ್ಟಡ ಪದಾರ್ಥಗಳಿಗೂ, ಹಾಗೂ ಕಟ್ಟುವ ಶೈಲಿಗೂ ಪ್ರಾಮುಖ್ಯತೆ ಕೊಡಲಾಗಿದೆ.

ಧಾರ್ಮಿಕ ಕಟ್ಟಡಗಳೆಂದರೆ ದೇವಾಲಯಗಳು ಪ್ರಮುಖವಾದವು. ಇವುಗಳನ್ನು ಚೆನ್ನಾಗಿ ಕೊರೆದ, ಕಟೆದ, ಬೇಕಾದ ಕಲ್ಲುಗಳಿಂದ ಗೋಡೆಗಳನ್ನು ತಯಾರಿಸಲಾಗಿದೆ. ಜೋಡಣಾ ವಸ್ತುವೆಂದರೆ (Binding material) ಗುಣವುಳ್ಳ ಗಚ್ಚು. ದೇವಸ್ಥಾನದ ಶಿಬಿರಗಳಿಗೆ, ಪ್ರವೇಶದ್ವಾರಗಳಿಗೆ, ಗೋಪುರಗಳಿಗೆ ಅವು ಮೇಲಕ್ಕೆ ಏರುತ್ತ ಹೋದಂತೆ ಇಟ್ಟಿಗೆ ಹಾಗೂ ಗಾರೆ-ಗಚ್ಚುಗಳನ್ನು ಉಪಯೋಗಿಸಲಾಗಿದೆ. ದೇವಸ್ಥಾನಗಳಲ್ಲಿ ರಾತ್ರಿಗಳಲ್ಲಿ ಸಾಮಾನ್ಯವಾಗಿ ವಸತಿ ಹಾಕುವುದಾಗಲಿ, ಮಲಗುವ ದಾಗಲೀ ಯಾರೂ ಮಾಡುವುದಿಲ್ಲ. ಹಾಗಾಗಿ, ಕಲ್ಲಿನ ಛತ್ತು ಕುಸಿದು ಬೀಳುವ ಭಯವಾಗಲೀ, ಬಿದ್ದರೂ ಪ್ರಾಣಹಾನಿಯಾಗಲೀ ಆಗದು. ಅದಾಗಿ, ದೇವಸ್ಥಾನಗಳಲ್ಲಿ ಕಲ್ಲಿನ ಭವ್ಯ ಕಂಬಗಳನ್ನೂ, ತೊಲೆಗಳನ್ನೂ, ಅಂಕಣಗಳಿಗೆ ಕಲ್ಲಿನವೇ ಛಾವಣಿ ಸನ್ನೂ ಅಳವಡಿಸಲಾಗಿದೆ. ಈ ರೀತಿ ಶಿಲಾಮಯ ಗೋಡೆಗಳಲ್ಲಿ ಕಂಬಗಳಲ್ಲಿ ಶಿಲ್ಪ-ಕಲೆಯನ್ನು ವ್ಯಕ್ತಗೊಳಿಸಲಾಗಿದೆ.

ಇಂಥ ಧಾರ್ಮಿಕ ಕಟ್ಟಡಗಳಲ್ಲಿ, ಗಟ್ಟಿಮುಟ್ಟಾದ ಹಾಗೂ ಎತ್ತರವಾದ ಅಧಿಷ್ಠಾನಗಳಿರುವ ದೇವಾಲಯಗಳೆಂದರೆ: ವಿರೂಪಾಕ್ಷ, ಕೋದಂಡರಾಮ, ಶ್ರೀರಾಮ, ಶ್ರೀ ವಿಜಯವಿಠ್ಠಲ, ಸಾಸಿವೆಕಾಳುಗಣಪ, ಚಂದ್ರಶೇಖರ ಗುಡಿ, ಕಡಲೆಕಾಳು ಗಣಪ, ಜೈನ ಬಸದಿಗಳು, ಲಕ್ಷ್ಮೀನರಸಿಂಹ, ಉದ್ದಾನ ವೀರಭದ್ರ, ಶ್ರೀಕೃಷ್ಣ ದೇವರಾಯ, ಪಟ್ಟಾಭಿರಾಮ, ಅಚ್ಯುತದೇವರಾಯ ಸಮುಚ್ಚಯ, ಪಟ್ಟದೆಲ್ಲಮ್ಮ, ಅಂಡರ್ ಗ್ರಾವುಂಡ್ ಟೆಂಪಲ್, ಇತ್ಯಾದಿಗಳು - Religiours Architecture ಪ್ರಕಾರದಲ್ಲಿ ಬರುತ್ತದೆ. ಇದೇ ರೀತಿಯಾಗಿ,

ಈ ಗೃಹ್ಯ ವಾಸ್ತುಗಳು ಮೂಲತಃ ಸದೃಢವಾಗಿ ಅಳವಡಿಸಿದ ಅಲಂಕೃತಗೊಂಡ ಕಲ್ಲುಗಳ ಪಟ್ಟಿಕೆಗಳ ಮೇಲೆ (Plinths) ನಿಂತು, ಕಟ್ಟಡವು ಕಲ್ಲು ಮಣ್ಣು, ಗಚ್ಚು ಗಳಿಂದ ಉಪಯೋಗಿಸಿದ ಗೋಡೆಗಳಿಂದ ಮೇಲೇರುತ್ತದೆ. ನಂತರ ಕಂಬ, ತೊಲೆ, ಜಂತಿ, ಬೋದಿಗೆ, ಆಚ್ಛಾದನೆಗಳೆಲ್ಲ ಕಾಷ್ಠ ಶಿಲ್ಪದಲ್ಲಿ ಅಳವಡಿಸಲ್ಪಟ್ಟವು. ಹಾಗಾಗಿ ಆಘಾತ ಕಡಿಮೆ.

ಪಟದೆಲಮ್ಮ ಗುಡಿಯ ಆಗ್ನೇಯ ದಿಕ್ಕಿನಲ್ಲಿ ಬೆಳಗ್ಗೆ ತಂದ ನೋಬಲ್ಸ ಕ್ವಾರ್ಟರ್ಸ್ ಇತ್ಯಾದಿಗಳು ಕೆಳಗೆ ಹೆಸರಿಸಿದ ಪುರಾತತ್ವವಿದರ ಪರಿಶ್ರಮದ ಫಲ.

ಈ ಗೃಹ್ಯ ಕಟ್ಟಡಗಳ ಆಗೀಂತವೊಂದು ಕ್ರಾಂತಿಪರ್ವ (Rerolutinary Excavation) ಎಂದೇ ಹೇಳಬೇಕು. ಏಕೆಂದರೆ ಈ ಕ್ಷೇತ್ರದಲ್ಲಿ ಪ್ರಮುಖ ನಮ್ಮ ಸಮ ಕಾಲೀನ ಪುರಾತತ್ವವಿದರ ಪರಿಶ್ರಮವಿದೆ. ಆ ಸಂಶೋಧಕರ ಹೆಸರನ್ನು ವಿನಮ್ರತೆ ಯಿಂದ ಹೇಳಲೇಬೇಕು. ಏಕೆಂದರೆ ಸುಮಾರು ನಾಲ್ಕು ದಶಕಗಳ ಕಾರ್ಯದ ಫಲವಿದು. 1975- 2005 ರವರೆಗೆ ಸತತವಾಗಿ ಉತ್ಖನಿಸಿ ಗೃಹ್ಯವಾಸ್ತುವನ್ನು ಬೆಳಕಿಗೆ ತಂದಿದ್ದಾರೆ.

ಆ ಸಂಶೋಧಕರ ಉದ್ಘನೆಯ ಸಾಲು, ನಮ್ಮ ಮುಂದಿನ ಜನಾಂಗದ ನೆನಪಿಗೆ ಇಲ್ಲಿ ಓಡಿದಿಟ್ಟಿರುವೆ : ಡಾ| ಎಸ್. ಆರ್. ರಾವ್. ಡಾ|| ಎಂ. ಎಸ್. ನಾಗರಾಜರಾವ್, ಡಾ. ಆರ್. ಸಿ. ಅಗ್ರವಾಲ, ವಿಜಯಕಾಂತ ಮಿಶ್ರಾ, ಡಾ||ನರಸಿಂಹಯ್ಯ, ಡಾ||ಎಸ್. ಕೆ. ಜೋಶಿ, ಡಾ||ಎಸ್. ವ್ಹಿ. ವೆಂಕಟೇಶಯ್ಯ, ಡಾ||ಕೆ. ಪಿ. ಪೂಣಚ್ಚ, ಡಾ||ರಂಗರಾಜನ್, ಟಿ. ಎಸ್. ಗಂಗಾಧರ, ಡಾ||ಆರ್. ಎಂ. ಷಡಕ್ಷರಯ್ಯ, ಟಿ. ಎಂ. ಕೇಶವ, ಸಿ. ಬಿ. ಪಾಟೀಲ, ಎಂ. ವ್ಹಿ. ವಿಶ್ವೇಶರ, ಡಾ||ಎಸ್. ವ್ಹಿ. ಪಿ. ಹಳಕಟ್ಟಿ, T. ಹನುಮಂತಪ್ಪ, ಇವರೆಲ್ಲ ಕೇಂದ್ರ ಪುರಾತತ್ವ ಸರ್ವೇಕ್ಷಣದವರಾದರೆ, ರಾಜ್ಯ ಪುರಾತತ್ವ ಇಲಾಖೆಯಿಂದ ಡಾ||ಅ.ಸುಂದರ , ಡಾ ||ಚನ್ನಬಸಪ್ಪ ಪಾಟೀಲ, ಡಾ|| ಬಾಲಸುಬ್ರಹ್ಮಣ್ಯಂ, ಡಾ||ಆರ್. ಗೋಪಾಲ, ಬಿ. ಎಂ. ಚಿಕ್ಕಮಾರೇಗೌಡ, ತಳವಾರ... ಗೌಡರ ಡಾ||ವಾಸುದೇವ ಬಡಿಗೇರ... ಇನ್ನೂ ಹತ್ತು ಹಲವಾರು ಮಹನೀಯರು ಮೇಲೆ ವಿವರಿಸಿದ ಗೃಹ್ಯ ವಾಸ್ತುಗಳ ಅವಶೇಷಗಳ ಅಧಿಷ್ಠಾನಗಳನ್ನು ಬೆಳಕಿಗೆ ತಂದಿದ್ದಾರೆ.

ಇನ್ನು ಸಾರ್ವಜನೀಯ (Secular Architectural Remains) ಭವನಗಳು ಬಹಳಷ್ಟು ವಿಶೇಷ ವಿನ್ಯಾಸ ಹಾಗೂ ಅಧಿಷ್ಠಾನಗಳನ್ನು ಹೊಂದಿವೆ. ಅವುಗಳ ಸಂಖ್ಯೆಯೂ ಹೆಚ್ಚು ಹಾಗೂ ವಿಸ್ತಾರವೂ, ಭವ್ಯತೆಯೂ, ಅಧಿಕ ಅಚ್ಚರಿ ಮೂಡಿಸು ವಂಥವು. ಹೆಸರಿಸಬೇಕಾದರೆ

1. ಮಹಾನವಮಿ ದಿಬ್ಬ
2. ಕಿಂಗ್ಸ್ ಆಡಿಯನ್ ಹಾಲ್
3. ಪಬ್ಲಿಕ್ ಬಾಥ್
4. ಎಲೆಫಂಟ್ಸ್ ಸ್ಟೆಬಲ್
5. ಆಕ್ಟಾಗೋನಲ್ ಬಾಥ್
6. ವಿರೂಪಾಕ್ಷ ದೇವ ಮಂದಿರದ ರಥ ಬೀದಿಯಲ್ಲಿಯ ಅಂಗಡಿಗಳು
7. ಶ್ರೀ ವಿಜಯ ವಿಠಲನ ದೇವಸ್ಥಾನದ ಬಾಝಾರ್
8. ಸೂಳೆ ಬಾಝಾರ್
9. ಸುಪಾರಿ ಬಾಝಾರ್
10. ಧರ್ಮಶಾಲಾ
11. ಶ್ರೀ ಕೃಷ್ಣಮಂದಿರದ ಬಾಝಾರ್
12. ಗಾಣಿಗರ ಓಣಿ
13. ತಲಾರ ಘಟ್ಟಾ, ನಾವೆ ಸ್ಥಾನಕ
14. ಆನೆಗೊಂದಿ ನಾವೆ ಸ್ಥಾನಕ
15. ಪೆನುಗೊಂಡ ಗೇಟ್ ಬಾಝಾರ್
16. ಮಂತ್ರಾಲಯ (Excvated Site)
17. ಸ್ಟೆಪ್ಡ್ ವೆಲ್ (Excavated)
18. ಕಮಲಾಪುರ ಕೆರೆ (Water Eng. feat)
19. ನೀರ್ಗಾಲುವೆಗಳು
20. ರಾಣಿಯರ ಕೊಳ (Strictly for queens and other royal ladies)
21. ರೆವಿನ್ಯೂ ಕಚೇರಿಗಳು
22. ಮೇಲಟ್ಟಣೆಗಳು
23. ವೀಕ್ಷಣಾಲಯಗಳು
24. ಸಾರ್ವಜನಿಕ ಬಾವಿಗಳು
25. ನೀರಿನ ಹೌದುಗಳು

26. ನೀರಿನ ಕಾರಂಜಿಗಳು
27. ಪ್ರಾಣಿಗಳಿಗೆ ಕುಡಿವ ನೀರಿನ ಕಲ್ಲಿನ ದೋಣಿಗಳು
28. ಕುಸ್ತಿ ತಾಲೀಮುಗಳು
29. ರಾಯಲ್ ಗಾರ್ಡನ್ಸ್

ಇನ್ನೂ ಹತ್ತು ಹಲವಾರು ಇಂಥ ವಾಸ್ತು ಅನುಬಂಧಗಳು, ತಮ್ಮ ತಮ್ಮ ಎತ್ತರದ ಅಧಿಷ್ಠಾನಗಳ ಮೇಲೆ ಗಟ್ಟಿಯಾಗಿ ನಿಂತು, ವಿಜಯನಗರದ ವೈಭವವನ್ನು ಮೆರೆದಿವೆ. ಇವೆಲ್ಲ ಗ್ರಾನಾಯಿಟ್ ಕಲ್ಲುಗಳ ನಿರ್ಮಾಣವಾಗಿವೆ (ಚಿತ್ರಗಳು :ನೋಡಿ)

ಅಧಿಷ್ಠಾನಗಳ ವೈಶೇಷಿಕತೆ

ಅವು ಹೇಗೆ ಇವೆ!

ಮೂಲತಃ ಎಲ್ಲ ಅಧಿಷ್ಠಾನಗಳು ಕಲ್ಲಿನ ಸಾಲುಗಳಲ್ಲಿ ಕಟ್ಟಲ್ಪಟ್ಟಿವೆ. ವಿಶಾಲವಾದ, ವಿಸ್ತಾರವಾದ ಹಾಗೂ ಎತ್ತರವಾದ ಗುಡಿಗಳನ್ನು ಭವನಗಳನ್ನು ಹೊತ್ತುಕೊಳ್ಳಲು ಭದ್ರ ತಳಹದಿಯ ಮೇಲೆ ನಿಂತಿವೆ. ಇವು ಆದಿಯಾಗಿ ಕಲ್ಲಿನ ಕೃತಿಗಳು. (ಚಿತ್ರ ನೋಡಿ)

ಅಧಿಷ್ಠಾನದ ಅಂಲಕಣಗಳು, ವಿವಿಧ ಪಟ್ಟಿಕೆಗಳಿಂದ ಭೂಸಮಾಂತರವಾಗಿ, ವ್ಯವಸ್ಥಿತವಾಗಿ, ನೇವವೇರಿಸಲಾಗಿದ್ದು, ಅವು ಸ್ಥಪತಿಯ ಕೈಗಳಿಂದ ಮೃದುಲವಾದ ದೃಶ್ಯ ನೀಡುತ್ತಿವೆ (Plasticity). ಈ ತರಹದ ಅಧಿಷ್ಠಾನಗಳ ಅಳವಡಿಕೆಯು, ಗುಡಿಗಳಲ್ಲೂ, ಗೃಹ್ಯ ಭವನಗಳಲ್ಲೂ, ಸಾರ್ವಜನಿಕ ಕಟ್ಟಡಗಳಲ್ಲೂ ಜೋಡಿಸಲಾಗಿದೆ.

ಅಧಿಷ್ಠಾನಗಳು, ಅವಶ್ಯಕತೆಗಳಿಗೆ ಬೇಕಾದಂತೆ, ವಿಶಾಲವಾಗಿವೆ. ಹಾಗೂ ತನ್ನ ಬೆನ್ನಮೇಲೆ, ಬಹಳಷ್ಟು ವಿಸ್ತಾರವಾದಂಥ ಕಟ್ಟಡಗಳನ್ನು ಭರಿಸುವ ಶಕ್ತಿಹೊಂದಿವೆ. ಮೇಲೆ ಕಾಣುವ ಕಟ್ಟಡಗಳು ಭದ್ರವಾಗಿರುವಾಗ, ಸುಂದರವಾಗಿರುವಾಗ, ಆಕರ್ಷಕವಾಗಿರುವಾಗ ಅವುಗಳ ಅಧಿಷ್ಠಾನಗಳೂ ವೈಭವೋಪೇತವಾಗಿವೆ. ಮೂಲೆಗಳ ತಿರುವಿನಲ್ಲಿ ಅಂದ ಭರಿಸಿವೆ.(ಚಿತ್ರ ನೋಡಿ)

ಅಧಿಷ್ಠಾನಗಳು ಸಾಕಷ್ಟು ಎತ್ತರವಾಗಿ ಇರುವುದರಿಂದ, ಭೂಪೃಷ್ಠದಿಂದ ನೀರಿನಾಂಶವನ್ನಾಗಲಿ, ತೇವವನ್ನಾಗಲಿ ಹೀರುವ ಪ್ರಶ್ನೆಯೇ ಇಲ್ಲ. ಹಾಗಾಗಿ, ಮಳೆಗಾಲದಲ್ಲಿ ಕಟ್ಟಡದ ಸುತ್ತಲು ನೀರು ಸ್ವಲ್ಪ ಮಟ್ಟಿಗೆ ತಾತ್ಪೂರ್ವಿಕವಾಗಿ ನಿಂತರೂ, ಮೇಲಿನ ಅಂತಸ್ತಿಗೆ ಯಾವುದೇ ತರಹದ ಶಿಥಿಲತೆಯನ್ನು ಅಧಿಷ್ಠಾನಗಳು ತರುವುದಿಲ್ಲ.

ವಿಸ್ತಾರವಾದ ಅಧಿಷ್ಠಾನಗಳು, ವಿನ್ಯಾಸಕ್ಕೆ ಅನುಗುಣವಾಗಿಯೇ ವಿಸ್ತಾರವಾಗಿರುತ್ತವೆ. ಇದು ಅಭಿಯಾಂತ್ರಿಕ ತತ್ವ. ವಿಶಾಲ ವಿನ್ಯಾಸಗಳು ಗೃಹ್ಯ ಕೃತ್ಯಗಳಿಗೆ ಅಡಚಣೆ ಮಾಡುವುದಿಲ್ಲ. ಪ್ರಶಸ್ತ ತಿರುಗಾಟ, ಹಬ್ಬಹರಿದಿನಗಳಲ್ಲಿ ಪರಿವಾರಕ್ಕೆ ಪ್ರಸನ್ನಚಿತ್ತರಾಗಿ ಧರ್ಮಾಚರಣೆ, ಇತ್ಯಾದಿಗಳಿಗೆ ಸಾನುಕೂಲವಾಗಿವೆ. ಸುತ್ತಲಿನ ಗೋಡೆಗಳು ವ್ಯಕ್ತಿಗತ, ಆಪ್ತ, ಖಾಸಗಿ, ಬದುಕನ್ನು ಬಾಳಲು, ಗೃಹ್ಯ ಭವನಗಳು ರಾಣಿವಾಸಗಳು ಅನುವು ಮಾಡಿಕೊಟ್ಟಿವೆ; ಹಾಗೂ ರಕ್ಷಣೆಯನ್ನೂ ನೀಡಿವೆ.

ಕೇವಲ ಅಧಿಷ್ಠಾನಗಳು ಮಾತ್ರ ಏಕೆ ಉಳಿದಿವೆ?

1. ಹಿಂದೂ ಸಾಮ್ರಾಜ್ಯದ ಸುಸಂಪನ್ನತೆಯನ್ನು ಸಂಸ್ಕೃತಿಯನ್ನು ತನ್ನ ಉಸಿರಾಗಿ, ಸಂಕಲ್ಪವಾಗಿ ಮಾಡಿಕೊಂಡ ವಿಜಯನಗರ ಸಾಮ್ರಾಜ್ಯವು ಮುಸ್ಲಿಂರ ಧರ್ಮದ್ವೇಷದಿಂದ ಅವಸಾನಗೊಂಡಿತು.

2. ಕ್ರಿ. ಶ. 1565ರಲ್ಲಿ ವಿಜಯನಗರದ ಸೋಲಾಗಿ, ನಗರವೇ ಕೊಳ್ಳಿ, ಲೂಟಿ, ದಂಗೆ, ದರೋಡೆ, ಬೆಂಕಿಗಳಿಗೆ ಆಹುತಿಯಾಯಿತು. ಜಗತ್ತಿನ ಇತಿಹಾಸದಲ್ಲಿ, ಐತಿಹಾಸಿಕ ನಗರಗಳು ಪರರ ದಾಳಿಗೆ ಇಷ್ಟು ಧ್ವಂಸವಾದುದು ಉಧ್ವಸ್ಥವಾದುದು ಮತ್ತೆಲ್ಲೂ ಕಾಣಸಿಗದು.

3. ಲಕ್ಷಾಂತರ ದೀಪಗಳಿಂದ ಹೊಳೆಯುತ್ತಿದ್ದ ನಗರವು ಬೆಳಗಾಗುವದರೊಳಗೆ ಬೆಂಕಿ ಹೊಗೆಗಳಲ್ಲಿ ಕರಕಾಗಿ ಹೋಗಿತ್ತು. ಜನ ಹುಚ್ಚೆದ್ದು ಪ್ರಾಣ ರಕ್ಷಣೆಗಾಗಿ ದಿಗ್ಗೆಟ್ಟು ಓಡಿಹೋಯಿತು. ರಕ್ಷಕನಾದ ರಾಜನೂ ಓಡಿಹೋದ.

4. ಸುತ್ತಲಿನ ಜನ ಕೈಗೆ ಸಿಕ್ಕಷ್ಟು ದೋಚಿದರು, ಸುಟ್ಟರು, ಕೆಡಹಿದರು. ಹೀಗಾಗಿ ಜನರಿಲ್ಲದ ಕೊಂಪೆಯಾಯ್ತು. ಕೇವಲ ಅಧಿಷ್ಠಾನಗಳೇ ಉಳಿದವು, ಅಧಿಪತಿಗಳಿಲ್ಲದ ರಾಜಧಾನಿಯಲ್ಲಿ. ಇದು ಕಾರಣ, ಇದು ಕಾರಣ!

ಅಂತಃ ವಿಜಯನಗರ ಸಾಮ್ರಾಜ್ಯದ ವಿವಿಧ ಆಯಾಮಗಳ ಸಂಶೋಧನೆಯು ನಿರಂತರವಾಗಿ ನಡೆದ ಚಲನೆ. ಬ್ರಿಟಿಶ್ ಸಂಶೋಧಕರಿಂದ ಹಿಡಿದು ಸ್ವತಂತ್ರ ಭಾರತದ ನಮ್ಮ ಸಮಕಾಲೀನ ಸಂಶೋಧಕರವರೆಗೂ, ಸುಮಾರು ಒಂದೂವರೆ ಶತಕಗಳವರೆಗೆ ಸಂಶೋಧನೆ ನಡೆದೇ ಇದೆ. ಆ ಕ್ರಿಯೆಯು ಇನ್ನೂ ನಡೆದೇ ಇದೆ. ಇನ್ನು ಮುಂದೆಯೂ ನಡೆಯುತ್ತಲೇ ಇರುತ್ತದೆ; ಇದೆಂದೂ ಬತ್ತದ ಸಾಂಸ್ಕೃತಿಕ ನದಿ.

ನಮ್ಮ ಸಮಕಾಲೀನ ಇತಿಹಾಸ ಪ್ರಾಧ್ಯಾಪಕ ಡಾ||ಲಕ್ಷ್ಮಣ ತೆಲಗಾವಿ ಹೇಳಿದಂತೆ "ವಿಜಯನಗರ ಇತಿಹಾಸವೊಂದು ಮಹಾವೃಕ್ಷ. ಅದಕ್ಕೆ ಟೊಂಗೆಗಳು ಹಲವಾರು ಹಾಂಗುಡಿಗಳು. ಒಂದೇ ಒಂದು ಟೊಂಗೆಯಿಂದ ಮೇಲೇರಿ ನೋಡಿದಂತೆ, ಮತ್ತೆ


ಮತ್ತೆ ತುದಿಯಲ್ಲಿ ಮುಗುಳಿದ, ಎಸಳುಗಳು, ದಾಂಗುಡಿಗಳು. ಅವುಗಳ ಬೆಳವಣಿಗೆಗೆ ಎಣೆ ಇಲ್ಲ. ಮಿತಿ ಇಲ್ಲ. ಇದೊಂದು ಸದಾ ಸರ್ವದಾ ವರ್ಧಿಸುವ ಮಹಾವೃಕ್ಷಂ'' ಇದು ಹಂಪಿ ಉತ್ಸವವೊಂದರಲ್ಲಿ ಡಾ||ತೆಲಗಾವಿ ಅವರ ಅಧ್ಯಕ್ಷೀಯ ನುಡಿ. ಎಷ್ಟೊಂದು ಸಮರ್ಪಕವಾಗಿದೆ.


ಇದೇ, ಇಂಥದೇ ವಿಚಾರವನ್ನು ವ್ಯಕ್ತಪಡಿಸುತ್ತ, 2005 ರ ವಿಜಯನಗರ ವಿಚಾರ ಸಂಕಿರಣದ ಸರ್ವಾಧ್ಯಕ್ಷರಾಗಿದ್ದ ಡಾ||ಬಿ. ರಾಜಶೇಖರಪ್ಪನವರು ಹೀಗೆ ಹೇಳಿದ್ದಾರೆ: ''ಕನ್ನಡದ ಹಿರಿಯ ಕವಿ ಡಾ||ಜಿ. ಎಸ್. ಶಿವರುದ್ರಪ್ಪನವರು 'ಇತಿಹಾಸವೆಂಬು ದೊಂದು ಕಗ್ಗತ್ತಲೆಯ ಸುರಂಗ' ಎಂದು ಬರೆದಿರುವ ಕವಿತೆಯೊಂದು ನನಗೆ ಇಲ್ಲಿ ನೆನಪಾಗುತ್ತದೆ. ಭೂತಕಾಲದ ಗರ್ಭದೊಳಗೆ ಮುಚ್ಚಿ ಹೋಗಿರುವ ಎಲ್ಲ ಇತಿಹಾಸವೂ ನಮಗೆಲ್ಲಿ ಸ್ಫುಟವಾಗಿದೆ? ನಾವಿನ್ನೂ ಆ ಕತ್ತಲದ ಗುಹೆಯೊಳಗೆ ಗೋಡೆಗಳನ್ನು ತಡಕುತ್ತಿದ್ದೇವೆ. ಗುಹೆಯ ಸ್ವರೂಪ ನಮ್ಮ ಅರಿವಿಗೆ ಗ್ರಹಿಕೆಗೆ ಇನ್ನೂ ಪೂರ್ಣ ನಿಲುಕಿಲ್ಲ. ಆದರೆ ಪ್ರಯತ್ನವಂತೂ ನಡೆಯುತ್ತಲೇ ಇದೆ. ವಸ್ತುಸ್ಥಿತಿ ಹೀಗಿರುವಾಗ ಅದರ ಸ್ವರೂಪ ಕುರಿತು ನಾವು ಏನೂ ಹೇಳ ಹೋಗುವುದೂ ಸಾಹಸ ವೆನಿಸಬಹುದು. ಇಲ್ಲಿ ಅನೇಕ ಇತಿಹಾಸ ಸಂಶೋಧಕರು ಸೇರಿದ್ದಾರೆ. ಹಿರಿಯರಿದ್ದಾರೆ ಹೊಸಬರಿದ್ದಾರೆ. ನಾವೆಲ್ಲ ಗತ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಗಂಭೀರ ಕಾರ್ಯದಲ್ಲಿ ನಮ್ಮನ್ನು ತೊಡಗಿಸಿಕೊಂಡಿದ್ದೇವೆ. ಇತಿಹಾಸದ ಪೂರ್ಣ ಸ್ವರೂಪದ ದರ್ಶನಕ್ಕೆ ನಮ್ಮ ಒಂದೊಂದು ಚಿಕ್ಕ ಪಾಲನ್ನು ಕೊಡುತ್ತ ಹೋಗೋಣ; 'ಪರಮ ಗಂತವ್ಯ'ದತ್ತ ಹೆಜ್ಜೆ ಮುಂದುವರಿಸೋಣ.''


ಈ ಮೇಲಣ ಇಬ್ಬರೂ ಇತಿಹಾಸಕಾರರ ಸಂಶೋಧನ ದಾಹದ ಆಂತರ್ಯ ನೋಡಿ. ಅಗಮ್ಯ, ಅನನ್ಯ, ಅನವರತ. ಅಂತಿದೆ ವಿಜಯನಗರದ ಅಪ್ಪಿದೆ ವಿಜಯ ನಗರದ ಕಥಾನಕ. 'ಐತಿಹಾಸಿಕ ನಗರಗಳು ಎಂದೂ ಸಾಯುವದಿಲ್ಲ : ಅದಕ್ಕೆ ಹಂಪಿಯೊಂದು ದೃಷ್ಟಾಂತ ಹುಡುಕಿದಷ್ಟೂ ಮತ್ತೆ ಹೊರಡುವುದು.


ಆಕರ ಗ್ರಂಥಗಳು


1.	Robert Sewel	:	*A Forgotten Empire* (Vijayanagar) Asian Educational Services, Madras, 1980
2.	ಡಾ. ಆರ್. ಗೋಪಾಲ ಚಿಕ್ಕಮಾರೇಗೌಡ ; ಡಾ|| ಟಿ. ಎಂ. ಮಂಜುನಾಥಯ್ಯ (ಸು. ರು)	:	*ವಿಜಯನಗರ ಅಧ್ಯಯನ* ಸಂಪುಟ - 10 ವಿಜಯನಗರ ವಿಚಾರ ಸಂಕಿರಣ 2004 ರಲ್ಲಿ ಮಂಡಿಸಿದ ಪ್ರಬಂಧಗಳು, 2005
3.	ಕೆ. ಆರ್. ರಾಮಕೃಷ್ಣ, ಡಾ||ಆರ್. ಗೋಪಾಲ ಟಿ. ಎಸ್. ಗಂಗಾಧರ (ಸಂ. ರು)	:	*ವಿಜಯನಗರ ಅಧ್ಯಯನ* ಸಂಪುಟ -9 ಮೈಸೂರು - 2004
4.	D. Deva kunjari	:	*Hampi* Pub. Director Genal, Archy. New Delhi, 1970
5.	ಡಾ||ಚನ್ನಬಸಪ್ಪ ಎಸ್. ಪಾಟೀಲ	:	*ಕರ್ನಾಟಕದ ಕೋಟೆಗಳು* ಸಂಪುಟ 1,ಕನ್ನಡ ವಿಶ್ವವಿದ್ಯಾಲಯ ಹಂಪಿ, 1999.
6.	Dr.S.K.Joshi	:	Defence Architecture in Early Karnataka, New Delhi, 1985
7.	ಡಿ.ಆರ್. ಗೋಪಾಲ, ಬಿ.ಎಂ..ಚಿಕ್ಕಮಾದೇಗೌಡ, ಟಿ.ಎಸ್. ಗಂಗಾಧರ	:	*ವಿಜಯನಗರ ಅಧ್ಯಯನ, ಸಂಪುಟ 11* ಮೈಸೂರು - 2006
8.	ಚಿತ್ರಗಳು ಹಾಗೂ ಡ್ರಾಯಿಂಗ್ಸ್	:	ಭಾರತೀಯ ಪುರಾತತ್ವ ಇಲಾಖೆ ಹಾಗೂ ಡಾ. ಎಸ್.ಕೆ. ಜೋಷಿ ಕ್ರಮವಾಗಿ
9.		:	ವಿಜಯನಗರದ ಬಝಾರಗಳು
10.	Dr.K.R.Basavaraj	:	Vijayanagar Urbanity



NOT TO SCALE
(PLAN)
G.L.
(CROSS-SECTION) ON AB.
ಹಂಪಿ




NOT TO SCALE
BACK WATER


GL
SECTION


NOT TO SCALE
(CROSS SECTION)
UP
UP



೨೯.ವಿಜಯನಗರ ಕಾಲದ ನೀರ್ಥಡಿ ದೇವಾಲಯ ಮತ್ತು ಶಿಲ್ಪಗಳು

ಸಂತೇಬೆನ್ನೂರು ಸುಮತೀಂದ್ರನಾಡಿಗ್

ದಾವಣಗೆರೆ ಜಿಲ್ಲೆ ಮತ್ತು ತಾಲೂಕಿಗೆ ಸೇರಿದ ಒಂದು ಗಡಿ ಗ್ರಾಮ ನೀರ್ಥಡಿ. ದಾವಣಗೆರೆಯಿಂದ ಚಿತ್ರದುರ್ಗಕ್ಕೆ ಹೋಗುವ ರಾಷ್ಟ್ರೀಯ ಹೆದ್ದಾರಿ ೪ ರಲ್ಲಿರುವ ಳಕ್ಕ ಮಕ್ತೇನಹಳ್ಳಿಯ ದಕ್ಷಿಣಕ್ಕೆ ೨ ಕಿ.ಮೀ. ದೂರದಲ್ಲಿ ಈ ಪುಟ್ಟ ಗ್ರಾಮವಿದೆ. ಇಲ್ಲಿ ಚಿತ್ರದುರ್ಗ ನಾಯಕ ಅರಸರ ಮನೆದೈವವಾದ ಶ್ರೀ ರಂಗನಾಥ ಸ್ವಾಮಿಯ ದೇವಾಲಯವಿದೆ. ಚಿತ್ರದುರ್ಗ ನಾಯಕನ ವಂಶದ ಮೂಲದವರೆನ್ನಲಾಗುವ ಚಿತ್ರ ನಾಯಕ, ಓಬಳನಾಯಕರು ಇಲ್ಲಿ ಪಶುಪಾಲಕರಾಗಿ ಕೆಲವರ್ಷ ಇದ್ದರೆನ್ನಲಾಗುತ್ತದೆ. ಈ ದೇವಾಲಯ ವಿಜಯನಗರದ ಆರಂಭ ಕಾಲದ ಅಪೂರ್ವ ವಾಸ್ತುಶಿಲ್ಪಗಳನ್ನು ಒಳಗೊಂಡಿದ್ದರೂ, ಇದರ ಬಗ್ಗೆ ಕರ್ನಾಟಕ ರಾಜ್ಯಗೆಜಟಿಯರುಗಳಲ್ಲಾಗಲೀ, ಚಿತ್ರ ದುರ್ಗ ಜಿಲ್ಲಾ ಗೆಜಿಟಿಯರ್‌ಲ್ಲಾಗಲೀ, ಕನ್ನಡ ವಿಷಯ ವಿಶ್ವಕೋಶ ಮುಂತಾದ ಪ್ರಮುಖ ದಾಖಲೆಗಳಲ್ಲಾಗಲೀ ಯಾವುದೇ ಉಲ್ಲೇಖ ಇಲ್ಲದಿರುವುದು ಅಚ್ಚರಿಯ ವಿಷಯವಾಗಿದೆ.

ಈ ಗ್ರಾಮದ ಸಮೀಪ ಇರುವ ಬೆಟ್ಟದ ತಪ್ಪಲಿನಲ್ಲಿ ಗಾರ್ಘ್ಯ ಮಹರ್ಷಿಗಳು ಹಿಂದೆ ವಾಸವಾಗಿದ್ದು, ಅಲ್ಲಿ ತಪ್ಪಸ್ಸನ್ನು ಮಾಡುತ್ತಿದ್ದರಂತೆ, ಒಮ್ಮೆ ಧಾರಾಕಾರವಾಗಿ ಸುರಿದ ಮಳೆಯಿಂದಾಗಿ ಅವರ ಮೇಲೆ ನೀರು ಹರಿದು ಬಂದು ಮುನ್ನುಗತೊಡಗಿತಂತೆ. ಆಗ ಅದನ್ನು ತಡೆಯಲು ಅವರು 'ನೀರು+ತಡಿ' ಎಂದು ಹೇಳಿದರಂತೆ, ಅವರ ತಪಸ್ಸಿನ ಮಹಿಮೆ ಪ್ರಭಾವದಿಂದ ಆ ನೀರು ಅಲ್ಲಿಯೇ ಮಡುವಾಗಿ ನಿಂತಿತಂತೆ. ಆ ಕಾರಣ ಈ ಗ್ರಾಮಕ್ಕೆ ನೀರ್ಥಡಿ ಎಂಬ ಹೆಸರು ಬಂದು ಎಂಬ ಪೌರಾಣಿಕ ಕತೆ ಇಲ್ಲಿ ಪ್ರಚಲಿತ ದಲ್ಲಿದೆ, ಬೆಟ್ಟಗುಡ್ಡಗಳ ನಡುವೆ ಇರುವ ಈ ಸ್ಥಳ ಇಂದಿಗೂ ರಮಣೀಯ ವಾಗಿದೆ.ಇಲ್ಲಿರುವ ಶ್ರೀ ರಂಗನಾಥಸ್ವಾಮಿ ದೇವಾಲಯ ವಿಜಯನಗರ ವಾಸ್ತು ಮತ್ತು ಶಿಲ್ಪಕಲೆಯ ದೃಷ್ಟಿಯಿಂದ ಒಂದು ಮಹತ್ವವೂ, ಅಪೂರ್ವವೂ ಆದ ದೇವಾಲಯ ವಾಗಿದೆ. ವಿಶಾಲವಾದ ಪ್ರಾಂಗಣದಲ್ಲಿ ಸುತ್ತಲೂ ಇರುವ ಎತ್ತರದ ರಕ್ಷಣಾ ಗೋಡೆ ನಡುವೆ ಗ್ರಾಮದ ಮಧ್ಯ ಭಾಗದಲ್ಲಿ ಪೂರ್ವಾಭಿಮುಖವಾಗಿ ಕೆಂಪು ಬಣ್ಣದ ಕಣಶಿಲೆಯಿಂದ ಈ ದೇಗುಲ ನಿರ್ಮಿಸಲ್ಪಟ್ಟಿದೆ. ದೇವಾಲಯದ ಮುಂದೆ ಸು. ೨೦ ಅಡಿ ಎತ್ತರದ ಧ್ವಜ ಸ್ತಂಭವಿದ್ದು, ಅದರ ಎದುರು ದೇವಾಲಯದ ಪ್ರವೇಶ

ಮಂಟಪವಿದೆ. ನಂತರ ಪ್ರಾಂಗಣದೊಳಗೆ ಅಪೂರ್ವ ಶೈಲಿಯ ದೀಪದ ಕಂಬವಿದ್ದು, ಅದರ ಎದುರು ಆಯತಾಕಾರದ ಗರ್ಭಗೃಹ ಅದೇ, ಆಕಾರದ ಅಂತರಾಳ, ಸುಖನಾಸಿ, ಮೂರು ಗರ್ಭಗುಡಿಗಳು, ನಂತರ ನಾಲ್ಕು ವಿಶಾಲವಾದ ಎತ್ತರದ ಕಂಬಗಳನ್ನು ಹೊಂದಿದ ರಂಗಮಂಟಪ, ತೆರೆದ ಹಜಾರ ಒಳಗೊಂಡ ಮುಖ್ಯ ದೇವಾಲಯವಿದೆ. ದೇವಸ್ಥಾನಕ್ಕೆ ಮೂರು ದ್ವಾರಗಳಿದ್ದು, ದ್ವಾರದ ಮುಂದೆ ಕುಸುರಿ ಕೆಲಸ ಮಾಡಿದ ಶಿಲಾಮಂಟಪ ಹಾಗೂ ಶಿಲಾ ತೋರಣಗಳನ್ನು ಅದ್ಭುತವಾಗಿ ಖಂಡರಿಸಲಾಗಿದೆ. ಈ ದೇವಾಲಯದ ಗರ್ಭಗೃಹದ ಮೇಲಿರುವ ಬೃಹತ್ ಶಿಲಾಗೋಪುರ, ಕಾಡ್ಗಲ್ಲಿ ನಲ್ಲೂ ಅಪೂರ್ವವಾಗಿ ಕೆತ್ತಿರುವ ದೀಪದ ಕಂಬ ಹಾಗೂ ಹಾರದ ಮಂಟಪದ ಕಂಬಗಳು, ನವರಂಗದ ಉಬ್ಬುಶಿಲ್ಪಗಳು ಇತ್ಯಾದಿಗಳಿಂದ ಮಹತ್ವಪೂರ್ಣವಾಗಿ ಎಲ್ಲರಿಗೂ ಆಕರ್ಷಣೀಯವಾಗಿದೆ. ದೇವಾಲಯದ ಪ್ರವೇಶ ಮಂಟಪ, ಹಜಾರ ದಲ್ಲಿರುವ ಮುಖಮಂಟಪ, ದಕ್ಷಿಣ, ಉತ್ತರ ದಿಕ್ಕಿನ ಪ್ರವೇಶದ್ವಾರ ಮಂಟಪಗಳು ಗರ್ಭಗುಡಿಯ ಹೊರ ಅಧಿಷ್ಠಾನ ಮತ್ತು ರೀತಿಯಲ್ಲಿರುವ ಉಬ್ಬುಶಿಲ್ಪ ಗಳು ವಿಜಯನಗರ ಶಿಲ್ಪಗಳ ಅನುಕರಣೆ ಎಂಬುದಕ್ಕೆ ಸಾಕ್ಷಿಯಾಗಿವೆ. ಇವನ್ನು ನಾವು ನೋಡಿದ ತಕ್ಷಣ ನಮಗೆ ನೆನಪಿಗೆ ಬರುವುದು ಹಂಪಿಯ ಹಜಾರರಾಮ ದೇವಾಲಯ, ಅನಂತಶಯನ ಮಂದಿರ ಮಾರನವಮಿ ದಿಬ್ಬ ಇತ್ಯಾದಿಗಳಲ್ಲೂ ಕಾಣಬರುವ ಶಿಲ್ಪಗಳು. ಗರ್ಭಗುಡಿಯ ಮೇಲಿರುವ ಶಿಲಾಗೋಪುರ ವಿಜಯನಗರ ಕಾಲದ ರಚನೆಗಿಂತ ಭಿನ್ನವಾಗಿದ್ದು, ಸು. ೨೦ ಅಡಿ ಎತ್ತರ ಇರುವ ಈ ಗೋಪುರ ಚೋಳ ಶೈಲಿಯ ಅನುಕರಣೆಯಂತಿದೆ. ಕಲಾ ವಿನ್ಯಾಸದಲ್ಲಿ ಸಮಚತುಷ್ಕೋಣ ಕಾರದಲ್ಲಿದ್ದು ಶಿಖರವು ಶಾಲಾಶಿಖರವಾಗಿರುವುದನ್ನು ಕಾಣಬಹುದು. ಈ ಗೋಪುರ ತಮಿಳುನಾಡಿನ ಮಹಾಬಲಿಪುರಂನ ಪಲ್ಲವರ ಭೀಮರಥದಂತಿದೆ ಎಂದು ಕೆಲ ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ. ಗಂಟಾಕಾರದ ಈ ಗೋಪುರದಲ್ಲಿ ವಿಷ್ಣುವಿನ ೨೪ (ಚತುರ್ವಿಂಶತಿಯ) ಚಿಕ್ಕ ಚಿಕ್ಕ ಮೂರ್ತಿಗಳನ್ನು ಅಳವಡಿಸಿದ್ದಾರೆ. ಗೋಪುರ ದ್ರಾವಿಡ ಶೈಲಿಯ ತ್ರಿತಳ ಮಾದರಿಯಲ್ಲಿದೆ.

ದೇವಸ್ಥಾನದ ಉತ್ತರಕ್ಕೆ ಒಂದು ಶಿಲಾಶಾಸನವಿದೆ. ಅದರಂತೆ ಶಾಲಿವಾಹನ ಶಕ ೧೯೧೯ನೇ ಈಶ್ವರ ಸಂವತ್ಸರದ ಮಾಘ ಶುದ್ಧ ೫ರಲ್ಲಿ ಅಲ್ಲಿದ್ದ ಅಹೋಬಲ ನರಸಿಂಹಸ್ವಾಮಿಯನ್ನು ಡಿಲ್ಲಿ ಬಾದಶಹರು ಬಂದು ಹಾಳು ಮಾಡಿದ ಕಾರಣ ಚಿತ್ರದುರ್ಗನಾಯಕ ವಂಶದ ಕಾಮಗೇತಿ ಕಸ್ತೂರಿ ಮದಕರಿ ನಾಯಕರ ಭರಮಣ್ಣ ನಾಯಕರು ಆ ನೀರತಡಿ ಅಹೋಬಲ ದೇವರ ಪುನಃ ಪ್ರತಿಷ್ಠೆಮಾಡಿಸಿ, ದೇವಸ್ಥಾನ ಜೀರ್ಣೋದ್ಧಾರ ಮಾಡಿ, ದೇವರ ಸೇವಾದಿಗಳು ಆಚಂದ್ರಾರ್ಕವಾಗಿ ನಡೆಯಲು

ದೇವರ ಅಮೃತಪಡಿ, ನಂದಾದೀಪಕ್ಕೆ ಭರಮಸಾಗರ ಸೀಮೆಯ ಎಮ್ಮೆಹಟ್ಟಿ ಗ್ರಾಮದ ಒಂದು ತೋಟವನ್ನು ದಾನ ಕೊಟ್ಟಿದ್ದನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಚಿತ್ರದುರ್ಗ ವನ್ನು ಚಿಂನ್ಮನ ಗಿರಿದುರ್ಗವೆಂದು ಪ್ರಥಮಬಾರಿಗೆ ಉಲ್ಲೇಖಿಸಿದೆ. ಈ ಶಾಸನ ಕ್ಕಿಂತಲೂ ಪೂರ್ವದಲ್ಲಿ ಬೇಲೂರು ಕೃಷ್ಣಪ್ಪ ನಾಯಕರು ಹಾಕಿಸಿದ ಶಾಸನ ಒಂದು ದೇವಾಲಯದ ಆವರಣದಲ್ಲಿ ಇದ್ದುದನ್ನು ಕರ್ನಾಟಕ ಶಾಸನ ಪಿತಾಮಹ ಬಿ.ಎಲ್. ರೈಸರು ಗುರುತಿಸಿ, ತಮ್ಮ ಶಾಸನ ಸಂಪುಟದಲ್ಲಿ ಪ್ರಕಟಿಸಿದ್ದಾರೆ. ಆದರೆ ಆ ಶಾಸನ ಈಗ ಕಾಣುತ್ತಿಲ್ಲ(ಆ ಶಾಸನ ತ್ರುಟಿತವಾಗಿದ್ದು ಅದರಿಂದ ಹೆಚ್ಚಿನ ವಿವರವೇನು ತಿಳಿದು ಬರುವಂತಿರಲಿಲ್ಲ). ಮೇಲ್ಕಂಡ ಎರಡು ಶಾಸನಗಳಲ್ಲಿ ಅಲ್ಲಿದ್ದ ಮುಖ್ಯ ದೇವರು ಅಹೋಬಲ ನರಸಿಂಹ ಎಂದು ಉಲ್ಲೇಖಿಸಿದೆ. ಆದರೆ ಈಗ ಅಲ್ಲಿರುವ ಮೂಲ ವಿಗ್ರಹ ಸಮಭಂಗಿಯಲ್ಲಿ ಕುಳಿತು ವಿಷ್ಣು ವಿಗ್ರಹವಾಗಿದೆ. ಮೂಲದಲ್ಲಿ ನರಸಿಂಹ ವಿಗ್ರಹವಿದ್ದು ನಂತರ ಜೀರ್ಣೋದ್ಧಾರಣ ಮಾಡಿದ ಕಾಲದಲ್ಲಿ ಈ ವಿಷ್ಣು ವಿಗ್ರಹ ಪ್ರತಿಷ್ಠಾಪಿಸಿ ಅದನ್ನೇ ರಂಗನಾಥ ಎಂದು ಕರೆದಿರಬೇಕು ಎನಿಸುತ್ತದೆ. ಚಿತ್ರದುರ್ಗ ನಾಯಕರು ಸ್ಥಾಪಿಸಿದ ಎಲ್ಲಾ ವಿಷ್ಣು ವಿಗ್ರಹಗಳಿಗೂ ಅಹೋಬಲ ದೇವರೆಂದೇ ಕರೆದುಕೊಂಡು ಬಂದಿದ್ದಾರೆ ಎಂದು ಅವರ ದಾಖಲೆಗಳು ತಿಳಿಸುತ್ತವೆ. ಒಟ್ಟಿನಲ್ಲಿ ಈಗ ಅಲ್ಲಿರುವ ಸಮಭಂಗಿಯಲ್ಲಿ ಕುಳಿತಿರುವ ೪ ಅಡಿ ವಿಗ್ರಹ ಕರಿಶಿಲೆ ಯಲ್ಲಿ ಮಾಡಿದ್ದು, ಮೇಲಿನ ಎರಡುಕೈಯಲ್ಲಿ ಶಂಖಚಕ್ರ ಗಳಿದ್ದರೆ ಕೆಳಗಿನ ಎಡಗೈ ವರದ ಹಸ್ತದಲ್ಲೂ ಬಲಗೈ ಅಭಯ ಹಸ್ತದಲ್ಲೂ ಇರುವಂತೆ ಕಂಡರಿಸಲಾಗಿದೆ. ನಯನಮನೋಹರವಾಗಿ ವೈಜಯಂತಿಮಾಲಾ, ಕರ್ಣಭರಣ, ತೋಳುಬಂದಿ, ಜನಿವಾರ, ಕಿರೀಟಗಳಿಂದ ರಂಗನಾಥನನ್ನು ಅಲಂಕರಿಸಲಾಗಿದೆ.

ಗರ್ಭಗುಡಿಯ ನಮ್ಮ ಎಡಕ್ಕೆ ಒಂದ ಚಿಕ್ಕ ಗರ್ಭಗುಡಿ ಇದ್ದು ಅಲ್ಲಿ ಲಕ್ಷ್ಮಿ ಯನ್ನು ಪ್ರತಿಸ್ಥಾಪಿಸಲಾಗಿದೆ. ಇದು ಸಹ ೪ ಅಡಿ ಎತ್ತರವಿದ್ದು ಸರ್ವಾಲಂಕೃತೆಯಾಗಿ ಸುಂದರವಾಗಿ ರಂಗನಾಥನಂತೆ ಶಂಖ, ಚಕ್ರ, ವರದ, ಅಭಯ ಹಸ್ತಗಳನ್ನೊಳ ಗೊಂಡಿದೆ. ಬಲಕ್ಕಿರುವ ಇನ್ನೊಂದು ಚಿಕ್ಕ ಗರ್ಭಗುಡಿಯಲ್ಲಿ ೧೩ ಶ್ರೀವೈಷ್ಣವ ಪ್ರತಿಮೆಗಳನ್ನು ಇಡಲಾಗಿದೆ. ಅದರಲ್ಲಿ ಹೆಚ್ಚಿನವು ಆಳ್ವಾರರ ಪ್ರತಿಮೆಗಳು. ಅವುಗಳನ್ನು ಎಲ್ಲಿಂ ದಲೋ ಅಲ್ಲಿಗೆ ತಂದಿಟ್ಟಿರುವಂತಿದ್ದು, ಬಹುಶಃ ಆ ದೇವಾಲಯದ ಹಿಂದಿನ ಅರ್ಚ ಕರೋ ಆ ದೇವಸ್ಥಾನದ ನಿರ್ಮಾತೃಗಳೋ ಅದನ್ನು ಬೇರೆಡೆಯಿಂದ ಅಲ್ಲಿಗೆ ತಂದು ಅಲ್ಲಿ ಪ್ರತಿಷ್ಠಾಪಿಸಲು ಉದ್ದೇಶಿಸಿದ್ದ ಹಾಗೆ ಕಾಣುತ್ತದೆ. ಈ ವೈಷ್ಣವ ಶಿಲ್ಪಗಳಿಂದ ವಿಜಯನಗರ ಅರಸರ ದೇವಾಲಯಗಳಲ್ಲಿ ಶ್ರೀ ವೈಷ್ಣವ ಪ್ರಭಾವ ಹೆಚ್ಚಾಗಿತ್ತೆಂದು ಈ ಮೂರ್ತಿಗಳಿಂದ ತಿಳಿಯಬಹುದಾಗಿದೆ. ಈ ದೇವಾಲಯದಲ್ಲಿ ಮೂರು ಗರ್ಭ ಗುಡಿಗಳಿರುವುದರಿಂದ ಇದೊಂದು ತ್ರಿಕೂಟಾಚಲ ದೇವಸ್ಥಾನ ಎನ್ನಬಹುದಾಗಿದೆ.

ಈ ದೇವಾಲಯದ ಎದುರಿಗೆ ಧ್ವಜ ಸ್ತಂಭವಿದೆ ಎಂದು ಹಿಂದೆಯೇ ಹೇಳಿದೆಯಷ್ಟೆ. ಅದರ ತಳಭಾಗದ ಕಟ್ಟೆಯಲ್ಲಿ ೧೫ ಜೋಡಿ ದಾನಿ ರಾಜದಂಪತಿಗಳನ್ನು ಕಂಡರಿಸಲಾಗಿದೆ. ಅದಲ್ಲದೆ ಅದಕ್ಕೆ ಒರಗಿಸಿರುವ ಪೂರ್ವಾಭಿಮುಖದ ಒಂದು ಕಲ್ಲಿನಲ್ಲಿಯೂ ಇಬ್ಬರ ಹೆಂಡಿರ ಎರಡು ಜೋಡಿ ದಂಪತಿಗಳ ಉಬ್ಬುಶಿಲ್ಪ ನಿಲ್ಲಿಸಲಾಗಿದೆ. ಇದಲ್ಲದೆ ದೇವಸ್ಥಾನದ ಪ್ರವೇಶದ್ವಾರ, ಹಜಾರ, ನವರಂಗದ ಕಂಬಗಳಲ್ಲಿ ಅನೇಕ ರಾಜದಂಪತಿಗಳ ಶಿಲ್ಪಗಳನ್ನು ಬಿಡಿಬಿಡಿಯಾಗಿ ದಂಪತಿಗಳ ಜೊತೆ ಜೊತೆಯಾಗಿ, ಅವರುಗಳು ಕೈ ಮುಗಿದು ನಿಂತಂತೆ ಹಲವಾರು ಶಿಲ್ಪಗಳನ್ನು ಕಂಡರಿಸಲಾಗಿದೆ. ಇದನ್ನು ನೋಡಿದರೆ ಈ ದೇವಸ್ಥಾನದ ನಿರ್ಮಾಣಕ್ಕೆ ಬಹಳ ಜನ ಪ್ರಮುಖರು ದಾನ ನೀಡಿರಬಹುದೆಂದು ತಿಳಿಯಬಹುದೇನೋ, ಧ್ವಜಸ್ತಂಭದ ಕಟ್ಟೆಯಲ್ಲಿರುವ ದಂಪತಿಗಳ ಸಮೂಹ ಶಿಲ್ಪಗಳು ವಿಶಿಷ್ಟವಾಗಿದ್ದು, ಇದೇ ತರಹ ಮೇಳಿಗೆ ಅನಂತ ಸ್ವಾಮಿ ಬಸದಿಯ ಮುಂದಿರುವ ಕಂಬದಲ್ಲಿ ದಂಪತಿಗಳ ವಿಗ್ರಹ ಇರುವುದಾಗಿ ತಿಳಿದು ಬಂದಿದೆ.

ಧ್ವಜಸ್ತಂಭದ ಅಥವಾ ಗರುಡಗಂಬದ ನಂತರ ನಮಗೆ ಕಾಣುವುದೇ ಪ್ರವೇಶ ದ್ವಾರ. ಇದು ವಿಜಯನಗರಶೈಲಿಯಲ್ಲಿದ್ದು, ಮಂಟಪದ ಎರಡೂ ಮಗ್ಗುಲಲ್ಲೂ ಎತ್ತರವಾದ ಜಗುಲಿಯನ್ನು ನಿರ್ಮಿಸಲಾಗಿದೆ. ಜಗುಲಿ ಒಂದು ಭಾಗದಲ್ಲಿ ಆ ಗ್ರಾಮದಲ್ಲಿ ಸಿಕ್ಕ ೬ ವೀರಗಲ್ಲು-ಮಾಸ್ತಿಕಲ್ಲುಗಳನ್ನು ಸಂಗ್ರಹಿಸಿ ಇಡಲಾಗಿದೆ. ಇಲ್ಲಿನ ಹಲವಾರು ಮಾಸ್ತಿಕಲ್ಲುಗಳ ತಲೆಯನ್ನು ಯಾರೋ ದುರಾತ್ಮರು ತೆಗೆದಿರುವುದು ಅವರಿಗೆ ಅಗೌರವ ಸೂಚಿಸಿದಂತೆ ಕಾಣುತ್ತದೆ. ಈ ಎಲ್ಲಾ ಮಾಸ್ತಿ ವೀರಗಲ್ಲುಗಳೂ ವಿಜಯನಗರ ಶೈಲಿಯಲ್ಲಿವೆ. ಇಲ್ಲಿನ ಕಂಬಗಳಲ್ಲಿ ಗಂಗಾ,ಯಮುನ, ರಾಜದಂಪತಿಗಳು, ಯತಿ, ವಾಮನ, ಯಾಳಿ ಇತ್ಯಾದಿಗಳನ್ನು ಖಂಡರಿಸಲಾಗಿದೆ. ಅದರ ಮುಂದೆ ಕಣಶಿಲೆಯಲ್ಲಿ ಅದ್ಭುತವಾಗಿ ಮೂಡಿ ಬಂದಿರುವ ದೀಪಸ್ತಂಭವಿದೆ. ಈ ದೀಪಸ್ತಂಭವನ್ನು ನಾಲ್ಕು ಜನ ಕುಬ್ಜರು ಹೊತ್ತಿರುವಂತೆ ಖಂಡರಿಸಲಾಗಿದ್ದು, ನಾಲ್ಕು ಮೂಲೆಯಲ್ಲಿ ನಾಲ್ಕು ಜನ ದೀಪಧಾರಿಣಿಯರಿದ್ದಾರೆ. ಸು. ೮ ಅಡಿ ಎತ್ತರದ ಈ ಕಂಬ ಜೈನ ಮಾನಸ್ತಂಭದಂತಿದ್ದು, ಕಗ್ಗಲ್ಲಿನಲ್ಲಿಯೂ ಸುಂದರ ಕಲಾಕೃತಿ ಮೂಡಿಸಿರುವುದು ಶಿಲ್ಪಾಗಾರನ ಚತುರತೆಯನ್ನು ತೋರಿಸುತ್ತದೆ. ದೀಪಸ್ತಂಭದ ಬುಡದಲ್ಲಿ ದೇವರಿಗೆ ಎದುರಾಗಿ ಗರುಡನ ಶಿಲ್ಪವಿದೆ.

ದೀಪಮಾಲೆ ಕಂಬದ ಎದುರಿಗಿರುವುದು ತೆರೆದ ಹಜಾರ. ಇದರ ಮುಂದೆ ನಾಲ್ಕು ಕಂಬಗಳನ್ನು ವಿಜಯನಗರ ಶೈಲಿಯಲ್ಲಿ ನಿರ್ಮಿಸಲಾಗಿದೆ. ಎರಡು ಕಂಬಗಳಲ್ಲಿ ಮುಂಗಾಲನ್ನು ಎತ್ತಿ ನೆಗೆಯುತ್ತಿರುವಂತೆ ವ್ಯಾಳಿ(ಗಜಸಿಂಹ)ಗಳನ್ನು ಇನ್ನೆರಡು ಕಂಭಗಳಲ್ಲಿ ಹಂಪಿಯ ವಿಜಯ ವಿಠಲಮಂದಿರದಂತೆ ಸಂಗೀತ ಹೊರಡಿಸುವ

ನಾದಕಂಬಗಳನ್ನು ನಿರ್ಮಿಸಿರುವುದು ಗಮನಸೆಳೆಯುತ್ತವೆ. ಈ ಕಂಬಗಳ ಇತರ ಮೂರು ಭಾಗದಲ್ಲಿ ರಾಜದಂಪತಿಗಳು, ರಂಗನಾಥ, ಮೃಗಪುರುಷ, ಆಂಜನೇಯ, ಕೃಷ್ಣ, ಮಿಥುನಶಿಲ್ಪಗಳು, ಲಜ್ಜಾಗೌರಿ ಇತ್ಯಾದಿ ಶಿಲ್ಪಗಳನ್ನು ಬಿಡಿಸಿದ್ದಾರೆ. ಹಜಾರದ ಗೋಡೆ ಮೇಲೂ ಹಲವಾರು ಅಲಂಕರಣಗಳನ್ನು ಮಾಡಲಾಗಿದೆ. ಮುಂಬಾಗಿಲ ಮೇಲೆ ಗಜಲಕ್ಷ್ಮಿ ಶಿಲ್ಪವನ್ನು ಐರಾವತ-ಅಬ್ರಮು(ಗಂಡು-ಹೆಣ್ಣು ಆನೆಗಳು) ಗಳೊಂದಿಗೆ ಖಂಡರಿಸಲ್ಪಟ್ಟಿದೆ. ದೇವಾಲಯದ ಪೂರ್ವ, ದಕ್ಷಿಣ, ಉತ್ತರ ದಿಕ್ಕಿನಲ್ಲೂ ಮೂರು ಪ್ರವೇಶದ್ವಾರಗಳಿದ್ದು ದಕ್ಷಿಣ-ಉತ್ತರ ದಿಕ್ಕಿನ ಪ್ರವೇಶದ್ವಾರದ ಮುಂದೆ ಮುಖ ಮಂಟಪಗಳನ್ನು ನಿರ್ಮಿಸಿದ್ದಾರೆ. ಮೂರು ಕಡೆಯೂ ಶಿಲಾತೋರಣಗಳನ್ನು ಆಕರ್ಷಕವಾಗಿ ನಿರ್ಮಿಸಲಾಗಿದೆ. ಇವುಗಳನ್ನು ಕುಬ್ಜರು, ವ್ಯಾಳಿಗಳು ಹೊತ್ತಂತೆ ಖಂಡಿಸಲಾಗಿದೆ. ಮೂರು ಬಾಗಿಲುಗಳನ್ನು ವಿವಿಧ ನಮೂನೆ ಸಿಂಗರಿಸಿ, ಅಕ್ಕಪಕ್ಕದಲ್ಲಿ ವಿವಿಧ ಭಂಗಿಯ ದ್ವಾರಪಾಲಕರನ್ನು ಕೆತ್ತಿದ್ದಾರೆ. ಇವರನ್ನು ತಂತ್ರಸಾರದಂತೆ ಬೇರೆ ಬೇರೆಯಾಗಿಯೇ ಗುರ್ತಿಸಬಹುದೆನ್ನಿಸುತ್ತದೆ.

ಪೂರ್ವ ದ್ವಾರ-ಜಯ-ವಿಜಯ

ದಕ್ಷಿಣ ದ್ವಾರ-ಬಲ-ಪ್ರಬಲ

ಉತ್ತರ ದ್ವಾರ- ಕುಮುದ-ಕುಮುದಾಕ್ಷ

ಇದಲ್ಲದೆ ಗರುಡ-ಆಂಜನೇಯರನ್ನು ಬಾಗಿಲ ಎಡ-ಬಲದಲ್ಲಿ ಚಿತ್ರಿಸಲಾಗಿದೆ. ಹೊರಗಡೆ ಬಾಗಿಲ ಮೇಲೆ ಗಜಲಕ್ಷ್ಮಿಯ ಚಿತ್ರ ಇದ್ದರೆ ಮುಖ್ಯ ಗರ್ಭಗುಡಿ ಬಾಗಿಲ ಮೇಲೆ ಕಾಮಧೇನುವನ್ನು ಕಂಡರಿಸಿದ್ದಾರೆ.

ದೇವಾಲಯದ ಪ್ರವೇಶ ದ್ವಾರದ ಗೋಡೆಗಳಿಗೆ ಒಂದು ಅಡಿ ದೂರದಲ್ಲಿ ಕಲ್ಲಿನ ತಡೆಗಳನ್ನು ನಿರ್ಮಿಸಿರುವುದು ವಿಶೇಷ ರಚನೆ. ಇವುಗಳಿಗೆ ರಂಧ್ರವಿದ್ದು ಬಹುಶಃ ಇವುಗಳಲ್ಲಿ ಅಡ್ಡಪಟ್ಟಿಕೆ ಸೇರಿಸಿ ಪ್ರಣತಿ ದೀಪ ಹಚ್ಚುವಂತೆ ಮಾಡಿರಬೇಕು. ಈ ತಡೆಕಂಬಗಳಲ್ಲಿ ವಾದ್ಯಗಾರರು, ಭಕ್ತರು ಇತ್ಯಾದಿಗಳನ್ನು ಖಂಡರಿಸಿದ್ದಾರೆ. ದೇವ ಸ್ಥಾನದ ಛಾವಣಿಯ ಕಪೋತದಲ್ಲಿ ಕಲ್ಲಿನ ಸರಪಣಿ ತೂಗಿ ಬೀಳುವಂತೆ ಮಾಡಲಾಗಿತ್ತು. ಇತ್ತೀಚಿನವರೆಗೂ ಇದ್ದ ಕಲ್ಲಿನ ಸರಪಳಿಗಳು ಈಗ ಕಾಣಿಸುತ್ತಿಲ್ಲ.

ಪ್ರವೇಶ ದ್ವಾರದ ನಂತರ ಒಳಗೆ ಹೋದರೆ ವಿಶಾಲ ರಂಗಮಂದಿರವನ್ನು ಚಚ್ಚೌಕಾದ ನಾಲ್ಕು ಕಂಬಗಳ ಮೇಲೆ ನಿರ್ಮಿಸಲಾಗಿದೆ. ಇವುಗಳಿಗೆ ತತ್ವ-ಬೋಧಿಕೆಗಳಿವೆ ಎಲ್ಲಾ ಕಂಬಗಳ ನಾಲ್ಕು ದಿಕ್ಕಿಗೂ ವಿವಿಧ ಉಬ್ಬು ಶಿಲ್ಪಗಳಿವೆ. ಒಂದು ಕಂಭದಲ್ಲಿ ಭೈರವ, ಮತ್ಸ್ಯೇಂದ್ರನಾಥ, ಬೇಡರ ಕಣ್ಣಪ್ಪ, ಗಣಪತಿ ಇತ್ಯಾದಿ ನಾಥ ಪಂಥ,

ಶೈವ ಪಂಥದ ಚಿತ್ರಗಳಿದ್ದರೆ, ಇನ್ನುಳಿದ ಕಂಬಗಳಲ್ಲಿ ರಾಮ, ಗೋಪಾಲಕೃಷ್ಣ, ಬಾಲಕೃಷ್ಣ, ಮುರಳೀಧರ ಕೃಷ್ಣ, ಬೆಣ್ಣೆಕೃಷ್ಣ, ಗೋಪಿಕೃಷ್ಣ, ಉಗ್ರನರಸಿಂಹ, ಕಂಬದ ನರಸಿಂಹ, ಲಕ್ಷ್ಮೀನರಸಿಂಹ, ರಂಗನಾಥ, ಶ್ರೀನಿವಾಸ, ವೆಂಕಟೇಶ, ಅನಂತಶಯನ, ನೃತ್ಯ ಗಾತಿಯರು, ಆಂಜನೇಯ, ಗರುಡ, ನಾಗದೇವತೆಗಳು, ಗಂಗಾ-ಯಮುನೆಯರ ಶಿಲ್ಪ, ರಾಜದಂಪತಿಗಳು, ಕುದುರೆಸವಾರ, ಹುಲಿಬೇಟೆ, ಆನೆ, ಶಿಖಾರಿ, ೪ ಕಾಲು ೩ ಜನ ಇರುವ ನೃತ್ಯಭಂಗಿ ಉಬ್ಬು ಶಿಲ್ಪ ಮುಂತಾದ ಉಬ್ಬುಶಿಲ್ಪಗಳನ್ನು ನಿರ್ಮಿಸ ಲಾಗಿದೆ. ಇವುಗಳಲೆಲ್ಲಾ ವಿಜಯನಗರ ದೇವಾಲಯದ ಅನುಕರಣೆ ಎದ್ದು ಕಂಡು ಬರುತ್ತದೆ. ವಿಷ್ಣು ದೇವಾಲಯದಲ್ಲಿ ಭೈರವ, ಭೈರವಿ ಇತ್ಯಾದಿ ನಾಥಪಂಥೀಯ ಶಿಲ್ಪಗಳನ್ನು ನಿರ್ಮಿಸಿರುವುದು ವಿಶೇಷವೆನ್ನಿಸುತ್ತದೆ. ನವರಂಗದ ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರನ್ನು ಸುಂದರವಾಗಿ ವಾಹನಸಮೇತ ಖಂಡರಿಸಲಾಗಿದೆ.

ಭಿತ್ತಿ ಮತ್ತು ಅಧಿಸ್ಥಾನಗಳು ಹಿನ್‌ಕ ಸರಿತ, ಮುನ್‌ಸರಿತಗಳಿಂದ ಕೂಡಿದ್ದು ತಳಭಾಗದಲ್ಲಿ ನಾಲ್ಕು ಪಟ್ಟಿಗೆಗಳಿವೆ. ಅವುಗಳೊಂದೊಂದರಲ್ಲಿ ಆನೆಸಾಲು, ಕುದುರೆ ಸಾಲು, ಕೋಲಾಟದ ನೃತ್ಯಗಾತಿಯರು, ರಾಮಯಣ ಪ್ರಸಂಗಗಳನ್ನು ಆಕರ್ಷಕವಾಗಿ ಕಂಡರಿಸಿದ್ದಾರೆ. ದಶರಥನ ಪುತ್ರಕಾಮೇಷ್ಠಿಯಾಗ, ರಾಮಲಕ್ಷ್ಮಣರು ಕಾಡಿಗೆ ಹೋಗುವುದು, ಹನುಮಂತನ ಭೇಟಿ ಇತ್ಯಾದಿ ಕಥಾನಕಗಳನ್ನು ಅದರಲ್ಲಿ ಖಂಡರಿ ಸಲಾಗಿದೆ. ಇವುಗಳನ್ನು ನೋಡಿದಾಗ ಹಂಪಿಯ ಹಜಾರ ರಾಮ ದೇಲಯದ ಭಿತ್ತಿ ಶಿಲ್ಪಗಳು ನೆನಪಾಗುತ್ತವೆ.

ರಾಜ್ಯ ಮುಜರಾಯಿ ಇಲಾಖೆಗೆ ಸೇರಿದ ಈ ದೇವಸ್ಥಾನವನ್ನು 1984-85, 85-86ರಲ್ಲಿ ಸರ್ಕಾರ ಪುನರ್ ನವೀಕರಣಮಾಡಿರುವುದಾಗಿ ದಾಖಲೆಗಳು ತಿಳಿಸುತ್ತವೆ. ಈಚೆಗೆ ದೇವಸ್ಥಾನದ ಪೌಳಿಯನ್ನು ಪುನರ್ ನಿರ್ಮಿಸಲಾಗುತ್ತಿದೆ. ದೇವಸ್ಥಾನದ ಆಗ್ನೇಯ ಮೂಲೆಯಲ್ಲಿ ಒಂದು ಬಾವಿ ಇದೆ. ಈ ಬಾವಿಯ ನೀರನ್ನೇ ಹಿಂದೆ ಈ ಗ್ರಾಮದ ಜನ ಕುಡಿಯುವ ನೀರಿಗಾಗಿ ಉಪಯೋಗಿಸುತ್ತಿದ್ದರಂತೆ. ಈಗ ಅದು ಕಸಕಡ್ಡಿಯಿಂದ ಮುಚ್ಚಿದೆ. ದೇವಸ್ಥಾನದ ಸಮೀಪ ಈಶಾನ್ಯ ದಿಕ್ಕಿನಲ್ಲಿ ಶ್ರೀ ವ್ಯಾಸರಾಯರಿಂದ ಪ್ರತಿಷ್ಠಾಪಿಸಲಾದ ೬ ಅಡಿ ಎತ್ತರದ ಆಂಜನೇಯ ಸ್ವಾಮಿ ದೇವಸ್ಥಾನವಿದೆ. ಇದರ ಬಾಲದಲ್ಲಿ ಗಂಟೆ ಬಿಡಿಸಲಾಗಿದೆ. ದೇವಾಲಯ ನಾಯಕರ ಕಾಲದ ಸರಳವಿನ್ಯಾಸ ದಲ್ಲಿದೆ.

ದೇವಾಲಯದ ನಿರ್ಮಾಣಕ್ಕೆ ಹತ್ತಿರದಲ್ಲೇ ಲಭ್ಯವಾದ ಕೆಂಪುಕಣ ಶಿಲೆ ಉಪ ಯೋಗಿಸಿರುವುದು ಕಂಡುಬರುತ್ತದೆ. ಒಟ್ಟಿನಲ್ಲಿ ಈ ದೇವಸ್ಥಾನ ಹಲವು ಹಂತಗಳಲ್ಲಿ ನಿರ್ಮಾಣವಾಗಿದ್ದು, ಚೋಳ, ಚಾಲುಕ್ಯ, ಹೊಯ್ಸಳ, ವಿಜಯನಗರ ಮಿಶ್ರಶೈಲಿ

ಯಲ್ಲಿ ಶೈವ, ನಾಥ, ವೈಷ್ಣವ ಮೂರು ಸಂಪ್ರದಾಯಗಳ ಸಂಗಮದಂತಿದ್ದು, ಮುಖ್ಯ ವಾಗಿ ವಿಯನಗರ ಕಾಲದ ರಚನೆಯಾಗಿ ವಿಜಯನಗರ ಕಲಾ ವೈಭವಕ್ಕೆ ಕಲಶಪ್ರಾಯ ವಾಗಿದೆ. ಈ ದೇವಾಲಯ ತಜ್ಞ, ವಾಸ್ತುಶಾಸ್ತ್ರಜ್ಞರು, ವಿದ್ವಾಂಸರು, ಇತಿಹಾಸ ಸಂಶೋಧಕರಿಗೆ ಹೆಚ್ಚಿನ ಅಧ್ಯಯನಕ್ಕೆ ತೆರೆದಿದೆ. ಇಷ್ಟು ಸುಂದರವೂ, ಭವ್ಯವೂ, ಅಲಂಕರಣೆ ಕೆತ್ತನೆಗಳಿಂದ ಆಕರ್ಷಣೀಯವೂ ಆಗಿರುವ ದೇವಾಲಯ ರಾಜಧಾನಿ ಯಿಂದ ದೂರದಲ್ಲಿ ನಿರ್ಮಾಣವಾಗಿರುವುದು ವಿಶೇಷವೇ. ಹಲವಾರು ಧಾಳಿಗೆ ತುತ್ತಾಗಿದ್ದರೂ ಮೂಲ ಸೌಂದರ್ಯಕ್ಕೆ ಧಕ್ಕೆಬಾರದಿರುವುದು ಹೆಚ್ಚೆ. ಇತ್ತೀಚೆಗೆ ಈ ದೇವಾಲಯವನ್ನು ರಾಜ್ಯ ಪ್ರಾಚ್ಯ ಇಲಾಖೆ ಜೀರ್ಣೋದ್ಧಾರ ಮಾಡಲು ಕ್ರಮ ಕೈಗೊಂಡಿದೆ. ಇಂತಹ ಸುಂದರ ದೇಗುಲವನ್ನು ಹೆಚ್ಚಿನ ಜನಾಕರ್ಷಣೆಮಾಡಿ ಜಿಲ್ಲೆಯ ಉತ್ತರ ಪ್ರವಾಸಿಕೇಂದ್ರವಾಗಿ ಮಾಡಬಹುದಾಗಿದೆ.

(ಈ ಲೇಖನ ಸಿದ್ದಪಡಿಸಲು ನೆರವಾದ ಶ್ರೀ ಅ.ರ.ಶಂಕರಯ್ಯ, ಡಾ|| ಆನಂದ ಋಗ್ವೇದಿ, ಡಾ|| ಜಗದೀಶ ಅಗಸಿಬಾಗಿಲವರು, ಡಾ|| ರಾಜಶೇಖರಪ್ಪ ಇವರಿಗೆ ನನ್ನ ಧನ್ಯವಾದಗಳು)

ಆಧಾರ ಗ್ರಂಥಗಳು

1. *ಎಪಿಗ್ರಾಫಿಯಾ ಕರ್ನಾಟಿಕ ಸಂಪುಟ*-II (ಚಿತ್ರದುರ್ಗ)-ಬಿ.ಎಲ್. ರೈಸ್.
2. *ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ* (2005) ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ.
3. *ದಕ್ಷಿಣ ಕರ್ನಾಟಕದ ಅರಸು ಮನೆತನಗಳು*(2004) ಕನ್ನಡ ವಿಶ್ವವಿದ್ಯಾಲಯ, ಹಂಪಿ,
4. *ಚಂದ್ರವಳ್ಳಿ*(1976) -ಜಿಲ್ಲಾ ಇತಿಹಾಸ ಸಂಶೋಧನಾ ಮಂಡಳಿ, ಚಿತ್ರದುರ್ಗ
5. *ಕರ್ನಾಟಕದ ಕಲೆಗಳು*(2004) ಸಂಪುಟ-4 ವಾಸ್ತು, ಡಾ||ಬಿ.ಆರ್. ಗೋಪಾಲ, ಕಸಾಪ, ಬೆಂಗಳೂರು.
6. *ಕರ್ನಾಟಕದ ನೃಪತುಂಗ-ನೃತ್ಯಶಿಲ್ಪ*(1994) ಲಲಿತ ಶ್ರೀನಿವಾಸ-ಕರ್ನಾಟಕ ಸಂಗೀತ ಅಕಾಡೆಮಿ, ಬೆಂಗಳೂರು.
7. *ಕರ್ನಾಟಕದ ಕನ್ನಡ ವಿಷಯ ವಿಶ್ವಕೋಶ*(1969) ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. *ದಾವಣಗೆರೆ ಇದು ನಮ್ಮ ಜಿಲ್ಲೆ* (2004) ಟಿ.ಗಿರಿಜ, ನಿಹಾರಿಕಾ ಪ್ರಕಾಶನ, ದಾವಣಗೆರೆ-1
9. *ಅಳಿದುಳಿದ ಹಂಪೆ* (1982) ಡಾ|| ವಸುಂಧರಾ ಫಿಲಿಯೋಜಾ, ಮಾನಸೊಲ್ಲಾಸ ಪ್ರಕಾಶನ, ಬೆಂಗಳೂರು.


10. *ಭಾರತೀಯ ವಾಸ್ತು ವಿದ್ಯೆ*(1994) ಡಾ|| ದೇವರಕೊಂಡಾರೆಡ್ಡಿ, ರೆಡ್ಡಿ ಪ್ರಕಾಶನ, ಬೆಂಗಳೂರು.

11. *ವಿಜಯನಗರ ಅಧ್ಯಯನ* ಸಂಪುಟ-10 ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯ ನಿರ್ದೇಶನಾಲಯ, ಹಂಪಿ.


12. *ಕರ್ನಾಟಕ ಸಂಕ್ಷಿಪ್ತ ಇತಿಹಾಸ*(1973) ಡಾ|| ಸೂರ್ಯನಾಥ ಕಾಮತ್, ಬಾಪ್ಕೊಲ್ ಬುಕ್‌ಸ್ಟಾಲ್, ಬೆಂಗಳೂರು.


13. *ಪ್ರಜಾವಾಣಿ* ದಿನಾಂಕ 11-2-2007

14. *ಎಂ.ಎ.ಆರ್.*1928








































೩೦. ವಿಜಯನಗರದ ಪ್ರೌಢರಾಯನ ಧಾರ್ಮಿಕ ಸಾಮರಸ್ಯ, ಸಾಹಿತ್ಯ ಮತ್ತು ಶಿಲ್ಪಾಸಕ್ತಿ

ಡಾ. ಚೆನ್ನಕ್ಕ ಪಾವಟೆ

ವಿಜಯನಗರದ ಅರಸರು ಧಾರ್ಮಿಕ ಸಾಮರಸ್ಯಕ್ಕೆ ಮಾನ್ಯತೆ ಕೊಟ್ಟವರು. ತಾವು ನಡೆಸುವ ಆಳ್ವಿಕೆಯ ಪರಿಸರದಲ್ಲಿ ಎಲ್ಲ ಧರ್ಮದವರಿಗೂ ಸಮಾನ ಅವಕಾಶವಿತ್ತು. ಅವರ ಬೇಕು ಬೇಡಿಕೆಗಳನ್ನು ಪೂರೈಸಿ ಸಂತೃಪ್ತ ಜೀವನ ನಡೆಸುವಂತೆ ಕಾಯಕಲ್ಪ ಕೈಕೊಳ್ಳವದು ಅವರ ಪ್ರಮುಖ ಜವಾಬ್ದಾರಿಯಾಗಿದ್ದು, ಅಂತೆಯೆ ವಿಜಯನಗರದ ದೊರೆಗಳ ಕಾಲ ದಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಜೈನ ಮತ್ತು ಇಸ್ಲಾಂ ಪಂಥಗಳು ಯಾವುದೇ ತಂಟೆ ತಕಾರಾರುಗಳಿಲ್ಲದೆ ನೆಮ್ಮದಿಯಿಂದ ರಾಜ್ಯಭಾರದಲ್ಲಿ ಪಾಲುಗಾರ ರಾಗಿದ್ದವು. ಪ್ರೌಢಪ್ರತಾಪದೇವರಾಯನ ವಿಶಾಲ ದೃಷ್ಟಿಯಿಂದಾಗಿ ಹಿಂದೂ ಧರ್ಮದ ಪ್ರಮುಖ ಧರ್ಮಶಾಖೆಗಳು ಧರ್ಮಸಾಮರಸ್ಯದಿಂದ ಬಾಳುವ ಹೊಣೆ ಹೊತ್ತಿದ್ದವು.

ದ್ವೈತಮತ

ದ್ವೈತಮತವು ಶ್ರೀವೈಷ್ಣವ ಅಥವಾ ವಿಶಿಷ್ಟಾದ್ವೈತದಂತೆ ವಿಷ್ಣು ಸರ್ವೋತ್ತ ಮತ್ವವನ್ನು ಬೋಧಿಸುವದು. ಆದರೆ ಅಲ್ಲಿ ತತ್ವಶಃ ಕೆಲವು ಭೇದಗಳಿವೆ. ಕ್ರಿ.ಶ. ೧೩ ನೆಯ ಶತಮಾನದಲ್ಲಿ ಮಧ್ವಾಚಾರ್ಯರು ಈ ಸಂಪ್ರದಾಯದ ಆದಿಪುರುಷರು. ಮಧ್ವ ಸಿದ್ಧಾಂತಾನ್ವಯದ ವೈಷ್ಣವ ಮತಾವಲಂಬಿಗಳಿಗೆ ವಿಜಯನಗರದ ಕೃಷ್ಣದೇವರಾಯನ ಕಾಲಕ್ಕೆ ಹೆಚ್ಚಿನ ಪೋಷಣೆ ದೊರೆಯಿತು. ಕನ್ನಡನಾಡಿನ ಹರಿದಾಸ ಸಂಪ್ರದಾಯಕ್ಕೆ ಹಾಗೂ ಈ ಪರಂಪರೆಯ ಬ್ರಾಹ್ಮಣ ಪಂಡಿತರಿಗೂ ಆ ಕಾಲಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ಪ್ರೌಢದೇವರಾಯನ ಕಾಲದ ವೈಷ್ಣವ ಮಂದಿರಗಳಿಗೂ ಬ್ರಾಹ್ಮಣರಿಗೆ ದೊರೆತ ಕೆಲವು ದಾನ ಶಾಸನಗಳನ್ನು ಇಲ್ಲಿ ಗಮನಿಸಬಹುದು.

ಪ್ರೌಢಪ್ರತಾಪದೇವರಾಯನು ಒಂದು ಚಿನ್ನದ ಆಕಳನ್ನು ಹಾಗೂ ಅಗ್ರಹಾರಗಳನ್ನು ಬ್ರಾಹ್ಮಣರಿಗೆ ದಾನ ಮಾಡಿದನು.[೧] ಚಂದ್ರಗಿರಿ ರಾಜ್ಯದ ಶ್ರೀನಿವಾಸಪುರವನ್ನು ರಾಯನು ವೇದಪಾರಂಗತರಾದ ೨೪ ಜನ ಬ್ರಾಹ್ಮಣರಿಗೆ ದಾನ ಮಾಡಿರುವನು.[೨] ಆಂಧ್ರದ ಓರುಂಗಲ್ಲ ತಾಲೂಕಿಗೆ ಸೇರಿದ ಪೋಲಾವರಂ ಹಾಗೂ ಗುಂಟೂರು ಜಿಲ್ಲೆಯ ಹಳ್ಳಿ ಗಳನ್ನು ರಾಯನು ಬ್ರಾಹ್ಮಣರಿಗೆ ದಾನ ಮಾಡಿರುವನು. ಪಂಡಿತ ನಾಗನಾಥಾಚಾರ್ಯ ನೆಂಬ ಬ್ರಾಹ್ಮಣನು ಕ್ರಿ.ಶ. ೧೪೪೫ ರಲ್ಲಿ ಪ್ರೌಢದೇವರಾಯನ ರೋಗ ನಿವಾರಣೆಗಾಗಿ

ಪ್ರಯಾಗ ಕಾಶಿಗೆ ಹೋಗಿ ವಿಧಿಗಳನ್ನಾಚರಿಸಿ ಬಂದುದನ್ನು ಕೇಳಿ ಸಂತುಷ್ಟನಾದ ದೊರೆ 'ದೇವರಾಯಪುರ' ಎಂಬ ಹಳ್ಳಿಯನ್ನು ಅವನಿಗೆ ದಾನವಿತ್ತಿರುವನು. ಕ್ರಿ.ಶ. ೧೪೨೯ ರಲ್ಲಿ ದೊರೆ ದೇವರಾಯ ತಿರುಪತಿ ದೇವಸ್ಥಾನದ ಖಜಾನೆಗೆ ರಾಜಭಂಡಾರದ ವರ ಮಾನದಿಂದ ಹನ್ನೆರಡು ಸಾವಿರ 'ಹೊನ್ನು' ಗಳನ್ನು ದಾನ ಮಾಡಿದುದನ್ನು ಅಲ್ಲಿಯ ಒಂದು ಶಾಸನ ಉಲ್ಲೇಖಿಸಿದೆ. ಅಲ್ಲದೆ ಅಲ್ಲಿಯ ಒಂದು ಉತ್ಸವ ನಡೆಸಲು ವಿಕ್ರಮಾ ದಿತ್ಯ ಮೊದಲಾದ ಗ್ರಾಮಗಳನ್ನು ತೆರಿಗೆ ಮುಕ್ತವಾಗಿ ದಾನ ಮಾಡಿದ ಬಗ್ಗೆಯೂ ಅದು ಹೇಳುತ್ತದೆ. ಈ ಶಾಸನವನ್ನು ಸ್ಥಾನ್ನತ್ತಾರ ಅಪ್ಪಣೆಯ ಮೇರೆಗೆ ದೇವಸ್ಥಾನದ ಲೆಕ್ಕಿಗ ಬರೆದಿರುವನು. ಅರುಣಾಚಲೇಶ ಪಂಡಿತನ ಮಗನಾದ ಕೇಶವ ಪಂಡಿತನಿಗೆ ತುಂಗಭದ್ರ ತೀರದ ಭಾಸ್ಕರ ಕ್ಷೇತ್ರದ ಚಂದ್ರಮೌಳೇಶ್ವರ ಸನ್ನಿಧಿಯಲ್ಲಿ ಶಿವಸಮುದ್ರದ ಸೀಮೆಯ ಎಳೆತೊರೆ ಹಳ್ಳಿಯನ್ನು ದಾನ ಮಾಡಿರುವನು. ಪ್ರೌಢರಾಯನ ತಮ್ಮ ಶ್ರೀ ಗಿರೀಂದ್ರನು ವಿಜಯರಾಯಪುರಂ ಎಂಬ ಹಳ್ಳಿಯನ್ನು ಸಂಪತ್ಕುಮಾರನೆಂಬ ಬ್ರಾಹ್ಮಣನಿಗೆ ಈಯಲು, ಅದರಲ್ಲಿ ಅವನು ೫೨ ಭಾಗ ಮಾಡಿ ೨೨ ಭಾಗಗಳನ್ನು ಸ್ವಂತಕ್ಕೆ ಇಟ್ಟು ಕೊಂಡಿದ್ದಲ್ಲದೆ, ೨೨ ಭಾಗ ದೇವಾಲಯಕ್ಕೆ ಉಳಿದುದನ್ನು ಪಂಡಿತರಿಗೆ ಕೊಟ್ಟಿರುವನು. ಇನ್ನೂ ಅನೇಕ ಸಾಮಂತರು ಕೂಡ ದತ್ತಿ ಬಿಟ್ಟ ಶಾಸನ ಪ್ರಮಾಣಗಳಿವೆ. ಆ ಕಾಲದ ಕೆಲವು ಬ್ರಾಹ್ಮಣ ಪಂಡಿತರ ಹೆಸರು ಶಾಸನದಲ್ಲಿವೆ. ನಾರಾಯಣಭಟ್ಟ, ಪುರುಷೋತ್ತಮ,[೫] ವ್ಯಾಸಭಾರತಿ,[೬] ಅಮರೇಶ್ವರತೀರ್ಥ,[೭] ಶ್ರೀಪಾರಂಗ[೮] ಇತ್ಯಾದಿಗಳನ್ನು ಹೆಸರಿಸಿ ನರಸಿಂಹಾಚಾರ್ಯನು ದೇವರಾಯನ ಅರಮನೆಯ ಗುರುವಾಗಿದ್ದವನೆಂದೂ, ರಾಮಚಂದ್ರ ಒಡೆಯನು ರಾಯನ ಭಂಡಾರಿಯಾಗಿದ್ದನೆಂದೂ, ಕೆಲವೆಡೆ ಹೇಳಲಾಗಿದೆ. ಅಲ್ಲದೆ ಕನ್ನಡಕಾವ್ಯ ಪುರಾಣಗಳಿಂದ ವಿಷ್ಣು, ಪದ್ಮ, ಮುಕುಂದ, ಪೆದ್ದಿಗಳು ರಾಯನಿಗೆ ವೈಷ್ಣವಧರ್ಮ ಬೋಧಿಸುತ್ತಿದ್ದರೆಂದು ತಿಳಿದುಬರುತ್ತದೆ. ರಾಯನು ಇದರ ಮೇಲಿಂದ ಮೊದಮೊದಲು ವೈಷ್ಣವ ಮತಕ್ಕೆ ತನ್ನ ಒಲವನ್ನು ಸೂಚಿಸಿರಬೇಕು. ಆದರೆ ತಕ್ಕಾಲದ ವೀರಶೈವ ಪುಣ್ಯದಿಂದ ಅವನು ವೀರಶೈವನಾಗಿದ್ದನೆಂಬುದಕ್ಕೆ ಹೇರಳವಾದ ಪ್ರಮಾಣಗಳುಂಟು.

ಅದ್ವೈತಮತ

ಕರ್ನಾಟಕದ ಬಹುಮುಖ್ಯ ಮತಗಳಲ್ಲಿ ಅದ್ವೈತವೂ ಒಂದು. ಶಿವ ಅಥವಾ ವಿಷ್ಣು ಪಾರಮ್ಯ ಭಕ್ತಿ ಪ್ರಧಾನ ಅದ್ವೈತ ಮೂಲ ಲಕ್ಷಣಗಳು, ಉಪನಿಷತ್ತು, ವೇದಾಂತ, ಸೂತ್ರಗಳಲ್ಲಿ ಈ ಮತದ ಮೂಲ ವಿಚಾರಗಳಿವೆ. ಶಂಕರಾಚಾರ್ಯರು ಸ್ಥಾಪಿಸಿದ ಈ ಮತ ಪ್ರಚಾರದ ಮೂಲ ಶಾಖಾ ಮಠಗಳಲ್ಲಿ ಪ್ರಸಿದ್ಧವಾದ ಶೃಂಗೇರಿಮಠ ಕರ್ನಾಟಕದಲ್ಲಿತ್ತು. ಶೃಂಗೇರಿಮಠಕ್ಕೆ ಸಂಗಮ ದೊರೆಗಳಾದ ಒಂದನೆಯ ಹರಿಹರ, ಬುಕ್ಕರಾಯ ಇವರೆಲ್ಲರೂ ದತ್ತಿ ಬಿಟ್ಟಿರುವರು. ವಿಜಯನಗರ ಸಾಮ್ರಾಜ್ಯಸ್ಥಾಪಕರೆಂದು

ಪ್ರತೀತಿ ಇರುವ ವಿದ್ಯಾರಣ್ಯ ಸ್ವಾಮಿಗಳು ಬುಕ್ಕರಾಯನ ಸಮಕಾಲೀನರಾಗಿದ್ದವರು. ಪ್ರಕಾಂಡ ಪಂಡಿತರಾದ ಇವರಿಂದ ಮಠದ ಕೀರ್ತಿ ರಾಜಕೀಯ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಹೆಚ್ಚುತ್ತ ಬಂದಿತು.

ಪ್ರೌಢದೇವರಾಯನ ಕಾಲದಲ್ಲಿ ಈ ಪೀಠ ಜಾಗೃತವಾಗಿದ್ದು ರಾಯ ಹಾಗೂ ಸಾಮಂತರು ಭೂದಾನ ಮಾಡಿರುವರು. ಪ್ರೌಢದೇವರಾಯನು ಶೃಂಗೇರಿಯ ಶ್ರೀ ಶಂಕರ ಭಾರತಿ ಸ್ವಾಮಿಗಳನ್ನು ಆಮಂತ್ರಿಸಿ ರಾಜಮರ್ಯಾದೆ ಮಾಡಿ ಮಠಕ್ಕೂ ಬ್ರಾಹ್ಮಣ ಪಂಡಿತರಿಗೂ ಕೊಂಗವಳ್ಳಿ ಎಂಬ ಹಳ್ಳಿಯನ್ನು ದಾನಮಾಡಿರುವನು. ಶೃಂಗೇರಿಯಲ್ಲಿ ಚಂದ್ರಶೇಖರ ಭಾರತಿ ಒಡೆಯರ ಕಾಲದಲ್ಲಿದ್ದ ಅಂಗಲಿಯ ಚೆನ್ನಪ್ಪಗಳ ಮಕ್ಕಳು ಭೂದಾನ ಮಾಡಿದ್ದನ್ನು ಇನ್ನೊಂದು ಶಾಸನ ಸೂಚಿಸಿದೆ.

ವಿಶಿಷ್ಟಾದ್ವೈತ

ಶ್ರೀವೈಷ್ಣವ ಅಥವಾ ವಿಶಿಷ್ಟಾದ್ವೈತಮತವು ರಾಮಾನುಜಾಚಾರ್ಯರಿಂದ ಕರ್ನಾಟಕದಲ್ಲಿ ಪಸರಿಸಿತು. ಶ್ರೀವೈಷ್ಣವ ಅಥವಾ ರಾಮಾನುಜ ಪಂಥ ವೇದ ಸ್ಮೃತಿ ಪುರಾಣಗಳನ್ನು ಮನ್ನಿಸುತ್ತದೆ. ಅಲ್ಲದೆ ತಮಿಳುನಾಡಿನ ಪನ್ನಿರಾಳ್ವರುಗಳ ಬೋಧನೆಗಳೂ ಇಲ್ಲಿ ಸಮಾವೇಶವಾಗುತ್ತಿವೆ. ರಾಜಕೀಯ ಸ್ಥಿತ್ಯಂತರಗಳು ಹಾಗೂ ಅನ್ಯ ಧರ್ಮದ ಒತ್ತಡಕ್ಕೆ ಸಿಲುಕಿ ಉಸಿರುಗಟ್ಟಿದ ರಾಮಾನುಜರ ವಿಚಾರಗಳಿಗೆ ತಮ್ಮ ನಾಡಿನಲ್ಲಿ ಉಳಿಗಾಲವಿಲ್ಲದ್ದರಿಂದ ಕನ್ನಡ ನಾಡಿನ ದೊರೆ ವಿಷ್ಣುವರ್ಧನನ ಆಶ್ರಯ ದೊರೆಯಿತು. ಅಷ್ಟರಲ್ಲಿ ವೈಷ್ಣವ ಮತ ಮತಾವಲಂಬಿಯಾಗಿ ಈ ಧರ್ಮದ ಪ್ರಚಾರಾರ್ಥವಾಗಿ ಬೇಲೂರು ಮೊದಲಾದ ಕಡೆ ಪ್ರಸಿದ್ಧ ವೈಷ್ಣವ ದೇವಾಲಯ ಕಟ್ಟಿಸಿದನು. ಮೇಲುಕೋಟೆ ಅಂದು ರಾಮಾನುಜರ ಧಾರ್ಮಿಕ ಕೇಂದ್ರ. ಈ ಪಂಥದಲ್ಲಿ ತೆಂಕಲೈ, ಬಡಗಲೈ ಎಂಬ ಎರಡು ಶಾಖೆಗಳಿವೆ. ಒಂದು ತಿಳಿಸಿದಂತೆ ತೆಂಕಲೈ ಆಳ್ವಾರರ ಪ್ರಬಂಧಗಳನ್ನು ಮನ್ನಿಸಿದರೆ, ಬಡಗಲೈ ಸಂಸ್ಕೃತ ವೇದಗಳನ್ನು ವರ್ಣಾಶ್ರಮಗಳನ್ನು, ವೈದಿಕ ತತ್ವಗಳನ್ನು ಮನ್ನಿಸುತ್ತದೆ.

ಮಲ್ಲಪ್ಪ ದಣ್ಣಾಯಕನ ಆಡಳಿತಕ್ಕೊಳಪಟ್ಟ ನಿರುಯಾಲಚಂಗಲ ನಾಡಿನ ನಾಲ್ಕು ಹಳ್ಳಿಗಳನ್ನು ರಾಯನು ಅರುವಳನಾಥ ನೈನಾದ, ಉನ್ನಮಲೈ, ನೈಪಾದ ದೇವಾಲಯಗಳಿಗೆ ದಾನ ಮಾಡಿರುವನು. ದೇವರಾಜೇಂದ್ರನ ವರ್ಧಂತಿ ಉತ್ಸವಕ್ಕೆಂದು ತಿರುವತ್ತೀಶ ಒಡೆಯನ ನೈನಾದ ದೇವಾಲಯದ ತೆರಿಗೆಯನ್ನು ಪೆರುಮಾಳೆ ದಂಡನಾಯಕನು ತೆರೆದು ಹಾಕಿದನು. ದೇವರಾಯ ಮಹಾರಾಯರ ವಿಜಯಕ್ಕೆಂದು ತಿಮ್ಮಯ್ಯ ನಾಯಕನು ರಾಜ ಗಂಭೀರ ರಾಜ್ಯದ ತಿರುಮಲ ನೈನಾದ ದೇವಾಲಯಕ್ಕೆ ಗಂಗಾವತಿನಾಡು ಎಂಬ ಹಳ್ಳಿಯನ್ನು ದಾನ ಮಾಡಿರುವನು. ಚಿಂಗಲಪೇಟೆಯ ರಾಘವ ಪೆರುಮಾಳ್ ದೇವಸ್ಥಾನದ

ದಕ್ಷಿಣ ಗೋಡೆಗಳನ್ನು ಸಿಕ್ಕರಸನು ಕಟ್ಟಿಸಿದನು. ಶ್ರೀರಂಗಪಟ್ಟಣದ ರಂಗನಾಥ, ಬಾರಕೂರಿನ ರಾಜ್ಯದ ಗೋಪಿನಾಥದೇವರು, ಮದ್ರಾಸ ರಾಜ್ಯದ ಚಿದಂಬರ ನಟರಾಜ ದೇವಾಲಯ, ತಿರುಚನಾಪಳ್ಳಿಯ ಅರಗ ಪೆರುಮಾಳ್‌ದೇವಾಲಯ, ಅಡತ್ವರೈತ ಅಪ್ಪರ ದಕ್ಷಿಣೇಶ್ವರ ದೇವಾಲಯಗಳು ಅಂದು ಶ್ರೀವೈಷ್ಣವರ ಕೇಂದ್ರಸ್ಥಳಗಳಾಗಿದ್ದವು. ಇದಕ್ಕೆ ವಿಜಯನಗರದ ದೊರೆ ಪ್ರೌಢಪ್ರತಾಪದೇವರಾಯ ಅವನ ಸಾಮಂತರಾದ ಚಂದ್ರಪ್ಪ ವೊಡೆಯ, ಬೊಮ್ಮಯ್ಯನಾಯಕ, ಪಂತ, ಮೈಲಾರ ಮತ್ತು ಪೆರುಮಾಳ್ ದಣ್ಣಾಯಕರು ಅಪಾರವಾದ ದಾನ ದತ್ತಿ ಬಿಟ್ಟು ಕೊಟ್ಟಿದ್ದಾರೆ. ಈ ದಾನದತ್ತಿಗಳ ಪ್ರಾಬಲ್ಯದಿಂದ ಅಂದು ವೈಷ್ಣವ ಧರ್ಮ ಕರ್ನಾಟಕದಲ್ಲಿ ವ್ಯಾಪಿಸಲು ಕಾರಣವಾಯಿತು.

ಪ್ರೌಢದೇವರಾಯನ ಸಾಹಿತ್ಯಾಸಕ್ತಿ ಮತ್ತು ಶಿಲ್ಪಾಸಕ್ತಿ

ವಿಜಯನಗರದ ಸಾಮ್ರಾಜ್ಯದ ಅವಧಿಯಲ್ಲಿ ಅದರಲ್ಲೂ ಪ್ರೌಢಪ್ರತಾಪ ದೇವರಾಯನ ಕಾಲದ ಸಾಹಿತ್ಯಕ್ಕೆ ಸುವರ್ಣ ವೃಷ್ಟಿಯಾದಂತಿದೆ. ಸ್ವತಃ ಪ್ರೌಢದೇವ ರಾಯನೇ ಕವಿಯಾಗಿದ್ದು ರತ್ನದೀಪಿಕಾ, ಮತ್ತು ಬ್ರಹ್ಮಸೂತ್ರಗಳನ್ನು ಬರೆದಿರುವನು. ಪ್ರೌಢದೇವರಾಯನ ಸೋದರಳಿಯ ಗೋಪತಿ ಅಂದು ಅಗಾಧ ಸಂಸ್ಕೃತ ಪಂಡಿತ ನಾಗಿದ್ದು, ಆತ ರಚಿಸಿದ ಕೃತಿಗಳ 'ಕಾವ್ಯಾಲಂಕಾರ ಕಾಮಧೇನು' 'ತಾಲದೀಪಿಕಾ' ಎಂಬ ಎರಡು ಮಹತ್ವದ ಕೃತಿಗಳನ್ನು ರಚಿಸಿದನು. ಸುಪ್ರಸಿದ್ಧ ಸಂಸ್ಕೃತ ಕವಿ ಭವಭೂತಿ 'ಮಾಲತಿಮಾಧವ' ಕೃತಿಯ ರೂಪದಲ್ಲಿ 'ಮಲ್ಲಿಕಾಮಾರುತ' ಎಂಬ ನಾಟಕ ಕೃತಿ ರಚಿಸಿರುವನು. ಪ್ರೌಢದೇವನ ಕಾಲದಲ್ಲಿ ಸಂಸ್ಕೃತ ಸಾಹಿತ್ಯಕ್ಕೆ ತುಂಬಾ ಮನ್ನಣೆ ಇತ್ತು. ಅಂತಲೇ ಆನಂದಪೂರ್ಣ ಮತ್ತು ವೆಂಕಟಾಚಾರ್ಯ ಮೊದಲಾದ ಮಹತ್ವದ ಕೃತಿಕಾರರು ಇವನ ಕಾಲದಲ್ಲಿದ್ದು ಸಂಸ್ಕೃತಕ್ಕೆ ಮಹತ್ವದ ಮಾನ್ಯತೆ ದೊರಕಿಸಿ ಕೊಟ್ಟಿರುವರು.

'ತೆಲುಗು ನೈಷದ' ಎಂಬ ಕೃತಿ ತೆಲುಗು ಸಾಹಿತ್ಯದ ಪಂಚಕಾವ್ಯಗಳಲ್ಲಿ ಒಂದು ಮಹತ್ವದ ಕೃತಿ ಇಂತಹ ಹಲವಾರು ಸಂಸ್ಕೃತ ಕಾವ್ಯಗಳನ್ನು ರಚಿಸಿದ ಸುಪ್ರಸಿದ್ಧ ದೊರೆ ಶ್ರೀನಾಥ ಇದ್ದುದು ಪ್ರೌಢದೇವರಾಯನ ಕಾಲದಲ್ಲಿ ಗೌಡದೇಶದ ಸುಪ್ರಸಿದ್ಧ ಕವಿ ಡಿಂಡಿಮಭಟ್ಟನನ್ನು ಶ್ರೀನಾಥ ಸೋಲಿಸಿ ಕನಕಾಭೀಷೇಕ ಪೂರ್ವಕ 'ಕವಿಸಾರ್ವಭೌಮ', ಅಥವಾ 'ಕವಿರತ್ನ' ಬಿರುದು ಪಡೆದರು. ಪ್ರೌಢದೇವರಾಯನ ಪ್ರೋತ್ಸಾಹದಿಂದ ತೆಲುಗಿ ನಲ್ಲಿ ೧೮ ನಾಟಕಗಳನ್ನು ಬರೆದ ಪ್ರತಿಭಾವಂತ ಕವಿಯತ್ರಿ ಶಾರದಾ, ಪ್ರೌಢದೇವರಾಯನ ಆಸ್ಥಾನದ ಕವಿಯಾಗಿದ್ದಳು. ದೇವರಾಯನ ಮಂತ್ರಿ ಸಿದ್ಧಣ್ಣನಿಗೆ ಅರ್ಪಿತವಾದ ವಿಕ್ರಮಾರ್ಕ ಚರಿತಂ ಕೃತಿಯ ಕರ್ತೃ ಜಕ್ಕಣ್ಣನೆಂಬನ ಪ್ರೌಢದೇವರಾಯನ ಕಾಲದ ಮಹತ್ವದ ಕೃತಿ.

ಪ್ರೌಢದೇವರಾಯನ ಕಾಲದಲ್ಲಿ ಕನ್ನಡ ಸಾಹಿತ್ಯ 'ನಭೂತೋ ನ ಭವಿಶ್ಯತಿ' ಎಂಬಂತೆ ಪ್ರಾರಂಭಗೊಂಡಿತು. ಲಕ್ಕಣ್ಣದಂಡೇಶ ಅಂದು ಗರುಡ ಕವಿ. ಕನ್ನಡನಾಡಿನ ಸಂದುಗೊಂದುಗಳಲ್ಲಿರುವ ಶರಣ ಶರಣೆಯರನ್ನು ಹುಡುಕಿ 'ಶಿವತತ್ವ ಚಿಂತಾಮಣಿ' ಎಂಬ ಮಹತ್ವದ ಕಾವ್ಯ ರಚಿಸಿರುವನು. ಜಕ್ಕಣಾರ್ಯ ಅಂದು 'ವಿಕ್ರಮಾರ್ಕದೇವ ಚರಿತ' ಎಂಬ ಕೃತಿಯನ್ನು ರಚಿಸಿ ಮಂತ್ರಿ ಸಿದ್ದಣ್ಣನಿಗೆ ಅರ್ಪಿಸಿರುವನು. ಮಹಾಲಿಂಗ ದೇವ ಈತನೂ ಅಂದು ಮಹತ್ವದ ಕವಿ. ಚಾಮರಸ 'ಪ್ರಭುಲಿಂಗ ಲೀಲೆ' ಎಂಬ ಕಾವ್ಯ ಬರೆದ ಕವಿ. ಮಗ್ಗೆಯ ಮಾಯಿದೇವ ಅಂದು ತಾತ್ವಿಕ ಸಾಹಿತ್ಯಕ್ಕೆ ಪ್ರಸಿದ್ಧನಾದ ಕವಿ. ಮಗ್ಗೆಯ ಮಾಯಿದೇವನ ಮಹತ್ವದ ಕೃತಿಗಳು ಅಂದು ಹಲವಾರು ಅದರಲ್ಲಿ ಲಕ್ಕಣ ದಂಡೇಶ ಶಿವತತ್ವ ಚಿಂತಾಮಣಿ ಎಂಬ ಮಹತ್ತರ ಕಾವ್ಯ ಬರೆದಿರುವನು.

ಚಂದ್ರಶೇಖರ ಕವಿ ಎಂಬ ಪ್ರಸಿದ್ಧ ಕವಿಯೊಬ್ಬನಿದ್ದುದನ್ನು ಅರಿಯಬಹುದಾಗಿದೆ. ಇವರೆಲ್ಲ ಆತನ ಕಾಲದಲ್ಲಿದ್ದ ವೀರಶೈವ ಕವಿಗಳು. ಪ್ರೌಢದೇವರಾಯನ ಆಸ್ಥಾನ ಕವಿ ಗಳಲ್ಲಿ ಅಂದು ಕುಮಾರವ್ಯಾಸ, ಆಯತವರ್ಮ, ಕಲ್ಯಾಣಕೀರ್ತಿ, ಭಾಸ್ಕರರು ಮೊದಲಾದ ವೈದಿಕ ಕವಿಗಳು ಇದ್ದರು. ದೇವರಾಯನ ಆಸ್ಥಾನದಲ್ಲಿದ್ದ ಜೈನರ ನೇಮಿಚಂದ್ರ ಪಂಡಿತ ಪರದಾರಿಗಳನ್ನು ವಾಕ್ಯದಲ್ಲಿ ಸೋಲಿಸಿ ಜಯತ್ವ ಪಡೆದಿರುವನು.

ಪ್ರೌಢದೇವರಾಯ ಶಿಲ್ಪಾಶಕ್ತಿ

ಪ್ರೌಢದೇವರಾಯನ ಕಾಲದಲ್ಲಿ ವೀರಪಾಂಡ್ಯನಿಂದ ಕಾರ್ಕಳದಲ್ಲಿ ಪ್ರತಿಷ್ಠೆಗೊಂಡ ೪೫ ಅಡಿ ೫ ಅಂಗುಲ ಎತ್ತರದ ಗೊಮ್ಮಟಮೂರ್ತಿ ಬೃಹತ್ ಈ ಕಾಲದ ಶಿಲಾ ಮೂರ್ತಿ. ಹಜಾರರಾಮಸ್ವಾಮಿ ದೇವಾಲಯ ಕೃಷ್ಣದೇವರಾಯನ ಹೆಸರಿನಲ್ಲಿದ್ದರೂ ಅದರ ತಳಪಾಯದಲ್ಲಿ ದೇವರಾಯ ಹೆಸರನ್ನು ಉಲ್ಲೇಖಿಸಲಾಗಿದೆ. ಹಜಾರ ರಾಮಸ್ವಾಮಿ ದೇವಾಲಯ ಪ್ರೌಢದೇವರಾಯನ ಕಾಲದಲ್ಲಿ ಕಟ್ಟಲು ಪ್ರಾರಂಭಿಸಿದ್ದು ಕೃಷ್ಣದೇವರಾಯನ ಕಾಲಕ್ಕೆ ಮುಕ್ತಾಯಗೊಂಡಿರಬೇಕು. ಪಾನಸುಪಾರಿ ಬಜಾರಿನಲ್ಲಿ ಪಾರ್ಶ್ವನಾಥನ ಬಸದಿ ಕಟ್ಟಿಸಿದನು. ಕಮಲಾಪುರ ಸಮೀಪದ ಹೊಲದಲ್ಲಿ ಮಂಟಪದ ಆಕಾರದ ಒಂದು ಕಟ್ಟಡವಿದ್ದು ಅದರ ತಲೆಯ ಮೇಲೆ ೫ ಸಾಲಿನ ಶಾಸನವಿದೆ. ಅಹ್ಮದ ಖಾನ ಎಂಬವನು ತನ್ನ ದೊರೆ ದೇವರಾಯನಿಗೆ ಪುಣ್ಯವಾಗಲೆಂಬ ಆಶಯ ಹೊತ್ತು ಒಂದು ಧರ್ಮಶಾಲೆ ಮತ್ತು ಒಂದು ಬಾವಿ ಕಟ್ಟಿಸಿದನು. ಪ್ರೌಢದೇವ ರಾಯನ ಕಾಲಕ್ಕೆ ಶಿಲ್ಪಾಸಕ್ತಿ ಅವಧಿ ಮುಂದುವರೆಯದಿದ್ದೂ ಸಾಹಿತ್ಯಾಸಕ್ತಿ ಅವನನ್ನು ಕೈಬಿಟ್ಟಿಲ್ಲ.

ಹೀಗೆ ಪ್ರೌಢದೇವರಾಯನ ವಿಜಯನಗರದ ಆಳ್ವಿಕೆ ಧರ್ಮಸಾಮರಸ್ಯ ಮತ್ತು ಸಾಹಿತ್ಯ ಮತ್ತು ಶಿಲ್ಪಕಲೆಯ ಮಹತಿಗೆ ಪ್ರೇರಣೆ ನೀಡಿದೆ.

೩೧.ವಿಜಯನಗರದ ಅಧಿದೈವ ಪಂಪಾದೇವಿ ಕುರಿತು ಕೆಲವು ಚಿಂತನೆಗಳು

ಶ್ರೀಧರ ಪಿಸ್ಸೆ

ಹಂಪಿ ಇಂದು ಧಾರ್ಮಿಕ, ಚಾರಿತ್ರಿಕ-ಪುರಾತತ್ವೀಯ ಹಾಗೂ ಪ್ರವಾಸಿ ತಾಣವಾಗಿ ಪ್ರಸಿದ್ಧ ವಾಗಿದೆ. ಮೂಲತಃ ಇದು ಪಂಪಾದೇವಿಯ ನೆಲೆ. ಪಂಪಾದೇವಿಯನ್ನು ವರಿಸಿ ವಿರೂಪಾಕ್ಷ-ಶಿವನಿಲ್ಲಿ ಪಂಪಾಪತಿ ಎನಿಸಿದ್ದಾನೆ. ಅದರಿಂದಾಗಿಯೆ ದಕ್ಷಿಣ ಕಾಶಿ ಎಂದು ಪ್ರತೀತಿ. ಈ ಪ್ರದೇಶವೇಕೆ ಪಂಪಾದೇವಿಯ ನೆಲೆಯಾಗಿದೆ? ವಿರೂಪಾಕ್ಷನಾದ ಶಿವನೇಕೆ ಇಲ್ಲಿಯ ಪಂಪಾದೇವಿಯನ್ನು ವರಿಸಿದ್ದಾನೆ? ಪಂಪಾದೇವಿ ಪಾರ್ವತಿಯೇ ಅಥವಾ ಬೇರೆ ಹೆಣ್ಣೇ? ಈ ಹಿನ್ನೆಲೆಯಲ್ಲಿ ಸಾಮಾಜಿಕ ಜೀವನದ ಮೇಲೆ ಧಾರ್ಮಿಕ ರಾಜಕಾರಣ ಉಂಟು ಮಾಡಿದ ಪ್ರಭಾವ ಪರಿಣಾಮಗಳು, ಆ ಮೂಲಕ ಸಾಮಾಜಿಕ ಜೀವನ ಮೌಲ್ಯಗಳು ರೂಪುಗೊಂಡ ಬಗೆ ಮತ್ತು ಸಾಮಾಜಿಕ ಶ್ರೇಣೀಕರಣಕ್ಕಿರುವ ಸಂಬಂಧ ಕುತೂಹಲಕಾರಿ ಯಾಗಿದೆ. ಹಾಗಾಗಿ ಹಂಪಿ ಪರಿಸರದ ಗ್ರಾಮಗಳ ಕೆಳ ಸಮುದಾಯದ ಸಮಾಜಗಳು. ಅವುಗಳ ಸಾಮಾಜಿಕ ಸ್ಥಿತಿಗತಿಗಳು, ನಂಬಿಕೆ ಆಚರಣೆಗಳು ಮುಖ್ಯವಾಗುತ್ತವೆ. ಸಂಸ್ಕೃತಿಯ ಮತ್ತು ಭಾಗಗಳಾದ ಧರ್ಮ ಮತ್ತು ಸಾಮಾಜಿಕ ಜೀವನ ಹೇಗೆ ಒಂದೇ ದಿಸೆಯಲ್ಲಿ ಕಾರ್ಯ ನಿರ್ವಹಿಸುತ್ತವೆ. ಕೆಳವರ್ಗಗಳ ದೈವ ಸಾಮಾಜಿಕ ನಂಬಿಕೆ ಆಧರಿಸಿಯೆ ಮೇಲುವರ್ಗಗಳು ಹೇಗೆ ಸಾಂಸ್ಕೃತಿಕ ಯಜಮಾನಿಕೆ ಸಾಧಿಸುತ್ತವೆಂದು ಪರಿಶೀಲಿಸುವುದು ಇಲ್ಲಿಯ ಉದ್ದೇಶ. ಪಂಪಾದೇವಿಯ ದೈವ ಕಲ್ಪನೆ ಮತ್ತು ಆ ದೈವಕ್ಕೆ ನಡೆದು ಕೊಳ್ಳುವ ಜನರ ಸಾಮಜಿಕ ಜೀವನ ಈ ಲೇಖನದ ಮಿತಿಯಾಗಿದೆ.

ಪಂಪಾತೀರ್ಥ-ಪಂಪಾಕ್ಷೇತ್ರ

ಹಂಪಾ ಪದದ ಮೂಲ ರೂಪ 'ಪಂಪಾ' ದ್ರಾವಿಡ ಭಾಷಾವರ್ಗಕ್ಕೆ ಸೇರಿದ ಈ ಪದ ನದಿಯನ್ನು ಹೆಸರಿಸುತ್ತದೆ. ಹೂವಿನ ಹಡಗಲಿ ಪ್ರದೇಶದಲ್ಲಿ ತುಂಗಾಭದ್ರಾ ನದಿಯನ್ನು 'ಹಂಪಿ ಹೊಳಿ'ಯಂದು ಕರೆಯಲಾಗುತ್ತದೆ. ಸಮಾಜದ ಎಲ್ಲ ಜಾತಿ ಮತಗಳಲ್ಲೂ ಈ ಪದ ಬಳಿಕೆಯಲ್ಲಿದ್ದು, ಪಂಪಾ ಎಂಬ ಸ್ಥಳ ನಾಮದಿಂದ ಅದರ ವ್ಯಕ್ತಿನಾಮ ಹುಟ್ಟಿದೆಯೆಂದು ಚಿದಾನಂದಮೂರ್ತಿ ಹೇಳುತ್ತಾರೆ. ಹಂಪಿ ಹೊಳೆಯಂದರೆ ಸೀಳುಳ್ಳ ನದಿ, ಭಾಗಗಳುಳ್ಳ ನದಿ. ಹೂವಿನ ಹಡಗಲಿಯಿಂದ ಕಂಪ್ಲಿವರೆಗಿನ ತುಂಗಾಭದ್ರ

ನದಿ ನಡುಗೆಡ್ಡೆ ಗಳನ್ನು ನಿರ್ಮಿಸಿ ಸೀಳುಗಳಾಗಿ ಹರಿಯು ವದರಿಂದ ಇಲ್ಲಿ ಈ ಹೆಸರು ಬಂದಿದೆ ಎಂಬ ಭೌಗೋಳಿಕ ಸಮರ್ಥನೆ ಹಂಪಿ ಶಾಸನ ಸಂಪುಟದ ಪ್ರಸ್ತಾಪನೆಯಲ್ಲಿದೆ. ಪಂಪಾ ಎಂಬುದು ನದಿಯ ನಿರ್ದಿಷ್ಟ ಸ್ಥಳದ ಪ್ರಾದೇಶಿಕ ವಿಶಿಷ್ಟತೆಯನ್ನು ಸೂಚಿಸುವ ಜನಪದ ಬಳಕೆಯ ಪದವೆಂದು ತಿಳಿಯುತ್ತದೆ.

ತುಂಗಭಧ್ರಾ ನದಿಯ ವಿರೂಪಾಕ್ಷ ದೇವಾಲಯದ ಸುತ್ತಲ ಪ್ರದೇಶವನ್ನೇ ಪಂಪಾತೀರ್ಥ-ಪಂಪಾಕ್ಷೇತ್ರವೆಂದೂ ಇಲ್ಲಿಯ ವಾಸಸ್ಥಳವನ್ನು ಪಂಪಾಪುರ, ಪಂಪಾ ಪಟ್ಟಣ ಎಂದೂ ಕಾವ್ಯ, ಶಾಸನ, ಪುರಾಣಗಳಲ್ಲಿ ಹೆಸರಿಸಿದೆ. ಇಲ್ಲಿ ಪೂರ್ವಾ ಭಿಮುಖವಾಗಿ ಹರಿಯುವ ತುಂಗಾಭಧ್ರಾ ನದಿ ಉತ್ತರಕ್ಕೆ ತಿರುಗುತ್ತದೆ. ಉತ್ತರಕ್ಕೆ ತಿರುಗುವ ನದಿಯ ಸ್ಥಳವನ್ನು ಪವಿತ್ರ ತೀರ್ಥವೆಂದು ನಂಬಲಾಗಿರುವುದೇ ಇದಕ್ಕೆ ಕಾರಣ. ಇದೀಗ ಚಕ್ರತೀರ್ಥವೆಂದು ಕರೆಯಲಾಗುತ್ತಿರುವ ಸ್ಥಳವೆ ಹಿಂದಿನ ಪಂಪಾತೀರ್ಥ ವಾಗಿದ್ದು, ಪಂಪಾಕ್ಷೇತ್ರವೆನಿಸಿದೆ. ಅದರಿಂದಾಗಿ ಹಂಪಿ ಜಾತ್ರೆಯ ಮುಖ್ಯ ಆಚರಣೆಯಾದ ಫಲಪೂಜೆ ಚಕ್ರತೀರ್ಥದ ಬಳಿ ನಡೆಯುತ್ತದೆ . ಇದರಿಂದ ಈ ಸ್ಥಳದ ವೈಶಿಷ್ಟ್ಯಅಥವಾ ಪವಿತ್ರತೆ ಜನರ ನಂಬಿಕೆಯ ಭಾಗವಾಗಿ ಬೆಳೆದಿದೆ.

ನಿಜವಾಗಿ ಬೇಡುವವರಿಗೆ ಭುಕ್ತಿ, ಮುಕ್ತಿ ನೀಡಿ ರಕ್ಷಿಸುವ ಗುಣವುಳ್ಳ ದೈವಕ್ಕೆ ಪಂಪಾ ಎಂದು ಪಂಪಾಮಹಾತ್ಮೆಯಲ್ಲಿ ಹೇಳಿದೆ. ಅಂಥ ದೈವ ಮುಳುಗು ಹಾಕಿದ ಪ್ರದೇಶವನ್ನು ಪಂಪಾ ಸರೋವರವೆಂದೂ ಅದರ ದಡದಲ್ಲಿರುವ ದೈವವನ್ನು ಪಂಪಾಂಬೆ ಎಂದೂ ಕರಿದಿದೆ. ಹೀಗೆ ನದಿಯೊಂದರ ಪ್ರಾದೇಶಿಕ ವೈಶಿಷ್ಟೆ ಹೇಳುವ ಪದವೊಂದು ಪುರಾಣ ಕತೆಯಲ್ಲಿ ಸ್ತ್ರೀದೈವರೂಪ ಧರಿಸಿದೆ. ಭಾರತೀಯ ಪುರಾಣ ಕತೆಗಳಲ್ಲಿ ನದಿ, ನಾಡು, ಪರ್ವತಗಳಿಗೆ ಹೆಣ್ಣುತನವನ್ನು ಆರೋಪಿಸಿ ದೈವತ್ವಕ್ಕೇರಿಸಿರುವ ಸಾಮಾನ್ಯ ಸಂಗತಿ ಇಲ್ಲೂ ಕಂಡುಬರುತ್ತದೆ. ರಾಮಾಯಣ, ಮಹಾಭಾರತಗಳ ಪ್ರಸಂಗಗಳನ್ನು ಸಾಂದರ್ಭಿಕವಾಗಿ, ವೈಷ್ಣವ ಪ್ರಸಂಗಗಳನ್ನು ಆಂಶಿಕವಾಗಿ ಮತ್ತು ಶೈವ ಪ್ರಸಂಗಗಳನ್ನು ಪ್ರಧಾನವಾಗಿ ನಿರೂಪಿಸುವ ಈ ಗ್ರಂಥ ಶೈವಕೇಂದ್ರಿತ ವೈದಿಕ ಚಿಂತನಾ ಕ್ರಮವನ್ನು ಒಳಗೊಂಡಿದೆ. ಆದರೂ ಸ್ಥಳೀಯ ಭೌಗೋಳಿಕ ವೈಶಿಷ್ಟ್ಯ ಮತ್ತು ಅದಕ್ಕೆ ಸಂಬಂಧಿಸಿದ ನಂಬಿಕೆಗಳನ್ನು ಯಥಾವತ್ತಾಗಿ ತನ್ನ ಚಿಂತನಾ ಕ್ರಮದ ಭಾಗವಾಗಿ ಮಂಡಿಸಿದೆ.

ಪಂಪಾದೇವಿ

ಪಂಪಾದೇವಿ ಶೈವ ಪುರಾಣ ಕತೆಯಲ್ಲಿ ಬರುವ ಸ್ತ್ರೀ ದೈವ ಪಾತ್ರವೇ? ಅಥವಾ ಈ ಪ್ರದೇಶದ ಬಹುಜನ ಸಮುದಾಯಗಳ ನಂಬಿಕೆ, ಆಚರಣೆ, ಸಂಪ್ರದಾಯಗಳ ಭಾಗವಾದ ಸಾಮಾಜಿಕ ಜೀವನದ ಪ್ರತಿನಿಧಿಯೆ? ಯಾರಿರಬಹುದು?

ಈ ದೈವವನ್ನು ಬ್ರಹ್ಮನ ಮಾನಸ ಪುತ್ರಿಯೆಂದು ಕರೆದ ಪಂಪಾ ಮಹಾತ್ಮೆ ಆಕೆಯ ಕತೆಯನ್ನು ಚಾಕ್ಷುಷ ಮನ್ವಂತರದಷ್ಟು ಹಿಂದಕ್ಕೆ ತೆಗೆದುಕೊಂಡು ಹೋಗಿ ಪರಾಶಕ್ತಿ ರೂಪಿಣಿಯೆಂದು ಹೆಸರಿಸುತ್ತದೆ. ಆಕ ತನ್ನ ತಂದೆಯ ಅಪ್ಪಣೆಯಂತೆ ಹೇಮಕೂಟ ಪರ್ವತಕ್ಕೆ ಉತ್ತರಕ್ಕಿರುವ ಸರೋವರದಲ್ಲಿ ನಿತ್ಯ ಸಾನ್ನಮಾಡಿ ಉಗ್ರತಪಸ್ಸನ್ನಾಚರಿಸಿ ವಿರೂಪಾಕ್ಷನನ್ನು ಮೆಚ್ಚಿಸಿ ಆತನಿಗೆ ಸತಿಯಾಗುತ್ತಾಳೆ. ಶಿವನು ಆಕೆಯನ್ನು ಸಂತೋಷ ಪಡಿಸಲು ಈ ಕ್ಷೇತ್ರಕ್ಕೆ ಪಂಪಾಕ್ಷೇತ್ರವೆಂದೂ ಸರೋವರಕ್ಕೆ ಪಂಪಾ ಸರೋವರವೆಂದೂ ಹೆಸರಿಟ್ಟು, ಆಕೆಯನ್ನು ವರಿಸಿದ ತನ್ನನ್ನು ಪಂಪಾಪತಿಯೆಂದು ಕರೆದುಕೊಳ್ಳುತ್ತಾನೆ. ಇವು ಸ್ಥಳೀಯ ಪಂಪಾತೀರ್ಥದ ದೈವವನ್ನು ವೈದಿಕ ಸಂಸ್ಕೃತಿಯ ಶೈವಪಂಥ ತನ್ನ ತೆಕ್ಕೆಗೆ ತೆಗೆದುಕೊಳ್ಳುವ ವಿವರಗಳಾಗಿವೆ. ಹಾಗಾಗಿಯೆ ವಿರೂಪಾಕ್ಷನ ಉತ್ತರ ದಿಗ್ಭಾಗ ದಲ್ಲಿ ಪಂಪಾದೇವಿಯ ಸ್ಥಾನವಿದೆಯೆಂದು ತನ್ನ ಕತೆಗೆ ಅನುಗುಣವಾಗಿ ಆಕೆ ನೆಲೆ ನಿಂತ ಸ್ಥಾನವನ್ನು ನಿರ್ದೇಶಿಸಿ ಈ ದೈವವನ್ನೆ ದುರ್ಗೆ, ಗೌರಿ, ಮಾತೃ, ಲಲಿತೆ, ಆರ್ಯೆ ಎಂದು ಒತ್ತಿ ಹೇಳಿ, ಯಾವ ಪೀಠಗಳು ಆದಿಶಕ್ತಿಯಿಂದ ಪಾಲಿಸುವುವೋ ಆ ಪೀಠಗಳಲ್ಲಿ ಪಂಪಾ ಎಂಬ ಹೆಸರಿನ ಪರಮೇಶ್ವರಿ ವಾಸಿಸುತ್ತಾಳೆಂದೂ ಪಾರಮೇಶ್ವರಾಗಮದಲ್ಲಿ ಹೊಗಳಿರುವ ಪಂಪಾಕ್ಷೇತ್ರದ ಶಕ್ತಿ ಪಂಪಾದೇವಿಯೆ ಆಗಿದ್ದಾಳೆಂದೂ ಗಿರಿಜೆಯ ಪ್ರತಿ ರೂಪವಾಗಿ ಚಿತ್ರಿಸಿದೆ ಮತ್ತು ಶಕ್ತಿ ದೇವತೆಯನ್ನಾಗಿಸಿದೆ. ಪಂಪಾ ಸರೋವರದ ಪಂಪಾಂಬಿಕೆ ಪೀಠ ತತ್ವ ಶಕ್ತಿಗಳಿಂದ ಸುತ್ತುವರೆದಿದ್ದು ನವವಿಧ ಶಕ್ತಿಯರಿಂದ ಸೇವನೆಯಾಗುತ್ತದೆಯೆಂದೂ ಆ ಮೂರ್ತಿಯನ್ನು ಶ್ರೀಚಕ್ರ ಸಾಮ್ರಾಜ್ಞಿ ಪಂಪಾಂಬಿಕೆ ಎಂದೂ ಹೇಳಿ ಪಂಪಾಕ್ಷೇತ್ರವನ್ನು ಶಾಕ್ತ ಕ್ಷೇತ್ರವೆಂದು ಬಿಂಬಿಸಿದೆ.

ಆದರೆ ಇದೇ ಪಂಪಾ ಮಹಾತ್ಮೆ ತನ್ನ ನಿರೂಪಣೆಯಲ್ಲಿ ಸೂತ ಪುರಾಣಿಕನು ಪಂಪಾಂಬೆ ವಿರೂಪಾಕ್ಷರನ್ನು ಧ್ಯಾನಿಸಿ, ಪಂಪಾ ಮಹಾತ್ಮೆಯನ್ನು ಹೇಳದನೆಂದೂ ಪಾರ್ವತಿದೇವಿ ಭಕ್ತಿಯಿಂದ ಈ ಕಥೆಯನ್ನು ಕೇಳಿ ಷಣ್ಮುಖನನ್ನು ಕರೆದು ಅವನಿಗೆ ಹೇಳಿದನೆಂದೂ ಹೇಳಿದೆ. ಅಂದರೆ ಪಂಪಾದೇವಿಯನ್ನು ಪಾರ್ವತಿಯ ಪ್ರತಿರೂಪವಾಗಿ ಚಿತ್ರಿಸಿದರೂ ಪಾರ್ವತಿ ಮತ್ತು ಪಂಪಾದೇವಿಯನ್ನು ಏಕವಾಗಿಸಿಲ್ಲವೆಂಬುದು ಗಮನಿಸ ಬೇಕಾದ ಅಂಶ. ಹಾಗಾಗಿಯೆ ಪಂಪಾಂಬಿಕೆ ಬೇರೆ, ಗಿರಿಜೆ ಬೇರೆ ಎಂದು ಅಭಿಪ್ರಾಯವಿದೆ.

ಪಂಪಾ ಸರೋವರದ ದಡದಲ್ಲಿರುವ ದೈವವನ್ನು ಜೈನರು ಯಕ್ಷಿಯೆಂದೂ ಕರೆಯುತ್ತಾರೆ. ಇತ್ತೀಚೆಗೆ ಜಯಲಕ್ಷ್ಮಿ ಎಂದೂ ಕರೆಯುವ ರೂಢಿಯಿದೆ. ವಿ.ಸೀ. ತಮ್ಮ ಪಂಪಾಯಾತ್ರೆಯಲ್ಲಿ ಈ ದೈವವನ್ನು ಸೀತಾದೆವಿಯೆಂದು ದಾಖಲಿಸಿದ್ದಾರೆ. ಇವು ಕಾಲಾನಂತರದಲ್ಲಾದ ಬೆಳವಣಿಗೆಗಳು. ಆದರೂ ಶೈವ ಪುರಾಣ ಸ್ಥಳೀಯ ಸಂಗತಿ ಗಳನ್ನು ಉಳಿಸಿಕೊಂಡು ತನ್ನದೆ ಪರಂಪರೆಯನ್ನು ಬೆಳೆಸಲು ಪ್ರಯತ್ನಪಟ್ಟಿದೆ. ಜೈನ ಮತ್ತು ವೈಷ್ಣವ ದೃಷ್ಟಿಕೋನಗಳು ತಮ್ಮ ಮತ ಸಂಬಂಧಿತ ಗ್ರಹಿಕೆಯನ್ನು ಆರೋಪಿಸಿವೆ.

ಹೂವಿನ ಹಡಗಲಿ-ಕಂಪ್ಲಿ ಪ್ರದೇಶಗಳ ನದಿಯ ಪಕ್ಕದಲ್ಲಿ ವಾಸಿಸುವ ಜನತೆ ಆರಾಧಿಸಲು ಆರಂಭಿಸಿದ ದೈವಕ್ಕೆ ಪಂಪಾ ಎಂಬ ಹೆಸರು ಬಳಕೆಯಾಗಿದೆ. ನಂತರದಲ್ಲಿ ಬೆಳೆದ ಊರಿಗೂ ಈ ದೈವದ ಹೆಸರೇ ಬಳಕೆಗೆ ಬಂದಿದೆ ಎಂದು ಪಂಪಾಕ್ಷೇತ್ರದ ಸ್ಥಳನಾಮ ಮೂಲವನ್ನು ಸೂಚಿಸಲಾಗಿದೆ. ಈ ಅಂಶ ಪ್ರಾದೇಶಿಕ ವಿಶಿಷ್ಟತೆಯ ಪದವೊಂದು ಹೇಗೆ ಈ ಪ್ರದೇಶದ ಸಮಾಜ ಮತ್ತು ಆದರ ಸಂಸ್ಕೃತಿಯ ಭಾಗವಾಗಿದೆಯೆಂದು ಹೇಳುತ್ತದೆ. ಸ್ಥಳೀಯವಾದ ಪ್ರಾದೇಶಿಕ ದೈವಗಳಿಗೂ ಆ ಸಮಾಜದ ಸಂಪ್ರದಾಯ, ಆಚರಣೆಗಳಿಗೂ ಸಂಬಂಧ ಕಲ್ಪಿಸಿ ಇಲ್ಲಿನ ಸಾಂಸ್ಕೃತಿಕ ಮಹತಿಯನ್ನು ಕಾಣಿಸುತ್ತದೆ. ಇದು ಪಂಪಾದೇವಿ ಯಾರಾಗಿದ್ದಿರಬಹುದು ಎಂಬ ಪ್ರಶ್ನೆಗೆ ಉತ್ತರ ಅಡಗಿಸಿಕೊಂಡಂತಿದೆ. ಈ ಹಿನ್ನಲೆಯಲ್ಲಿ ಬಿಳಿಮಲೆ ತಮ್ಮ ಹಂಪಿ ಜಾನಪದದಲ್ಲಿ ನೀಡಿರುವ ವಿವರಗಳು ಮಹತ್ವದ್ದಾಗಿ ಪರಿಣಮಿಸಿವೆ.

ಇಂದು ಹಂಪಿ ಪರಿಸರದಲ್ಲಿ ವಾಸ ಮಾಡುತ್ತಿರುವ ವಿವಿಧ ಸಮುದಾಯಗಳನ್ನು ವೀರಶೈವ, ಬ್ರಾಹ್ಮಣ , ಮುಸಲ್ಮಾನ, ಕ್ರಿಶ್ಚಿಯನರು, ವಾಲ್ಮಿಕಿ ಅಥವಾ ಬೇಡರು, ಉಪ್ಪಾರ, ಕುರುಬ, ಆದಿ ಕರ್ನಾಟಕ, ಆದಿ ದ್ರಾವಿಡ, ಬೋವಿಗಳು, ಕಿಳ್ಳೆಕ್ಯಾತರು, ಕೊರವರು, ದೊಕ್ಕಲರು, ಮೇದಾರರು, ವಡ್ಡರು, ನೆವ್ವರರು,ಕೊರಚರು, ರೆಡ್ಡಿಗಳು, ಕಮ್ಮರು, ಕುಂಬಾರರು, ಬಡಿಗರು, ಅಕ್ಕಸಾಲಿಗರು, ವೇಷಗಾರರು, ಲಂಬಾಣಿಗಳು, ತಮಿಳರು, ಪಿಂಜಾರರು, ಮರಾಠಿಗರು, ಜೈನರು, ಬೆಸ್ತರು, ದಾಸರು, ತಳವಾರರು, ಅಗಸರು, ಗೊಂದಲಿಗರು, ಹಕ್ಕಿಪಿಕ್ಕಿಯರು, ದೊಂಬರು, ಹೂಗಾರರು, ಜಂಗಮರು ಎಂದು ಪಟ್ಟಿ ಮಾಡಿ, ಅವುಗಳಲ್ಲಿ ಹಂಪಿಯ ಇತಿಹಾಸದೊಂದಿಗೆ ಭಾವನಾತ್ಮಕ ಸಂಬಂಧವಿರಿಸಿಕೊಂಡಿರುವ ಸಮುದಾಯಗಳನ್ನು ವಾಲ್ಮೀಕಿ ಅಥವಾ ಬೇಡರು, ಕುರುಬರು, ಡೊಂಬರು, ದೊಕ್ಕಲರು, ಹೆಳವರು ಮತ್ತು ವೇಷಗಾರರು ಎಂದು ಗುರುತಿಸಿದ್ದಾರೆ. ಈ ಸಮುದಾಯಗಳೆಲ್ಲ ಸಮಾಜದ ತಳ ಸಮುದಾಯಕ್ಕೆ ಸೇರಿರುವುದು ಗಮನಾರ್ಹ ಸಂಗತಿ.

ವಾಲ್ಮೀಕಿ ಅಥವಾ ಬೇಡರು ಹಂಪಿ ಸುತ್ತಲ ಗ್ರಾಮಗಳಲ್ಲಿ ದೊಡ್ಡ ಸಂಖ್ಯೆಯಲ್ಲಿದ್ದು ಪ್ರಬಲರಾಗಿದ್ದಾರೆ. ಯುಗಾದಿ ಮರು ದಿವಸದ 'ಬೇಟೆ ಮರದ ಆಚರಣೆ' ಈ ಸಮುದಾಯದ ಬುಡಕಟ್ಟು ಚಹರೆಯನ್ನು ತೋರಿಸುತ್ತದೆ.

ಇವರು ಜನಪದ ದೈವಗಳನ್ನು ಪ್ರಧಾನವಾಗಿ ಆರಾಧಿಸುತ್ತಾರೆ. ಹಂಪಿ ಜಾತ್ರೆಯ ಸಂದರ್ಭದಲ್ಲಿ ವಿಶೇಷವಾಗಿ ವಿರೂಪಾಕ್ಷನಿಗೆ ನಡೆದುಕೊಳ್ಳುತ್ತಾರೆ. ದೊಕ್ಕಲರು, ತಮ್ಮ ಆರಾಧ್ಯ ದೈವವಾದ ಮಾತಂಗಿ ಇದ್ದುದು ಮಾತಂಗ ಪರ್ವತದಲ್ಲಿ ಎಂದು ನಂಬುವುದಲ್ಲದೆ, ಮಾತಂಗ ಪರ್ವತದ ಮಾತಂಗಿಯನ್ನು ದುರ್ಗಮ್ಮ, ಕಾಳಮ್ಮ, ಕನ್ನಿಕಾ ಪರಮೇಶ್ವರಿ, ಹತ್ತು ಕೈಯಮ್ಮ ಎಂದೆಲ್ಲ ಕರೆಯುತ್ತಾರೆ ಹಾಗೂ ಮಾತಂಗ ಪರ್ವತವನ್ನು

ಪವಿತ್ರವೆಂದು ಭಾವಿಸುತ್ತಾರೆ. ಹೆಳವರು ಹಂಪಿಯಿಂದ ದಕ್ಷಿಣಕ್ಕೆ ವಲಸೆ ಹೋಗುವಾಗ 'ವಿಜಯನಗರದಮ್ಮ'ಂಬ ದೈವವನ್ನು ತಮ್ಮೊಡನೆ ಕರೆದುಕೊಂಡು ಹೋದೆವೆಂದು ನಂಬಿದ್ದಾರೆ. ಕುರುಬರು ಹಂಪಿಯ ಮೂಲ ವಿರೂಪಾಕ್ಷ ಮೂಲತಃ ಬೀರಪ್ಪ ಅಥವಾ ಬೇರೆ ದೇವರು ಎಂದು ಹೇಳುತ್ತಾರೆ. ಡೊಂಬರು, ಆನೆಗೊಂದಿಯ ಐತಿಹಾಸಿಕ ವ್ಯಕ್ತಿಗಳಾದ ಕುಮಾರರಾಮ ಮತ್ತು ಕಂಪಿಲರಾಯನ ಜೀವನದಲ್ಲಿ ಪ್ರವೇಶ ಪಡೆದ ರತ್ನಾಜಿ ಅಥವಾ ರತ್ನಿ ಡೊಂಬತಿಯೆಂದು ಹೇಳಿಕೊಂಡು ಇತಿಹಾಸದೊಂದಿಗೆ ಪ್ರೇಮಮೂಲ ಸಂಬಂಧ ಸ್ಥಾಪಿಸಿಕೊಳ್ಳುತ್ತಾರೆ.

ಈ ಸಮುದಾಯಗಳು ಪರಂಪರಾಗತವಾಗಿ ಆರಾಧಿಸುಕೊಂಡು ಬಂದಿರುವ ಗ್ರಾಮ ದೇವತೆಗಳು-ಎಲ್ಲಮ್ಮ (ಕೀರಿಟದ ಎಲ್ಲಮ್ಮ ಅಥವಾ ಪಟ್ಟ ಣದ ಎಲ್ಲಮ್ಮ), ಹುಲಿಗೆಮ್ಮ, ಗಾಳೆಮ್ಮ, ಕಂಬದ ಮುದ್ದಮ್ಮ, ಗಾರವಿ ಹನುಮಪ್ಪ, ಹೇಮಗಿರಿ ಹನುಮಪ್ಪ, ಗೌಚಂದ್ರ ಮಾರಮ್ಮ, ನೀಲಮ್ಮ, ಕಾಳಮ್ಮ, ಅಂಕಲಮ್ಮ, ಗಡೇದ ದುರ್ಗಮ್ಮ, ನಗರೇಶ್ವರ, ನೆರೆಗಲ್ಲಮ್ಮ, ಸತ್ಯಮ್ಮ, ಊರಮ್ಮ, ಗರುಡೆ ಆಂಜನೇಯ, ವೀರಭದ್ರಪ್ಪ, ಹಿರೆಮಸಮ್ಮ, ಕೊರಮ್ಮ, ಕೆಂಚಮ್ಮ, ಗಾಳಿದುರ್ಗವ್ವ, ಗವಿಸಿದ್ಧೇಶ್ವರಪ್ಪ, ಗವಿರಂಗನಾಥಪ್ಪ, ಬನ್ನಿಮಾಕಾಳಿ, ದುರ್ಗಮ್ಮ, ಪಾಂಡುರಂಗಸ್ವಾಮಿ, ವಡಕಪ್ಪ, ಕಣಿವೆರಾಯ, ಜಂಬು ಕೇಶ್ವರ, ಬಂಡೆ ರಂಗಪ್ಪ, ಗೋಡೆ ಹನುಮಪ್ಪ, ಬಸವೇಶ್ವರ, ಉಗುಳದಮ್ಮ ಲಮಾರಿ, ನರಸಿಂಹ, ಕೋಟೆ ಮಾರಿ, ಚೌಡೇಶ್ವರಿ, ಗುಳ್ಳವ್ವ, ಬನ್ನಿ ಅಮ್ಮ, ಕರಿಯಮ್ಮ, ವಾಸವಿ, ಧರ್ಮರು, ಸುಂಕಲಮ್ಮ, ಕುಮಾರಸ್ವಾಮಿ, ಸೋಮನಾಥ, ಸೀಗಮ್ಮ, ಚೌಡಮ್ಮ, ಮಾರವ್ಮ, ದುರುಗಮ್ಮ, ಊರಮ್ಮ, ನಿಜಲಿಂಗಮ್ಮ ಮುಂತಾದವು. ಇವರಲ್ಲಿ ಮಾತೃ ದೇವತೆಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಈ ಸಮುದಾಯಗಳು ಮಾತೃಸಂಸ್ಕೃತಿಯನ್ನು ತಮ್ಮ ಜೀವದುಸಿರಾಗಿರಿಸಿಕೊಂಡಿವೆ.

ಇದುವರೆಗೆ ಗ್ರಾಮ ದೇವತೆ-ಗ್ರಾಮ್ಯ ದೇವತೆಗಳನ್ನು ಗುರುತಿಸಿರುವ ಅಂಶಗಳು ಹಂಪಿ ಪರಿಸರದ ಗ್ರಾಮ ದೇವತೆಗಳಿಗೂ ಅನ್ವಯವಾಗುತ್ತದೆ. ಈ ಗ್ರಾಮ್ಯ ದೈವಗಳು ಗ್ರಾಮದ ಎಲ್ಲ ಕೆಳವರ್ಗದ ಅಪೌರಾಣಿಕ ದೇವತೆಗಳಾಗಿವೆ. ಕೆಲವು ದೈವಗಳು ಉತ್ಸವ, ಜಾತ್ರೆಯಲ್ಲಿ ಊರಿನ ಎಲ್ಲ ಸಮುದಾಯಗಳು ಒಂದಲ್ಲ ಒಂದು ರೀತಿಯಲ್ಲಿ ಭಾಗಿಯಾಗಿ ಆ ಊರಿನ ಗ್ರಾಮ ದೇವತೆಗಳೂ ಎನಿಸಿವೆ. ಗ್ರಾಮ್ಯ ದೇವತೆಗಳೆಲ್ಲ ಬಹುಪಾಲು ಸ್ತ್ರೀ ದೈವಗಳಾಗಿದ್ದು, ಅವು ವಿಧವೆಯರೂ ಆಗಿರುವುದು ವಿಶೇಷ. ಪ್ರಾಚೀನ ಮಾತೃ ಪ್ರಧಾನ ಕುಟುಂಬದಲ್ಲಿ ಪುರುಷನ ಪ್ರಾಧ್ಯಾನತೆ ಸಂತತಿ ಬೆಳೆಸಲು ಸೀಮಿತವಾಗಿದ್ದರಿಂದ ಹೆಣ್ಣು ವಿಧವೆಯಾದಲ್ಲಿ ಅವಳ ಜೀವನದಲ್ಲಿ ಮತ್ತೊಬ್ಬ ಪುರುಷ ಬರುವುದು ಸಾಮಾನ್ಯ ವಾಗಿತ್ತು. ವ್ಯವಸಾಯದಲ್ಲಿ ಗಂಡಸರಿಗಂತ ಹೆಂಗಸರು ಮುಖ್ಯ ಪಾಲುದಾರರಾಗಿದ್ದರಿಂದ ಗ್ರಾಮ್ಯ ದೇವತೆಗಳಲ್ಲಿ ಬಹುಪಾಲು ಫಲಶಕ್ತಿ ದೇವತೆಗಳಿವೆ. ಕೆಳಜಾತಿಗಳ ಮನೆ

ದೇವರಾದ ಗ್ರಾಮ್ಯ ದೇವತೆಗಳು ಸಂಸ್ಕೃತೀಕರಣ ಪ್ರಕ್ರಿಯೆಗೆ ಒಳಗಾಗಿದ್ದರೂ ತಮ್ಮ ಪ್ರಾಚೀನತೆನ್ನೂ ಉಳಿಸಿಕೊಂಡು ಬಂದಿದೆ.

ಹಂಪಿ ಪರಿಸರದಲ್ಲಿ ಕಂಡು ಬರುವ ಸಾಮಾಜಿಕ ಆಚರಣೆಗಳಿಗೂ ಇಲ್ಲಿನ ಗ್ರಾಮ ದೈವಗಳ ಸಂಪ್ರದಾಯ ಆಚರಣೆಗಳಿಗೂ ಪರಸ್ಪರ ಸಂಬಂಧವಿದೆ. ಕೆಳ ಜಾತಿ ಸಮುದಾಯಗಳ ಜನರಲ್ಲಿ ಹೆಣ್ಣುಮಕ್ಕಳನ್ನು ಮನೆತನಕ್ಕೆ ನಿಲ್ಲಿಸುವ ಆಚರಣೆ ಜನಪ್ರಿಯವಾಗಿದೆ. ಇದನ್ನು ಪುರುಷ ಸಮಾಜದ ಪರಿಭಾಷೆಯಲ್ಲಿ ಬಸವಿ ಬಿಡುವುದು ಅಥವಾ ಮುತ್ತು ಕಟ್ಟಿಸುವ ಪದ್ಧತಿ ಎಂದೂ ಕರೆಯಲಾಗುತ್ತದೆ.

ಗಂಡು ಮಕ್ಕಳಿಲ್ಲದ ಅಥವಾ ಹೆಣ್ಣು ಮಕ್ಕಳನ್ನು ಹೆಚ್ಚು ಹಡೆದ ತಂದೆ ತಾಯಿಯರು ತಮ್ಮ ಮಕ್ಕಳಲ್ಲಿ ಕೆಲವರನ್ನು ಹಂಪಿ ಜಾತ್ರೆಯಂದು ಹಂಪಿ ಹೊಳೆಯ ನೀರಿನಲ್ಲಿ ಸ್ನಾನ ಮಾಡಿಸಿ ಅಥವಾ ಇನ್ನಾವುದೇ ದಿನದಂದು ಕಣಿವೆರಾಯನ ಗುಡಿ, ವಡಕರಾಯನ ಗುಡಿ, ಗಾರವಿ ಹನುಮಂತಪ್ಪನ ಗುಡಿ ಅಥವಾ ಇನ್ನಾವುದೇ ಗುಡಿಗಳಲ್ಲಿ ತಾಳಿ ಕಟ್ಟಿಸಿ ಮನೆತನಕ್ಕೆ ನಿಲ್ಲಿಸುವ ಆಚರಣೆ ನಡೆಸುತ್ತಾರೆ. ಮನೆತನದ ಹೊಣೆಹೊತ್ತ ಹೆಣ್ಣು ತನ್ನ ಜಾತಿಯ ಇಲ್ಲವೆ ಇನ್ನಿತರ ಮೇಲ್ಜಾತಿಯ ಯಾವುದೇ ಗಂಡಸಿನೊಂದಿಗೆ ಲೈಂಗಿಕ ಸಂಬಂಧ ಹೊಂದುವ ಸ್ವಾತಂತ್ರ್ಯ ಪಡೆದಿರುತ್ತಾಳೆ. ಇವರಿಗೆ ಏಕಪತಿ ನಿಷ್ಠೆ ಅಪರೂಪವೂ ಅಲ್ಲದೆ ಅನಿವಾರ್ಯವೂ ಅಲ್ಲದ ಸಂಗತಿಯಾಗಿದೆ. ತಮ್ಮ ಮನೆತನವನ್ನು ನಿರ್ವಹಿಸುವ ಮತ್ತು ಮುಂದುವರೆಸುವ ಹೊಣೆಗಾರಿಕೆಯಲ್ಲಿ ಇವರು ಪುರುಷರಂತೆ ಸ್ವತಂತ್ರರು. ಇವರ ಹೆತ್ತವರ ಪ್ರಕಾರ ಇದು ದೇವದಾಸಿ ಸಂಪ್ರದಾಯವಲ್ಲ. ಇದು ಕೀಳಾಗಿ ಕಾಣುವ ಸಂಗತಿಯೂ ಅಲ್ಲವಾದ್ದರಿಂದ ಈ ಸಂಪ್ರದಾಯವನ್ನು ನಿಲ್ಲಿಸುವಂತಿಲ್ಲ. ಪುರುಷ ಪ್ರಧಾನ ಸಮಾಜದ ಪುರುಷ ಯಜಮಾನಿಕೆಯನ್ನು ಗೌಣದಿಂದ ಸಂಪ್ರದಾಯ ಹೆಣ್ಣಿಗೆ ಪುರುಷ ಸಮಾಜ ವಿಧಿಸಿದ ಎಲ್ಲ ಬಂಧನಗಳಾಚೆ ಸ್ವಾತಂತ್ರ್ಯವನ್ನು ನೀಡುತ್ತದೆ. ಆದರೆ ಇವರನ್ನು ಪುರುಷ ಸಮಾಜ ದೇವದಾಸಿಯರಂತೆ ನಡೆಸಿಕೊಂಡಿದೆ. ತಳವರ್ಗಗಳ ಮಾತೃ ಸಂಸ್ಕೃತಿಯ ಆಶಯ ಗಳನ್ನು ಗೌಣಗೊಳಿಸಿ ಪುರಾಷನುಕೂಲತೆಗೆ ಒಗ್ಗಿಸಿಕೊಂಡಿದೆ. ಶಕ್ತಿ(ಮಾತೃ)ದೇವತಾ ಪದ್ಧತಿ ಆರ್ಯೇತರ ಗುಂಪುಗಳಲ್ಲಿ ಹುಟ್ಟಿ ಆಮೇಲೆ ಆದಿವಾಸಿ ಹಾಗೂ ಗ್ರಾಮೀಣ ಜನಾಂಗದಲ್ಲಿ ಪ್ರಸಾರ ಹೊಂದಿ ಹಿಂದೂ ಆಚರಣೆಯಲ್ಲಿ ಐಕ್ಯ ಹೊಂದಿತು ಎಂದು ದೇವದಾಸಿ ಸಂಪ್ರದಾಯದ ಹುಟ್ಟು ಮತ್ತು ಬೆಳವಣಿಗೆಯನ್ನು ಗುರುತಿಸುವ ಜೋಗನ್ ಶಂಕರ್‌ರ ಮಾತು ಇಲ್ಲಿಯ ಸಂದರ್ಭಕ್ಕೆ ಹೆಚ್ಚು ಒಪ್ಪುತ್ತದೆ.

ಹಂಪಿ ಪರಿಸರದ ತಳವರ್ಗಗಳಲ್ಲಿ ಮಾತೃ ಸಂಸ್ಕೃತಿ ಗೋಚರವಾಗಿನ್ನೂ ನೆಲೆಸಿದೆ. ಆದರ ಪ್ರತಿರೂಪವಾದ ಗ್ರಾಮ್ಯ-ಗ್ರಾಮ ದೇವತೆಗಳು ಆಯಾ ಊರು-ಕೇರಿಗಳನ್ನು ಆವರಿಸಿಕೊಂಡಿವೆ. ಅವೆಲ್ಲದರ ಪ್ರಾತಿನಿಧಿಕ ಮತ್ತು ಸಂಸ್ಕೃತೀಕರಣಕ್ಕೆ ಒಳಪಟ್ಟ ದೈವವಾಗಿ ಪಂಪಾತೀರ್ಥ-ಕ್ಷೇತ್ರದ ಪಂಪಾದೇವಿ ಕಾಣಿಸುತ್ತಾಳೆ.

ಪ್ರಾಚೀನ-ಅರ್ವಾಚೀನ

ರಾಮಾಯಣದ ಪಂಪಾ ಸರೋವರ ಮತ್ತು ಪಂಪಾ ವನಗಳ ವರ್ಣನೆಯನ್ನು ಸಾಮಾನ್ಯವಾಗಿ ಪಂಪಾಕ್ಷೇತ್ರದ ಅತಿ ಪ್ರಾಚೀನ ಮತ್ತು ಮೊಟ್ಟಮೊದಲ ಉಲ್ಲೇಖವೆಂದು ಹೇಳಲಾಗುತ್ತದೆ. ಆದರೆ ಇದು ತುಂಗಭದ್ರ ನದಿ ದಂಡೆಯ ಸರೋವರವೇ ಅಲ್ಲವೇ ಎಂಬುದರ ಬಗ್ಗೆ ಅಧ್ಯಯನಗಳು ದೃಢಪಡಿಸಬೇಕಿದೆ. ರಾಮಾಯಾಣ ಪಂಪಾ ಕ್ಷೇತ್ರವನ್ನೆ ಪ್ರಸ್ತಾಪಿಸಿದೆಯೆಂದು ನಂಬಿರುವ ಪರಿಣಾಮವಾಗಿ ಇಲ್ಲಿ ಅಂಜನಾದ್ರಿ ಬೆಟ್ಟ, ಸುಗ್ರೀವ ಗುಹೆ, ಸೀತೆ ಸೆರಗು ಮೊದಲಾದ ಹಲವಾರು ಸ್ಥಳಪುರಾಣಗಳು ಹುಟ್ಟಿಕೊಂಡಿವೆ. ಇದರಿಂದ ಈ ಪ್ರದೇಶವನ್ನು ರಾಮಾಯಣ ಕಾಲದ ಕಿಷ್ಕಿಂದೆಯೆಂದು ನಂಬಲಾಗಿದೆ. ಈ ಐತಿಹ್ಯಗಳನ್ನು ಆಧರಿಸಿ ಹುಯಿಲಗೋಳ ನಾರಾಯಣರಾಯರು ಪಂಪಾ ಕ್ಷೇತ್ರವನ್ನು 'ಹನುಮನುದಿಸಿದ ನಾಡೆ' ಎಂದು ಹಾದಿದ್ದಾರೆ.

ವೇಂಕಟಾಪುರದ ಬಳಿಯ ವಾಲಿ ದಿಬ್ಬ, ವಿಠಲ ದೇವಾಲಯ ಬಳಿ ಇರುವ ಮೊಸಳೆಯ್ಯನ ಗುಡ್ಡ, ಪಾಪಿನಾಯಕನಹಳ್ಳಿ ಬಳಿಯ ಗುಹೆಗಳು, ವಿರೂಪಾಕ್ಷ ದೇವಾಲಯದ ಹಿಂದುಗಡೆ ಮತ್ತು ಹೇಮಕೂಟ ಪಕ್ಕದಲ್ಲಿರುವ ಪ್ರಾಗೈತಿಹಾಸ ಕಾಲದ ಕೆಂಪು ವರ್ಣ ಚಿತ್ರಗಳ ಆಧಾರದ ಮೇಲೆ ಪಂಪಾಕ್ಷೇತ್ರ ಪ್ರಾಗೈತಿಹಾಸಕ ಕಾಲದಲ್ಲೂ ಅಸ್ತಿತ್ವದಲ್ಲಿತ್ತು ಎಂದು ಗುರುತಿಸಲಾಗಿದೆ. ಅಲ್ಲದೆ ಚಕ್ರತೀರ್ಥದಲ್ಲಿ ಸ್ನಾನಮಾಡಿ ದಡದ ಮೇಲೆ ಬೆಟ್ಟದ ಇಳಿಜಾರಿನಲ್ಲಿ ಸಣ್ಣ ಕಲ್ಲುಗಳ ಸಣ್ಣ ಮಂಟಪ ಕಟ್ಟಿ, ಬಟ್ಟೆಯಲ್ಲಿ ಸುತ್ತಿದ ಸಣ್ಣ ಕಲ್ಲನ್ನು ಅಲ್ಲಿನ ಗಿಡಮರವೊಂದಕ್ಕೆ ಕಟ್ಟುವುದರಿಂದ ಇಷ್ಟಾರ್ಥ ಸಿದ್ಧಿಸುವುದೆಂಬ ನಂಬಿಕೆ ಮತ್ತು ಅಂಥ ಆಚರಣೆ ಪ್ರಾಗೈತಿಹಾಸಿಕ ಕಾಲದಿಂದ ನಡೆದು ಬಂದದ್ದೆಂದು ಹೇಳಲಾಗಿದೆ. ಈ ಮೂಲಕ ಪಂಪಾ ಸರೋವರ ಎಂಬ ಪುರಾಣ ಕಲ್ಪನೆಗಿಂತ ವಾಸ್ತವಕ್ಕೆ ಹತ್ತಿರವಾದ ನದಿ ಮೂಲ ಕಲ್ಪನೆಯೆ ಐತಿಹಾಸಕ ಆಧಾರವುಳ್ಳದ್ದೆಂಬ ವಾದವಿದೆ. ಇದಕ್ಕೆ ಹಂಪೆಯ ಕವಿ ಹರಿಹರ ಪಂಪಾಕ್ಷೇತ್ರದಲ್ಲಿ 'ಹಿರಿಯ ಹಂಪಾದೇವಿ ನಲವಿಂದಲೊಪ್ಪುತಿರೆ' ಎಂದು ಹದಿಮೂರನೆಯ ಪೂರ್ವಾರ್ಧ ಶತಮಾನ ದಲ್ಲಿದ್ದ ದಟ್ಟ ಪೌರಾಣಿಕ ಮತ್ತು ಶೈವ ಪ್ರಧಾನ ಮನಸ್ಥಿತಿಯನ್ನು ಕಟ್ಟಿಕೊಟ್ಟಿದೆ ಆಧಾರ. ಆದರೆ ಮೂಡಲದಲ್ಲಿ ಕಿನ್ನರೇಶ್ವರ, ತೆಂಕಣದಲ್ಲಿ ಜಂಬುಕೇಶ್ವರ, ಪಶ್ಚಿಮದಲ್ಲಿ ಸೋಮೇಶ್ವರ, ಉತ್ತರದಲ್ಲಿ ವಾಣಿ ಭದ್ರೇಶ್ವರರು ನೆಲೆಸಿದ ಪಂಪಾಪುರದ ಗಡಿರೇಖೆಗಳನ್ನು ಸೂಚಿಸಿದ ಹರಿಹರನ ಶೈವನಿಷ್ಠೆ ಪಂಪಾ ಪುರಾಣ ಜಗತ್ತಿನ ವಾಸ್ತವವನ್ನು ಸಮರ್ಥಿಸುವ ಕಾರ್ಯವೂ ಮುಂದುವರೆದಿದೆ. ಪಂಪಾ ಸರೋವರವೆ ಪಂಪಾಕ್ಷೇತ್ರದ ಆದಿಯೆಂದೂ ದೇವತೆ ಮೊದಲು ಆಮೇಲೆ ಊರು ಎಂದೂ ಪ್ರತಿಪಾದಿಸಿ ಶೈವ ಹಿರಿಮೆ ಸಾರಲಾಗಿದೆ. ಪಂಪಾ ಮಹಾತ್ಮೆಯಲ್ಲಿ ಉಲ್ಲೇಖಿತವಾಗಿರುವ 'ಪಂಪಾ ತಾಯಿಲಿಂದ ಹಂಪೀಗೆ ಹೆಸರಾತು!ಹಂಪವ್ವನ ಒರಗಿದ ಪಂಪಾಪತಿ. ತಾನು!ಪಂಪಾ ಸರುವರದಾಗ ಕುಳತಾನ' ಜನಪದ ತ್ರಿಪದಿ ಪಂಪಾದೇವಿ ಮತ್ತು ಪಂಪಾ ಸರೋವರವೆ ಪಂಪಾಕ್ಷೇತ್ರದ ಮೂಲ ವೆಂದು ಸಾರುತ್ತದೆ.

ಹೀಗೆ ಪಂಪಾಕ್ಷೇತ್ರದ ಪ್ರಾಚೀನತೆ ಪುರಾಣ ಕತೆಗಳೊಂದಿಗೆ ಹೆಣೆದುಕೊಂಡಿದ್ದರೂ ಈ ನೆಲೆಯ ಕೆಲವು ಪ್ರಾಚೀನ ಕುರುಹುಗಳು ಪ್ರಾಗೈತಿಹಾಸಕ ಕಾಲಕ್ಕೆ ಸೇರಿದ್ದೆಂದು ನಿರ್ಧರಿಸಲು ಸಹಾಯಕವಾಗಿವೆ. ಇದರೊಂದಿಗೆ ಈ ಸ್ಥಳದ ತೀರ್ಥವನ್ನು ಕುರಿತು ಮಾನವ ನಂಬಿಕೆಯ ಚಾರಿತ್ರಿಕ ಘಟ್ಟವನ್ನು ಗುರುತಿಸುವ ಪ್ರಯತ್ನವೂ ನಡೆದಿದೆ. ನಂಬಿಕೆಯ ಮೂಲವಾದ ನೆಲೆ ನದಿಯೋ ಸರೋವರವೋ ಎಂಬ ಬಗ್ಗೆ ತಿರುಳಿಗಿಂತ ವಾದದ ಬಿರುಸು ಮುಂದಿದೆ. ಗಿಡಮರಗಳಿಗೆ ಕಲ್ಲು ಕಟ್ಟುವ ಅಥವಾ ಸಣ್ಣಕಲ್ಲಿನ ಮಂಟಪ ಕಟ್ಟುವ ಆಚರಣೆಯ ಮೂಲ ತಾಣ, ಫಲಪೂಜೆ ಆಚರಣೆಯ ಮೂಲತಾಣ, ಮತ್ತು ಹಂಪಿ ಪರಿಸರಿದ ತಳವರ್ಗದ ಜನತೆ ತಮ್ಮ ಮಾತೃ ಸಂಸ್ಕೃತಿಯಂತೆ ಮನೆತನಕ್ಕೆ ನಿಲ್ಲುವ ಆಚರಣೆಯ ಮೂಲತಾಣಗಳೆಲ್ಲ ನದಿಯನ್ನೆ ಕೇಂದ್ರವಾಗಿರಿಸಿದೆ ಮತ್ತು ಪಂಪಾ ಪದದ ಮೂಲ ನದಿಯ ಆಗಿರುವುದರಿಂದ ಈ ಕ್ಷೇತ್ರದ ಮೂಲವನ್ನು ನದಿಯೆ ಬಿಂಬಿಸುತ್ತದೆಂದು ಹೇಳಬಹುದು. ಪಂಪಾತೀರ್ಥದ ದೈವ ಕಲ್ಪನೆ ಯಾವ ಕಾಲಘಟ್ಟದಲ್ಲಿ ಮೂಡಿತೆಂದು ಹೇಳಲು ಆಧಾರಗಳಿಲ್ಲದಿದ್ದರೂ ಜನಪದ ನಂಬಿಕೆಯೂ ಶೈವ ಪುರಾಣವನ್ನು ಅನುಸರಿಸಿದೆ. ಇನ್ನು ಹರಿಹರನ ಕಾಲಕ್ಕೆ ಪಂಪಾಕ್ಷೇತ್ರ ಸುಪ್ರಸಿದ್ದ ಶೈವಕ್ಷೇತ್ರವಾಗಿತ್ತು ಎಂಬುದು ತಿಳಿದ ಸಂಗತಿಯೆ.

ಇನ್ನೂ ಶಾಸನಗಳಲ್ಲಿ ಪಂಪಾಕ್ಷೇತ್ರವನ್ನು ಉಲ್ಲೇಖಿಸುವ ಮೊದಲು ಶಾಸನ ಕ್ರಿ.ಶ. ೬೮೯ರ ಕಾಲಕ್ಕೆ ಸೇರಿದೆ. ಕ್ರಿ.ಶ.೧೧೯೯ರ ಶಾಸನ ಪಂಪಾದೇವಿಯನ್ನು ಪ್ರಸ್ತಾಪಿಸಿರುವ ಮೊದಲು ಶಾಸನ. ಎಲ್ಲಮ್ಮ ದೇವತೆ ಬಗ್ಗೆ ಕ್ರಿ.ಶ.೧೪೨೫, ಹೊಸವೂರು ಮಹಾತಾಯಿ ಕುರಿತು ಕ್ರಿ.ಶ.೧೫೧೪, ಮಹಾಮಾಯಿ ಗುಡಿ ಮತ್ತು ಮಾತಂಗಿ ಗುಡಿ ಕಟ್ಟಿಸಿದ ಬಗ್ಗೆ ಕ್ರಿ,ಶ ೧೫೨೬, ಹೊಸೂರಮ್ಮ ಕುರಿತು ಕ್ರಿ.ಶ. ೧೫೫೦. ಕ್ರಿ.ಶ. ೧೬೪೩ರ ಶಾಸನಗಳು ಸ್ತ್ರೀ ದೈವಗಳ ಬಗೆಗಿವೆ. ವಿದ್ವಾಂಸರು ಗುರುತಿಸಿರುವ ಹಂಪಿಗೆ ಮತ್ತು ಹಂಪಿ ಪರಿಸರದ ಸ್ತ್ರೀ ದೈವಗಳಿಗೆ ಸಂಬಂಧಿಸಿದ ಈ ಶಾಸನಗಳಿಂದ ಪಂಪಾಕ್ಷೇತ್ರ ಚಾರಿತ್ರಿಕ ಆಕರಗಳಲ್ಲಿ ಮೊದಲಿಗೆ ನಮೂದಾದ ಕಾಲಘಟ್ಟ ಮತ್ತು ಮಾತೃಮೂಲವಾದ ಪಂಪಾತೀರ್ಥ ಪರಿಸರದಲ್ಲಿ ಸ್ತ್ರೀ ದೈವಗಳು ಚರಿತ್ರೆಯ ವಿವಿಧ ಕಾಲದಲ್ಲಿ ಹೇಗೆ ಸಮಾಜದ ಉನ್ನತ ವರ್ಗದಿಂದ ಮಾನ್ಯತೆ ಹೊಂದಿ ಪುರಸ್ಕೃತಿತವಾಗಿದ್ದವೆಂದು ತಿಳಿಯುತ್ತದೆ. ಪಂಪಾದೇವಿ ಕುರಿತು ಶಾಸನ ಈ ಕ್ಷೇತ್ರದ ಮೂಲ ದೇವತೆ ಎಲ್ಲ ಕಾಲದಲ್ಲೂ ಉಚ್ಛ್ರಾಯ ಮತ್ತು ಪ್ರಧಾನವಾಗಿದ್ದುದನ್ನು ಸೂಚಿಸುತ್ತದೆ.

ಇಂದಿಗೂ ಹಂಪಿ ಪರಿಸರದಲ್ಲಿ ದುರ್ಗಾಗುಡಿ, ಪಂಪಾದೇವಿ ದೇವಾಲಯ, ಎಲ್ಲಮ್ಮ, ದುರ್ಗಾದೇವಿ, ಕೆಂಚಮ್ಮ, ಮದಗಮ್ಮ, ಹತ್ತು ಕೈಯಮ್ಮ, ಗಂಗಮ್ಮ, ಹುಲಿಗಮ್ಮ, ಗಾಳೆಮ್ಮ ಮುಂತಾದ ಬೇರೆ ಬೇರೆ ಹೆಸರುಗಳಲ್ಲಿ ದೇವಲಾಯದಲ್ಲಿರುವ ಮತ್ತು ಇಲ್ಲದ ಸ್ತ್ರೀ ಮೂರ್ತಿಗಳು, ಗೆರೆ ಕೊರೆದ ಸ್ತ್ರೀ ಆಕಾರಗಳು ಕಂಡುಬರುತ್ತವೆ.

ಇವುಗಳಿಗೆ ಕರ್ನಾಟಕದ ದೂರ ದೂರದ ಊರುಗಳಿಂದ ಜನ ಬಂದು ನಡೆದುಕೊಳ್ಳುತ್ತಾರೆ. ಸ್ತ್ರೀ ದೇವತೆಯ ಆರಾಧನೆ ಇಲ್ಲಿ ಜನಪ್ರಿಯವಾಗಿದ್ದು ವರ್ಷದ ಆಯಾಯ ಕಾಲದಲ್ಲಿ ಆಚರಣೆಗಳು ಯಾವ ಸದ್ದು ಗದ್ದಲಗಳಿಲ್ಲದೆ, ವಿಜೃಂಭಣೆ ಮೆರವಣಿಗೆಗಳಿಲ್ಲದೆ ಸಾಂಗವಾಗಿ ನಡೆಯುತ್ತದೆ.

ಹಂಪಿ ಆಚರಣೆಗಳು

ಪಂಪಾದೇವಿ ಮತ್ತು ಪಂಪಾಪತಿಗೆ ಸಂಬಂಧಿಸಿದ ಫಲಪೂಜೆ ಮತ್ತು ಹಂಪಿ ಜಾತ್ರೆಗಳಲ್ಲಿ ಹಂಪಿ ಪರಿಸರದ ಸುತ್ತಲ ಗ್ರಾಮಗಳ ಜನ ಪ್ರವಾಹದ ಸಂಖ್ಯೆಯಲ್ಲಿ ಸೇರುತ್ತಾರೆ. ಪ್ರತಿವರ್ಷ ಡಿಸೆಂಬರ್ ತಿಂಗಳನಲ್ಲಿ ನಡೆಯುವ ಫಲಪೂಜೆ ಆಚರಣೆಯಲ್ಲಿ ಜಾತ್ರೆ ನಡೆಸಲು ತೀರ್ಮಾನಿಸಲಾಗುತ್ತದೆ. ಈ ಸಂದರ್ಭದಲ್ಲಿ ಹಂಪಿಗೆ ಬಂದ ಜನ ಹೆಣ್ಣು ಮತ್ತು ಗಂಡಿನ ಕಡೆಯವರೆಂದು ಎರಡು ಗುಂಪುಗಳಾಗಿ, ಉತ್ತರಕ್ಕೆ ತಿರುಗುವ ನದಿ ದಂಡೆಯ ತೀರ್ಥದ ಬಳಿ ಕೂಡಿ ಆಚರಣೆ ನಡೆಸುತ್ತಾರೆ. ಗಂಡಿನ ಕಡೆಯವರು ಹೆಣ್ಣುಕೇಳಲು ಹೋಗುವಾಗ ಅನುಸರಿಸುವ ಎಲ್ಲ ಆಚರಣೆಗಳನ್ನು ಮಾಡಲಾಗುತ್ತದೆ. ಎರಡೂ ಕಡೆಯವರು ಪರಸ್ಪರ ಭೇಟಿಮಾಡಿ ವೀಳ್ಯ ವಿನಿಮಯ ಮಾಡಿಕೊಂಡು ರಾತ್ರಿಯ ಬಲು ಹೊತ್ತಿನವರೆಗೆ ಸಂಬಂಧ ಕುದುರಿಸುವ ಮಾತುಕತೆ ಜೋರಾಗಿ ನಡೆಸುತ್ತಾರೆ. ಕೊನೆಗೆ ದೈವಗಳ ಮದುವೆ ನಿಶ್ಚಯವಾಗುತ್ತದೆ. ಅದರಂತೆ ಮಾರ್ಚ್ ಅಥವಾ ಏಪ್ರಿಲ್ ತಿಂಗಳಲ್ಲಿ ನಡೆಯುವ ಹಂಪಿಯ ಜಾತ್ರೆಯಂದು ದೇವಸ್ಥಾನದಲ್ಲಿ ಪಂಪಾದೇವಿ ಮತ್ತು ಪಂಪಾಪತಿಯರ ಮದುವೆ ನಡೆಯುತ್ತದೆ. ಸಾಮಾನ್ಯ ಮನುಷ್ಯರ ಮದುವೆ ಆಚರಣೇಗಳನ್ನೆಲ್ಲ ಈ ಮದುವೆಯಲ್ಲೂ ನಡೆಸಲಾಗುತ್ತದೆ. ತೇರನ್ನು ಮೊದಲು ಎಳೆಯುವ ಜವಾಬ್ದಾರಿ ಸ್ಥಳೀಯ ಬೇಡ ಜನರಿಗೆ ಸೇರಿದ್ದು. ಅವರು ಮೆರವಣಿಗೆಯಲ್ಲಿ ಬಂದು ಪೂಜೆ ಸಲ್ಲಿಸುತ್ತಾರೆ. ಅವರು ತೇರು ಎಳೆಯದಿದ್ದಲ್ಲಿ ಬೇರಾರೂ ಈ ಕಾರ್ಯ ಮಾಡುವಂತಿಲ್ಲ. ನಂತರ ಗೌರವದೊಂದಿಗೆ ಅವರನ್ನು ಅವರ ಸ್ಥಳಗಳಿಗೆ ಕಳುಹಿಸಿ ಕೊಡಲಾಗುತ್ತದೆ . ಈ ಎರಡೂ ಆಚರಣೆಗಳಲ್ಲಿ ಮದುವೆಯೆಂಬ ಸಾಮಾಜಿಕ ಸಂಸ್ಥೆಯ ಮೇಲೆ ಧಾರ್ಮಿಕ ಮುಸುಕು ಆವರಿಸಿಕೊಂಡಿದೆ.

ಮದುವೆ ಆಚರಣೆಯ ಆಯಾಮಗಳು

ಹಂಪಮ್ಮ ವಿರೂಪಾಕ್ಷರ ಮದುವೆಯನ್ನು ಏಕೆ ಆಚರಿಸಲಾಗುತ್ತದೆ? ಮನುಷ್ಯ ಸಂಬಂಧಗಳ ಪುನರಭಿನಯದಲ್ಲಿ ದೈವಲೀಲೆಯನ್ನು ಕಂಡು ಆನಂದಿಸುವುದಕ್ಕಾಗಿಯೇ? ಧಾರ್ಮಿಕಾಚರಣೆಗಳ ಆಳದಲ್ಲಿ ಸಾಮಾಜಿಕ ವಾಸ್ತವವನ್ನು ಮನಗಾಣಿಸಲೆಂದೆ?ದೈವ ಕಲ್ಪನೆ ಭಾರತೀಯ ಸಮಾಜದ ಸುಪ್ತ ಮನಸ್ಸಿನ ಚಟುವಟಿಕೆಗಳಿಗೆ ನೇರ ಸಂಬಂಧ ಹೊಂದಿದೆ. ಬಹು ಸಮುದಾಯಗಳ ಸಮಾಜದಲ್ಲಿ ಅದು ಸಾಂಸ್ಕೃತಿಕ ಯಜಮಾನಿಕೆ

ರೂಪಿಸುವ ಮತ್ತು ಹೇರುವ ಪರಿಕರವಾಗಿ ಬಳಕೆಯಾಗಿದೆಯೆ? ವೈದಿಕ ಶೈವ ಮತ್ತು ವೈಷ್ಣವ ಶಾಖೆಗಳು ಇಲ್ಲಿ ಬೇರುಬಿಟ್ಟಿವೆ. ಇದು ಜೈನರ ಧಾರ್ಮಿಕ ಸ್ಥಲ ಮಾತ್ರವಾಗಿರದೆ ಅನೇಕ ಅವೈದಿಕ ಪಂಥಗಳ ಕೇಂದ್ರಸ್ಥಾನವೂ ಆಗಿತ್ತೆಂದು ತಿಳಿಯುತ್ತದೆ. ಧಾರ್ಮಿಕ ರಾಜಕಾರಣದಲ್ಲಿ ಉಳಿದ ಬಲಹೀನ ಮತಪಂಥಗಳು ಮೂಲೆಗುಂಪಾಗಿ ಶೈವ ಮತ್ತು ವೈಷ್ಣವ ಪ್ರಧಾನ ನೆಲೆಗ ಏರಿದಂತೆಯೂ ಕಾಣುತ್ತದೆ. ಧರ್ಮದ ಪರಮ ಪದಕ್ಕಾಗಿ ಇವರೆಡೂ ಶಾಖೆಗಳ ನಡುವೆ ಸಾಂಸ್ಕೃತಿಕ ಸಂಘರ್ಷಗಳು ನಡೆದಿವೆ. ಇದರ ಪರಿಣಾಮವಾಗಿ ಹಂಪೆ ವೈಷ್ಣವ ಪರಂಪರೆ ಬಿಂಬಿಸಲು ರಾಮನ ಬಂಟ ಹನುಮನು ದಿಸಿದ ಕಿಷ್ಕಿಂದೆಯ ನಾಡಾಗಿಯೂ ಪ್ರಸಿದ್ಧಿ ಪಡೆದಿದೆ. ಹಾಗೆಯೆ ಶೈವ ಪರಂಪರೆಯ ಪ್ರತೀಕವಾಗಲು ಪಂಪಾದೇವಿ ವಿರೂ ಪಾಕ್ಷರ ಮಿಲನದ ತಾಣವಾಗಿ ಪರಿಣಮಿಸಿದೆ. ಇಲ್ಲಿಯ ಸ್ಥಳ ಪುರಾಣವನ್ನು ಶೈವ ಪುರಾಣ ತನ್ನ ಗಟ್ಟಿನೆಲೆಯನ್ನಾಗಿ ಮಾಡಿಕೊಂಡಿದೆ. ಹಾಗಾಗಿಯೆ ಆನೆಗೊಂದಿ ಪ್ರದೇಶದ ಸರೋ ವರಕ್ಕೂ ದೈವತ್ವಕ್ಕೇರಿಸಿದ ನದಿಯ ಸ್ತ್ರೀರೂಪವಾದ ಪಂಪಾದೇವಿಗೂ ಹಂಪಮ್ಮ ಮತ್ತು ಶಿವನ ಮದುವೆಯ ತಾಣಕ್ಕೂ ಶಿವನಿಗೂ ಸಂಬಂಧ ಕಲ್ಪಿಸಿ ಪಂಪಾತೀರ್ಥ-ಪಂಪಾಕ್ಷೇತ್ರವನ್ನು ಶೈವಕ್ಷೇತ್ರವನ್ನಾಗಿ ಪರಿವರ್ತಿಸಿತು. ಪಂಪಾ ದೇವಿಗೆ ಒಲಿದ ಪಂಪಾಪತಿಯೇ ಇಂದಿಗೂ ಇಲ್ಲಿಯ ಪ್ರಧಾನ ದೈವವಾಗಿ ಪ್ರತಿಷ್ಠಾಪಿತವಾಗಿದೆ. ಈ ಧರ್ಮ ರಾಜಕಾರಣದ ಆಧಾರ ಪಠ್ಯಗಳಾಗಿ ವೈಷ್ಣವ ಪಂಥಕ್ಕೆ ರಾಮಾಯಣದ ಕಿಷ್ಕಿಂದೆ ಕಾಂಡ ಅನುಕೂಲವಾಗಿ ಒದಗಿ ಸುಗ್ರೀವನ ಗುಹೆ, ಸೀತೆ ಸೆರಗು ಮತ್ತು ಅಂಜನಿ ಬೆಟ್ಟ ಕುರಿತ ಐತಿಹ್ಯಗಳು ಮೌಖಿಕ ಪರಂಪರೆಯಲ್ಲಿ ಕಾರ್ಯ ನಿರ್ವಹಿ ಸುತತ್ತಿವೆ. ಶೈವ ಪಂಥದ ಪರವಾಗಿ ಶೈವ ಪುರಾಣಗಳು, ಹರಿಹರನ ಗಿರಿಜಾ ಕಲ್ಯಾಣ ನೆರವಿಗಿವೆ. ಅಲ್ಲದೆ ವಿರೂಪಾಕ್ಷ ದೇವಾಲಯಕ್ಕೆ ಶಂಬಂಧಿಸಿದ ಫಲಪೂಜೆ ಮತ್ತು ಜಾತ್ರೆಗಳ ಸಂದರ್ಭದಲ್ಲಿ ನಾಡಿನ ಮೂಲೆಮೂಲೆಯಿಂದ ಮಹಾಪೂರವೆ ಹರಿದು ಬರುವ ವೀರಶೈವ ಮತಾನುಯಾಯಿಗಳು ಮತ್ತು ಸ್ಥಳೀಯ ಕೆಳಸಮುದಾಯಗಳು ಪ್ರತಿ ವರುಷ ಜರುಗುವ ಧಾರ್ಮಿಕ ಕಾರ್ಯಕಲಾಪಗಳಿಗೆ ಸಾಕ್ಷಿಯಾಗಿದೆ.

ಈ ಶಿಷ್ಟ ದೈವಗಳೊಂದಿಗೆ ಇಂದಿಗೂ ವಿಜಯನಗರದ ಹಾಳು ಪಟ್ಟಣದಲ್ಲಿರುವ ಮತ್ತು ಬಹಳ ಹಿಂದಿನಿಂದಲೂ ಆರಾಧಿಸಿಕೊಂಡು ಬಂದಿರುವ ಬೇರೆ ಬೇರೆ ಹೆಸರಿನ ಸ್ಥಳೀಯ ದೈವಗಳು ಅವೈದಿಕ ಮತ್ತು ಕೆಳ ಸಮುದಾಯಗಳ ದೇವತೆಗಳಿವೆ. ಹೀಗಿಲ್ಲಿ ಒಂದೆಡೆ ಪಂಪಾಪತಿ ಪ್ರಧಾನವಾಗುಳಿದು ಶಿಷ್ಟ ಮತ್ತು ಪರಿಶಿಷ್ಟರ ಆರಾಧನೆಗೆ ಒಳ ಗಾಗಿದ್ದರೆ ಇನ್ನೊಂದೆಡೆ ಮುಂಚೂಣಿಗೆ ಬಾರದ ಸ್ಥಳೀಯ ಕೆಳ ಸಮುದಾಯಗಳಿಂದ ನಿತ್ಯ ಪೂಜೆಗೆ ಒಳಗಾಗಿರುವ ಸ್ತ್ರೀ ದೈವಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿವೆ. ಹಂಪೆ ಪಂಪಾದೇವಿಯ ನೆಲೆಯಾದರೂ ಇಲ್ಲಿ ತಳ ಸಮುದಾಯಗಳ ಪ್ರತಿನಿಧಿಯಂತಿರುವ ಪಂಪಾದೇವಿಯನ್ನು ವರಿಸಿದ ಉನ್ನತ ಸಮುದಾಯದ ದೈವವಾದ

ಶಿವನೇ ಪ್ರಧಾನ ದೈವವಾಗಿದ್ದಾನೆ. ಇದು ಸ್ಥಳೀಯ ಜನ ಸಮುದಾಯಗಳ ಹಾಗೆ ಸ್ಥಳೀಯ ದೈವಗಳು ಅಧೀನಕ್ಕೊಳಪಟ್ಟು ಮೂಲೆ ಗುಂಪಾಗಿರುವುದನ್ನು ಕಾಣಿಸುತ್ತದೆ.

ವಿಜಯನಗರ ಸ್ಥಾಪನೆಯ ಆರಂಭದಿಂದಲೂ ರಾಜವಂಶದವರಿಂದ ಪೂಜಿಸಲ್ಪಟ್ಟ ಇಲ್ಲಿಯ ಶೈವ ಪರಂಪರೆ ಎಲ್ಲಕಾಲಕ್ಕೂ ಮಾನ್ಯವಾಗಿದೆ. ಹಂಪೆಯ ದೈವ ವೈದಿಕಕುಲ ಸಂಜಾತನಾಗಿದ್ದು ಪರಿಶಿಷ್ಟರ ಮನೆಯಳಿಯನಾಗಿದ್ದಾನೆ. ವಿರೂಪಾಕ್ಷ ದೇವಾಲಯದಲ್ಲಿ ವಿರೂಪಾಕ್ಷನ ಪತ್ನಿಯರ ಸಾಲಿನಲ್ಲಿ ಪಾರ್ವತಿ, ಭುವನೇಶ್ವರಿಯೊಂದಿಗೆ ಪಂಪಾದೇವಿ ಯನ್ನೂ ಇರಿಸಲಾಗಿದೆ. ಇವರು ಶಿವನ ಸಜಾತೀಯ, ಕನ್ನಡ ಮತ್ತು ಕೆಳ ಸಮುದಾಯ ಕುಲಗಳಿಗೆ ಸೇರಿರುವುದು ಮೇಲ್ನೋಟಕ್ಕೆ ಕಾಣುವ ಅಂಶ. ಅಂದರೆ ವೈದಿಕ ಮನುಧರ್ಮ ಶಾಸ್ತ್ರ ನಿರೂಪಿತ ಮದುವೆ ನಿಯಮಗಳನ್ನು ಚಾಚೂ ತಪ್ಪದೆ ಈ ಶಿಷ್ಟದೈವ ಪಾಲಿಸಿದೆ. ಈ ದೈವ ತನ್ನ ಸ್ವ ಸಮುದಾಯದಲ್ಲಿ ಒಬ್ಬಳನ್ನು, ಕನ್ನಡಿತಿಯೊಬ್ಬಳನ್ನು ಮತ್ತು ಕೆಳಜಾತಿ ಗಳಲ್ಲಿ ಒಬ್ಬೊಬ್ಬಳನ್ನು ಮದುವೆಯಾಗಿದೆ. ಅನುಲೋಮ ಮದುವೆ ನಿಯಮ ಎತ್ತಿ ಹಿಡಿದಿದೆ. ಇದರಂತೆ ಎಲ್ಲರನ್ನು ಮಡದಿಯನ್ನಾಗಿ ಮಾಡಿಕೊಂಡು ಪರಂಪರಾಗತ ವೈದಿಕ ಜೀವನ ಮೌಲ್ಯಗಳನ್ನು ಪ್ರಾಯೋಗಿಕವಾಗಿ ಸಾಧಿಸಿ ಮೇಲುಗೈ ಪಡದಿದೆ. ಮೇಲುವರ್ಗದ ಪುರುಷಶಾಹಿ ವ್ಯವಸ್ಥೆ ಪರವಾದ ನಿಲುವಿನಂತೆ ಸ್ವಜಾತೀಯ ಮತ್ತು ಅನ್ಯ ಜಾತಿಗಳ ಎಲ್ಲ ವರ್ಗದ ಹೆಣ್ಣುಗಳನ್ನು ಅನುಭೋಗಿಸಲು ಅವಕಾಶ ಕಲ್ಪಿಸಿಕೊಂಡಿದೆ. ಕೆಳವರ್ಗದ ಮಾತೃ ಸಂಸ್ಕೃತಿಯ ಸ್ತ್ರೀ ಸಮುದಾಯವನ್ನು ಶಿಷ್ಟ ತನ್ನ ಅಧೀನದಲ್ಲಿರಿಸಿಕೊಂಡಿದೆ.

ಹೀಗೆ ಕಾಣುವ ಹಂಪೆ ದೈವಗಳ ವೈವಾಹಿಕ ಸಂಬಂಧ ಅಂತಿಮವಾಗಿ ಏನನ್ನು ಹೇಳುತ್ತದೆ? ಪಂಪಾ ದೇವಿಯನ್ನು ವಿರೂಪಾಕ್ಷ ವರಿಸಿರುವುದು-ಹಂಪೆಯ ಸ್ಥಳೀಯ ಸ್ತ್ರೀ ದೈವ ಆರಾಧಕ ಕೆಳಸಮುದಾಯಗಳು ಇಂಥ ವಿವಾಹ ವ್ಯವಸ್ಥೆಗೆ ಒಳಪಟ್ಟಿ ರುವುದೆಂದು ಕಾಣಿಸಲೆಂದು? ಈ ಮೂಲಕ ಬಿಳಿಗಿರಿರಂಗನಲ್ಲಿ ಕುಸುಮಬಾಲೆ ಮತ್ತು ಮಾದೇಶ್ವರನಲ್ಲಿ ಸೋಲಿಗರು ಸಂಕಮ್ಮ ಬಳಿಕೆಯಾಗುವ ಹಾಗೆಯೆ ವಿರೂಪಾಕ್ಷನಲ್ಲಿ ಪಂಪಾದೇವಿ ಬಳಕೆಯಾಗಿದಾಳೆಯೆ?ಇದು ಕೆಳವರ್ಗಗಳ ಸ್ವಂತಿಕೆರಹಿತ ಸ್ಥಿತಿಯನ್ನು ಹೇಳಬಹುದೆ? ಸೋಲಿಗರೆಲ್ಲ ಮಾದೇಶ್ವರ ನ ಒಕ್ಕಲು ಮತ್ತು ಬಿಳಿಗಿರಿ ರಂಗನ ಒಕ್ಕಲು ಆದಂತೆ ಹಂಪೆಯಲ್ಲಿ ಸ್ಥಳೀಯ ಕೆಳ ಸಮುದಾಯಗಳು ಶಿವನ ಒಕ್ಕಲಂತೆ ನಡೆದುಕೊಳ್ಳುತ್ತಾರೆ. ಇಲ್ಲಿಯ ಸುತ್ತಲಿನ ಹಳ್ಳಿಗಳ ಬೇಡರ-ಗೊಲ್ಲರ ಸಮುದಾಯಗಳು ತಮ್ಮ ಮನೆಯ ಮದುವೆ ಕಾರ್ಯವಿದ್ದಲ್ಲಿ ಮೊದಲು ಹಂಪೆಯ ಫಲಪೂಜೆಯಲ್ಲಿ ಭಾಗವಹಿಸಿ, ನಂತರ ಮನೆಕಾರ್ಯ ಮಾಡುವ ಸಂಪ್ರದಾಯ ಬೆಳೆಸಿಕೊಂಡಿದ್ದಾರೆ. ಅಲ್ಲದೆ ಜಾತ್ರೆಯ ದಿನ ಪಂಪಾದೇವಿಯನ್ನು ಪಂಪಾಪತಿಗೆ ಮದುವೆ ಮಾಡಿಕೊಟ್ಟು ಸಂಭ್ರಮಿಸಿ ತಮ್ಮ ಮನೆಯ ಮದುವೆಯಂತೆ ಭಾವಿಸುತ್ತಾರೆ. ಹಂಪೆಯ ಆಚರಣೆಗಳಲ್ಲಿದು ಪ್ರಮುಖ ಅಂಶವಾಗಿದ್ದು ಸ್ಥಳೀಯ ಬಹುಸಂಖ್ಯಾತ ಸಮುದಾಯಗಳು ಮೇಲುಜಾತಿಯ ಪುರುಷಶಾಹಿ ವ್ಯವಸ್ಥೆಗೆ

ತಮ್ಮನ್ನು ಒಪ್ಪಿಸಿಕೊಂಡಿವೆ. ಈ ಸಮುದಾಯಗಳು ತಮ್ಮ ಮೂಲ ಸ್ತ್ರೀ ದೈವ ಆರಾಧನೆಯನ್ನು ಮನೆಯ ಮಟ್ಟಿಗೆ ಉಳಿಸಿಕೊಂಡು ಆದರಿಂದ ದೂರವಾಗಿದ್ದಾರೆ. ವೈದಿಕ ಸ್ತ್ರೀ ಕೇಂದ್ರಿತ ಸಮುದಾಯಗಳು ಶೈವ ಆರಾಧಕ ಸಮುದಾಯದ ಜೀವನ ಮೌಲ್ಯಗಳಿಂದ ಪ್ರಭಾ ವಿತವಾಗಿರುವುದರ ಪರಿಣಾಮವನ್ನು ಇಲ್ಲಿ ಗುರುತಿಸಬಹುದು.

ಈ ಸಾಮಾಜಿಕ ವ್ಯವಸ್ಥೆ ಸಮಾಜದ ಯಾವ ವರ್ಗದ ಪರವಾಗಿದೆ? ಹಂಪೆಯ ಶೈವ ಕೇಂದ್ರಿತ ನೆಲೆ ಪುರುಷ ಪ್ರಧಾನತೆಯನ್ನೂ ಸ್ಥಳೀಯ ಅಧಿದೇವತೆಯ ಅಧೀನತೆಯನ್ನೂ ಸೂಚಿಸುತ್ತದೆ.ಇದು ಶಿಷ್ಟ ಸಮಾಜದ ಪುರುಷ ಕೇಂದ್ರಿತ ಕುಟುಂಬ ವ್ಯವಸ್ಥೆಯ ಪ್ರತೀಕವಾಗಿದೆ. ಶಿವನು ಸ್ಥಳೀಯ ಪಂಪಾದೇವಿಯನ್ನು ವರಿಸಿ ಅವಳ ನೆಲೆಯಲ್ಲಿ ತನ್ನ ನೆಲೆಯನ್ನು ಕಂಡುಕೊಂಡಿರುವುದು ಮಾತೃಸಂಸ್ಕೃತಿ ಕೇಂದಿತ ಕುಟುಂಬ ವ್ಯವಸ್ಥೆಯ ಮನೆಅಳಿಯತನವನ್ನು ತನ್ನ ಅನುಕೂಲಕ್ಕೆ ಬಳಸಿಕೊಂಡಿರುವ ಕ್ರಮವಾಗಿದೆ. ಈ ಅಂಶಗಳನ್ನು ಒಳಗೊಂಡಿರುವ ಹಂಪೆ ಯಾವುದರ ಸೂಚಕ? ಇದು ಸ್ಥಳೀಯ ಸಮುದಾಯಗಳೆಲ್ಲ ಇನ್ನೂ ಬಡತನಕ್ಕಿಂತ ಕೆಳಮಟ್ಟದಲ್ಲಿ ಇವೆ. ಇದಕ್ಕೂ ಈ ಅಂಶಗಳಿಗೂ ಸಂಬಂಧವಿಲ್ಲವೆ? ಕೆಳವರ್ಗಗಳ ಸಾಮಾಜಿಕ ಆರ್ಥಿಕ ಸ್ಥಿತಿ ಗತಿಗಳಿಗೂ ಮೇಲುವರ್ಗಗಳ ಸಾಂಸ್ಕೃತಿಕ ಯಜಮಾನಿಕೆಗೂ ಇರಬಹುದಾದ ಸ್ವರೂಪವೇನು? ವಿವಾಹ ಸಂಬಂಧದಲ್ಲಿ ಸ್ಥಾಪಿತವಾಗಿರುವ ಪಂಪಾದೇವಿ ಮತ್ತು ಪಂಪಾಪತಿಯ ಕುಟುಂಬ ವ್ಯವಸ್ಥೆ ಯಾವ ಬಗೆಯದು? ಸ್ಥಳೀಯ ಪ್ರಾಬಲ್ಯವನ್ನು ಮೇಲುವರ್ಗ ಮುರಿದು ಅದರ ಸ್ಥಾನದಲ್ಲಿ ತನ್ನನ್ನು ಸ್ಥಾಪಿಸಿಕೊಂಡಿದೆ. ಅಥವಾ ಸ್ಥಳೀಯ ಕುಟುಂಬ ವ್ಯವಸ್ಥೆಗೆ ಅನುಗುಣವಾಗಿ ಮನೆಯಳಿಯ ಸ್ಥಾನವನ್ನು ಒಪ್ಪಿಕೊಂಡಿದೆಯೆ?ಈ ದೈವಗಳ ಸಂಬಂಧ ಯಾವ ಬಗೆಯ ಧಾರ್ಮಿಕ ರಾಜಕಾರಣವನ್ನು ನಿರೂಪಿಸುತ್ತದೆ?ಇಂದಿಗೂ ವಿಜಯನಗರ ಹಾಳು ಪಟ್ಟಣದ ಸ್ತ್ರೀ ದೈವಗಳೆಲ್ಲ ಕೆಳ ಸಮುದಾಯಗಳಿಂದ ಆರಾಧನೆಗೆ ಒಳಪಟ್ಟಿದೆ. ಇದು ಏನನ್ನು ಸೂಚಿಸುತ್ತದೆ?ಪಂಪಾದೇವಿ ಸ್ಥಳೀಯ ಪ್ರಬಲ ದೈವವಾಗಿದ್ದರೂ ಶಿಷ್ಟ ಪುರುಷ ದೈವದ ಹಿರಿಮೆಯನ್ನು ಒಪ್ಪಿಕೊಂಡಂತೆ ಕಾಣುತ್ತದೆ. ಬಹುಪತಿತ್ವ ಕುಟುಂಬ ಸಾಧ್ಯತೆಯ ಮಾತೃ ಸಂಸ್ಕೃತಿಯನ್ನು ಬಹುಪತ್ನಿತ್ವವಾಗಿ ಪರಿವರ್ತಿಸಲಾದ ಪಿತೃ ಸಂಸ್ಕೃತಿಯ ಪ್ರತೀಕವಾಗಿ ಹಂಪಿ ಕಾಣುತ್ತದೆ. ಇಂಥ ಹಲವು ಬಗೆಯ ಅನುಮಾನಗಳು, ಸಂದೇಹಗಳು ಸಾಂಸ್ಕೃತಿಕ ನೆಲೆಗೆ ಸೇರಿವೆ. ಹಂಪೆಯ ಪರಿಸರದ ಜೀವನ ಕ್ರಮವನ್ನು ಒಳಹೊಕ್ಕು ನೋಡಲು, ಹೊಸ ಅರಿವಿನ ಸಾಧ್ಯತೆಗಳ ಹುಡುಕಾಟ ನಡೆಸಲು ಅವಕಾಶ ಒದಗಿಸಿದೆ. ಇದು ಕನ್ನಡ ಸಂಸ್ಕೃತಿಯ ಒಳನೋಟವನ್ನು ತೆರೆದು ತೋರಿಸಬಲ್ಲುದಾಗಿದೆ.

ಆಧಾರ ಗ್ರಂಥಗಳು.

೧. ವಿ. ಸೀತಾರಾಮಯ್ಯ, ೧೯೩೮?, *ಪಂಪಾಯಾತ್ರೆ*, ವಿಶ್ವ ಕನ್ನಡ ಸಮ್ಮೇಳನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ. ನೃಪತುಂಗ ರಸ್ತೆ, ಬೆಂಗಳೂರು, ಐದನೆಯ ಮುದ್ರಣ:೧೯೮೨

೨. ಶ್ರೀಗುರುಓಂ ಸಿದ್ದಲಿಂಗೇಶ್ವರಸ್ವಾಮಿ (ಅನು), ೧೯೮೩. *ಪಂಪಾ ಮಹಾತ್ಮೆ*, ಶ್ರೀ ಗುರು ವೃಷಭಾ ಶ್ರಮ ಹೊಳಗುಂದಿ.

೩. ಎಂ. ಚಿದಾನಂದ ಮೂರ್ತಿ, ೧೯೯೩, *ಹೊಸತು ಹೊಸತು*, ಪ್ರಸಾರಾಂಗ, ಕನ್ನಡ ವಿವಿ, ಹಂಪಿ.

೪. ಜೋಗನ್ ಶಂಕರ್, ೧೯೯೩, *ದೇವದಾಸಿ ಸಂಪ್ರದಾಯ*, ವಿಮೋಚನಾ ಪ್ರಕಾಶನ, ಅಥಣಿ

೫. ಪುರುಷೋತ್ತಮ ಬಿಳಿಮಲೆ, ೧೯೯೬, *ಹಂಪಿ ಜಾನಪದ*, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬. ದೇವರ ಕೊಂಡಾರೆಡ್ಡಿ, (ಸಂ), ೧೯೯೮, *ಕನ್ನಡ ವಿವಿ ಶಾಸನ ಸಂ.೧ ಬಳ್ಳಾರಿ ಜಿಲ್ಲೆ*, ಪ್ರಸಾರಾಂಗ, ಕನ್ನಡ ವಿವಿ, ಹಂಪಿ.

೭. ದೇವರ ಕೊಂಡಾರೆಡ್ಡಿ, (ಸಂ),೧೯೯೯, *ಕನ್ನಡ ವಿವಿ ಶಾಸನ ಸಂ.೨ ಕೊಪ್ಪಳ ಜಿಲ್ಲೆ*, ಪ್ರಸಾರಂಗ, ಕನ್ನಡ ವಿವಿ, ಹಂಪಿ.

೮. ಎಂ. ಎಂ. ಕುಲಬುರ್ಗಿ (ಸಂ), ೧೯೯೯, *ಹರಿಹರಿನ ರಗಳೆಗಳು*, ಪ್ರಸಾರಾಂಗ , ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೯. ದೇವರ ಕೊಂಡಾರೆಡ್ಡಿ, (ಸಂ), ೨೦೦೦ *ಕನ್ನಡ ವಿವಿ ಶಾಸನ ಸಂ.೩, ಹಂಪಿ ಶಾಸನಗಳು*, ಪ್ರಸಾರಾಂಗ, ಕನ್ನಡ ವಿವಿ, ಹಂಪಿ

೧೦. ಡಿ.ವಿ. ಪರಮಶಿವಮೂರ್ತಿ, ೨೦೦೩, *ಪ್ರೌಢದೇವರಾಯ* ಮತ್ತು ಎಲ್ಲಮ್ಮನ *ಅಪ್ರಕಟಿತ ಶಾಸನ*, ಶಾಸನ ಅಧ್ಯಯನ ಸಂ.೧, ಸಂ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧. ಡಿ.ವಿ. ಪರಮಶಿವಮೂರ್ತಿ, ೨೦೦೩, ಹಂ ಪರಿಸರದ ಅಪ್ರಕಟಿತ ಶಾಸನಗಳು, *ವಿಜಯನಗರ ಅಧ್ಯಯನ* ಸಂ.೧೨, ಆರ್. ಗೋಪಾಲ್, (ಸಂ), ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು. ಶ್ರೀಧರ ಪ್ರೆಸ್ಸ್.೬೩, ದೇಸಾಯಿ ಓಣಿ, ಕಮಲಾಪುರ-೫೮೩೨೨೧, ಹೊಸಪೇಟೆ ತಾಲೂಕು.

೩೨. ವಿಜಯನಗರಕಾಲದ ರಾಮಾನುಜಕೂಟಗಳು

ಪ್ರೊ. ಲಕ್ಷ್ಮಣ್ ತೆಲಗಾವಿ

೧. ಶ್ರೀ ವೈಷ್ಣವ ಆಳ್ವಾರರು, ಆಚಾರ್ಯರು ಮತ್ತು ರಾಮಾನುಜರು

ತಮಿಳುನಾಡಿನ ಆಳ್ವಾರೆಂದರೆ ಶ್ರೀ ಮಹಾವಿಷ್ಣು ಅಥವಾ ಶ್ರೀ ಮನ್ನಾರಾಯಣನ ದಿವ್ಯಕಟಾಕ್ಷಕ್ಕೆ ಪಾತ್ರರಾದಂಥವರೆಂದು ಪ್ರತೀತಿ. ಇವರನ್ನು ತಮಿಳಿನಲ್ಲಿ 'ಆಳ್ವಾವಾರ್' ಅಂದರೆ 'ಮುಳುಗುವವರು', 'ದೇವತ್ವದಲ್ಲಿ ಮುಳುಗಿದವರು,' ಎಂದು ಗುರುತಿಸಲಾಗುತ್ತದೆ. ದೈವಪ್ರೇಮದಲ್ಲಿ ಐಕ್ಯರಾದವರು, ಆಧ್ಯಾತ್ಮರೂಪಿಯಾದ ಸಮುದ್ರದಲ್ಲಿ ಸ್ನಾನಮಾಡಿದವರು, ಭಗವಂತನ ಅನುಭವದಲ್ಲಿ ಯಾವಾಗಲೂ ಆಳವಾಗಿ ಮುಳುಗಿರುವವರು, ಪರಮಾತ್ಮನಲ್ಲಿ ಅಸದೃಶ ಭಕ್ತಿ-ಪ್ರೇಮಗಳನ್ನು ಹೊಂದಿರುವವರೆಂತಲೂ ವ್ಯಾಖ್ಯಾನಿಸಲಾಗುತ್ತದೆ. ಇವರನ್ನು 'ಆಳುವವರು' ಎಂತಲೂ ಗುರುತಿಸುವುದುಂಟು. ಅಂದರೆ ರಾಜರು ಮತ್ತು ಶ್ರೇಷ್ಠಕುಲದವರನ್ನು ಆಳುವವರೆಂದರ್ಥ. ಆಳ್ವಾರರ ಒಟ್ಟು ಸಂಖ್ಯೆ ೧೨. ಪೊಯ್‌ಹೈ ಆಳ್ವಾರ್, ಪೂದತ್ತಾಳ್ವಾರ್, ಪೇಯಾಳ್ವಾರ್, ತಿರುಮಳಿಶೈ ಆಳ್ವಾರ್, ನಮ್ಮಾಳ್ವಾರ್, ಮಧುರಕವಿಯಾಳ್ವಾರ್, ಕುಲಶೇಖರಾಳ್ವಾರ್, ಪೆರಿಯಾಳ್ವಾರ್, ಅಂಡಾಳ್ ಆಳ್ವಾರ್, ತೊಂಡರಡಿಪ್ಪೊಡಿಯಾಳ್ವಾರ್, ತಿರುಪ್ಪಾಣಾಳ್ವಾರ್ ಮತ್ತು ತಿರುಮಂಗೈಯಾಳ್ವಾರ್, ಇವರೇ ಆ ೧೨ ಮಂದಿ. ಇವರು ವಿವಿಧ ಜಾತಿ-ಪಂಥಗಳಿಗೆ ಸೇರಿದವರು. ಇವರಲ್ಲಿ ಅಂಡಾಳ್ ಆಳ್ವಾರ್ ಅಥವಾ ಗೋದಾದೇವಿ ಮಹಿಳೆಯಾಗಿದ್ದಾರೆ, ಉಳಿದ ೧೧ ಅಳ್ವಾರರು ಪುರುಷರು, ಇವರು ಜೀವಿಸಿದ್ದ ಕಾಲಾವಧಿ ೩ ರಿಂದ ೯ನೇ ಶತಮಾನ. ದಕ್ಷಿಣಭಾರತದ ಪಲ್ಲವ, ಚೇರ, ಚೋಳ ಮತ್ತು ಪಾಂಡ್ಯ ಎಂಬ ತಮಿಳು ರಾಜ್ಯಗಳು ಇವರು ನೆಲೆಸಿದ್ದ ಪ್ರದೇಶಗಳು.

ಈ ಆಳ್ವಾರರನ್ನು ದಿವ್ಯಪ್ರಬಂಧಗಳನ್ನು ಸಾಕ್ಷಾತ್ಕರಿಸಿದ ಅಥವಾ ಉಪದೇಶಿಸಿದ 'ತಮಿಳುವೇದ ಋಷಿ'ಗಳೆನ್ನುತ್ತಾರೆ. ಈ ಆಳ್ವಾರರು ರಚಿಸಿದ 'ದಿವ್ಯಪ್ರಬಂಧ'ವೆಂಬ ಗೀತೆಗಳು ಒಳಗೊಂಡಿರುವುದು, ವಿಷ್ಣು ಮತ್ತು ಅವರ ಅವತಾರಗಳ, ಮುಖ್ಯವಾಗಿ ಶ್ರೀ ಕೃಷ್ಣನ ವಿಷಯ. ಭಕ್ತಿ ಪಂಥವನ್ನು ರೂಢಿಸಿ , ವಿಶಿಷ್ಟಾದ್ವೈತ ಸಿದ್ಧಾಂತಕ್ಕೆ ಅಗತ್ಯವಿರುವ ಸಂಪ್ರದಾಯದ ಚೌಕಟ್ಟನ್ನು ಒದಗಿಸಿದವರು ಈ ಅಳ್ವಾರರು.

ಶ್ರೀ ವೈಷ್ಣವಪಂಥದ ವೈಶಿಷ್ಟ್ಯತೆಯೆಂದರೆ, ಈ ಮೇಲೆ ಪ್ರಸ್ತಾಪಿಸಿದ ತಮಿಳು ಶ್ರೀ ವೈಷ್ಣವ ಆಳ್ವಾರರು (Saints) ಮತ್ತು ಆಚಾರ್ಯರ (Preceptors) ಆರಾಧನೆ. ಶ್ರೀ ವೈಷ್ಣವಪಂಥವು ತಮಿಳುನಾಡಿನಲ್ಲಿ ಉನ್ನತಿ ಹೊಂದಿದರೂ ಆ ನಂತರ ಕಾಲ

ಪ್ರಭಾವದಿಂದ ಅದರ ಬೆಳವಣಿಗೆ ಕುಂಠಿತಗೊಳ್ಳುವ ಲಕ್ಷಣಗಳು ಗೋಚರಿಸಿದವು. ಆದ್ದರಿಂದ ವೇದ- ಪ್ರಬಂಧಗಳ ಪುನರುತ್ಥಾನಕ್ಕಾಗಿ ಸಂಘಟನೆಗೊಂಡುದೇ ಆಚಾರ್ಯ ಪರಂಪರೆ. ಈ ಆಚಾರ್ಯರು ಶ್ರೀ ವೈಷ್ಣವಪಂಥದ ಉಪದೇಶ ಮತ್ತು ಕೃತಿರಚನೆಗಳ ಕೈಂಕರ್ಯ ಕೈಗೊಂಡರು. 'ಈ ಆಚಾರ್ಯರು ಪಂಡಿತ, ವಿಮರ್ಶಕ, ಭಕ್ತ, ಉದಾರಿಗಳಾಗಿದ್ದು, ಸಂಸ್ಕೃತ, ತಮಿಳು ಎರಡರಲ್ಲಿಯೂ ನಿಪುಣರಾಗಿ, ವೈದಿಕ ಸಂಸ್ಕೃತ ವೇದಾಂತಶಾಸ್ತ್ರದ ಕರ್ಮ ಮತ್ತು ಜ್ಞಾನ ಸಂಪ್ರದಾಯ ಹಾಗೂ ಆಳ್ವಾರುಗಳ ತಮಿಳು ಪ್ರಬಂಧಗಳ ಭಕ್ತಿ ಸಂಪ್ರದಾಯ ಎರಡಕ್ಕೂ ಸುಂದರ ಸಮನ್ವಯ ಸಾಮರಸ್ಯವನ್ನುಂಟು ಮಾಡಿ, ಆ ಮೂಲಕ ಉಭಯವೇದಾಂತ ಪ್ರವರ್ತಕರೆನಿಸಿಕೊಂಡರು. ವಿಶಿಷ್ಟಾದ್ವೈತ ಸಿದ್ಧಾಂತ ಮತ್ತು ಪ್ರಪತ್ತಿಮಾರ್ಗಗಳನ್ನು ಸ್ಥಾಪಿಸಿ, ಇದನ್ನು ಪ್ರಪ್ರಥಮವಾಗಿ ಪ್ರವರ್ತನ ಗೊಳಿಸಿದ ಮಹಾಲಕ್ಷ್ಮಿ ಅಥವಾ ಶ್ರೀಯ ಹೆಸರಿನಲ್ಲಿ ಶ್ರೀವೈಷ್ಣವಮತವೆಂದು ಕರೆದರು. ತಮಿಳುನಾಡಿನಲ್ಲಿ ವಿಷ್ಣುಭಕ್ತಿಯನ್ನು ಪ್ರಚಾರಮಾಡುವ ಶ್ಲಾಘ್ಯಪ್ರಯತ್ನಗಳ ಮೂಲಕ ಬೇರ್ಪಟ್ಟ ಜೀವಾತ್ಮ -ಪರಮಾತ್ಮರನ್ನು ಒಂದುಗೂಡಿಸಲೆತ್ನಿಸಿದ ನಮ್ಮ ಆಚಾರ್ಯರು ಗಳೂ ಆಳ್ವಾರುಗಳಂತೆ ದೈವಾಂಶಸಂಭೂತರು, ಅವತಾರಪುರುಷರು ಎಂದು ಪರಿಗಣಿಸ ಲ್ಪಟ್ಟಿದ್ದಾರೆ. " (*ಶ್ರೀ ವೈಷ್ಣವ ಆಚಾರ್ಯಪರಂಪರೆ,* ಪು.೩೫ -೩೬)ಅಲ್ಲದೆ, ಪಂಚ ಸಂಸ್ಕಾರ, ಅರ್ಥಪಂಚಕ, ಪಂಚಸ್ವರೂಪ, ಪಂಚಕಾಲಕರ್ಮ - ಇವುಗಳಿರುವ ವಿಶಿಷ್ಟಾ ದ್ವೈತಿಗಳು ಅಥವಾ ಶ್ರೀವೈಷ್ಣವರು ತಮ್ಮನ್ನು ಐಯಂಗಾರ್ ಎಂದು ಕರೆದುಕೊಂಡರು. ಈ ಪರಂಪರೆಯಲ್ಲಿ ೧೧ನೆಯ ವಿಶಿಷ್ಟಾದ್ವೈತದ ವಿಶ್ವಾಚಾರ್ಯರಾಗಿ ಅವತರಿಸಿದವರೇ ರಾಮಾನುಜಾಚಾರ್ಯರು (೧೧೭೧-೧೧೩೭).

ಆಳ್ವಾರರನ್ನು ಪೂಜಿಸುವ ಹಾಗೂ ಅವರಿಗೆ ದೇವಾಲಯಗಳನ್ನು ನಿರ್ಮಿಸುವ ಸಂಪ್ರದಾಯ ಆರಂಭಗೊಂಡುದು ಈ ರಾಮಾನುಜಾಚಾರ್ಯರ ಪ್ರಭಾವದ ಫಲವಾಗಿ. ಈ ಆಚಾರ್ಯರ ಎಲ್ಲ ಧಾರ್ಮಿಕ ಚುಟುವಟಿಕೆಗಳ ಕೇಂದ್ರವಾಗಿದ್ದುದು ತಿರುಚಿರಪಳ್ಳಿ ಬಳಿಯಿರುವ ಶ್ರೀರಂಗಂ. ರಾಮಾನುಜರು ತಿರುಪತಿಯ ಗೋವಿಂದರಾಜ ದೇವಾಲಯ ದಲ್ಲಿ ಈ ಆಳ್ವಾರುಗಳ ಮೂರ್ತಿಗಳನ್ನು ಸ್ಥಾಪಿಸಿದರೆನ್ನಲಾಗುತ್ತದೆ. ಇದಾದ ನಂತರವೇ ಶ್ರೀ ವೈಷ್ಣವ ಆಚಾರ್ಯರನ್ನೂ ದೈವೀಕರಿಸಿ ಆರಾಧಿಸುವ ಪದ್ಧತಿ ಹುಟ್ಟಿಕೊಂಡಿತು. ಶ್ರೀರಂಗಂ, ತಿರುಪತಿ, ಕಂಚಿ ಮೊದಲಾದೆಡೆಗಳಲ್ಲಿ ಇಂಥಾ ದೇವಾಲಯಗಳು ಅಸ್ತಿತ್ವಕ್ಕೆ ಬಂದವು. ಇತಿಹಾಸಕಾರರು ಸಹಾ ಗುರುತಿಸುವಂತೆ, ದಕ್ಷಿಣಭಾರತದ ಮೂರು ಪ್ರಸಿದ್ಧ ಶ್ರೀ ವೈಷ್ಣವ ದೇವಾಲಯಗಳೆಂದರೆ ಕೋಯಿಲ್ (ಶ್ರೀರಂಗಂ), ತಿರುಮಲೈ ಮತ್ತು ಪೆರುಮಾಳ್ ಕೋಯಿಲ್ (ಕಂಚೀಪುರಂ). ವಿಜಯನಗರದಲ್ಲೂ ಈ ಪರಂಪರೆ ಮುಂದು ವರೆಯಿತು. ರಾಮಾನುಜರ ಶಿಷ್ಯರು ಅವರ ಬಗೆಗೆ ಅಪಾರ ಪೂಜ್ಯ ಭಾವನೆ ಹೊಂದಿದ್ದ ರಿಂದ, ಅವರ ಗೌರವಾರ್ಥ ಗುಡಿಗಳನ್ನು ನಿರ್ಮಿಸಿದರು. ಅಲ್ಲದೆ, ರಾಮಾನುಜತ್ರಿವಿದಿ,

ಉಡೈಯಾವರ್ ಕಾಲವೈ ಪಟ್ಟಡೈ ಹಾಗೂ ರಾಮಾನುಜಾ ಕೂಟವ್‌ಗಳು ರಾಜಮಾನುಜರ ಗಾಢ ಪ್ರಭಾವದ ಫಲವಾಗಿಯೇ ಪ್ರತ್ಯಕ್ಷವಾಗಿ ಕಾಣುವಂಥಾ ಕುರುಹುಗಳೆನಿಸಿದರು.

ಶ್ರೀವೈಷ್ಣವ ದೇವಾಲಯಗಳು ಹಾಗೂ ಮಠಗಳಿಗೆ ಹೊಂದಿಕೊಂಡಂತೆ ರಾಮಾನುಜ ಕೂಟಗಳಿರುತ್ತಿದ್ದವು. ಶ್ರೀವೈಷ್ಣವರು ತಂಗಲು ಹಾಗೂ ಅವರಿಗೆ ಆಹಾರ ಒದಗಿಸಲು ನಿರ್ಮಾಣಗೊಂಡಂಥಾ ಮನೆಗಳಿವು. ಸಮೀಪದ ಅಥವಾ ದೂರದ ಶ್ರೀವೈಷ್ಣವ ಭಕ್ತರಿಗಾಗಿ ತೆರೆಯಲಾದ ಪ್ರಸಾದನಿಲಯಗಳು. ಸತ್ರವೆಂತಲೂ ಕರೆಯಲಾಗಿದೆ. ದೇವರ ಉಪಯೋಗಕ್ಕಾಗಿ ಹೂದೋಟಗಳನ್ನು ಬೆಳೆಸುವುದು, ಅದಕ್ಕಾಗಿ ವಿಶೇಷ ದತ್ತಿಗಳನ್ನು ಬಿಡುವುದು, ದೇವರನ್ನು ಹೂಗಳಿಂದ ಶೃಂಗರಿಸುವುದು, ರಾಮಾನುಜರ ಭಕ್ತರಾದ ಶ್ರೀವೈಷ್ಣವರಿಗೆ ಉಚಿತ ಅಶನಕ್ಕಾಗಿ ರಾಮಾನುಜರ ಹೆಸರಿನಲ್ಲಿ ರಾಮಾನುಜಕೂಟ ಗಳನ್ನು ಏರ್ಪಡಿಸುವುದು ಇತ್ಯಾದಿಯನ್ನು ತಮ್ಮ ಗುರುಗಳಿಗೆ ಭಕ್ತಿಪೂರ್ವಕ ಸಲ್ಲಿಸುವ ಸೇವೆಯೆಂದೇ ಭಾವಿಸಲಾಗಿದ್ದಿತು. ಕೆಲವೊಮ್ಮೆ ಇಂಥಾ ರಾಮಾನುಜಕೂಟಗಳು ಶ್ರೀವೈಷ್ಣವಭಕ್ತರು ತಮ್ಮ ಪ್ರಮುಖ ಧಾರ್ಮಿಕ ಸಂಗತಿಗಳನ್ನು ಚರ್ಚಿಸಲು ಅವಕಾಶ ಕಲ್ಪಿಸುವ ಎಡೆಗಳಾಗಿರುತ್ತಿದ್ದವು.

ರಾಮಾನುಜರು ತಮ್ಮ ಮೂಲನೆಲೆ ಶ್ರೀರಂಗವನ್ನು ತೊರೆದು ಕೆಲಕಾಲ ಕರ್ನಾಟಕ ದಲ್ಲಿ, ಅಂದರೆ, ಅಂದಿನ ಮೈಸೂರು ಪ್ರಾಂತದಲ್ಲಿ ನೆಲೆಸಿದ್ದರೆಂದು ಇತಿಹಾಸ ಹೇಳುತ್ತದೆ. ಆ ಕಾಲಕ್ಕೇ ಅವರು ಸಂಚರಿಸಿದ ಹಾಗೂ ನೆಲೆಸಿದ ಸ್ಥಳಗಳಲ್ಲಿ ರಾಮಾನುಜಕೂಟಗಳು ಸಹಾ ಅಸ್ತಿತ್ವಕ್ಕೆ ಬಂದವೆಂಬುದು ಗಮನಾರ್ಹ. ರಾಮಾನುಜರು ಶ್ರೀರಂಗಂನ್ನು ಬಿಟ್ಟುಬರಲು ಇದ್ದ ಕಾರಣವೆಂದರೆ, ಆಗಿನ ಚೋಳ ಅರಸ ಇಮ್ಮಡಿ, ಕುಲೋತ್ತುಂಗನ ಧಾರ್ಮಿಕ ನೀತಿ. ಈತನೊಬ್ಬ ಶ್ರೀವೈಷ್ಣವಪಂಥದ ವಿರೋಧಿ. ರಾಮಾನುಜರು ಸುಮಾರು ೧೦೯೬ರಲ್ಲಿ ಮೈಸೂರು ಪ್ರಾಂತಕ್ಕೆ ಬಂದರಲ್ಲದೆ, ೧೦೯೮ರಲ್ಲಿ ಹೊಯ್ಸಳ ಬಿಟ್ಟಿದೇವ ಅಥವಾ ವಿಷ್ಣುವರ್ಧನನನ್ನು ಮತಾಂತರಗೊಳಿಸಿದರು. ಮೊದಲು ತೊಂಡನೂರು (ತೊಣ್ಣೂರು-ಕೆರೆತೊಣ್ಣೂರು), ಆ ನಂತರ ಮೇಲುಕೋಟೆಗಳು ಅವರ ಚಟುವಟಿಕೆಗಳ ಕೇಂದ್ರಗಳೆನಿಸಿದವು. ಸುಮಾರು ೧೧೦೦ರಲ್ಲಿ ಮೇಲುಕೋಟೆಯಲ್ಲಿ ಚೆಲುವ ನಾರಾಯಣ ದೇವರನ್ನು ಪ್ರತಿಷ್ಠಾಪಿಸಿದರು. ಅವರು ಕರ್ನಾಟಕದಲ್ಲಿದ್ದುದು ೧೨ ಅಥವಾ ೨೦ ವರ್ಷಗಳ ಕಾಲ. ಈ ಕಾರಣಕ್ಕಾಗಿಯೇ ಶ್ರೀ ವೈಷ್ಣವಪಂಥವು ಮೈಸೂರು ಪ್ರದೇಶದಲ್ಲಿ ಜನಪ್ರಿಯತೆ ಪಡೆದುಕೊಂಡಿತು. ಹಾಗೆ ನೋಡಿದರೆ, ಕರ್ನಾಟಕದಲ್ಲಿ ವಿಷ್ಣು ಪೂಜೆ ವೈಷ್ಣವಭಕ್ತಿಗಳು ಹಿಂದಿನಿಂದಲೂ ನಡೆದು ಬಂದಿದ್ದರೂ ಸಾಕಷ್ಟು ವೈಷ್ಣವ ದೇವಾಲಯಗಳಿದ್ದರೂ ರಾಮಾನುಜರು ಕರ್ನಾಟಕದ ಈ ಭಾಗಕ್ಕೆ ಬಂದ ತರುವಾಯ ಇಲ್ಲಿ ಶ್ರೀ ವೈಷ್ಣವಪಂಥವು ವ್ಯಾಪಕವಾಗಿ ಹರಡಿ ಕೊಂಡಿತು. ಶ್ರವಣಬೆಳಗೊಳದ

ಸ್ಥಳಪುರಾಣದ ಪ್ರಕಾರ, ಹೊಯ್ಸಳ ರಾಜಧಾನಿ ಗಳಲ್ಲೊಂದಾಗಿದ್ದ ತೊಣ್ಣೂರಿನಲ್ಲಿ ವಿಷ್ಣುವರ್ಧನನು ಕೆರೆಯನ್ನು ಕಟ್ಟಿಸುವುದರೊಡನೆ ರಾಮಾನುಜಕೂಟವನ್ನು ಸ್ಥಾಪಿಸಿದ. ಕರ್ನಾಟಕದ ಮಟ್ಟಿಗೆ, ಮೊದಲನೇ ರಾಮಾನುಜಕೂಟ ಇದೇ ಆಗಿರುವಂತಿದೆ. ಈ ನಿಟ್ಟಿನಲ್ಲಿ ಎರಡನೇ ಉದಾಹರಣೆಯಾಗಿ ೧೨೫೬ರ ನವೆಂಬರ್ ೩೦ ರಂದು ಮೇಲುಕೋಟೆಯ ಯತಿರಾಜಮಠದಲ್ಲಿ ಹಾಕಿಸಲಾದ ಕಲ್ಲುಬರಹದ ಉಲ್ಲೇಖವನ್ನು (ಎ.ಕ. vi, ಪಾಂಡವಪುರ ೧೮೨) ಇಲ್ಲಿ ತೋರಿಸಬಹುದು. ತೆರಕಣಾಂಬಿ ಚೆನ್ನಪ್ಪಸೆಟ್ಟಿಯ ಮಗ ಕೇತಿಯಪ್ಪಸೆಟ್ಟಿಯು ರಾಮಾನುಜರ ಗುಡಿಯಲ್ಲಿಯ ರಾಮಾನುಜಕೂಟ ನಡೆಸಿಕೊಂಡು ಬರಲು ಎರಡು ಗ್ರಾಮಗಳನ್ನೂ ಸ್ವಲ್ಪ ಭೂಮಿಯನ್ನೂ ದಾನಮಾಡಿದ ಈ ಎರಡೂ ರಾಮಾನುಜಕೂಟಗಳು ಹೊಯ್ಸಳರ ಅವಧಿಗೆ ಸಂಬಂಧಿಸಿದವು; ರಾಮಾನುಜರ ಪ್ರೇರಣೆಯಿಂದ ಅಸ್ತಿತ್ವಕ್ಕೆ ಬಂದಂಥವು.

೨. ವಿಜಯನಗರದ ಅರಸರು ಮತ್ತು ಶ್ರೀವೈಷ್ಣವಪಂಥ

ವಿಜಯನಗರದ ಧಾರ್ಮಿಕ ಇತಿಹಾಸದಲ್ಲಿ ಕಂಡಬರುವ ಸ್ಥಿತ್ಯಂತರಗಳು ಆಶ್ಚರ್ಯ ಹುಟ್ಟಿಸುವಂಥವು. ವಿಜಯನಗರ ಸಾಮ್ರಾಟರು ಧರ್ಮಸಹಿಷ್ಣುತೆಗೆ ಹೆಸರಾದಂತೆಯೇ ಹಿಂದೂಧರ್ಮದ, ಅದರಲ್ಲೂ ವೈದಿಕಧರ್ಮದ ರಕ್ಷಣೆ ಮತ್ತು ಉದ್ಧಾರಗಳಿಗೆ, ಕಟ್ಟಾಳುಗಳಾಗಿ ಶ್ರಮಿಸಿದುದು ಕಂಡಂತೆಯೇ ಇದೆ. 'ಶ್ರೀ ವಿರೂಪಾಕ್ಷ'ನ ಅಂಕಿತದೊಡನೆ ತಮ್ಮ ರಾಜ್ಯಭಾರವನ್ನು ನಿರ್ವಹಿಸಿದವರು ಸಂಗಮ ಅರಸರಾದರೆ, ಆ ನಂತರದವರು ವಿರೂಪಾಕ್ಷನ ಅಂಕಿತದೊಡನೆ 'ಶ್ರೀವೆಂಕಟೇಶ'ನ ಅಂಕಿತವನ್ನೂ ಹಾಕಿಸುವುದರೊಡನೆ ಸಾಮ್ರಾಜ್ಯವನ್ನು ಪಾಲಿಸಿದರು. ಸಂಗಮ ಅರಸರು ಕಾಳಾಮುಖ-ಪಾಶುಪತದ ಪಂಥಾನುಯಾಯಿಗಳಾಗಿ ತಮ್ಮ ಕುಲು ಗುರು ಕಾಶಿವಿಲಾಸ ಕ್ರಿಯಾಶಕ್ತಿ ಯನ್ನು ಆರಾಧಿಸಿದಂತೆಯೇ ಶೃಂಗೇರಿಪೀಠದ ವಿದ್ಯಾತೀರ್ಥರು ಮತ್ತು ವಿದ್ಯಾರಣ್ಯರಿಗೂ ತಮ್ಮ ಭಕ್ತಿಯನ್ನು ಪ್ರದರ್ಶಿಸಿದರು. ಒಂದನೇ ಹರಿಹರ (೧೩೩೬-೧೩೫೬) ಮತ್ತು ಒಂದನೇ ಬುಕ್ಕ (೧೩೫೬-೧೩೭೭) ಮಾತ್ರವೇ ಅಲ್ಲ, ಇಮ್ಮಡಿ ಹರಿಹರನೂ (೧೩೭೭-೧೪೦೪) ವಿದ್ಯಾರಣ್ಯರ ಶಿಷ್ಯನಾಗಿದ್ದ. ಆತನ ಮಕ್ಕಳಲೊಬ್ಬನಾದ ಒಂದನೇ ವಿರೂಪಾಕ್ಷನೂ (೧೪೦೪-೧೪೦೫) ವಿದ್ಯಾರಣ್ಯರ ಕೃಪೆಗಾಗಿ ಹಾತೊರೆಯುತ್ತಿದ್ದ. ಈತ ತನ್ನ 'ಬಾಹುಬಲ'ದಿಂದ ಸಿಂಹಾಸನವನ್ನು ಪರಿಗ್ರಹಿಸುತ್ತಿದ್ದಂತೆಯೇ ವಿಜಯನಗರ ಧಾರ್ಮಿಕ ಸ್ಥಿತಿ-ಗತಿಯಲ್ಲಿ ಬದಲಾವಣೆ ತೋರಲಾರಂಭವಾಯಿತು.

ಇಮ್ಮಡಿ ಪ್ರೌಢದೇವರಾಯ(೧೪೨೪- ೧೪೪೬) ಮತ್ತು ಆ ನಂತರದ ಅರಸರು ಶೈವಪಂಥಾನುಯಾಯಿಗಳಾಗಿದ್ದರೂ ಪರಮತ ಸಹಿಷ್ಣುತೆಯ ಅವರ ಕಾರ್ಯನೀತಿಯಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ೧೫ನೇ ಶತಮಾನದ ಮಧ್ಯಾವಧಿಯಿಂದೀಚೆಗೆ ವಿಜಯನಗರದ ಅರಸರು ಕ್ರಮೇಣ ಶ್ರೀ ವೈಷ್ಣವಪಂಥದತ್ತ ಒಲವು ತೋರತೊಡಗಿದ್ದು

ಸ್ಪಷ್ಟ. ಸಾಳುವ ಅರಸರಂತೂ ಸಂಪೂರ್ಣ ಶ್ರೀ ವೈಷ್ಣವಪಂಥಾನುಯಾಯಿಗಳಾಗಿದ್ದು, ಅಹೋಬಿಲಂನ ನರಸಿಂಹ ಮತ್ತು ತಿರಪತಿಯ ವೆಂಕಟೇಶ್ವರ ದೈವಗಳಿಗೆ ಸಮಾನ ಭಕ್ತಿಯನ್ನು ಸಮರ್ಪಿಸಿದರು. ಇಷ್ಟಾದರೂ ಶೈವಪಂಥಕ್ಕೆ ಅವರ ಪ್ರೋತ್ಸಾಹವೇನೂ ಕಡಿಮೆಯದಾಗಿರಲಿಲ್ಲ. ಅವರು ನೀಡಿದ 'ಮಹಾದಾನ'ಗಳು ಶೈವ ಮತ್ತು ಶ್ರೀ ವೈಷ್ಣವ ಪಂಥೀಯರಿಗೆ ಸಮಾನವಾಗಿದ್ದರೂ ಶ್ರೀ ವೈಷ್ಣವಪಂಥದ ದೇವಾಲಯಗಳನ್ನು ಉದಾರವಾಗಿಯೇ ಪೋಷಿಸಿದುದು ಕಂಡುಬರುತ್ತದೆ. ಹಂಪಿಯ ಶ್ರೀ ವಿರೂಪಾಕ್ಷನು ಸಾಳುವ ಅರಸರಿಗೂ ಆರಾಧ್ಯದೈವವಾಗಿಯೇ ಉಳಿದುಕೊಂಡು ಬಂದ.

ತುಳುವವಂಶದ ಕೃಷ್ಣದೇವರಾಯ (೧೫೧೦-೧೫೨೯), ಅಚ್ಯುತದೇವರಾಯ (೧೫೨೯-೧೫೪೨) ಮತ್ತು ಸದಾಶಿವರಾಯರ (೧೫೪೨- ೧೫೬೫) ಅವಧಿಯಲ್ಲಿ ಶ್ರೀವೈಷ್ಣವ ಪಂಥಕ್ಕೆ ಹೆಚ್ಚಿನ ಆದ್ಯತೆ ದೊರೆತುದು ಸಹಜ. ನಿಷ್ಠಾವಂತ ಶ್ರೀವೈಷ್ಣವಪಂಥಾನುಯಾಯಿಯಾಗಿದ್ದವರು ಕೃಷ್ಣದೇವರಾಯ. ಆತ ಶೈವ ದೇವಾಲಯಗಳಿಗೂ ಉದಾರವಾಗಿ ದತ್ತಿ-ದಾನಗಳನ್ನು ನೀಡಿದ. ೧೫೧೭-೧೮ರಲ್ಲಿ ಚೋಳಮಂಡಲದ ಶೈವ ಮತ್ತು ವೈಷ್ಣವ ದೇವಾಲಯಗಳಿಗೆ ೧೦,೦೦೦ ವರಹಗಳಷ್ಟು ಮೊತ್ತದ ತೆರಿಗೆಯನ್ನು ಬಿಟ್ಟು ಕೊಟ್ಟು ೧೫೧೭ರಲ್ಲಿಯೇ ಚಿದಂಬರಂನ ಪೊನ್ನಂಬಳನಾಥ ದೇವಾಲಯದ ಉತ್ತರದಿಕ್ಕಿನ ಗೋಪುರವನ್ನು ನಿರ್ಮಿಸಿಕೊಟ್ಟ. ಕಾಳಹಸ್ತಿ ಮತ್ತು ತಿರುವಣ್ಣಾಮಲೈಗಳ ಶಿವದೇವಾಲಯಗಳ ಅಭಿವೃದ್ಧಿಯತ್ತಲೂ ಗಮನಹರಿಸಿದ. ತನ್ನ ರಾಜಧಾನಿಯಲ್ಲಿಯೇ ಗಣಪತಿ ದೇವಾಲಯಕ್ಕೆ ದತ್ತಿಯನ್ನು ನೀಡಿದನಲ್ಲದೆ, ವಿರೂಪಾಕ್ಷ ದೇವಾಲಯದ ಆವರಣದಲ್ಲಿ ರಂಗಮಂಟಪ ಮತ್ತು ಅದರ ಮುಂದಿನ ಗೋಪುರ ಮಾಡಿಸಿಕೊಟ್ಟ. ವಿರೂಪಾಕ್ಷದೇವರಿಗೆ ಈತ ಕೊಡಮಾಡಿದ ಅಮೂಲ್ಯವಸ್ತುಗಳಿಗೆ ಮಿತಿಯೇ ಇಲ್ಲ.

ಹಾಗೆಯೇ, ಶ್ರೀವೈಷ್ಣವ ಪಂಥದ ಹಿರಿಮೆಯನ್ನು ಸಾಧಿಸುವ ನಿಟ್ಟಿನಲ್ಲಿ ಕೃಷ್ಣದೇವರಾಯನು ಹಲವಾರು ಕಾರ್ಯಗಳನ್ನು ನಿರ್ವಹಿಸಿದ. ಇವುಗಳಲ್ಲಿ ೧೫೧೫ರಲ್ಲಿ ಉದಯಗಿರಿ ಕೋಟೆಯನ್ನು ತನ್ನ ವಶಪಡಿಸಿಕೊಂಡ ಸಂದರ್ಭದಲ್ಲಿ ಅಲ್ಲಿದ್ದ ಬಾಲಕೃಷ್ಣನ ಮೂರ್ತಿಯನ್ನು ವಿಜಯನಗರಕ್ಕೆ ಸಾಗಿಸಿ. ತಂದುದೂ ಒಂದು. ಬಾಲಕೃಷ್ಣನಿಗಾಗಿಯೇ ವಿಜಯನಗರದಲ್ಲಿ ಬೃಹತ್ ದೇವಾಲಯವನ್ನು ನಿರ್ಮಿಸಲು ಈತ ಕಾರಣನೆನಿಸಿದ. ಪ್ರಸಿದ್ಧ ವಿಠ್ಠಲ ದೇವಾಲಯದ ಕೆಲವು ಭಾಗಗಳನ್ನು ನಿರ್ಮಿಸಲು ಈತ ತೋರಿದ ಆಸಕ್ತಿ ಮೆಚ್ಚುವಂಥಾದ್ದು. ೧೫೧೪ರಲ್ಲಿ ಈ ರಾಯರು ತಿರುಪತಿಗೆ ಹೋಗಿದ್ದಾಗ ವೆಂಕಟೇಶ್ವರನಿಗೆ ೩೦,೦೦೦ ಚಿನ್ನದನಾಣ್ಯಗಳಿಂದ ಮಜ್ಜನಮಾಡಿಸಿದುದು ವಿಶೇಷ. ಹಾಗೆಯೇ ವಜ್ರ-ವೈಡೂರ್ಯ-ಮುತ್ತು-ರತ್ನ-ಹವಳಗಳ ದಾನವನ್ನೂ ಸಮರ್ಪಿಸಿ ಕೃತಾರ್ಥನಾದ, ೧೫೧೫ರಲ್ಲಿ ಅಹೋಬಿಲಂನ ನರಸಿಂಹದೇವರಿಗೆ ಅಪಾರ ಮೊತ್ತದ ವಜ್ರ ಮತ್ತಿತರ ಅಮೂಲ್ಯ ಮಣಿಗಳ ಒಡವೆ-ವಸ್ತುಗಳನ್ನು ಮಾಡಿಸಿಕೊಟ್ಟುದು ಸಹಾ

ಕೃಷ್ಣದೇವರಾಯನಲ್ಲಿದ್ದ ಶ್ರೀವೈಷ್ಣವಪಂಥದ ನಿಷ್ಠೆಗೆ ಸಾಕ್ಷಿ. ಕಾಂಚೀಪುರಂನ ವರದರಾಜಸ್ವಾಮಿ ದೇವಾಲಯದ ಸುಧಾರಣೆಯತ್ತಲೂ ಗಮನಹರಿಸಿದ. ಮಹಾರಾಷ್ಟ್ರದಲ್ಲಿ ವ್ಯಾಪಕವಾಗಿ ಹಬ್ಬಿದ್ದ ವಿಠೋಬಪಂಥದ ಪ್ರಭಾವವು ಸ್ವಯಂ ಶ್ರೀವೈಷ್ಣವನಾಗಿದ್ದ ಕೃಷ್ಣದೇವರಾಯನ ಮೇಲೆ ಉಂಟಾದುದು ಸಹಜ.

ಕೃಷ್ಣದೇವರಾಯನು ಶ್ರೀವೈಷ್ಣವಪಂಥವನ್ನು ನಾನಾಮುಖವಾಗಿ ಪ್ರೋತ್ಸಾಹಿಸಿದಂತೆಯೇ, ಈ ಪಂಥದ ಗುರುಗಳನ್ನೂ ಅಪಾರವಾಗಿ ಮನ್ನಿಸಿದ. ಚಕ್ರವರ್ತಿಯ ಇಂಥಾ ಗೌರವಕ್ಕೆ ಪಾತ್ರರಾದವರು ಶ್ರೀವೈಷ್ಣವ ಆಚಾರ್ಯರಾಗಿದ್ದ ವೆಂಕಟತಾತಾಚಾರ್ಯರು. ರಾಯನು ಈ ಆಚಾರ್ಯರನ್ನು ವಿಜಯನಗರ ಸಾಮ್ರಾಜ್ಯದ ಎಲ್ಲ ಶ್ರೀವೈಷ್ಣವರ ಗುರುಗಳೆಂದು ಮಾನ್ಯಮಾಡಿದ್ದ. ರಾಯನು ೧೫೨೩ರಲ್ಲಿ ರಾಜಶಾಸನವೊಂದನ್ನು ಹೊರಡಿಸಿ, ಈ ಆಚಾರ್ಯರಿಗೆ ಕಂಚಿಯ ದೇವಸ್ಥಾನದಲ್ಲಿ ಅಗ್ರ ತೀರ್ಥ-ಪ್ರಸಾದ ಸಿಗುವಂತೆ ಆಜ್ಞಾಪಿಸಿದ. ಅಷ್ಟೇ ಅಲ್ಲ, ಧಾರ್ಮಿಕ ಮತ್ತು ಸಾಮಾಜಿಕ ಅಪರಾಧಗಳನ್ನು ವಿಚಾರಣೆಗೊಳಪಡಿಸಿ ನ್ಯಾಯತೀರ್ಮಾನ ಮಾಡುವ ಹಾಗೂ ತಪ್ಪಿತಸ್ಥರಿಗೆ ಶಿಕ್ಷೆ ನೀಡುವ ದಂಡನಾಧಿಕಾರವನ್ನೂ ಈ ಆಚಾರ್ಯರಿಗೆ ನೀಡಿದ. ಇಂಥದೇ ಗೌರವಕ್ಕೆ ಪಾತ್ರರಾದ ಇನ್ನೋರ್ವ ಗುರುಗಳೆಂದರೆ ದ್ವೈತಸಿದ್ಧಾಂತಿ ವ್ಯಾಸರಾಯರು ಅಥವಾ ವ್ಯಾಸತೀರ್ಥ ಯತೀಂದ್ರರು. ಇವರು ಮಹಾನ್ ವಿದ್ವಾಂಸರೂ ಆಗಿದ್ದು, ರಾಯನಿಂದ ಹಲವಾರು ಹಳ್ಳಿಗಳ ದತ್ತಿಗಳನ್ನೂ ದಾನಗಳನ್ನೂ ಸ್ವೀಕರಿಸಿದರು.

ಕೃಷ್ಣದೇವರಾಯನ ತರುವಾಯ ವಿಜಯನಗರದಲ್ಲಿ ಶ್ರೀವೈಷ್ಣವಪಂಥವನ್ನು ಪೋಷಿಸುವತ್ತ ಪ್ರಮುಖ ಪಾತ್ರವಹಿಸಿದವನೆಂದರೆ ಅಚ್ಯುತದೇವರಾಯ. ಈತ ಸ್ವಯಂ ಶ್ರೀವೈಷ್ಣವಪಂಥೀಯನಾಗಿದ್ದರೂ ಇತರ ಪಂಥಗಳನ್ನು ಗೌರವಿಸುವಲ್ಲಿ ಶ್ರದ್ಧೆ ತೋರಿದ. ತನ್ನ ಹದಿಮೂರು ವರ್ಷಗಳ ಆಳ್ವಿಕೆಯ ಆರಂಭದ ಕೆಲವು ವರ್ಷಗಳಲ್ಲಿ ಶೈವ ಮತ್ತು ಶ್ರೀವೈಷ್ಣವಪಂಥಗಳನ್ನು ಸಮಾನವಾಗಿ ಪುರಸ್ಕರಿಸಿದ ಅಚ್ಯುತದೇವರಾಯ, ತನ್ನ ಆಳ್ವಿಕೆಯ ಉಳಿದರ್ಧ ಅವಧಿಯಲ್ಲಿ ಶ್ರೀವೈಷ್ಣವಪಂಥಕ್ಕೇ ಆದ್ಯತೆ ನೀಡಿದ. ೧೫೩೪ರಲ್ಲಿ ಕಾಂಚೀಪುರಂನ ವರದರಾಜು ಮತ್ತು ಏಕಾಂಬ್ರನಾಥ ದೇವಾಲಯಗಳಿಗೆ ಕೆಲವು ಗ್ರಾಮಗಳನ್ನು ದತ್ತಿಯಾಗಿ ನೀಡಿದ. ವರದರಾಜಸ್ವಾಮಿ ದೇವಾಲಯಕ್ಕೆ ಹೆಚ್ಚಿನ ಆದ್ಯತೆ ನೀಡುವುದರೊಡನೆ ತನ್ನ ಶ್ರೀವೈಷ್ಣವಪಂಥದ ನಿಷ್ಠೆಯನ್ನು ವ್ಯಕ್ತಪಡಿಸಿದ. ಕಂಚಿಯಲ್ಲಿ ಮುತ್ತು-ರತ್ನಗಳಿಂದ ತುಲಾಭಾರ ಮಾಡಿಸಿಕೊಂಡ ಅಚ್ಯುತದೇವರಾಯ, ವರದರಾಜಸ್ವಾಮಿಗೆ ಹೇರಳ ದಾನ ದಕ್ಕುವಂತೆ ಮಾಡಿದ್ದು ಗಮನಾರ್ಹ. ವಿಜನಗರದ ವಿಠ್ಠಲ ದೇವಾಲಯಕ್ಕೂ ಈತನಿಂದ ಸಾಕಷ್ಟು ದತ್ತಿ-ದಾನಗಳು ಲಭ್ಯವಾದವು. ೧೫೩೪ರಲ್ಲಿಯೇ ವಿಠ್ಠಲ ದೇವಾಲಯದಲ್ಲಿ ಪುರಾಣವನ್ನು ವಾಚಿಸುವ ಈರ್ವರು ಶ್ರೀವೈಷ್ಣವರಿಗೆ ಭೂಮಿಯನ್ನೂ ಮನೆಗಳನ್ನೂ ದಾನವಾಗಿತ್ತ. ೧೫೪೫ರಲ್ಲಿ 'ಆನಂದನಿಧಿ' ಎಂಬ ದಾನವನ್ನು ಕೊಟ್ಟುದು

ವಿಶೇಷ. ಭಾಸ್ಕರಕ್ಷೇತ್ರದ (ಹಂಪಿಯ) ತುಂಗಭದ್ರಾತೀರದ ವಿಠಲೇಶ್ವರನ ಸನ್ನಿಧಿಯಲ್ಲಿ ಮಾಧವನ (ವಿಷ್ಣುವಿನ) ಪ್ರೀತಿಗೆ ಪಾತ್ರನಾಗಲು ಅಚ್ಯುತದೇವರಾಯನು ಸಮಸ್ತ ಭೂಸುರರಿಗೆ ಈ ಆನಂದನಿಧಿ ದಾನ ನೀಡಿದನೆಂದಿದೆ. ಪ್ರಮುಖ ಯುದ್ಧವೊಂದರಲ್ಲಿ ಜಯಶಾಲಿಯಾದ ಪ್ರಯುಕ್ತ ಈ ರಾಯನು ತನ್ನ ಸಂತೋಷಕ್ಕಾಗಿ ಆನಂದನಿಧಿ ದಾನವನ್ನು ನೀಡಿದ್ದಿರಬೇಕೆಂಬ ಅಭಿಪ್ರಾಯವಿದೆ (*ವಿಜಯನಗರ ಅಧ್ಯಯನ* -೮. ಪು.೧೪೧-೧೪೨) ೧೫೩೯ ಮೇ ತಿಂಗಳಿನಲ್ಲಿ ವೈಖಾನಸಸೂತ್ರದನ್ವಯ ಚಿದಂಬರಂನಲ್ಲಿ ಪಿಳ್ಳೈಗೋವಿಂದರಾಜಮೂರ್ತಿಯನ್ನು ಸ್ಥಾಪಿಸಿದನಲ್ಲದೆ, ಈ ದೇವರ ನಿತ್ಯಪೂಜಾ ಕಾರ್ಯಕ್ಕೆಂದು ೫೦೦ ಹೊನ್ನುಗಳನ್ನು ದಾನಮಾಡಿದ.

ಅರವೀಡು ಸಂತತಿಯ ಆಳ್ವಿಕೆ ಮೊದಲಿಟ್ಟನಂತರವೂ ವಿಜಯನಗರದಲ್ಲಿ ಶ್ರೀ ವೈಷ್ಣವಪಂಥಕ್ಕೆ ಮೊದಲಿನಂತೆಯೇ ಪ್ರೋತ್ಸಾಹ -ಮನ್ನಣೆಗಳು ಮುಂದುವರೆದವು. ತುಳುವ ವಂಶದ ಸದಾಶಿವರಾಯ ಮತ್ತು ಅರವೀಡು ವಂಶದ ರಾಮರಾಜರು ನಿಷ್ಠಾವಂತ ಶ್ರೀವೈಷ್ಣವಪಂಥಾನುಯಾಯಿಗಳಾಗಿದ್ದರು. ಇವರ ಆಡಳಿತಾವಧಿಯಲ್ಲಿ ಶ್ರೀ ವೈಷ್ಣವ ಆಚಾರ್ಯರಿಗೆ ಸಾಕಷ್ಟು ಪೋಷಣೆ-ಪ್ರೋತ್ಸಾಹಗಳೂ ದೊರೆತವು. ತಿರುಮಲೈ ಮತ್ತು ತಿರುಪತಿಗಳು ಮಾತ್ರವಲ್ಲದೇ, ಶ್ರೀ ಪೆರಂಬದೂರ್ ಮತ್ತು ಶ್ರೀ ಮುಷ್ಣಮ್‌ಗಳಲ್ಲಿಯ ದೇವಾಲಯಗಳಿಗೆ ವಿಶೇಷ ದಾನಗಳನ್ನು ಸಮರ್ಪಿಸಲಾಯಿತು. ಶ್ರೀವೈಷ್ಣವ ಆಚಾರ್ಯ ರಲ್ಲಿ ತಾಳ್ಳಪಾಕಂ ಪಂಗಡಕ್ಕೆ ಸೇರಿದ ಅನ್ನಮಾಚಾರ್ಯ, ತಿರುಮಲಾಚಾರ್ಯ, ತಾಳ್ಳಪಾಕಂ ತಿರುವೇಂಗಳನಾತರಂಥವರು ರಾಮರಾಜನಿಂದ ಬಹುವಾಗಿ ಗೌರವಿಸಲ್ಪ ಟ್ಟರು. ಕೃಷ್ಣದೇವರಾಯನ ಅವಧಿಯಲ್ಲಿ ಆಸ್ಥಾನ ಆಚಾರ್ಯರಾಗಿದ್ದ ಗೋವಿಂದ ದೇಶಿಕರು ಪ್ರಸಿದ್ಧ ಶ್ರೀವೈಷ್ಣವ ಆಚಾರ್ಯ ತಾತಾಚಾರ್ಯರಿಂದ ಸ್ಥಾನಾಂತರಗೊಂಡರು. ಇದೇ ಅವಧಿಯಲ್ಲಿ ದೊಡ್ಡಾಚಾರ್ಯರು ಚಿದಂಬರಂ (ಚಿತ್ರಕೂಟ)ನಲ್ಲಿ ಏರ್ಪಟ್ಟ ವಾದದಲ್ಲಿ ಶೈವ ವಿದ್ವಾಂಸರನ್ನು ಜಯಿಸುವುದರೊಡನೆ, ತಾತಾಚಾರ್ಯ ಮತ್ತು ರಾಮರಾಜರ ನೆರವಿನೊಡನೆ ಅದೇ ಸ್ಥಳದಲ್ಲಿ ಗೋವಿಂದ ರಾಜದೇವರ ಆರಾಧನೆ ಆರಂಭಗೊಳ್ಳಲು ಕಾರಣಕರ್ತರೆನಿಸಿದರು. ಕಂಡಾಲ ಶ್ರೀರಂಗಾಚಾರ್ಯರೆಂಬ ಇನ್ನೋರ್ವ ಶ್ರೀವೈಷ್ಣವ ಆಚಾರ್ಯರು ಶ್ರೀಪೆರಂಬದೂರಿನಲ್ಲಿ ರಾಮಾನುಜಕೂಟ ನಡೆಸುವುದಕ್ಕಾಗಿ ೩೧ ಗ್ರಾಮಗಳ ದತ್ತಿಯನ್ನು ಹಾಕಿಕೊಟ್ಟದು ಸಹಾ ಇದೇ ಅವಧಿಯಲ್ಲಿ.

ಒಂದನೇ ತಿರುಮಲನು (೧೫೬೫-೧೫೬೭) ಕಂಚಿ, ಶ್ರೀರಂಗ, ತಿರುಪತಿ(ಶೇಷಾಚಲ), ಚಿದಂಬರಂ(ಕನಕಸಭಾ) ಮತ್ತು ಅಹೋಬಲಾದ್ರಿಗಳಲ್ಲಿ ತುಲಾಪುರುಷ ಮತ್ತಿತರ ದಾನ-ದತ್ತಿಗಳನ್ನು ನೆರವೇರಿಸಿದ ಒಂದನೇ ಶ್ರೀರಂಗನೂ ನಿಷ್ಠಾವಂತ ಶ್ರೀವೈಷ್ಣವ ಪಂಥಾನು ಯಾಯಿಯಾಗಿದ್ದು, ಅಹೋಬಿಲಂ ನರಸಿಂಹ ದೇವಾಲಯದಲ್ಲಿ ಪೂಜಾ ಕೈಂಕರ್ಯ ಗಳು ಮೊದಲಿನಂತೆ ನಡೆಯಲು ಕಾರಣನೆನಿಸಿದ. ಇದಕ್ಕೆ ಮುನ್ನ ಈ ಪ್ರದೇಶವು

ಇಬ್ರಾಹಿಸ ಖುತಲಿಬಾಷಾದ್ ಮತ್ತು ಹಂಡೆ ಅನಂತಪುರದ ಆಡಳಿತ ನೋಡಿಕೊಳ್ಳುತ್ತಿದ್ದ ಮಲಕಪ್ಪ ಇವರ ಅಧೀನದಲ್ಲಿದ್ದು, ದಿನನಿತ್ಯದ ಪೂಜಾದಿಗಳು ವ್ಯತ್ಯಸ್ತಗೊಂಡಿದ್ದವು. ಶ್ರೀರಂಗನು ಇವರನ್ನು ಸೋಲಿಸುವುದರೊಡನೆ, ಈ ದೇವಾಲಯದ ಮೇಲ್ವಿಚಾರಕರಾಗಿದ್ದ ಜಿಯ್ಯಂಗಾರ್‌ರಿಗೆ ಇವುಗಳನ್ನು ವಹಿಸಿಕೊಟ್ಟ. ಕರ್ನಾಟಕದ ಮೇಲುಕೋಟೆ, ತಮಿಳು ನಾಡಿನ ಶ್ರೀಪೆರಂಬದೂರ್, ಶ್ರೀಮುಷ್ಣಮ್ ಮತ್ತು ತಿರುವಳ್ಳಿಕೇಣಿಗಳ ಶ್ರೀವೈಷ್ಣವ ದೇವಾಲಯಗಳಿಗೆ ಈತನಿಂದ ಹಲವಾರು ದತ್ತಿ-ದಾನಗಳು ಸಲ್ಲಿಸಲ್ಪಟ್ಟವು. ಶ್ರೀವೈಷ್ಣವ ವಿದ್ವಾಂಸ ಎಟ್ಟೂರು ಕುಮಾರ ತಿರುಮಲತಾತಾಚಾರ್ಯರು ಈತನ ಆಸ್ಥಾನದಲ್ಲಿ ಆಶ್ರಯ ಪಡೆದುಕೊಂಡರು. ಶ್ರೀರಂಗನು ಕಂಚಿಯ ವಿಷ್ಣು ದೇವಾಲಯವನ್ನೂ ಅಭಿವೃದ್ಧಿಪಡಿಸಿದನಲ್ಲದೆ, ಇದಕ್ಕಾಗಿ ತಿರುಪ್ಪಾಣಿ ಶಿಂಗಾರೈಯ್ಯಂಗಾರ್ ಎಂಬುವರನ್ನು ತನ್ನ ಪರವಾಗಿ ನೇಮಿಸಿದ. ಶ್ರೀರಂಗಂನಲ್ಲಿಯೂ ವಾಮನ ದೇವಾಲಯದ ಗರ್ಭಗೃಹ, ಅರ್ಧಮಂಟಪ, ಮಹಾಮಂಟಪ ಮತ್ತು ಗೋಪುರಗಳನ್ನು ನಿರ್ಮಿಸಿಕೊಟ್ಟ ಈತನ ಅವಧಿಯಲ್ಲಿ ರಾಮಾನುಜರನ್ನು ಆರಾಧಿಸುವ ಪದ್ಧತಿಗೆ ಇನ್ನಷ್ಟು ಚಾಲನೆ ದೊರೆಯಿತು. ೧೫೭೫ರ ಶಾಸನದ ಪ್ರಕಾರ, ಈತನ ಗುರುಗಳಾಗಿದ್ದ ತಾತಾಚಾರ್ಯ ಮತ್ತಿತರರು, ಮೇಲುಕೋಟೆಯಲ್ಲಿ ರಾಮಾನುಜರನ್ನು ಕೀರ್ತಿಸುವ ವೇದಾಂತದೇಶಿಕರ 'ಯತಿರಾಜಸಪ್ತತಿ'ಯನ್ನು ವಾಚಿಸಿದರೆನ್ನಲಾಗುತ್ತದೆ. ತನ್ನ ಹಿಂದಿನ ಅರಸರಂತೆಯೇ ಶ್ರೀರಂಗನೂ ಶಿವನನ್ನು ಗೌರವಿಸುತ್ತಿದ್ದು, ತನ್ನ ಶಾಸನಗಳ ಆರಂಭದಲ್ಲಿ ಶಿವ-ವಿಷ್ಣು-ಗಣೇಶರನ್ನು ಸ್ತುತಿಸಿದ್ದಾನೆ.

ತಿರುಮಲ ಮತ್ತು ಒಂದನೇ ಶ್ರೀರಂಗನ ಕಾಲದವರೆಗೆ, ವಿಜಯನಗರ ಸಾಮ್ರಾಟರು ವಿರೂಪಾಕ್ಷದೇವರ ಕೃಪಾಕಟಾಕ್ಷವನ್ನೆ ನಂಬಿಕೊಂಡು ಬಂದುದು ಸ್ಪಷ್ಟ. ಆದರೆ ಇಮ್ಮಡಿ ವೆಂಕಟ ಅಥವಾ ಪೆದ್ದವೆಂಕಟನ (೧೫೮೬-೧೬೧೪)ಕಾಲದಿಂದ ವಿಜಯನಗರದ ಧಾರ್ಮಿಕ ನೀತಿಯಲ್ಲಿ ಬದಲಾವಣೆ ಕಂಡುಬರಲಾರಂಭಿಸಿತು. 'ಶ್ರೀವಿರೂಪಾಕ್ಷ' ಅಂಕಿತದ ಸ್ಥಾನದಲ್ಲಿ 'ಶ್ರೀ ವೆಂಕಟೇಶ' ಅಂಕಿತ ಕಾಣಿಸತೊಡಗಿತು. ಈ ಅರಸನ ಶಾಸನ ಪಾಠಗಳ ಆರಂಭದ ಸ್ತುತಿಗಳಲ್ಲಿ ಶ್ರೀವೆಂಕಟೇಶ ಅಥವಾ ಶ್ರೀರಾಮ ಅಥವಾ ವಿಷ್ಣುವಿನ ಹೆಸರುಗಳು ಕಂಡುಬಂದವು. ತಿರುಪತಿಯ ವೆಂಕಟೇಶ್ವರನ ಸನ್ನಿದಿಯಲ್ಲಿಯೇ ದಾನಗಳು ನೀಡಲಾರಂಭ ವಾದವು. ಹೀಗೆ ವಿಜಯನಗರದವರು ದಕ್ಷಿಣದಿಕ್ಕಿಗೆ ಮೊದಲಿಗೆ ವಿದ್ಯಾನಗರದಿಂದ ಪೆನುಗೊಂಡೆಯತ್ತಲೂ ಆ ನಂತರ ಚಂದ್ರಗಿರಿಯತ್ತಲೂ ಸೆಳೆದೊಯ್ಯಲ್ಪಟ್ಟರು. ಅಂದರೆ ವಿರೂಪಾಕ್ಷನ ಸನ್ನಿಧಿಯಿಂದ ವೆಂಕಟೇಶ್ವರನ ಸನ್ನಿಧಿಗೆ ಶೈವಪಂಥದಿಂದ ಶ್ರೀ ವೈಷ್ಣವಪಂಥದತ್ತ ವಾಲಿಕೊಂಡರು.

ಇಮ್ಮಡಿ ವೆಂಕಟನ ಗುರುಗಳಾಗಿದ್ದ ತಾತಾಚಾರ್ಯರು ಆಸ್ಥಾನ ಅಚಾರ್ಯರಾಗಿ ಅಪಾರ ಪ್ರಭಾವ ಬೀರಿದರು. ತಿರುಮಲ ಶ್ರೀನಿವಾಸಾಚಾರ್ಯ, ಕಂದಾಡೆ ಅಪ್ಪಳಾ

ಚಾರ್ಯ, ತಾಳ್ಳಪಾಕಂ ತಿರುಮಲಾಚಾರ್ಯ ಮೊದಲಾದವರು ಈ ಅವಧಿಯಲ್ಲಿದ್ದ ಅತ್ಯಂತ ಪ್ರಭಾವಶಾಲಿ ಶ್ರೀವೈಷ್ಣವ ಆಚಾರ್ಯರು. ತಿರುಪತಿ, ಅಹೋಬಿಲಂ ಮೊದಲಾದ ಕ್ಷೇತ್ರಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ಇಮ್ಮಡಿ ವೆಂಕಟನ ನಾಣ್ಯಗಳು ಸಹಾ ಆತನಲ್ಲಿದ್ದ ವಿಷ್ಣುಭಕ್ತಿಗೆ ತಕ್ಕ ಉದಾಹರಣೆಯಂತಿವೆ. ಈತ ಟಂಕಿಸಿದ ನಾಣ್ಯಗಳ ಪೈಕಿ ಬಂಗಾರದ ನಾಣ್ಯವನ್ನು 'ವೆಂಕಟ ಪಗೋಡ' ಅಥವಾ 'ವೆಂಕಟರಾಯ ವರಹ'ವೆಂದು ಕರೆದಿದೆ. ಇದರ ಮೇಲ್ಮುಖದಲ್ಲಿ ಬಿಂದುಗಳಿಂದ ಅಲಂಕೃತವಾದ ವೃತ್ತದೊಳಗೆ ನಿಂತಿರುವ ವೆಂಕಟೇಶ್ವರ; ಅಕ್ಕಪಕ್ಕದಲ್ಲಿ ಶ್ರೀದೇವಿ-ಭೂದೇವಿಯರು; ಆತ ತನ್ನ ಮೇಲಿನ ಕೈಗಳಲ್ಲಿ ಶಂಖ-ಚಕ್ರಗಳನ್ನು ಹಿಡಿದಿರುವ ಚಿತ್ರವಿದೆ. ಹಿಮ್ಮುಖದಲ್ಲಿ ಎರಡು ಸಾಲುಗಳಲ್ಲಿರುವ 'ಶ್ರೀ ವೆಂಕಟೇಶ್ವರಾಯನಮಃ' ಎಂಬ ನಾಗರಿಲಿಪಿಯ ಬರಹವೂ ಇದೆ. ಈ ನಾಣ್ಯವನ್ನು ಟಂಕಿಸಿದವನು ಮುಮ್ಮಡಿ ವೆಂಕಟಪತಿರಾಯನೆಂತಲೂ ಹೇಳಲಾಗಿದೆ. ನಾಲ್ವಡಿ ಶ್ರೀರಂಗರಾಯನ ಚಿನ್ನದ ನಾಣ್ಯಗಳೂ ಇಂಥವೇ ಚಿಹ್ನೆ ಮತ್ತು ಬರಹಗಳನ್ನು ಒಳಗೊಂಡಿವೆ.

ವಿಜಯನಗರ ಇತಿಹಾಸದಲ್ಲಿ ಆ ನಂತರ ಕಾಣಿಸಿಕೊಳ್ಳುವ ಅರವೀಡುವಂಶದ ಇತರ ಅರಸರಲ್ಲಿ ಇಮ್ಮಡಿ ರಾಮ(ದೇವ), ಮುಮ್ಮಡಿ ವೆಂಕಟ ಮತ್ತು ಮುಮ್ಮಡಿ ಶ್ರೀರಂಗರೂ ಶ್ರದ್ಧಾವಂತ ಶ್ರೀ ವೈಷ್ಣವಪಂಥೀಯರೆನಿಸಿದ್ದರು. ಆದರೆ ಹಿಂದಿನಂತೆಯೇ ಇತರ ಪಂಥಗಳ ಬಗೆಗೆ ಈ ಅರಸರು ಅನುಸರಿಸಿದ ಸಹಿಷ್ಣುತಾ ನೀತಿಯಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಮುಮ್ಮಡಿ ಶ್ರೀರಂಗನೂ ಶ್ರೀವೈಷ್ಣವಪಂಥದ ಪ್ರಚಾರಕ್ಕಾಗಿ ಸಮಯಾ ಚಾರ್ಯರನ್ನು, ಅಂದರೆ ಸಂಪ್ರದಾಯದಂತೆ ನಡೆದುಕೊಳ್ಳುವವರನ್ನು ಬಳಸಿಕೊಂಡ. ೧೬೪೧ರಲ್ಲಿ ಈ ಅರಸನು 'ಸ್ವಯಮಾಚಾರ್ಯಪುರುಷ'ರಲ್ಲೊಬ್ಬರಾದ ನಲ್ಲಾನ ಚಕ್ರವರ್ತಿ ವೆಂಕಟಾಚಾರ್ಯರಿಗೆ ಭೂದತ್ತಿಯನ್ನು ಹಾಕಿಕೊಟ್ಟ. ಚಿದಂಬರಂನ ಗೋವಿಂದ ರಾಜ ದೇವಾಲಯದ ಅಭಿವೃದ್ಧಿಯತ್ತಲೂ ಈತ ಗಮನ ಹರಿಸಿದ. ಏನೇ ಇದ್ದರೂ ವಿಜಯನಗರ ಸಾಮ್ರಾಟರ ಆಳ್ವಿಕೆಯ ಉದ್ದಕ್ಕೂ ಶೈವರ ವಿರೋಧವಿದ್ದರೂ ಶ್ರೀ ವೈಷ್ಣವಪಂಥವು ರಾಜಪೋಷಣೆ ಪಡೆದುಕೊಳ್ಳುವುದರೊಡನೆ ಜನಪ್ರಿಯಪಂಥವಾಗಿ ಬೆಳೆಯಿತು.

೩. ವಿಜಯನಗರದ ರಾಮಾನುಜಕೂಟಗಳು

ಈಗಾಗಲೇ ಗಮನಿಸಿದಂತೆ, ವಿಜಯನಗರದರಸರು ಶ್ರೀವೈಷ್ಣವಪಂಥವನ್ನೂ ಅನುಸರಿಸಿದರು, ಪ್ರೋತ್ಸಾಹಿಸಿದರು. ರಾಮಾನುಜಪಂಥವು ವಿಜಯನಗರದಲ್ಲಿಯೂ ತನ್ನ ಪ್ರಭಾವ ಬೀರಿದ್ದಿತು. ರಾಮಾನುಜರ ತತ್ವ -ಸಿದ್ಧಾಂತಗಳಿಗನುಸಾರವಾಗಿಯೇ ಶ್ರೀವೈಷ್ಣವ ದೇವಾಲಯಗಳು ಹಾಗೂ ರಾಮಾನುಜಕೂಟಗಳು ಇಲ್ಲಿ ಅಸ್ತಿತ್ವಕ್ಕೆ ಬಂದವು. ಸಾಳುವ ಮತ್ತು ತುಳುವ ಅರಸರ ಅವಧಿಯಲ್ಲಿ ವಿಜಯನಗರದಲ್ಲಿ ಶ್ರೀ

ವೈಷ್ಣವಪಂಥದ ಚಟುವಟಿಕೆಗಳು ಅಧಿಕಗೊಂಡವು. ಅರವೀಡುವಂಶದ ಸದಾಶಿವರಾಯ ಮತ್ತು ರಾಮರಾಜರು ಈ ಪಂಥವನ್ನು ಸಾಕಷ್ಟು ಪ್ರೋತ್ಸಾಹಿಸಿದರು. ಆರಂಭದ ಸಂಗಮ ಅರಸರು ಧಾರ್ಮಿಕ ಸಹಿಷ್ಣುತೆಗೆ ಹೆಸರಾದಂತೆಯೇ ತಮ್ಮ ಸಾಮ್ರಾಜ್ಯದ ಕೆಲವು ವೈಷ್ಣವ-ಶ್ರೀ ವೈಷ್ಣವ ದೇವಾಲಯಗಳನ್ನು ಪೋಷಿಸಿದುದಕ್ಕೆ ಹಲವಾರು ಶಾಸನಗಳಿವೆ. ಬನ್ನೂರು ಘಟ್ಟದ ದಾಮೋದರ ದೇವಾಲಯವನ್ನು ಇವರು ಸಂರಕ್ಷಿಸಿದುದು ಪ್ರಮುಖವಾಗಿದೆ. ಒಟ್ಟಿನಲ್ಲಿ, ೧೬ನೇ ಶತಮಾನದ ಆರಂಭದ ಕಾಲಾವಧಿಯಿಂದ ಶ್ರೀವೈಷ್ಣವಪಂಥವು ವಿಜಯನಗರದಲ್ಲಿ ರಾಜಾಶ್ರಯ ಪಡೆದುಕೊಳ್ಳುವುದರೊಡನೆ ಬಲಗೊಂಡುದು ವಾಸ್ತವ.

ವಿಜಯನಗರದಲ್ಲಿ ಶ್ರೀವೈಷ್ಣವಪಂಥವು ಪ್ರಮುಖ ಕೇಂದ್ರವಾಗಿದ್ದುದು ವಿಠಲಾಪುರ. ೧೬ನೇ ಶತಮಾನದ ವೇಳೆಗೆ ವಿಠಲಾಪುರದಲ್ಲಿ ಅಸಂಖ್ಯಾತ ದೇವಾಲಯಗಳು, ಮಂಟಪಗಳು, ಕೊಳಗಳು, ಮಹಾದ್ವಾರಗಳು, ಮುಖ್ಯವೀಧಿಗಳು ನಿರ್ಮಾಣಗೊಂಡಂತೆಯೇ ಇವುಗಳೊಡನೆ ರಾಮಾನುಜಕೂಟಗಳೂ ಅಸ್ತಿತ್ವಕ್ಕೆ ಬಂದವು. ವಿಠ್ಠಲ ದೇವಾಲಯ ಸಂಕೀರ್ಣದಲ್ಲಿ ಹಲವಾರು ಹೊಸ ದೇವಾಲಯಗಳು ನಿರ್ಮಾಣಗೊಂಡವು. ಕೃಷ್ಣದೇವರಾಯನ ಗುರುಗಳಾದ ವ್ಯಾಸತೀರ್ಥರ ಜೀವಿತಾವಧಿಯಲ್ಲಿ, ಅಂದರೆ ೧೫೩೩ಳರಲ್ಲಿ, ವಿಠ್ಠಲ ದೇವಾಲಯದ ಸಂಕೀರ್ಣದಲ್ಲಿಯೇ ೧೩ ಮಂದಿ ಆಳ್ವಾರರ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಯಿತು. ಆಳ್ವಾರರಿಗೆ ಕೆಲವು ಮಂದಿರಗಳನ್ನು ನಿರ್ಮಿಸಲಾಯಿತು. ಆಳ್ವಾರರು ಮತ್ತು ಆಚಾರ್ಯರ ಆರಾಧನೆಯೊಡನೆ ವಿಠಲಾಪುರದಲ್ಲಿ ರಾಮಾನುಜಕೂಟಗಳನ್ನು ಸ್ಥಾಪಿಸಿದುದೂ ಶ್ರೀ ವೈಷ್ಣವಪಂಥವು ಪಡೆದ ಪ್ರಾಮುಖ್ಯತೆಗೆ ಸಾಕ್ಷಿ.

ವಿಠಲಾಪುರದಲ್ಲಿ ಮುದಲ್‌ಆಳ್ವಾರರು, ಅಂದರೆ ಮೊದಲ ಮೂವರು ಆಳ್ವಾರರಾದ ಪೊಯ್‌ಹೈ ಆಳ್ವಾರ್, ಪೂದತ್ತಾಳ್ವಾರ್ ಮತ್ತು ಪೇಯಳ್ವಾರ್‌ರಿಗೇ ಅಲ್ಲದೇ ನಮ್ಮಾಳ್ವಾರ್ (ಶಠಕೋಪ), ತಿರುಮಳಿಶೈಯಾಳ್ವಾರ್ ಮತ್ತು ರಾಮಾನುಜರಿಗಾಗಿಯೂ ದೇವಾಲಯಗಳನ್ನು ನಿರ್ಮಿಸಲಾಯಿತು. ಪ್ರತ್ಯೇಕ ನೆಲೆಗಳನ್ನೊಳಗೊಂಡ ಮುದಲ್ ಆಳ್ವಾರ್ ದೇವಲಾಯದ ಬಗೆಗೆ ೧೫೪೩ ಮತ್ತು ೧೫೪೫ರ ಶಾಸನಗಳಲ್ಲಿ ಪ್ರಸ್ತಾಪಿಸಲಾಗಿದೆ. ವಿಠ್ಠಲ ದೇವಾಲಯದ ಎದುರಿನಲ್ಲಿರುವ ರಥವೀಧಿಯ ಕಡೆಯಲ್ಲಿ ದಕ್ಷಿಣಾಭಿಮುಖನಾಗಿರುವ ರಾಮಾನುಜರ ದೇವಾಲಯದ ಬಗೆಗೆ ಸದಾಶಿವರಾಯನ ಕಾಲದ ಶಾಸನವು (೧೫೫೬) ಅರಹುತ್ತದೆ. ೧೫೫೬ರಲ್ಲೆ ಅಳಿಯ ರಾಮರಾಜನು ವಿಠ್ಠಲ ದೇವಾಲಯದ ಬಳಿಯ ನಮ್ಮಾಳ್ವಾರ್ ದೇವಾಲಯಕ್ಕೆ ದತ್ತಿಯೊಂದನ್ನು ನೀಡಿದ ವಿಠ್ಠಲ ದೇವಾಲಯದ ಗರುಡಮಂಟಪದ ಸಮೀಪ ಜೀರ್ಣಸ್ಥಿತಿಯಲ್ಲಿರುವ ದೇವಾಲಯವನ್ನು ತಿರುಮಳಿಶೈ ಆಳ್ವಾರರದೆನ್ನಲಾಗುತ್ತದೆ. ವಿಠ್ಠಲ ದೇವಾಲಯದ ವಾಯವ್ಯದಿಕ್ಕಿನಲ್ಲಿ ಕೋನೇಟಿರಾಜನ ಮಗ ಔಬಳರಾಜು ೧೫೫೬ರಲ್ಲಿ ಕಟ್ಟಿಸಿದ ತಿರುಮಂಗೈಯಾಳ್ವಾರ್‌ರ

ದೇವಾಲಯವಿದೆ. ಮುದಲ್‌ಅಳ್ವಾರ್ ಮತ್ತು ತಿರುಮಂಗೈಯಾಳ್ವಾರ್ ದೇವಾಲಯಗಳಲ್ಲಿ ರಾಮಾನುಜಕೂಟಗಳಿದ್ದವು. ರಾಮಾನುಜರ ದೇವಾಲಯದಲ್ಲೂ ಇನ್ನೊಂದು ರಾಮಾನುಜಕೂಟವಿದ್ದಿತೆಂಬ ಅಭಿಪ್ರಾಯವಿದೆ.

ತಿರುಂಗೈಯಾಳ್ವಾರ್, ಮುದಲ್‌ಆಳ್ವಾರ್ ಮತ್ತು ರಾಮಾನುಜರ ದೇವಾಲಯಗಳಲ್ಲಿಯೂ ರಾಮಾನುಜಕೂಟಗಳ ಸ್ವರೂಪವನ್ನು ಅವುಗಳ ಸ್ಥಾನ ಅಲ್ಲಿಯ ಒಳವ್ಯವಸ್ಥೆ, ಒಲೆಗಳು, ಮಸಿಯಿಡಿದ ಛಾವಣಿ, ಹೊಗೆಗೂಡು, ಜಾಲಾಂಧ್ರ ಇತ್ಯಾದಿ ಆಧಾರಗಳನ್ನನುಸರಿಸಿ ನಿರೂಪಿಸಲಾಗುತ್ತಿದೆ. ಸರಳ ಮಂಟಪಗಳಂತೆ ತೋರುವ ಈ ರಾಮಾನುಜ ಕೂಟಗಳು, ಯಾವುದೇ ಅಲಂಕಾರಗಳನ್ನು ಪಡೆಯದ 'ಪವಿತ್ರ' ಪ್ರಾಸಾದತಾಣಗಳಾಗಿರುತ್ತಿದ್ದುದು ವಾಸ್ತವ. ಆದರೆ ಇವು ಇತರೆಡೆಗಳಲ್ಲಿರುವ ಪಾಕಶಾಲೆಗಳಂತಿರದೆ, ಶ್ರೀವೈಷ್ಣವರಿಗೆ ಮಾತ್ರ ಸೀಮಿತಗೊಂಡಂತ್ತಿದ್ದವೆಂಬುದು ವಿಶೇಷ.

ವಿಜಯನಗರದ ಶಾಸನಗಳಲ್ಲಿ ರಾಮಾನುಜಕೂಟದ ವ್ಯವಸ್ಥೆ ಮತ್ತು ಅವುಗಳಿಗೆ ಬಿಡಲಾದ ದಾನ-ದತ್ತಿಗಳನ್ನು ಕುರಿತು ಅನೇಕ ಉಲ್ಲೇಖಗಳಿವೆ. ವೈಷ್ಣವ/ಶ್ರೀವೈಷ್ಣವ ದೇವಾಲಯಗಳು ಹಾಗೂ ಪೇಟೆಗಳನ್ನು ಕಟ್ಟಿಸುವಂಥಾ ಸಂದರ್ಭಗಳಲ್ಲೂ ದಾನಿಗಳು ರಾಮಾನುಜಕೂಟವನ್ನು ಲಕ್ಷಿಸುತ್ತಿದ್ದರೆಂಬುದು ಸ್ಪಷ್ಟಪಡುವ ಅಂಶ. ೧೫೩೪ರ ಶಾಸನವು (*ಹಂಪಿ ಶಾಸನಗಳು*, ೧೩೨) ಹೇಳುವಂತೆ ಅಚ್ಯುತದೇವರಾಯನು ಅರಸನಾಗಿದ್ದಾಗ ಆತನ ಮಂಡಳೇಶ್ವರ ಕಾಶ್ಯಪಗೋತ್ರ, ರುಕುಶಾಖೆಯ ಸಲಕರಾಜ ಒಡೆಯನ ಮಗ ಹಿರಿಯ ತಿರುಮಳರಾಜ ಒಡೆಯನು ತುಂಗಭದ್ರಾತೀರದಲ್ಲಿ ಶ್ರೀತಿರುವೆಂಗಲನಾಥ ದೇವರ ಪ್ರತಿಷ್ಠೆಯನ್ನು ಮಾಡಿಸುತ್ತಾನೆ. ಈ ಸಂದರ್ಭದಲ್ಲಿ ಅಚ್ಯುತದೇವರಾಯನು ದೇವರಿಗೆ ಆಭರಣಗಳನ್ನೂ ಪೂಜೆಗಳಿಗಾಗಿ ಹೊರಮಲೆನಾಡಿಗೆ ಸೇರಿದ ಅಚ್ಯುತಾಪುರವೆಂಬ ಪ್ರತಿನಾಮ ಹೊಂದಿದೆ ಚೋರಮನೂರು ಗ್ರಾಮವನ್ನೂ ನೀಡುತ್ತಾನೆ. ಈ ಪೇಟೆಯ ಪರಿಸರದಲ್ಲಿ ರಾಮಾನುಜಕೂಟವಿದ್ದುದನ್ನೂ ಈ ದಾನವು ಅದನ್ನೂ ಒಳಗೊಂಡಿದ್ದಿ ತೆಂಬುದನ್ನೂ ಈ ಶಾಸನವು ಹೇಳುತ್ತದೆ.

ಸದಾಶಿವರಾಯನು ರಾಜ್ಯಭಾರ ಮಾಡುತ್ತಿದ್ದಾಗ, ಶಠಮರುಶಣಗೋತ್ರ, ಅಪಸ್ತಂಭ ಸೂತ್ರದ ಯಜುಶಾಖಾಧ್ಯಾಯರಾದ ತಿರುಮಲ ಆವುಕು ತಾತಾಚಾರ್ಯರ ಮಗ ತಿರುವೆಂಗಳಾಚಾರ್ಯರು, ಶ್ರೀ ವಿಠ್ಠಲದೇವಲ ಅಮೃತಪಡಿಗೆ ಹಾಗೂ ಮಧ್ಯ ಏಕಾದಶಿ, ದ್ವಾದಶಿ, ಪುಣ್ಯಕಾಲಗಳ ನೈವೇದ್ಯಕ್ಕೆಂದು ಈ ಅರಸನಿಂದ ತೆಕ್ಕಲಕೋಟೆ ಸೀಮೆಯೊಳಗಣ ನಿಟ್ಟೂರು, ಆನೆಗೊಂದಿಯ ಅಡವಿಗೆರೆಗಳನ್ನು ದಾನವಾಗಿ ಪಡೆದುಕೊಳ್ಳುತ್ತಾರೆ. (*ಅದೇ ೧೯೬*); ಹಾಗೂ ಇದರೊಳಗೆ ಬರುವ ಎರಡು ಖಂಡುಗಗದ್ದೆ ಮತ್ತು ಲಿಂಗರಸನ ತೋಟ-ಇಷ್ಟನ್ನು ದೇವರಿಗೆ ಸಮರ್ಪಿಸುತ್ತಾರೆ. ಮುಖ್ಯಾಂಶವೆಂದರೆ, ದೇವರ ನೈವೇದ್ಯ ಕಟ್ಟಳೆಯ ವಿವರಗಳಿಂದ ತಿಳಿದುಬರುವಂತೆ, ಎಂಟು ಹರಿವಾಣಕ್ಕೆ

ಪಂಚಪರ್ವತ ಸುಖಿಪಡಿ ನೈವೇದ್ಯ, ತಿರುನಾಳು, ಉಟಿತಿರುನಾಳು, ರಾಮಾನುಜಕೂಟ ಮುಂತಾದವುಗಳಿಗೆ ಪಡಿತರ ನೀಡುವುದಲ್ಲದೆ, ಮೇಲುವೆಚ್ಚಕ್ಕೂ ಹಣವನ್ನು ನಿಗದಿಪಡಿಸಲಾಗಿರುತ್ತದೆ. ತಿರುವೆಂಗಳಾ ಚಾರ್ಯರನ್ನೂ ಒಳಗೊಂಡಂತೆ ಇತರರಿಗೆ ಸಲ್ಲಬೇಕಾದ ಪಾಲುಗಳ ವಿವರವೂ ಇದರಲ್ಲಿ ದೊರಕುತ್ತದೆ. ಇಂಥಾ ಪಾಲು ಪಡೆದುಕೊಳ್ಳುವವರಲ್ಲಿ ಸ್ವಯಂಪಾಕಿಗಳೂ ಕಂಡು ಬರುತ್ತಾರೆ.

೧೫೫೬ರ ಸದಾಶಿವರಾಯನ ಕಾಲದ ತೆಲುಗು ಶಾಸನವೊಂದು (*ಅದೇ,* ೨೧೯) ಅತ್ರೇಯಗೋತ್ರ, ಸೋಮವಂಶದ ಮಹಾಮಂಡಳೇಶ್ವರ ರಾಮರಾಜ ಕೋನೇಟಯ್ಯನ ಮಗನಾದ ಅವುಬಳ ಮಹಾರಾಜರು ಶ್ರೀ ವಿಠ್ಠಲೇಶ್ವರ ದೇವಾಲಯದ ಪ್ರಾಕಾರದ ಒಳಗೆ ವಾಯವ್ಯದಲ್ಲಿ ತಿರುಮಂಗೈಯಾಳ್ವಾರರಿಗೆ ಗರ್ಭಗೃಹ, ಶುಕನಾಸಿ, ಅಂತರಾಳ, ರಂಗಮಂಟಪ ಮುಂತಾದವುಗಳನ್ನು ಕಟ್ಟಿಸಿ, ಅವುಗಳಿಗೆ ಗ್ರಾಮಗಳನ್ನು ದತ್ತಿ ನೀಡಿದ ವಿಚಾರವನ್ನು ಅರಹುತ್ತದೆ. ಇದಕ್ಕೆ ಸಂಬಂಧಿಸಿದ ಕಟ್ಟಳೆಗಳಲ್ಲಿ, ಶ್ರೀವೈಷ್ಣವರಿಗೆ ರಾಮಾನುಜಕೂಟವನ್ನು ನಡೆಸಲು ತಿರುಪತಿಯಿಂದ ಬಂದ ಸ್ವಯಂಪಾಕದ ಪರಿಚಾರಕರ ನೇಮಕವು ಮುಖ್ಯವಾದುದು.

ಶ್ರೀವೈಷ್ಣವ ಭಕ್ತರಿಗಾಗಿ ರಾಮಾನುಜಕೂಟಗಳಲ್ಲಿ ಆಹಾರವನ್ನು ಸಿದ್ಧಪಡಿಸುವವರನ್ನು 'ಸ್ವಯಂಪಾಕಿಗಳು' ಅಂದರೆ ವಿಶೇಷ ಅಥವಾ ಶುದ್ಧವಾದ ಅಡಿಗೆ ಮಾಡುವವರೆಂದು ಶಾಸನಗಳಲ್ಲಿ ಗುರುತಿಸಲಾಗಿದೆ. ದೇವಾಲಯಗಳ ಛತ್ರಗಳಲ್ಲಿ ಅಥವಾ ರಾಮಾನುಜಕೂಟಗಳಲ್ಲಿ ಅಡಿಗೆಮಾಡುವ ಹಾಗೂ ಅದಕ್ಕೆ ಅಗತ್ಯವಿರುವ ಸಾಮಗ್ರಿಗಳನ್ನು ಹೊಂದಿಸಿಕೊಳ್ಳುವ ಸಂಬಂಧದಲ್ಲಿ ಶಾಸನಗಳು ವಿವರವನ್ನು ಒದಗಿಸುತ್ತವೆ. ಉದಾಹರಣೆಗೆ, ಸದಾಶಿವರಾಯನ ೧೫೫೪ರ ಶಾಸನವೊಂದು (*ಅದೇ,* ೧೮೬) ವಿಠ್ಠಲ ದೇವಾಲಯಕ್ಕೆಂದು ವಿವಿಧ ರೀತಿಯ ನೈವೇದ್ಯ ತಿನಿಸುಗಳಿಗಾಗಿ ನೀಡುತ್ತಿದ್ದ ಪಡಿಯ ವಿವರ; ಈ ತಿನಿಸುಗಳನ್ನು ತಯಾರಿಸುವಾಗ ಕುಟ್ಟುವ, ಬೀಸುವ ಕೂಲಿಗೆ ತಗಲುವ ವೆಚ್ಚ ಇತ್ಯಾದಿ ವಿವರಗಳನ್ನು ಒದಗಿಸುತ್ತದೆ.

೧೫೬೩ರ ಇನ್ನೊಂದು ಶಾಸನವು (*ಅದೇ,* ೧೮೫), ನೈವೇದ್ಯಕ್ಕಾಗಿ ದಿನವೊಂದಕ್ಕೆ ನೀಡಬೇಕಾದ ಪಡಿತರವನ್ನು ವಿವರಿಸಿದೆ. ಈ ಉದಾಹರಣೆಗಳು ವಿಜಯನಗರಕಾಲದ ರಾಮಾನುಜಕೂಟಗಳೂ ಸೇರಿದಂತೆ ದೇವಾಲಯಗಳ ಪಾಕಶಾಲೆಗಳ ನಿರ್ವಹಣೆಯ ವಿಧಾನವನ್ನು ತಿಳಿಸಿಕೊಡುತ್ತವೆ. ರಾಮಾನುಜಕೂಟಗಳಲ್ಲಿ ಸಿದ್ಧಪಡಿಸಲಾಗುತ್ತಿದ್ದ ಆಹಾರವನ್ನು ಶ್ರೀವೈಷ್ಣವರಿಗೆ 'ನೈವೇದ್ಯ'ವೆಂತಲೂ ಇತರರಿಗೆ 'ಪ್ರಸಾದ'ವೆಂತಲೂ ವಿತರಿಸಲಾಗುತ್ತಿತ್ತು. ಪ್ರಸಾದವನ್ನು 'ಭೋಗ'ವೆಂತಲೂ ಕರೆದಿರುವುದರಿಂದ, ಭೋಜನಾಲಯವನ್ನು ಭೋಗಮಂಟಪವೆಂತಲೂ ಕರೆದಿದೆ. ವಿಜಯನಗರದಲ್ಲಿ ಹಿಂದಿನಿಂದಲೂ ಉಚಿತ ಪ್ರಸಾದನಿಲಯಗಳಿದ್ದುದಕ್ಕೆ ಶಾಸನಾಧಾರಗಳಿವೆ. ಆಗ ಇವುಗಳನ್ನು

ಛತ್ರ, ಹಿರಿಯಕಾಲುವೆಯ ಛತ್ರ (*ಅದೇ,* ೮೩ ಮತ್ತು ೮೪: ೧೫೪೫) ಭೋಜನಶಾಲಾ ಇತ್ಯಾದಿಯಾಗಿ ಕರೆದಿದೆ. ಮಾದಲಾಪುರ ಗ್ರಾಮದ ಕರೆಯೊಳಗಿರುವ 'ಊಟ(ದ) ಕಾಲುವೆ' ಯ ಪ್ರಸ್ತಾಪವೂ ಇದೆ (*ಅದೇ,* ೩೨೬:೧೫೪೦).

ಹಲವಾರು ಶಾಸನಗಳು ಉಲ್ಲೇಖಿಸುವಂತೆ, ವಿಜಯನಗರದ ಅವಧಿಯಲ್ಲಿ ದಾನ-ದತ್ತಿ-ಸೇವಾಕಾರ್ಯಗಳು ಅರಸರು, ಅಧಿಕಾರಿಗಳು ಮತ್ತು ಎಷ್ಟೋ ಮಂದಿ ದಾನಿಗಳಿಂದ ನೆರವೇರಿಸಲ್ಪಡುತ್ತಿದ್ದವು. ಇವುಗಳು ಮುಖ್ಯವಾಗಿ ದೇವರುಗಳ ನೈವೇದ್ಯ, ಪ್ರಸಾದ ವಿನಯೋಗ, ಉತ್ಸವ, ಹಬ್ಬಾಚರಣೆ, ಹೂದೋಟಗಳ ಸಂರಕ್ಷಣೆಗಳೇ ಅಲ್ಲದೆ, ಮಂಟಪ, ಗೋಪುರ, ದೇವಾಲಯ ಮತ್ತು ರಾಮಾನುಜಕೂಟಗಳ ನಿರ್ಮಾಣಗಳಿಗೆ ಸಂಬಂಧಿಸಿದವು. ಹಬ್ಬ-ಉತ್ಸವಗಳ ಅಚರಣೆ ಮತ್ತು ಅನ್ನಸಂತರ್ಪಣೆಗಳಿಗಾಗಿ ಭೂದತ್ತಿ, ಗ್ರಾಮದತ್ತಿಗಳೇ ಅಲ್ಲದೆ, ಹಣ ಮತ್ತು ಬಂಗಾರವನ್ನೂ ದಾನವಾಗಿ ನೀಡಲಾಗುತ್ತಿದ್ದಿತು.

ವಿಠಲಾಪುರದಲ್ಲಿ ಮುದಲ್‌ಆಳ್ವಾರ್ ಮತ್ತು ತಿರುಮಂಗೈಯಾಳ್ವಾರ್‌ಗಳಂಥಾ ಪ್ರಮುಖ ದೇವಾಲಯಗಳಿದ್ದು, ಶ್ರೀ ವೈಷ್ಣವಪಂಥದ ಚಟುವಟಿಕೆಗಳ ತಾಣವಾಗಿದ್ದರೂ ಇಲ್ಲಿ ಶ್ರೀವೈಷ್ಣವಮಠವಿದ್ದ ಬಗೆಗೆ ಯಾವುದೇ ಸಾಕ್ಷ್ಯವಿಲ್ಲವೆಂಬುದು ಗಮನಾರ್ಹ. ಇದಕ್ಕೆ ಕಾರಣವಾದರೂ ಮಾಧ್ವಪಂಥದ ಗುರುಗಳಂತೆಯೇ, ಶ್ರೀವೈಷ್ಣವಪಂಥದ ಆಚಾರ್ಯರು ಸಹಾ ವಿಜಯನಗರದಲ್ಲಿ ನೆಲೆಸಿರಲಿಲ್ಲ. ಆದರೆ ಈ ಆಚಾರ್ಯರು ಸಂದರ್ಭಾನುಸಾರ ವಿಜಯನಗರಕ್ಕೆ ಭೇಟಿಕೊಟ್ಟಾಗಲೆಲ್ಲ ಶ್ರೀವೈಷ್ಣವಪಂಥದ ದೇವಾಲಯಗಳಿಗೆ ಹೊಂದಿಕೊಂಡಂತೆ ಇದ್ದ ರಾಮಾನುಜಕೂಟಗಳಲ್ಲೊ ಅಥವಾ ಬೇರೆಡೆಯಲ್ಲೊ ವಾಸ್ತವ್ಯ ಮಾಡುತ್ತಿದ್ದರೆಂದು ವ್ಯಕ್ತಪಡುತ್ತದೆ. ಯಾವುದೇ ಪ್ರಸಿದ್ಧ ಶ್ರೀವೈಷ್ಣವ ಆಚಾರ್ಯರು ವಿಜಯನಗರದಲ್ಲಿ ಶಾಶ್ವತ ನೆಲೆಯನ್ನು ಹೊಂದಿರಲಿಲ್ಲ ಎಂಬುದನ್ನು ರಾಮಾನುಜಕೂಟಗಳ ಅಸ್ತಿತ್ವವೇ ದೃಢಪಡಿಸುತ್ತದೆನ್ನಲಾಗುತ್ತದೆ. ಆದ್ದರಿಂದ ರಾಮಾನುಜಕೂಟಗಳು ಹೊರಗಡೆಯ ಧಾರ್ಮಿಕಕೇಂದ್ರಗಳಿಂದ ವಿಜಯನಗರಕ್ಕೆ ಆಗಮಿಸುತ್ತಿದ್ದ ಯಾತ್ರಾರ್ಥಿ ಅಥವಾ ಸಂಚಾರಿ ಶ್ರೀವೈಷ್ಣವರಿಗೆ ನೈವೇದ್ಯವನ್ನು ಒದಗಿಸು ವಂಥಾ ಭೋಜನಾಲಯಗಳಾಗಿದ್ದುದು ಸ್ಪಷ್ಟ. ನಮ್ಮಾಳ್ವಾರ್ ದೇವಾಲಯದ ಹೊರಭಿತ್ತಿ ಯಲ್ಲಿ ಕೆಲವು ಶ್ರೀವೈಷ್ಣವ ಆಚಾರ್ಯರ ಶಿಲ್ಪಗಳನ್ನು ಬಿಡಿಸಲಾಗಿದೆ.

ರಾಮಾನುಜಕೂಟಗಳಂಥ ಭೋಜನಾಲಯಗಳು ವಿಜಯನಗರದ ಇತರ ದೇವಾಲಯಗಳಲ್ಲೂ ಇದ್ದವು. ಅವು ಸಹ ಬ್ರಾಹ್ಮಣರಿಗೆ ಅನ್ನ-ಪಾನಾದಿಗಳನ್ನು ಒದಗಿಸುತ್ತಿದ್ದವು. ಉದಾಹರಣೆಗೆ, ಹೊಯ್ಸಳ ಚಕ್ರವರ್ತಿ ವೀರ ಸೋಮೇಶ್ವರನ ೧೨೩೬ರ ಶಾಸನವು (*ಅದೇ,* ೫೪), ಶ್ರೀವಿರೂಪಾಕ್ಷದೇವರಿಗೆ ಅಂದಂದಿನ ಅಮೃತ

ಪಡಿಗೋಸ್ಕರ ಆ ಕ್ಷೇತ್ರದಲ್ಲಿಯ ೧೦ ಬ್ರಾಹ್ಮಣರಗಿಕ್ಕುವ ಸತ್ರಕ್ಕೋಸ್ಕರ ಧಾರಾಪೂರ್ವಕ ಕೊಟ್ಟ 'ದತ್ತಿ'ಯ ಬಗೆಗೆ ಪ್ರಸ್ತಾಪಿಸುತ್ತದೆ. ವಿಠ್ಠಲ ದೇವಾಲಯದಲ್ಲಿರುವಂತೆ ಬಾಲಕೃಷ್ಣನ ದೇವಾಲಯದಲ್ಲಿಯೂ ಮಂಟಪವಿದ್ದು, ಇದು ಪಾಕಶಾಲೆಯಾಗಿರುವಂತಿದೆ ಯೆಂಬ ಅಭಿಪ್ರಾಯವಿದೆ. ಆದರೆ ದಕ್ಷಿಣಭಾರದಲ್ಲಿ ಶ್ರೀವೈಷ್ಣವ ದೇವಾಲಯಗಳಲ್ಲಿಯ ಭೋಜನಾಲಯಗಳನ್ನು ರಾಮಾನುಜಕೂಟವೆಂದು ಕರೆದಂತೆಯೇ, ಶೈವ ದೇವಾಲಯ ಗಳ ಭೋಜನಾಲಯಗಳನ್ನು ಶಿವಕೂಟವೆಂದು ಕರೆಯಲಾಗುತ್ತಿದ್ದಿತೆನ್ನಲಾಗಿದೆ. ಎಲ್ಲ ಪಾಕಶಾಲೆಗಳು ಭೋಜನಾಲಯಗಳೂ ಆಗಿದ್ದವೆನ್ನುವುದರಲ್ಲಿ ಸಂಶಯವಿಲ್ಲ.

೪. ವಿಜಯನಗರದಾಚೆಯ ರಾಮಾನುಜಕೂಟಗಳು

ವಿಜಯನಗರ ವ್ಯಾಪ್ತಿಯ ಇತರೆಡೆಗಳಲ್ಲಿಯೂ ಹಲವಾರು ರಾಮಾನುಜಕೂಟ ಗಳಿದ್ದವು. ವಿಜನಯಗರದ ಅವಧಿಯಲ್ಲಿ ತಿರುಮಲೈ, ತಿರುಪತಿ, ಕಂಚಿ, ಶ್ರೀರಂಗಂ, ಅಹೋಬಿಲಂ, ಶ್ರೀಪೆರಂಬದೂರ್, ಮೊದಲಾದ ಪ್ರಮುಖ ಶ್ರೀವೈಷ್ಣವ ಧಾರ್ಮಿಕ ಸ್ಥಾನಗಳಲ್ಲಿ ರಾಮಾನುಜಕೂಟಗಳನ್ನು ನಡೆಸಲಾಗುತ್ತಿತ್ತು. ಇವುಗಳ ಸಂರಕ್ಷಣೆಗಾಗಿ ರಾಜರು, ರಾಣಿಯರು, ಅಧಿಕಾರಿಗಳು, ಸಾಮಂತರು, ಶ್ರೀಮಂತರು, ಆಸ್ತಿಕರು ಮೊದ ಲಾದವರು ನಾನಾ ವಿಧದಲ್ಲಿ ದತ್ತಿ-ದಾನಗಳನ್ನು ನೀಡುವುದರೊಡನೆ ಇತರ ಸೌಲಭ್ಯ ಗಳನ್ನು ಒದಗಿಸುತ್ತಿದ್ದರು. ಈ ಕುರಿತು ಅಸಂಖ್ಯಾತ ಶಾಸನಗಳು ಪ್ರಸ್ತಾಪಿಸುತ್ತದೆ.

ಸಂಗಮ ಅರಸರು ತಮ್ಮ ಆಡಳಿತದಲ್ಲಿ ಧರ್ಮಸಹಿಷ್ಣುತಾ ಧೋರಣೆಯನ್ನು ಅಳವಡಿಸಿಕೊಂಡಿದ್ದರೆಂಬುದನ್ನು ಈಗಾಗಲೇ ಗಮನಿಸಲಾಗಿದೆ. ಇಂಥ ಧರ್ಮ ಸಮನ್ವತೆಯ ನೀತಿಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿದವರೆಂದರೆ ಇಮ್ಮಡಿ ಪ್ರೌಢದೇವರಾಯ. ಈತನೂ ತನ್ನ ಹಿಂದಿನ ಅರಸರಂತೆಯೇ ಶ್ರೀವೈಷ್ಣವ ದೇವಾಲಯ ಗಳಿಗೂ ರಾಮಾನುಜಕೂಟಗಳಿಗೂ ಪೋಷಣೆ ಒದಗಿಸಿದ. ತನ್ನ ವಿಜಯಸಾಧನೆ, ದೀರ್ಘಾಯುಷ್ಯ ಹಾಗೂ ನೆಮ್ಮದಿಗಳಿಗೆಂದು ಶ್ರೀರಂಗಂನ ಶ್ರೀರಂಗನಾಥ ದೇವಾಲಯಕ್ಕೆ ಉತ್ತಮನಚೇರಿ ಕಿಳಿಯೂರು ಎಂಬ ಗ್ರಾಮವನ್ನು ದತ್ತಿಯಾಗಿ ಬಿಡುವುದರೊಡನೆ, ಈ ದೇವಾಲಯಕ್ಕೆ ಹೊಂದಿಕೊಂಡ ರಾಮಾನುಜಕೂಟದಲ್ಲಿ ನಿತ್ಯವೂ ೬೦ ಮಂದಿ ಶ್ರೀವೈಷ್ಣವರಿಗೆ ಊಟದ ವ್ಯವಸ್ಥೆಯನ್ನು ಕೈಗೊಳ್ಳುವಂತೆ ಆಜ್ಞಾಪಿಸಿದ. (*ಎಪಿ. ಇಂಡಿಕಾ*, xvi, ಪು.೩೪೫)

ಸಾಳುವ ನರಸಿಂಹನು ವೆಂಕಟೇಶ್ವರನ ಮಹಾಭಕ್ತನಾಗಿದ್ದು, ತಿರುಮಲೈ ತಿರುಪತಿಗಳ ದೇವಾಲಯಗಳ ಘನತೆ ಮತ್ತು ಪ್ರತಿಷ್ಠೆಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಹಲವಾರು ದತ್ತಿ - ದಾನಗಳನ್ನಿತ್ತು ಪ್ರೋತ್ಸಾಹಿಸಿದ. ತಿರುಮಲೈ ಮತ್ತು ತಿರುಪತಿಗಳಲ್ಲಿ ಈ ಅರಸರು ವೆಂಕಟೇಶ್ವರನ ಉತ್ಸವ, ಆಚರಣೆ, ಹೂದೋಟಗಳ ಸಂರಕ್ಷಣೆ, ರಾಮಾನುಜಕೂಟಗಳ

ಸ್ಥಾಪನೆ, ದೇವಾಲಯದ ವಿಸ್ತರಣೆ, ಕೊಳ ಮತ್ತು ಹೊಸ ದೇವಾಲಯಗಳ ನಿರ್ಮಾಣ ಮುಂತಾದ ಸೇವಾಕಾರ್ಯಗಳನ್ನು ಮುಂದುವರೆಸಿದ. ತಿರುಮಲೈ ಮತ್ತು ತಿರುಪತಿಗಳಲ್ಲಿ ಈ ಸಾಳುವ ನರಸಿಂಹನ ಪ್ರಧಾನ ಪ್ರತಿನಿಧಿಯಾಗಿದ್ದವರು ತೊಂಡೈಮಂಡಲಕ್ಕೆ ಸೇರಿದ ಕಂದಾಡೈ ಅಥವಾ ಕಂದಾಡೆ ರಾಮಾನುಜೈಯ್ಯಂಗಾರ್. ಇವರು ಈ ಅರಸನ ಆಧ್ಯಾತ್ಮ ಗುರುವೂ ಆಗಿದ್ದವರು. ಇವರ ಗುರು ಅಳಗೀಯ ಮನವಾಳಜೀಯರ್. ಕಂದಾಡೆ ರಾಮಾನುಜೈಯ್ಯಂಗಾರರು ಶ್ರೀರಂಗಂ, ತಿರುಮಲೈ ಮತ್ತು ಕಂಚಿಗಳನ್ನೊಳಗೊಂಡಂತೆ, ಉತ್ತರದ ಬದರಿಕಾಶ್ರಮದಿಂದ ದಕ್ಷಿಣದ ಧನುಷ್ಕೋಟಿಯವರೆಗೆ ೧೦೭ (೧೦೮.) ದಿವ್ಯದೇಶಗಳಲ್ಲಿರುವ ದೇವಾಲಯಗಳನ್ನು ಸಂದರ್ಶಿಸಿದಂಥವರು. ಈ ಆಚಾರ್ಯರು ತಿರುಪತಿಯನ್ನು ಯಾವ ವರ್ಷದಲ್ಲಿ ಸಂದರ್ಶಿಸಿದರೆಂಬದುನ್ನು ತಿಳಿದುಬಂದಿಲ್ಲ ವಾದರೂ ೧೪೬೭ರಲ್ಲಿ ಸಾಳುವ ನರಸಿಂಹನಿಂದ ತಿರುಪತಿಯಲ್ಲಿಯ ರಾಮಾನುಜ ಕೂಟಗಳ ಕರ್ತರಾಗಿ (Manager) ನೇಮಿಸಲ್ಪಡುವ ಮುನ್ನವೇ ಅಲ್ಲಿಗೆ ಭೇಟಿಕೊಟ್ಟಿದ್ದಿರ ಬಹುದೆನ್ನಲಾಗುತ್ತದೆ.

೧೪೬೭ ಡಿಸೆಂಬರ್ ೨೭ ಭಾನುವಾರದಂದು ಹಾಕಿಸಲಾದ ಸಾಳುವ ನರಸಿಂಹನ (ಸಾಳುವ ಮಹಾಮಂಡಲೇಶ್ವರ ನರಸಿಂಗಯ್ಯದೇವ ಮಹಾಅರಸು) ಶಾಸನವನ್ನು (*ಕ೩೮೦. ೨೯೯*) ತಿರುಪತಿಯ ಗೋವಿಂದ ಪೆರುಮಾಳ್ ದೇವಾಲಯದ ಉತ್ತರದಿಕ್ಕಿನ ಭಿತ್ತಿಯ ಮೇಲೆ ಕಂಡರಿಸಲಾಗಿದ್ದು, ಇದರಲ್ಲಿ ರಾಮಾನುಜಕೂಟ ಸ್ಥಾಪನೆಯ ಪ್ರಸ್ತಾಪ ಬಂದಿದೆ. ತಿರುಮಲೆಬೆಟ್ಟದ ತಿರುವೇಂಗಳನಾಥ ದೇವಾಲಯದಲ್ಲಿರುವಂತೆಯೇ ತಿರುಪತಿಯಲ್ಲಿಯೂ ಪೂಜಾಕಾರ್ಯ ಮತ್ತು ಪ್ರಸಾದ ವಿತರಣೆಗಳು ನಡೆಯಬೇಕೆಂದು ನರಸಿಂಹನು ತನ್ನ ಶಾಸನದಲ್ಲಿ ಆದೇಶಿಸುತ್ತಾನೆ. ತಿರುಪತಿಯಲ್ಲಿ ಈತನೇ ಸ್ವತಃ ನೂತನವಾಗಿ ರಾಮಾನುಜಕೂಟವನ್ನು ಸ್ಥಾಪಿಸಿದ್ದು, ಗೋವಿಂದರಾಜನ ಸನ್ನಿಧಿಯಲ್ಲಿ ಕಂಡಾಲ ರಾಮಾನುಜಯ್ಯ (ಕಂದಾಡೆ ರಾಮಾನುಜೈಯ್ಯಂಗಾರ್?) ಮತ್ತು ಅವರ ಶಿಷ್ಯರು ಹೊರಗಿನಿಂದ ಬರುವ ಮತ್ತು ಸ್ಥಳೀಯ ಶ್ರೀವೈಷ್ಣವರಿಗೆ ಊಟೋಪಚಾರದ (ಪ್ರಸಾದ ವಿತರಣೆಯ) ಮೇಲ್ವಿಚಾರಣೆಯನ್ನು ಕೈಗೊಳ್ಳುವಂತೆ ವ್ಯವಸ್ಥೆಗೊಳಿಸುತ್ತಾನೆ. ಅಲ್ಲದೆ, ಈ ಶಾಸನದಲ್ಲಿ ನಿರೂಪಿತಗೊಂಡಂತೆ, ನರಸಿಂಹನು ತಿರುಪತಿಬೆಟ್ಟದ ಮೇಲೆ ಇನ್ನೊಂದು ರಾಮಾನುಜಕೂಟವನ್ನು ಸ್ಥಾಪಿಸುವುದರೊಡನೆ ತಿರುವೇಂಕಟನಾಥದೇವರಿಗೆ ಪೂಜೆ-ನೈವೇದ್ಯಗಳ ಪ್ರಮಾಣವನ್ನು ನಿರ್ಧರಿಸುತ್ತಾನೆ; ಹಾಗೂ ಕಂಡಾಲ ರಾಮಾನುಜಯ್ಯ ಮತ್ತು ಅವರ ಶಿಷ್ಯರೇ ಇದರ ಮೇಲ್ವಿಚಾರಣೆ ಮಾಡುವಂತೆಯೂ ಆದೇಶಿಸುತ್ತಾನೆ.

ಶ್ರೀರಂಗಂ ಮತ್ತು ಕಂಚಿಗಳಲ್ಲಿ ರಾಮಾನುಜಕೂಟಗಳನ್ನು ಸ್ಥಾಪಿಸಿದವರು ಈ ರಾಮಾನುಜೈಯ್ಯಂಗಾರರೇ ಎಂದು ತಿರುಮಲೈ-ತಿರುಪತಿ ದೇವಾಲಯದ ಶಾಸನಗಳು ಸೂಚಿಸುತ್ತವೆ. (ಶಾಸನಗಳ ಸಂಖ್ಯೆ ೧೩,೧೫,೩೧, ೪೦ ಮತ್ತು ೪೪) ಇವರ ಅವಧಿ

ಯಲ್ಲಿ ಶಾಟ್ಟಾದ ಶ್ರೀ ವೈಷ್ಣವ ಪಂಗಡದವರು ತಿರುಪತಿ ದೇವಾಲಯದ ಪೂಜಾದಿ ಕಾರ್ಯಗಳಲ್ಲಿ ವಿಧಿವತ್ತಾಗಿ ಭಾಗವಹಿಸುತ್ತಿದ್ದರೆಂದು ವ್ಯಕ್ತಪಡುತ್ತದೆ. ರಾಮಾನುಜೈಯ್ಯಂಗಾರರ ಶಿಷ್ಯರೆನಿಸಿದ್ದ ಈ ಶಾಟ್ಟಾದ ಏಕಾಕಿ ಶ್ರೀವೈಷ್ಣವರು ತಿರುಮಲೈನಲ್ಲಿ ಸ್ಥಾಪನೆಗೊಂಡ ರಾಮಾನುಜಕೂಟಮ್‌ಗೆ ಶ್ರೀಗಂಧ,ಕಸ್ತೂರಿ, ಕರ್ಪೂರ, ತಾಂಬೂಲಾದಿ ವಸ್ತುಗಳನ್ನು ಸರಬರಾಜು ಮಾಡುವ ಹಕ್ಕನ್ನು ಹೊಂದಿದ್ದರು. ಕಂದಾಡೆ ರಾಮಾನುಜೈಯ್ಯಂಗಾರರ ತರುವಾಯ ತಿರುಮಲೈ ಮತ್ತು ತಿರುಪತಿಗಳಲ್ಲಿಯ ರಾಮಾನುಜಕೂಟಗಳ ಕರ್ತರಾಗಿ ನೇಮಕಗೊಂಡವರೇ ಕಂದಾಡೆ ಮಾಧವಯ್ಯಂಗಾರ್, ಇವರು ತಿರುಮಲೈನ ವೆಂಕಟೇಶ್ವರ ದೇವಾಲಯದ ಬಂಗಾರದ ಖಜಾನೆಯ ಮೇಲ್ವಿಚಾರಕರಾಗಿಯೂ ಕಾರ್ಯ ನಿರ್ವಹಿಸಿದರು. ಇವರ ನಂತರ ತಿರುಮಲೈ-ತಿರುಪತಿಗಳ ರಾಮಾನುಜಕೂಟಗಳ ಮತ್ತು ತಿರುಮಲೈನ ಬಂಗಾರದ ಖಜಾನೆಯ ಮೇಲ್ವಿಚಾರಕರಾದವರು ಕಂದಾಡೆ ಕುಮಾಮರ ರಾಮಾನುಜೈಯ್ಯಂಗಾರ್.

ಸಾಳುವರ ನಂತರ ವಿಜಯನಗರ ಅಧಿಪತಿಗಳೆನಿಸಿದ ತುಳುವವಂಶದವರು, ಈ ತಿರುಮಲೈ-ತಿರುಪತಿ ದೇವಾಲಯಗಳ ಬಗೆಗೆ ಅಪಾರ ಅಭಿಮಾನವಿರಿಸಿಕೊಂಡಿದ್ದರಲ್ಲದೆ, ಕೃಷ್ಣದೇವರಾಯ ಮತ್ತು ಅಚ್ಯುತದೇವರಾಯರ ಆಡಳಿತಾವಧಿಯಲ್ಲಿ ಈ ಅಭಿಮಾನ ಪರಾಕಾಷ್ಠೆ ತಲುಪಿತು. ಅದರಲ್ಲೂ ಕೃಷ್ಣದೇವರಾಯನು ವ್ಯಕ್ತಪಡಿಸಿದ ಭಕ್ತ್ಯತಿಶಯಗಳು ವಿಶೇಷವಾದವು. ಈತನು ತನ್ನ ಆಳ್ವಿಕೆಯ ಅವಧಿಯಲ್ಲಿ ಸುಮಾರು ಏಳು ಸಾರಿ ತಿರುಮಲೆಯಾತ್ರೆಯನ್ನು ಕೈಗೊಂಡಿದ್ದ. ಹೀಗೆ ಭೇಟಿ ನೀಡಿದಾಗಲೂ ಇತರ ಸಂದರ್ಭಗಳಲ್ಲೂ ಈತ ವೆಂಕಟೇಶ್ವರ ದೇವರಿಗೆ ಅರ್ಪಿಸಿದ ದತ್ತಿ-ದಾನಗಳಿಗೆ ಲೆಕ್ಕವಿಲ್ಲ. ದೇವಾಲಯದ ಅಭಿವೃದ್ಧಿಯ ಮಟ್ಟಿಗೆ ರಾಯನು ಕೈಗೊಂಡ ದುರಸ್ತಿಕಾರ್ಯ ಹಾಗೂ ಹೊಸ ನಿರ್ಮಾಣಕಾರ್ಯಗಳೂ ಸಾಕಷ್ಟಿವೆ. ಈತ ಇಲ್ಲಿ ಹಾಕಿಸಿರುವ ವೈಯಕ್ತಿಕ ಶಾಸನಗಳ ಸಂಖ್ಯೆ ಸುಮಾರು ೩೦. ಈತನ ರಾಣಿಯಾದ ತಿರುಮಲದೇವಿ ಮತ್ತು ಚಿನ್ನಾದೇವಿಯರ ಹೆಸರಿನಲ್ಲಿಯೂ ತಲಾ ೧೩ ಶಾಸನಗಳಿವೆ. ಕೃಷ್ಣದೇವರಾಯನ ಶಾಸನಗಳಲ್ಲಿ ಬ್ರಾಹ್ಮಣರಿಗೆ, ಅಂದರೆ ಶ್ರೀವೈಷ್ಣವರಿಗೆ ಮೀಸಲಾದ ದೇವಾಲಯದ ಭೋಜನಾಲಯಕ್ಕೆ ಅಪಾರ ದೇಣಿಗೆಯನ್ನು ಬಿಟ್ಟುಕೊಟ್ಟ ವಿಚಾರ ಮೇಲಿಂದ ಮೇಲೆ ಪ್ರಸ್ತಾಪಗೊಳ್ಳುತ್ತದೆ. ಈ ದೇವಾಲಯದ ಭೋಜನಾಲಯವು ರಾಮಾನುಜಕೂಟವಲ್ಲದೆ ಬೇರೆಯಲ್ಲವೆಂಬುದಕ್ಕೆ ಶಾಸನಗಳಲ್ಲಿಯೇ ಸೂಚನೆಗಳಿವೆ.

ಕೃಷ್ಣದೇವರಾಯನಿಗೆ ಒಳಿತಾಗಲೆಂದು ಹಾರೈಸಿ ತಿರುಪತಿಯ ದೇವಾಲಯಗಳಿಗೆ ಈತನ ಸಾಮಂತರು, ಅಧಿಕಾರಿಗಳು, ಭಕ್ತರು ಮೊದಲಾದವರು ಬಿಟ್ಟ ದತ್ತಿಗಳ ವಿವರಗಳುಳ್ಳ ಶಾಸನಗಳಲ್ಲಿ ರಾಮಾನುಜಕೂಟಗಳ ನೇರ ಪ್ರಸ್ತಾಪ ಕಂಡುಬರುತ್ತದೆ. ಉದಾಹರಣೆಗೆ, ತಿರುಪತಿಯ ಗೋವಿಂದರಾಜಸ್ವಾಮಿ ದೇವಾಲಯದ ಮೊದಲನೇ

ಪ್ರಾಕಾರದಲ್ಲಿರುವ ಕೈಕ್ಕಾಲರೆಡ್ಡಿ ಕೊಠಡಿಯ ಉತ್ತರದಿಕ್ಕಿನ ಗೋಡೆಯ ಒಳಬದಿಯಲ್ಲಿ ರುವ ಶಾಸನವು (*ಐಕೆಟಿ.* ೩.೧೯೯), ಶ್ರೀ ವೈಷ್ಣವರ ಭೋಜನಕ್ಕಾಗಿ ಇಲ್ಲಿಯ ರಾಮಾನುಜ ಕೂಟಕ್ಕೆ ವ್ಯವಸ್ಥೆ ಮಾಡಿದುದನ್ನು ತಿಳಿಸುತ್ತದೆ. ಅಪ್ಪನ್ ಎಂಬುವನ ಹೆಸರಿನಲ್ಲಿ ಹಾಕಿಸಲಾಗಿರುವ ಈ ಶಾಸನವು, ದಾನಿಯು ೮೦೦ ಪಣಂಗಳ ಮೊತ್ತವನ್ನು ದೇವಾಲಯಕ್ಕೆ ಸಂಬಂಧಿಸಿದ ಗ್ರಾಮಗಳ ಕೆರೆ ಮತ್ತು ಕಾಲುವೆಗಳಲ್ಲಿ ಶೇಖರಗೊಂಡ ಹೂಳನ್ನೆತ್ತಿಸಲು ಬಳಸಿಕೊಳ್ಳಬೇಕೆಂದೂ ಇಲ್ಲಿಯ ಹುಟ್ಟುವಳಿಯನ್ನು ರಾಮಾನುಜ ಕೂಟದ ವ್ಯವಸ್ಥಾಪಕರಿಗೆ ಸಲ್ಲಿಸಬೇಕೆಂದೂ ಇದು ನಿರಂತರವಾಗಿ ಮುಂದುವರೆ ಯುತ್ತಿರಬೇಕೆಂದೂ ನಿರೂಪಿಸುತ್ತದೆ.

ಅದೇ ಗೋವಿಂದರಾಜಸ್ವಾಮಿ ದೇವಾಲಯದಲ್ಲಿ ಮೇಲೆ ಸೂಚಿಸಿರುವ ಸ್ಥಳ ದಲ್ಲಿಯೇ (ಅಂದರೆ ಅದೇ ಗೋಡೆಯ ಹೊರಪಾರ್ಶ್ವದಲ್ಲಿ) ಹಾಕಿಸಲಾಗಿರುವ ೧೫೧೬ರ ಇನ್ನೊಂದು ಶಾಸನವು (*ಅದೇ,* ೧೯೯), ಕೃಷ್ಣದೇವರಾಯನಿಗೆ ಒಳಿತನ್ನು ಹಾರೈಸಿ ಊಡಿಯಂ ಎಲ್ಲಪ್ಪನಾಯ್ಕರ್ ಎಂಬಾತನ ಹೆಸರಿನಲ್ಲಿ ಹಾಕಿಸಿರುವಂಥಾದ್ದು. ದಾನಿಯು ತನ್ನ ಈ ಶಾಸನದಲ್ಲಿ, ವೆಂಕಟೇಶ್ವರದೇವರಿಗೆ ಈಗ ದಾನಪೂರ್ವಕ ಅರ್ಪಿಸುತ್ತಿರುವ ಮೂರು ಗ್ರಾಮಗಳ ಉತ್ಪತ್ತಿಯನ್ನು ದೇವರ ನಿತ್ಯ ಪೂಜೆ-ಪ್ರಸಾದಗಳಿಗೆ ಬಳಸಿ ಕೊಳ್ಳಬೇಕೆಂದೂ (ಪ್ರಸಾದವು ಒಳಗೊಳ್ಳಬೇಕಾದ ಪದಾರ್ಥಗಳ ವಿವರವಿದೆ) ನೈವೇದ್ಯದ ನಂತರ ದಾನಿಗಳ ಪಾಲಿನ ಪೂರ್ಣ ಪ್ರಸಾದವನ್ನು ದೇವಾಲಯದ ರಾಮಾನುಜ ಕೂಟಕ್ಕಷ್ಟೆ ನೀಡಬೇಕೆಂದೂ ಉಳಿದ ಪ್ರಸಾದವನ್ನು ತಮ್ಮ ಇಚ್ಛಾನುಸಾರ ವಿತರಿಸಲು ನೀಡಬೇಕೆಂದೂ ಸೂಚಿಸಿರುತ್ತಾನೆ. ಈ ಶಾಸನದ ವೈಶಿಷ್ಟ್ಯವೆಂದರೆ. ಶ್ರೀವೈಷ್ಣವರ ಒಳಿತಿಗಾಗಿ ಈ ವ್ಯವಸ್ಥೆಯನ್ನು ಮಾಡಲಾಗಿದೆಯೆಂಬುದನ್ನು ಸ್ಪಷ್ಟಪಡಿಸಿರುವುದು.

೧೫೨೧ರ ಶಾಸನವು (*ಅದೇ,* ೧೪೭) ಕಂಡುಬಂದಿರುವುದು ತಿರುಮಲೈ ದೇವಾಲಯದ ಮೊದಲನೇ ಪ್ರಾಕಾರದಲ್ಲಿರುವ ಶ್ರೀವರದರಾಜಸ್ವಾಮಿಗುಡಿಯ ಪೂರ್ವ ದಿಕ್ಕಿನ ಗೋಡೆಯ ಹೊರಪಾರ್ಶ್ವದಲ್ಲಿ. ಇದೊಂದು ಬಹುಮುಖ್ಯವಾದ ಶಾಸನ. ಇದನ್ನು ಹಾಕಿಸಿದವರು ಯುದ್ಧಪೂರ್ವದಲ್ಲಿ ಕಳಿಂಗ (ಒರಿಸ್ಸಾ)ದ ಅಧಿಪತಿ ಪ್ರತಾಪರುದ್ರ ಗಜಪತಿರಾಯನಲ್ಲಿ ಸೇವೆಸಲ್ಲಿಸುತ್ತಿದ್ದ ಸುಬುದ್ಧಿ ರಾಮದಾಸರ್ ಮತ್ತು ಅಂಬಿಕಾ ಮುದುಶಿಲಾ ಎಂಬೀರ್ವರು ಅಧಿಕಾರಿಗಳು. ಸುಬುದ್ಧಿಯ ಗಜಪತಿರಾಯನ ಸೇನಾಪತಿ ಯಾಗಿದ್ದರೆ, ಅಂಥದೇ ಸಮಾನ ಅಧಿಕಾರ ಹೊಂದಿದ್ದನು ಅಂಬಿಕಾಮುದುಶಿಲಾ. ಆ ನಂತರ ಕೃಷ್ಣದೇವರಾಯನು ಇವರೀರ್ವರನ್ನೂ ತನ್ನ ಸೇವೆಯಲ್ಲಿ ತೊಡಗಿಸಿಕೊಳ್ಳುತ್ತಾನೆ. ಅಲ್ಲದೆ, ಇವರೀರ್ವರಿಗೂ ಕ್ರಮವಾಗಿ ತಂಡಲಮ್ ಮತ್ತು ತಡಪಾಡಿ ಎಂಬ ಗ್ರಾಮ ಗಳನ್ನು ಜಹಗೀರಾಗಿ ಬಿಟ್ಟುಕೊಡುತ್ತಾನೆ. ಸ್ವಲ್ಪ ಸಮಯದ ನಂತರ. ಇವರೀರ್ವರೂ ತಮ್ಮ ತಮ್ಮ ಗ್ರಾಮಗಳನ್ನು ವೆಂಕಟೇಶ್ವರನಿಗೆ ದಾನವಾಗಿ ನೀಡಬಯಸಿ, ಶಾಸನದಲ್ಲಿ

ಕೆಲವು ನಿಬಂಧನೆಗಳನ್ನು ವಿಧಿಸುತ್ತಾರೆ. ಅದರಂತೆ, ಈ ಎರಡು ಗ್ರಾಮಗಳ ಹುಟ್ಟುವಳಿಯಿಂದ ಸಂಗ್ರಹಗೊಳ್ಳುವ ಹಣದಲ್ಲಿ ವೆಂಕಟೇಶ್ವರನ ನಿತ್ಯ ಪೂಜೆ -ಪ್ರಸಾದಗಳಿಗೆ ವ್ಯವಸ್ಥೆಮಾಡುವುದು; ನಿತ್ಯವೂ ಮೂರು ಭಾಗದಷ್ಟು ತಿರುಪ್ಪೊಂಣಕಮ್ (ಪವಿತ್ರ ಅಡಿಗೆ)ಅನ್ನು ದೇವರಿಗೆ ನೈವೇದ್ಯಮಾಡುವುದು; ಇದರಲ್ಲಿ ಮೂರು ನಾಳಿಗಳಷ್ಟು ಪ್ರಸಾದವನ್ನು ತಿರುಮಲೈ ನಲ್ಲಿನ ತಮ್ಮ ಹೂದೋಟಗಳನ್ನು ಪೋಷಿಸುತ್ತಿರುವ ರಾಮಾನುಜಕೂಟದ ವ್ಯವಸ್ಥಾಪಕರಿಗೆ ಸಲ್ಲಿಸುವುದು; ಹಾಗೂ ಉಳಿದ ಪ್ರಸಾದವನ್ನು ತಮ್ಮ ವಶಕ್ಕೆ ನೀಡುವುದು ಇತ್ಯಾದಿ.

ಆನಂತರದಲ್ಲಿ ಅರವೀಡುವಂಶದವರೂ ಇಂತದೇ ಸೇವಾಕಾರ್ಯವನ್ನು ಮುಂದುವರೆಸಿದರು. ಹಾಗೆ ನೋಡಿದರೆ, ಶ್ರೀ ವೈಷ್ಣವಪಂಥಕ್ಕೆ ಹೆಚ್ಚಿನ ಆದ್ಯತೆ ನೀಡುವುದರೊಡನೆ, ಆಳ್ವಾರ್-ಆಚಾರ್ಯ ಪರಂಪರೆಯನ್ನು ಬೆಳೆಸಿದವರೆಂದರೆ ಅರವೀಡುವಂಶದ ಅರಸರು ಮತ್ತು ಸಾಮಂತರು. ತುಳುವ ಸದಾಶಿವರಾಯನು ಶ್ರೀವೈಷ್ಣವ ದೇವಾಲಯಗಳಿಗೆ ದತ್ತಿ-ದಾನಗಳನ್ನು ನೀಡುವುದರೊಡನೆ ತನ್ನ ನಿಷ್ಠೆಯನ್ನು ವ್ಯಕ್ತಪಡಿಸಿದ ಬ್ರಿಟಿಷ್ ಮ್ಯೂಜಿಯಂ ತಾಮ್ರಪತ್ರಗಳು (*ಎಪಿ ಇಂಡಿಕಾ,* iv, ಪು. ೧೫) ವರ್ಣಿಸುವಂತೆ, ಸದಾಶಿವರಾಯನು 'ಹರಿಭಕ್ತಿ ಸುಧಾನಿಧಿ' ಯೆನಿಸಿಕೊಂಡಿದ್ದ.

ಅಳಿಯ ರಾಮಾನುಜ ಹಾಗೂ ಈತನ ಸಹೋದರ ವೆಂಕಟಾದ್ರಿಯರ ಶಾಸನಗಳು ಸೂಚಿಸುವಂತೆ, ಈ ಈರ್ವರೂ ಆಳ್ವಾರರ ಆರಾಧನೆ ಬಗೆಗೆ ವಿಶೇಷ ಕಾಳಜಿ ವಹಿಸಿದರು. ಅಳಿಯ ರಾಮರಾಜನು ಅರವೀಡು ಆಳ್ವಿಕೆಯಗಾರರಲ್ಲಿ ಅಗ್ರಗಣ್ಯ ಶ್ರೀವೈಷ್ಣವನಾಗಿದ್ದನೆಂದು ಶಾಸನಗಳು ಹೇಳುತ್ತವೆ. ೧೫೪೫ರ ಈತನ ಶಾಸನವೊಂದು (*ಟಿಟಿಡಿಐ* v, ೧೫೫) ಸದಾಶಿವರಾಯನಿಗೆ ಒಳಿತಾಗಲೆಂದು ಹಾರೈಸಿ, ತಿರುಮಲೈ- ತಿರುಪತಿಗಳ ವೆಂಕಟೇಶ್ವರ ಮತ್ತು ಗೋವಿಂದರಾಜ ದೇವಾಲಯಗಳಿಗೆ ನಿತ್ಯನೈವೇದ್ಯ ಇನ್ನಿತರ ಸೇವೆಗಳಿಗಾಗಿ, ಹಾಗೂ 'ಮುಕ್ಕೋಟಿ ದೇವದಾಸಿ ಉತ್ಸವ'ವನ್ನು ಏರ್ಪಡಿಸುವ ಉದ್ದೇಶಕ್ಕಾಗಿ 'ಪುದುಪಟ್ಟು' ನೀಡಿದುದನ್ನು ದಾಖಲಿಸಿದೆ. ವೆಂಕಟೇಶ್ವರನಿಗೆ ನಿತ್ಯವೂ ಅರ್ಪಿಸುವ 'ಮುದಲ್ ಪ್ರಸಾದಂ' ತನ್ನ ಹೆಸರಿನಲ್ಲಿಯೇ ನಡೆಯಬೇಕೆಂದು ಆ ದೇವರಿಗೆ ನಾಲ್ಕು ಗ್ರಾಮಗಳನ್ನು ದತ್ತಿಯಾಗಿ ನೀಡುತ್ತಾನೆ. ಈ ಮೊದಲ ಪ್ರಸಾದದಲ್ಲಿ ಕಾಲುಭಾಗದಷ್ಟು ನಿತ್ಯವೂ ತನ್ನ ಹೆಸರಿನಲ್ಲಿ ತಿರುಪತಿಯಲ್ಲಿ ಸ್ಥಾಪಿಸಲಾದ ನಮ್ಮಾಳ್ವಾರ್ ರಾಮಾನುಜ ಕೂಟಕ್ಕೆ ನೀಡಲು ವ್ಯವಸ್ಥೆ ಮಾಡುತ್ತಾನೆ. ಅಂದರೆ ನಿತ್ಯವೂ ಸಿದ್ಧಪಡಿಸಲಾಗುತ್ತಿದ್ದ ೨೦೦ ತಳಿಗೆ (ಹರಿವಾಣ)ಗಳ ಪ್ರಸಾದದಲ್ಲಿ ೫೦ ತಳಿಗೆಗಳಷ್ಟು ಪ್ರಸಾದವು ನಮ್ಮಾಳ್ವಾರ್ ದೇವಾಲಯದ ರಾಮಾನುಜಕೂಟದಲ್ಲಿ ಭೋಜನ ಮಾಡುವ ಶ್ರೀವೈಷ್ಣವರಿಗೆ ಸರಬರಾಜಾಗುವಂತೆ ಕ್ರಮಕೈಗೊಳ್ಳಲಾಗುತ್ತದೆ.

ಕೋನೇಟಿರಾಜನ ಈರ್ವರು ಪುತ್ರರಾದ ಔಬಳರಾಜು ಮತ್ತು ಶ್ರೀರಂಗಯ್ಯರು ಸಹ ಆಳ್ವಾರರ ದೇವಾಲಯಗಳಿಗೆ ಹಾಗೂ ರಾಮಾನುಜಕೂಟಗಳಿಗೆ ಉದಾರವಾಗಿ ದತ್ತಿ-ದಾನಗಳನ್ನು ಬಿಟ್ಟುಕೊಟ್ಟರು. ಈ ಸಹೋದರರು ಅಂದಿನ ಅತ್ಯಂತ ಪ್ರಭಾವಶಾಲಿ ಶ್ರೀವೈಷ್ಣವ ಆಚಾರ್ಯರರ ಶಿಷ್ಯರಾಗಿದ್ದವರು. ಔಬಳರಾಜನು ತಿರುಮಲ ಆವುಕು ತಾತಾಚಾರ್ಯರ ಶಿಷ್ಯನಾಗಿದ್ದರೆ, ಕೊಂಡರಾಜ ಮತ್ತು ತಿಮ್ಮರಾಜರು ಕಂಡಾಲ ಶ್ರೀರಂಗಾಚಾರ್ಯರ ಶಿಷ್ಯರೆನಿಸಿದ್ದರು. ಇತಿಹಾಸ ತಿಳಿಸುವಂತೆ, ಕೋನೇಟಿರಾಜನ ತಂದೆ ಪೆದಕೊಂಡರಾಜನು ಅಳಿಯ ರಾಮರಾಜನಿಗೆ ಪೈತೃಕ ಚಿಕ್ಕಪ್ಪ (paternal uncle) ಆಗಿದ್ದವನು. ಕೋನೇಟಿರಾಜನ ನಾಲ್ವರು ಪುತ್ರರೆಂದರೆ ಔಬಳರಾಜ, ಕೊಂಡರಾಜ, ತಿಮ್ಮರಾಜ ಮತ್ತು ರಂಗರಾಜ ಇವರಲ್ಲಿ ಎರಡನೆಯನಾದ ಅರವೀಟಿ/ ಅರವೀಡು ಕೊಂಡರಾಜನು ತಿರುಪತಿಯ ನಮ್ಮಾಳ್ವಾರ್ ದೇವಾಲಯದಲ್ಲಿ ರಾಮನುಜಕೂಟವನ್ನು ನಿರ್ಮಿಸಿದನಲ್ಲದೆ, ಇದಕ್ಕೆ ೧೦ ಗ್ರಾಮಗಳನ್ನು ಬಿಟ್ಟುಕೊಟ್ಟ. ಈ ರಾಮಾನುಜ ಕೂಟಕ್ಕೆಂದು ಸದಾಶಿವರಾಯನಿಗೆ ವಿಜಯನಗರದ ೧೬ ಪ್ರಾಂತ್ಯಗಳ ೧೨ ಬಗೆಯ ತೆರಿಗೆಗಳನ್ನು ಸಹಾ ಪಡೆದುಕೊಳ್ಳುತ್ತಾನೆ. ಸದಾಶಿವರಾಯನು ಹೊರಡಿಸಿದ ಶಾಸನಗಳಲ್ಲಿ ೧೫೫೨ರ ಶಾಸನವು (*ಅದೇ,* ೧೩೩) ಇಂಥಾ ತೆರಿಗೆಗಳ ಬಗೆಗೆ ಪ್ರಸ್ತಾಪಿಸಿದರೆ, ೧೫೫೪ರ ಶಾಸನವು (*ಅದೇ,* ೧೫೪) ಇಂಥಾ ತೆರಿಗೆಗಳ ಪಟ್ಟಿಯನ್ನೊದಗಿಸುತ್ತದೆ. ಇದರಿಂದ ಕೊಂಡರಾಜನು ತಾನು ಸ್ಥಾಪಿಸಿದ ರಾಮಾನುಜಕೂಟವನ್ನು ಯಶಸ್ವಿಯಾಗಿ ನಿರ್ವಹಿಸಲು ಸಾಧ್ಯವಾಯಿತು.

ಗಮನಾರ್ಹ ಅಂಶವೆಂದರೆ, ಮೇಲೆ ಪ್ರಸ್ತಾಪಿಸಿದ ಬ್ರಿಟಿಷ್ ಮ್ಯೂಸಿಯಂ ತಾಮ್ರಪತ್ರ ಗಳು ವಿವರಿಸುವಂತೆ, ಇದೇ ಕೊಂಡರಾಜನು ಸದಾಶಿವರಾಜನಿಂದ ಶ್ರೀಪೆರಂಬದೂರಿನಲ್ಲಿ ತಾನು ನಿರ್ಮಿಸಿದ ರಾಮಾನುಜ ದೇವಾಲಯಕ್ಕೆ ೩೧ ಗ್ರಾಮಗಳ ದತ್ತಿಯನ್ನು ಪಡೆದುಕೊಳ್ಳುವಲ್ಲಿಯೂ ಪ್ರಮುಖ ಪಾತ್ರ ವಹಿಸುತ್ತಾನೆ. ಶ್ರೀವೈಷ್ಣವರು ದಿನನಿತ್ಯದಲ್ಲಿ ಹಾಗೂ ಪವಿತ್ರದಿನಗಳಲ್ಲಿ ವಿಷ್ಣುವಿಗೆ ಪೂಜೆಸಲ್ಲಿಸಲು, ಪೂಜಾಸಾಮಾಗ್ರಿ ಇತ್ಯಾದಿ ಗಳನ್ನು ಒದಗಿಸಿಕೊಳ್ಳಲು, ನೃತ್ಯ-ಸಂಗೀತ-ಮೆರವಣಿಗೆ ಇತ್ಯಾದಿಗಳನ್ನು ಏರ್ಪಡಿಸಲು ಅನುಕೂಲವಾಗುವಂತೆ ಈ ದತ್ತಿಯನ್ನು ಬಳಸಿಕೊಳ್ಳಲು ಆದೇಶಿಸಲಾಗುತ್ತದೆ. ಈ ದೇವಾಲಯದ ವಿಶಾಲ ಮಂದಿರದಲ್ಲಿ ಶ್ರೀವೈಷ್ಣವ ಕುಟುಂಬಗಳಿಗೆ ಉಚಿತ ಪ್ರಸಾದ / ಊಟವನ್ನು ವಿತರಿಸುವ ಏರ್ಪಾಟು ಮಾಡಲಾಗುತ್ತದೆ. ಇದು ಸಹ ರಾಮಾನುಜ ಕೂಟದಂತೆಯೇ ಕಾರ್ಯನಿರ್ವಹಿಸುತ್ತಿದ್ದಿರಬಹುದು.

ಅರವೀಟಿ ಕೊಂಡರಾಜನು ಸ್ಥಾಪಿಸಿದ ರಾಮಾನುಕೂಟದ ಪರಿಸ್ಥಿತಿಯ ಬಗೆಗೆ ಒಂದು ದೃಷ್ಟಿ ಹಾಯಿಸಬಹುದು. ಈ ರಾಮಾನುಜಕೂಟಕ್ಕೆ ಸರಬರಾಜಾಗುತ್ತಿದ್ದ ಪ್ರಸಾದವು ಶುದ್ಧವೂ ಪವಿತ್ರವೂ ಆಗಿರುತ್ತಿದ್ದಿತೆಂಬುದಕ್ಕೆ ತಿರುಪತಿಯ ದೇವಾಲಯದಲ್ಲಿ

'ಅಲಂಕಾರಮ್' ಅಥವಾ 'ಶುದ್ಧಾನ್ನ ತಿರುಪ್ಪೋಣಕಮ್' ಎಂಬ ಹೆಸರಿನಲ್ಲಿ ಸಿದ್ಧಗೊಂಡು ದೇವರಿಗೆ ನೈವೇದ್ಯಗೊಳ್ಳುತ್ತಿದ್ದ ಅಡಿಗೆಯೇ ಸಾಕ್ಷಿ. ೧೦ನೇ ಶತಮಾನದಲ್ಲೇ ಆಚರಣೆಯಲ್ಲಿದ್ದ ಈ ಪದ್ಧತಿಯನ್ನು ೧೬ನೇ ಶತಮಾನದಲ್ಲಿಯೂ ಇಲ್ಲಿ ಮತ್ತೆ ಅನುಸರಿಸಲಾಯಿತೆಂಬುದು ಗಮನಾರ್ಹ. ವಿಶೇಷವೆಂದರೆ, ಇಂಥಾ ಪವಿತ್ರ ಅಡಿಗೆಯನ್ನು ಶ್ರೀವೈಷ್ಣವ ಭಕ್ತರಿಗೆ ವಿನಿಯೋಗಿಸಲು ರಾಮಾನುಜಕೂಟಕ್ಕೆ ಕಳುಹಿಸಿಕೊಡಲಾಗುತ್ತಿತ್ತು. ಈ ಬಗೆಯ ವಿಶಿಷ್ಟ ಅಡಿಗೆಯನ್ನು ತಯಾರಿಸಲೆಂದೇ ಎಟ್ಟೂರು ಸೊಟ್ಟೈ ತಿರುಮಲೈ ನಂಬಿ ಶ್ರೀನಿವಾಸೈಯಂಗಾರ್ ಮತ್ತು ಶಿವರಾಮಚಂದ್ರ ಯಡಮಟರಾವ ಎಂಬುವರು ದತ್ತಿಗಳನ್ನು ಬಿಟ್ಟುಕೊಡುತ್ತಾರೆ. ಕೊಂಡರಾಜನು ತನ್ನ ನಮ್ಮಾಳ್ವಾರ್ ದೇವಾಲಯದಲ್ಲೂ ಇಂಥದೇ ಪವಿತ್ರ ಪ್ರಸಾದವನ್ನು ಒದಗಿಸಲು ವ್ಯವಸ್ಥೆ ಮಾಡುತ್ತಾನೆ.

ನಮ್ಮಾಳ್ವಾರ್ ದೇವಾಲಯದ ರಾಮಾನುಜಕೂಟದಲ್ಲಿ ಶ್ರೀವೈಷ್ಣವ ಯಾತ್ರಾರ್ಥಿಗಳಿಗೆ ಒದಗಿಸಲಾಗುತ್ತಿದ್ದ ಪ್ರಸಾದದಲ್ಲಿ ಅಂದರೆ, ಪಾಕಶಾಲೆಯಲ್ಲಿ ಸಿದ್ಧಗೊಳಿಸಿದ ಅಡಿಗೆಯಲ್ಲಿ, ಯಾವೊಂದು ಬಗೆಯ ಪದಾರ್ಥವೂ ತಪ್ಪಿಹೋಗದಂತೆ ಸೂಕ್ಷ್ಮವಾಗಿ ಗಮನಿಸಲಾಗುತ್ತಿದ್ದಿತು. ಇಲ್ಲಿ ಸಿದ್ಧಪಡಿಸಿದ ಆಹಾರವನ್ನು ಮೊದಲಿಗೆ ನಮ್ಮಾಳ್ವಾರ್‌ರಿಗೆ ನೈವೇದ್ಯ ಮಾಡಿದನಂತರ, ಈ ಆಹಾರ ಬಿಸಿಯಾಗಿರುವಂತೆಯೇ ಪ್ರತಿನಿತ್ಯವೂ ಸುಮಾರು ೨೦೦೦ ಶ್ರೀವೈಷ್ಣವಭಕ್ತರಿಗೆ ಅಥವಾ ಯಾತ್ರಾರ್ಥಿಗಳಿಗೆ ಬಡಿಸಲಾಗುತ್ತಿದ್ದಿತು. ಈ ಪ್ರಸಾದವು ಅನ್ನ, ತುಪ್ಪ, ರಸಂ, ಕುಳಂಬು, ಪರುಪ್ಪು, ನಾಲ್ಕುವಿಧದ ಪೊರಿಕ್ಕಾರಿ, ಕುಟ್ಟುಕ್ಕಾರಿ, ಪಾಯಸ, ಅಂಬಲಿ, ಮೊಸರು ಮತ್ತು ಉಪ್ಪಿನಕಾಯಿ ವ್ಯಂಜನಗಳನ್ನು ಒಳಗೊಂಡಿದ್ದ ಶ್ರೀಮಂತ 'ಅಲಂಕಾರಮ್' ಭೋಜನವಾಗಿರುತ್ತಿದ್ದಿತು. ಇದರೊಡನೆ ಊಟದ ತರುವಾಯ ಲೇಪಿಸಿಕೊಳ್ಳಲು ನಾದಿದ ಶ್ರೀಗಂಧದ ಹಿಟ್ಟು, ಮೆಲ್ಲಲು ತಾಂಬೂಲ ಮುಂತಾದುವನ್ನೂ ಇಡಲಾಗಿರುತ್ತಿದ್ದಿತು. ದೀರ್ಘಯಾತ್ರೆಯನ್ನು ಕೈಗೊಂಡು ತಿರುಪತಿಗೆ ಆಗಮಿಸುತ್ತಿದ್ದ ಶ್ರೀವೈಷ್ಣವ ಯಾತ್ರಾರ್ಥಿಗಳಿಗೆ ಇಂಥ ರಾಮಾನುಜ ಕೂಟಗಳಲ್ಲಿ ರಾಜೋಪಚಾರವೇ ದೊರೆಯುತ್ತಿತ್ತು.

ಇಲ್ಲಿಯೇ ಪ್ರಸ್ತಾಪಿಸಬೇಕಾದ ಇನ್ನೊಂದು ಸಂಗತಿಯೆಂದರೆ ಸದಾಶಿವರಾಯನ ಆಡಳಿತಾಧಿಕಾರಿಯಲ್ಲಿ, ಅಂದರೆ ೧೫೪೭ರಲ್ಲಿ, ತಿರುಪತಿಯಲ್ಲಿ ರಾಮಾನುಜಕೂಟದ ಆಡಳಿತ ವ್ಯವಸ್ಥೆ ಹೇಗಿದ್ದಿತೆಂಬುದರ ಬಗೆಗೆ ಶಾಸನವೊಂದು (*ಅದೇ, ೫, ೮೯*)ಬೆಳಕು ಚೆಲ್ಲುತ್ತದೆ. ೧೫೪೭ ಮಾರ್ಚ್ ತಿಂಗಳಿನಲ್ಲಿ ಉದಯಗಿರಿ ದೇವರಾಜಭಟ್ಟಾರ್ ಎಂಬಾತನು ತಿರುಪತಿಯ ದೇವಾಲಯವೊಂದರಲ್ಲಿ ವಿಠ್ಠಲೇಶ್ವರ ಪೆರುಮಾಳ್ ದೇವರನ್ನು ಪ್ರತಿಷ್ಠಾಪಿಸಿದನಲ್ಲದೆ, ಈ ಸಂದರ್ಭದಲ್ಲಿ ಶಾಸನಕಲ್ಲನ್ನೂ ನೆಡಿಸುತ್ತಾನೆ. ಇದರ ಮಹತ್ವವೆಂದರೆ, ಈ ದೇವಾಲಯದ ಸಂಪೂರ್ಣ ಆಯ-ವ್ಯಯ ಕುರಿತು ಇದು ನಿರೂಪಿಸುತ್ತದೆ. ಈ ದೇವಾಲಯದಲ್ಲಿ ನಡೆಸಲಾಗುತ್ತಿದ್ದ ರಾಮಾನುಜಕೂಟದ ವ್ಯವಸ್ಥೆಯನ್ನು ಮಾತ್ರವೇ ಇಲ್ಲಿ ಗಮನಿಸುವುದಾದರೆ, ಇದರ ಮೇಲುಸ್ತುವಾರಿ ಕೈಗೊಂಡಿದ್ದ

ವ್ಯಕ್ತಿಗೆ ವಾರ್ಷಿಕವಾಗಿ ಸಂದಾಯಮಾಡಲಾಗುತ್ತಿದ್ದ ಸಂಭಾವನೆಯೆಂದರೆ ೫೦ ಪಣಂಗಳು (೧೯೮೦ರ ವೇಳೆಗೆ ಇದರ ಮೌಲ್ಯವು ಸುಮಾರು ೧೨ ರೂಪಾಯಿಗಳಷ್ಟಿದ್ದಿತು). ಇಲ್ಲಿ ಸೇವೆ ಸಲ್ಲಿಸುತ್ತಿದ್ದ ಪೂರ್ಣಾವಧಿ ಅಡಿಗೆಯ ಕೆಲಸದವರಿಗೆ ತಿಂಗಳಿಗೆ ೧ ಪಣಂ ಅನ್ನು ಕೊಡುವುದರೊಡನೆ ನಿತ್ಯವೂ ಅವರ ಪಾಲಿನ ಪ್ರಸಾದವನ್ನೂ ಒದಗಿಸಲಾಗುತ್ತಿತ್ತು. ಪ್ರತಿದಿನವೂ ಸುಮಾರು ೨೦೦೦ ಶ್ರೀವೈಷ್ಣವರು ಭೋಜನ ಸ್ವೀಕರಿಸುತ್ತಿದ್ದ ಈ ರಾಮಾನುಜಕೂಟದಲ್ಲಿ ಊಟವನ್ನು ಬಡಿಸುವುದಕ್ಕಾಗಿ ನೇಮಿಸಿಕೊಳ್ಳಲಾಗಿದ್ದ ಈರ್ವರಿಗೆ ವರುಷವೊಂದಕ್ಕೆ ತಲಾ ೬೨ ½ ಪಣಂಗಳು (ತಿಂಗಳಿಗೆ ಸುಮಾರು ೧ ರೂಪಾಯಿ, ೪ ಆಣೆಗಳು); ಕಾವಲುಗಾರನಿಗೆ ತಿಂಗಳಿಗೆ ೫ ಪಣಂಗಳು (೧ ರೂಪಾಯಿ, ೩ ಆಣೆಗಳು); ಭೋಜನಾಲಯವನ್ನು ಶುಚಿಮಾಡುತ್ತಿದ್ದ ಸೇವಕರಿಗೆ ತಿಂಗಳೊಂದಕ್ಕೆ ತಲಾ ೩ ಪಣಂಗಳು (೧೧ ಆಣೆ, ಕಾಸುಗಳು); ಪ್ರಸಾದ ಸ್ವೀಕರಿಸುವ ಸಮಯದಲ್ಲಿ ಕುಡಿಯುವ ನೀರು ಸರಬರಾಜು ಮಾಡುವ ಪ್ರತಿಯೊಬ್ಬರಿಗೂ ತಿಂಗಳಿಗೆ ೪ ಪಣಂಗಳು(೧೫ ಆಣೆಗಳು); ಹಾಗೂ ರಾಮಾನುಜಕೂಟದ ಇಡೀ ವ್ಯವಸ್ಥೆಯ ಮೇಲುಸ್ತುವಾರಿ ನೋಡುಕೊಳ್ಳುತ್ತಿದ್ದ ಅಧಿಕಾರಿಗಳಿಗೆ ತಿಂಗಳಿಗೆ ೨೦ ಪಣಂಗಳು (೬ ರೂಪಾಯಿ, ೧೧ ಆಣೆಗಳು) - ಹೀಗೆ ವ್ಯವಸ್ಥೆ ಮಾಡಲಾಗಿದ್ದಿತು.

ತಿರುಮಲೈ-ತಿರುಪತಿ ದೇವಸ್ಥಾನದ ಶಾಸನವೊಂದು (*ಅದೇ,* v, ೧೫೬), ಸದಾಶಿವ ರಾಯನು ತಿರುಮಲೈ ಮತ್ತು ತಿರುಪತಿಗಳಲ್ಲಿ ಪೂಜಾದಿ ಕಾರ್ಯಗಳು ಸುಗಮವಾಗಿ ನಡೆಯುವಂತೆ; ಹಾಗೂ ತಿರುಪತಿಯ ನಮ್ಮಾಳ್ವಾರ್ ರಾಮಾನುಜಕೂಟವು ಮುಂದುವರಿಯಲು ಸಾಧ್ಯವಾಗುವಂತೆ ೨೦೦ ಆಕಳುಗಳನ್ನು ಸೇವಾರ್ಥ ದಾನಮಾಡಿದುದನ್ನು ತಿಳಿಸುತ್ತದೆ. ಹೀಗೆ ರಾಮಾನುಜಕೂಟಗಳಿಗೆ ಪೋಷಣೆ ಒದಗಿಸುವ ನಿಟ್ಟಿನಲ್ಲಿ ಸದಾಶಿವರಾಯ ಸಲ್ಲಿಸಿದ ಸೇವೆ ಪ್ರಶಂಸಾರ್ಹವಾದರೂ ಆ ವೇಳೆಗೆ ದೇವಾಲಯದ ಆಡಳಿತದಲ್ಲಿ ಸ್ವಲ್ಪಮಟ್ಟಿನ ಶಿಥಿಲತೆ ಕಂಡುಬರುತ್ತಲಿತ್ತು. ತಿರುಪತಿ ದೇವಾಲಯ ಹಾಗೂ ರಾಮಾನುಜ ಕೂಟಗಳ ಮೇಲುಸ್ತುವಾರಿ ವಹಿಸಿದ್ದ ಮತ್ತು ನಿತ್ಯಗಟ್ಟಳೆ ವೆಚ್ಚದ ಹೊಣೆ ಗಾರಿಕೆಯನ್ನು ನಿರ್ವಹಿಸುತ್ತಿದ್ದ ಸ್ಥಾನಿಕರಿಗೇ ದಾನ-ದತ್ತಿಗಳ ಸಂಪೂರ್ಣ ಜವಾಬ್ದಾರಿಯನ್ನು ವಹಿಸ ಲಾಗಿದ್ದಿತು. ತೆರಿಗೆ ಸಂಗ್ರಹಣೆಯ ಕಾರ್ಯವೂ ಅವರದೇ ಆಗಿದ್ದಿತು. ಈ ವಿಚಾರದಲ್ಲಿ ಅವರು ಸ್ವತಂತ್ರವಾಗಿ ತೀರ್ಮಾನಗಳನ್ನು ಕೈಗೊಳ್ಳಬಹುದಿತ್ತು. ಕೆಲವೊಮ್ಮೆ ಇಂಥ ಹಣ ದುರುಪಯೋಗಗೊಳ್ಳುತ್ತಿದ್ದ ಬಗೆಗೆ ಶಂಕೆಗಳಿರುತ್ತಿದ್ದವು. ಈ ಕಾರಣಕ್ಕಾಗಿಯೇ ಈ ಸಂಬಂಧದಲ್ಲಿ ಸದಾಶಿವರಾಯನಿಗೆ ಬದಲಾವಣೆಯೊಂದನ್ನು ತರುವುದು ಅನಿವಾರ್ಯವೆನಿಸಿತು. ದಾನಗಳಿಂದ ಹಾಗೂ ತೆರಿಗೆಗಳಿಂದ ಸಂಗ್ರಹಗೊಂಡ ಹಣವನ್ನು ದೇವಾಲಯದ ಸ್ಥಾನಿಕರಿಗೆ ಸಲ್ಲುವ ಬದಲು ನಮ್ಮಾಳ್ವಾರ್ ದೇವಾಲಯದ 'ರಾಮಾನುಜಕೂಟಛತ್ರ'ದ ವ್ಯವಸ್ಥಾಪಕರಿಗೆ ಸಲ್ಲುವಂತೆ ಕಟ್ಟಳೆ ಮಾಡುತ್ತಾನೆ.

* * *

ಒಟ್ಟಿನಲ್ಲಿ, ವಿಜಯನಗರದರಸರು ಹಾಗೂ ಶ್ರೀಮಂತರ ಉದಾರ ದಾನ-ದತ್ತಿ-ಪೋಷಣೆಗಳ ಕಾರಣವಾಗಿ ವೈಭವದಿಂದ ಕಾರ್ಯನಿರ್ವಹಿಸುತ್ತಿದ್ದ ರಾಮಾನುಜ ಕೂಟಗಳು, ಆ ಕಾಲದ ಧಾರ್ಮಿಕ ಚಟುವಟಿಕೆಗಳ ಅಂಗವಾಗಿ ಅಸ್ತಿತ್ವಕ್ಕೆ ಬಂದಂಥವು. ಶ್ರೀವೈಷ್ಣವಪಂಥಾನುಯಾಯಿಗಳಿಗೆ ಪೋಷಣೆ-ಪ್ರೋತ್ಸಾಹ ನೀಡುವ ಮಟ್ಟಿಗೆ ಇವು ಪರಿಣಾಮಕಾರಿ ಪಾತ್ರನಿರ್ವಹಿಸಿದವು. ಅಂದರೆ ವಿಷಾದದ ಸಂಗತಿಯೆಂದರೆ, ೧೫೬೫ರ ರಕ್ಕಸಗಿ-ತಂಗಡಗಿ ನಿರ್ಣಾಯಕ ಯುದ್ಧಾನಂತರ ಈ ವೈಭವವೆಲ್ಲ ಮರೆಯಾಯಿತೆನ್ನ ಬೇಕು. ೧೬೩೮ರಲ್ಲಿ ವಿಜಯನಗರದ ಮುಮ್ಮಡಿ ವೆಂಕಟನ ಆಳ್ವಿಕೆಯಲ್ಲಿ, ತಿರುಪತಿ ದೇವಾಲಯ ಮತ್ತು ರಾಮಾನುಜಕೂಟಗಳ ಮೇಲ್ವಿಚಾರಕರಾಗಿದ್ದ ಸ್ಥಾನಿಕರ ಸಂಖ್ಯೆಯು ೬ ರಿಂದ ೪ಕ್ಕೆ ಇಳಿಯಿತು. ೧೬೭೪ರ ವೇಳೆಗೆ ವಿಜನಗರ ಅರಸರ ಪ್ರಭಾವವು ಅಂತಿಮ ವಾಗಿ ಮರೆಯಾಗುತ್ತಿರುವಂತೆಯೇ ದೇವಾಲಯಗಳಿಂದ ರಾಮಾನುಜಕೂಟಗಳಿಗೆ ಕೇವಲ ಸಾಂಕೇತಿಕ ಪಾಲು ಮಾತ್ರವೇ ಸಲ್ಲುವಂತಾಯಿತು.

ಈ ಸಮಯಕ್ಕಾಗಲೇ ಈ ಪ್ರದೇಶವು ಗೋಲ್ಕೊಂಡದ ಮುಸ್ಲಿಂ ಅರಸರು ಮತ್ತು ಆರ್ಕಾಟು ನವಾಬ ಇವರ ಅಧೀನಕ್ಕೊಳಪಟ್ಟಿದ್ದರಿಂದ, ಇಲ್ಲಿಯ ಆಡಳಿತ ಸ್ವರೂಪ ದಲ್ಲೂ ಬದಲಾವಣೆ ಬಂದುದು ಸಹಜ. ೧೬೭೪ರಲ್ಲಿ ಶಿವಾಜಿಯ ಮರಾಠಾ ಅಧಿಕಾರಿ ಗಳಲ್ಲೊಬ್ಬನಾಗಿದ್ದ ಯಡಮಟರಾವ ಡಾಬಿರ್ಸನು ತಿರುಮಲೈಗೆ ಯಾತ್ರೆ ಕೈಗೊಂಡ ಸಂದರ್ಭದಲ್ಲಿ ಅಲ್ಲಿ ನೆಲೆಗೊಂಡಿದ ಅಭಾವ ಪರಿಸ್ಥಿತಿಯನ್ನು ಕಣ್ಣಾರೆ ನೋಡುತ್ತಾನೆ. ನಗದಿಗೆ ಬದಲಾಗಿ ತನ್ನಲ್ಲಿದ್ದ ಬಂಗಾರದ ಆಭರಣವನ್ನು ದಾನವಾಗಿ ನೀಡುವುದರೊಡನೆ ದೇವಾಲಯ/ರಾಮಾನುಜಕೂಟದ ವ್ಯವಸ್ಥೆಗೆ ಇನ್ನೂ ಅಂಟಿ ಕೊಂಡಿದ್ದ ಅಲ್ಲಿಯ ಕೆಲವು ನೌಕರರ ಊಟೋಪಚಾರಕ್ಕೆ ವ್ಯವಸ್ಥೆ ಮಾಡುತ್ತಾನೆ.

೫. ರಾಮಾನುಜಕೂಟಗಳನ್ನು ಕುರಿತು ಕೆಲವು ಶಾಸನೋಕ್ತ ಸಂಗತಿಗಳು

ಕೆಲವಾರು ಕನ್ನಡ ಶಾಸನ, ದಾಖಲೆ ಹಾಗೂ ಸ್ಥಳಪುರಾಣಗಳಲ್ಲಿ ರಾಮಾನುಜ ಕೂಟವನ್ನು ರ(ರಾ)ಮಾನುಜಕೂಟ, ರಾಮಾಂಜಕೂಟ, ರಾಮಾಂಜಿಗೂಟ, ರಾಮಾಜಿ ಕೂಟ ಛತ್ರ/ಸತ್ರ ಇತ್ಯಾದಿಯಾಗಿಯೂ ಗುರುತಿಸಿದೆ. ಈಗಾಗಲೇ ನೋಡಿದಂತೆ, ಕರ್ನಾಟಕದಲ್ಲಿ ೧೩ನೇ ಶತಮಾನದ ಶಾಸನಗಳಲ್ಲಿ ಮೊದಲಿಗೆ ಉಲ್ಲೇಖಿಸಲ್ಪಟ್ಟ ರಾಮಾನುಜಕೂಟವು, ೧೫ ಮತ್ತು ೧೬ನೇ ಶತಮಾನಗಳಲ್ಲಿ, ವ್ಯಾಪಕವಾಗಿ ಪ್ರಸ್ತಾಪ ಗೊಳ್ಳುತ್ತದೆ. ೧೯ನೇ ಶತಮಾನದಲ್ಲಿ, ಅಂದರೆ ಮೈಸೂರು ಒಡೆಯರ ಆಡಳಿತಾವಧಿ ಯಲ್ಲಿಯೂ ರಾಮಾನುಜಕೂಟಗಳ ಪ್ರಸ್ತಾಪಗಳು ದೊರಕುತ್ತವೆ. ಹಾಗೆಯೇ, ಹಾಸನ, ಮಂಡ್ಯ, ಚಿತ್ರದುರ್ಗ, ಮೈಸೂರು ಮೊದಲಾದ ಜಿಲ್ಲೆಗಳಲ್ಲಿ ಶ್ರೀವೈಷ್ಣವ ಆರಾಧನಾ ಕ್ಷೇತ್ರಗಳಿರುವುದರಿಂದ ಇಲ್ಲಿ ದೊರೆತಿರುವ ಈ ಪಂಥಕ್ಕೆ ಸಂಬಂಧಿಸಿದ ಕೆಲವು ದಾನಶಾಸನಗಳಲ್ಲಿ ರಾಮಾನುಜಕೂಟದ ಪ್ರಸ್ತಾಪವಿರುವುದುಂಟು.

ವಿಶಿಷ್ಟಾದ್ವೈತ ಸಿದ್ಧಾಂತದ ವಿಷ್ಣುತತ್ವವನ್ನು ಕರ್ನಾಟಕಕ್ಕೆಲ್ಲಾ ಪರಿಚಯಿಸಿ ಪ್ರಚಾರಕ್ಕೆ ತರುವ ಮಹತ್ಕಾರ್ಯವನ್ನು ನೆರವೇರಿಸಿದ ರಾಮಾನುಜಾಚಾರ್ಯರ ಪ್ರಭಾವದಿಂದಾಗಿ ಕಾಲಕಾಲಕ್ಕೆ ಇಲ್ಲಿ ರಾಮಾನುಜಕೂಟಗಳು ಅಸ್ತಿತ್ವ ಕಂಡುಕೊಂಡವೆಂಬುದು ವಾಸ್ತವ. ಈ ರಾಮಾನುಜಕೂಟಗಳು ಮೊದಲಿಗೆ ತೊಣ್ಣೂರು (೧೧ನೇ ಶ.), ಆನಂತರ ಮೇಲುಕೋಟೆ (೧೩ನೇ ಶ.)ಗಳಲ್ಲಿ ಸ್ಥಾಪನೆಗೊಂಡವು. ಶ್ರೀವೈಷ್ಣವ ಆಚಾರ್ಯರನ್ನು ಯತಿರಾಜರೆಂದೂ ಕರೆಯುವ ಸಂಪ್ರದಾಯವಿದ್ದು, ಇಂಥವರು ವಾಸಿಸುತ್ತಿದ್ದ ಸ್ಥಳಕ್ಕೆ ಯತಿರಾಜಮಠವೆನ್ನಲಾಗುತ್ತಿದೆ. ೧೨೫೮ರ ವೇಳೆಗೆ ಮೇಲುಕೋಟೆಯಲ್ಲಿ ರಾಮಾನುಜರಿಗಾಗಿ ಒಂದು ಗುಡಿ (ಭಾಷ್ಯಕಾರರ ಸನ್ನಿಧಿ) ಹಾಗೂ ರಾಮಾನುಜಕೂಟಗಳನ್ನು ನಿರ್ಮಿಸಲಾಯಿತು. ೧೨೫೮ರ ಶಾಸನವು (ಎಕ. ೬, ಪಾಂಡವಪುರ ೧೮೨) ಹೇಳುವಂತೆ ಈ ರಾಮಾನುಜಕೂಟಕ್ಕೆ ತೆರಕಣಾಂಬಿಯ ಚೆನ್ನಪ್ಪಶೆಟ್ಟಿಯ ಮಗ ಕೇತಿಯಪ್ಪಶೆಟ್ಟಿಯು ಎರಡು ಗ್ರಾಮಗಳನ್ನೂ ಗದ್ದೆಗಳನ್ನೂ ದಾನಮಾಡುತ್ತಾನೆ.

ವಿಜಯನಗರದ ಇಮ್ಮಡಿ ಪ್ರೌಢದೇವರಾಯನ ಮಹಾಪ್ರಧಾನನೂ ನಾಗಮಂಗಲದ ಮಹಾಪ್ರಭುವೂ ಆಗಿದ್ದ ತಿಮ್ಮಣ್ಣ ದಂಡನಾಯಕನ ಧರ್ಮಪತ್ನಿ ರಂಗಮ್ಮ (ರಂಗಾಂಬಿಕಾ/ರಂಗನಾಯಕಿ)ಳು ೧೪೫೮ರಲ್ಲಿ ಮೇಲುಕೋಟೆಯ ರಂಗಮಂಟಪ (ರಂಗ ಮಠವೆಂಬ ದೇಶಾಂತರಿಮಠ) ವೊಂದನ್ನು ಕಟ್ಟಿಸುತ್ತಾಳೆ. ಈ ವಿಚಾರ ಪ್ರಸ್ತಾಪ ಗೊಂಡಿರುವುದು ಜೀಯರ ದೇವಸ್ಥಾನದ ಕೈಸಾಲೆಯ ಎಡಪಾರ್ಶ್ವದಲ್ಲಿ ವೆಟ್ಟಿರುವ ಕಲ್ಲಿನಲ್ಲಿ (*ಅದೇ*, ಪಾಂಪು, ೧೭೯) ಇದರಿಂದ ತಿಳಿದುಬರುವಂತೆ ರಂಗಮ್ಮಳು ತನ್ನ ಹೆಸರಿನಲ್ಲಿ ರಂಗಸಮುದ್ರವೆಂಬ ತಟಾಕವನ್ನು ತೋಡಿಸುತ್ತಾಳೆ. ಮಾತ್ರವಲ್ಲ, ಹೊಯಿಸಳರಾಜ್ಯದ ಕಲುವಂಕನಾಡಿಗೆ ಸೇರಿದೆ ಮೇಲುಕೋಟೆಯ ಕಾಲುವಳಿಗಳಾದ ಬಾಳೇನಹಳ್ಳಿ (ಬಲೇನಹಳ್ಳಿ) ಮತ್ತು ಯಲವದಹಳ್ಳಿಗಳಿಗೆ ಸೇರಿದ ಎಲ್ಲ ಹೊಲ, ಗದ್ದೆ, ತೋಟಗಳನ್ನು ಸುಂಕಗಳಿಂದ ಬರುವ ಆದಾಯ, ದ್ರವ್ಯರೂಪದಲ್ಲಿ ಬರುವ ಆದಾಯ ಮುಂತಾದವುಗಳನ್ನೆಲ್ಲ ಈಕೆ ೨೪ ಜನ ಶ್ರೀ ವೈಷ್ಣವರಿಗೆ (ಪರಮ ವೈದಿಕ ವೈಷ್ಣವ ಬ್ರಾಹ್ಮಣರಿಗೆ) ಭೋಜನಕ್ಕಾಗಿ ಸ್ಥಾಪಿಸಲಾದ ರಾಮಾನುಜಕೂಟಕ್ಕೆ ದಾನಮಾಡುತ್ತಾಳೆ.

ಆದರೆ ರಂಗಮ್ಮಳು ದಾನಮಾಡಿದ ಗ್ರಾಮಗಳಿಂದ ಬರುತ್ತಿದ್ದ ೮೦ ವರಹಗಳ ಆದಾಯವು ರಾಮಾನುಜಕೂಟವನ್ನು ನಡೆಸಿಕೊಂಡು ಹೋಗಲು ಸಾಕಾಗುವಷ್ಟಿರಲಿಲ್ಲ. ಏಕೆಂದರೆ ಈಕೆ ತಾನು ಅರಸನಿಂದ ಪಡೆದುಕೊಂಡಿದ್ದ ಮೇಲ್ಕಂಡ ದಾನದಲ್ಲಿ ಈ ಮೊದಲೇ ರಂಗಸಮುದ್ರಕೆರೆಯ ಕೆಳಗೆ ಕೃಷಿಗೊಳಪಟ್ಟಿದ್ದ ಗದ್ದೆಗಳು ಸೇರಿರಲಿಲ್ಲ. ಅಲ್ಲದೆ, ಅವುಗಳಿಂದ ಬರುವ ಉತ್ಪನ್ನದಲ್ಲಿ ಅರ್ಧಭಾಗವನ್ನು ವಾರದ ಮೇಲೆ ಚೆಲ್ಲಪಿಳ್ಳೆ ರಾಯರ ದೇವಸ್ಥಾನದ ಶ್ರೀಭಂಡಾರಕ್ಕೆ ಕೊಡಲಾಗುತ್ತಿತ್ತು. ಈ ಕಾರಣಕ್ಕಾಗಿಯೇ ೪೦ ವರಹಗಳ ಆದಾಯ ತರುವ ಹಾಗೂ ತೆರಿಗೆಗಳಿಂದ ಮಾನ್ಯ ಮಾಡಿದ ಇನ್ನಷ್ಟು

ಭೂಮಿಯನ್ನು ೪೦೦ ವರಹಗಳಿಗೆ ಕೊಂಡು ಅದನ್ನೂ ರಾಮಾನುಜಕೂಟದ ವ್ಯವಸ್ಥೆಗಾಗಿ ದಾನಮಾಡಲಾಗುತ್ತದೆ. ಮುಖ್ಯವಾಗಿ ಈ ಸಂಬಂಧದಲ್ಲಿ 'ರಾಮಾನುಜ ಕೂಟದ ಕಟ್ಟಳೆ'ಯನ್ನೂ ರೂಪಿಸಲಾಗುತ್ತದೆ. ಅದರ ಪ್ರಕಾರ ಈ ದಾನಗಳ ಪ್ರತಿಗ್ರಹಿಯಾಗಿದ್ದ ಹಾಗೂ 'ಸಂಪತ್ಕುಮಾರ ಸಕಲ ವಿಧಕೈಂಕರ್ಯ ಧರ್ಮಬೋಧಕ' ನೆನಿಸಿದ್ದ ರಾಮಾನುಜ ಜೀಯರ್ ಎಂಬ ಅಧಿಕಾರಿ ಮಠದಲ್ಲಿಯೇ ಇದ್ದುಕೊಂಡು ರಾಮಾನುಜಕೂಟದ ಆಡಳಿತವನ್ನು ನೋಡಿಕೊಳ್ಳಲು, ಆ ಮಠದಲ್ಲಿ ಪ್ರತಿಷ್ಠಿಸಲಾಗಿದ್ದ ಲಕ್ಷ್ಮೀದೇವಿಗೆ ನೈವೇದ್ಯ ಒದಗಿಸಲು, ಮಠದಲ್ಲಿ ಬೃಂದಾವನ, ಅಡಿಗೆಯವರು, ಪರಿಚಾರಕ ರಿಗೆ ನೀಡುವ ಸಂಬಳ ಇತ್ಯಾದಿ ವೆಚ್ಚಗಳ ನಂತರವೂ ಉಳಿಯಬಹುದಾದ ಹಣವನ್ನು ಮಠದ ಜೀರ್ಣೋದ್ಧಾರ, ಸ್ವಚ್ಛತೆ ಹಾಗೂ ಸುಣ್ಣಬಣ್ಣಗಳಿಗಾಗಿ ಬಳಸಲು ಕಟ್ಟಳೆ ವಿಧಿಸಲಾಗುತ್ತದೆ. ಮೇಲುಕೋಟೆಯಂಥಾ ಶ್ರೀವೈಷ್ಣವಕ್ಷೇತ್ರದಲ್ಲಿ ರಾಮಾನುಜಕೂಟದ ವ್ಯವಸ್ಥೆಗೆ ದೊರೆತಿದ್ದ ಭಕ್ತಿಪೂರ್ವಕ ಆದ್ಯತೆಯ ಈ ಸಂದರ್ಭದಿಂದ ಮನದಟ್ಟಾಗುತ್ತದೆ.

ಮೇಲುಕೋಟೆಯಲ್ಲಿರುವ ವಿಜಯನಗರದ ಕೃಷ್ಣದೇವರಾಯನ ಕಾಲದ ಶಾಸನಗಳ ಪೈಕಿ ಆಚಿರಾಜ ಔಭಳರಾಜನ ಮಗ ವೆಂಕಟಾದ್ರಿಯ ೧೫೨೬- ೨೭ರ ದಾನಶಾಸನವೂ ಒಂದು (*ಅದೇ*, ಪಾಂಪು, ೧೬೨) ಇದಿರುವುದು ನಮ್ಮಾಳ್ವಾರ್ ದೇವಸ್ಥಾನದ ಬಲಭಾಗ ದಲ್ಲಿ. ಔಭಳಪುರವೆಂಬ ಪ್ರತಿನಾಮ ಪಡೆದಿರುವ ಗ್ರಾಮವೊಂದನ್ನು ದಾನಮಾಡಿದ ಪ್ರಸ್ತಾಪವಿದೆ ಈ ಶಾಸನದಲ್ಲಿ. ದಾನದ ವಿವರಗಳು ತಿಳಿದುಬಂದಿಲ್ಲವಾದರೂ ಇದರಲ್ಲಿ ಇಲ್ಲಿ ನಡೆಯುತ್ತಿದ್ದ ರಾಮಾನುಜಕೂಟದ ಪ್ರಸ್ತಾಪವಿದೆ. ಆದ್ದರಿಂದ ಅದರ ವ್ಯವಸ್ಥೆಗಾಗಿಯೇ ಈ ದಾನಕಾರ್ಯ ನಡೆದಿದೆಯೆನ್ನಲಡ್ಡಿಯಿಲ್ಲ.

ಹಾಗೆಯೇ, ನಾರಾಯಣಸ್ವಾಮಿ ದೇವಾಲಯದ ಉತ್ತರಕ್ಕೆ ಹೊಸಬಾಗಿಲಿನ ಎಡಗಡೆ ಇಡಲಾಗಿರುವ ಕೃಷ್ಣದೇವರಾಯನ ಕಾಲದ ಇನ್ನೊಂದು ಶಾಸನವು, ಸಾಕಷ್ಟು ಒಡೆದು ಭಿನ್ನವಾಗಿರುವುದರಿಂದ ಇದರ ಉದ್ದೇಶ ಸ್ಪಷ್ಟವಾಗುವುದಿಲ್ಲ. ಆದರೆ ಇದರಲ್ಲಿ ರಾಮಾನುಜಕೂಟದ ಉಲ್ಲೇಖವಿರುವುದರಿಂದ ಇದನ್ನು ನಡೆಸಿಕೊಂಡು ಹೋಗಲು ಬಹುಶಃ ದೇವಾಲಯದ ಭೂಮಿಯನ್ನು ಮಾರಿದಾಗ ಶ್ರೀಭಂಡಾರದವರು ರಾಮಾನುಜೈಯ್ಯಂಗಾರ್ಯರಿಗೆ ಬರೆಯಿಸಿಕೊಟ್ಟ ಕ್ರಯಪತ್ರವಿದ್ದಿರುವಂತಿದೆ. ಆ ಉದ್ದೇಶಕ್ಕೆಂದು ಈ ಅಯ್ಯಂಗಾರ್ಯರ ಹೆಸರಿನಲ್ಲಿ ಬಹುಶಃ ಭೂಮಿಯನ್ನು ಕ್ರಯವಾಗಿ ಕೊಟ್ಟು, ದೇವಸ್ಥಾನದಲ್ಲಿ ರಾಮಾನುಜಕೂಟದ ವೆಚ್ಚಕ್ಕಾಗಿ ಅದನ್ನು ದಾನವಾಗಿ ಪಡೆದು ಶ್ರೀವೈಷ್ಣವರಿಗೆ ಆರೋಗಣೆಗಾಗಿ ಭಂಡಾರದಿಂದ ಎರಡು ಕುಳ ಅಕ್ಕಿ ನೀಡಿದುದನ್ನು ಈ ಶಾಸನ ನಿರೂಪಿಸುತ್ತದೆ. ವಿದ್ವಾಂಸರು ಭಾವಿಸುವಂತೆ ಇಲ್ಲಿಯ ರಾಮಾನುಜೈಯ್ಯಂಗಾರ್ಯರು ಕಂಚಿ, ತಿರುಪತಿ ಮತ್ತು ಶ್ರೀರಂಗಂನ ಹಲವಾರು ಶಾಸನ ಗಳಲ್ಲಿ ಕಾಣಿಸಿಕೊಳ್ಳುವ ಕಂದಾಡೈ/ ಕಂದಾಡೆ ರಾಮಾನುಜೈಯ್ಯಂಗಾರ್ಯರೇ

ಆಗಿದ್ದಿರಬಹುದು. ಏಕೆಂದರೆ ಈಗಾಗಾಲೇ ಗಮನಿಸಿದಂತೆ, ಅಲ್ಲಿಯ ರಾಮಾನುಜ ಕೂಟಗಳ ಮೇಲುಸ್ತುವಾರಿಯನ್ನು ಕೈಗೊಂಡವರು ಇದೇ ಕಂದಾಡೆ ರಾಮಾನುಜೈಯ್ಯಂಗಾರ್.

ವಿಜಯನಗರದ ಸದಾಶಿವರಾಯನ ಕಾಲದ ಶಾಸನಗಳು ಮೇಲುಕೋಟೆಯಲ್ಲಿದ್ದು, ಇವುಗಳಲ್ಲೊಂದು ರಾಮಾನುಜಕೂಟದ ಬಗೆಗೆ ಪ್ರಸ್ತಾಪಿಸುತ್ತದೆ. (*ಅದೇ,* ಪಾಂಪು ೧೩೨), ನಾರಾಯಣಸ್ವಾಮಿ ದೇವಸ್ಥಾನದ ಪ್ರಾಕಾರದಲ್ಲಿ ಪಶ್ಚಿಮಕಡೆ ಗೋಡೆಯ ಮೇಲಿರುವ ಈ ಶಾಸನದ ಕಾಲ ೧೫೩೦. ಇದು ಅರಹುವಂತೆ, ವೆಲುಗೋಡು ಮನೆತನಕ್ಕೆ ಸೇರಿದ ವಸಂತರಾಯನು ಮೊದಲಿಗೆ ಎರಡು ಗ್ರಾಮಗಳನ್ನು ಕ್ರಯಕ್ಕೆ ಪಡೆದಿದ್ದು ಅವುಗಳನ್ನು ದೇವಾಲಯಕ್ಕೆ ಸಮರ್ಪಿಸಿದ್ದ. ಆದರೆ ಕಾರಣಾಂತರಗಳಿಂದ ಆ ದಾನ ಊರ್ಜಿತಗೊಳ್ಳಲಿಲ್ಲವಾಗಿ, ಈಗ ಅದೇ ಮನೆತನದ ಚಿತ್ರಕೊಂಡಮನಾಯಕನ ಮಗ ರಾಯಪನಾಯಕನು ಜಿಲೇಳ ರಂಗಪತಿರಾಜಯ್ಯನಿಗೆ ಹೇಳಿ ಆತನ ಮೂಲಕ ದೇವಾಲಯದ ಐವತ್ತಿಬ್ಬರೊಡನೆ ಒಪ್ಪಂದ ಮಾಡಿಕೊಂಡು, ಅದರಂತೆ ಮೂಲದಾನವನ್ನು ನವೀಕರಿಸುತ್ತಾನೆ. ವಸಂತರಾಯನ ಪ್ರತಿನಿಧಿಯಾದ ಅನಂತಯ್ಯನಿಗೆ ಪ್ರಸಾದದಲ್ಲಿ ನೀಡಲಾಗುತ್ತಿದ್ದ ಪಾಲನ್ನು ಈಗ ಆತನ ಮೊಮ್ಮಗ ಆಳ್ವಾರು ಸಿಂಗಯ್ಯನಿಗೆ ಕೊಡುವುದೆಂದು ನಿರ್ಧರಿಸಲಾಗುತ್ತದೆ. ಈ ಆಳ್ವಾರು ಸಿಂಗಯ್ಯನು ಬಹುಶಃ ರಾಮಾನುಜಕೂಟದ ಧರ್ಮಕರ್ತನಾಗಿ ನೇಮಕಗೊಳ್ಳುತ್ತಾನೆ.

ಸದಾಶಿವರಾಯನ ಆಳ್ವಿಕೆಯ ಅವಧಿಯ ಇನ್ನೊಂದು ಶಾಸನವು ೧೫೪೫ರದಾಗಿದ್ದು (*ಅದೇ,* ಪಾಂಪು. ೧೨೯) ಇದು ನಾರಾಯಣಸ್ವಾಮಿ ದೇವಾಲಯದ ಪ್ರಾಕಾರದ ದಕ್ಷಿಣಬಾಗಿಲ ಬಲಗಡೆಯಲ್ಲಿದೆ, ಇದನ್ನು ಹಾಕಿಸಿದವನು ಈ ಅರಸನಿಂದ ಶ್ರೀರಂಗ ಪಟ್ಟಣ ಸೀಮೆಯ ನಾಯಕತನವನ್ನು ಪಡೆದಿದ್ದ ಮಹಾಮಂಡಳೇಶ್ವರ ನಾರಾಯದೇವ; ನಂದ್ಯಾಲ ನಾರಸಿಂಗದೇವನ ಮಗ. ಈ ನಂದ್ಯಾಲ ನಾರಯದೇವನು ಶ್ರೀರಂಗಪಟ್ಟಣ ಸೀಮೆಯ ಬಲ್ಲಾಳಪುರ ಮತ್ತು ಕಣಂಬಾಡಿ ಸೀಮೆಯ ಮೊಳನಾಡುಸ್ಥಳಕ್ಕೆ ಸೇರಿದ ವರಾಹನಕಲಹಳ್ಳಿ ಗ್ರಾಮಗಳನ್ನು ದೇವಾಲಯದ ಸೇವೆಗಳಿಗಾಗಿ ದಾನ ಮಾಡುತ್ತಾನೆ. ಈ ಗ್ರಾಮಗಳಿಂದ ಬರಬೇಕಿದ್ದ ಒಟ್ಟು ಆದಾಯ ೨೦೦೦ ವರಹ ಗಳಾಗಿದ್ದರೂ ಕ್ಷಾಮದ ಕಾರಣವಾಗಿ ಈ ಆದಾಯವನ್ನು ೧೨೦೦ ವರಹಗಳಿಗೆ ನಿಗದಿಪಡಿಸಲಾಗುತ್ತದೆ. ಇದನ್ನು ಪುಲಿಯೂಟಾಗಿ(ದತ್ತಿಯಾಗಿ)ಟ್ಟುಕೊಂಡು ಕೈಂಕರ್ಯಗಳನ್ನು ನಡೆಸಬೇಕೆಂದಿರುತ್ತದೆ. ವಿನಿಯೋಗವಾಗುವ ಅಮೃತಪಡಿ ಅಥವಾ ಪ್ರಸಾದದಲ್ಲಿ ಒಂದು ಭಾಗವನ್ನು ವೇದಾಂತಿ ರಾಮಾನುಜಜೀಯರ್‌ರ ಮಠಕ್ಕೂ ಇನ್ನೊಂದನ್ನು ಬಹುಶಃ ದಾನಿಯಾದ ನಾರಯದೇವನೇ ಸ್ಥಾಪಿಸಿದ ರಾಮಾನುಜಕೂಟಕ್ಕೂ ಕೊಡಬೇಕೆಂದು ಈ ಶಾಸನದಲ್ಲಿ ಆದೇಶಿಸಲಾಗಿದೆ.

ನಾರಾಯಣಸ್ವಾಮಿ ದೇವಾಲಯ ಪ್ರಾಕಾರದ ಬಾಗಿಲಿನ ಎಡಗಡೆಯಿರುವ ಶಾಸನ ಸಹಾ (ಅದೇ, ಪಾಂಪು. ೧೨೮) ಸದಾಶಿವರಾಯನ ಕಾಲದ್ದು, ಅಂದರೆ ೧೫೬೪ರದು, ಈ ಶಾಸನದ ವಿಶೇಷವೆಂದರೆ, ಇದು ಮೂಲ ತಾಮ್ರಶಾಸನವೊಂದರ ಪ್ರತಿ; ಇದನ್ನು ಈ ಶಾಸನದ ಕೊನೆಯ ಸಾಲಿನಲ್ಲಿಯೇ ಉಲ್ಲೇಖಿಸಿದೆ. ಮುಖ್ಯವಾಗಿ, ರಾಮಾನುಜಕೂಟಕ್ಕೆ ದ್ರವ್ಯಸಹಾಯ ಮಾಡಿದುದನ್ನು ಇದರಲ್ಲಿ ಹೇಳಿದೆ. ಹಿರಿಯ ಕೊಂಡರಾಜಯದೇವನ ಮೊಮ್ಮಗ ಹಾಗೂ ಕೋನೇಟಿ ರಾಜಯನ ಮಗ ಮಹಾಮಂಡಳೇಶ್ವರ ಕೊಂಡರಾಜಯ ದೇವನು ಅರಸನಲ್ಲಿ ಬಿನ್ನವಿಸಿಕೊಂಡು ತಾಮ್ರಶಾಸನದ ಮೂಲಕ ಪಡೆದುಕೊಂಡ ಚನ್ನಪಟ್ಟಣ ಸ್ಥಳಕ್ಕೆ ಸೇರಿದ ಹೊಂಗನೂರು ಗ್ರಾಮ ಮತ್ತು ಅದರ ಉಪಗ್ರಾಮಗಳು, ಗೂಳೂರು ಸ್ಥಳಕ್ಕೆ ಸೇರಿದ ಹೊನ್ನುಡಿಕೆ ಗ್ರಾಮ ಮತ್ತು ಅದರ ಉಪಗ್ರಾಮಗಳನ್ನು ದೇವಾಲಯಕ್ಕೆ ದಾನಮಾಡಿದುದನ್ನು ಈ ಶಾಸನವು ಪ್ರಸ್ತಾಪಿಸುತ್ತದೆ. ಆಳ್ವಾರರುಗಳ ಹುಟ್ಟುಹಬ್ಬ (ತಿರುನಕ್ಷತ್ರ)ಗಳು, ರಾಮಾನುಜಾಚಾರ್ಯರ ರಥೋತ್ಸವ, ಚೂಡಿಕುಡುತ್ತ ನಾಚ್ಚಿಯಾರ್(ಗೋದಾದೇವಿ) ಮತ್ತು ಪೆರಿಯಜೀಯರ್ (ಮಣವಾಳ ಮಹಾಮುನಿ) ತಿರುನಕ್ಷತ್ರಗಳನ್ನು ನಡೆಸಲು ಈ ದಾನ ಮಾಡಲಾಗುತ್ತದೆ. ಇದರಲ್ಲಿ ರಾಮಾನುಜ ಕೂಟಕ್ಕೆ ವೆಚ್ಚಮಾಡಬೇಕಾದ ಮರ್ಯಾದೆ(ಧನಸಹಾಯ)ಯನ್ನೂ ಸೇರಿಸಲಾಗಿದೆ.

ಹಾಸನ ಜಿಲ್ಲೆಯ ಬೇಲೂರು ಚನ್ನಕೇಶವ ದೇವಾಲಯದ ಉತ್ತರಕಡೆ ತಳಪಾದಿಯ ಕಲ್ಲಿನಲ್ಲಿರುವ ಬರಹವನ್ನು ಕಂಡರಿಸಿರುವುದು ವಿಜಯನಗರ ಪತನಗೊಂಡ ವರುಷದಲ್ಲಿ ಅಂದರೆ ೧೫೬೫ರಲ್ಲಿ. (ಅದೇ, ೯ ಬೇಲೂರು ೧೦೪) ಇಡೀ ಶಾಸನವು ಬೇಲೂರು ಚೆಂನಿಗರಾಯ ದೇವಾಲಯದ ರಾಮಾನುಜಕೂಟದ ವ್ಯವಸ್ಥೆಯನ್ನು ಕುರಿತು ನಿರೂಪಿಸು ವುದು ವಿಶೇಷ. ಬೇಲೂರು ಹಿರಿಯನಂಬಿ ಲಕ್ಷ್ಮಣಯ್ಯನ ಕರ್ತ ಚೆನ್ನರಾಯನು ಎರಪ್ಪ ನಾಯಕನಿಗೂ ತನ್ನ ತಂದೆ-ತಾಯಿಯರಿಗೂ ತನ್ನ ಹೆಂಡತಿ ಚವಾಯಿಗೂ ಪುಣ್ಯವಾಗ ಬೇಕೆಂದೂ, ಹಾಗೂ ಹಿಂದಿನಿಂದಲೂ ನಡೆದುಬಂದ ತನ್ನ ಹಕ್ಕಿನಂತೆ (ಕಾಣಾಚಿಯಂತೆ) ಶ್ರೀ ವೈಷ್ಣವರ ರಾಮಾನುಜಕೂಟದ ವ್ಯವಸ್ಥೆಗೆಂದು ಅಕ್ಕಿಯನ್ನು ೨೫ ಗದ್ಯಾಣಗಳನ್ನೂ ತಿಮ್ಮಪ್ಪನಾಯಕನ ಮಗ ಹಡಪದ ಯೆರಪ್ಪನಾಯಕನಿಗೆ ಸಲ್ಲಿಸುತ್ತಾನೆ. ಇನ್ನು ಮುಂದೆಯೂ ಇದನ್ನು ತಪ್ಪದಂತೆ ನಡೆಸಬೇಕೆಂಬ ಕಟ್ಟಳೆಯನ್ನೂ ವಿಧಿಸುತ್ತಾನೆ.

ವಿಜಯನಗರಕಾಲೀನ ನಾಯಕ ಪಾಳೆಗಾರರಲ್ಲಿ ಶ್ರೀವೈಷ್ಣವಪಂಥಕ್ಕೆ ಸೇರಿದವರೆ ಅಧಿಕ. ಬಹುತೇಕ ಬೇಡ ನಾಯಕರನ್ನು ಈ ವರ್ಗಕ್ಕೆ ಸೇರಿಸಬಹುದು. ಈ ಮಟ್ಟಿಗೆ ಚಿತ್ರದುರ್ಗ ನಾಯಕ ಅರಸನನ್ನು ಇಲ್ಲಿ ಪ್ರಮುಖವಾಗಿ ಪ್ರಸ್ತಾಪಿಸಬಹುದು. ಈ ನಾಯಕರು ಮೂಲತಃ ಶ್ರೀವೈಷ್ಣವಪಂಥಾನುಯಾಯಿಗಳು. ವಿಜನಯಗರ ಅರಸರಂತೆಯೇ ಈ ಪಂಥದ ಆಚಾರ್ಯರನ್ನೂ ದೇವನೆಲೆಗಳನ್ನೂ ಸಮಾನವಾಗಿ ಪುರಸ್ಕರಿಸಿದವರು. ಶ್ರೀವೈಷ್ಣವರ ಪ್ರಮುಖ ಕ್ಷೇತ್ರವೆನಿಸಿರುವ ಆಹೋಬಿಲದ ನರಸಿಂಹ ಈ ನಾಯಕರ

ಮೂಲ ಮನೆದೇವರು. ಅಲ್ಲದೆ, ಅಹೋಬಿಲಂ ಮತ್ತು ತಿರುಪತಿಗಳು ಒಂದೇ ಬೆಟ್ಟ ಸಾಲಿನಲ್ಲಿ ನೆಲೆಸಿದ್ದು ಪರಸ್ಪರ ಸಂಬಂಧ ಹೊಂದಿರುವ ಕ್ಷೇತ್ರಗಳು; ಹಾಗೂ ಈ ಎರಡೂ ಕ್ಷೇತ್ರಗಳ ಬಗೆಗೆ ಚಿತ್ರದುರ್ಗ ನಾಯಕ ಅರಸರು ಸಮಾನ ಭಕ್ತಿ ಯನ್ನಿರಿಸಿಕೊಂಡಿದ್ದ ವರು. ಈ ಅರಸರ ಪೈಕಿ ಮೊದಲನೆಯವನಾದ ಮತ್ತಿ ತಿಮ್ಮಣ್ಣನಾಯಕ (೧೫೬೮-೧೫೮೯), ಆರನೇ ಅರಸ ಕಸ್ತೂರಿ ಚಿಕ್ಕಣ್ಣನಾಯಕ(೧೬೭೫- ೧೬೮೦) ಮತ್ತು ಹತ್ತನೇ ಅರಸ ಬಿಚ್ಚುಗತ್ತಿ ಭರಮಣ್ಣನಾಯಕ(೧೬೮೯-೧೭೨೧)ರು ಶ್ರೀವೈಷ್ಣವ ಗುರುಗಳಿಗೆ ದತ್ತಿಗಳನ್ನು ನೀಡಿ ಗೌರವಿಸಿದರು. ರಾಮಾನುಜಕೂಟಗಳ ಪೋಷಣೆಗೆ ನೆರವಾದರು.

ಹಿರಿಯೂರು ತಾಲ್ಲೂಕು ರಂಗಸಮುದ್ರದಲ್ಲಿ ದೊರೆತ ತೆಲುಗುಭಾಷೆಯಲ್ಲಿರುವ ಮತ್ತಿ ತಿಮ್ಮಣ್ಣನಾಯಕನ ೧೫೮೩ರ ದತ್ತಿ ಶಾಸನವು (*ಅದೇ*, ೧೧, ಹಿರಿಯೂರು ೭೫) ವಿಜನಯಗರದ ರಾಮರಾಜಯ್ಯ ಮತ್ತು ತಿರುಮಲರಾಜಯ್ಯರಿಗೆ ಪುಣ್ಯವಾಗ ಲೆಂದು ತಿಮ್ಮಣ್ಣನಾಯಕರನ್ನು ತುಂಗಭದ್ರಾತೀರದ ಹಂಪಿ ವಿರೂಪಾಕ್ಷದೇವರ ಸನ್ನಿಧಿಯಲ್ಲಿ ಶ್ರೀಮಾಲ್ಯಪಂತಂ ರಾಮಾನುಜಜೀಯರ್‌ರಿಗೆ ರಂಗಸಮುದ್ರ ಗ್ರಾಮವನ್ನು ದಾನ ಮಾಡಿದುದನ್ನು ದಾಖಲಿಸಿದೆ; ಹಾಗೂ ಇದೇ ಶಾಸನಕಲ್ಲಿನ ಎಡಭಾಗದಲ್ಲಿರುವ ಪಾಠದಲ್ಲಿ (*ಅದೇ*, ಹಿರಿಯೂರು ೭೬), ಈತನು ತನ್ನ ತುತೆದೆ ಹನುಮಿನಾಯಕನಿಗೆ ಪುಣ್ಯವಾಗಲೆಂದು ಇದೇ ರಾಮಾನುಜಜೀಯರ್‌ರಿಗೆ ಅರಕೆರೆ ಗ್ರಾಮವನ್ನು ಧಾರಾ ಪೂರ್ವಕ ನೀಡಿದುದನ್ನು ಹೇಳುತ್ತದೆ. ಇದು ಈ ಪ್ರದೇಶದಲ್ಲಿ ರಾಮಾನುಜಕೂಟ ನಡೆಸುತ್ತಿದ್ದುದನ್ನು ಪರೋಕ್ಷವಾಗಿ ಸೂಚಿಸುತ್ತದೆ.

ಈ ರಂಗಸಮುದ್ರ ಶಾಸನದಲ್ಲಿ ಉಲ್ಲೇಖಿತರಾದ ಮಾಲ್ಯವಂತಂ ರಾಮಾನುಜ ಜೀಯರ್‌ರು ಮೇಲುಕೋಟೆಯ ವೇದಾಂತಂ ರಾಮಾನುಜಜೀಯರ್‌ರೇ ಆಗಿದ್ದಿರಬಹುದು ಎಂಬ ವಿಚಾರವಿದೆ. ರಂಗಸಮುದ್ರವು ಹಿರಿಯೂರು ತಾಲ್ಲೂಕಿನಲ್ಲಿದ್ದರೂ ಅರಕೆರೆಯು ಆ ಪ್ರದೇಶದಲ್ಲಿಲ್ಲ. ಈ ಶಾಸನಪಾಠಗಳ ಮರುಪರಿಶೀಲನೆಯ ನಂತರ '*ನಂದನ ಸೋಮಸ್ಥಲ*'ವೆಂಬುದು (ಪ್ರಕಟಿತ ಶಾಸನಪಾಠದಲ್ಲಿ ಈ ಸಾಲು ತುಟಿತವಾಗಿರುವಂತೆ ಕಾಣಿಸಿದೆ) ಹೊಳಲ್ಕೆರೆ ತಾಲ್ಲೂಕಿನ '*ನಂದನಹೊಸೂರುಸ್ಥಳ*' ವೆಂಬುದಾಗಿ ಖಚಿತ ಪಡಿಸಲಾಗಿದ್ದು ಅರಕೆರೆಯೆಂಬುದು ಹಿಂದೆ ನಂದನಹೊಸೂರು ಸ್ಥಳಕ್ಕೆ ಸೇರಿದ ಇಂದಿನ ಬೆಚರಾಕ್ ಗ್ರಾಮವೆಂಬುದು ಸ್ಪಷ್ಟಪಡುತ್ತದೆ. ಮುಖ್ಯವಿಚಾರವೆಂದರೆ, ನಂದನ ಹೊಸೂರು ಗ್ರಾಮವಿರುವುದು ಇದೇ ತಾಲ್ಲೂಕಿನ ಪ್ರಸಿದ್ಧ ಶ್ರೀವೈಷ್ಣವಕ್ಷೇತ್ರವಾದ ಹೊರಕೆರೆದೇವರಪುರದ ಪಕ್ಕದಲ್ಲಿ. ಇದು ಉದ್ಭವ ನರಸಿಂಹಕ್ಷೇತ್ರ. ಇದನ್ನು ಲಕ್ಷ್ಮೀನರಸಿಂಹನೆಂದು ಕರೆದಿದ್ದರೆ, ಉತ್ಸವಮೂರ್ತಿಯನ್ನು ಲಕ್ಷ್ಮೀರಂಗನಾಥಸ್ವಾಮಿ ಯೆಂದು ಕರೆಯಲಾಗುತ್ತದೆ. ಈ ದೇವಾಲಯದಲ್ಲಿ ಹಿಂದೆ ನಡೆಯುತ್ತಿದ್ದಿರಬಹುದಾದ ರಾಮಾನುಜಕೂಟವನ್ನು ನೆನಪಿಸುವಂತೆ, ಈಗಲೂ ಹನ್ನೆರಡು ವರುಷಗಳಿಗೊಮ್ಮೆ 'ಅನ್ನದ ಕೋಟೆ'ಸೇವೆ ಈ ದೇವರಿಗೆ ಸಲ್ಲುತ್ತಿರುವುದು ಗಮನಾರ್ಹ.

ಆರನೇ ದೊರೆ ಚಿಕ್ಕಣ್ಣನಾಯಕನು ತನ್ನ ತಂದೆ-ತಾಯಿಯರಿಗೆ ಪುಣ್ಯವಾಗಲೆಂದು ೧೬೭೭ರಲ್ಲಿ ಹಿರಿಯೂರು ತಾಲ್ಲೂಕಿನ ತೊರೆ (ಸಾಲು) ನಾಗೇನಹಳ್ಳಿಯನ್ನು ರಾಮಾನುಜ ಕೂಟಕ್ಕೆ ಧಾರಾದತ್ತವಾಗಿ ಅರ್ಪಿಸುತ್ತಾನೆ (*ಅದೇ*, ಹಿರಿಯೂರು ೫೯). ಈ ಗ್ರಾಮವನ್ನು ದಾನವಾಗಿ ಸ್ವೀಕರಿಸುವವರು ತಿರುಪತಿ ಪೆದಜೀಯರ್ಯೈಯ್ಯನವರು. ಹಾಗೆಯೇ, ತ್ರುಟಿತವಾಗಿರುವ ಎರಡನೇ ಶಾಸನವು (*ಅದೇ*, ದಾವಣಗೆರೆ ೧೬೦), ತಿರುವೆಂಗಲಾಚಾರ್ಯರಿಗೆ ಈ ನಾಯಕನು ಹಾಲುವರ್ತಿ ಗ್ರಾಮವನ್ನು ದಾನಮಾಡಿದು ದನ್ನು ತಿಳಿಸುತ್ತದೆ. ಈ ನಾಯಕನು ಪೋಷಿಸಿದ ರಾಮಾನುಜಕೂಟದ ಬಗೆಗಾಗಲೀ, ಗ್ರಾಮಗಳನ್ನು ದಾನವಾಗಿ ಪಡೆದುಕೊಂಡ ಜೀಯರ್-ಆಚಾರ್ಯರ ಬಗೆಗಾಗಲೀ ಸರಿಯಾದ ವಿವರ ದೊರೆಯುವುದಿಲ್ಲ. ಆದರೆ ಶಾಸನದಲ್ಲಿ ಪ್ರಸ್ತಾಪಗೊಂಡಿರುವ ರಾಮಾನುಜಕೂಟವು ತಿರುಪತಿಯ ರಾಮಾನುಜಕೂಟವೇ ಆಗಿದ್ದು, ಅಲ್ಲಿಯವರೇ ಆಗಿದ್ದ ತಿರುಪತಿಯ ಪೆದಜೀಯರ್‌ರೇ ಅದರ ಮೇಲ್ವಿಚಾರಕರಾಗಿದ್ದಿರಬೇಕೆಂದು ಭಾವಿಸಬಹುದಾಗಿದೆ.

ವಿಜಯನಗರದಲ್ಲಿ ವೆಂಕಟಪತಿರಾಯನ ಆಳ್ವಿಕೆ ಮುಂದುವರೆದಿರುವಾಗ ಮೈಸೂರಿ ನಲ್ಲಿ ಒಡೆಯರ ಮನೆತನವು ಊರ್ಜಿತಗೊಳ್ಳುತ್ತಿರುತ್ತದೆ. ಶ್ರೀವೈಷ್ಣವ ಆಚಾರ್ಯರು, ಮಠಗಳು ಮತ್ತು ದೈವಗಳಿಗೆ ಈ ಮನೆತನದವರು ನಿಷ್ಠಾವಂತರಾಗಿದ್ದು, ಹಲವು ವಿಧದಲ್ಲಿ ಪೋಷಣೆ ನೀಡತೊಡಗುತ್ತಾರೆ. ಬೆಳಗೊಳದ ಜನಾರ್ಧನಸ್ವಾಮಿ ಪಾಳು ದೇವಾಲಯಕ್ಕೆ ಆಗ್ನೇಯದಲ್ಲಿ ಬಾವಿಗೆ ಮುಚ್ಚಿರುವ ಕಲ್ಲಿನ ಮೇಲಿರುವ ೧೫೯೭ರ ಬರಹವು (*ಅದೇ*, ೬, ಶ್ರೀರಂಗಪಟ್ಟಣ ೭೧) ರಾಮಾನುಜಕೂಟದ ಬಗ್ಗೆ ಪ್ರಸ್ತಾಪಿಸು ತ್ತದೆ. ಈ ಶಾಸನ ಹೇಳುವಂತೆ, ವೆಂಕಟಪತಿರಾಯನ ಅಣ್ಣ ರಾಮರಾಜಯನ ಮಗ ತಿರುಮಲರಾಯನು ಮೈಸೂರು ಒಡೆಯರ ಮನೆತನಕ್ಕೆ ಸೇರಿದ ಚಾಮರಸ ಒಡೆಯನ ಮಗ ಬೆಟ್ಟದ ಚಾಮರಸ ಒಡೆಯನಿಗೆ ಸತ್ತಿಗನಹಳವನ್ನು ಕೊಡುಗೆಯಾಗಿ ನೀಡುತ್ತಾನೆ; ಹಾಗೂ ಚಾಮರಸ ಒಡೆಯನು ಆ ಗ್ರಾಮವನ್ನು ಮಹಾಜನರಿಂದ ಕ್ರಯವಾಗಿ ಪಡೆದ ಮಜ್ಜಿಗೆಪುರವಾದ ಶಂಕರಪುರ ಗ್ರಾಮವನ್ನು ಬೆಳಗೊಳದ ಜನಾರ್ದನ ದೇವಾಲಯದ ರಾಮಾನುಜಕೂಟಕ್ಕೆ ದಾನವಾಗಿ ನೀಡುತ್ತಾನೆ. ಈ ಶಾಸನವು ಜನಾರ್ದನದೇವರ ಸನ್ನಿಧಿಯಲ್ಲಿ ೨೦ ಮಂದಿ ಶ್ರೀ ವೈಷ್ಣವರಿಗೆ ೩೦ ಮಂದಿ ವೈದಿಕರಿಗೆ-ಒಟ್ಟು ೩೦ ಮಂದಿಗೆ 'ರಾಮಾನುಜಕೂಟ ಛತ್ರ' ನಡೆಯಲೋಸಗ ಬಿಟ್ಟಂಥಾ ಕ್ಷೇತ್ರಗಳ ವಿವರವನ್ನೊಳ ಗೊಂಡಿವೆ.

ಮೈಸೂರು ಅರಮನೆಯ ಕೋಟೆಯೊಳಗಿನ ಪ್ರಸನ್ನ ಕೃಷ್ಣಸ್ವಾಮಿ ದೇವಾಲಯವನ್ನು ೧೮೨೫ರಲ್ಲಿ ಕಟ್ಟಿಸಿದವರು ಮುಮ್ಮಡಿ ಕೃಷ್ಣರಾಜ ಒಡೆಯರ್. ಈ ಸಂದರ್ಭದಲ್ಲಿ ಇವರು ದೇವರಿಗೆ ನವರತ್ನಗಳೆಂಬ ವಿಶಿಷ್ಟ ಸೇವೆಗಳನ್ನು ಸಲ್ಲಿಸಿದುದನ್ನು ಈ

ದೇವಸ್ಥಾನದ ಮುಂದಿರುವ ಶಾಸನದಲ್ಲಿ (*ಅದೇ,* ೫, ಮೈಸೂರು ೩೭)ಹೇಳಿದೆ. ಈ ಮೂಲಕ ಕೃಷ್ಣರಾಜರು ಮಹತ್ಕಾರ್ಯವೊಂದನ್ನು ಮಾಡಿದರೆಂದು ಭಾವಿಸಲಾಗುತ್ತದೆ. ದೇವರ ಪ್ರತಿಷ್ಠಾಪನೆ, ಪೂಜೆ-ಪುನಸ್ಕಾರ ಇತ್ಯಾದಿಗಳಿಗೆಂದು ವೆಚ್ಚಮಾಡಲು ಈ ಒಡೆಯರು ವರ್ಷಂಪ್ರತಿ ೫೦೦೦ ಕಂಠೀರಾಯಿ ವರಹಗಳನ್ನು ನಿಷ್ಕರ್ಷೆ ಮಾಡುತ್ತಾರೆ. ಮುಖ್ಯಾಂಶ ವೆಂದರೆ, ಇದರಲ್ಲಿ ಶ್ರೀವೈಷ್ಣವರಿಗೆ ಭೋಜನ ಒದಗಿಸಲು ರಾಮಾನುಜ ಕೂಟವನ್ನು ವ್ಯವಸ್ಥೆಮಾಡಲಾಗಿದ್ದಿತು.

ಹಾಗೆಯೇ 'ಅಷ್ಟಗ್ರಾಮಗಳ ಕೈಫಿಯತ್ತು' ಒದಗಿಸುವ ಮಾಹಿತಿಯ ಪ್ರಕಾರ (*ಕಕೈ* ೨೦), ಮೈಸೂರು ಒಡೆಯರ ಕಾಲದಲ್ಲಿ ಅರಹೆನಸ್ಥಳಕ್ಕೆ ಸೇರಿದ ಕ್ಯಾತನಹಳ್ಳಿಯಲ್ಲಿ ರಾಮಾಂಜಕೂಟ (ರಾಮಾನುಜಕೂಟ)ವಿದ್ದ ಪ್ರಸ್ತಾಪ ಬರುತ್ತದೆ. ಇದಕ್ಕೆ ಬಿಟ್ಟ ಭೂದತ್ತಿಯ ಒಳಗೊಂಡಿದ್ದುದು 'ಗದ್ದೆ ಖ ೪|| 'ಇಲ್ಲಿಯ ಕ್ಯಾತನಹಳ್ಳಿಯಿರುವದು ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನಲ್ಲಿ.

ಆಕರ ಸಾಹಿತ್ಯ

1. Jeannine Aujboyer, 1969, *Sri Ranganathaswami- A Temple of Vishnu in Srirangam (Madras, India),* Paris
2. L.V.Gopalan (Compiler), 1972, *Sri Vaishnava Divaya Desams (108 Tiruppatis),* Visishtadvaita Pracharini Sabha, Madras
3. T.V. Mahalingan, 1975, *Administration and Social Life under Vijayanagar, Part 2: Social Life,* University of Madras.
4. T.K.T.Veeraraghavacharya, 1982, *The History of Tiruvengadam Temple, Vol.3,* T.T. Devasthanams, Tirupati.
5. R.N. Saletore, 1982, *Vijayanagar Art*, Sundeep Prakashan, Delhi,
6. D.Devakunjari, 1983, *Hampi*, Archaeological Survey of India, New Delhi
7. V.Vijayaraghavachrya (Ed), 1984, I*nscriptions of Krishnaraya's Time* (From 1509 A.D. to 1531 A.D.) (ಐಕೆಟಿ): *Tirupati Devasthanam Inscriptions, Vol. 3* (ಐಕೆಟಿ): Sri Satguru Publications, Delhi
8. Konduri Sarojini Devi, 1990, *Religion in Vijayanagara Empire,* Sterling Publishers Pvt. Limited, New Delhi.
9. John M. Fritz George Michell, 1991, *City of Victory Vijayanagara,* Aperture Foundation, New York
10. Anila Verghese, 1995, *Religious Traditions at Vijayanagara-As Revealed Through its monumets*, American Institute of Indian Studies; Manohar Publishers & Distributors, New Delhi -2000, *Ar-*

chaeology, Art and Religion- New Perspective on Vijayanagara, Oxford University Press, New Delhi.

11. S.N. Shivarudraswmy, 1996, *Vijayangara Temples in Karnataka,* Directorate of Archaelogy and Museums, Mysore.
12. Anna L. Dallapiccola & Anila Verghese, 1998, *Sculpture at Vijayanagara-Iconography and Style,* Americal Institute of Indian Studies, Manohar Publishers & Distributors, New Delhi.
13. K.M. Suresh, 1998, *Sculptural Art of Hampi,* Directorate of Archaeology and Museums, Mysore.
14. K.M. Suresh, 1998, Sculputral Art of Hampi, Directorate of Archaeology and Museums, Mysore.
15. *ಎಪಿಗ್ರಾಫಿಯ ಕರ್ನಾಟಿಕಾ* , ಸಂಪುಟ ೫ (ಮೈಸೂರು ಜಿಲ್ಲೆ -ಪರಿಷ್ಕೃತ ಆವೃತ್ತಿ), ೧೯೭೬, ಸಂಪುಟ ೬ (ಮಂಡ್ಯ ಜಿಲ್ಲೆ), ೧೯೭೭; ಸಂಪುಟ ೯(ಹಾಸನ ಜಿಲ್ಲೆ), ೧೯೯೦, ಮೈಸೂರು ವಿಶ್ವವಿದ್ಯಾನಿಲಯ.
16. ಬಾ.ರಾ. ಗೋಪಾಲ, ೧೯೮೪, *ಕರ್ನಾಟಕದಲ್ಲಿ ಶ್ರೀರಾಮಾನುಜಾಚಾರ್ಯರು,* ಮೈಸೂರು ವಿಶ್ವವಿದ್ಯಾನಿಲಯ.
17. ಹೆಚ್.ಜೆ. ರಾಮಯ್ಯಂಗಾರ್, ೧೯೯೨, *ಶ್ರೀವೈಷ್ಣವ ಆಚಾರ್ಯ ಪರಂಪರೆ* (ರಾಮಾನುಜಸಿದ್ಧಾಂತದರ್ಪಣದ ಪರಿಷ್ಕೃತ ದ್ವಿತೀಯ ಭಾಗ), ಲೇಖಕರಿಂದ ಪ್ರಕಾಶಿತ, ಬೆಂಗಳೂರು.
18. ಎಂ.ಎಂ. ಕಲಬುರ್ಗಿ (ಸಂ), ೧೯೯೪, *ಕರ್ನಾಟಕದ ಕೈಫಿಯತ್ತುಗಳು (ಕಕೈ),* ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
19. ಎ.ವಿ. ನರಸಿಂಹಮೂರ್ತಿ, ೧೯೯೬, *ವಿಜಯನಗರದ ನಾಣ್ಯಸಂಪತ್ತು,* ಮೈಸೂರು ವಿಶ್ವವಿದ್ಯಾನಿಲಯ.
20. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೩ : ಹಂಪಿ ಶಾಸನಗಳು,* ೨೦೦೦, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
21. ರಮೇಶ್ ನಾಯಕ್, 'ಆನಂದನಿಧಿ ದಾನ', *ವಿಜಯನಗರ ಅಧ್ಯಯನ,* ಸಂಪುಟ ೮, ೨೦೦೩, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.
22. ಲಕ್ಷ್ಮಣ್ ತೆಲಗಾವಿ 'ಚಿತ್ರದುರ್ಗ ನಾಯಕ ಅರಸರು ಮತ್ತು ಹಂಪಿಯ ಶ್ರೀ ವೈಷ್ಣವ ಆಚಾರ್ಯರು', *ವಿಜಯನಗರ ಅಧ್ಯಯನ,* ಸಂಪುಟ ೧೨, ೨೦೦೭.

೩೩. 'ವಿರೂಪಾಕ್ಷ ವಸಂತೋತ್ಸವ ಚಂಪೂ'ಗ್ರಂಥದ ನಿಜಕರ್ತೃ ಶ್ರೀ ಮಹಾದೇವಪ್ಪಯ್ಯ ಮಹಾಪುರುಷರು

ವಸುಂಧರಾ ದೇಸಾಯಿ ಮಹಾಪುರುಷ

'ಮಹಾಪುರುಷ, ಸಂಸ್ಥಾನ ರಂಗಾಪುರ'ಕುಟುಂಬದ ಇತಿಹಾಸ, ಅಂದರೆ ಶ್ರೀ ಗುರು ಬಿಷ್ಟಪ್ಪಯ್ಯ ಮತ್ತು ಅವರ ಮೊಮ್ಮಗ ಮಹಾದೇವಪ್ಪಯ್ಯ ಅವರ ಬದುಕು ಮಹತ್ಕಾರ್ಯ ಸಾಧನೆಗಳ ಬಗ್ಗೆ ಸ್ಪಷ್ಟ ಮಾಹಿತಿ ಇರುವ ಯಾರೇ ಆದರೂ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿರುವ 'ವಿರೂಪಾಕ್ಷ ವಸಂತೋತ್ಸವ ಚಂಪೂ'ಗ್ರಂಥವನ್ನು ಓದತೊಡಗುತ್ತಿದ್ದಂತೆಯೇ ಈ ಗ್ರಂಥದ ಕರ್ತೃ ಸ್ವತಃ ಮಹಾದೇವಪ್ಪಯ್ಯ ಅವರೇ ಎಂದು ಥಟ್ಟನೇ ಹೊಳೆಯುತ್ತದೆ.

ಗ್ರಂಥದ ಮುನ್ನುಡಿಯಲ್ಲಿ ಡಾ. ಎಚ್. ಜೆ. ಲಕ್ಕಪ್ಪ ಗೌಡರು 'ಹಂಪಿಯ ವಿರೂಪಾಕ್ಷ ಮತ್ತು ಸುತ್ತ ಮುತ್ತಲ ವಾತಾವರಣ ಭಿನ್ನ ಭಿನ್ನ ಚಿತ್ರಗಳ ಕೌದಿಯನ್ನು ಹೊಲೆದಂತೆ ಈ ಕೃತಿಯ ಬಂಧವಿದೆ.... ಈ ಕಥನದಲ್ಲಿ ಐಕ್ಯವನ್ನು ಮತ್ತು ಸಾವಯವ ಸಂಬಂಧವನ್ನು ಹುಡುಕುವುದೇ ಸರಿಯಲ್ಲ. ಕವಿ, ಮನಸ್ಸು ಬಂದಂತೆ, ತನಗೆ ಹೊಳೆದ ಎಲ್ಲ ವಿಷಯಗಳನ್ನೂ ತುರುಕುತ್ತಾ ಹೋಗುತ್ತಾನೆ...., (ಪು. vii) ಎಂದು ಹೇಳಿದಂತೆ, ಕವಿ ತಾನು ಕಂಡ, ಅನುಭವಿಸಿದ ಹಲವಾರು ಘಟನೆಗಳನ್ನು, ಸ್ಥಳಗಳನ್ನು ಈ ಕೃತಿಯಲ್ಲಿ ದಾಖಲಿಸದ್ದಾನೆ.

ಮಹಾದೇವಪ್ಪಯ್ಯ ಅವರು ಕ್ರಿ. ಶ. 1701ರಲ್ಲಿ ಹುಟ್ಟಿದರು, ಹದಿನಾರು ವರ್ಷದವರಿದ್ದಾಗ ತಮ್ಮ ಅಜ್ಜ ನಿರ್ಮಿಸಿದ ಹಂಪಿ ಮಹಾಗೋಪುರಕ್ಕೆ ಒಂದು ಲಕ್ಷ ಬ್ರಾಹ್ಮಣರಿಗೆ ಅನ್ನ ಸಂತರ್ಪಣೆ ಏರ್ಪಡಿಸಿದ ಮೂಲಕ ವಿಜೃಂಭಣೆಯಿಂದ ಕಲಶ ಇಡಿಸಿದರೆಂಬ ಮಾಹಿತಿ ಲಭ್ಯವಿದೆ. [1]

'ಜ್ಯೋತಿಷ್ಯ ಶಾಸ್ತ್ರದಲ್ಲಿ ಮಹಾದೇವಪ್ಪಯ್ಯ ಅವರಿಗೆ ಅಸಾಧಾರಣ ಪ್ರತಿಭೆ ಇತ್ತು. ಅವರ ಪ್ರಖ್ಯಾತಿಯನ್ನು ಕೇಳಿದ ಮೈಸೂರು ಮಹಾರಾಜರು ಒಮ್ಮೆ ಆಸ್ಥಾನಕ್ಕೆ ಬರ ಮಾಡಿಕೊಂಡರು ಮತ್ತು ಅವರ ಜ್ಯೋತಿಷ್ಯ ವಿದ್ಯೆಯನ್ನು ಹಲವು ವಿಧದಿಂದ ಪರೀಕ್ಷಿಸಿ 'ನೀವು ನಿಜವಾಗಿ ಮಹಾಪುರುಷರು'ಎಂದು ಪ್ರಣಾಮ ಮಾಡಿದರು ಎಂಬ ಮಾಹಿತಿಯು ನಮಗೆ ಮೌಖಿಕ ಪರಂಪರೆಯಲ್ಲಿ ಸಿಗುತ್ತದೆ. ಸಂಗೀತ ಕಲಾನಿಧಿ ಕೆ. ವಾಸುದೇವಚಾರ್ಯರು ಮೈಸೂರು ಸಂಸ್ಥಾನದ ಕುರಿತು ಬರೆದಿರುವ 'ನೆನಪುಗಳು' ಪುಸ್ತಕದಲ್ಲಿ ಇದೇ ಮಾಹಿತಿಯು ಸಂಪೂರ್ಣ ವಿವರಣೆಯೊಂದಿಗೆ ದಾಖಲಾಗಿದೆ.[2]

ಬಿಷ್ಟಪ್ಪಯ್ಯ ಮತ್ತು ಮಹಾದೇವಪ್ಪಯ್ಯ ಅವರ ಹಲವು ಸಾಮಾಜಿಕ ಧಾರ್ಮಿಕ ಕಾರ್ಯಗಳಿಗೆ ಪ್ರತಿಯಾಗಿ ಶೃಂಗೇರಿ ಜಗದ್ಗುರುಗಳು ಅರವತ್ತು ಬಿರುದುಗಳನ್ನಿತ್ತು ಮಹಾದೇವಪ್ಪಯ್ಯ ಅವರನ್ನು ಸನ್ಮಾನಿಸಿದ್ದಕ್ಕೂ, ಉತ್ತರ ಕರ್ನಾಟಕದ ಹೆಚ್ಚಿನ ಸಂಸ್ಥಾನಿ ಕರು ಮಹಾದೇವಪ್ಪಯ್ಯ ಅವರಿಗೆ 'ಗ್ರಾಮ,' ಭೂಮಿಗಳನ್ನು ಇನಾಂ ನೀಡಿ ಸನ್ಮಾನಿಸಿದ್ದಕ್ಕೂ ದಾಖಲೆಗಳಿವೆ. [3]

ಮಹಾದೇವಪ್ಪಯ್ಯ ಅವರಿಗೆ ಬಹುಕಾಲ ಮಕ್ಕಳಾಗಿರಲಿಲ್ಲ . ಹಾಗಾಗಿ ಒಂದು ಮಗುವನ್ನು ದತ್ತು ತೆಗೆದುಕೊಂಡರು. ನಂತರ ಒಬ್ಬ ಪುತ್ರ ಜನಿಸಿದನು. ಆದರೂ ದತ್ತು ರದ್ದುಗೊಳಿಸದೇ ಅವರಿಗೂ 'ಮಹಾ ಪುರುಷ' ಉಪನಾಮ ಕೊಟ್ಟು, 'ತಾಮ್ರ ಗುಂಡಿ' ಎಂಬ ತಮ್ಮ ಇನಾಂ ಹಳ್ಳಿಯನ್ನು ಆ 'ಮಗ'ನಿಗೆ ಬಿಟ್ಟುಕೊಟ್ಟಿದ್ದರು,[4] ಎಂದು ಕುಟುಂಬದ ಹಿರಿಯರು ಹೇಳುತ್ತಾರೆ.

ಮಹಾದೇವಪ್ಪಯ್ಯ ಅವರನ್ನು ಕುರಿತು ರಚಿಸಿದ 'ಶಿವಪ್ಪಾಚಾರ್ಯಷ್ಟಕ'ಎಂಬ ಒಂದು ಶ್ಲೋಕ ಲಭ್ಯವಿದೆ. ಅದರ ಒಂದು ಸ್ತೋತ್ರದಲ್ಲಿ ಸ್ಫುರದ್ರತ್ನ ರಾಜತ್ಕಿರೀಟಂ ದಧಾನಂ |ಜ್ವಲತ್ಕುಂಡಲ ದ್ವಂದ್ವ ಸಂಶೋಭಿಮಾನಂ ||ಲಸದ್ಧಾರ ಯಷ್ಟಿ ಪ್ರಭಾಬಾಸ ಮಾನಂ | ಶಿವಪ್ಪಾರ್ಯಬಾಲಂ ಭಜೆ ನಿತ್ಯಕಾಲಂ ||

(ಕಿರೀಟಂ ಕರ್ಣಕುಂಡಲ ಧರಿಸಿ ಶೋಭಿಸುತ್ತಿದ್ದರು)ಎಂದು ಅವರನ್ನು ವರ್ಣಿಸಿ ದ್ದಾರೆ. (ಅವರ ತಂದೆಯ ಹೆಸರು ಶಿವಪ್ಪಯ್ಯ)

ಮಹಾಪುರುಷ ಸಂಸ್ಥಾನ ರಂಗಾಪುರದ ಬೆಳ್ಳಿಯ ಸಿಂಹಾಸನ ಶಿವಮೊಗ್ಗ ಸಮೀಪದ ಕೂಡ್ಲಿ ಶೃಂಗೇರಿ ಮಠದಲ್ಲಿದ್ದು ಪತ್ತೆಯಾಗಿದೆ. [5]

ಮಹಾಪುರಷ ಕುಟುಂಬದ ಪುರುಷರು ಹಂಪಿಗೆ ಹಾಗೇ ಸುಮ್ಮನೆ ಬರುವಂತಿಲ್ಲ. ಶ್ರೀ ಗುರು ಬಿಷ್ಟೇಶ ಕೃತ ರಸಲಿಂಗದೊಡನೆಯೇ ಬಂದು ಅಲ್ಲಿ ದೊಡ್ಡ ಉತ್ಸವ ನಡೆಸ ಬೇಕು ಮತ್ತು ಆಗ ಅವರಿಗೆ ರಾಜರಿಗೆ ಮತ್ತು ಗುರುಗಳಿಗೆ ಮಾತ್ರ ತೆರೆಯುವ ಪೂರ್ವ ದ್ವಾರ ತೆರೆದು ಪಂಪಾಪತಿಯ ದರ್ಶನ ಕೊಡಬೇಕು ಎಂಬ ನಿಯಮ ಇದೆ.[6]

ಮಹಾದೇವಪ್ಪಯ್ಯ ಅವರಿಗೆ ಸಂಬಂಧಿಸಿದ ಸ್ಥಳಗಳು, ಕೆಲ ವೈಯಕ್ತಿಕ ಬದುಕಿನ ಗ್ರಂಥದಲ್ಲಿ ಉಲ್ಲೇಖವಾಗಿವೆ. ಈ ಎಲ್ಲ ಹಿನ್ನೆಲೆಯೊಡನೆ ಗ್ರಂಥವನ್ನು ಓದಿದರೆ ಹೆಜ್ಜೆ ಹೆಜ್ಜೆಗೆ ಪುರಾವೆಗಳು ದೊರಕುತ್ತ ಹೋಗುತ್ತವೆ. ಅವುಗಳಲ್ಲಿ ಮಹತ್ವವಾದವುಗಳ ಬಗ್ಗೆ ವಿವರಣೆ ನೀಡಲು ಪ್ರಯತ್ನಿಸಿದ್ದೇನೆ.

ಕವಿ, 'ವಿಷ್ಟಪೇಶ ಗೋಪುರ'ದ ಬಗ್ಗೆ ಒಮ್ಮೊಮ್ಮೆ ಎಳೆದು ತಂದಂತೆಯೂ ತೋರು ವಷ್ಟು ಪದೇ ಪದೇ ಉಲ್ಲೇಖ ಮಾಡಿದ್ದಾನೆ.

ಈ ಗ್ರಂಥದಲ್ಲಿ ವಿದ್ವಾಂಸರೇ ಹೇಳಿದಂತೆ 'ವಿಷ್ಟಪೇಶ ಗೋಪುರ'ಎಂದರೆ ಇಂದಿನ ಬಿಷ್ಟಪ್ಪಯ್ಯ ಗೋಪುರ (ಪು. 10), ಮತ್ತು 'ಈ ಗ್ರಂಥದಲ್ಲಿ ಪೂರ್ವ ಮಹಾಗೋಪುರಕ್ಕೆ ಐತಿಹಾಸಿಕ ಮಹತ್ವವಿದೆ' ಎಂದು ಲೇಖಕರಾದ ಪ್ರೊ. ಕೆ. ಎಸ್. ಕಣ್ಣನ್ ಹೇಳಿದ್ದಾರೆ. (ಪು. 515)

ತನ್ನ ಅಜ್ಜ ನಿರ್ಮಿಸಿದ ಗೋಪುರಕ್ಕೆ , ತಾನು ನಡೆಸುತ್ತಿರುವ ಕಲಶ ಸಮಾರೋಹವೇ ಕೃತಿಯ ಮುಖ್ಯ ವಸ್ತುವಾದ್ದರಿಂದ ಕವಿ ಪೂರ್ವ ಮಹಾಗೋಪುರಕ್ಕೆ ಅಷ್ಟು ಮಹತ್ವ ನೀಡಿದ್ದು ಸಹಜವಾಗಿಯೇ ಇದೆ.

'ಮಹಾ ಗೋಪುರದ ಶಿಖರ ಸ್ಥಳಗಳಲ್ಲಿ ಪ್ರವರ್ತನೆಗೊಂಡಂತಹ ವಿರೂಪಾಕ್ಷ ದೇವ ಮಹೋತ್ಸವ' - ಪು.128.

'ಗೋಪುರದ ಶಿಖರ ಸ್ಥಳಗಳಲ್ಲಿ ನಡೆಸುವ ಉತ್ಸವ'ಎಂದ ಮೇಲೆ ಅದು ಕಲಶ ಸಮಾರೋಹವೇ ಎಂದು ಈ ವಾಕ್ಯದಿಂದ ಸ್ಪಷ್ಟವಾಗುತ್ತದೆ. ಗೋಪುರದಲ್ಲಿ ಹೊಳೆಯುವ ಬಂಗಾರದ ಶೃಂಗಗಳ ಉಲ್ಲೇಖ ಮತ್ತು ಮತ್ತೆ ಬಂದಿದೆ.

ಸರ್ವದ್ವಿಜ ಸಮಾರಾಧನವನ್ನು ಪಂಚಾನನೋತ್ಸವದಿಂದ.... ಸತ್ಪುರುಷ ಶ್ರೇಷ್ಠನಾದ ಶ್ರೀ ವಿಷ್ಟಪೇಶ ಗುರುಶಿಷ್ಯನ ಅನುಮತಿಯಿಂದ ಪ್ರಾಚೀನ (ಹಳೆಯ) ಮಹಾಗೋಪುರದ ಎರಡನೆಯ ಒಳಭಾಗವನ್ನು ಹತ್ತಿತು. ಪು. 76. ಶ್ಲೋ. 55

ಈ ಒಂದು ಶ್ಲೋಕವೇ ನಮಗೆ ಮಹತ್ವವಾದ ಪುರಾವೆಗಳನ್ನು ನೀಡುತ್ತಿದೆ. 'ಜನತೆ ಶ್ರೀ ಗುರು ಬಿಷ್ಟೇಶರ ಶಿಷ್ಯನ ಅನುಮತಿ ಪಡೆದರು' ಅಂದರೆ ಆ ಸಮಾರಂಭದ ಯಜ ಮಾನರು ಬಿಷ್ಟೇಶರ ಶಿಷ್ಯ ಎಂದಾಯಿತಲ್ಲವೇ? (ಮಹಾಪುರುಷ, ಸಂಸ್ಥಾನ ರಂಗಾಪುರ, ಬಿಷ್ಟಪ್ಪಯ್ಯರಿಂದ ಪ್ರವರ್ತಿತವಾದ ದೊಡ್ಡ ಮಠವೇ ಆಗಿದೆ.)

ಪಂಚ ಕಲಶಗಳನ್ನು ಇರಿಸಿದ್ದರಿಂದಾಗಿ 'ಪಂಚಾನನೋತ್ಸವ'ಎಂದು ಕರೆದಿರ ಬಹುದು. ಇನ್ನು, ಈ ಶ್ಲೋಕದ ಮೂಲ ಸಂಸ್ಕೃತದಲ್ಲಿ 'ಪ್ರಾಚೀನ'ಮಹಾಗೋಪುರ ಎಂದು ಇದ್ದುದನ್ನು ಲೇಖಕರು 'ಹಳೆಯ' ಎಂದು ಭಾಷಾಂತರಿಸಿದ್ದಾರೆ. ಈ ಮಹಾ ಗೋಪುರವಂತೂ ಹಳೆಯದಲ್ಲ. (ನಿರ್ಮಾಣ ಕ್ರಿ. ಶ. 1660ರಿಂದ 1694) ಎರಡನೆಯ ಚಿಕ್ಕ ಗೋಪುರವನ್ನೊ, ಉತ್ತರದ ಗೋಪುರವನ್ನೊ ಹತ್ತಿದರೆ ರಥ ಬೀದಿಯಲ್ಲಿ ನಡೆ ಯುವ ರಥೋತ್ಸವವಂತೂ ಕಾಣಲು ಸಾಧ್ಯವಿಲ್ಲ. ಆದ್ದರಿಂದ ಪು. 151ರಲ್ಲಿ 513 ನೆಯ ಶ್ಲೋಕದಲ್ಲಿ ಮತ್ತೆ ಉಲ್ಲೇಖವಾದ 'ಪ್ರಾಚೀನ ಮಹಾಗೋಪುರದ' ವಿಶ್ಲೇಷಣೆ ಯನ್ನು ಲೇಖಕರು 'ಪ್ರಾಚಿ'ಎಂದರೆ ಪೂರ್ವ, ಪ್ರಾಚೀನ ಎಂದರೆ ಪೂರ್ವದ ಎಂದು ಮಾಡಿದಂತೆ ಈ ಶ್ಲೋಕದಲ್ಲಿ 'ಪೂರ್ವದ'ಎಂಬ ಅರ್ಥವೇ ಸರಿ ಎಂದು ನನ್ನ ಅಭಿಪ್ರಾಯ. 'ಪೂರ್ವದ ಮಹಾಗೋಪುರದ ಎರಡನೆಯ ಒಳಭಾಗ' ಎಂದಾಗಬೇಕು.

ಸಮಾರಂಭದಲ್ಲಿ ಉಪಸ್ಥಿತರಿದ್ದ ರಾಜರಿಂದ ನಮಗೆ ಮಹತ್ವದ ಸುಳಿವುಗಳು ದೊರೆಯುತ್ತಿವೆ. ಕವಿ, ತಾನು ಶ್ರೀ ರಾಶಿದೇಶಾಧಿಪತಿ ಆಶ್ರಿತ ಮತ್ತು ಆ ರಾಜ ಲಿಂಗಾಯಿತ ಎಂದು ಹೇಳಿದ್ದಾನಷ್ಟೆ? ಪು. 25

ಶ್ರೀರಾಶಿದೇಶಾಧಿಪ

ಕವಿಯು ಆಗ ವಾಸವಿದ್ದ ರಂಗಾಪುರ ಗ್ರಾಮ (ಜಿ. ಬಳ್ಳಾರಿ, ತಾ. ಹೂವಿನ ಹಡಗಲಿ)ಆಗ ಶಿರಹಟ್ಟಿ ಸಂಸ್ಥಾನಕ್ಕೆ ಸೇರಿತ್ತು ಮತ್ತು ಆ ಗ್ರಾಮದ ಆಚೆ ದಡದಲ್ಲಿರುವ 'ವಿಠ್ಠಲಾಪುರ'ಎಂಬ ಗ್ರಾಮವನ್ನು ಶಿರಹಟ್ಟಿ ಸಂಸ್ಥಾನಿಕರೇ ಮಹಾದೇವಪ್ಪಯ್ಯ ಅವರಿಗೆ 'ಇನಾಂ'ಆಗಿ ಕೊಟ್ಟಿದ್ದಾರೆ. ಶಿರಹಟ್ಟಿ ಸಂಸ್ಥಾನಿಕರು ಲಿಂಗಾಯಿತರು.

ಡಂಬಳದ ದೊರೆ ಕವಿಯ ಆಪ್ತ ಸ್ನೇಹಿತ ಶಿವಾಷ್ಟಕ ಬರೆದಿದ್ದಾನೆ. ಪು. 29

ಮೊದಲು ಗದಗ ನಂತರ ಡಂಬಳ ಕೊನೆಗೆ ಸೊರಟೂರಿನಲ್ಲಿ ನೆಲೆ ನಿಂತ ಡಂಬಳದ ದೇಸಾಯಿಯವರಿಂದ ಮಹಾದೇವಪ್ಪಯ್ಯ ಅವರಿಗೆ 'ತಾಮ್ರಗುಂಡಿ'ಎಂಬ ಗ್ರಾಮ ಇನಾಂ ಆಗಿ ಸಂದಿದೆ. ಮಹಾದೇವಪ್ಪಯ್ಯ, ಡಂಬಳದ ದೊರೆಯ ಮಗಳನ್ನೇ ಮದುವೆ ಆಗಿದ್ದರು. ಮಹಾದೇವಪ್ಪಯ್ಯ ಅವರನ್ನು ಕುರಿತ ಬರೆದಿರುವ 'ಶಿವಪ್ಪಾರ್ಯಾಷ್ಟಕ' ಲಭ್ಯವಿದೆ. ಅದೇ ಈ 'ಶಿವಾಷ್ಟಕ'ಎಂದು ನನ್ನ ಅನಿಸಿಕೆ.[7]

ಭುಜಂಗ ನಗರಾಧೀಶ : ಹಾವನೂರಿನ ಬಹುದ್ದೂರ್ ದೇಸಾಯಿಯವರು ಮಹಾದೇವಪ್ಪಯ್ಯ ಅವರಿಗೆ ಹಾವನೂರಿನಿಂದ 20ಕಿ. ಮೀ. ದೂರದಲ್ಲಿರುವ ಮೇವುಂಡಿ (ಜಿ. ಹಾವೇರಿ) ಎಂಬ ಗ್ರಾಮವನ್ನು 'ಇನಾಂ'ಆಗಿ ನೀಡಿದ್ದಾರೆ. ಅವರ ಕುಲದೈವ ಹಾವನೂರಿಗೆ ಸಮೀಪದಲ್ಲಿರುವ ಮೈಲಾರದ ಮೈಲಾರೇಶ್ವರ. ಆದ್ದರಿಂದ 'ಮಲ್ಲಾರಗಿರಿ' ಎಂದರೆ ದೇವರಗುಡ್ಡ ಅಲ್ಲದೇ ಮೈಲಾರ ಎಂದು ನನ್ನ ಅಭಿಪ್ರಾಯ.

ಲಕ್ಷ್ಮಣೇಶ್ವರ ಪುರಿಯ ರಾಜ : ಲಕ್ಷ್ಮೇಶ್ವರ, ಶಿರಹಟ್ಟಿ ಸಂಸ್ಥಾನಿಕರ ಮೂಲ ಸ್ಥಳವೇ ಲಕ್ಷ್ಮೇಶ್ವರ. ಆ ಸಂಸ್ಥಾನವೇ ಇಬ್ಭಾಗವಾಗಿ ಅದರ ಒಂದು ಕವಲು ಶಿರಹಟ್ಟಿಯಲ್ಲಿ ನೆಲೆಸಿತ್ತು (ಅವರ ವಂಶಸ್ಥರು ಈಗ ಮುಂಡರಗಿ ತಾಲೂಕಿನ ಹಮ್ಮಿಗೆಯಲ್ಲಿದ್ದಾರೆ.)

ಹರಪುರದ ಒಡೆಯ : ಹರಪನಹಳ್ಳಿ ನಾಯಕರು. ಬಿಷ್ಟಪ್ಪಯ್ಯ ಅವರ ಸ್ವಗ್ರಾಮ 'ಸೋಗಿ' (ಸೋಗಿ) ಹರಪನಹಳ್ಳಿ ಸಂಸ್ಥಾನಕ್ಕೆ ಸೇರಿತ್ತು. ಬಿಷ್ಟಪ್ಪಯ್ಯ ಅವರ ಅಧ್ಯಯನ, ಆಧ್ಯಾತ್ಮ ಸಾಧನೆಗೆ ಸೋಗಿಯಲ್ಲಿ ಅನುಕೂಲಕರವಾದ ವಾತಾವರಣ ಇರದೇ ತೊಂದರೆ ಯಾದಾಗ, ಹಗರಿಬೊಮ್ಮನ ಹಳ್ಳಿ ತಾಲೂಕಿನ 'ಹನಸಿ'ಗ್ರಾಮದಲ್ಲಿ ಈ ನಾಯಕರು 80 ಎಕರೆ ಭೂಮಿ ದಾನ ಮಾಡಿ ಅನುಕೂಲ ಮಾಡಿಕೊಟ್ಟಿದ್ದರು.[8]

ವಂಶನಗರೇಶ : ಬಿದರಹಳ್ಳಿ, ರಂಗಾಪುರ ಮತ್ತು ಅದರ ಆಚೆ ದಡದಲ್ಲಿರುವ ಬಿದಿರ ಹಳ್ಳಿ, ವಿಠ್ಠಲಾಪುರಗಳು ಬಿಷ್ಟಪ್ಪಯ್ಯ ತಮ್ಮ ಕೊನೆಗಾಲದಲ್ಲಿ ನೆಲೆಸಿದ ಹಳ್ಳಿಗಳು. ಮೂರು ಗ್ರಾಮಗಳು ಸಾಂಸ್ಕೃತಿಕವಾಗಿ ಧಾರ್ಮಿಕವಾಗಿ ಒಂದೇ ಎಂಬಂತೆ ಹೆಣೆದು ಕೊಂಡಿವೆ. ಮಹಾದೇವಪ್ಪಯ್ಯ ಅವರ ತಾಯಿ ಬಿದಿರಹಳ್ಳಿ ಜೋಯಿಸರ ಮಗಳು

ಹೀಗಾಗಿ ಕವಿ ಎಲ್ಲ ಸಂಸ್ಥಾನಿಕರ ಜೊತೆಗೆ ತನಗೆ ಅತ್ಯಂತ ಆಪ್ತವಾಗಿದ್ದ ಬಿದಿರಹಳ್ಳಿ ಗ್ರಾಮದ ಹೆಸರನ್ನು ಉಲ್ಲೇಖಿಸಿದ್ದಾನೆ. ಆದರೆ ಅಲ್ಲಿ ಯಾವೊಬ್ಬ ನಿರ್ದಿಷ್ಟ ಸಂಸ್ಥಾನಿಕರು ಇರದೇ ಇದ್ದುದರಿಂದ ಉಪಾಯವಾಗಿ 'ರಾಜವರ್ಣನೆ' ಕೈಬಿಟ್ಟಿದ್ದಾನೆ.

ಬಳ್ಳಾರಿಯ ಸಂಸ್ಥಾನಿಕರಿಂದ ಶಿರಗುಪ್ಪಿಯ ಬಳಿಯ ಭೂಮಿಯನ್ನು ಮಹಾದೇವಪ್ಪಯ್ಯ ಅವರಿಗೆ 'ಇನಾಂ'ಆಗಿ ಕೊಡಲ್ಪಟ್ಟಿತ್ತು ಮತ್ತು ಮಿಶ್ರಿಕೋಟಿ ದೇಸಾಯಿಯವರಿಂದ ಕಲಘಟಗಿ ತಾಲೂಕಿನ ಆರೆಬಸವನಕೊಪ್ಪ ಎಂಬ ಗ್ರಾಮ ಮತ್ತು ತಡಸ, ಗಿಡದ ಹುಬ್ಬಳ್ಳಿ ದೇಸಾಯಿಯವರಿಂದ ಅಂಬ್ಲಿಕೊಪ್ಪ (ತಾ. ಕಲಘಟಗಿ) ಎಂಬ ಗ್ರಾಮಗಳಲ್ಲದೇ ಉತ್ತರ ಕರ್ನಾಟಕದ ಹಲವು ಗ್ರಾಮಗಳಲ್ಲಿ ಮಹಾಪುರುಷ ಕುಟುಂಬಕ್ಕೆ ಸೇರಿದ ಭೂಮಿಗಳಿದ್ದವು. ಬಹುತೇಕ ಆ ಎಲ್ಲ ಗ್ರಾಮಗಳಲ್ಲಿರುವ ಗುಡಿ, ಕೆರೆ ಕಟ್ಟೆಗಳು ಮೌಖಿಕವಾಗಿ ಬಿಷ್ಟಪ್ಪಯ್ಯ ಅವರ ಗುಡಿ, ಬಿಷ್ಟಪ್ಪಯ್ಯ ಅವರ ಕೆರೆ ಎಂದೇ ಕರೆಯಲ್ಪಡುತ್ತವೆ.

ಅಂದರೆ ಆಯಾ ಗ್ರಾಮುಗಳಲ್ಲಿ ಬಿಷ್ಟಪ್ಪಯ್ಯ ಅವರು ನಡೆಸಿದ ಧಾರ್ಮಿಕ ಸಾಮಾಜಿಕ ಸೇವೆಗೆ ಪ್ರತಿಯಾಗಿ ಆಯಾ ಸಂಸ್ಥಾನಿಕರು ಮುಂದೆ ಅವರ ಮೊಮ್ಮಗನಿಗೆ 'ಇನಾಂ'ನೀಡಿ ಸನ್ಮಾನಿಸಿದ್ದಾರೆ (ಮಹಾ ದಾರ್ಶನಿಕರಾಗಿದ್ದ ಬಿಷ್ಟಪ್ಪಯ್ಯ ಅವರು ಭೂದಾನ ಸ್ವೀಕರಿಸಿರಲಿಕ್ಕಿಲ್ಲ) ಮತ್ತು ಮಹಾದೇವಪ್ಪಯ್ಯ ನಡೆಸಿದ ಕಲಶ ಸಮಾರೋಪ ಮುಂತಾದ ವಿರೂಪಾಕ್ಷೋತ್ಸವಗಳಲ್ಲಿ ಉತ್ಸಾಹದಿಂದ ಭಾಗವಹಿಸಿದ್ದಾರೆ, ಎಂದು ಇದರಿಂದ ತಿಳಿದುಬರುತ್ತದೆ.

ಗ್ರಂಥದಲ್ಲಿ ಉಲ್ಲೇಖವಾದ ಕೆಲಸ್ಥಳಗಳು

ಪುರಾತನ ಶ್ವೇತಾಶ್ವತ್ಥ -ಶ್ರೀ ಗಿರಿ (ಶ್ರೀ ಗುರು ಭಟ್ಟಾರ್ಯ) 'ಮಹಾಪುರುಷ' ಪು. 46, 47, 69, 62

ಬಿದಿರಹಳ್ಳಿಯಲ್ಲಿ ಬಿಷ್ಟಪ್ಪಯ್ಯ ಅವರು ತುಂಗಭದ್ರಾ ನದೀ ತಟದಲ್ಲಿ ಅಶ್ವತ್ಥ ನಾರಾಯಣ ವಿಗ್ರಹ ಸ್ಥಾಪಿಸಿದ್ದಾರೆ. ಅದರ ಎದುರಿನಲ್ಲಿ ವಿಶಾಲವಾದ ಅಶ್ವತ್ಥಮರವಿತ್ತು. (ಈಚೆಗೆ ಕಡಿದು ಹಾಕಿದ್ದಾರೆ ಆ ಗುಡಿಯ ಎದುರು ನದಿಯಲ್ಲಿರುವ ಬಂಡೆಯ ಮೇಲೆ ಕುಳಿತೇ ಬಿಷ್ಟಪ್ಪಯ್ಯ ಅವರು 'ಜಲಸಮಾಧಿ'ಮೂಲಕ ದೇಹತ್ಯಾಗ ಮಾಡಿದ್ದರು. ಆ ಸ್ಥಳದಲ್ಲಿ 'ಉದ್ಭವ'ಎಂದು ಹೇಳಲಾಗುವ ಒಂದು ಶಿವಲಿಂಗವಿದೆ. ಆ ಬಂಡೆ ನೀರಿನಲ್ಲಿ ಮುಳುಗಿರುವವರೆಗೂ (ಈಗ ನೀರು ಕಡಿಮೆಯಾಗಿದೆ) ಆ ಶಿವಲಿಂಗದ ಮೇಲೆ 'ಅಕ್ಕಿ ತೇಲುತ್ತವೆ, ಬಿಲ್ಪಪತ್ರೆ ಮುಳುಗುತ್ತದೆ' ಎಂದು ಪ್ರತೀತಿ ಹೊಂದಿತ್ತು. [8a]

ಬಿಷ್ಟಪ್ಪಯ್ಯ ಅವರ ಅವತಾರ ಆಗಷ್ಟೇ ಮುಗಿದಿತ್ತಾದ್ದರಿಂದ (ಕ್ರಿ. ಶ. 1698) ಆ ಸ್ಥಳ ಜನತೆಗೆಲ್ಲ ಆಕರ್ಷಕ ಧಾರ್ಮಿಕ ಕೇಂದ್ರವಾಗಿರಬಹುದು. (ಇತ್ತೀಚಿನವರೆಗೂ ಶಿವರಾತ್ರಿಗಳಂದು ಅಲ್ಲಿ ಜನಸ್ತೋಮ ಸೇರುತ್ತಿತ್ತು.) ಸಂಸ್ಕೃತ ಶ್ಲೋಕಗಳಲ್ಲಿ ಬಿಷ್ಟಪ್ಪಯ್ಯ ಅವರನ್ನು 'ಬಿಷ್ಟಪಾರ್ಯ'ಎಂದೇ ಉಲ್ಲೇಖಿಸಿದ್ದಾರೆ. ನೇರವಾಗಿ ಹೇಳದೆ ಕವಿ ಗುರು ಭಟ್ಟಾರ್ಯ ಮಹಾಪುರುಷ ಎಂದು ಹೇಳಿದ್ದಾರೆ.

ಆ ಸ್ಥಳದಲ್ಲಿ ಶ್ರಾದ್ಧಗಳಂದು ಪಿಂಡಪ್ರದಾನ ಮಾಡುತ್ತಾರೆ. ಬಳಿಯಲ್ಲಿಯೇ ಗ್ರಾಮ ದೇವತೆ ರೇಣುಕಾಂಬಾ ಗುಡಿ ಇದೆ.

ಕವಿಯ ತಾಯಿಯ ಹೆಸರು 'ತ್ರೀಣ್ಯಂಬಾ'. ಅದುವೇ ಅಂಬಾತ್ರಯ ಮಹಿಮಾತಿಶಯ ವರ್ಣನೆ ಆಗಿರಬಹುದು.[9]

ವಿಶಿಷ್ಟ ಶಿವಕ್ಷೇತ್ರ : ರಸಲಿಂಗಗಳಿಗೆ ಪೌರಾಣಿಕವಾಗಿ ಬಹಳ ಮಹತ್ವವಿದೆ. 'ಕಾಶ್ಯಾದಿ ಸರ್ವಲಿಂಗೇಭ್ಯೋ ರಸಲಿಂಗಾರ್ತಿನ ಪರಃ | ಜ ಎಂದು ರಸಗ್ರಂಥದಲ್ಲೂ ಇನ್ನೂ ಹಲ ವಾರು ಪುರಾಣಗಳಲ್ಲೂ ಹೇಳಿದ್ದಾರೆ. ಅದರಲ್ಲೂ ಬಿಷ್ಟಪ್ಪಯ್ಯ ಅವರು ಮಾಡಿದ ರಸಲಿಂಗ ಅತ್ಯಂತ ದೊಡ್ಡದು ಮತ್ತು ದಿವ್ಯವಾದ ಲೋಹದಿಂದ ಕೂಡಿ ವಿಶಿಷ್ಟವಾದದ್ದು ಎಂಬ ಹೆಗ್ಗಳಿಕೆ ಹೊಂದಿದೆ. ಅದೇ ಆ ಪುಣ್ಯ ಪ್ರದವಾದ ಶಿವಕ್ಷೇತ್ರ 'ರಂಗಾಪುರ'ಎಂದು ನನ್ನ ಅಭಿಪ್ರಾಯ.

ರಂಗನಾಥ ಕ್ಷೇತ್ರ : ರಂಗಾಪುರದಿಂದ 15-20 ಕಿ. ಮೀ. ದೂರದಲ್ಲಿರುವ ಹೊಳಲು ಎಂಬಲ್ಲಿ ಅನಂತಶಯನನ ಗುಡಿ ಇದೆ. ಮೂಲದಲ್ಲಿ ಆ ಗುಡಿಯಲ್ಲಿ ಲಕ್ಷ್ಮಿ ಮತ್ತು ಬ್ರಹ್ಮನ ವಿಗ್ರಹಗಳಿದ್ದವು. ಅವು ಭಗ್ನವಾದ ಮೇಲೆ ಆ ವಿಗ್ರಹಗಳನ್ನು ತೆಗೆದು ಅದೇ ಸ್ಥಳದಲ್ಲಿ ಈ ಅನಂತಶಯನನನ್ನು ಸ್ಥಾಪಿಸಿದ್ದಾರೆ. (ಬಿಷ್ಟಪ್ಪಯ್ಯ ಅವರು ಹಂಪಿಯ ಅನಂತಶಯನನ್ನು ತಂದು ಇಲ್ಲಿ ಸ್ಥಾಪಿಸಿದ್ದು ಎಂದು ಜನ ಹೇಳುತ್ತಾರೆ.)ಆ ಗರ್ಭಗೃದ ಮೂಲೆಯಲ್ಲಿ ಲಕ್ಷ್ಮಿ ಬ್ರಹ್ಮರ ಭಗ್ನ'ವಿಗ್ರಹಗಳಿದ್ದವು. ಈ ಭವ್ಯವಾದ ಅನಂತಶಯನನಿಗೆ ಆ ಗರ್ಭಗೃಹ ತೀರ ಚಿಕ್ಕದಾಗಿತ್ತು, ಇಕ್ಕಟ್ಟಾಗಿತ್ತು. (ಈಚಿಗೆ ಗುಡಿಯನ್ನು ವಿಶಾಲವಾಗಿ ಮಾಡಿದ್ದಾರೆ) ಹೊಳಲಿನ ಅನಂತಶಯನನೇ 'ಬಿಲಾಂತಃ ಸ್ಥಿತ ರಂಗನಾಥ'ಎಂದು ನನ್ನ ಅನಿಸಿಕೆ.

ಗದಾಧರಪುರ (ಪು. 54) ಅಂದರೆ ಅಗ್ರಹಾರ ಅಲ್ಲದೆ ಗದಗ ಎಂದೂ, ಕಪೋತಗಿರಿಗೆ ಕಪ್ಪಗುಡ್ಡೆಯ ಬದಲು ಕಪ್ಪತಗುಡ್ಡ ಎಂದಾಗಬೇಕು ಎಂದು ನನ್ನ ಅಭಿಪ್ರಾಯ.

ಉತ್ತರಾದಿ ಮಠಾಧೀಶರಿಂದ ಮಹಾದೇವಪ್ಪಯ್ಯ ಅವರಿಗೆ 'ಮಹಾಪುರುಷ' ಸಂಸ್ಥಾನ ರಂಗಾಪುರ'ಎಂಬ ಬಿರುದು ದೊರೆತಿದೆ. ಬಿಷ್ಟಪ್ಪಯ್ಯ ಅವರ ಮಹತ್ಕಾರ್ಯ ಗಳಿಗಾಗಿ ಅವರಿಗೆ ಮರಣೋತ್ತರವಾಗಿ ಸಂದ ಸನ್ಮಾನ ಇದಾಗಿದೆ.

ಕವಿಯು ಉತ್ಸವವನ್ನು ಮಹಾದೇವೋತ್ಸವೀಯಾಂ ಕಥಾಮ್ ಎಂದೇ ಕರೆದಿದ್ದಾನೆ. 'ಮಹಾದೇವ -ಮಾಧವ-ಉತ್ಸವ', ಜನರೆಲ್ಲ ಮಾಡುತ್ತಿದ್ದ 'ಮಹಾದೇವ'ನಾಮೋಚ್ಚಾರಣ ಪು. 104. 'ಮಹಾದೇವ ಕಾಮಧ್ವನಿ', ಹೀಗೆ ಗ್ರಂಥದ ಉದ್ದಕ್ಕೂ 'ಮಹಾದೇವ' ಮತ್ತು 'ಮಹಾಪುರುಷ'(ವಿಶೇಷವಾಗಿ ಕಾಡಿನಲ್ಲಿ ಕವಿಯನ್ನು ರಕ್ಷಿಸಿದ ಪಂಪೇಶನಿಗೆ) ಪದಗಳನ್ನು ಪದೇ ಪದೇ ಬಳಸುವ ಮೂಲಕ ಕವಿ ತನ್ನ ಬಗ್ಗೆ ಸುಳಿವು ನೀಡಿದ್ದಾನೆ.

ಕವಿಯಾದ ಯಜಮಾನನಿಗೆ ಪು. 74, ಈ ಕವಿ ಪು. 154

ಅಯ್ಯಾ ದ್ವಿಜ ಶ್ರೇಷ್ಠನೇ, ಕವಿಯೇ ಪು. 86

ಶಿವಭಕ್ತರಲ್ಲಿ ಶ್ರೇಷ್ಠನೇ (ಕವಿಯೇ)ವಿದ್ವಾಂಸನೇ, ಪು. 111

ದ್ವಿಜರಾಜ ಪು. 140 -ಚಂದ್ರ -ವಿಪ್ರಶ್ರೇಷ್ಠ ಪು. 87

ಅತಿ ಬುದ್ಧಿಶಾಲಿಯಾದ ಈ ಬ್ರಾಹ್ಮಣ ಪು.102

ಆ ಸತಿಯ ಪತಿಯಾದ ವಿದ್ವಾಂಸ ಮುಂತಾದ ವಿಪ್ರರು ಪಂಪಾವತಿ ಸಂತರ್ಪಣದ ವಿಧಾನವನ್ನು ಸಂಕಲ್ಪಿಸಿದ್ದರೇನೋ ಸರಿ ಪು. 178

ಜನಸ್ತೋಮ ಶ್ರೀ ವಿಷ್ಟಪೇಶ ಗುರು ಶಿಷ್ಯನ ಅನುಮತಿಯಿಂದ ಮಹಾಗೋಪುರದ ಒಳಭಾಗ ಹತ್ತಿತು -ಪು. 76

ಈ ಎಲ್ಲ ಉಲ್ಲೇಖಗಳಲ್ಲಿ ಸಮಾರಂಭದ ಯಜಮಾನ ಸ್ವತಃ ಕವಿ ಎಂದೂ, ಮತ್ತು ಆತ ಶ್ರೀಗುರು ಬಿಷ್ಟಪ್ಪಯ್ಯರ ಶಿಷ್ಯ ಎಂದೂ ತಿಳಿಯುತ್ತದೆ.

ವಿಷ್ಟಪೇಶ ಪ್ರಶಿಷ್ಯ, ವಿಪ್ರಸದ್ ಬ್ರಹ್ಮಚಾರಿಯೊಬ್ಬನು.. ಪು. 128.

ಮಹಾ ದೇವಪ್ಪಯ್ಯ ಹದಿನಾರು ವರ್ಷದವರಿದ್ದಾಗ ಕಲಶ ಸಮಾರೋಹ ನಡೆಸಿದ್ದು. ಅವರು ತಾಯಿಯ ಗರ್ಭದಲ್ಲಿರುವಾಗಲೇ ಅವರ ತಂದೆ ಶಿವಪ್ಪಯ್ಯ ಅಕಾಲ ಮರಣಕ್ಕೆ ತುತ್ತಾಗಿದ್ದಾರೆ. ಹೀಗಾಗಿ ಮಹಾದೇವಪ್ಪಯ್ಯ ದೊಡ್ಡವರಾಗುವವರೆಗೂ ಅವರ ಆಪ್ತರು ಶ್ರೀ ಬಿಷ್ಟೇಶ ಪ್ರವರ್ತಿತ ರಂಗಾಪುರ ಮಠದ ಪೀಠದಲ್ಲಿ ಕುಳಿತಿರಬಹುದು. ಒಂದು ಸಾರಿ ಬಿಷ್ಟೇಶ್ವರ 'ಶಿಷ್ಯ'ಎಂದೂ ಮತ್ತೊಮ್ಮೆ 'ಪ್ರಶಿಷ್ಟ' ಎಂದೂ ಉಲ್ಲೇಖವಾಗಿದೆ.

ಮುನ್ನುಡಿಯಲ್ಲಿ 'ಐಕ್ಯವನ್ನು ಮತ್ತು ಸಾವಯವ ಸಂಬಂಧವನ್ನು ಹುಡುಕುವುದೇ ಸರಿಯಲ್ಲ' ಎಂದು ಹೇಳಿದ್ದಕ್ಕೆ ಇದೊಂದು ಉತ್ತಮ ಉದಾಹರಣೆ.

ಕೈಲಾಸ ಪರ್ವತದಲ್ಲಿ ವಿಲಾಸ ಮಾಡುವ ಈಶ್ವರನ ತೇಜಃಪುಂಜದ ಸಾಕ್ಷಾತ್ಕಾರ ಉಳ್ಳವನು ನಾನು. -ಪು. 183

ತನ್ನ ತೇಜಸ್ಸಿಗೆ ಅಭಿಮುಖಾಗಿ ನಿಂತಿದ್ದ -ಪ. 236

ಅಂದಿನ ಸಂಕಷ್ಟಮಯ ದಿನಗಳಲ್ಲಿ ಹಲವಾರು 'ಅಸಾಮಾನ್ಯ' ಮಹತ್ಕಾರ್ಯಗಳನ್ನು ಮಾಡಿದ್ದ ಬಿಷ್ಟಪ್ಪಯ್ಯ, ಮಹಾದೇವಪ್ಪಯ್ಯ ಇಬ್ಬರೂ 'ಸಾಕ್ಷಾತ್ ವಿರೂಪಾಕ್ಷನ ಅವತಾರ ಪುರುಷರೇ' ಎಂದು ಪರಿಗಣಿಸಲ್ಪಟ್ಟಿದ್ದರು. ತತ್ಕಾಲೀನ ಶ್ರೀಮತ್ ಶಂಕರಾ ಚಾರ್ಯರು ಮಹಾದೇವಪ್ಪಯ್ಯ ಅವರನ್ನು ಕುರಿತು ರಚಿಸಿದ ಶ್ಲೋಕದ ಒಂದು ಚರಣ ಇಂತಿದೆ.

ವದಂತ್ವನ್ಯೇ ಲೋಕಾ ಜಗತೀ ಬಹುಧಾ ಮೂಢಮತಯೋ |

ವಿರೂಪಾಕ್ಷಃ ಸಾಕ್ಷಾದಿತಿ ಮನಸಿಮೇ ನಿಶ್ಚಿತಮಿದಂ ||

ಮತ್ತು ವಿವಿಧ ಸಂಸ್ಥಾನಿಕರು ನೀಡಿದ ಸನ್ಮಾನ ಪತ್ರಗಳೂ ಇವರಿಬ್ಬರನ್ನೂ ಸಾಕ್ಷಾತ್ ಶಿವಾವತಾರಿಗಳೆಂದೇ ಸಂಬೋಧಿಸಿವೆ.

ಕವಿಯು ನಾನಾ ಶಾಸ್ತ್ರಜ್ಞನೆಂದೇ ತೋರುತ್ತದೆ - ಪು. 10

ಆ ಬಳಿಕ ನಾಡೀ ಪರೀಕ್ಷಣಾ ವಿಚಕ್ಷಣನಾದ -ಪು. 286

ರಸಶಾಸ್ತ್ರ, ಆಯುರ್ವೇದ, ಖಗೋಳಶಾಸ್ತ್ರ, ಸಂಸ್ಕೃತ, ಜ್ಯೋತಿಷ, ವಾಸ್ತುಶಿಲ್ಪ, ಯೋಗ, ಆಧ್ಯಾತ್ಮ ಮುಂತಾದ ಎಲ್ಲ ವಿದ್ಯೆಗಳಲ್ಲಿ ಅತ್ಯುನ್ನತವಾದ ಪಾಂಡಿತ್ಯ ಪಡೆದಿದ್ದ ಬಿಷ್ಟಪ್ಪಯ್ಯ ಅವರ ಮೊಮ್ಮಗ ಮಹಾದೇವಪ್ಪಯ್ಯ ಅವರೂ ಈ ಎಲ್ಲ ಶಾಸ್ತ್ರಗಳನ್ನು ತಿಳಿದಿರುವುದು ಸಹಜವಾಗಿಯೇ ಇದೆ.

ಸಂತಾನಾಪೇಕ್ಷೆಯಿಂದ ಸಮಾಗಮ ನಡೆಸಿದ ರಸಿಕ ದಂಪತಿಗಳ ಉಲ್ಲೇಖವಿದೆ.

ಮಹಾದೇವಪ್ಪಯ್ಯ ಅವರಿಗೆ ಬಹುಕಾಲ ಸಂತಾನವಾಗಿರಲಿಲ್ಲ ಎಂಬ ಮಾಹಿತಿ ಲಭ್ಯವಿದೆ. [10]

ಹೀಗೆ ಕವಿ, ತಾನು ಕಂಡ ಅನುಭವಿಸಿದ ಹಲವಾರು ವಾಸ್ತವ ಘಟನೆಗಳನ್ನು ಈ ಗ್ರಂಥದಲ್ಲಿ ಸೇರಿಸಿದ್ದಾನೆ.

ವಿದ್ಯಾನಗರದ ನರಪತಿರಾಜ

ಕ್ರಿ. ಶ. 1658 ರಲ್ಲಿ ಕೊನೆಯ ಶ್ರೀರಂಗರಾಯರು ಕೆಳದಿ ದೊರೆಯ ಆಶ್ರಯ ಪಡೆಯುವುದರೊಂದಿಗೆ ಅನಾಥವಾದ ಹಂಪಿಯ ಹೊಣೆಯನ್ನು, ರಕ್ಷಣೆಯ ಹೊಣೆಯನ್ನು, ಅದಾಗಲೇ ಪ್ರಭಾವಶಾಲೀ ಸಾಮಾಜಿಕ, ಧಾರ್ಮಿಕ ಮುಖಂಡರಾಗಿ ಬೆಳೆದಿದ್ದ ಶ್ರೀ ಗುರು ಬಿಷ್ಟಪ್ಪಯ್ಯ ಅವರು ಹೊತ್ತರು. ರಕ್ಷಣಾತ್ಮಕ ಗೋಡೆಯಿಂದ ಕೂಡಿದ ಭವ್ಯಗೋಪುರ, ಪಂಪಾವತಿಗೆ ಚಿನ್ನದ [11] ಮುಖವಾಡ, ವಿದ್ಯಾರಣ್ಯ ಶ್ರೀಗಳಿಗೆ ಕಿರೀಟಗಳ ಕೊಡುಗೆ ಮುಂತಾದ ಕಾರ್ಯಗಳ ಮೂಲಕ ರಾಜರು ಮಾಡಬೇಕಾಗಿದ್ದ ಕಾರ್ಯಗಳನ್ನು ತಾವು ಮಾಡಿದ್ದರು.

ಮಹಾಗೋಪುರಕ್ಕೆ ಕಲಶ ಇಡಿಸುವುದು, ಕಾಲ ಕಾಲಕ್ಕೆ ವಿರೂಪಾಕ್ಷೋತ್ಸವಗಳನ್ನು ನಡೆಸುವ ಮೂಲಕ ಬಿಷ್ಟಪ್ಪಯ್ಯ ಅವರ ಕಾರ್ಯಗಳನ್ನು ಅವರ ಮೊಮ್ಮಗ ಮಹಾದೇವಪ್ಪಯ್ಯ ಅವರು ಮುಂದುವರೆಸಿಕೊಂಡು ಬಂದರು. ತಾವು ನಡೆಸಿದ ಉತ್ಸವಗಳನ್ನೇ ನೆಪವಾಗಿರಿಸಿಕೊಂಡು ರಚಿಸಿದ ಕೃತಿ ಇದು. ಆ ಉತ್ಸವಗಳಲ್ಲಿ ಕ್ರಿ. ಶ. 1717 ರಲ್ಲಿ ನಡೆಸಿದ ಕಲಶಸಮಾರೋಹ ಮತ್ತು ಸುಮಾರು ಕ್ರಿ. ಶ. 1730ರಿಂದ 1735 ರಲ್ಲಿ ನಡೆಸಿದ ಸಂತಾನ ಫಲಾಪೇಕ್ಷೆಯ ಉತ್ಸವ ಮುಖ್ಯವಾದವು ಎಂದು ನಾವು ಗುರುತಿಸಬಹುದು.

ಆ ಸಮಯದಲ್ಲಂತೂ ವಿಜಯನಗರದ ರಾಜರು ಹಂಪಿಯಲ್ಲಿ ಇರಲಿಲ್ಲವಷ್ಟೆ? ಮಹಾಪುರುಷ ಕುಟುಂಬದ ಇತಿಹಾಸದ ಸಂಪೂರ್ಣ ಅಧ್ಯಯನದ ಹಿನ್ನೆಲೆಯೊಡನೆ 'ವಿದ್ಯಾನಗರದ ನರಪತಿರಾಜ'ನ ಬಗ್ಗೆ ಕವಿಯು ಮಾಡಿರುವ ವರ್ಣನೆಗಳನ್ನು ಸೂಕ್ಷ್ಮವಾಗಿ ಗಮನಿಸಿದಲ್ಲಿ ಕವಿಯೇ ವಿದ್ಯಾನಗರೇಶ ಅಂದರೆ ಮಹಾದೇವಪ್ಪಯ್ಯ ಅವರೇ ಎಂದು ಸ್ಪಷ್ಟವಾಗಿ ತಿಳಿದುಬರುತ್ತದೆ.

ರಾಜ ಶುದ್ಧ ವಿಭೂತಿ ಧರಿಸಿದ ಶ್ರೌತ ಸ್ಮಾರ್ತ -ಪು. 86, 81 ಶ್ಲೋಕ.

ಈತನೇ ರಾಜಪದಕ್ಕೆ ಪಾತ್ರನು ಪು. 88. ದ್ವಿಜರಾಜ ವಿಪ್ರಶ್ರೇಷ್ಠ ಮುಂ-

ಈ 'ಚಂದ್ರ' (ರಾಜ)ಮೈಸೂರಿಗೆ ಒಡೆತನವನ್ನಾಗಲಿ ಚಂದ್ರಶೇಖರ ಹತ್ತು ವಿಕೆಯನ್ನಾಗಲೀ ಹೊಂದಲೇ ಇಲ್ಲ..... ಹೇಗೆ- 86 ಶ್ಲೋಕ. ಪು.88

ಈ ಒಂದು ವಿಶಿಷ್ಟ ಪ್ರಶ್ನೆಯನ್ನು ಹುಟ್ಟಿಸುವ ಮೂಲಕ ಕವಿ, 'ವಿದ್ಯಾನಗರದ ನರಪತಿ ರಾಜನು (ಅದಾಗಲೇ ಪ್ರವರ್ಧಮಾನಕ್ಕೆ ಬಂದಿದ್ದ) ಮೈಸೂರು ರಾಜನೂ ಅಲ್ಲ, ಮತ್ತು ಆಗ ಚಂದ್ರಗಿರಿಯಲ್ಲಿದ್ದ ಪತನಗೊಂಡ ವಿಜಯನಗರ ಸಾಮ್ರಾಜ್ಯದ ಅರಸನೂ ಅಲ್ಲ ಎಂದು ಸ್ಪಷ್ಟಪಡಿಸಿದ್ದಾನೆ.

ಈತನೇ ರಾಜನಾಗುತ್ತಾನೆ ಈತನೇ ರಾಜಪದಕ್ಕೆ ಪಾತ್ರನು,ಈ ವಾಕ್ಯಗಳು ಆತ ನಿರ್ದಿಷ್ಟವಾಗಿ ರಾಜನಲ್ಲದಿದ್ದರೂ ಮಾಡಬೇಕಾದ ಕೆಲಸಗಳನ್ನು ಮಾಡಿದ್ದಾರಾದ್ದರಿಂದ ಆ ಸಂದರ್ಭದಲ್ಲಿ ರಾಜ ಮರ್ಯಾದೆ ಆತನಿಗೇ ಇದೆ ಎಂದು ಸೂಚನೆಯನ್ನು ನೀಡುತ್ತವೆ.

231 ನೇ ಶ್ಲೋಕ ಪು. 138ರಲ್ಲಿ ಮತ್ತೆ ಚಂದ್ರ (ರಾಜ) ವರ್ಣನೆ ಇದೆ.

ಅತ್ರಿಯ ನೇತ್ರದಿಂದ ಹುಟ್ಟಿದವನು.

ಅತ್ರಿ ನೇತ್ರದಿಂದ ಜನಿಸಿದುದರಿಂದ ಪು. 141

ಸೋಮೋಸ್ಮಾಕಾ ಬ್ರಾಹ್ಮಣಾನಾಂ ರಾಜಾ -ಯಜುರ್ವೇದ ಸಂಹಿತೆಯ ಉಲ್ಲೇಖವಿದೆ. ಪು. 139

ಈತನೇ ರಾಜಾಧಿರಾಜ -ವಿದ್ಯಾನಗರೇಶ ನರಪತಿ -ಮಹಾರಾಜನ -ಪು. 139

ಮಹಾದೇವಪ್ಪಯ್ಯ ಅವರದ್ದು ಅತ್ರಿಗೋತ್ರ ಮತ್ತು ಯಜುರ್ವೇದ ಶಾಖೆ. ಕವಿ ತನ್ನ ಬಗ್ಗೆ ಇಲ್ಲಿ ಸುಳಿವು ಕೊಟ್ಟಿದ್ದಾನೆ.

ವಿದ್ಯಾನಗರಾಧೀಶನ ದರ್ಶನವಿರುವಲ್ಲೇ... ಇಲ್ಲವೋ ?ತಥಾಸ್ತು ಎಂದು ಹೇಳಿದನು. ಪು. 176 - 355ಶ್ಲೋ.

ಇಲ್ಲಿ ಕವಿ, ಸತಿಯ ಪತಿಯಾದ ವಿದ್ವಾಂಸನೇ ವಿದ್ಯಾನಗರಾಧೀಶ ಎಂದು ಸೂಚ್ಯ ವಾಗಿ ಹೇಳಿದ್ದಾನೆ.

ವಿದ್ಯಾನಗರೇಶ್ವರ ನರಪತಿ ಪರಿಕಲ್ಪಿತ ಮಹೋತ್ಸವ -ಪು. 58 , ಶ್ಲೋ - 287 ಮಾಧವ, ನವರಾತ್ರೋತ್ಸವ ಯಜ್ಞ ಪ್ರವರ್ತಕ -ದ್ವಿಜನು ಮಾಡುತ್ತಿದ್ದುದನ್ನು ಕಂಡು, ಆ ಸತಿಯ ಪತಿ.... ಶಂಕರ ಪ್ರೀತಿಗೆಂದು ಆಚಿರಿಸಿದ.. ನಮ್ಮ ಪ್ರಿಯ ಭಕ್ತರಲ್ಲಿ ಅಗ್ರ ಗಣ್ಯನಾದವನು ವಿದ್ಯಾನಗರೀಶ -ನರಪತಿ ; ನಿತ್ಯೋತ್ಸವಾದಿ ವಾರ್ಷಿಕೋತ್ಸವಗಳನ್ನು ಕಲ್ಪಿಸಿದ್ದಾನೆ-ಮ. 237 - 543 ಶ್ಲೋ. ಸಂತಾನಾಪೇಕ್ಷೆಯಿಂದ ಸತಿಯೊಡನೆ ಸಮಾಗಮ ನಡೆಸಿದ ‘ವಿದ್ವಾಂಸ’ನು ಪಂಪಾಪತಿಯ ಸುಪ್ರೀತಿಗಾಗಿ ಇಂದು ಅನೇಕ ವಿಪ್ರರಿಗೆ ಸಮಾರಾಧನವಾಗಬೇಕು ಎಂದು ತೀರ್ಮಾನಿಸಿದನು.. ವಿದ್ಯಾನಗರಾಧೀಶನ ದರ್ಶನವಿರುವಲ್ಲೇ ... ಪು. 176...

ಈ ಎಲ್ಲ ಉಲ್ಲೇಖಗಳಿಂದ ಉತ್ಸವಗಳನ್ನು ನಡೆಸಿದ್ದು ಕವಿಯೇ ಮತ್ತು ಆತನೇ ವಿದ್ಯಾನಗರೇಶ ಎಂದು ತಿಳಿದು ಬರುತ್ತದೆ.

ಒಟ್ಟಿನಲ್ಲಿ ಈ ಕೃತಿಯಲ್ಲಿ ಉಲ್ಲೇಖವಾದ ‘ವಿಷ್ಣುಪೇಶರ ಪ್ರಶಿಷ್ಯ’ ‘ಈ ಕವಿ’ ‘ಸತಿಯ ಪತಿಯಾದ ವಿದ್ವಾಂಸ’ ‘ಅಹೋಬಲ’, ‘ಬುದ್ಧಿಶಾಲಿ ಬ್ರಾಹ್ಮಣ’, ‘ವಿಪ್ರಶ್ರೇಷ್ಠ’, ‘ಕವಿವರ’, ‘ಬ್ರಾಹ್ಮಣರ ರಾಜ’, ‘ವಿದ್ಯಾನಗರೀಶ’, ‘ಸಂತಾನಪೇಕ್ಷಿ ಪತಿ’, ‘ನಾಡೀ ವೈದ್ಯ’ ಎಲ್ಲವೂ ಕೃತಿಯ ಕರ್ತೃವೇ ಅಂದರೆ ಮಹಾದೇವಪ್ಪಯ್ಯ ಮಹಾಪುರುಷ ಅವರೇ ಎಂದು ಗೊತ್ತಾಗುತ್ತದೆ.

ಇನ್ನೂ ಹಲವು ಉಲ್ಲೇಖಗಳು ಕವಿಯ ಬಗ್ಗೆ ಸುಳಿವು ಕೊಡುತ್ತಾವಾದರೂ ಅವನ್ನೆಲ್ಲ ವಿವರಿಸಬೇಕೆಂದರೆ ಅವುಗಳ ಹಿನ್ನೆಲೆಯಲ್ಲಿ ಹೇಳಬೇಕಾಗುತ್ತದೆ. ಪ್ರಬಂಧ ಬಹಳ ದೊಡ್ಡದಾಗುತ್ತದೆಯಾದ್ದರಿಂದ ಅವುಗಳನ್ನು ಕೈ ಬಿಟ್ಟಿದ್ದೇನೆ.

ಪ್ರಬಂಧ ಬರೆಯುವ ಮೊದಲು ಡಾ ಎಮ್. ಎಮ್. ಕಲಬುರ್ಗಿ ಮತ್ತು ಪ್ರೊ. ಕೆ. ಎಸ್. ಕಣ್ಣನ್ ಅವರೊಡನೆ ಚರ್ಚಿಸಿದೆ. ಗ್ರಂಥದ ನಿಜಕರ್ತೃ ಮಹಾದೇವಪ್ಪಯ್ಯ ಅವರೇ ಎಂದು ಖಚಿತವಾದಾಗ ಅವರಿಬ್ಬರೂ ಅತೀವ ಸಂತಸ ಪಟ್ಟರು. ಇಂತಹ ಸುಂದರ ಕಾವ್ಯ ಕೊಟ್ಟ ಕವಿಗೆ ನಾವೆಲ್ಲ ಕೃತಜ್ಞರಾಗಿರಬೇಕು ಎಂದು ಪ್ರೊ. ಕಣ್ಣನ್ ಅವರು ಅಭಿಪ್ರಾಯಪಟ್ಟರು.

ದೊರೆತಷ್ಟೇ ಕಾಂಡಗಳನ್ನು ಜೋಪಾನವಾಗಿ ಕಾದಿರಿಸಿದ ಎಲ್ಲ ವಿದ್ವಾಂಸರಿಗೂ, ಸುಂದರವಾಗಿ ಭಾಷಾಂತರಿಸಿ ವಿಶ್ಲೇಷಿಸಿದ ಪ್ರೊ. ಕೆ. ಎಸ್. ಕಣ್ಣನ್ ಅವರಿಗೂ ಮತ್ತು ಪ್ರಕಟಿಸಿದ ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪ್ರಸಾರಾಂಗಕ್ಕೂ ಕವಿ, ಮಹಾದೇವಪ್ಪಯ್ಯ ಮಹಾಪುರುಷ ಅವರ ವಂಶಸ್ಥಳಾದ ನಾನೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ವಿವರಣೆ

1. ಹಸ್ತಪ್ರತಿ, ದಿ. ಆಪಟೆ ಅನಂತರಾಯರು ಬರೆದಿರುವ 'ಹಂಪೆಯ ಶ್ರೀ ವಿರೂಪಾಕ್ಷ ದೇವಾಲದ ಗೋಪುರ ನಿರ್ಮಾಪಕ ಶ್ರೀ ಬಿಷ್ಟಪ್ಪಯ್ಯನವರು'. ಪುಸ್ತಕದಲ್ಲಿ ತತ್ಕಾಲೀನ ಶಂಕರಾಚಾರ್ಯರು, ಕಾಶೀ ಲಕ್ಷ್ಮಣಶಾಸ್ತ್ರಿ ಮುಂತಾದವರು ಮಹಾ ದೇವಪ್ಪಯ್ಯ ಅವರನ್ನು ಕುರಿತು ಬರೆದು ಶ್ಲೋಕಗಳು.

ಮಾಸಿಕ

2. ಅಕ್ಟೋಬರ್ - 07 ರ 'ಕಸ್ತೂರಿ'ಯ ಪು. 91

3- ಆ ಸನ್ಮಾನ ಪತ್ರಗಳು ಅವರ ವಂಶಸ್ಥರಲ್ಲಿವೆ. ಆ ಎಲ್ಲ ಹಳ್ಳಿಗಳ ಕೆಲಭಾಗ ಮಹಾಪುರುಷ ಕುಟುಂಬದ ಒಡೆತನದಲ್ಲಿವೆ.

4. ಆ 'ತಾಮ್ರ ಗುಂಡಿ' ಹಳ್ಳಿಯ ಹಕ್ಕಿಗಾಗಿ ಸ್ವಂತ ಮತ್ತು ದತ್ತಕ ಮನೆತನಕ್ಕೆ ನಂತರ ವ್ಯಾಜ್ಯ ಉಂಟಾಗಿದ್ದು ಅದಕ್ಕೆ ಸಂಬಂಧಿಸಿದ ಕಾಗದ ಪತ್ರ ಲಭ್ಯ ಇವೆ.

5. ಕುಟುಂಬದ ಹಿರಿಯರಿಂದ ದೊರೆತ ಮೌಖಿಕ ಮಾಹಿತಿಯ ಮೇರೆಗೆ ಕೂಡ್ಲಿ ಮಠದಲ್ಲಿ ಹುಡುಕಿದಾಗ ಶಿಥಿಲವಾದ ಬೆಳ್ಳಿಯ ಸಿಂಹಾಸನ ಸಿಕ್ಕಿದೆ. ನಾನು ಮಿಥಿಕ್ ಸೊಸೈಟಿಯಲ್ಲಿ ನೀಡಿದ ಪ್ರಾತ್ಯಕ್ಷಿತೆಯಲ್ಲಿ ಪ್ರದರ್ಶಿಸಿದ್ದೇನೆ.

6. ಆಪಟೆ ಅನಂತರಾಯರ ಅದೇ ಪುಸ್ತಕ, ಮಹಾಪುರುಷ ಕುಟುಂಬದ ಹಿರಿಯರು, ವಿಪ್ರರು ಮತ್ತು ಹಂಪಿಯ ವಿದ್ಯಾರಣ್ಯ ಮಠದ ಶ್ರೀಗಳು ಎಲ್ಲ ಪುರೋಹಿತರು ನೀಡಿದ ಮಾಹಿತಿ.

7 - ಈ ಅಷ್ಟಕದ ಪ್ರತಿಯೊಂದು ಚರಣವೂ 'ಶಿವಪ್ಪಾರ್ಯ ಬಾಲಂ ಭಜೆ ನಿತ್ಯ ಕಾಲಂ' ಎಂದು ಮುಗಿಯುತ್ತದೆ. ವಿಶಾಲದೃಷ್ಟಿಯಿಂದ ನೋಡಿದರೆ ಗಣಪತಿಯನ್ನು ವೈಯಕ್ತಿಕವಾಗಿ ನೋಡಿದರೆ ಮಹಾದೇವಪ್ಪಯ್ಯ ಅವರನ್ನೂ ಕುರಿತು ಬರೆದಂತಿದೆ ಈ ಶ್ಲೋಕ.

8. ಅಲ್ಲಿರುವ ಗುಡಿ ಬಿಟ್ಟೇಶ್ವರ ಸ್ವಾಮಿಗಳ ಗುಡಿ ಎಂದೇ ಕರೆಯಲ್ಪಡುತ್ತದೆ. ಆ ಗುಡಿಯ ಹಿಂದೆ ಅವರು ಬಾಳಿದ ಮಂಟಪ ಇದೆ. ಅದರ ತುಸುಭಾಗ ಮಹಾಪುರುಷ ಕುಟುಂಬದ 8a - ಹಸ್ತಪ್ರತಿ, ಮೌಖಿಕ ಪರಂಪರೆ, ಪ್ರತ್ಯಕ್ಷನಾಗಿ ಕಂಡದ್ದು. ಪುರೋಹಿತರಾದ, ವಿಷ್ಟಪ್ಪ ಕೃಷ್ಣಪ್ಪ ಜೋಷಿ ಎಂಬುವರ ಹೆಸರಿನಲ್ಲಿದೆ.

9. ಮಗು ಗರ್ಭದಲ್ಲಿರುವಾಗಲೇ ಪತಿಯನ್ನು ಕಳೆದುಕೊಂಡ ಮಹಾದೇವಪ್ಪಯ್ಯ ಅವರ ತಾಯಿ ತ್ರಿವೇಣ್ಯಂಬಾ ಅವರು ಧೃತಿಗೆಡದೇ ಮಹಾಪುರುಷ ಸಂಸ್ಥಾನವನ್ನು ವ್ಯವಸ್ಥಿತವಾಗಿ ಮುನ್ನಡೆಸಿಕೊಂಡು ಬಂದರು, ಮತ್ತು ಕಲಶ ಸಮಾರಾಂಭಕ್ಕೆ ‘ವ್ಯವಸ್ಥೆ ಮಾಡಿಸಿದರು’ ಎಂದು ಹೇಳುತ್ತಾರೆ. ಅದುವೆ ‘ಮಹಿಮಾ ವರ್ಣನೆ’ ಆಗಿರಬಹುದು’.

10. ಮೌಖಿಕ ಪರಂಪರೆ, ಕಾಗದ ಪತ್ರ ಮತ್ತು ದತ್ತಕ ಕವಲು ಈಚೆಗೆ ಸಂತಾನರಹಿತ ರಾದಾಗ ತಮ್ಮಲ್ಲಿದ್ದ ಬಿಷ್ಟೇಶ ಕೃತ ವಿಗ್ರಹಗಳನ್ನು ಮೂಲ ವಿಠ್ಠಲಾಪುರ ಸಂಸ್ಥಾನಕ್ಕೆ ಮರಳಿಸಿದರು.

11. ಈಚೆಗೆ ಧರ್ಮಸ್ಥಳದಲ್ಲಿ ನಡೆದ ಕ. ಇ. ಅಕಾ ಡೆಮಿ ವಿಚಾರಸಂಕಿರಣದಲ್ಲಿ ನಾನು ಮಂಡಿಸಿದ ‘ಮುಖವಾಡ ಮತ್ತು ಕಿರೀಟಗಳ ಕರ್ತೃ ಬಿಷ್ಟಪ್ಪಯ್ಯ ಮಹಾಪುರುಷರು’ ಎಂಬ ಪ್ರಬಂಧ ವಿದ್ವಾಂಸರಿಂದ ಮನ್ನಣೆ ಪಡೆದಿದೆ. ಜಾರ್ಜ್ ಮಿಶೆಲ್ ಮತ್ತು ಜಾನ್ ಫ್ರಿಡ್ಜ್ಞ್ ಮುಂತಾದವರೂ ಅದಕ್ಕೆ ಸಮ್ಮತಿ ಸೂಚಿಸಿದ್ದಾರೆ.

೩೪. ವಿಜಯನಗರದ ಕಾಲದಿಂದ ನಡೆದು ಬಂದಿರುವ ಶ್ರೀ ಅಂಕಲಮ್ಮ ದೇವಿಯ ವಿಚಿತ್ರ ಉತ್ಸವ

ವೈ. ಹನುಮಂತರೆಡ್ಡಿ

ಹೊಸಪೇಟೆ ಬಳ್ಳಾರಿ ರಾಷ್ಟ್ರೀಯ ಹೆದ್ದಾರಿ 63 ರಲ್ಲಿ 12.00 ಕಿ. ಮಿ. ಗಳ ಅಂತರದಲ್ಲಿ ಪಾಪಿನಾಯಕನಹಳ್ಳಿ ಗ್ರಾಮವಿದ್ದು, ಐತಿಹಾಸಿಕ ಧಾರ್ಮಿಕ ಹಿನ್ನೆಲೆ ಉಳ್ಳದ್ದಾಗಿದೆ.

ಐತಿಹಾಸಿಕ ಹಿನ್ನೆಲೆ : ವಿಜಯನಗರದ ಅರಸ ಅಚ್ಚುತರಾಯನ ಕಾಲದಲ್ಲಿ ಅಂದರೆ ಶಾ. ಶ. ವರ್ಷ 1454 ನೆಯ ನಂದನ ಸಂ. ಶ್ರಾವಣ ಬ. 30 ಗುರುವಾಗ (ಅಂದರೆ ಕ್ರಿ. ಶ. 01. 08. 1532) ರಂದು ತಲಾರಿ ತಿಮ್ಮನಾಯಕನ ಮಕ್ಕಳು 'ನಿಡುಗುಲ' ಅಥವಾ 'ಅಪಿನಾಯಕನ ಪುರವನ್ನು'ಆರುಗೊಂಡ ಅಂಕಲಾದೇವಿಯ ಅಮೃತಪಡಿಗೆ ದಾನವಾಗಿ ನೀಡಿರುವ ಶಾಸನವು ಅಂಕಲಮ್ಮ ದೇವಿಯ ನುಡಿಯ ಒಂದು ಕಂಭದಲ್ಲಿತ್ತು. ಇದು ತೆಲುಗು ಭಾಷೆ ಮತ್ತು ಲಿಪಿಯಲ್ಲಿದ್ದು, ಈಗ್ಗೆ 2-3 ವರ್ಷಗಳ ಹಿಂದೆ, ಈ ಗುಡಿಯ ಜೀರ್ಣೋದ್ಧಾರ ಕಾಲದಲ್ಲಿ ಪೂರ ಅಳಿಸಿಬಿಟ್ಟಿದೆ. ಈ ಶಾಸನದಲ್ಲಿ ತಿಳಿಸಿರುವಂತೆ ಈ ಗ್ರಾಮಕ್ಕೆ ಮೊದಲು 'ನಿಡುಗುಲ'ವೆಂದು ಹೆಸರಿದ್ದು, ನಂತರ 'ಅಪಿನಾಯಕಪುರ'ವೆಂದೂ ಆ ನಂತರದಲ್ಲಿ 'ಪಾಪಿನಾಯಕನ ಹಳ್ಳಿ'ಎಂದು ಕರೆಯಲ್ಪಡುತ್ತಿದೆ. ಈ ಗ್ರಾಮದ ಉತ್ತರ ಭಾಗದಲ್ಲಿರುವ ಗುಡ್ಡದ ಮೇಲೆ ಗ್ರಾಮದ ಸಂರಕ್ಷಣಾ ಉದ್ದೇಶದಿಂದ ಹಿಂದಿನ ಕಾಲದಲ್ಲಿ ನಿರ್ಮಿಸಿದ ಕೋಟೆ, ಕೊತ್ತಲುಗಳ ಅವಶೇಷಗಳು ಈಗಲೂ ಕಂಡು ಬರುತ್ತಿವೆ.

ಧಾರ್ಮಿಕ ಹಿನ್ನೆಲೆ : ಈ ಗ್ರಾಮದ ದಕ್ಷಿಣಕ್ಕೆ ಸು. 1.5 ಕಿ. ಮೀ. ದೂರದಲ್ಲಿ ಅಂಕಲಮ್ಮದೇವಿ ದೇವಸ್ಥಾನವಿದೆ. ಇದು ಮೊದಲು ವಿಜಯನಗರ ಕಾಲದಲ್ಲಿ ಸ್ಥಳೀಯ ಕಣ ಶಿಲೆಯಿಂದ ನಿರ್ಮಿಸಲಾಗಿತ್ತು. ಆದರೆ ಈಗ್ಗೆ ಎರಡು ವರ್ಷಗಳ ಹಿಂದೆ ಅಲ್ಲಿಯ ಗಣಿ ಮಾಲೀಕರು ಇದನ್ನು ಕಲ್ಲು, ಮರಳು ಮತ್ತು ಸಿಮೆಂಟ್ ನಿಂದ ಪುನರ್ ನಿರ್ಮಿಸಿ ಗರ್ಭಗೃಹದ ಮೇಲೆ ಇಟ್ಟಿಗೆ ಸಿಮೆಂಟಿನ ನವೀನ ಮಾದರಿಯ ಗೋಪುರವನ್ನು ಮತ್ತು ಮೂರು ಅಂಕಣಗಳ ಸಭಾಮಂಟಪ, ಗರ್ಭಗೃಹವನ್ನು ನಯಗೊಳಿಸಿದ ಗ್ರಾನೈಟ್ ಶಿಲೆಯಿಂದ ಅಲಂಕೃತಗೊಳಿಸಿದ್ದು, ಅಲ್ಲಿನ ಕಂಭದ ಮೇಲಿದ್ದ ಮೇಲೆ ತಿಳಿಸಿದ ಶಾಸನವನ್ನು ಸ್ತಂಭ ವನ್ನು ನಯಗೊಳಿಸುವ ನೆಪದಲ್ಲಿ ಪೂರ್ಣ ಅಳಿಸಿಬಿಟ್ಟಿದ್ದಾರೆ. ಈ ದೇವಿಯ ಈ ಪ್ರದೇಶ ದಲ್ಲಿ ಪ್ರಭಾವಿತಳಾಗಿದ್ದು, ಆಕೆಯ ಹೆಸರನ್ನು ಇಲ್ಲಿಯ ಅನೇಕ ಸ್ತ್ರೀಯರಿಗೆ ಇಡಲಾಗಿದೆ. ಗರ್ಭಗೃಹದಲ್ಲಿ ಸುಮಾರು ಐದು ಅಡಿ ಎತ್ತರದ

ನಿಂತ ಭಂಗಿಯ ಉಬ್ಬು ಶಿಲ್ಪದ ಚತುರ್ ಭುಜದ ಶಿಲಾಮೂರ್ತಿಯು ಇದೆ. ಕೆಳಗಡೆ ಆಕೆಯ ವಾಹನ ಸಿಂಹದ ಶಿಲ್ಪವಿದೆ. ಉತ್ಸವದ ಸಮಯದಲ್ಲಿ ದೇವಿಗೆ ಪಿತಾಂಬರ ಉಡಿಸಿ, ಬೆಳ್ಳಿ ಮುಖವಾಡ ಇಟ್ಟು, ವಿವಿಧ ಪುಷ್ಪಗಳಿಂದ ಅಲಂಕರಿಸಿರುತ್ತಾರೆ.

ವಿಚಿತ್ರವಾದ ಧಾರ್ಮಿಕ ಉತ್ಸವ : ಪ್ರತಿ ವರ್ಷ ಮಾಘ ಶುದ್ಧ ಭಾರತದ ಹುಣ್ಣಿಮೆಯ ನಂತರ ಬರುವ ಮಂಗಳವಾರ ಅಥವಾ ಶುಕ್ರವಾರದ ದಿನ ಈ ದೇವಿಯ ಉತ್ಸವವು ತುಂಬಾ ವೈಚಿತ್ರ್ಯ ಪೂರ್ಣವಾಗಿ ಜರುಗುವುದು. ಈ ಉತ್ಸವದ ವಿಚಿತ್ರ ಆಚರಣೆಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

1) ಪಾಸೆ ಪಡುಗದ ಮಹಿಮೆ : ಆ ನಿಗದಿತ ದಿನದ ರಾತ್ರಿ 10.00 ಗಂಟೆಯಿಂದ ಈ ಉತ್ಸವ ಪ್ರಾರಂಭವಾಗುತ್ತದೆ. ಗ್ರಾಮದ ನಾಯಕ (ವಾಲ್ಮೀಕಿ) ಜನಾಂಗದವರು ಕುಂಬಾರರ ಮನೆಯಿಂದ ಒಂದು ಹೊಸ ಪಡುಗ (25 ಲೀ ಅಳತೆಯ ಒಂದು ದೊಡ್ಡ ಗಡಿಗೆ)ವನ್ನು ಕೊಂಡು, ಅದನ್ನು ಆರತಿ ಹಿಡಿದ 5 ಜನ ಸುಮಂಗಲಿರಯೊಂದಿಗೆ, ಅದೇ ಗ್ರಾಮದ ಶಾನುಭೋಗರು (ಬ್ರಾಹ್ಮಣ)ಮನೆಗೆ ತೆಗೆದುಕೊಂಡು ಹೋಗಿ ಇಡುತ್ತಾರೆ. ಅವರು ಆ ಗಡಿಗೆಯನ್ನು ಸ್ವಚ್ಛ ಮಾಡಿ, ವಿಭೂತಿ, ಕುಂಕುಮ, ಗಂಧ, ಮತ್ತು ಹೂಮಾಲೆ ಯಿಂದ ಅಲಂಕರಿಸಿ ಪೂಜಿಸುತ್ತಾರೆ. ಆ ರಾತ್ರಿ 10.00 ಗಂಟೆಯ ನಂತರ ಅದೇ ಊರಿನ ಮೇಟಿ ಮನೆತನದ (ವೀರಶೈವ ಲಿಂಗಾಯತ) ದವರಲ್ಲಿ ನಿಗದಿತವಾದ ಒಬ್ಬರು ಬಂದು ಆ ಪಡುಗದಲ್ಲಿ ಐದು ಶೇರು ಅಕ್ಕಿಯನ್ನು ಹಾಕಿ, ಅದನ್ನು ಡೊಳ್ಳು, ಮೇಳ, ಬಜಂತ್ರಿ ಯೊಂದಿಗೆ ಅಂಕಲಮ್ಮ ದೇವಿಯ ಗುಡಿಗೆ ತೆಗೆದುಕೊಂಡು ಹೋಗುತ್ತಾರೆ. ಗುಡಿಯ ಸುತ್ತಲು ಐದು ಬಾರಿ ಪ್ರದಕ್ಷಿಣೆ ಮಾಡಿ, ಆ ಪಡುಗವನ್ನು ಗುಡಿಯ ಮುಂದಿನ ಅಂಗಳ ದಲ್ಲಿ ಇಟ್ಟಿರುವ ಮೂರು ಕಲ್ಲುಗಳ ಒಲೆಯ ಮೇಲೆ ಇಡುತ್ತಾರೆ. ದೇವಿಯಿಂದ ಅಪ್ಪಣೆ ಪಡೆದು, ದೇವಿಯ ಬಲಭಾಗದ ಪುಷ್ಪ ಕೊಟ್ಟ ನಂತರ ಆ ಒಲೆ ಮತ್ತು ಅದರ ಮೇಲಿನ ಗಡುಗೆಗೆ ಮತ್ತೊಮ್ಮೆ ಪೂಜೆ ಮಾಡಿ, ಗಂಧದ ಚೆಕ್ಕೆಗಳಿಂದ ಒಲೆಯನ್ನು ಉರಿಸುವರು. ಸುಮಾರು ಅರ್ಧಗಂಟೆ ಉರಿಸಿದರೂ ಮೂರು ಕಲ್ಲುಗಳ ಮೇಲೆ ಇರಿಸಿದ ಬಿಳಿ ಬಟ್ಟೆಯ ಸಿಂಬೆಗಳು ಸುಟ್ಟಿರುವುದಿಲ್ಲ. ನಂತರ ಆ ದೇವಿಯ ಪೂಜಾರಿಯು, ಆ ಗಡಿಗೆಯಲ್ಲಿ ಬೇಯಿಸಿದ ಬಿಸಿ ಅನ್ನವನ್ನು ಬರಿಗೈಯಲ್ಲಿ ನಾಲ್ಕು ದಿಕ್ಕಿನ ಮತ್ತು ಮಧ್ಯದ ಭಾಗದಿಂದ ತೆಗೆದು ಒಂದು ತಟ್ಟೆಯಲ್ಲಿ ಇಡುತ್ತಾನೆ. ಅದನ್ನು ಪರಿಶೀಲಿಸಿದಾಗ ಯಾವ ಭಾಗದಲ್ಲಿ ಅನ್ನ ಚೆನ್ನಾಗಿ ಬೆಂದಿರುವುದೋ ಆ ದಿಕ್ಕಿನಲ್ಲಿ ಮಳೆ ಬೆಳೆ ಚೆನ್ನಾಗಿ ಆಗುವುದೆಂದು, ಅಕಸ್ಮಾತ್ ಯಾವ ದಿಕ್ಕಿನಲ್ಲಿ ಅನ್ನ ಸರಿಯಾಗಿ ಬೆಂದಿರುವುದಿಲ್ಲವೊ ಆ ಭಾಗದಲ್ಲಿ ಮಳೆ ಬೆಳೆ ಸರಿಯಾಗಿ ಆಗುವುದಿಲ್ಲವೆಂದು ಅರ್ಥೈಸುವರು.

2) ಬಾಲಕನ ಬೆತ್ತಲೆ ಸೇವೆ : ಈ ದೇವಿಯ ಪೂಜಾರಿಗಳ ಮನೆಯ 6-11 ವರ್ಷಗಳ ಒಳಗಿನ ವಯಸ್ಸಿನ ಒಬ್ಬ ಬಾಲಕನನ್ನು ಸ್ನಾನ ಮಾಡಿಸಿ, ಸೊಂಟಕ್ಕೆ ಒಂದು ತುಂಡು

ಬಿಳಿ ಬಟ್ಟೆ ಧರಿಸಿ, ವಿಭೂತಿ, ಕುಂಕುಮ, ಅರಿಶಿಣಗಳನ್ನು ಲೇಪಿಸಿ, ಬೇವಿನ ಸೊಪ್ಪಿನ ಹಾರ ಹಾಕಿ, ಕಬ್ಬಿನ ತುಂಡುಗಳಿಂದ ಕಟ್ಟಿ ಮಾಡಿದ ಒಂದು ಆಸನದಲ್ಲಿ ಕೂಡಿಸಿ, ವಾಲ್ಮೀಕಿ ಜನಾಂಗದ ನಾಲ್ಕು ಜನ ಯುವಕರು ಅದನ್ನು ಹೆಗಲ ಮೇಲೆ ಹೊತ್ತುಕೊಂಡು ಡೊಳ್ಳು, ಮೇಳಗಳೊಂದಿಗೆ, ಜಯಕಾರ ಹಾಕುತ್ತಾ ಗುಡಿಯ ಸುತ್ತ ಐದು ಬಾರಿ ಪ್ರದಕ್ಷಿಣೆಯನ್ನು ಹಾಕುತ್ತಾರೆ. ಈ ಪ್ರದಕ್ಷಿಣೆ ಮುಗಿಯುವರೊಳಗಾಗಿ, ಆ ಬಾಲಕನಿಗೆ ಪೂರ್ಣ ಪ್ರಜ್ಞೆ ತಪ್ಪುತ್ತದೆ. ಆಗ ಆ ಬಾಲಕನನ್ನು ದೇವಿಯ ಮೂರ್ತಿಯ ಮುಂದೆ ಮಲಗಿಸಿ, ಜೋಗತಿಯರು ದೇವಿಯನ್ನು ಆ ಬಾಲಕನಿಗೆ ಜೀವನಾದ ನೀಡುವಂತೆ ಪ್ರಾರ್ಥಿಸುತ್ತಾರೆ. ಪೂಜಾರಿಯು ಆ ಬಾಲಕನ ಮುಖಕ್ಕೆ ತೀರ್ಥ ಪ್ರೋಕ್ಷಣೆ ಮಾಡಿ ದೇವಿಯನ್ನು ಮೇಲಿಂದ ಮೇಲೆ ಪ್ರಾರ್ಥಿಸಿದ ನಂತರ ಆ ಬಾಲಕನಿಗೆ ಪ್ರಜ್ಞೆ ಬಂದು ಚೈತನ್ಯಪೂರ್ಣನಾಗುವನು. ಇದು ಒಂದು ರೀತಿಯ ಬೆತ್ತಲೆ ಸೇವೆಯ ಪ್ರತೀಕದಂತೆ ಕಾಣುತ್ತದೆ.

3) ಅಗ್ನಿ ಕುಂಡ ಮತ್ತು ಹೇಳಿಕೆ: ಈ ಉತ್ಸವದ ಅಂಗವಾಗಿ ಗುಡಿಯ ಪ್ರಾಂಗಣ ದಲ್ಲಿ ಸುಮಾರು 10 ಅಡಿ ಉದ್ದ ಮತ್ತು 8 ಅಡಿ ಅಗಲದ ಕುಂಡದಲ್ಲಿ ಕಟ್ಟಿಗೆಗಳನ್ನು ಒಟ್ಟಿ ಅದಕ್ಕೆ ಉರಿ ಹಚ್ಚಿ ಸುಟ್ಟು ಸುಮಾರು 1-2 ಅಡಿ ದಪ್ಪದ ಬೆಂಕಿಯ ರಾಶಿಯನ್ನು ಮಾಡಿರುತ್ತಾರೆ. ಈ ದೇವಿಯ ಪೂಜಾರಿಯು ಆ ಅಗ್ನಿಯ ಕುಂಡದಲ್ಲಿ ಎರಡು ಸಾರಿ ಬರಿಗಾಲಿನಲ್ಲಿ ಹೋಗಿ ಬರುತ್ತಾನೆ. ಆದರೆ ಆತನಿಗೆ ಕೆಂಡ ತುಳಿದ ಯಾವ ಗಾಯ, ನೋವು, ಆಗುವುದಿಲ್ಲ. ಅಗ್ನಿ ಕುಂಡದಿಂದ ಹೊರ ಬಂದ ಮೇಲೆ, ಊರಿನ ಪ್ರಮುಖರು ದೇವಿಯನ್ನು ಪ್ರಾರ್ಥಿಸಿ ತಮ್ಮ ಊರಿನ ಯೋಗ ಕ್ಷೇಮ, ಮಳೆ ಬೆಳೆ ಬಗ್ಗೆ ಕೇಳುವರು. ದೇವಿಯು ಪೂಜಾರಿಯ ಮೈಯಲ್ಲಿ ಬಂದು ಅವರ ಹೇಳಿಕೆಗೆ ಸೂಕ್ತವಾಗಿ ಉತ್ತರ ನೀಡುವಳು. ಇದು ಒಂದು ಪವಾಡ ಸದೃಶವೆಂದು ಭಕ್ತರು ನಂಬುವರು.

4) ದೇವಿಯು ತೊಟ್ಟಿಲು ಸೇವೆ : ಅಂಕಲಮ್ಮದೇವಿಯ ಉತ್ಸವ ಬೆಳ್ಳಿ ಮೂರ್ತಿಯನ್ನು ಆ ಗುಡಿಯ ಸಭಾ ಮಂಟಪದಲ್ಲಿ ತೊಟ್ಟಿಲಲ್ಲಿ ಇಟ್ಟು ತೂಗುತ್ತಾ ಜಯಕಾರ ಹಾಕುತ್ತಾ ಭಕ್ತಿಯಿಂದ ಮೆರೆಸುವರು.

5) ಹೋಳಿಗೆ ನೈವೇದ್ಯ : ಮೇಲಿನ ನಾಲ್ಕು ಕಾರ್ಯಗಳು ರಾತ್ರಿ 10.ರಿಂದ ಬೆಳಿಗ್ಗೆ 5.00 ಗಂಟೆಯವರೆಗೆ ಜರುಗುವುದು. ಪೂಜಾರಿಗಳು ಗುಡಿಯಲ್ಲಿ ಮಡಿಯಿಂದ ಹೋಳಿಗೆ ಅನ್ನ ಮೊದಲಾದ ಎಡೆಯನ್ನು ತಯಾರಿಸಿ ದೇವಿಗೆ ನೈವೇದ್ಯ ಮಾಡುವುದರೊಂದಿಗೆ ಆ ರಾತ್ರಿಯ ಉತ್ಸವ ಮುಗಿಯುತ್ತದೆ. ಪೂಜಾರಿಗಳು ಕುಲದಿಂದ ಕುರುಬರು (ಹಾಲುಮತ) ಆಗಿದ್ದರೂ, ದೇವಿಯ ಆರಾಧಕರಾಗಿರುವುದರಿಂದ ಮಾಂಸಾಹಾರವನ್ನು ತ್ಯಜಿಸಿ ಶುದ್ಧ ಶಾಖಾಹಾರಿಗಳಾಗಿದ್ದಾರೆ. ಈ ಪೂಜಾರಿಗಳು ಆ ದಿನ ಬೆಳಿಗ್ಗೆಯಿಂದ ಉಪವಾಸ ವ್ರತ ಆಚರಿಸುವರು. ಮರುದಿನ ಬೆಳಿಗ್ಗೆ ಕೆಲವು ಭಕ್ತರು ಗುಡಿಯ ಹೊರಗಡೆ ಕೋಳಿ, ಕುರಿಗಳನ್ನು ಬಲಿ ಕೊಡುವುದೂ ಜರುಗುತ್ತದೆ.

6) ಜಾತ್ರೆ: ಮರುದಿನ ಬೆಳಿಗ್ಗೆಯಿಂದ ತಿಂಡಿ ತಿನಿಸುಗಳ ವೈವಿಧ್ಯಮಯ ಬಳೆಗಳ, ಮಕ್ಕಳ ವಿವಿಧ ರೀತಿಯ ಆಟದ ಸಾಮಾನುಗಳ ಇನ್ನಿತರ ಅಂಗಡಿಗಳನ್ನು ತೆರೆದು ಆ ಗ್ರಾಮದವರು ಮತ್ತು ಬೇರೆ ಗ್ರಾಮಗಳಿಂದ ಬಂದಿರುವ ಭಕ್ತಾದಿಗಳು ಈ ಜಾತ್ರೆಯಲ್ಲಿ ಪಾಲ್ಗೊಂಡು ಮೂರು ನಾಲ್ಕು ದಿನ ವಿಜೃಂಭಣೆಯಿಂದ ಜಾತ್ರೆಯ ಆಚರಣೆ ಜರುಗುತ್ತದೆ.

ಸಮಾರೋಪ : ವಿಜಯನಗರದ ಕಾಲದಲ್ಲಿ ಈ ಅಂಕಲಮ್ಮದೇವಿ ಪ್ರಸಿದ್ಧಿ ಹೊಂದಿದ್ದು, ಶ್ರೀ ಅಚ್ಯುತರಾಯರ ಕಾಲಕ್ಕೆ 'ಅಪಿನಾಯಕನ ಪುರ ವನ್ನು ದಾನದತ್ತಿಯಾಗಿ ಪಡೆದಿರುವುದು ಕ್ರಿ. ಶ. 1532 ರ ಶಾಸನದಿಂದ ಪ್ರಸ್ತುತವಾಗುತ್ತದೆ. ಆ ಕಾಲದಿಂದಲೇ ಈ ಉತ್ಸವ ನಡೆದು ಬಂದಿರುವಂತೆ ಕಾಣುತ್ತದೆ. ಇದನ್ನು ವೀಕ್ಷಿಸಲಾಗಿ ಆ ಗ್ರಾಮದ ನಾಯಕ, ಕುಂಬಾರ, ಬ್ರಾಹ್ಮಣ, ಲಿಂಗಾಯತ ಮತ್ತು ಕುರುಬ ಮೊದಲಾದ ಎಲ್ಲಾ ಜನಾಂಗದವರು ಸೇರಿ ಒಗ್ಗಟಿನಿಂದ ಭಕ್ತಿ ಭಾವದಿಂದ ಆಚರಿಸುತ್ತಿರುವುದು ಕಂಡು ಬರುತ್ತಿದೆ. ಇದರಿಂದ ಮೇಲು ಕೀಳು ಎಂಬ ಜಾತಿ ಭೇದ ಅಳಿಸಿ ಧಾರ್ಮಿಕ ಸಾಮರಸ್ಯ ವನ್ನು ಸಾರುತ್ತಿರುವ ಈ ಉತ್ಸವವು ವಿಚಿತ್ರವೂ ಮತ್ತು ಆದರಣೀಯವೂ ಆಗಿದೆ.

೩೫. ಗಂಗಾದೇವಿ ವಿರಚಿತ 'ಮಧುರಾವಿಜಯ'ದಲ್ಲಿ ವರ್ಣಿತ ವಿಜಯನಗರದ (ಶೃಂಗಾರ)ವೈಭವ

ಡಾ. ಮಲ್ಲಿಕಾರ್ಜುನ ಕುಂಬಾರ

ದಕ್ಷಿಣ ಭಾರತೀಯರಿಗೆ ಅದರಲ್ಲೂ ಕನ್ನಡಿಗರಿಗೆ "ವಿಜಯನಗರ ಸಾಮ್ರಾಜ್ಯ" ಎಂದರೆ ಏನೋ ಒಂದು ಬಗೆಯ ರೋಮಾಂಚನ. ಅವರಿಗೆ ಅದು ಮರೆಯಲಾಗದ ಸಾಮ್ರಾಜ್ಯ. ಅದು ನಮ್ಮ ಸಂಸ್ಕೃತಿಯನ್ನು ಉಳಿಸಿದೆ. ಇದರಿಂದ ಅದಕ್ಕೆ ವಿಶೇಷ ಮಹತ್ವವಿದೆ. ಅಂತಹ ಸಾಮ್ರಾಜ್ಯದ ರಾಜಧಾನಿ 'ವಿಜಯನಗರ'ಕ್ರಿ. ಶ. ೧೫೩೧ ರಿಂದ ಈಚಿನ ಕೆಲವು ಶಾಸನಗಳು ಇದನ್ನು "ವಿದ್ಯಾನಗರಿ"ಎಂದು ಕರೆದಿವೆ. ರಾಜವೈಭವವನ್ನು ಮೆರೆದ ವಿಜಯನಗರದಂತಹ ರಾಜಧಾನಿ ಈ ಭೂಮಂಡಲದಲ್ಲಿಯೇ ಇರಲಿಕ್ಕಿಲ್ಲ. ಇದು ಕವಿಗಳನ್ನು, ಕಲಾವಿದರನ್ನು, ನೂರೊಂದು ವಿರಕ್ತರನ್ನು ನಾಡಿಗೆ ನೀಡಿ ಕಲ್ಯಾಣ ಬಯಸಿದ ವಿಜಯ ಕಲ್ಯಾಣವಾಗಿತ್ತು.

ಸುಮಾರು ೩೦೦ ವರ್ಷಗಳ ಕಾಲ ರಾಜವೈಭವದಿಂದ ಮೆರೆದ ಇದನ್ನು ವರ್ಣಿಸದವರಿಲ್ಲ. ಇದರ ಸ್ಥಾಪಕರಾದ ಸಂಗಮ ವಂಶದಲ್ಲಿ ಬರುವ ಸಂಗಮ ಮತ್ತು ಕಾಮಾಂಬಿಕೆಯರಿಗೆ ಐದು ಜನ ಗಂಡುಮಕ್ಕಳು ಇದರಲ್ಲಿ ಮೂರನೆಯವನಾದ ಬುಕ್ಕನು ಕ್ರಿ. ಶ. ೧೩೫೩ ರಿಂದ ೧೩೭೭ ರವರೆಗೆ ರಾಜ್ಯಭಾರವನ್ನು ಮಾಡಿದನು. ಇವನ ಪರಾಕ್ರಮವನ್ನು ಅರ್ಜುನನಿಗೆ (ಹೊಳೆನರಸಿಪುರ ಶಾಸನ)ಹೋಲಿಸಲಾಗಿದೆ. ಇವನಿಗೆ ಗೌರಾಂಬೆ, ಜೊಮ್ಮಾದೇವಿ ಮತ್ತು ದೇವಾಯಿ ಎಂಬ ಮೂರು ಜನರಾಣಿಯರಿದ್ದರು. ಈ ಬಗ್ಗೆ ಶಾಸನಗಳು ಮೌನವಾದಾಗ, ಇದೇ ಬುಕ್ಕರಾಯ ಮತ್ತು ದೇವಾಯಿಯ ಮಕ್ಕಳಾದ ಕಂಪಣ ಮತ್ತು ಸಂಗಮರಿದ್ದರೆಂದು, ಬುಕ್ಕರಾಯನ ಸೊಸೆ, ಕಂಪಣನ ಪಟ್ಟದ ರಾಣಿಗಂಗಾದೇವಿಯು ರಚಿಸಿದ 'ಮಧುರಾ ವಿಜಯ'ವೆಂಬ ಹೆಸರಿನ 'ವೀರ ಕಂಪಣರಾಯನ ಚರಿತಂ' ಎಂಬ ತನ್ನದೊಂದು ಕೃತಿಯಲ್ಲಿ ಈ ಬಗ್ಗೆ ಬೆಳಕು ಚಲ್ಲುತ್ತಾಳೆ.

ತಂದೆ ಬುಕ್ಕರಾಯನ ಅಪೇಕ್ಷೆಯಂತೆ ಕಂಪಣನು ದಕ್ಷಿಣಕ್ಕೆ ದಂಡೆತ್ತಿ ಬಂದು ಅನೇಕ ರಾಜರನ್ನು ಸೋಲಿಸಿ ಮಧುರೆಯನ್ನು ಮುತ್ತಿ, ಅಲ್ಲಿನ ಸುಲ್ತಾನನನ್ನು ಸೋಲಿಸುತ್ತಾನೆ. ಆ ವಿಜಯದ ದ್ಯೋತಕವಾಗಿ ರಾಣಿ ಗಂಗಾದೇವಿಯು ಈ ಕೃತಿಯನ್ನು ರಚಿಸುತ್ತಾಳೆ. ಈ ಯುದ್ಧದಲ್ಲಿ ತನ್ನ ಗಂಡನಾದ ಕಂಪಣನ ಜೊತೆಯಲ್ಲಿ ಮಧುರೆಯ ವಿಜಯದಲ್ಲಿ ಗಂಗಾದೇವಿಯು ಭಾಗವಹಿಸಿರಬಹುದು. ಈ ಕೃತಿಯಲ್ಲಿ ಆಕೆ ಪ್ರಥಮ ಸರ್ಗದ

ಕೊನೆಯಲ್ಲಿ "ಶ್ರೀ ಮೀನಾಕ್ಷಿಯೈ ನಮಃ" ಎಂದು ಮಧುರೆಯ ಮೀನಾಕ್ಷಿಯನ್ನು ಸ್ಮರಿಸುತ್ತಾಳೆ. ಈ ಯುದ್ಧವು ಸುಮಾರು ಕ್ರಿ. ಶ. ೧೩೭೧ ರಲ್ಲಿ ನಡೆದಿರಬಹುದಾದ್ದರಿಂದ ಅದೇ ಕಾಲದಲ್ಲಿ ಈ ಕೃತಿ ರಚಿತವಾಗಿರಬಹುದಾಗಿದೆ. ಕ್ರಿ. ಶ. ೧೩೭೪ ರಲ್ಲಿ ಕಂಪಣನು ಮಡಿಯುತ್ತಾನೆ.

ಹಿತ-ಮಿತ ಮಧುರ ವಚನದ ಕವಯಿತ್ರಿ ಗಂಗಾದೇವಿಯು ಈ ಕಾವ್ಯವನ್ನು ಬರೆದದ್ದು ಸಂಸ್ಕೃತದಲ್ಲಿ. ಅಂದಿನ ಪಂಡಿತರಿಗೆ ಮೆಚ್ಚಿನ ಭಾಷೆ ಸಂಸ್ಕೃತವೆಂದು ತಿಳಿದು ಹೀಗೆ ಮಾಡಿರಬಹುದು. ಹಿಂದಿನವರ ಸಂಪ್ರದಾಯವನ್ನು ಮುರಿದು ಶ್ರೇಷ್ಠ ಸಂಸ್ಕೃತ ಕಾವ್ಯ, ನಾಟಕಗಳನ್ನು ಅಧ್ಯಯನ ಮಾಡುವುದು, ಓದಿ ಆನಂದಿಸುವುದು ಮಾತ್ರವಲ್ಲದೇ, ತಾನು ಕಾವ್ಯ ರಚನೆಯನ್ನು ಮಾಡುವ ಧೈರ್ಯ ಮತ್ತು ಸಾಹಸವನ್ನು ಮೆರೆದ ಗಂಗಾದೇವಿಯನ್ನು ಎಷ್ಟು ಹೊಗಳಿದರೂ ಸಾಲದು. ಸಂಸ್ಕೃತದಲ್ಲಿ ಕಾವ್ಯ ರಚನೆಯನ್ನು ಮಾಡಿದ ಪ್ರಥಮ ಕವಯಿತ್ರಿಯಾಗಿ ಕಂಗೊಳಿಸುತ್ತಾಳೆ. ವಿಜಯನಗರ ಸಾಮ್ರಾಜ್ಯ ಸಂಸ್ಥಾಪನೆಗೆ ಶ್ರಮಿಸಿದ ಹರಿಹರ ಬುಕ್ಕರ ಅಪ್ರತಿಮ ಸಾಹಸದ ಕೀರ್ತಿ ಗೋಪುರಕ್ಕೆ ಬುಕ್ಕನ ಮಗ ಕಂಪಣನು ದಕ್ಷಿಣದ ದೇಶವನ್ನೆಲ್ಲಾ ಆ ಸಾಮ್ರಾಜ್ಯದಲ್ಲಿ ಸೇರುವಂತೆ ಮಾಡಿದ ಅವನ ಅಸಮ ಸಾಹಸವನ್ನು ಲಿಖಿತಗೊಳಿಸಿದ ಈ ಕಾವ್ಯ ಹೊನ್ನಕಳಸದಂತಿದೆ. ಆದರೆ ಈ ಕವಯಿತ್ರಿಯು ಎಲ್ಲೂ ತನ್ನ ಬಗೆಗಿನ ಪರಿಚಯವನ್ನು ಹೇಳಿಕೊಂಡಿಲ್ಲ. ಈಕೆಯ ಹೆಸರಿನಲ್ಲಿ 'ದೇವಿ' ಎಂಬ ಶಬ್ದವು ಸೇರಿಸುವದರಿಂದ ಈಕೆಯು ಉತ್ತಮ ಕುಲಭೂಷಿತೆಯಾಗಿರಬೇಕು. ಒಂಬತ್ತು ಸರ್ಗಗಳಿಂದ ಕೂಡಿದ ಈ ಕೃತಿಯಲ್ಲಿರಾಜಗುರು ಕ್ರಿಯಾಶಕ್ತಿ, ಲೆಕ್ಕಯ್ಯ, ಅಗಸ್ತ್ಯ, ಗಂಗಾಧರ, ಮತ್ತು ವಿಶ್ವನಾಥರಂತಹ ಕವಿಗಳ ಉಪಕಾರ. ಪ್ರೋತ್ಸಾಹಗಳನ್ನು ಹೃದಯ ತುಂಬಿ ಸ್ಮರಿಸುತ್ತಾಳೆ. ಇಲ್ಲಿನ ಕಾವ್ಯದಲ್ಲಿ ತನ್ನ ಗಂಡನೇ ಕಥಾನಾಯಕನಾಗಿದ್ದು, ಈತನನ್ನು 'ಕರ್ನಾಟಕದ ಕುಲತಿಲಕ' (೮-೨೫,೩೭) ನೆಂದು ಕರೆದಿದ್ದಾಳೆ. ವಿಜಯನಗರದ ಸೇನೆಯನ್ನು 'ಕರ್ನಾಟಕದ ಸೇನೆ'ಎಂದು ಕರೆದಿದ್ದಾಳೆ. ಈ ಕೃತಿಯು ಅನೇಕ ಚಾರಿತ್ರಿಕ ಅಂಶಗಳಿಂದ ಕೂಡಿದೆ. ವಿಜಯನಗರದ ಅರಸರ ಗುರು ಕ್ರಿಯಾಶಕ್ತಿ ಎಂದು, ಕಂಪಣನ ಹೆಂಡತಿ, ಬುಕ್ಕನ ತಾಯಿ ದೇವಾಯಿ ಎಂಬ ಹೊಸ ಚಾರಿತ್ರಿಕ ವಿಷಯಗಳನ್ನು ಹೊರಗೆಡುಹಿದ್ದಾಳೆ. ಅಲ್ಲದೇ ವಿಜಯನಗರದ ಶೃಂಗಾರವನ್ನು ತನ್ನ ಕಾವ್ಯದ ಪ್ರಥಮ ಸರ್ಗದಲ್ಲಿ ವರ್ಣಿಸಿದ್ದಾಳೆ.

ಆ ಕಾಲದ ವಿಜಯನಗರವು ಬುಧಜನರಿಂದ ತುಂಬಿ ಇಂದ್ರನ ಅಮರಾವತಿಯನ್ನು ಮೀರಿಸುವಂತೆ ಶೋಭಿಸುತ್ತಿತ್ತು. ಇಲ್ಲಿನ ಅರಸನಿಗೆ ರಾಜ್ಯಲಕ್ಷ್ಮಿಯೊಂದಿಗೆ ಸಂಪತ್ತು ತುಂಬಿತುಳುಕುತ್ತಿತ್ತು. ದೇವನದಿ ಗಂಗೆ ಮತ್ಸರ ಪಡುವಂತೆ ತುಂಗಭದ್ರೆಯು ಈ ನಗರವನ್ನು ರಕ್ಷಿಸುವ ರೀತಿಯಲ್ಲಿ ಸುತ್ತುವರಿದು ಹರಿಯುತ್ತಿದ್ದಾಳೆ. ಈ ರಾಜ್ಯದ ರಕ್ಷಣೆಯನ್ನು ಮಾಡುವ ರೀತಿಯಲ್ಲಿ ಸಂಪತ್ತೆ ಸುತ್ತುವರಿದಂತೆ ಸುತ್ತಲೂ ಪರ್ವತದಿಂದ

ಈ ರಾಜ್ಯವು ಈ ವೃತ್ತವಾಗಿದೆ. ಮಣಿ ರತ್ನಗಳಿಂದ ಕೂಡಿದ ಇಂದ್ರನ ಬಿಲ್ಲಿನಂತೆ ಇಲ್ಲಿನ ಎತ್ತರವಾದ ಗುಡಿಗೋಪುರಗಳು ಕಂಗೊಳಿಸುತ್ತಿದ್ದವು. ಅವುಗಳು ಹೊನ್ನಕಳಸಗಳಿಂದ ಹೊಳೆಯು ತ್ತಿರುವಾಗ ನೋಡುಗರಿಗೆ ಸೂರ್ಯನ ಬಿಂಬವೇ ಅಲ್ಲಿ ಸಿಲುಕಿದೆಯೋ ಏನೋ ಎನ್ನು ವಂತೆ ಭಾಸವಾಗುತ್ತಿತ್ತು. ನಗರದಲ್ಲೆಲ್ಲಾ ನಾಗಬನಗಳು ಕೇದಿಗೆ, ಸಂಪಿಗೆ ವನಗಳು ಹೂ ಗಿಡಬಳ್ಳಿಗಳಿಂದ ವಸಂತನ ಸ್ವಾಗತಕ್ಕಾಗಿ ಕಾದು ನಿಂತಂತೆ ವನಗಳು ಹಸಿರಿನಿಂದ ತುಂಬಿತುಳುಕುತ್ತಿದ್ದವು. ನಗರವು ಕರ್ಪೂರದವಾಸನೆಯಿಂದ ಕೂಡಿ ಘಮಘಮಿಸುತ್ತಿತ್ತು. ಎಳೆಯದಾದ ಬಾಳೆಗಿಡದ ನೆರಳಲ್ಲಿ ನಿಂತ ಕಸ್ತೂರಿ ಮೃಗಗಳು, ಬೆಟ್ಟದ ಕಂದಕಗಳು ಕಾಮನನ್ನು ಆಹ್ವಾನಿಸಲು ನಿಂತಂತೆ ಭಾಸವಾಗುತ್ತಿದ್ದವು. ರತ್ನಖಚಿತವಾದ ಪಾವಟಿ ಗೆಗಳಿಂದ ಕೂಡಿದ ಸರೋವರಗಳು, ಇದರಲ್ಲಿನ ಕಮಲಗಳ ಮಧ್ಯದಲ್ಲಿ ರಾಜ ಹಂಸಗಳು ಕಲರವದ ಧ್ವನಿ ಮಾಡುತ್ತಾ ಕ್ರೀಡೆಗಳನ್ನಾಡುತ್ತಿದ್ದವು. ಜಕ್ಕವಕ್ಕಿಗಳು ರಾತ್ರಿಯಲ್ಲಿ ವಿರಹಿಗಳಿಗೆ ವಿರಹವನ್ನು ಹುಟ್ಟಿಸುವ ರೀತಿಯಲ್ಲಿ ಚೀತ್ಕಾರಗೈಯ್ಯುತ್ತಿದ್ದವು. ಮುಕುಟ ದಂತೆ ಅಲ್ಲಲ್ಲಿ ವಿಟಪುರುಷರು ಕಾಣಿಸುತ್ತಿದ್ದರು. ನಗರವು ಪಂಡಿತರು, ಗಂಧರ್ವರು, ಗಾಯಕರಿಂದ ತುಂಬಿ, ಅದು ಚಂದ್ರನ ಬೆಳದಿಂಗಳ ಅನುಭವದ ಆನಂದವನ್ನು ನೀಡುತ್ತಿತ್ತು. ಸಂಜೆಯ ಸಮಯದಲ್ಲಿ ಪ್ರತಿಯೊಂದು ಮನೆಗಳ ಜಾಲಂಧ್ರಗಳಿಂದ ಅಡುಗೆಮನೆಯ ಬಿಳಿದಾದ ಧೂಮರಾಶಿಯು ದೀಪದ ಸೊಡರ ಬೆಳಕಿನಿಂದ ತಪ್ಪಿಸಿ ಕೊಂಡು, ಹಗಲು ಸುರುಳಿ ಸುರುಳಿಯಾಗಿ ಹೊರಗೆ ಓಡುತ್ತಿರುವಂತೆ ಕಾಣುತ್ತಿತ್ತು. ಪ್ರತಿಯೊಂದು ಮನೆ, ಮಠ, ಮಂದಿರಗಳಲ್ಲಿ ಸಂಗೀತ, ನೃತ್ಯ ಗೋಷ್ಠಿಗಳು ಜರುಗು ತ್ತಿದ್ದವು. ಎತ್ತರವಾದ ಚಂದ್ರಶಾಲೆಯ ಸೌಧಗಳಲ್ಲಿ ನಿಂತ ಜಿಂಕೆಯ ಕಣ್ಣುಳ್ಳ ಹೆಂಗಳೆ ಯರು ತಮ್ಮ ಪ್ರಿಯತಮರು ಆಟಕ್ಕಾಗಿ ಚಂಡುಗಳನ್ನು ಎಸೆದರೆಂದು ಶಂಕಿಸಿ ಹೊಳೆ ಯುವ ಚಂದ್ರನಿಗೆ ಭ್ರಾಂತಿಯಿಂದ ಕೈ ಹಾಕಿದರಂತೆ, ಅವರ ಕುಡಿಗಣ್ಣ ನೋಟದ ತೀಕ್ಷ್ಣತೆಯು ಯುವಜನರ ಎದೆಯನ್ನು ಕೂರಲಗಿನಂತೆ ಇರಿಯುತ್ತಿದ್ದವು. ಇದರಿಂದ ಕಾಮನು ತನ್ನ ಬಾಣದ ಪ್ರಯೋಗ ಇಲ್ಲಿ ಪ್ರಯೋಜನವಿಲ್ಲ ವೆಂದು ವಿದಾಯ ಹೇಳಿ ಹೊರ ಹೋದನಂತೆ. ಈ ಹೆಂಗಳೆಯರ ಮುಖದಲ್ಲಿನ ಹೆಪ್ಪುಗಟ್ಟಿದ ಲಾವಣ್ಯವುಳ್ಳ ಸೌಂದರ್ಯವನ್ನು ಕಂಡ ಆಕಾಶದಲ್ಲಿರುವ ಚಂದ್ರನು ತನಗೆ ಆ ಸೌಂದರ್ಯವಿಲ್ಲವಲ್ಲಾ ಎಂದು ತನ್ನ ಒಡಲಲ್ಲಿ ಮತ್ಸರವನ್ನು ತುಂಬಿಕೊಂಡದ್ದ ರಿಂದ ಅವನಿಗೆ (ಚಂದ್ರ) ಕಪ್ಪು ಕಲೆಯುಂಟಾಯಿತಂತೆ. ನಿರಭ್ರವಾದ ಆಕಾಶದಲ್ಲಿ ದಟ್ಟವಾಗಿ ನಿಂತ ಮೋಡಗಳು ಅಚ್ಚರಿ ಹುಟ್ಟಿಸುವಂತವುಗಳಲ್ಲ! ಏಕೆಂದರೆ ಈ ನಗರ ದಲ್ಲಿರುವ ಸುಂದರ ವನಿತೆಯರ ಕುಂಭ ಕುಚಗಳು ಅಂಥ ಹೋಲಿಕೆಗೆ ಸಾಟಿಯಾಗಿವೆ. ಅವನ ಬಿಗಿಯಾದ ಆ ಕುಟಿಗಳು ಕಠಿಣತೆಯಿಂದ ಕೂಡಿವೆ. ಗುಂಗುರುಕೂದಲನ್ನು ಹೊಂದಿದ ಇಂಥಹ ವಾಸ್ತವಿಕ ಸೌಂದರ್ಯದಿಂದ ಕೂಡಿದ್ದ ಸೌಂದರ್ಯದ ಪ್ರತೀಕವಾದ ಹೆಂಗಳೆಯರು ಇಲ್ಲಿದ್ದರು. ಕಂಪಣನು

ಅಂತಃಪುರದ ಈ ಸ್ತ್ರೀಯರನ್ನು ಕುಂತಳಸ್ತ್ರೀಯರೆಂದು ಕರೆದಿದ್ದಾನೆ. ಇಂಥ ಸ್ತ್ರೀಯರು ಬೇರೆ ಯಾವ ನಗರಗಳಲ್ಲಿ ಹುಡುಕಿದರೂ ಸಿಗುವುದಿಲ್ಲ! ಇಂತ ನಾರಿಯರನ್ನು ಹೊಂದಿದ ಹಂಪೆಯು ಭೂಮಂಡಲದಲ್ಲಿ ವೈಭೋಗದಿಂದ ಕುಬೇರನ ರಾಜಧಾನಿ ಅಲಕಾನಗರದಂತೆ ಮೆರೆಯುತ್ತಿದೆ. ಈ ನಗರದ ಒಡೆಯನು ಹಾಗೂ ಆರಾಧ್ಯ ದೇವನಾದ ವಿರೂಪಾಕ್ಷನು ಈ ನಗರದ ಬಗ್ಗೆ ಯಾವುದೇ ಆಲೋಚನೆಯನ್ನು ಮಾಡದೇ ನಿರಂಬಳ ನಾಗಿದ್ದನು. ಈ ನಗರವನ್ನಾಳುವ ಅಸಾಮಾನ್ಯನಾದ ಅರಸ (ಬುಕ್ಕನು) ಪರಾಕ್ರಮಿಯಾಗಿ ದೇವಲೋಕದ ಅಮರಾವತಿಯನ್ನಾಳುವ ಇಂದ್ರನಂತೆ ಮೆರೆಯುತ್ತಾ ವಿಜಯನಗರವನ್ನು ಆಳುತ್ತಿದ್ದನು. ಈ ಕಾವ್ಯದಲ್ಲಿ ಶೃಂಗಾರದ ರಸವನ್ನು ಜೇನಹನಿಗಳಂತೆ ಕಾವ್ಯಾಸ್ವಾದಕರಿಗೆ ಕವಯಿತ್ರಿಯು ಉಣಬಡಿಸಿದ್ದಾಳೆ. ವಿಜಯನಗರವನ್ನು ಬಹಳಷ್ಟು ಕಾವ್ಯಗಳು ಅಲ್ಲಿನ ಸಂಪತ್ತು, ವೈಭವ ಗಳನ್ನು ವರ್ಣಿಸಿದರೆ, ಗಂಗಾದೇವಿಯ ಈ ಕಾವ್ಯವು ಅದಕ್ಕೆ ಭಿನ್ನವಾದ ರೀತಿಯಲ್ಲಿ ವಿಜಯನಗರವು ವರ್ಣಿತವಾಗಿದೆ. ಇದರಿಂದ ಈ ಕಾವ್ಯಕ್ಕೆ ವಿಶೇಷವಾದ ಮಹತ್ವವಿದೆ.

ಆಕರ ಗ್ರಂಥಗಳು

೧) *Madhura Vijay or Virkamparaya charita*
- Harihar Sastri G. & Srinivasa Sastri V. (1924)

೨) ಗಂಗಾದೇವಿ ವಿರಚಿತ "*ಮಧುರಾ ವಿಜಯಂ ಅಥವಾ ವೀರ ಕಂಪರಾಯ ಚರಿತರ*" ಕನ್ನಡ ಅನುವಾದ -ಡಾ ಕೆ. ಕುಶಾಲಪ್ಪ ಗೌಡ (೧೯೮೯)

೩೬.ತೆಲುಗು ಕವಿ ನಾಚನಸೋಮನ ಶಾಸನಗಳು: ಮರುಪರಿಶೀಲನೆ

ಡಾ. ಕೂ. ಸ. ಅಪರ್ಣ

ತೆಲುಗು ಸಾಹಿತ್ಯದ ಪ್ರಖ್ಯಾತ ಕವಿ ನಾಚನನ ಮಗ ಸೋಮ ಅಥವಾ ನಾಚನ ಸೋಮ. ಇವನು ತೆಲುಗಿನ ಶ್ರೇಷ್ಠ ಕವಿತ್ರಯರಲ್ಲಿ ಒಬ್ಬನೆಂದೂ, ಸರ್ವಜ್ಞನೆಂದೂ ಪರಿಗಣಿಸಲ್ಪಟ್ಟಿದ್ದಾನೆ. ಇವನ ಬಗ್ಗೆ ಎರಡು ಶಿಲಾಶಾಸನಗಳೂ, ಎರಡು ತಾಮ್ರ ಶಾಸನಗಳೂ ದೊರೆತಿವೆ. ಶಿಲಾಶಾಸನಗಳೆರಡೂ ಆಂಧ್ರಪ್ರದೇಶದ ಕಡಪ ಜಿಲ್ಲೆಯ ಕಡಪ ತಾಲೂಕಿನ ತುಡುಮಲದಿನ್ನೆಯಲ್ಲಿ ದೊರೆತಿವೆ. ತಾಮ್ರ ಶಾಸನಗಳೆರಡೂ ಕರ್ನಾಟಕದ ಕೋಲಾರ ಜಿಲ್ಲೆಯದಾಗಿದ್ದು, ಒಂದು -ಮುಳಬಾಗಲು ತಾಲೂಕಿನ ಮುಡಿಯನೂರಿನಲ್ಲೂ, ಮತ್ತೊಂದು - ಗೌರಿಬಿದನೂರು ತಾಲೂಕಿನ ಕೆಂಕೆರೆ ಹೋಬಳಿಯ ರಮಾಪುರದಲ್ಲೂ ದೊರೆತಿದೆ. ಶಿಲಾಶಾಸನಗಳು ತೆಲುಗು ಭಾಷೆ ಮತ್ತು ತೆಲುಗು ಲಿಪಿಯಲ್ಲಿದ್ದರೆ, ತಾಮ್ರಶಾಸನಗಳು ಸಂಸ್ಕೃತ ಮತ್ತು ತೆಲುಗು ಭಾಷೆ ಯಲ್ಲೂ, ನಾಗರೀಲಿಪಿಯಲ್ಲೂ ಇದೆ.

ಈ ನಾಚನ ಸೋಮನ ಶಿಲಾಶಾಸನಗಳು, ಮೇಲೆ ಹೇಳಿದ ತುಡುಮಲದಿನ್ನೆಯ ಚನ್ನಕೇಶವ ದೇವಾಲಯದಲ್ಲಿದ್ದು, ಒಂದು ಶಾಸನವು ಆ ದೇವಾಲಯದಲ್ಲಿ ಹೊಸ್ತಿಲಿಗೆ ಸೇರಿಸಿದ ಫಲಕದ ಮೇಲೂ (A), ಮತ್ತೊಂದು ಆ ದೇವಾಲಯದ ಧ್ವಜಸ್ತಂಭದ ಮೇಲೂ (B) ಇದೆ. ಇವುಗಳ ಸಾರಾಂಶವು 1938 - 39 ರಲ್ಲೂ[1] , ಪೂರ್ಣ ಪಾಠವು 1969ರಲ್ಲೂ ಪ್ರಕಟವಾಗಿದೆ. [2] ಹೊಸ್ತಿಲ ಪಟ್ಟಿಕೆಯ [3] ಮೇಲಿರುವ ಶಾಸನವು (A), ಜೂಟೂರಿ ಚೋಡಮರಾಜನು ಆಂಜನೇಯನ ಸೇವೆ ಮಾಡಿದ್ದನ್ನು ಹೇಳಿದೆ.[4] ಇದರೊಂದಿಗೆ, ಪ್ರಾಸಂಗಿಕವಾಗಿ, 'ಈ ತುರಿಮಿಳದಿನ್ನೆಯು, ನಾಚನ ಸೋಮನಿಗೆ ಪ್ರೌಢದೇವರಾಯನು "ಏಕಭೋಗ"ವಾಗಿ ನೀಡಿದ ಅಗ್ರಹಾರ'ಎಂದು ಉಲ್ಲೇಖಿಸಿದೆ; ಆಮೂಲಕ ಹಳೆಯ ಘಟನೆಯೊಂದನ್ನು ದಾಖಲಿಸಿದೆ. ಈ ಶಾಸನ ದಲ್ಲಿ 'ಪ್ರೌಢದೇವರಾಯ'ನ ಉಲ್ಲೇಖವಿರುವುದರಿಂದ, ಈ ದಾನವು ಅವನ ಕಾಲದ ಮಿತಿಯಲ್ಲಿ ನಿಲ್ಲುತ್ತದೆ. ಈ ದಾನದ ಪ್ರತಿಗ್ರಾಹಿ ನಾಚನಸೋಮನು ಉತ್ತರ ಹರಿವಂಶ ಮತ್ತು ವಸಂತವಿಲಾಸ (ಈ ಕೃತಿ ಸಿಕ್ಕಿಲ್ಲ ಎಂದು ಹೇಳಲಾಗಿದೆ) ಬರೆದ ಕವಿ ನಾಚನಸೋಮ ಎಂದು ಶಾಸನ ಸಂಪಾದಕರು ಗುರುತಿಸಿದ್ದಾರೆ[5] ; ಅಲ್ಲದೆ, ಮುಡಿಯನೂರು ತಾಮ್ರ ಶಾಸನದ ನಾಚನಸೋಮನೇ ಇವನು ಎಂದೂ ಹೇಳಿದ್ದಾರೆ.

ತುರಿಮಿಳದಿನ್ನೆಯನ್ನು ದಾನವಾಗಿ ಕೊಟ್ಟ ಪ್ರೌಢದೇವರಾಯನು, ಎರಡನೇ ಹರಿಹರನ ಮಗ ಒಂದನೇ ದೇವರಾಯ ಎಂದೂ, ಅವನು ತಂದೆಯ ಕಾಲದಲ್ಲಿ ಉದಯಗಿರಿ ರಾಜ್ಯದ ವೈಸರಾಯ್ ಆಗಿದ್ದಾಗ ಈ ದಾನ ನೀಡಿರಬೇಕೆಂದೂ ತಿಳಿಸಿದ್ದಾರೆ[6]. ಆದರೆ, ಶಾಸನದಲ್ಲಿರುವ 'ಪ್ರೌಢದೇವರಾಯ'ಎಂಬ ಹೆಸರು ಒಂದನೇ ದೇವರಾಯನಿಗೆ ಸಂಬಂಧಿಸುವುದಿಲ್ಲ. ಒಂದನೇ ದೇವರಾಯನನ್ನು ಉಲ್ಲೇಖಿಸುವ ಬಹುಪಾಲು ಶಾಸನಗಳು (ಸು. 50) ಅವನನ್ನು 'ವೀರಪ್ರತಾಪದೇವರಾಯ'ಎಂದೇ ಕರೆದಿವೆ; ಕೆಲವು ಮಾತ್ರ 'ವೀರದೇವರಾಯ' '(ವೀರ) ದೇವರಾಯ ಒಡೆಯ' ಎಂದೂ ಉಳಿದಂತೆ ದೇವರಾಯ /ದೇವರಾಯ ಮಹಾರಾಯ ಎಂದೂ ಕರೆದಿವೆ. ಯಾವ ಶಾಸನಗಳೂ ಒಂದನೇ ದೇವರಾಯನನ್ನು 'ಪ್ರೌಢದೇವರಾಯ'ಎಂದಿಲ್ಲ.[7] ಹೀಗಾಗಿ ಈ ಶಾಸನದ ಪ್ರೌಢದೇವರಾಯನು ಎರಡನೇ ದೇವರಾಯ ಎಂದು ಹೇಳಬಹುದು. ಅಂದರೆ, ತುರುಮಿಳದಿನ್ನೆಯನ್ನು ನಾಚನಸೋಮನಿಗೆ ಎರಡನೇ ದೇವರಾಯನು ನೀಡಿದನೆಂದು ಹೇಳಬಹುದು. ಅಂದರೆ, ನಾಚನಸೋಮನು ಸಂಗಮ ದೊರೆ ಎರಡನೇ ದೇವರಾಯನ ಕಾಲದಲ್ಲಿ (ಕ್ರಿ. ಶ. 1424 -46) ಇದ್ದವನೆಂದು ಶಾಸನದ ಆಧಾರದಿಂದ ತೀರ್ಮಾನಿಸಬಹುದಾಗಿದೆ.

ತುರುಮಿಳದಿನ್ನೆಯ ಇನ್ನೊಂದು ಶಿಲಾಶಾಸನವು (B) ಕೃಷ್ಣದೇವರಾಯನನ್ನೂ, ಶಕವರ್ಷ 1451 ನ್ನೂ ಉಲ್ಲೇಖಿಸುತ್ತದೆ. ಇದು, ತುರಿಮಿಳದಿನ್ನೆಯ 'ಪಾಲಿಕರಣ' ನಾದ ಪುಷ್ಪಾಲ ಪ್ರಾಪನ ಎಂಬುವವನು ಅಲ್ಲಿನ ಚನ್ನಕೇಶವನಿಗೆ 'ದಿವ್ಯಗಂಭ'ವನ್ನು ಸ್ಥಾಪಿಸಿದ್ದನ್ನು ಉಲ್ಲೇಖಿಸುತ್ತದೆ. ಅಂತೇ, ಪ್ರಾಸಂಗಿಕವಾಗಿ ಇದೂ ಕೂಡ ತುರುಮಿಳ ದಿನ್ನೆಯನ್ನು 'ನಾಚನಸೋಮನ ಅಗ್ರಹಾರ'ಎಂದು ನೆನಪಿಸಿದೆ. ಈ ಶಾಸನವೂ ಹಳೆಯ ಘಟನೆಯನ್ನು ದಾಖಲಿಸಿದೆ. ಇದರ ಕಾಲವನ್ನು ಕ್ರಿ. ಶ. 1529, ಜೂನ್ 17, ಗುರುವಾರ ಎಂದು ಗುರುತಿಸಿದ್ದಾರೆ. ಅಂದರೆ, ಕ್ರಿ. ಶ. 1529 ರಲ್ಲೂ, ಸೋಮನಿಗೆ ನೀಡಿದ ದಾನದ ನೆನಪು ಉಳಿದು ಬಂದಿ ಎಂದು ಹೇಳಬಹುದು.

ಕೋಲಾರ ಜಿಲ್ಲೆಯ ತಾಮ್ರಶಾಸನಗಳಲ್ಲಿ ಒಂದು, ಮುಳಬಾಗಲು ತಾಲೂಕಿನ ಮುಡಿಯನೂರಿನಲ್ಲೂ, [8] ಮತ್ತೊಂದು, ಗೌರಿಬಿದನೂರು ತಾಲೂಕಿನ ಕೆಂಕೆರೆ ಹೋಬಳಿಯ ರಮಾಪುರದಲ್ಲೂ [9] ದೊರೆತಿದೆ. [9ಅ] ಇವುಗಳಲ್ಲಿನ ವಿಷಯಗಳನ್ನು ಗಮನಿಸುವುದಾದರೆ, ಎರಡೂ ಒಂದೇ ತೇದಿ ವಿವರಗಳನ್ನು ನೀಡುತ್ತಿರುವುವಲ್ಲದೆ, ಶಾಸನಗಳ ವಸ್ತು - ವಿವರಗಳೂ ಒಂದೇ ರೀತಿಯಾಗಿವೆ. ಇದರಂತೆ, ತೆಲುಗಿನ ಮಹಾಕವಿ ನಾಚನಸೋಮನಿಗೆ ಒಂದನೇ ಬುಕ್ಕರಾಯನು 'ಪೆಂಚಕಲದಿನ್ನೆ'ಎಂಬ ಗ್ರಾಮವನ್ನು 'ಬುಕ್ಕರಾಯಪುರ'ವಾಗಿ ಮಾಡಿ ದಾನ ನೀಡುತ್ತಾನೆ. ಅದನ್ನು 110

ವೃತ್ತಿಗಳನ್ನಾಗಿ ಮಾಡಿ, 26 ವೃತ್ತಿಗಳನ್ನು ಯಜಮಾನಭಾಗವಾಗಿ ಉಳಿಸಿಕೊಂಡು, ಉಳಿದದ್ದನ್ನು ಯಾಜುಷೀ ಬ್ರಾಹ್ಮಣರಿಗೆ ದಾನವಾಗಿ ನೀಡುತ್ತಾನೆ -ನಾಚನಸೋಮ.

ನಾಚನಸೋಮ ಅಥವಾ ನಾಚನನ ಮಗ ಸೋಮನು[೪] ಸಕಲ ಆಗಮಗಳನ್ನೂ, ಅಷ್ಟಾದಶ ಪುರಾಣಗಳ ಅರ್ಥವನ್ನೂ ತಿಳಿದವನಾಗಿದ್ದು, ಮಹಾಕವಿವರನೂ, ಅಷ್ಟಭಾಷಾಕವಿಯೂ ಆಗಿದ್ದನೆಂದು ಈ ಎರಡೂ ತಾಮ್ರಶಾಸನಗಳು ಹೇಳಿವೆ ; ಶ್ರೀವಾಣಿಯನ್ನು ಗೆದ್ದು ಸಂಪತ್ತನ್ನು ಗಳಿಸಿದನೆಂದು ಹೊಗಳಿವೆ; ಜೊತೆಗೆ, ನಾಚನ ಸೋಮನು ಆಪಸ್ತಂಭ ಸೂತ್ರದ ಭಾರದ್ವಾಜ ಗೋತ್ರದ ಯಾಜುಷ ಅನ್ವಯದವ ನೆಂದು ಗುರುತಿಸಿವೆ. ಇವುಗಳೊಂದಿಗೆ, ತಾಮ್ರಶಾಸನಗಳಲ್ಲಿರುವಂತೆ ವಂಶಾವಳಿ, ಬುಕ್ಕ ರಾಯನ ಶೌರ್ಯ, ಬಿರುದುಗಳು ಬುಕ್ಕನಿಗೆ ಪ್ರಶಂಸಾಶೀರ್ವಾದ, ಶಾಸನ ರಚನ ಕಾರ, ಶಿಲ್ಪಿ, ಶಾಪಾಶಯ -ಈ ವಿವರಗಳೂ ಇವೆ ; ಅಂತ್ಯದಲ್ಲಿ ಶ್ರೀ ವಿರೂಪಾಕ್ಷ ಒಪ್ಪವೂ ಇದೆ.

ಎರಡೂ ಶಾಸನಗಳ ವಿವರಗಳು ಒಂದಕ್ಕೊಂದು ತಾಳೆಯಾಗುತ್ತಿದ್ದರೂ, ದಾನದ ವಿವರಗಳಲ್ಲಿ ವ್ಯತ್ಯಾಸಗಳಿವೆ. ಯಜಮಾನ ಭಾಗವಾಗಿ ಇಟ್ಟುಕೊಂಡದ್ದು 26 ವೃತ್ತಿ ಗಳೆಂದು ಮುಡಿಯನೂರಿನ ಶಾಸನವು ಹೇಳಿದರೆ, 36 ವೃತ್ತಿಗಳನ್ನು ಇಟ್ಟುಕೊಂಡ ನೆಂದು ರಮಾಪುರದ ಶಾಸನವು ಹೇಳಿದೆ. ಅಂತೇ ಕಾಶ್ಯಪಾನ್ವಯದ ಒಬ್ಬ ವ್ಯಕ್ತಿಗೆ 3 ವೃತ್ತಿಗಳನ್ನು ನೀಡಿದನೆಂದು ಮುಡಿಯನೂರಿನ ಶಾಸನವೂ, 2 ವೃತ್ತಿಗಳನ್ನು ನೀಡಿದ ನೆಂದು ರಮಾಪುರದ ಶಾಸನವೂ ಹೇಳಿದೆ. ಒಟ್ಟು ದಾನದ ವೃತ್ತಿಗಳಲ್ಲಿ 80 ವೃತ್ತಿಗಳ ವಿವರ ಮಾತ್ರ ದೊರೆತಿದ್ದು, ಉಳಿದ 30 ವೃತ್ತಿಗಳ ವಿವರ ತಿಳಿಯುವುದಿಲ್ಲ. ವ್ಯತ್ಯಾಸ ವಿರುವ ಇನ್ನೊಂದು ಅಂಶವೆಂದರೆ, ಕೆಲವೆಡೆ, 'ಮ'ಕಾರದ ಬದಲು 'ಗ'ಕಾರವೂ, 'ಳ'ದ ಬದಲು 'ಲ 'ಕಾರವೂ ಇದೆ. ಉದಾ: ಮುಡಿಯನೂರಿನ ಶಾಸನದಲ್ಲಿ 'ಸಂಗ ಮೋನಾನಭೂಪತಿ' ಎಂದಿದ್ದರೆ, ರಮಾಪುರದ ಶಾಸನದಲ್ಲಿ 'ಸಂಗಮೋಗಾಗ ಭೂಪತಿ' ಎಂದೂ ಇದೆ. ಅಂತೇ, ದಮಯಂತೀ ಬದಲು ದಗಯಂತೀಃ' ಮಾರಪೋ ಬದಲು ಗಾರಪೋ ಎಂದೂ ರಮಾಪುರದ ಶಾಸನದಲ್ಲಿದೆ. ಇದರಲ್ಲೇ 'ಕಳಿಂಗ'ದ ಬದಲು 'ಕಲಿಂಗ'ವೂ, 'ನಳ'ದ ಬದಲು 'ನಲ'ವೂ ಇದೆ.

ಇವುಗಳ ತೇದಿ ವಿವರವನ್ನು ಗಮನಿಸುವುದಾದರೆ, ಮುಡಿಯನೂರಿನ ಶಾಸನ ದಲ್ಲಿ 'ಶಕಸ್ಯಾಬ್ದೇರ (ಸಾಭ್ರ)ನಯ ನೇಂದುಬಿಃ ತಾರಣಾಬ್ದೇ ಚೈತ್ರ ಮಾಸೇ ನುಮ್ಯಾಂ ಶುಕ್ಲಪಕ್ಷಕೇ ಎಂದಿದ್ದರೆ, ರಮಾಪುರದ ಶಾಸನದಲ್ಲಿ 'ರಸಭೂನಯನೇಂದುಭಿ' ಎಂದು ಹೇಳಿ ಅದೇ ವಿವರಗಳು ಮುಂದುವರಿದಿವೆ. ಈ ಶಾಸನೋಕ್ತ ತೇದಿಯು ಶಕ 1216, ಅಂದರೆ, ಕ್ರಿ. ಶ. 1294, ಮಾರ್ಚ್ 7, ಭಾನುವಾರ ಎಂದಾಗುತ್ತದೆ ;ಆದರೆ ಆಗ

ಜಯ ಸಂವತ್ಸರವಿದೆಯೇ ಹೊರತು ತಾರಣ ಸಂವತ್ಸರವಿಲ್ಲ ಹಾಗೂ ಸಂಗಮರ ಕಾಲಕ್ಕೆ ಇದು ಹೊಂದುವುದಿಲ್ಲ. ಹೀಗಾಗಿ ಇದನ್ನು 'ರಸಭೂ.....' ಬದಲಿಗೆ 'ರಸರ್ತು (=ಋತು) ನಯನೇಂದು'ಎಂದು ಆಂಧ್ರದ ವಿದ್ವಾಂಸರು ತಿದ್ದಿ ಓದಿಕೊಂಡಿದ್ದಾರೆ. [10] ಈ ಶಾಸನಗಳ ಸಂಪಾದಕರಾದ ರೈಸ್ ಅವರೂ ಇದರ ತೇದಿಯನ್ನು ತಾರಣ ಸಂವತ್ಸರಕ್ಕೆ ಹೊಂದಿಸಿ, ಶಕ 1266ಎಂದು ತಿದ್ದಿಕೊಂಡಿದ್ದಾರೆ. ಹೀಗಾಗಿ, ಈ ಶಾಸನ ಗಳ ಕಾಲವನ್ನು ಕ್ರಿ. ಶ. 1344ರ ಮಾರ್ಚ್ 23, ಮಂಗಳವಾರ ಎಂದು ಗುರುತಿಸ ಲಾಗಿದೆ.[11] ಈ ಶಾಸನಗಳ ಆಧಾರದ ಮೇಲೆ, ಆಂಧ್ರಪ್ರದೇಶದ ವಿದ್ವಾಂಸರುಗಳು ನಾಚನಸೋಮನ ಕಾಲವನ್ನು ಬುಕ್ಕನ ಕಾಲ (ಕ್ರಿ. ಶ. 1355 -77) ಎಂದು ಗುರುತಿಸಿದ್ದಾರೆ. [12] ಆದರೆ, ಈ ಶಾಸನಗಳಲ್ಲಿ ಉಲ್ಲೇಖಿತಗೊಂಡಿರುವ ವ್ಯಕ್ತಿಗಳು, ಅದರಲ್ಲಿರುವ ಚಾರಿತ್ರಿಕ ವಿವರಗಳ ಹಿನ್ನೆಲೆಯಲ್ಲಿ ಈ ಶಾಸನಗಳ ಕಾಲ ವನ್ನು ಸಂಗಮ ಅರಸರ ಇತರ ಶಾಸನಗಳು ಹಾಗೂ ಪೂರ್ವೋಕ್ತ ಶಿಲಾಶಾಸನ ಗಳೊಂದಿಗೆ ಮರುಪರಿಶೀಲಿಸಬೇಕಾಗಿದೆ.

ಸಂಗಮರ ವಂಶಾವಳಿಯನ್ನು ಹೇಳುವಾಗ ಈ ತಾಮ್ರ ಶಾಸನಗಳು, ಸಂಗಮನಿಗೆ ಇನ್ನೊಂದು ತಲೆಮಾರನ್ನು ಸೇರಿಸಿ, ಅವನ ತಂದೆ -ತಾಯಿಯರನ್ನು ಬುಕ್ಕ ಮತ್ತು ಮಗಾಂಬಿಕಾ ಎಂದು ಹೇಳಿವೆ. ಅಲ್ಲೆ, ಸಂಗಮನ ಸತಿಯ ಹೆಸರನ್ನು 'ಕಾಮಾಂಬಿಕಾ' ಎಂದು ಹೇಳುವ ಬದಲು 'ಮಾಲಾಂಬಿಕಾ'ಎಂದು ತಪ್ಪಾಗಿ ಹೇಳಿವೆ. ಸಂಗಮನ ತಂದೆ ಬುಕ್ಕನ ಹೆಸರು ಕಾಲಾನಂತರದ ಸೇರ್ಪಡೆಯೇ ಹೊರತು ಯಾವ ಶಿಲಾಶಾಸನ ಗಳಲ್ಲೂ ಈ ಬುಕ್ಕನ ಹೆಸರಿಲ್ಲ. ಅದರಲ್ಲೂ, ಬಹುಪಾಲು, ಕೋಲಾರ ಜಿಲ್ಲೆಯ ತಾಮ್ರಶಾಸನಗಳಲ್ಲಿ ಈ ಬುಕ್ಕನ ಉಲ್ಲೇಖಗಳಿವೆಯೇ ಹೊರತು ಬೇರೆಡೆ ಅಷ್ಟಾಗಿ ದೊರೆಯುವುದಿಲ್ಲ.

ಸಂಗಮನ ಮಗ ಒಂದನೇ ಬುಕ್ಕನನ್ನು ಈ ಶಾಸನಗಳು ಉಲ್ಲೇಖಿಸಿವೆ. ಕ್ರಿ. ಶ. 1341 ರ ಮಂಡ್ಯ ಜಿಲ್ಲೆಯ ಬೀಚೇನಹಳ್ಳಿಯ ಶಾಸನದಲ್ಲಿ ಬುಕ್ಕನ ಮೊದಲ ಉಲ್ಲೇಖವಿದೆ. [13] ಈ ಬುಕ್ಕನು ರಾಜ್ಯಾಡಳಿತ ವಹಿಸಿಕೊಳ್ಳುವುದೂ ಕ್ರಿ. ಶ. 1356 ರಲ್ಲಿ. ಅಂದಮೇಲೆ, ಕ್ರಿ. ಶ. 1344 ರಲ್ಲೇ ಇವನು ಸಿಂಹಾಸನಸ್ಥನಾಗಿದ್ದ ಎಂದು ಹೇಳಿದರೆ, ತಾಳೆಯಾಗುವುದಿಲ್ಲ. ಈ ಶಾಸನಗಳು 'ತುರುಷ್ಕಾಶುಷ್ಕ ವದನಾ:', 'ಹಿಂದೂರಾಯಸುರ ತ್ರಾಣ' ಎಂಬ ಬಿರುದುಗಳನ್ನೂ ಉಲ್ಲೇಖಿಸಿವೆ. ಈ ಬಿರುದು ಗಳು ಮೊದಲಿಗೆ ಕ್ರಿ. ಶ. 1358ರಲ್ಲೂ [14], ಕ್ರಿ. ಶ. 1354 ರಲ್ಲೂ [15] ಕ್ರಮವಾಗಿ ಶಿಲಾ ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ರಾಜನ ಬಗೆಗಿನ ಉಕ್ತ ಕಾಲವೇ ಮುಂದೆ ಹೋದ ಮೇಲೆ, ಈ ಶಾಸನೋಕ್ತ ಬಿರುದುಗಳ ಕಾಲವನ್ನೂ ಮುಂದಕ್ಕೆ ಹಾಕಬೇಕಾಗುತ್ತದೆ.

'ವಿದ್ಯಾಭಿಧಾನನಗರೀ ವಿಜಯೋನ್ನತಶಾಲಿನೀ ವಿದ್ಯಾರಣ್ಯ ಕೃತಾಂತಸ್ಯಾಂ ರತ್ನ ಸಿಂಹಾಸನೇಸ್ಥಿತಃ ' ಎಂಬುದು ಇವರ ರಾಜಧಾನಿಯ ಬಗ್ಗೆ ಈ ಶಾಸನಗಳಲ್ಲಿರುವ ಉಲ್ಲೇಖ. ಸಂಗಮರ ರಾಜ್ಯ ಸ್ಥಾಪನೆಯ ಕಾಲವನ್ನು ಕ್ರಿ. ಶ. 1336 ಎಂದು ಹೇಳುವ ಅನೇಕ ತಾಮ್ರಶಾಸನಗಳು [15ಅ] ಇದೇ ರೀತಿ ಉಲ್ಲೇಖಿಸುತ್ತದೆ. ಆದರೆ, ವಿದ್ಯಾರಣ್ಯರು ಈ ಅವಧಿಯಲ್ಲಿ ಇರಲಿಲ್ಲ ಎಂಬುದನ್ನು ಗಮನಿಸಬೇಕು. ವಿದ್ಯಾರಣ್ಯರ ಶಿಲಾಶಾಸನಗಳು ಕ್ರಿ. ಶ. 1378 ರಿಂದ 1378ರ ನಡುವೆ ದೊರೆಯುತ್ತವೆ.

ಶಿಲಾಶಾಸನದಲ್ಲಿ ಮೊದಲಿಗೆ 'ವಿದ್ಯಾನಗರ'ದ ಉಲ್ಲೇಖವು ಕ್ರಿ. ಶ. 1392ರ ಹರಿಹರಪುರ ಮಠದ ಶಾಸನದಲ್ಲಿ [16] ದೊರೆಯುತ್ತದೆ. ಹೀಗಾಗಿ, ಈ ಉಲ್ಲೇಖಗಳೂ ಕ್ರಿ. ಶ. 1344ಕ್ಕೆ ತಾಳೆಯಾಗುವುದಿಲ್ಲ. 'ವಿದ್ಯಾರಣ್ಯರಿಂದ ಸ್ಥಾಪಿತವಾದ ವಿದ್ಯಾನಗರ'ಎಂಬ ಕಥೆಯು ನಂತರದ ಕಾಲದ್ದು. [17]

ಈ ಶಾಸನಗಳಲ್ಲಿ, ದಾನವನ್ನು ಭಾಸ್ಕರಕ್ಷೇತ್ರವಾದ ಹಂಪೆಯ ವಿರೂಪಾಕ್ಷನ ಸನ್ನಿಧಿಯಲ್ಲಿ ನೀಡಿದ್ದೆಂದು ಹೇಳಿ, 'ಶ್ರೀ ವಿರೂಪಾಕ್ಷ' ಎಂಬ 'ಒಪ್ಪ'ವನ್ನೂ ಹಾಕಿದೆ. ಆದರೆ, ಸಂಗಮರು ಈ ವಿರೂಪಾಕ್ಷನ ಸನ್ನಿಧಿಗೆ ಬರುವುದೇ ಕ್ರಿ. ಶ. 1368 ರಲ್ಲಿ[18] ಕ್ರಿ. ಶ. 1366ರಲ್ಲಿ ಆನೆಗೊಂದಿಗೆ ಬಂದು, ವಿರೂಪಾಕ್ಷನಿಗೆ ದಾನವನ್ನು ಮಾತ್ರ ನೀಡುತ್ತಾರೆ.[19] ಅದಕ್ಕೂ ಮುಂಚಿನ ಸಂಗಮರ ಶಾಸನಗಳಲ್ಲಿ ಹಂಪೆಯ ವಿರೂಪಾಕ್ಷನ ಉಲ್ಲೇಖವಿಲ್ಲ. ವಿರೂಪಾಕ್ಷನ ಸನ್ನಿಧಿ, ಒಪ್ಪ -ಇವು ಮೊದಲಿಗೆ ಕ್ರಿ. ಶ. 1379 ರ ಶಾಸನಗಳಲ್ಲಿದೆ.[20] ಹೀಗಾಗಿ, ಈ ಸಂಗತಿಯೂ ಕೂಡಾ ಕ್ರಿ. ಶ. 1344 ಎಂದು ಹೇಳುವ ಶಾಸನ ಕಾಲದ ಬಗ್ಗೆ ಅನುಮಾನ ಮೂಡಿಸುತ್ತದೆ.

ಈ ತಾಮ್ರಶಾಸನಗಳನ್ನು ರಚಿಸಿದವನು ಯಾಜುಷಿಯಾದ ಆತ್ರೇಯಗೋತ್ರದ ಕೋಟಿದೇವಾರಾಧ್ಯನ ಮಗ ಮಲ್ಲಿಕಾರಾಧ್ಯ. ಇವನ ಬಗ್ಗೆ, ಸಂಗಮರ ಕಾಲದಲ್ಲಿರುವ ಇನ್ನೊಂದು ಉಲ್ಲೇಖದಲ್ಲಿ ಕೋಟಿದೇವಾರಾಧ್ಯನ ಅಣ್ಣ ಎಂದು ಹೇಳಲಾಗಿದೆ.[20ಅ] ಕ್ರಿ. ಶ. 1538 ರ ಒಂದು ಶಾಸನದಲ್ಲಿ [21] ಒಬ್ಬ ಮಲ್ಲಣಾರಾಧ್ಯನ ಉಲ್ಲೇಖವಿದೆ. ಇವನೂ ಯಜುಃ ಶಾಖೆಯ ಕೋಟೀಶ್ವಾನಯದವನಾಗಿದ್ದು, ತಿಮ್ಮಣಾರಾಧ್ಯನ ಮಗನಾಗಿದ್ದಾನೆ. ಹೀಗಾಗಿ, ಈ ತಾಮ್ರ ಶಾಸನಗಳಲ್ಲಿರುವ ಮಲ್ಲಣಾರಾಧ್ಯನೂ, ಕ್ರಿ. ಶ. 1538ರ ಶಾಸನದ ಮಲ್ಲಣಾರಾಧ್ಯನೂ ಒಬ್ಬನೇ ಇರಬಹುದೇ ಎಂಬ ಅನುಮಾನ ಬರುತ್ತದೆ. ಈ ಶಾಸನಗಳ ಶಿಲ್ಪಿಯ ಹೆಸರು ಶಾಸನಾಚಾರ್ಯವರ್ಯನಾದ ನಾಗಿದೇವ. ಕ್ರಿ. ಶ. 1388ರ ಶಾಸನದಲ್ಲಿ ಮೊದಲಿಗೆ ಈ ನಾಗಿದೇವನ ಉಲ್ಲೇಖವಿದೆ.[22] ಹಾಗೂ ಕ್ರಿ. ಶ. 1397 ರ ಶಾಸನದಲ್ಲೂ ಇವನ ಉಲ್ಲೇಖವಿದೆ. [23] ಹಾಗೂ ಕ್ರಿ. ಶ. 1344 ರಲ್ಲೇ ಇದ್ದವನು ಕ್ರಿ. ಶ. 1397 ರವರೆಗೂ ಇದ್ದನೆಂದು ಹೇಳುವುದು ಸಾಧುವಾಗು

ವುದಿಲ್ಲ.[23 ಅ] ಅಂತೇ, ಕ್ರಿ. ಶ. 1346 ರಲ್ಲೇ ಚನ್ನಮಲ್ಲೋಜನ ಮಗ ಲಿಂಗೋಜ ಎಂಬುವವನಿರುವುದೂ ಕೂಡಾ ಕ್ರಿ. ಶ. 1344ರಲ್ಲಿ ನಾಗಿದೇವನ ಅಸ್ತಿತ್ವವನ್ನು ತಳ್ಳಿಹಾಕುತ್ತದೆ. [24]

ಹೀಗೆ, ಈ ತಾಮ್ರಶಾಸನಗಳಲ್ಲಿ ಚಾರಿತ್ರಿಕವಾಗಿರುವ ಒಂದೊಂದು ಅಂಶಗಳೂ ಶಿಲಾಶಾಸನಗಳ ಹಿನ್ನೆಲೆಯಲ್ಲಿ ಬೇರೆ ಬೇರೆ ಕಾಲವನ್ನು ಸೂಚಿಸುತ್ತಿದ್ದು, ಇವುಗಳ ಕಾಲವು ದೋಷಯುಕ್ತವಾಗಿರುವುದು ಕಂಡುಬರುತ್ತದೆ. ಬಿ. ಎ. ಸಾಲೆತೂರ್ ಅವರೂ, ಇವುಗಳನ್ನು ಕೂಟಶಾಸನವೆಂದು ಸಕಾರಣವಾಗಿ ಗುರುತಿಸಿದ್ದು, ಇದಕ್ಕೆ ಚಾರಿತ್ರಿಕ ಮಹತ್ವವಿಲ್ಲ ಎಂದು ಹೇಳಿದ್ದಾರೆ. [25] ರಾಜಮುದ್ರೆ, ಹಸ್ತಾಕ್ಷರ, ವರಾಹ ಮೊಹರು ಎಲ್ಲವೂ ಇದ್ದೂ ಚಾರಿತ್ರಿಕ ಅಂಶಗಳಿಂದ ಇವು ಕೂಟ ಶಾಸನವೆಂದು ಗುರುತಿಸಲ್ಪಟ್ಟಿ ರುವುದು ಗಮನಾರ್ಹವಾಗಿದೆ. ದಾನ ಪಡೆದ ವ್ಯಕ್ತಿಗಳ ಹೆಸರಿನಲ್ಲಿ ಈ ಎರಡು ತಾಮ್ರ ಶಾಸನಗಳಲ್ಲಿ ವ್ಯತ್ಯಾಸವಿಲ್ಲದಿದ್ದರೂ, ದಾನಪಡೆದ ವೃತ್ತಿಗಳಲ್ಲಿ ಎರಡು ಕಡೆ ವ್ಯತ್ಯಾಸವಿರುವುದು, ದಾನದ ವೃತ್ತಿಗಳ ವಿವರ ಪೂರ್ಣವಾಗಿ ಇಲ್ಲದಿರುವುದು -ಇಲ್ಲಿ ಮುಖ್ಯವಾದ ಅಂಶವಾಗಿದೆ. ಮೇಲೆ ಹೇಳಿದ ಇತರ ಕಾರಣಗಳಿಂದಲೂ ಇದನ್ನು ಕೃತಕ ಶಾಸನ ಎಂದು ಗುರುತಿಸಬಹುದಾಗಿದೆ. ಆದರೂ ನಾಚನಸೋಮನನ್ನು ಉಲ್ಲೇಖಿಸುವ ಈ ಮುಖ್ಯ ಶಾಸನಗಳ ಕಾಲವನ್ನು ಮತ್ತೆ ಪರಿಶೀಲಿಸಿ ತೀರ್ಮಾನಿಸಬೇಕಾಗಿದೆ.

ಮುಡಿಯನೂರು ಮತ್ತು ರಮಾಪುರದ ಈ ತಾಮ್ರಶಾಸನಗಳನ್ನು ಕಾಲದ ದೃಷ್ಟಿಯಿಂದ ವಿಶ್ಲೇಷಿಸುವುದಾದರೆ 'ಹಿಂದೆಯೇ ಹೇಳಿದಂತೆ,' ಶಿಲಾಶಾಸನಗಳಲ್ಲಿರುವಂತೆ ಸಂಗಮರ ಮೊದಲ ಶಾಸನ ಕ್ರಿ. ಶ. 1339ರದು[26], ಬುಕ್ಕನ ಮೊದಲ ಉಲ್ಲೇಖ ಕ್ರಿ. ಶ. 1341 ರಲ್ಲಿದೆ; ಬುಕ್ಕನು ರಾಜನಾಗಿರುವ ಉಲ್ಲೇಖ - 1356ರದು ತಾಮ್ರ ಶಾಸನೋಕ್ತ ಬಿರುದುಗಳ ಉಲ್ಲೇಖ - ಮೊದಲಿಗೆ, ಕ್ರಿ. ಶ. 1358 ಮತ್ತು 1354 ರಲ್ಲಿದೆ; ವಿರೂಪಾಕ್ಷನ ಒಪ್ಪ ಮತ್ತು ಸನ್ನಿಧಿಯ ಮೊದಲ ಉಲ್ಲೇಖ ಕ್ರಿ. ಶ. 1392 ರಲ್ಲಿ. ಹೀಗೆ ಶಿಲಾಶಾಸನಗಳ ಉಕ್ತಿಗಳ ಹಿನ್ನೆಲೆಯಲ್ಲಿ ಈ ತಾಮ್ರ ಶಾಸನಗಳು ಹೇಳುವ ಚಾರಿತ್ರಿಕ ಅಂಶಗಳು ಕ್ರಿ. ಶ. 1341-1392 ರ ನಡುವಿನದಾಗಿದ್ದು, ಈ ಎರಡೂ ತಾಮ್ರ ಶಾಸನಗಳ ಕಾಲವು ಆನಂತರದ್ದೆಂಬ ಅಭಿಪ್ರಾಯಕ್ಕೆ ಬರಬಹುದಾಗಿದೆ. ಆದರೆ, ಇದೂ ಪೂರ್ಣ ಸಮರ್ಪಕವಲ್ಲ. ಏಕೆಂದರೆ, ಇದು ಸಮಕಾಲೀನ ಶಿಲಾಶಾಸನವಾಗಿರದೆ, ನಾಚನಸೋಮನಿಗೆ ನೀಡಿದ ದಾನವನ್ನು 'ಪ್ರತಿ'ಮಾಡಿರುವುದು ಸ್ಪಷ್ಟವಾಗಿದೆ.

ಮುಡಿಯನೂರು ಶಾಸನದ ನಾಚನಸೋಮನೂ, ಹಿಂದೆ ಹೇಳಿದ ತುರುಮಿಳ ದಿನ್ನೆಯ ಶಿಲಾಶಾಸನದ ನಾಚನಸೋಮನೂ ಒಬ್ಬನೇ ಎಂದು ಗುರುತಿಸುವಾಗ, ತುರುಮಿಳದಿನ್ನೆಯ ಶಾಸನ ಸಂಪಾದಕರು, 'ಮುಡಿಯನೂರಿನ ಶಾಸನೋಕ್ತ ಒಂದನೇ ಬುಕ್ಕನು ತನ್ನ ಅಣ್ಣ ಹರಿಹರನೊಂದಿಗೆ ಆಳುತ್ತಿದ್ದನೆಂದು' ತಿಳಿಸಿ ಅದಕ್ಕೆ ಆಧಾರವನ್ನು ನೀಡಿದ್ದಾರೆ[28]; ಈ ಮೂಲಕ ಮುಡಿಯನೂರು ಶಾಸನದ ಕಾಲವನ್ನು ಕ್ರಿ. ಶ. 1344 ಎಂದು ಒಪ್ಪಿಕೊಂಡಿದ್ದಾರೆ. ಅಂತೇ, ಕ್ರಿ. ಶ. 1344 ಕಳೆದು 33 ವರ್ಷಗಳ ನಂತರ [29] ತುರುಮಿಳದಿನ್ನೆಯ ದಾನ ದೊರೆತಿರುವುದೆಂದು ಗುರುತಿಸಿ, ನಾಚನಸೋಮನು ಸುದೀರ್ಘಕಾಲದ ಬಾಳಿರಬೇಕು ಅಥವಾ ಚಿಕ್ಕವಯಸ್ಸಿನಲ್ಲೇ ಅವನಿಗೆ ರಾಜಮರ್ಯಾದೆ ದೊರೆತಿರಬೇಕೆಂದು ಹೇಳಿದ್ದಾರೆ. [30] ನಾಚನ ಸೋಮನ ಕಾಲವು ಎರಡನೇ ದೇವ ರಾಯನ ಕಾಲವೆಂದು ಇಲ್ಲಿ ನಿರ್ಣಯಿಸಿರುವುದರಿಂದ ಅವನ ಜೀವಿತಾವಧಿಯ ಬಗೆಗಿನ ಸಮಸ್ಯೆ ಉಳಿಯುವುದಿಲ್ಲ.

ಹಿಂದೆಯೇ ಹೇಳಿದಂತೆ ನಾಚನಸೋಮನ ಕಾಲವನ್ನು ಎರಡನೇ ದೇವರಾಯನ ಕಾಲವೆಂದು (1424-46) ತೀರ್ಮಾನಿಸಿರುವುದರಿಂದ, ಮುಡಿಯನೂರು ಮತ್ತು ಕೆಂಕೆರೆ ಹೋಬಳಿ ರಮಾಪುರದ ಶಾಸನಗಳು ನಾಚನಸೋಮ /ಎರಡನೇ ದೇವರಾಯನ ನಂತರದ ಕಾಲದ್ದೆಂಬುದು ತಿಳಿದುಬರುವ ವಿಷಯವಾಗಿದೆ. ಕ್ರಿ. ಶ. 1529ರ ತುರಿಮಿಳಿದಿನ್ನೆಯ ಶಾಸನವನ್ನು ಗಮನಿಸಿದರೆ, ಸುಮಾರು ನೂರು ವರ್ಷಗಳವರೆವಿಗೂ ನಾಚನ ಸೋಮನೂ, ಅವನು ಪಡೆದ ದಾನದ ನೆನಪೂ ಜನಮನದಲ್ಲಿ ಇತ್ತು. ಯಾರೋ ಈ ನೆನಪನ್ನೂ, ತುರಿಮಿಳದಿನ್ನೆಯ ದಾನ ಪ್ರಕರಣವನ್ನೂ ಬಳಸಿಕೊಂಡು ಕಾಲಾ ನಂತರದಲ್ಲಿ ಅವನ ಹೆಸರಿನ ದಾನಶಾಸನವನ್ನು ಪ್ರತಿಮಾಡಿರಬೇಕೆನಿಸುತ್ತದೆ. ನಾಚನನಿಗೆ ತುರುಮಿಳದಿನ್ನೆಯೊಂದಿಗೆ ಪೆಂಚಕಲದಿನ್ನೆಯೂ ದಾನವಾಗಿ ಬಂದದ್ದು (?) [31] ಅವನ ಹೆಸರಿನಲ್ಲಿ ಅದನ್ನು ಎರಡೂ ತಾಮ್ರಶಾಸನಗಳಲ್ಲಿ ಪ್ರತಿಮಾಡಿದ್ದಾರೆ. ಹೀಗೆ 'ಪ್ರತಿ' ಮಾಡುವಾಗ, ಈಗಾಗಲೇ ಪ್ರಚಲಿತದಲ್ಲಿದ್ದ ತಾಮ್ರ ಶಾಸನಗಳ ಒಕ್ಕಣೆ ಯನ್ನು ಬಳಸಿಕೊಂಡು ಪ್ರಾಚೀನತೆಗಾಗಿ ಬುಕ್ಕರಾಯನ ಹೆಸರನ್ನು ಸೇರಿಸಿದ್ದಾರೆ. ಇಲ್ಲಿ, ಹಿಂದೆ ಹೇಳಿದ ಕ್ರಿ. ಶ. 1538 ರ ಒಂದು ಶಿಲಾಶಾಸನದಲ್ಲಿ ಉಕ್ತವಾದ ಕೋಟೀಶಾನ್ವಯದ ಮಲ್ಲಣಾರಾಧ್ಯನೂ, ಈ ತಾಮ್ರ ಶಾಸನಗಳ ಮಲ್ಲಣಾರಾಧ್ಯನೂ ಒಬ್ಬನೇ ಎಂದು ತೀರ್ಮಾನಿಸಿದಲ್ಲಿ ತಪ್ಪಿಲ್ಲವೆನಿಸುತ್ತದೆ. ಕ್ರಿ. ಶ. 1529 ರ ಶಾಸನವು ನಾಚನಸೋಮನ ನೆನಪು ಉಳಿದಿದ್ದನ್ನು ಸೂಚಿಸುತ್ತಿರುವುದರಿಂದ ಮತ್ತು ಅದೇ ಸುಮಾರಿನಲ್ಲಿ ಮಲ್ಲಣಾರಾಧ್ಯನ ಉಲ್ಲೇಖವೂ ಇರುವುದರಿಂದ, ಮುಡಿಯನೂರು ಮತ್ತು ರಮಾಪುರದ ತಾಮ್ರಶಾಸನಗಳನ್ನು ಪ್ರತಿಮಾಡಿದ ಕಾಲವು ಸು. 1538ರ ಆಸುಪಾಸಿನದೆಂದು ಹೇಳಬಹುದಾಗಿದೆ.

ಅಡಿಟಿಪ್ಪಣಿಗಳು

1. *ARSIE* 1938 -39 ಸಂಖ್ಯೆ -ಕ್ರಮವಾಗಿ 422 ಮತ್ತು 425
2. S. S. Ramachandra Murthy - ' The two inscriptions from Judumaladinne ' - *Epigraphia Indica*, Vol - 38, Pt-6, Jan 1969, p. 50-54 (A & B)
3. *Inscriptions of Andhra Pradesh, Cuddapah District Pt- II* (Cuddapah Taluk) - No. 27, 1978. ಈಗ ಈ ಹೊಸ್ತಿಲಿನ ಭಾಗವನ್ನು ತೆಗೆದು ಪಕ್ಕಕ್ಕಿಟ್ಟಿದ್ದಾರೆ ಎಂದು ತಿಳಿದುಬರುತ್ತದೆ. ಮೇಲೆ ಹೇಳಿದ ಕೃತಿಯಲ್ಲಿರುವ ಒಂದು ಶಾಸನವೇ (A) ಇಲ್ಲೂ ಪ್ರಕಟವಾಗಿದೆ.
4. ಆಂಜನೇಯ ದೇವರ ಸೇವೆಯನ್ನು ಹೇಳುವ ಶಾಸನದ ಭಾಗವು 'Post-Script' ಎಂದು ಸಂಪಾದಕರು ಹೇಳಿದ್ದಾರೆ. (ಅದೇ)
5. *Epigraphia India* - Op ci. p-50
6. *Ibid*, p-51
7. *ARSIE* 1925-26, C. 399 (Patt ur), Rajampet - TQ, Cuddapah District - ಇದರಲ್ಲಿ ಕಾಲವನ್ನು -ಶಕ. 1299 (ಕ್ರಿ. ಶ. 1377) ಎಂದು ನೀಡಿದ್ದರೂ, ರಾಜನ ಬಗ್ಗೆ ಹೇಳುವಾಗ 'ಪ್ರೌಢದೇವರಾಯ' ಎಂದು ಹೇಳಿದೆ. ಇದು ಅಪರೂಪದ ಉಲ್ಲೇಖ; ಹಾಗೇ ಕೆಲವೊಮ್ಮೆ ಮಲ್ಲಿಕಾರ್ಜುನರಾಯನಿಗೂ ಈ ರೀತಿಯ ಉಲ್ಲೇಖ ದೊರೆಯಬಹುದಾದರೂ, ಹೆಚ್ಚಾಗಿ ಎರಡನೇ ದೇವರಾಯನಿಗೇ ಹೇಳುವ ಹೆಸರಾಗಿದೆ.
8. *ಎಕ.* X ಮುಳಬಾಗಲು. 158 (ಮಡಿಯನೂರು)- ಕ್ರಿ. ಶ. 1344 (ರೈಸ್)
9. *ಅದೇ.* ಗೋರಿಬಿದನೂರು. 46 (ರಮಾಪುರ) -ಕ್ರಿ. ಶ. 1344 (ರೈಸ್)

   ಬಾ. ರಾ. ಗೋಪಾಲ್ ಅವರು ಈ ಶಾಸನವನ್ನು ಗೌರಿಬಿದನೂರು ತಾಲೂಕಿನ ಬೊಮ್ಮಸಂದ್ರದಲ್ಲಿ ಸೇರಿಸಿದ್ದಾರೆ.(*Vijayanagar Inscriptions*, Vo1. KN. 1308)

9ಅ. ಹೆಚ್. ಎಂ. ನಾಗರಾಜು ಅವರು, ತಮ್ಮ ಕೃತಿ *Devaraya II and his Times* ನಲ್ಲಿ (178) " A Copper plate grant of Bukkayaya II shows that Bukka donated a village to Nachana, the poet who bore the title Sarvajna" ಎಂದು ಜಿ. ವಿ. ಸೀತಾಪತಿಯವರ ಕೃತಿಯೊಂದನ್ನು (ಪು. 17) ಉಲ್ಲೇಖಿಸಿದ್ದಾರೆ.

   ಈ ಬಗ್ಗೆ ಹೆಚ್ಚಿನ ವಿವರ ದೊರೆತಲ್ಲಿ ಪರಾಮರ್ಶಿಸಬಹುದಾಗಿದೆ.

9ಆ. 'ಮುಡಿಯನೂರಿನ ಶಾಸನದಲ್ಲಿ ನಾಚನನ ಮಗ ಸೋಮ ಎಂದೂ, ರಮಾಪುರದ ಶಾಸನದಲ್ಲಿ ನಾಚನಸೋಮ ಎಂದೂ ಇದೆ' ಎಂದು ಸಾತೆತೂರ್ ಅವರು ಹೇಳಿದ್ದಾರೆ. (*Social and Political life under Vijayanagar* - Vlo. I. P. 97) ;ಆದರೆ ಎರಡೂ ಶಾಸನಗಳಲ್ಲಿರುವ ಪಾಠ ಒಂದೇ.

9೩. 'ಅಭ್ರ'ಎಂದರೆ, ಆಕಾಶ = (1). ಇದಕ್ಕೆ 'ಮೋಡ'ಎಂಬ ಅರ್ಥವಿದೆಯಾದರೂ, ಮೋಡವು ಎಣಿಕೆಗೆ ನಿಲುಕದ್ದಾದ್ದರಿಂದ, ಸಂಖ್ಯಾವಾಚಾಕವಾದಾಗ 'ಅಭ್ರ'ಎಂದರೆ 'ಆಕಾಶ'ವೆಂದೇ ಪರಿಗಣಿಸಬೇಕಾಗುತ್ತದೆ.

10. ವೇಟೂರಿ ಪ್ರಭಾಕರ ಶಾಸ್ತ್ರಿಗಳು ನಿರ್ಣಯಿಸಿರುವ 'ರಸಭೂ....' ಬದಲು 'ರಸಸ್ತು ಋತು)....'ಪಾಠವನ್ನು............ ಒಪ್ಪಿ ಇದರ ಶಕವರ್ಷವನ್ನು 1216 ಬದಲು 1266-(=ಕ್ರಿ. ಶ. 1344)ಎಂದು ತಿದ್ದಿಕೊಂಡಿರುವುದಾಗಿ ಆರುದ್ರ ಅವರು ಹೇಳಿದ್ದಾರೆ. (*ಸಮಗ್ರ ಆಂಧ್ರ ಸಾಹಿತ್ಯಂ*, ಸಂ. III, ಪು. 147)

11. ಒಂದೇ ತೇದಿ ವಿವರವಿದ್ದರೂ, ರೈಸ್ ಅವರು, ರಮಾಪುರದ ಶಾಸನವನ್ನು ಶಕ 1292 (=ಕ್ರಿ. ಶ. 1370)ಎಂದು ತಿದ್ದಿಕೊಂಡಿದ್ದಾರೆ. ಬುಕ್ಕನ ಕಾಲದಲ್ಲಿ 'ತಾರಣ 'ಸಂವತ್ಸರ ಬರುವುದಿಲ್ಲ. ಹೀಗಾಗಿ ಸಂವತ್ಸರವನ್ನು 'ತಾರಣ'ದ ಬದಲು 'ಸಾಧಾರಣ'ಕ್ಕೆ ಹೊಂದಿಸಿದ್ದಾರೆ (*ಎಕ* X. pf. 219. ಇದರ ತೇದಿ ವಿವರಗಳು, ಕ್ರಿ. ಶ. 1370, ಮಾರ್ಚ್-6, ಬುಧವಾರಕ್ಕೆ ಹೊಂದುತ್ತದೆ

12. P. Chenchaia and Raja M. Bhujanagarra Buhaddur - Telugu Literature, p. 93, 591. ರಾವ್ ಬಹದ್ದೂರ್ ವೀರೇಶಲಿಂಗಂ ಪಂತುಲು ಅವರ ಪ್ರಕಾರ, ಇವನು ಎರ್ರಾಪ್ರಗಡನಿಗಿಂತ 20-30 ವರ್ಷಗಳ ನಂತರದಲ್ಲಿದ್ದನು. (QTD ARSIE 1907, p. 68, para 53)

13. *ಎಕ.* VIII (ಪ), ಮಂಡ್ಯ 19 (ಬೀಚೇನ ಹಳ್ಳಿ) - ಕ್ರಿ. ಶ. 1341)

14. *ಅದೇ.* ಮದ್ದೂರು 93 (ಅರುವನ ಹಳ್ಳಿ)- ಕ್ರಿ. ಶ. 1358

15. ಅ. ಕೆಲವು ಕೂಟ ತಾಮ್ರ ಶಾಸನಗಳನ್ನು ಬಿಟ್ಟರೆ, ಯಾವುದೇ ಒಂದು ಶಿಲಾಶಾಸನವೂ 1336ರಲ್ಲಿ ಸಂಗಮರ ರಾಜ್ಯ ಸ್ಥಾಪನೆಯಾಯಿತೆಂದು ಹೇಳುವುದಿಲ್ಲ.

15. *MAR* 1925 (Goribidanur Tq). 84 (Hunasanahalli) - 1354 A. D.

16. *ಎಕ XII* (ಪ) ಕೊಪ್ಪ. 31 (ಹರಿಹರಪುರ) - ಕ್ರಿ. ಶ. 1392

17. P. B. Desai, Srinivasa Ritti and others- *History of Karnataka*, p. 341.

18. ಅಪರ್ಣ, ಕೂ. ಸ. 'ಸಂಗಮ ಅರಸರ ಶಾಸನೋಕ್ತ ಪಯಣ' (ಸಂ)ಆರ್. ಗೋಪಾಲ್ ಮತ್ತಿತರರು, *ವಿಜಯನಗರ ಅಧ್ಯಯನ*, ಸಂ. 12, ಮೈಸೂರು, 2007, (ಪು. 99-113)

19 *ಕವಿಶಾಸಂ.* III (ಹೊಸಪೇಟೆ), 251 (ಹಂಪೆ) - ಕ್ರಿ.ಶ.1366 ಈ ದಾನವು ಹಂಪೆಯ ವಿರೂಪಾಕ್ಷನಿಗಿಂತಲೂ, ಶಾಸನಕ್ಕೆ ಮತ್ತು ಅರಮನೆಗೆ ಹತ್ತಿರದಲ್ಲಿರುವ ಪ್ರಸನ್ನ ನಿರೂಪಾಕ್ಷನಿಗೆ ನೀಡಿದ್ದಿರಬೇಕೆನಿಸುತ್ತದೆ.

20. *ARSIE* 1940 - 41, A. 22, 23 Dharwad and 1924-25, A 15, Dharwar-1379 A. D.

20. ಅ. *ಎಕ* XII, ತಿಪಟೂರು. 9 -ಕ್ರಿ. ಶ. 1388. 'ಈ ಶಾಸನದಲ್ಲಿ ಶಾಸನಾಚಾರ್ಯ ನಾಗಿದೇವ ಎಂದಿದ್ದರೆ, ಮುಡಿಯನೂರು ಶಾಸನದಲ್ಲಿ "ಶಾಸನಾಚಾರ್ಯನ ಮಗ ನಾಗಿದೇವ ಎಂದಿದೆ" ಎಂದು ಸಾಲೆತೂರ್ ಅವರು ಹೇಳಿದ್ದಾರೆ. *ಪೂರ್ವೋಕ್ತ*. ಪು. 96. ಆದರೆ ಎರಡರಲ್ಲೂ ಒಂದೇ ಪಾಠವಿದೆ.

21. *ಎಕ XI*. ದಾವಣಗೆರೆ. 27 (ಹರಿಹರ) - ಕ್ರಿ. ಶ. 1538.

22. *ಎಕ XII*. ತಿಪಟೂರು. 9, ಕ್ರಿ. ಶ. 1388.

23. *ಎಕ V (ಪ)* - ತಿ. ನ. ಪುರ. 256 (ಹೆಮ್ಮಿಗೆ)- ಕ್ರಿ. ಶ. 1397

23. ಅ. ಕೆ. ಎಸ್. ಕುಮಾರಸ್ವಾಮಿ ಅವರು, *ಪ್ರಾಚೀನ ಕರ್ನಾಟಕದ ಶಿಲ್ಪಾಚಾರಿಯರು* ಎಂಬ ತಮ್ಮ ಕೃತಿಯಲ್ಲಿ ಕ್ರಿ. ಶ. 1386 -1645ರ ವರೆಗಿನ ಶಿಲ್ಪಾಚಾರಿಯರ ವಿವರಗಳನ್ನು ನೀಡಿದ್ದರೂ (ಪು. 61-65) ಈ ನಾಗಿದೇವನ ಬಗ್ಗೆ ಏನೋ ಉಲ್ಲೇಖಿಸಿಲ್ಲ.

24. *ಎಕ XI (ಪ)*, ಶೃಂಗೇರಿ. 1 (ಶೃಂಗೇರಿ) ಕ್ರಿ. ಶ. 1346

25. B. A. Saletore, *Op.cit*, P-96

26. MAR 1923 (Sagar Tq), 78 (Kugve) - 1339 A. D.

27. ಇಲ್ಲ

28. *ಎಕ IX* ಬೆಂಗಳೂರು. 59 ಮತ್ತು *Further Sources of Vijayanagar History* - Vol. I. P. 77-78. ಆದರೆ, ಈ ಕಾಲಕ್ಕೆ ಅವರು ರಾಜರಾಗಿರಲಿಲ್ಲ.

29. ಒಂದನೇ ದೇವರಾಯನ ಪ್ರಾಚೀನ ಕಾಲ ಎಂದರೆ, ಕ್ರಿ. ಶ. 1377 ಎಂದು ಇಟ್ಟುಕೊಂಡು, ಅವನು ತಂದೆ ಎರಡನೇ ಹರಿಹರನ ಕಾಲದಲ್ಲೇ ಆಳುತ್ತಿದ್ದ ಎಂದು ಸಂಪಾದಕರು ಹೇಳಿದ್ದಾರೆ (*Epigraphia Indica, Op*.cit, p. 51)

30. *Epigraphia Indica, Op.cit*, p. 51

31. ಪೆಂಚಕಲದಿನ್ನೆಯ ನಾಚನಸೋಮನಿಗೆ ದಾನವಾಗಿ ಬಂದಿತ್ತೇ ಎಂಬುದನ್ನೂ ಕೂಡಾ ಒಮ್ಮೆ ಚಿಂತಿಸುವಂತಾಗಿದೆ. ನಾಚನಸೋಮನು ಎರಡನೇ ದೇವರಾಯನ ಕಾಲದಲ್ಲಿದ್ದನೆಂದು ಇಲ್ಲಿ ತೀರ್ಮಾನವಾಗಿರುವುದರಿಂದ, ಒಂದನೇ ಬುಕ್ಕನು ದಾನಕೊಟ್ಟಿರುವುದಿಲ್ಲ; ಹಾಗೇ 'ಬುಕ್ಕರಾಯಪುರ'ಮಾಡಿದ ಎಂಬುದನ್ನೂ ತಕ್ಷಣಕ್ಕೆ ನಂಬಲಾಗುವುದಿಲ್ಲ. ಕೋಲಾರ ಜಿಲ್ಲೆಯ ಸ್ಥಳಗಳನ್ನು ಗಮನಿಸಿದರೆ, 'ಪೆಂಚಕಲದಿನ್ನೆ'ಯಾಗಲೀ, 'ಬುಕ್ಕರಾಯಪುರ'ವಾಗಲೀ ದೊರೆತಿಲ್ಲ; ಬದಲಿಗೆ, ಚಿಂತಾಮಣಿ ತಾ.ನಲ್ಲಿ 'ಬುಕ್ಕನಹಳ್ಳಿ'ಯೂ, ಮುಳಬಾಗಲು ತಾಲೂಕಿನಲ್ಲಿ 'ದೇವರಾಯ ಸಮುದ್ರ'ವೂ ಇದೆ. ಈ ಸ್ಥಳಗಳು ಆಂಧ್ರ ಪ್ರದೇಶದಲ್ಲೇನಾದರೂ ಇರಬಹುದು. ಹೀಗಾಗಿ, ಈ ಬಗ್ಗೆ ಇನ್ನೂ ಹುಡುಕಬೇಕಾಗಿದೆ.

ಗ್ರಂಥ ಋಣ

ಮೇವುಂಡಿ ಮಲ್ಲಾರಿ - *ಕನ್ನಡನಾಡಿನ ಶಾಸನಕವಿಗಳು*, ಧಾರವಾಡ, 1974

ಕೆ. ಎಸ್. ಕುಮಾರಸ್ವಾಮಿ - *ಪ್ರಾಚೀನ ಕರ್ನಾಟಕದ ಶಿಲ್ಪಾಚಾರಿಯರು*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು 1996

ಆರುದ್ರ - *ಸಮಗ್ರ ಆಂಧ್ರ ಸಾಹಿತ್ಯಂ* (ತೆಲುಗು) ಸಂ. III, ಪ್ರಜಾಶಕ್ತಿ ಬುಕ್ ಹೌಸ್, ವಿಜಯವಾಡ, 1990.

Sircar, D.C. - *Indian Epigraphy* - Motilal Banarasidas, Delhi, 1996.

Saletore, B. A. - *Social and Political life under Vijayanagar*, Vol I,B. G. Paul & Co Publishers, Madras, 1934.

Chenchaiah P. & Raja M Bhujanga Rao Bahadur, - *Telugu Literature*, Calcutta

Kalmankar (Ed) - Vijayanagra Six Centenary Commemoration Volume, Dharwar, 1938

Desai, P. B, Srinivasa Ritti etc. History of Karnataka, Dharwar, 1981

Dixit, G. S- Early Vijayanagara : studies in its History and Culture, Bangalore, 1988.

Nagaraju, H. M. - Devaraya II and his Times, Mysore, 1991

Gopal, B. R. (Ed) - *Vijayanagara Inscriptions*, Vol III

ARSIE - 1925 - 26, 1907

Epigraphia Indica, Vol. 38, Pt VI, Jan. 1969

Inscriptions of Andhra Pradesh, Cuddaph District, Pt II, 1978

Epigraphia Carnatica volumes

Indian Ephimeries - Swami Kannu pillai

District Census Handbook 1971, Kolar

೩೭. ವಿಜಯನಗರ ಹಾಗೂ ಕೊಲ್ಹಾರ ದೇಸಾಯಿಗಳ ಸಾಹಿತ್ಯ ಸಂಬಂಧ

ಡಾ. ಕೆ. ರವೀಂದ್ರನಾಥ

ಕನ್ನಡ ಸಾಹಿತ್ಯದಲ್ಲಿ ಕವಿಗಳ ಹೆಸರನ್ನು ಕಾವ್ಯದ ಶಿರೋನಾಮೆಯನ್ನಾಗಿರಿಸಿಕೊಂಡು ಸೃಷ್ಟಿಯಾದ ಕೃತಿಗಳಲ್ಲಿ ಪಂಪ ಕವಿಬರೆದ ಪಂಪ ಭಾರತ, ಕುಮಾರವ್ಯಾಸ ಕವಿ ಬರೆದ ಕುಮಾರವ್ಯಾಸ ಭಾರತಗಳಂಥ ಹಲವು ಕೃತಿಗಳು ಪ್ರಮುಖವಾಗಿವೆ. ಹಾಗೆಯೇ ಕಾವ್ಯದ ನಾಯಕರೆನಿಸಿದ ಅರಸರ ಹೆಸರನ್ನು ಶಿರೋನಾಮೆಯನ್ನಾಗಿರಿಸಿಕೊಂಡು ಬರೆದ ಭರತೇಶ ವೈಭವ, ಹರಿಶ್ಚಂದ್ರ ಕಾವ್ಯಗಳಂಥ ಕೃತಿಗಳೂ ಇವೆ. ಈ ಎರಡೂ ಕಾವ್ಯ ಮಾರ್ಗಗಳಲ್ಲಿ ಗಮನಿಸಬೇಕಾದ ಅಂಶವೆಂದರೆ ಆಶ್ರಯದಾತರನ್ನು ಪೌರಾಣಿಕ ವ್ಯಕ್ತಿ ಯೊಂದಿಗೆ ಸಮೀಕರಿಸಿ ಹೇಳುವುದು ಒಂದೆಡೆಯಾದರೆ, ಇನ್ನೊಂದೆಡೆ ನೇರವಾಗಿ ಅರಸನ ವ್ಯಕ್ತಿತ್ವ ಪ್ರಕಟಪಡಿಸುವುದು. ಒಟ್ಟಿನಲ್ಲಿ ಅರಸಕೇಂದ್ರಿತವಾದ ಆಶ್ರಿತ ಕಾವ್ಯಗಳು ಸಾಕಷ್ಟು ರಚನೆಯಾಗಿವೆ. ಇದಕ್ಕಿಂತ ಭಿನ್ನವಾಗಿ ತಮ್ಮ ಕೃತಿಗಳಿಗೆ ಅರಸನ ಹೆಸರನ್ನು ಶಿರೋನಾಮೆ ಯಾಗಿ ಬಳಸಿಕೊಂಡಿದ್ದರೂ ಕಾವ್ಯದ ಒಳಗೆ ಅರಸನ ಹೊಗಳಿಕೆಗೆ ಕಿಂಚಿತ್ತೂ ಅವಕಾಶ ಕೊಡದೆ, ಆತನ ರಾಜಭಕ್ತಿಗೆ ಬೆಂಬಲವಾಗಿ ನಿಂತ ಆ ಪರಿಸರದ ಐತಿಹಾಸಿಕ ವ್ಯಕ್ತಿಗಳ ಚರಿತ್ರೆಯನ್ನು ನಿರೂಪಿಸುವ ಕಾವ್ಯ ಪರಂಪರೆಗೆ ಹೊಸ ಭೂಮಿಕೆಯನ್ನು ಹಾಕಿಕೊಟ್ಟ ಆದ್ಯಗೌರವ "ವಿಜಯನಗರಕ್ಕೆ"ಸಲ್ಲುತ್ತದೆ. ಈ ಹಿನ್ನೆಲೆಯಲ್ಲಿ ಅದ್ರೀಶಕವಿಯ 'ಪ್ರೌಢರಾಯನಕಾವ್ಯ' ವಿಜಯನಗರ ಅರಸ ಸಂಗಮ ವಂಶದ ಪ್ರೌಢರಾಯನ ಹೆಸರಿನಲ್ಲಿ ರಚನೆಗೊಂಡ ವಿಶಿಷ್ಟ ಕೃತಿ. ಸಾಮಾಜಿಕ, ಐತಿಹಾಸಿಕ ಹಾಗೂ ಧಾರ್ಮಿಕ ತತ್ವಾಚಾರಗಳನ್ನು ನಿರೂಪಿಸುವ ಈ ಕೃತಿ ಪುರಾತನ-ನೂತನ ಶರಣಚರಿತೆ.

ಅದ್ರೀಶ ಕವಿ ಬಿಜಾಪುರ ಜಿಲ್ಲೆ ಬಾಗೇವಾಡಿ ತಾಲೂಕಿನ ಕೊಲ್ಹಾರದವನು. ಚಿಕ್ಕಗರಸಂಗಿ, ಹಿರೇಗರಸಂಗಿ, ರೋಣಿಹಾಳ, ಹಳ್ಳದ ಗೆಣ್ಣೂರು, ಮುತ್ತಲದನ್ನಿ, ಹಂಗರಗಿ - ಈ ಏಳು ಹಳ್ಳಿಗಳನ್ನೊಳಗೊಂಡ ಕೊಲ್ಹಾರ ಪ್ರಾಂತದ ದೇಸಾಯಿ ಯಾಗಿದ್ದನು. ಈ ದೇಸಾಯಿ ಮನೆತನಕ್ಕೂ ಹಾಗೂ ವಿಜಯನಗರಕ್ಕೂ ಇರಬಹುದಾದ ಸಾಹಿತ್ಯ ಸಂಬಂಧಗಳ ಕೂಡುಕೊಂಡಿಗಳನ್ನು ವಿದ್ವಾಂಸರ ಗಮನಕ್ಕೆ ತರುವುದು ಈ ಪ್ರಬಂಧದ ಉದ್ದೇಶವಾಗಿದೆ. ಈಗಾಗಲೇ ತಿಳಿದಿರುವಂತೆ ಪ್ರೌಢರಾಯನ ಕಾವ್ಯದ ಸೃಷ್ಟಿಗೆ ಅರಸರ ಆಸ್ಥಾನದಲ್ಲಿ ನಡೆದ ಮುಕುಂದಪೆದ್ದಿಗಳಿಗೂ ಹಾಗೂ ಚಾಮರಸನಿಗೂ ನಡೆದ ವಾದ ವಿವಾದಗಳು ಕಾರಣ. ಸತ್ತವರ ಕಥೆಯಲ್ಲದ ಪ್ರಭುಲಿಂಗಲೀಲೆ ಬರೆದು ತರುವುದಾಗಿ ಹೇಳಿದ ಚಾಮರಸನ ಆಗಮನದ ಅವಧಿಯಲ್ಲಿ ಜಕ್ಕಣಾರ್ಯ

ಪ್ರೌಢರಾಯನಿಗೆ ಹೇಳಿದ ಶಿವಶರಣರ ಕಥೆಯನ್ನು ಬರೆದೆನೆಂಬುದಾಗಿ ಅದ್ರೀಶಕವಿ ಹೇಳಿಕೊಂಡಿದ್ದಾನೆ. ಈ ಕಾವ್ಯದ ರಚನಾ ಸತ್ಯಾಸತ್ಯತೆಯೇನೆ ಇರಲಿ, ಪ್ರೌಢರಾಯಗೂ -ಅದ್ರಿಶಕವಿಗೂ ಇರುವ ಸಂಬಂಧಗಳ ಐತಿಹಾಸಿಕತೆ ಮುಖ್ಯವಾಗಿದೆ.

ಅದ್ರೀಶಕವಿ ತನ್ನ ಕೃತಿ ೧ನೇ ಸಂಧಿ ೨೫ನೇ ಪದ್ಯದಲ್ಲಿ
ವರಮಳೆಯ ಮಲ್ಲೇಶನೂರ ಶಿಷ್ಯ ತೊರೆಸಾಲ
ಪರಗಣೆಯ ಕೋಲಾರಪುರಕ್ಕೆ ದೇಸಾಯಿ ನಾ
ಡೆರೆಯನಹ ಕರಿಯಕೂಲ ಅಕ್ರಗೃಹವೆಂದೆನಿಪ ಹರಭಕ್ತ ಶಂಕರನಸದ್
ವರಪುತ್ರನಣ್ಣೇಂದ್ರನಾತ್ಮಜನು ಅದೃಶ್ಯ
ವಿರಚಿಸಿದ ಗುರುಬಲದಿ ಪ್ರೌಢರಾಯನ ಕಾವ್ಯ
ಎರೆ ತಪ್ಪುತಿದ್ದುವುದು ನಿಮ್ಮ ಕಿಂಕರನೆಂದು ಶಿವಭಕ್ತರೊಲಿದು ಬೇಗ||

(೧-೨೫)

ಈ ಪದ್ಯದಿಂದ ಮಳೆಯ ಮಲ್ಲೇಶನ ಶಿಷ್ಯ, ಹೊಳೆಸಾಲಿನ ಪರಗಣೆ ಕೊಲ್ಹಾರದ ದೇಸಾಯಿ ಗಾಣಿಗೇರ ಕುಲದ ಕಟ್ಟಿಮನಿತನದ ಹರಭಕ್ತ ಶಂಕರಪುರನ ಮೊಮ್ಮಗ, ಅಣ್ಣೇಂದ್ರನ ಮಗ ಅದ್ರೀಶಕವಿ. ಹೀಗಾಗಿ ಅದ್ರೀಶಕವಿಗಿಂತಲೂ ಮೊದಲು ದೇಸಗತಿ ಮನೆತನ ಇವರದಾಗಿತ್ತು ಎಂಬುದು ಇಲ್ಲಿ ಗಮನಿಸಬೇಕಾದ ಸಂಗತಿ.ಇನ್ನು ಅದ್ರೀಶಕವಿ ಯಿಂದಲೇ ದೇಸಗತಿ ಆರಂಭವಾಯಿತೆಂಬ ಜನವದಂತಿಯ ಕಥೆಯೊಂದನ್ನು ಸಂ.ಶಿ. ಭೂಸನೂರಮಠರು ಕೃತಿಯ ಪ್ರಸ್ತಾವನೆಯಲ್ಲಿ ಹೀಗೆ ಹೇಳಿದ್ದಾರೆ.

“ಕೊಲ್ಹಾರದಿಂದ ೪೫ ಕಿ.ಮೀ. ದೂರದಲ್ಲಿರುವ ನಾಲತ್ವಾಡ ಗ್ರಾಮದಲ್ಲಿ ಒಂದು ಗಾಣಿಗರ ಮನೆತನವಿತ್ತು. ಊರಗೌಡ ಒಮ್ಮೆ ಗಾಣಿಗನಿಗೆ ಕುಸಬೆಕೊಟ್ಟ ದಿನವೇ ಎಣ್ಣೆ ತೆಗೆದುಕೊಡಲು ಹೇಳಿದನಂತೆ. ಇದನ್ನು ನಿರಾಕರಿಸಿದ್ದರಿಂದ ಗಾಣ ಮತ್ತು ಎತ್ತುಗಳನ್ನು ವಶಪಡಿಸಿಕೊಂಡು ಊರಿಂದ ಹೊರಹಾಕಿದನಂತೆ. ಅಲ್ಲಿಂದ ವಲಸೆಬಂದ ಗಾಣಿಗನು ಭೋಜನಾಯಕನ ಒಡೆತನದಲ್ಲಿದ್ದ ಕೊಲ್ಹಾರದಲ್ಲಿ ನೆಲೆಸಿದನಂತೆ. ಒಮ್ಮೆ ಭೋಜನಾಯಕನಿಗೂ ಪ್ರೌಢರಾಯನಿಗೂ ಯುದ್ಧವಾಗಿ ತಲೆತಪ್ಪಿಸಿ ಕೊಂಡ ಭೋಜನಾಯಕನನ್ನು ಸೆರೆಹಿಡಿಯಲು ಕೊಲ್ಹಾರಕ್ಕೆ ಪ್ರೌಢರಾಯನ ಸೈನ್ಯ ಮುತ್ತಿಗೆ ಹಾಕಿತಂತೆ. ಊರ ಹೊರಗೆ ಇದ್ದ ಗಾಣಿಗನೇ ವೇಷಧಾರಿ ಭೋಜನಾಯಕನೆಂದು ಭಾವಿಸಿ ಗಾಣಿಗನನ್ನು ಕೊಂದರಂತೆ. ಗಂಡನ ಮರಣದಿಂದ ರೋದಿಸುತ್ತಿದ್ದ ಆತನ ಹೆಂಡತಿಗೆ ಪ್ರೌಢರಾಯ ಸಾಂತ್ವನ ಹೇಳಿ ಗರ್ಭಿಣಿಯಾಗಿದ್ದ ನಿನ್ನ ಉದರದಲ್ಲಿ ಗಂಡು ಮಗು ಜನಿಸಿದರೆ ಕೊಲ್ಹಾರದ ದೇಸಗತಿಯನ್ನು ಆತನಿಗೆ ವಹಿಸಿಕೊಡುವುದಾಗಿ ‘ಸನದು’ ಬರೆದು ಕೊಟ್ಟನಂತೆ. ಮುಂದೆ ಆ ತಾಯಿ ಅದೃಶ್ಯನಿಗೆ ಜನ್ಮ ನೀಡಿದಳಂತೆ. ರಾಜನು ಆತನಿಗೆ ದೇಸಗತಿಯನ್ನು ದಯಪಾಲಿಸಿದನೆಂದು ತಿಳಿದು ಬರುತ್ತದೆ. ಈ ಕಥೆಗೆ ಪುಷ್ಟಿ ನೀಡುವಂತೆ

ಕೊಲ್ಹಾರ ಗ್ರಾಮದ ಗೌಡರೇ ಪಾಳೆಯ ರಿಜಿಸ್ಟರ್‌ದಲ್ಲಿಯ ವಂಶಾವಳಿ ಅದೃಶ್ಯಪ್ಪ ಜಹಗೀರದಿಂದಲೇ ಆರಂಭವಾಗಿದೆ. ಆದರೆ ಕವಿ ಉಲ್ಲೇಖಿತ ಪದ್ಯದಿಂದ ದೇಸಗತಿಯ ಮನೆತನದ ಮೂಲಪರುಷ ಶಂಕರಪ್ಪ ಎಂದಿರುವುದರಿಂದ ಈ ಜನಜನಿತ ಕಥೆಗೆ ಐತಿಹಾಸಿಕ ಮನ್ನಣೆ ದೊರೆಯುವುದಿಲ್ಲ. ಈ ಕಾರಣದಿಂದ ಈ ಮೇಲಿನ ಉಲ್ಲೇಖಗಳು ವಿಜನಯಗರ ಹಾಗೂ ಕೊಲ್ಹಾರ ದೇಸಗತಿಯ ಸಾಹಿತ್ಯಿಕ ಸಂಬಂಧವನ್ನು ನಿರೂಪಿಸಲು ಸಾಧ್ಯವಾಗುವುದಿಲ್ಲ. ಈ ಸಂಬಂಧವನ್ನು ಗಟ್ಟಿಗೊಳಿಸಲು ನಾವು ಬೇರೆ ಮೂಲದ ಆಕರಗಳನ್ನೇ ಹುಡುಕಬೇಕು. ಆಗ ನಮ್ಮ ಅಧ್ಯಯನಕ್ಕೆ ಬರುವ ಆಕರಗಳೆಂದರೆ ಸಜ್ಜೆಯ ಸಿದ್ಧಲಿಂಗಕವಿಯ ಮಳೆಯರಾಜ ಚಾರಿತ್ರ್ಯ ಮತ್ತು ಹಂಪೆಯ ಹಿರೇಮಠಾಧ್ಯಕ್ಷ ವಿರೂಪಾಕ್ಷಪಂಡಿನ ಚನ್ನಬಸವಪುರಾಣಗಳು. ಹಂಪೆಯ ಹಿರೇಮಠಾಧ್ಯಕ್ಷ ವಿರೂಪಾಕ್ಷ ಪಂಡಿತ ಮಲೇಯ ಮಲ್ಲೇಶ ಸಂಪ್ರದಾಯಕ್ಕೆ ಸೇರಿದ ಸಿದ್ಧವೀರೇಶನ ಶಿಷ್ಯನೆಂಬುದು ಚೆನ್ನಬಸವ ಪುರಾಣದಲ್ಲಿ ಬರುವ

ಪರಮಶಾಂತಿಯ ಮನೆ ಸದಯವೇ ಪರಿಕರ ಮಾಗ
ವಿರದೆ ಶಿವಲಿಂಗಚಿಂತನೆಯೇ ಮನೆವಾರ್ತೆ ಮ
ತ್ತಿರದೆ ಸತಿಯೆ ಮೋಕ್ಷಲಕ್ಷ್ಮೀ ಮಕ್ಕಳೇ ಶಿಷ್ಯರಾಗಿ ಸಂಸಾರಿಯಂತೆ|
ಧರಣಿಯೊಳೆಗೆಸೆದ ವಿದ್ಯಾನಗರಿಯೋಳ್ ಮೆರೆವ
ಹಿರಿಯ ಮಠದೊಳ್ ಮಹಾಚರಲಿಂಗ ಸಹಿತ ಸ
ದ್ಗುರುವರಂ ಸಿದ್ಧವೀರೇಶನೊಟ್ಟಿರ್ದನಾಯತಿಯದೇಂಸಾಮಾನ್ಯನೇ||

(ಚೆ.ಬ.ಪು.೧-೨೧)

ಪದ್ಯದಿಂದಲೂ ಹಾಗೆಯೇ ಸಜ್ಜೆಯ ಸಿದ್ಧಲಿಂಗನ ಮಳೆಯರಾಜ ಚಾರಿತ್ರ್ಯದ ಆಶ್ವಾಸ ೧ ಪದ್ಯ ೩೦ರಲ್ಲಿ

ಗುರುಕಲಾನ್ಮಯರಾದ ಮಳೆಯ ಮಲ್ಲೇಶ್ವರನ ಕರಜಾತಸಂತತಿಯೋಳ
ಕರಮೆಸೆವ ಕರ್ನಾಟಕ ದೇಶಸ್ಥ ವಿದ್ಯಾನ
ಗರ ಹಿರಿಯ ಮಠದ ಸಿದ್ದೇಶ್ವರನ
ವರಶಿಷ್ಯ ಸಿದ್ಧನಂಜೇಶನೆನ್ನ ಹಸ್ತಸರಸಿಜದೆ ಪೆತ್ತನೊಲವಿಂ||

ಈ ಎರಡು ಪದ್ಯಗಳಂದ ಹಂಪಿಯ ಹಿರೇಮಠದ ಪರಂಪರೆಯಲ್ಲಿ ಬರುವ ವಿರೂಪಾಕ್ಷ ಪಂಡಿತನಿಗೂ ಹಾಗೂ ಸಜ್ಜೆಯ ಸಿದ್ಧಲಿಂಗನಿಗೂ ಮಳೆಯ ಮಲ್ಲೇಶ ಸಂಪ್ರದಾಯದ ಸಿದ್ಧವಿರೇಶ್ವರ ಗುರು.ಅಂದರೆ 1562ರಲ್ಲಿ ಸಜ್ಜೆಯ ಸಿದ್ಧಲಿಂಗ, 1548ರಲ್ಲಿ ವಿರೂಪಾಕ್ಷ ಪಂಡಿತರು ಬದುಕಿದ್ದರೆ, 1520ರಲ್ಲಿದ್ದ ಅದ್ರೀಶಕವಿಯ ಗುರುಪರಂಪರೆ ಇದೇ ಮಳೆಯ ಮಲ್ಲೇಶ ಸಂದ್ರದಾಯವೆಂಬುದು ಪ್ರೌಢರಾಯನ ಕಾವ್ಯದಿಂದ ವಿದಿತವಾಗುತ್ತದೆ. 'ಮಳೆಯ ಮಲ್ಲೇಶ ನಾಮದಿ ಮೆರೆದ' ಮತ್ತು ವರ ಮಳೆಯ ಮಲ್ಲೇಶನೊರಶಿಷ್ಯ ಎಂಬ ಕವಿಯ ಉಲ್ಲೇಖಗಳು ವಿಜನಯನಗರಕ್ಕೂ ಹಾಗೂ ಮಳೆಯ ಮಲ್ಲೇಶ ಸಂಪ್ರದಾಯಕ್ಕೂ ಇರುವ ಸಂಬಂಧಕ್ಕೆ ಬೆಸುಗೆಯನ್ನು

ಹಾಕುತ್ತದೆ. ಈಗಲೂ ಕೊಲ್ಹಾರದಿಂದ ಸುಮಾರು ಮೂರು ಕಿ.ಮೀ. ದೂರದ ಬೆಳ್ಳುಬ್ಬಿಯ ಹಿರೇಮಠದಲ್ಲಿ ಮಳೆಯ ಮಲ್ಲೇಶನ ಸಮಾಧಿಯಿದೆ. ಕೊಲ್ಹಾರದಿಂದ ೮ ಕಿ.ಮೀ. ದೂರದಲ್ಲಿರುವ ಉಪ್ಪಲದಿನ್ನಿಯಲ್ಲಿ ಸಂಗಮೇಶ್ವರ ದೇವಾಲಯವಿದೆ. ಹೀಗಾಗಿ ಅದ್ರೀಶಕವಿ ಮಳೆಯ ಮಲ್ಲೇಶ್ವರ ಪುರಾಣ, ಮುದ್ದಸಂಗಾರ್ಯರ ಪುರಾಣಗಳನ್ನು ಬರೆದಿದ್ದಾನೆ. ನನ್ನ ಪ್ರಬಂಧದ ಪ್ರತಿಪಾದನೆಯೆಂದರೆ

೧. ಮಳೆಯ ಮಲ್ಲೇಶ ಪದನಿಷ್ಪತ್ತಿಯ ನಿಜರೂಪ ಮಲೆಯ ಮಲ್ಲೇಶ ಇಲ್ಲಿ ಮಲೆಯೆಂದರೆ ಬೆಟ್ಟ-ಶ್ರೀಪರ್ವತ ಎಂದರ್ಥ. ಪರ್ವತಮಲ್ಲಯ್ಯನ ಗುರು ಸಂಪ್ರದಾಯದವನಾದ ಅದ್ರೀಶನ ಹೆಸರಿನ ನಿಜರೂಪ 'ಅದ್ರಿ' ಎಂದರೆ ಬೆಟ್ಟ-ಶ್ರೀಪವತ ಎಂದರ್ಥ. ಈಶ ಎಂದರೆ 'ಒಡೆಯ' ಮಲ್ಲಿಕಾರ್ಜುನ ಎಂದಾಗುತ್ತದೆ. ಹೀಗಾಗಿ 'ಮಲೆಬಗೆ'ಯವರಾದ ಅದ್ರೀಶ ಕವಿಯ ಪ್ರಭಾವ ವಿರೂಪಾಕ್ಷ ಪಂಡಿತನಿಗೂ ಸಜ್ಜೆಯ ಸಿದ್ಧಲಿಂಗನಿಗೂ ಆಗಿರಬೇಕು.

೨. ಬಿಜಾಪುರ ಭಾಗದಲ್ಲಿ ಈಗಲೂ ಮಲೆ ಸಂಪ್ರದಾಯದ ಗಾಢತೆಯೆಂಬಂತೆ ಬಹುಜನರು ಶ್ರೀಶೈಲಕ್ಕೆ ಕಾಲನಡಗೆಯಲ್ಲಿ ಕಂಬಿತೆಗೆದು ಕೊಂಡು ಹೋಗುವ ಸಂಪ್ರದಾಯವಿದೆ.

೩. ಈ ಶ್ರೀಪರ್ವತ ಸಂಪ್ರದಾಯ ಇವರಿಂದಲೇ ಮೊದಲಲ್ಲ. ಇವರಿಗಿಂತ ಪೂರ್ವದಲ್ಲಿ ಬದುಕಿದ್ದ ಹರಿಹರನಿಗೆ, ಲಕ್ಕಣ್ಣನಿಗೆ, ಪ್ರಭಾವಬೀರಿದ ಆಂಧ್ರದ ಆರಾಧ್ಯಪರಂಪರೆಯ ಮುಂದುವರಿಕೆಯಾಗಿದೆಯೆನ್ನಬಹುದು. ಹೀಗಾಗಿ ಹರಿಹರನ ರಗಳೆಗಳಲ್ಲಿ ಶಿವಶರಣರು ಶ್ರೀಪರ್ವತದ ಮೂಲಕ ಕೈಲಾಸ ಪದವಿಗೇರುವ ರಚನಾವಿನ್ಯಾಸವನ್ನು ವಿದ್ಯಾಂಸರು ಗಮನಿಸಿದ್ದಾರೆ.

೪. ಒಟ್ಟಿನಲ್ಲಿ ವಿಜಯನಗರ ಹಾಗೂ ಕೊಲ್ಹಾರದ ದೇಸಾಯಿಗಳ ಸಾಹಿತ್ಯಕ ಸಂಬಂಧವನ್ನು "ಶ್ರೀಪರ್ವತ ಸಂಪ್ರದಾಯದಿಂದ" ನಿರೂಪಿಸುವುದು ಹೆಚ್ಚು ಸೂಕ್ತವೆಂಬ ಮಾತನ್ನು ಹೇಳಬೇಕೆನಿಸುತ್ತದೆ.

೫. ಇನ್ನು ವಿಜಯನಗರ ವೀರಶೈವ ಸಾಹಿತ್ಯನಿರ್ಮಾಣ-ಪೋಷಣೆಯಲ್ಲಿ 'ಗಾಣಿಗರ'ಕೊಡುಗೆ ಕುರಿತು ವಿದ್ವಾಂಸರು ಗಮನಹರಿಸಬೇಕಾಗಿದೆ. ಅದ್ರೀಶ ಕವಿ ಗಾಣಿಗನೆಂಬುದನ್ನು ವಿದ್ವಾಂಸರು ನಿರೂಪಿಸಿದ್ದಾರೆ. ಅದೇ ರೀತಿ ಸಜ್ಜೆಯ ಸಿದ್ಧಲಿಂಗನ ಮೂಲ ಯಾವುದಿರಬಹುದೆಂಬ ಪ್ರಶ್ನೆ. ಸಜ್ಜೆ ಯೆಂದರೆ ಹಾಸುಗೆ, ಕರಡಿಗೆ ಎಂಬುದು ನಿಘಂಟು ಮೂಲದ ಅರ್ಥ. ಗಾಣಿಗರನ್ನು 'ಸಜ್ಜನ'ರೆಂಬ ಪರಿಭಾಷೆಯಲ್ಲಿ ಕರೆಯುವ ರೂಡಿಯಿದೆ. ಹೀಗಾಗಿ ಸಿದ್ಧಲಿಂಗ ಕವಿಯ ಮೂಲ ಕುರಿತು ಇನ್ನೂ ಶೋಧನೆ ಯಾಗಬೇಕು. ಅದೇ ರೀತಿ ಗುಬ್ಬಿಯ ಮಲ್ಲಮಾರ್ಯನಿಗೆ ಸಾಹಿತ್ಯಿಕ ಪೋಷಣೆ ನೀಡಿದ ಜ್ಯೋತಿಯಮ್ಮ

ಎಂಬ ಗಾಣಿಗೇರ ಮನೆತನದ ಮಹಿಳೆಯ ಉಲ್ಲೇಖ ವೀರಶೈವಾಮೃತದಲ್ಲಿ ಬರುತ್ತದೆ. ಆಕೆಯು ಕೂಡ ಹಂಪೆಯ ಪರಿಸರದಲ್ಲಿರುವಂಥವಳು. ಹೀಗಾಗಿ ಈ ಎಲ್ಲ ಮಹನೀಯರ ಅಧ್ಯಯನಗಳು, ಇನ್ನೂ ಆಗಬೇಕಾಗಿರುವುದನ್ನು ವಿದ್ವಾಂಸರ ಗಮನಕ್ಕೆ ತರುತ್ತೇನೆ.

೩೮. ಕನ್ನಡ ಲೇಖನಗಳಲ್ಲಿ ವಿಜಯನಗರ
(ಕ್ರಿ. ಶ. 1900ರಿಂದ 1934 ರವರೆಗೆ)

ಡಾ. ರಾಕೇಶ ಬಿ. ಸಿ.

ವಿಜಯನಗರ ಸಾಮ್ರಾಜ್ಯದಲ್ಲಿ ನಾಲ್ಕು ವಂಶಗಳು ಆಡಳಿತ ಮಾಡಿದವು. ಅವುಗಳಲ್ಲಿ ತುಳು ವಂಶವು ಅತ್ಯಂತ ಖ್ಯಾತಿ ಹೊಂದಿತ್ತು. ಇದರಲ್ಲಿ ವೀರನರಸಿಂಹ, ಕೃಷ್ಣ ದೇವರಾಯ, ಅಚ್ಯುತರಾಯ, ಸದಾಶಿವರಾಯ ಇವರುಗಳು ಪ್ರಮುಖರು. ಕೃಷ್ಣದೇವ ರಾಯ ದಕ್ಷಿಣದ ಪ್ರಮುಖ ರಾಜರುಗಳಲ್ಲಿ ಒಬ್ಬನಾಗಿದ್ದನು. ಇವನು ರಾಜ್ಯಭಾರ ಮಾಡುವಾಗ ದಕ್ಷಿಣ ಭಾರತವು ಈತನ ಪ್ರಭುತ್ವಕ್ಕೆ ಒಳಪಟ್ಟಿತ್ತು. ಇವನು ರಾಜ್ಯದ ವಿಸ್ತರಣೆಯ ಜೊತೆ ಉತ್ತಮವಾದ ಆಡಳಿತ, ಆರ್ಥಿಕ, ಸಾಮಾಜಿಕ, ಧಾರ್ಮಿಕ, ವಾಸ್ತು ಶಿಲ್ಪ, ವಿದೇಶಿ ವ್ಯಾಪಾರ, ರಾಯಭಾರ ಇನ್ನೂ ಮುಂತಾದ ಕ್ಷೇತ್ರಗಳಲ್ಲಿ ಗಣನೀಯ ಪ್ರಮಾಣದಲ್ಲಿ ಪ್ರಗತಿ ಕಂಡುಬಂದವು. ಇವನ ನಂತರ ಅಚ್ಯುತರಾಯನು ಇವನ ನೀತಿ ಯನ್ನು ಮುಂದುವರೆಸಿದನು. ಅದನ್ನು ರಾಮರಾಯ, ಸದಾಶಿವರಾಯನನ್ನು ತನ್ನ ಹಿಡಿತ ದಲ್ಲಿಟ್ಟುಕೊಂಡು ಸಂಪೂರ್ಣವಾದ ಅಧಿಕಾರವನ್ನು ಚಲಾಯಿಸಿದನು. ಇವನ ರಾಜನೀತಿ ಯಿಂದಾಗಿ ಮುಸ್ಲಿಂರು ಅಸೂಯೆಯಿಂದ ವಿಜಯನಗರದ ಮೇಲೆ ದಾಳಿ ಮಾಡಿ ಕ್ರಿ. ಶ. ೧೫೬೫ ರಲ್ಲಿ ರಕ್ಕಸತಂಗಡಿಯಲ್ಲಿ ಯುದ್ಧ ನಡೆದು ವಿಜಯನಗರ ಸಾಮ್ರಾಜ್ಯವು ಸೋತು ಸಂಪೂರ್ಣ ಹಂಪಿಯು ನಾಶವಾಯಿತು. ಕೆಲವು ತಿಂಗಳುಗಳವರೆಗೆ ಲೂಟಿಯು ನಡೆಯಿತು. ಇಂತಹ ಮಹಾಸಾಮ್ರಾಜ್ಯದ ಇತಿಹಾಸವನ್ನು ಅನೇಕ ಲೇಖಕರು ಬರೆದಿ ದ್ದಾರೆ. ಅದರಲ್ಲಿ ನನ್ನ ಅಧ್ಯಯನಕ್ಕೆ ಬೇಕಾದ ತುಳುವಂಶಕ್ಕೆ ಸಂಬಂಧಿಸಿದ ಕನ್ನಡ ಲೇಖನಗಳನ್ನು ಕುರಿತು ಈ ಪ್ರಬಂಧದಲ್ಲಿ ವಿವರವಾಗಿ ಬರೆಯಲಾಗಿದೆ. ''ವಿಜಯನಗರ ಅಭ್ಯಾಸಕ್ಕೆ ಬಂದಾಗ ಪ್ರಥಮವಾಗಿ ರಾಬರ್ಟ್ ಸಿವೆಲ್‌ರ 'ಫರ್ ಗಾಟನ್ ಎಂಪೈರ್' ಎಂಬ ಕೃತಿ ೧೯೦೦ ರಲ್ಲಿ ಪ್ರಕಟಣೆಗೊಂಡಿತು.'' ಇದರಿಂದ ಪ್ರಾರಂಭವಾದ ಲೇಖನಗಳು ಇಂದಿನವರೆಗೆ ಮುಂದುವರೆದುಕೊಂಡು ಬಂದಿವೆ. ಈ ಗ್ರಂಥ ೧೭ ಅಧ್ಯಾಯ ಮತ್ತು ಅನುಬಂಧಗಳು ಸೇರಿ ಒಟ್ಟು ೪೧೩ ಪುಟಗಳನ್ನು ಒಳಗೊಂಡಿದೆ. ಇದರಲ್ಲಿ ಒಂಬತ್ತನೆಯ ಅಧ್ಯಾಯದಲ್ಲಿ ಸಾಳುವ ವಂಶದ ಬಗ್ಗೆ ಮತ್ತು ಕ್ರಿ. ಶ. ೧೪೯೦ ರಿಂದ ಕ್ರಿ. ಶ. ೧೫೦೯ರ ಅವಧಿಯಲ್ಲಿ ಆದ ಘಟನೆಗಳು ಸಾಳ್ವ ನರಸಿಂಹ ಸಾಳತೆಮ್ಮ ವೀರ ನರಸಿಂಹರ ಆಳ್ವಿಕೆ, ವಿಜಾಪುರದ ದಾಳಿ, ಭಾರತದಲ್ಲಿ ಪೋರ್ಚುಗೀಜರು ಗೋವಾ ವಶಪಡಿಸಿಕೊಂಡದ್ದು, ವಾರ್ಥಮೆನ ದಾಖಲೆಗಳು, ಅಲ್ಬುಕರ್ತನ ವಿವರಣೆ ಇವೆಲ್ಲವನ್ನು

ವಿವರಿಸಿದ್ದಾರೆ. ಅಧ್ಯಾಯ ಹತ್ತರಲ್ಲಿ ಕೃಷ್ಣದೇವರಾಯನ ಆಳ್ವಿಕೆ, ಅವನ ದಿಗ್ವಿಜಯಗಳು, ಆಡಳಿತ, ಅಂತ್ಯ ಹಾಗೂ ನಂತರ ಬಂದ ಅಚ್ಯುತರಾಯನ ಬಗೆಗೆ ವಿವರಣೆ ಕೊಟ್ಟಿದ್ದಾರೆ. ಅಧ್ಯಾಯ ೧೧ ರಲ್ಲಿ ರಾಯ ಚೂರಿನ ದಾಳಿ ಮತ್ತು ಯುದ್ಧ, ಕೃಷ್ಣ ದೇವರಾಯನ ಆಳ್ವಿಕೆಯಲ್ಲಿ ಅವನು ಮಾಡಿದ ದಾಳಿಗಳ ವಿವರಣೆಗಳನ್ನು ಸವಿಸ್ತಾರವಾಗಿ ಕೊಟ್ಟಿದ್ದಾರೆ. ಅಧ್ಯಾಯ ೧೨ ರಲ್ಲಿ ಕೃಷ್ಣ ದೇವರಾಯನ ಕಟ್ಟಡಗಳು, ನಿರ್ಮಾಣಗಳು ಮತ್ತು ಶಾಸನಗಳು ಅವನ ಕಾಲದಲ್ಲಿ ದೇವಾಲಯಗಳು, ನೀರಾವರಿ ಕೆಲಸಗಳು, ನರಸಿಂಹನ ಮೂರ್ತಿ ಶಾಸನಗಳು ಇತ್ಯಾದಿ ವಿವರಣೆಯನ್ನು ಕೊಡಲಾಗಿದೆ. ಅಧ್ಯಾಯ ಹದಿಮೂರರಲ್ಲಿ ಅಚ್ಯುತರಾಯನ ಆಳ್ವಿಕೆ ಅವನ ಕಾಲದಲ್ಲಿನ ಪೋರ್ಚುಗೀಜರ ಆಕ್ರಮಣ, ಅಚ್ಯುತನಿಂದ ಧಾರ್ಮಿಕ ದತ್ತಿ ಮತ್ತು ಅವನಿಗೆ ಸಂಬಂಧಿಸಿದ ಶಾಸನಗಳ ವಿವರಣೆ ಇದೆ. ಅಧ್ಯಾಯ ಹದಿನಾಲ್ಕರಲ್ಲಿ ವಿಜಯ ನಗರ ಸಾಮ್ರಾಜ್ಯದ ಅಂತ್ಯದ ಆಳ್ವಿಕೆ, ಕರಾವಳಿಯ ಮೇಲೆ ಪೋರ್ಚುಗೀಸರ ಆಕ್ರಮಣ ಗೋವಾಕ್ಕೆ ನ್ಯಾಯ ಸ್ಥಾನ ಸಿಕ್ಕಿದ್ದು ಇತ್ಯಾದಿ ವಿಷಯಗಳನ್ನು ವಿವರಿಸಿದ್ದಾರೆ.

ಅಧ್ಯಾಯ ೧೫ ರಲ್ಲಿ ೧೫೬೫ ರ ವಿಜಯನಗರದ ವಿನಾಶ, ಅಳಿಯ ರಾಮರಾಯನ ಆಳ್ವಿಕೆ, ಅವನ ಕಾಲದಲ್ಲಿ ಆದಂತಹ ನಿರ್ಣಾಯಕ ತಾಳಿಕೋಟೆ ಯುದ್ಧ, ಕ್ರಿ. ಶ. ೧೫೬೫ ರಲ್ಲಿ ಹಿಂದೂಗಳಿಗೆ ಸಂಪೂರ್ಣ ಸೋಲು, ರಾಮರಾಯನ ಮರಣ, ವಿಜಯ ನಗರದಲ್ಲಿ ಭಯ, ರಾಜಕುಟುಂಬದ ಪಲಾಯನ, ಮಹಾನಗರದ ಸುಲಿಗೆ, ಅದರ ಸಂಪೂರ್ಣ ಧ್ವಂಸ, ಕ್ರಿ. ಶ. ೧೫೬೭ ರಲ್ಲಿ ಪೋರ್ಚುಗೀಸ ವ್ಯಾಪಾರದ ಅವನತಿ ಮತ್ತು ಗೋವಾದ ಸಮೃದ್ಧಿಯ ಕ್ಷೀಣತೆ. ಅಧ್ಯಾಯ ಹದಿನಾರರಲ್ಲಿ ಮೂರನೆಯ ರಾಜವಂಶದ ಆಳ್ವಿಕೆಯನ್ನು ಅದರ ವಂಶಾವಳಿಯನ್ನು ಕುರಿತು, ಮಹಾವಂದೆಯ ರಾಜ್ಯಗಳು ಬಂಕಾಪುರ, ಕೊಂಡವೀಡು, ಬೆಳಮ್‌ಕೊಂಡ ಮತ್ತು ವಿನುಗೊಂಡಗಳ ಪತನ, ಹೈದರಾಬಾದಿನ ಸ್ಥಾಪನೆ, ಮಹಮದಿಯರ ಅಧೀನದಲ್ಲಿ ಅದೋನಿ, ಸಂಕ್ಷಿಪ್ತದಲ್ಲಿ ನಂತರದ ಇತಿಹಾಸ ವಿವರಿಸಿದ್ದಾರೆ. ಕೊನೆಗೆ ವಿದೇಶಿ ಪ್ರವಾಸಿಗರ ದಿನಚರಿಗಳು ಹಾಗು ಅವರ ದಾಖಲೆಗಳನ್ನು ಮತ್ತು ಅನುಬಂಧವನ್ನು ಕೊನೆಗೆ ವಿವರಿಸಿದ್ದಾರೆ. ಒಟ್ಟಾರೆ ಈ ಕೃತಿ ವಿಜಯನಗರದ ಸಂಶೋಧಕರಿಗೆ, ಬರಹಗಾರರಿಗೆ ಅತ್ಯಂತ ಉಪಯುಕ್ತವಾದ ದಾಖಲೆ ಕೃತಿಯಾಗಿದೆ. ಇದು ಮೊದಲ ಬಾರಿಗೆ ೧೯೦೦ ರಲ್ಲಿ ಪ್ರಕಟವಾಗಿದ್ದು ಡಾ. ಸದಾನಂದ ಕನವಳ್ಳಿಯವರು ಕನ್ನಡಕ್ಕೆ ೧೯೮೨ ರಲ್ಲಿ ಅನುವಾದಿಸಿ ಪ್ರಕಟಗೊಳಿಸಿದ್ದಾರೆ. ಈ ರೀತಿಯಾಗಿ ವಿಜಯನಗರದ ಬರವಣಿಗೆ ಪ್ರಾರಂಭವಾಗಿ ಇಲ್ಲಿಯ ತನಕ ನಿಲ್ಲದೆ ಬೆಳೆದುಕೊಂಡು ಬರುತ್ತಿದೆ.

"೧೯೧೯ ರಲ್ಲಿ ಆಲೂರು ವೆಂಕಟರಾಯರು ಕರ್ನಾಟಕ ಸಿಂಹಾಸನಚಾರ್ಯ ಶ್ರೀ ವಿದ್ಯಾರಣ್ಯ ಗ್ರಂಥವನ್ನು ಧಾರವಾಡದಿಂದ ಪ್ರಕಟಿಸಿದ್ದಾರೆ." ವಿಜಯನಗರ ಸಾಮ್ರಾಜ್ಯ

ಸ್ಥಾಪನೆಯಲ್ಲಿ ವಿದ್ಯಾರಣ್ಯರ ಪಾತ್ರವನ್ನು ಕುರಿತು ವಿವರಿಸಿದ್ದಾರೆ. ವಿದ್ಯಾರಣ್ಯರಿಗೆ ಹರಿಹರ ಬುಕ್ಕರು ಯಾವ ರೀತಿ ವಿಧೇಯರಾಗಿದ್ದರು; ಅವರ ಮಾರ್ಗದರ್ಶನದಲ್ಲಿ ಹೇಗೆ ರಾಜ್ಯಸ್ಥಾಪನೆ ಮಾಡಿದರು ;ಆಡಳಿತವನ್ನು ನಡೆಸಿಕೊಂಡು ಬಂದರು ಎಂಬ ಮೊದಲಾದ ವಿವರಣೆಯನ್ನು ನೀಡಿದ್ದಾರೆ. ಮಾತಂಗಪರ್ವತದಿಂದ ಕಾಣಬರುವ ಹಂಪಿಯ ಸುತ್ತಮುತ್ತಲ ಪ್ರಾಕೃತಿಕ ಪರಿಸರದ ವರ್ಣನೆ ಪುಟ ೪೯-೫೦. ವಿಠ್ಠಲಸ್ವಾಮಿ ದೇವಾಲಯದ ಶಿಲ್ಪಕಲಾ ವರ್ಣನೆ ಪುಟ ೫೫-೫೬ ಹಾಗೂ ವಿಷಾದ ರೂಪದಲ್ಲಿರುವ ಅವರ ಉಪಸಂಹಾರ ಪುಟ ೫೭- ೫೮ ಕುರಿತು ವಿವರಿಸಿದ್ದಾರೆ.

ಕೇವಲ ಹಂಪೆಗೆ ಸಂಬಂಧಿಸಿದಂತೆ ಆರಂಭದಿಂದ ಅಂದರೆ ೧೮೯೦ ರಿಂದ ವಿ. ಸೀ. ಅವರ ಪಂಪಾಯಾತ್ರೆಯ ಪ್ರಕಟಣೆವರೆಗಿನ ಮೊದಲನೆ ಘಟ್ಟದವರೆಗೆ ಯಾವುದೇ ಪ್ರಕಟಿತ ಕೈಪಿಡಿಯು ಪ್ರಸ್ತಾಪದಲ್ಲಿಯು ದೊರೆಯದಿರುವುದು ಆಶ್ಚರ್ಯದ ಸಂಗತಿ. ಈ ಸಾಲಿಗೆ "ಕೆ. ರಾಮಸ್ವಾಮಯ್ಯಂಗಾರ್ ಅವರ 'ಜೀರ್ಣ ವಿಜಯನಗರಾ ದರ್ಶಂ' ಕೈಪಿಡಿಯೂ ಸೇರಿದೆ. ಪ್ರತ್ಯೇಕ ಕೃತಿ ರೂಪದಲ್ಲಿ ಪ್ರಕಟಗೊಂಡಂದಿನಿಂದಲೂ ಇದು ಕನ್ನಡದ ಪ್ರಥಮ ಕೃತಿಯಾಗಿದೆ." ವಿಜಯನಗರಕ್ಕೆ ಸಂಬಂಧಿಸಿದಂತೆ ಸ್ಥೂಲ ವಾಗಿಯಾದರು ಇದರಲ್ಲಿ ಪರಿಚಯಿಸಿದ್ದಾರೆ. ವಾಸ್ತವದಲ್ಲಿ ಹಂಪಿ ಕುರಿತ ಆರಂಭದ ಕೈಪಿಡಿಯೆಂದರೆ ಜೀರ್ಣ ವಿಜಯಗರಾದರ್ಶಂ ಎನ್ನಬಹುದು. ಇದು ೧೯೧೬ ರಲ್ಲಿ ಅಂದರೆ ಪಂಪಾ ಯಾತ್ರೆಗಿಂತ ೧೦ ವರ್ಷಗಳ ಮುಂಚೆ ಪ್ರಕಟವಾಗಿದೆ. ರಾಮಸ್ವಾಮಿ ಅಯ್ಯಂಗಾರರವರು ಬೆಂಗಳೂರು ಡಿಸ್ಟ್ರಿಕ್ಟ್ ತ್ಯಾಗಮಂಡ್ಲು ಎ.ವಿ. ಸ್ಕೂಲನ ಹೆಡ್ ಮಾಸ್ತರ್ ಆಗಿದ್ದವರು. ಇವರು ರಚಿಸಿದ ಪ್ರಸ್ತುತ ಕೃತಿಯು ಮೈಸೂರಿನ ಕರ್ನಾಟಕ ಗ್ರಂಥಮಾಲ ಪ್ರಕಟಿಸಿದ ಕೃತಿ ಸರಣಿಯಲ್ಲಿ ೭೪ ನೆಯದು. ಈ ಕೃತಿಯು ಒಟ್ಟು ೬೮ ಪುಟಗಳನ್ನು ಒಳಗೊಂಡಿದೆ. "ಮೈಸೂರಿನ ಕರ್ನಾಟಕ ಗ್ರಂಥಮಾಲಾ ಪತ್ರಿಕೆಯಲ್ಲಿ ಪುಸ್ತಕಗಳನ್ನು ಧಾರವಾಹಿಯಾಗಿ ಪ್ರಕಟಿಸುತ್ತಿದ್ದುದು ವಿಶೇಷ." ಲೇಖಕಕರನ್ನು ಬೆಳಕಿಗೆ ತರುವ ನಿಟ್ಟಿನಲ್ಲಿ ಕರ್ನಾಟಕ ಗ್ರಂಥಮಾಲಾ ಪತ್ರಿಕೆಯದು ಉಪಯುಕ್ತ ಸೇವೆ. ಪುಟ ೩೮ ರಲ್ಲಿ ಲೇಖಕರು ವಿಜಯನಗರವನ್ನಾಳಿದ ಅರಸರ ಪಟ್ಟಿಯನ್ನು ೧೮೯೭ ರಲ್ಲಿ ವೆಸ್ಟ್ ಮಿನಸ್ಟರ್‌ನಿಂದ ಪ್ರಕಟವಾದ ಬಿ. ಎಲ್. ರೈಸ್ ರವರ 'ಮೈಸೂರು ಗೆಝಟಿ ಯರ್' ಭಾಗ ೧೪೨ ಸಂಪುಟಗಳನ್ನಾಧರಿಸಿ ಕೊಟ್ಟಿರುವುದು ವಿನಾ ಸಮಕಾಲೀನವಾದ ಇತರ ಯಾವ ಪ್ರಕಟಣೆಯನ್ನು ಹೆಸರಿಸುವುದಿಲ್ಲ.

ಕೆ. ರಾಮಸ್ವಾಮಿಯ್ಯಂಗಾರ್ ರಚಿಸಿರುವ 'ಜೀರ್ಣ ವಿಜಯನಗರಾದರ್ಶಂ' ಕೈಪಿಡಿಯನ್ನು ಪೂರ್ವ ಭಾಗ ಮತ್ತು ಉತ್ತರ ಭಾಗಗಳಾಗಿ ವಿಂಗಡಿಸಿ, ಪೂರ್ವ ಭಾಗವು ೩೧ ಪುಟಗಳಷ್ಟು ವಿಸ್ತಾರವಾಗಿದ್ದು ಈ ಭಾಗದಲ್ಲಿ ವಿಜಯನಗರದ ಚರಿತ್ರೆಯನ್ನು ಆದಿಯಿಂದ ಅಂತ್ಯದವರೆಗೆ ಅಂದರೆ ಕ್ರಿ.ಶ. ೧೩೩೬ ರಿಂದ ಕ್ರಿ. ಶ. ೧೫೬೫ ರವರೆಗೆ

ನಿರೂಪಿಸಲಾಗಿದೆ. ಅನಂತರ ವಿಜಯನಗರ ಶಿಥಿಲಾವಸ್ಥೆಯನ್ನು ಸಂಕ್ಷಿಪ್ತವಾಗಿ ವಿವರಿಸಿರುವರು. ವಿಜಯನಗರ ರಾಜಕೀಯ ಚರಿತ್ರೆಯ ಕುರಿತು ವಿವರಿಸುವಾಗ ಲೇಖಕರು ಹೆಚ್ಚಾಗಿ ತೆಲಗು ಮೂಲವನ್ನು ಕುರಿತು ವಿವರಿಸಿದ್ದಾರೆ. ಅವರು ಹೆಚ್ಚಾಗಿ ತೆಲುಗು ಸಾಹಿತ್ಯವನ್ನು ಅವಲಂಬಿಸಿದ್ದರಿಂದ ಕೆಲವು ಸಂಗತಿಗಳು ಅವರ ಬರವಣಿಗೆಯಲ್ಲಿ ಸ್ವಲ್ಪ ಹೆಚ್ಚಾಗಿಯೇ ಆದ್ಯತೆ ಪಡೆದುಕೊಂಡಿದೆ. ಬಹುಮನಿ ರಾಜ್ಯವನ್ನು 'ಭಾಮಿನಿ' ರಾಜ್ಯವೆಂದು ಬರೆದಿದ್ದಾರೆ. ಕೃಷ್ಣದೇವರಾಯನನ್ನು ಆಂಧ್ರ ದೇಶಕ್ಕೂ, ಆಂಧ್ರ ರಾಜರಿಗೂ, ಆಂಧ್ರಭಾಷೆಗೂ, ಒಪ್ಪುವವನಾಗಿದ್ದನೆಂದು ಕೊಂಡಾಡಿದ್ದಾರೆ. ಇವರು ಕೃಷ್ಣದೇವರಾಯರು ಪಟ್ಟಾಭಿಷೇಕ ನಾದುದು ಶಕ ೧೪೩೦ ಶುಕ್ಲ ಸಂವತ್ಸರ ಮಾಘ ಶುದ್ಧ ೧೪ ಅಂದರೆ, ಕ್ರಿ. ಶ. ೧೫೦೯ ಫೆಬ್ರವರಿ ೪ ರಿಂದ ಎಂದು ಹೇಳಿದ್ದಾರೆ. ಅಲ್ಲದೆ ಹೇಮಕೂಟದಲ್ಲಿ ಕೆಲವು ಜೈನ ದೇವಾಲಯಗಳಿವೆಯೆಂಬ ಲೆಖಕರ ಹೇಳಿಕೆ ಸಹ ವಾಸ್ತವಾಂಶದಿಂದ ಕೂಡಿದುದ ರಲ್ಲಿ ಅವು ಶೈವದೇವಾಲಯಗಳಾಗಿವೆ.

ಉತ್ತರ ಭಾಗದಲ್ಲಿ ಶಿಥಿಲ ವಿಜಯನಗರ ವಿವರಣೆಯುಳ್ಳ ಭಾಗವು ಪುಟ ೩೨ ರಿಂದ ೬೨ ರಿಂದ ೩೦ ಪುಟಗಳಷ್ಟು ದೀರ್ಘವಾಗಿದೆ. ಇದರಲ್ಲಿ ವಿದೇಶಿ ಪ್ರವಾಸಿಗರು ಕಂಡ ವಿಜಯನಗರದ ವೈಭವವನ್ನು ವಿವರಿಸಿದ್ದಾರೆ. ಇನ್ನು ೨೪ ಪುಟಗಳಲ್ಲಿ ಹಂಪಿಯ ಸ್ಮಾರಕಗಳನ್ನು ಕುರಿತು ವಿವರಿಸಿದ್ದಾರೆ. ಇದು ಕೇವಲ ಮಾಹಿತಿ ಪ್ರಧಾನವಾಗಿರದೆ ರಸವತ್ತಾದ ಸನ್ನಿವೇಶಗಳನ್ನು ಒಳಗೊಂಡಿದೆ.

ಕೆ. ರಾಮಸ್ವಾಮಿ ಅಯ್ಯಂಗಾರ್ ಅವರು ತಮ್ಮ ಕೈಪಿಡಿಯಲ್ಲಿ ಸ್ವಯಂ ವೀಕ್ಷಣೆಯನ್ನು ಕೈಗೊಂಡು ಮೂರು ಹಂತದಲ್ಲಿ ಸೂಚಿಸಿದ್ದಾರೆ. ಮೊದಲನೆಯದು ಹೊಸಪೇಟೆಯಿಂದ ಹೊರಟು ಅನಂತಶಯನ ಗುಡಿ, ಮಲಪನ ಗುಡಿ ಹಾಗೂ ಕಮಲಾಪುರ ಪಟ್ಟಾಭಿರಾಮ ದೇವಾಲಯಗಳ ವೀಕ್ಷಣೆ ಪುಟ ೪೪-೪೫ ಅಲ್ಲಿಂದ ಹಂಪೆಯ ಕಡೆಗೆ ಚಂದ್ರಶೇಖರಮಠ (ದೇವಾಲಯ)ರಾಣಿಯರ ಅಂತಃಪುರ, ಸ್ನಾನಾಗೃಹ, ಮಹಾನವಮಿ ದಿಬ್ಬ, ರಂಗನಾಥ ದೇವಾಲಯ, ಕಮಲ್ ಮಹಲ್, (ಸಭಾಭವನ) ಜನಾನಾ, ಗಜಶಾಲೆ, ನಾಟ್ಯಶಾಲೆ ಮೊದಲಾದವುಗಳನ್ನೊಳಗೊಂಡ ರಾಜ ಪ್ರಾಂಗಣಗಳ ವೀಕ್ಷಣೆ, ಹಜಾರ ರಾಮಚಂದ್ರಾಲಯ, ನೆಲಮಾಳಿಗೆ, ಪಾತಾಳೇಶ್ವರ ದೇವಾಲಯ, ಉದ್ದಾನ ವೀರಭದ್ರ, ಚಂಡಿಕೇಶ್ವರ ದೇವಾಲಯ, ಲಕ್ಷ್ಮೀನರಸಿಂಹ (ಉಗ್ರನರಸಿಂಹ), ದೊಡ್ಡಲಿಂಗ, ಕೃಷ್ಣದೇವಾಲಯ, ಗಣೇಶಾಲಯ, ವಿಘ್ನೇಶ್ವರ ಆಲಯ, ವಿರೂಪಾಕ್ಷ ದೇವಾಲಯ, ತಳವಾರನ ಕಟ್ಟೆ, ಒಂಬತ್ತು ಋಷಿಗಳ ಸಮಾಧಿ, ಆನೆಗೊಂದಿ, ರಂಗನಾಥಸ್ವಾಮಿ ದೇವಾಲಯ, ಗವಿರಂಗ ನಾಯಕ, ಪಂಪಾಸರೋವರ ಮುಂತಾದವುಗಳ ವೀಕ್ಷಣೆ ಹಾಗೂ ಸಮೀಪದ ಮೂಲಕ ಹಂಪೆಯ ಪ್ರವೇಶ ಅಲ್ಲಿಂದ ಕಮಲಾಪುರ ಸತ್ರಕ್ಕೆ ವಾಪಸ್ಸಾದ ಬಗೆಯನ್ನು ಪುಟ ೫೧-೫೭ ರಲ್ಲಿ ವಿವರಿಸಿದ್ದಾರೆ. ಮಲಪನ ಗುಡಿಯ ಹೊರವಲಯ

ದಲ್ಲಿರುವ ಬಾವಿ ವಿಶ್ರಾಂತಿ ಧಾಮವಾಗಿತ್ತು ಎಂಬುದಾಗಿ ತಿಳಿಸಿದ್ದಾರೆ. ಅವರು ನೋಡವ ವೇಳೆಗೆ ಅದು ಸುಸ್ಥಿತಿಯಲ್ಲಿತ್ತು ಎಂಬುದು ತಿಳಿದು ಬರುತ್ತದೆ. (ಪುಟ. ೪೪) ಕಮಲಾಪುರದ ಸತ್ರವೊಂದರ ಬಗೆಗೆ ಲೇಖಕರು ಪ್ರಸ್ತಾಪಿಸಿದ್ದಾರೆ. ಲೇಖಕರು ಕರಡಿ ರಾಂಪುರದ ಮೇಲೆ ಹೋಗದೆ ಕಮಲಾಪುರದ ಮೇಲಿಂದ ವೀಕ್ಷಣೆಗೈಯಲು ಪ್ರವಾಸಿಗರಿಗೆ ಮಾರ್ಗದರ್ಶನ ನೀಡಿದ್ದಾರೆ. ಮಹಾನವಮಿ ದಿಬ್ಬದ ಮಾಹಿತಿಯನ್ನು ಪುಟ ೪೭ ರಲ್ಲಿ ನೀಡಿದ್ದಾರೆ. ಪುಟ ೫೭ ರಲ್ಲಿ ಶ್ರೀ ಕೃಷ್ಣದೇವರಾಯರ ಸಂತತಿಯವರಾಗಿ ಶ್ರೀರಾಜರಂಗ ದೇವರಾಯರು ಈಗ ಆನೆಗೊಂದಿಯಲ್ಲಿ ವಾಸಿಯಾಗಿರುವರು ಎಂದು ಹೇಳಿದ್ದಾರೆ.

ತುಳುವ ನರಸನಾಯಕರು ಅವನ ಹೆಂಡಂದಿರು ಮತ್ತು ಮಕ್ಕಳಾದ ವೀರನರಸಿಂಹ, ಕೃಷ್ಣದೇವರಾಯ, ಅಚ್ಯುತರಾಜನು ಎಂದು ಹೇಳುತ್ತಾ ವೀರನರಸಿಂಹನು ಕೃಷ್ಣ ದೇವರಾಯನ ಮೇಲೆ ಅಸೂಯೆಗೊಂಡ ಬಗೆಯನ್ನು ತಿಳಿಸುತ್ತಾ, ಸ್ವರ್ಗಸ್ಥನಾದ ಬಗೆಯನ್ನು ತಿಳಿಸಿದ್ದಾನೆ. ಕೃಷ್ಣದೇವರಾಯನು ಕ್ರಿ. ಶ. ೧೪೮೫ ರಲ್ಲಿ ಜನಿಸಿದರು ಎಂದು ಬಹದ್ದೂರ್ ಕೆ. ವೀರೇಶಲಿಂಗಂ ಪಂಡಿತರು ನಿರ್ದಿಷ್ಟ ಮಾಡಿದುದರ ಬಗ್ಗೆ ತಿಳಿಸಿದ್ದಾರೆ. ಕ್ರಿ. ಶ. ೧೫೦೮ ರಲ್ಲಿ ಕೃಷ್ಣದೇವರಾಯನು ಪಟ್ಟಾಭಿಷಿಕ್ತನಾದನು ಎಂದು ಹೇಳಿದ್ದಾರೆ. ಕೃಷ್ಣದೇವರಾಯನ ವ್ಯಕ್ತಿತ್ವ ಮತ್ತು ಅವನ ನೀತಿಯ ಬಗ್ಗೆ ತಿಳಿಸಿದ್ದಾರೆ. ಇವನ ಕುರಿತು ಲಭ್ಯವಿದ್ದ ವಿವರಗಳ ಬಗ್ಗೆ ವಿವರಿಸಿದ್ದಾರೆ. ಅವನ ವಿಜಯಗಳ ಬಗ್ಗೆ ವಿವರಿಸಿದ್ದಾರೆ. ಅಲ್ಲದೆ ಅವನ ಬಿರುದು, ಬುದ್ಧಿಶಕ್ತಿಯ ಬಗ್ಗೆ ವಿವರಗಳನ್ನು ನೀಡಿರುತ್ತಾರೆ. ರಾಯನ ರಾಣಿಯರು, ಅಷ್ಟದಿಗ್ಗಜರನ್ನು ಕುರಿತು ವಿವರಿಸಿದ್ದಾರೆ. ಕೃಷ್ಣದೇವರಾಯನ ಕಾಲದಲ್ಲಿ ತೆಲುಗು ಭಾಷೆ ಅಚ್ಯುಚ್ಚ ಸ್ಥಿತಿಯಲ್ಲಿದ್ದುದರ ಬಗ್ಗೆ ತಿಳಿಸಿದ್ದಾರೆ. ಇವನನ್ನು ರಾಣಿಗೆ ಹೋಲಿಸಿದ್ದಾರೆ. ಕೃಷ್ಣದೇವರಾಯನು ಹೊಸ ದೇವಾಲಯಗಳನ್ನು, ಅರಮನೆಗಳನ್ನು ಕಾಲುವೆಗಳನ್ನು ನಿರ್ಮಿಸಿದುದರ ಬಗ್ಗೆ ವಿವರಣೆ ನೀಡಿದ್ದಾರೆ ಮತ್ತು ಪೆಯಿಸ್‌ನ ವರ್ಣನೆಯನ್ನು ನೀಡಿದ್ದಾರೆ. ಇವನ ನಂತರ ಅಚ್ಯುತರಾಯನ ಬಗ್ಗೆ ದುರ್ಬಲನಾದ ರಾಜ ಎಂದು ಸದಾಶಿವರಾಯನು ಹೆಸರಿಗೆ ಮಾತ್ರ ರಾಜ ರಾಮರಾಯನೆ ರಾಜ್ಯ ಪರಿ ಪಾಲನೆ ಮಾಡುತ್ತಿದ್ದ ಬಗ್ಗೆ ತಿಳಿಸಿದ್ದು, ರಾಮರಾಯನಿಗೂ ಬಹುಮನಿ ರಾಜರಿಗೂ ಹೆಚ್ಚಿದ ವಿರೋಧದಿಂದ ೧೫೬೫ ರಲ್ಲಿ ತಾಳಿಕೋಟೆಯ ಹತ್ತಿರ ಘೋರವಾದ ಯುದ್ಧ ನಡೆದು ರಾಮರಾಜನು ಹತನಾದ ಬಗ್ಗೆ ಹಿಂದೂಗಳು ಸೋತು -ವಿಜಯನಗರಕ್ಕೆ ಹೋಗಿ ಮುಸ್ಲಿಂರು ವಿಜಯನಗರವನ್ನು ಧ್ವಂಸ ಮಾಡಿದ ಬಗೆಯನ್ನು ಕುರಿತು ವಿವರಿಸಿದ್ದಾರೆ. ಅಲ್ಲದೆ "ವಿಜಯನಗರವನ್ನಾಳಿದ ಅರಸರ ಪಟ್ಟಿಯನ್ನು ಮೈಸೂರು ಗೆಜೆಟಿಯರ್ ಸಹಾಯದಿಂದ ನೀಡಿದ್ದಾರೆ." ಉತ್ತರ ಭಾಗದಲ್ಲಿ ವಿದೇಶಿಯರಿಂದ ಹೇಗೆ ವರ್ಣಿಸಲ್ಪಟ್ಟಿತ್ತು ಆ ವಿಷಯವನ್ನು ಸ್ವಲ್ಪ ಮಟ್ಟಿಗೆ ತಿಳಿಸಿದ್ದಾರೆ. ನಿಕೋಲೊ ಕುಂಟೆ, ಅಬ್ದುಲ್ ರಜಾಕ್‌ರ ವರ್ಣನೆಯನ್ನು ನೀಡಿದ್ದಾರೆ. ಬ್ರಿಟಿಷರು ಶಿಥಿಲಗೊಂಡ ದೇವಾಲಯದ

ಜೀರ್ಣೋದ್ಧಾರ ಮಾಡಿದುದನ್ನು ತಿಳಿಸಿದ್ದಾರೆ. ಅಲ್ಲದೆ ಸೂಕ್ತವೆನಿಸಿದ ಕಡೆ ಅವುಗಳ ವಿವರಣೆಯನ್ನು ನೀಡಿರುತ್ತಾರೆ.

ಕೆ. ರಾಮಸ್ವಾಮಿ ಅಯ್ಯಂಗಾರ ರವರು 'ಜೀರ್ಣ ವಿಜಯನಗರಾದರ್ಶಂ'ನಲ್ಲಿ ವಿಜಯನಗರ ಅಥವಾ ಹಂಪಿಯ ಕುರಿತು ಪ್ರಥಮ ಕನ್ನಡ ಕೈಪಿಡಿಯಾಗಿ ಹೊರತಂದಿದ್ದು ಅಲ್ಲದೆ ವಿಜಯನಗರದ ಪ್ರಥಮ ಕನ್ನಡ ಲೇಖನವಾಗಿದೆ. ಇದು ವಿಜಯನಗರದ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತವೆ. ಅಲ್ಲದೆ ಅವರ ಸಂಕ್ಷಿಪ್ತ ವಿವರಣೆಯು ಅತಿ ಮುಖ್ಯವಾಗಿದೆ. ಇಲ್ಲಿಂದ ಪ್ರಾರಂಭವಾದ ಕನ್ನಡ ಲೇಖನಕ್ಕೆ ವಿಜಯನಗರದ ಜೊತೆಗೆ ತುಳುವಂಶದ ರಾಜರ ಕೊಡುವೆ ಅವರು ನೀಡಿದ ರಾಜ್ಯಭಾರದ ವಿವರಗಳನ್ನು ಒಳಗೊಂಡ ಲೇಖನಗಳು ಕಂಡು ಬರುತ್ತವೆ. ಪ್ರಥಮವಾಗಿ ಜೀರ್ಣಾವಿಜಯನಗರಾ ದರ್ಶನಂ ಇದು ಕ್ರಿ. ಶ. ೧೯೧೬ ರ ಪ್ರಕಟಗೊಂಡು ತೊಂಬತ್ತು ವರ್ಷಗಳಾಗಿವೆ. ಇದನ್ನ ಹಂಪಿ ವಿಶ್ವವಿದ್ಯಾಲಯದಿಂದ ೨೦೦೬ ರಲ್ಲಿ ಲಕ್ಷ್ಮಣ ತೆಲಗಾವಿಯರು ಪ್ರಸ್ತಾವನೆಯೊಂದಿಗೆ ಸಂಪಾದಿಸಿದ್ದಾರೆ. ಐತಿಹಾಸಿಕವಾಗಿ, ಆಕರಗ್ರಂಥವಾಗಿ ಮತ್ತು ಸಾಂಸ್ಕೃತಿಕವಾಗಿ, ಉತ್ತಮ ಕೈಪಿಡಿಯಾಗಿಯೂ ಉಪ ಯುಕ್ತವಾಗಿದೆ.

"ಆಲೂರು ವೆಂಕಟರಾಯರು ಕರ್ನಾಟಕದ ಗತವೈಭವ ಕುರಿತು ಪ್ರಬಂಧವನ್ನು ೧೯೧೭ ರಲ್ಲಿ ಧಾರವಾಡದಿಂದ ಪ್ರಕಟಿಸಿದ್ದಾರೆ." ಶಿಲಾಲಿಪಿ, ತಾಮ್ರಪಟ, ವೀರಗಲ್ಲು, ಮಾಸ್ತಿ ಕಲ್ಲು, ಪ್ರಾಚೀನ ನಾಣ್ಯಗಳು, ದೇವಸ್ಥಾನಗಳು ಮೊದಲಾದ ಸಾಮಗ್ರಿಗಳಿಂದ ನಾಡಿನ ಚರಿತ್ರೆ ಕಟ್ಟಬೇಕಾಗುವುದು ಫರ್ಗ್ಯುಸನ, ಫ್ಲೀಟ್, ರಾಪ್ಸನ ಮೊದಲಾದ ವಿದ್ವಾಂಸರ ದಾರಿಯಲ್ಲಿ ನಡೆದು ಕರ್ನಾಟಕ ಚರಿತ್ರೆಗೆ ಬೆಳಕು ಕೊಟ್ಟರು. ಇಂಡಿಯನ್ ಎಂಟಿಕ್ವರಿ, ಎಪಿಗ್ರಾಫಿಯಾ ಇಂಡಿಕಾ ಮೊದಲಾದ ಪ್ರಕಟಣೆಗಳ ಸಹಾಯ ಪಡೆದು ಇತಿಹಾಸ ನಿರೂಪಣೆಯ ತಮ್ಮ ಉದ್ದೇಶದಲ್ಲಿ ಯಶಸ್ವಿಯಾದರು. ರಜೆಯಲ್ಲಿ ಮಿತ್ರ ರೊಂದಿಗೆ ಅವರು ಆನೆಗುಂದಿಯ ಪ್ರವಾಸಕ್ಕೆ ಹೋಗಿದ್ದರು. ಹಂಪಿಯ ಬಳಿಯ ನವ ವೃಂದಾವನಗಳ ದರ್ಶನ ಪಡೆದು 'ಹಾಳು ಹಂಪಿ'ಯ ಅವಶೇಷಗಳನ್ನೆಲ್ಲ ನೋಡಿದಾಗ ಅವರಿಗೆ ಒಂದು ಅಪೂರ್ವ ಅನುಭವವಾಯಿತು. ಇದರ ಪ್ರಕಟಣೆಯೇ ಕರ್ನಾಟಕದ ಗತ ವೈಭವವನ್ನು ಕುರಿತು ಬರೆಯಲು ಪ್ರಾರಂಭಿಸಿದರು. ಆ ಮೊದಲೇ ಕರ್ನಾಟಕ ಸಿಂಹಾಸನಾಚಾರ್ಯ ವಿದ್ಯಾರಣ್ಯರು ಎಂಬ ಚಿಕ್ಕ ಪುಸ್ತಕವನ್ನು ಬರೆದು ಪ್ರಕಟಿಸಿದ್ದರು. ಕರ್ನಾಟಕ ಕನ್ನಡವ್ವ ಅನ್ಯರ ಬೆಳವಣಿಗೆ ಇನ್ನು ಮುಂತಾದ ವಿವರಣೆಯನ್ನು ಕೊಡುತ್ತ ಕರ್ನಾಟಕವನ್ನು ಕುರಿತು ಅದರ ಇತಿಹಾಸವನ್ನು ಒಂದನೆ ಪ್ರಕರಣದಲ್ಲಿ ವಿವರಿಸಿದ್ದರು. ಕರ್ನಾಟಕದ ಹಿಂದಿನ ವಿಸ್ತಾರ ಸಂಸ್ಥಾನಗಳ ವಿವರಣೆ ವಿದ್ಯಾರಣ್ಯರ ವಿವರಣೆಯನ್ನು ನೀಡಿದ್ದಾರೆ. ಕರ್ನಾಟಕ ಪದದ ಉತ್ಪತ್ತಿಯ ಕುರಿತು ವಿವರಿಸಿದ್ದಾರೆ. ಅಷ್ಟದಿಗ್ಗಜಗಳೆಂದು ಕರೆಯಲ್ಪಡುವ ವಿಖ್ಯಾತರಾದ ಪಂಡಿತ ಜನರಿಗೆ ಆಶ್ರಯ ಕೊಟ್ಟ ಆ ವೈಭವಶಾಲಿಯಾದ

ವಿಜಯನಗರದ ಕೃಷ್ಣದೇವರಾಯನು ನಮ್ಮ ಅರಸನೆಂಬುದು ಕರ್ನಾಟಕದವರಿಗೆ ಗೊತ್ತಾಗಬಾರದೆ. ರಾಜಧಾನಿ ಪಟ್ಟಣಗಳು ಕರ್ನಾಟಕಂಬಗಳೆ ಮಠಗಳು, ಮಠಾಧಿಪತಿಗಳು, ಕವಿಗಳು, ದಾಸರು, ಶಿವಶರಣರು, ಕೃಷ್ಣದೇವರಾಯನನ್ನು ಅಕಬರ ಎಂದು ಹಂಪೆಯಲ್ಲಿ ೫೦ ರಿಂದ ೬೦ ಲಕ್ಷ ಜನರು ವಾಸಿಸುತ್ತಿದ್ದರು. ನೋಡಿದ ಕಡೆಯಲ್ಲೆಲ್ಲಾ ವಿಶಾಲವಾದ ರಾಜ ಬೀದಿಗಳು ಉನ್ನತವಾದ ಗೋಪುರಗಳಿಂದಲೂ, ಸುಂದರವಾದ ಗುಡಿಗಳಿಂದಲೂ, ಭವ್ಯವಾದ ಕೋಟೆ ಕ್ಷೇತ್ರಗಳಿಂದಲೂ, ಜೀರ್ಣವಾದ ರಮ್ಯೋದ್ಯಾನಗಳಿಂದಲೂ ತುಂಬಿಕೊಂಡಿದ್ದು ಈಗ ಕುರುಹಿಗೆ ಮಾತ್ರ ಉಳಿದಿರುವ ಆ ಕರ್ನಾಟಕ ರಾಜಧಾನಿಯನ್ನು ನೋಡಿ ಕಣ್ಣೀರು ಸುರಿಸದ ಪಾಪಿ ಯಾರು ಭಾವುಕರಾಗಿ ವಿವರಿಸಿದ್ದಾರೆ. ಹಿಂದಿನ ಅರಸರೆಲ್ಲರೂ ಕನ್ನಡ ಭಾಷೆಯನ್ನು ಆಡುತ್ತಿದ್ದರು ಎಂದು ಹೇಳಿದ್ದಾರೆ. ಹಂಪಿಯನ್ನು ಐತಿಹಾಸಿಕ ಮತ್ತು ಧಾರ್ಮಿಕ ಕ್ಷೇತ್ರ ಎಂಬುದಾಗಿ ವಿವರಿಸಿದ್ದಾರೆ.

ಶಾಸನಗಳು (ಶಿಲಾಲಿಪಿ), ತಾಮ್ರಪಟಗಳು, ನಾಣ್ಯಗಳು, ಪೂರ್ವಕಾಲದ ಕಟ್ಟಡಗಳು, ತಾಳೆಯೋಲೆ, ಪರದೇಶಿಯ ಪ್ರವಾಸಿಗರು ಬರೆದಿಟ್ಟ ಬರಹಗಳು, ಪರಂಪರಾಗತವಾದ ಕಥೆಗಳು, ಸ್ಥಳ ಮಹಾತ್ಮೆಗಳು, ಆಚಾರಗಳು ಮತ್ತು ಧಾರ್ಮಿಕ ವಿಚಾರಗಳು, ಇವುಗಳನ್ನು ಸೂಕ್ಷ್ಮವೆನಿಸಿದ ಸ್ಥಳಗಳಲ್ಲಿ ಉಲ್ಲೇಖಿಸಿದ್ದಾರೆ. ಹನ್ನೊಂದನೆಯ ಪ್ರಕರಣದಲ್ಲಿ ವಿಜಯನಗರದ ಅರಸರನ್ನು ಕುರಿತು ವಿವರಿಸಿದ್ದಾರೆ. ಸ್ಥಾಪನೆಯ ಉದ್ದೇಶಿ ಮೂಲ ಪುರುಷರು ದಕ್ಷಿಣ ಭಾರತಕ್ಕೆ ಸಂಕಟ ಕಾಲ ಒದಗಿದಾಗ ಅದನ್ನು ರಕ್ಷಿಸಿದ್ದೇನೂ ಕಡಿಮೆ ಕಾರ್ಯವಲ್ಲ. ವಿಜಯನಗರದ ಅರಸರು ತಮ್ಮ ಪೂರ್ವ ವೈಭವವನ್ನು ಅಚ್ಚಳಿಯದೆ ಕಾಯ್ದುಕೊಂಡರೆಂಬುದು ಅತ್ಯಂತ ಗೌರವಾಸ್ಪದವಾದ ಸಂಗತಿಯಾಗಿದೆ.

ನರಸ ಮನೆತನ ಕ್ರಿ. ಶ. ೧೪೯೬-೧೫೬೭ ಈ ನರಸನು ತುಳುವ ವಂಶದವನು ಮತ್ತು ಬಲುಶೂರನು ಚೇರ ಚೋಳ ಪಾಂಡ್ಯ ದೇಶಗಳನ್ನು ಗೆದ್ದನು. ಈತನ ಮೂರು ಮಂದಿ ಮಕ್ಕಳು ಒಬ್ಬರಾದ ಮೇಲೆ ಒಬ್ಬರಂತೆ ಪಟ್ಟವೇರಿದರು. ಅವರಲ್ಲಿ ಮೂರನೆಯವನಾದ ಕೃಷ್ಣದೇವರಾಯನೇ ಅತ್ಯಂತ ಪ್ರಭಾವಶಾಲಿ. ಈತನ ನೀತಿ, ಮುಸಲ್ಮಾನರೊಂದಿಗಿನ ಸಂಬಂಧ, ವಿದ್ಯೆ -ಕಲಾ ಕೌಶಲ್ಯ-ಔದಾರ್ಯಗಳಲ್ಲಿಯೂ ಬಹು ವಿಖ್ಯಾತನಾಗಿದ್ದನು. ಸ್ವತಃ ತೆಲುಗು ಭಾಷೆಯಲ್ಲಿ ಗ್ರಂಥವನ್ನು ಬರೆದಿರುವನು. ಬರೆಯಲು ಸ್ಫೂರ್ತಿಯನ್ನು ನೀಡಿರುವುದರ ವಿವರಣೆಯನ್ನು ನೀಡಿದ್ದಾರೆ. ರಾಯನು ಕನ್ನಡಿಗನೆಂದು ಸಮರ್ಥಿಸಲು ಅನೇಕ ಕಾರಣಗಳನ್ನು ನೀಡಿದ್ದಾರೆ. ವ್ಯಾಸರಾಯರು ರಾಯನ ಕಾಲದಲ್ಲಿ ಇದ್ದುದರ ವಿವರಣೆಯನ್ನು ನೀಡಿದ್ದಾರೆ. ''ವೆಂಕಟರಾಯರು ರಾಜ್ಯದಲ್ಲಿ ಮುಸಲ್ಮಾನರ ಸಲುವಾಗಿ ಒಂದು ಕುರಾನವನ್ನಿಟ್ಟು ಅದಕ್ಕೇನೆ ಸಲಾಂ ಮಾಡಲಿಕ್ಕೆ ಹೇಳುತ್ತಿದ್ದನು"ಎಂದು ತಪ್ಪಾಗಿ ವಿಶ್ಲೇಷಿಸಿದ್ದಾರೆ. ಮುಂದುವರೆದು ''ಅಪ್ಪಯ್ಯ ದೀಕ್ಷಿತರು ಅಷ್ಟ ದಿಗ್ಗಜಗಳೆಂಬ ಎಂಟು ಮಂದಿಯಲ್ಲಿ ಒಬ್ಬರು ಎಂದು ಹೇಳಿದ್ದಾರೆ".

ಅಚ್ಯುತರಾಯನ 'ಆನಂದ ನಿಧಿ ದಾನ' ಕುರಿತು ಹೇಳಿದ್ದಾರೆ. ಸದಾಶಿವರಾಯನ ಕಾಲದಲ್ಲಿ ಅಳಿಯ ರಾಮರಾಯನು ರಾಜ್ಯಸೂತ್ರಗಳನ್ನು ಹಿಡಿದುಕೊಂಡುದುದರ ಬಗ್ಗೆ ಅಲ್ಲದೆ ಶಾಹಿ ಸುಲ್ತಾನರ ಸಂಬಂಧ, ರಕ್ಕಸತಂಗಡಿ ಯುದ್ಧ ಸೋತ ನಂತರ ಪಟ್ಟಣವನ್ನು ಸುಲಿಗೆ ಮಾಡಿದ ಕುರಿತು ವಿವರಿಸಿದ್ದಾರೆ. ಈ ರೀತಿಯಾಗಿ ರಾಜಕೀಯಕ್ಕೆ ಸಂಬಂಧಿಸಿದಂತೆ ವಿವರಿಸಿದ್ದಾರೆ. ಇವರೊಂದಿಗೆ ನರಸಮನೆತನದ ವಂಶಾವಳಿಯನ್ನು ನೀಡಿದ್ದಾರೆ.

ನರಸ ಮನೆತನ (ತುಳುವ ಮನೆತನ)

ನರಸ ನರಸಿಂಹ (೧೪೯೬-೧೫೦೩)

- ವೀರ ನರಸಿಂಹ (೧೫೦೩-೧೫೦೯)
- ಕೃಷ್ಣರಾಯ (೧೫೦೯-೧೫೨೯)
- ಅಚ್ಯುತರಾಯ (೧೫೩೦-೧೫೪೨)
  - ವೆಂಕಟ ದೇವರಾಯ (೧೫೪೨)
- ರಂಗ
  - ಸದಾ ಶಿವರಾಯ (೧೫೪೩-೧೫೬೭)

ಮುಂದುವರೆದು ಪೇಜನೆಂಬ ಪೋರ್ತುಗೀಸ್ ಪ್ರವಾಸಿ ೧೫೨೦ ರಲ್ಲಿ ರಾಜಧಾನಿಗೆ ಬಂದಿದ್ದನು. ಅವನು ಪಟ್ಟಣವನ್ನು ಅತಿ ವಿಸ್ತಾರವಾಗಿ ವರ್ಣಿಸಿರುವವನು. ಅದರಿಂದ ಇಂಥ ಕಡೆಯ ಸ್ಮಾರಕ ಇತ್ತೆಂದೂ, ಇಂಥ ಗುಡಿಯು ಇಲ್ಲಿಯೆ ಇತ್ತೆಂದೂ ಈಗಲೂ ನೋಡಬಹುದು. ಅದರ ಸ್ವಲ್ಪ ಮಾಹಿತಿಯನ್ನು ಪುಟ ೪೮ರಲ್ಲಿ ವಿವರಿಸಿದ್ದಾರೆ. ವಿಜಯನಗರದ ದೇವಾಲಯಗಳನ್ನು ಕುರಿತು ಪುಟ ೧೦೦-೧೦೩ ರ ವರೆಗೆ ವಿವರಿಸಿದ್ದಾರೆ. ಸುಮಾರು ೨೦೦೦ ಗುಡಿಗಳು ಹಂಪಿಯಲ್ಲಿದ್ದವಂತೆ. ಇಲ್ಲಿ ವಿಠ್ಠಲ ಗುಡಿಯನ್ನು ಮಾತ್ರ ವರ್ಣಿಸಿದ್ದಾರೆ. ಇದು ಕೃಷ್ಣದೇವರಾಯನ ಕಾಲಕ್ಕೆ ಪ್ರಾರಂಭವಾಯಿತು. ಮುಂದೆ ಅಚ್ಯುತರಾಯ ಮತ್ತು ಸದಾಶಿವರಾಯ ಕಾಲದಲ್ಲಿ ಇದರ ಕೆಲಸವು ನಡೆಯುತ್ತಿತ್ತು ಎಂಬುದಾಗಿ ವಿವರಿಸಿದ್ದಾರೆ. ತಾಳಿಕೋಟೆ ಯುದ್ಧದಿಂದ ದೇವಾಲಯ ಕಟ್ಟುವುದು ನಿಂತು ಹೋಯಿತು. ಇದನ್ನು ಕುರಿತು ಮದ್ರಾಸ ಆರ್ಕಿಯಾಲಾಜಿಕಲ್ ಸರ್ವೇಯ ಸುಪರಿಟೆಂಡೆಂಟರಾದ ಮಿ. ರೇ. ಎರಿರವರು ವರ್ಣನೆಯನ್ನು ನೀಡಿದ್ದಾರೆ. "It shows the extreme limit in florid magnificience to which the style advanced. The building is wholly in granite and carved with a boldness and expression of power nowhere surpassed in the buildings of its class." ದೇವಾಲಯವನ್ನು ನಿರ್ಮಿಸಿದ ಮಾಧ್ಯಮಗಳ ಕುರಿತು ವಿಶ್ಲೇಷಿಸಿದ್ದಾರೆ. ವಿಜಯನಗರ ಅರಸರಲ್ಲಿ ಕೆಲವರು ಶೈವರು ಕೆಲವರು ವೈಷ್ಣವರು ಎಂಬುದಾಗಿ ಸ್ಥೂಲವಾಗಿ ಹೇಳಿದ್ದಾರೆ. ಪರಧರ್ಮ ಸಹಿಷ್ಣುತೆಯು ಅರಸರಲ್ಲಿ ಪೂರ್ಣವಾಗಿತ್ತು. ಬುದ್ಧಿ ಬಲದಿಂದಲೆ ಜನರನ್ನು ತಮ್ಮ ಕಡೆಗೆ ಒಲಿಸಿಕೊಳ್ಳುತ್ತಿದ್ದರು ಎಂಬ ವಿವರಣೆಯನ್ನು ನೀಡಿದ್ದಾರೆ.

ವಿವಿಧ ರಾಜರು ಸಾಹಿತ್ಯಕ್ಕೆ ನೀಡಿದ ಕೊಡುಗೆಯನ್ನು ಗುರುತಿಸುತ್ತಾ ರಾಜರು ಕವಿಗಳಾಗಿದ್ದರು ಎಂದು ಮತ್ತು ಕವಯತ್ರಿಯರು ಕೂಡ ಇದ್ದರು ಎಂಬುದಾಗಿ ವಿವರಿಸಿದ್ದಾರೆ. ಕರ್ನಾಟಕದ ಅನೇಕ ಕಡೆಯಲ್ಲಿ ವಿಶ್ವವಿದ್ಯಾಲಯಗಳು ಇದ್ದವು. ಅದರಲ್ಲಿ ವಿಜಯನಗರವು ಒಂದು ಎಂದು ಹೇಳಿದ್ದಾರೆ. ಕನ್ನಡ ಕವಿಗಳು, ದಾಸರುಗಳು ಜೈನ, ಬೌದ್ಧ, ವೀರಶೈವ ಧರ್ಮದವರು ಸಂಸ್ಕೃತ ಗ್ರಂಥಗಳನ್ನು ರಚಿಸಿದರು. ಈ ರೀತಿಯಾಗಿ ಸಾಹಿತ್ಯವನ್ನು ಕುರಿತು ವಿವರಿಸಿದ್ದಾರೆ. ಮುಂದುವರೆದು ಕರ್ನಾಟಕ ಇತಿಹಾಸ ಸಂಶೋಧನೆಯಲ್ಲಿ ಯಾವ ಯಾವ ಗ್ರಂಥಗಳು, ಪತ್ರಿಕೆಗಳು ಇತಿಹಾಸವನ್ನು ಕುರಿತು ವಿವರಿಸುತ್ತಾ ಹೋಗಿದ್ದಾರೆ. ಮುದ್ರಣ ರೀತಿ ತಾಮ್ರ ಶಾಸನಗಳ ಮುದ್ರಣ ಕುರಿತು ವಿವರಿಸಿದ್ದಾರೆ. ಆಲೂರು ವೆಂಕಟರಾಯರು ಕರ್ನಾಟಕ ಮತ್ತು ಕನ್ನಡತೆಯ ಮಹತ್ವವನ್ನು ಇಟ್ಟುಕೊಂಡು ಕರ್ನಾಟಕದ ಮೇಲೆ ಆಗುತ್ತಿರುವ ಅನ್ಯ ಭಾಷೆಗಳ ಆಕ್ರಮಣ, ಕರ್ನಾಟಕದ ವಿಸ್ತಾರ ಮುಂತಾದ ವಿವರಗಳನ್ನು ಅರಿತು ಸಮಯಕ್ಕೆ ಸರಿಯಾಗಿ ವಿವರಿಸುತ್ತಾ ಸಾಗಿದ್ದಾರೆ. ಕರ್ನಾಟಕವನ್ನು ಆಳಿದ ಅರಸು ಮನೆತನಗಳಲ್ಲಿ ವಿಜಯನಗರ ಅರಸು ಮನೆತನ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ್ದಾರೆ. ಅವರುಗಳು ಪೋಷಿಸಿದ ಕಲೆ ವಾಸ್ತುಶಿಲ್ಪ ಈಗಿರುವ ಸ್ಥಿತಿಗತಿಗಳ ಹೋಲಿಕೆಯನ್ನು ಕುರಿತು ವಿವರಿಸಿದ್ದು ಈ ಗ್ರಂಥದಲ್ಲಿ ಅತ್ಯಂತ ಉಪಯುಕ್ತ ಮಾಹಿತಿಯನ್ನು ಸಂಶೋಧನ ವಿದ್ಯಾರ್ಥಿಗಳಿಗೆ ನೀಡುವುದರ ಜೊತೆ ಉತ್ತಮವಾದ ವಿವರಣೆಯನ್ನು ನೀಡಿದ್ದಾರೆ. ವಿಜಯನಗರ ಕುರಿತು ಅರಸರುಗಳು ಕನ್ನಡದವರು ಎಂದು ಹೇಳುವಾಗ ಅವರಿಗೆ ಕನ್ನಡದ ಮೇಲಿನ ಅಭಿಮಾನವನ್ನು ವ್ಯಕ್ತಪಡಿಸಿದ್ದಾರೆ. ಈ ರೀತಿಯಾಗಿ ಲೇಖಕರು ೧೯೧೭ ರಲ್ಲಿಯೇ ವಿಜಯನಗರದ ಕುರಿತು ಉಪಯುಕ್ತ ಮಾಹಿತಿಯನ್ನು ನೀಡಿದ್ದಾರೆ.

"ವಿ. ಸೀತಾರಾಮಯ್ಯನವರು ಪಂಪಯಾತ್ರೆಯನ್ನು ೧೯೨೬ ರಲ್ಲಿ ಪ್ರಕಟಿಸಿದರು. ವಿ. ಸೀ. ಯವರು ಹಂಪಿಯನ್ನು ಸಂದರ್ಶಿಸಿದ ವಿವರಗಳನ್ನು ಒಳಗೊಂಡಿದೆ. ಇದು ಪ್ರಬುದ್ಧ ಕರ್ನಾಟಕದಲ್ಲಿ ನಾಲ್ಕು ಸಂಚಿಕೆಗಳಲ್ಲಿ ಭಾಗಶಃ ಪ್ರಕಟಗೊಂಡಿತು." ವಿಜಯನಗರ ಕಾಲದ ಮತ್ತು ಕಲೆಯ ಇತಿಹಾಸ ಸಾಂಗತ್ಯ, ಅದಕ್ಕೆ ಒಂದು ವಿಶೇಷ ಮೆರುಗನ್ನು ಕೊಟ್ಟಿದ್ದು ಈ ಪ್ರಬಂಧದಲ್ಲಿ ಡಿ. ವಿ. ಗುಂಡಪ್ಪ, ವೆಂಕಟ ನಾರಾಯಣಪ್ಪನವರು, ಟಿ. ಎಸ್. ವೆಂಕಣ್ಣಯ್ಯನವರು, ಎಮ್. ಆರ್. ಶ್ರೀನಿವಾಸ ಮೂರ್ತಿ ಇವರುಗಳು ವಿ. ಸೀ. ಯವರ ಜೊತೆಯ ಪ್ರವಾಸಿಗರು. ಬೆಳಗಾವಿ ಸಾಹಿತ್ಯ ಸಮ್ಮೇಳನ ೧೯೨೫ ರಲ್ಲಿ ಮುಗಿದ ಕೂಡಲೆ ಯಾತ್ರೆ ಕೈಗೊಂಡಿದ್ದರು. ಈ ಪ್ರವಾಸಿ ಕಥನದಲ್ಲಿ ಹಂಪಿಯಲ್ಲಿ ಕಾಣುವ ಹಾಳು ಬಿದ್ದ ಮಂಟಪಗಳು ದೇವಾಲಯಗಳು, ಹಾವು, ಚೇಳು, ಕಪ್ಪೆ ಇವರು ಉಳಿದುಕೊಂಡಿದ್ದ ರಾತ್ರಿಯ ದಿನಗಳು, ಮರಳಿ ಹೋಗುವ ನಿರ್ಧಾರ, ಮುಂದುವರೆದು ಪಂಪ ಸರೋವರ ವಿಠ್ಠಲದೇವಾಲಯವನ್ನು ನೋಡಿಕೊಂಡು ಹೋಗಬೇಕೆಂಬ ಹಂಬಲ

ಸ್ನಾನ ಮಾಡಿ ಕಾಫಿ ಕುಡಿದು ಯಾತ್ರೆಯನ್ನು ಪ್ರಾರಂಭಿಸಿದರು. ಅವರ ಹಜಾರರಾಮ ಸ್ವಾಮಿ ದೇವಾಲಯದ ಕಟ್ಟೆಯ ಮೇಲೆ ಮಲಗಿ ಮೂರು ಗಂಟೆಗಳ ಕಾಲ ನಿದ್ರೆ ಮಾಡಿ ವಿದ್ಯಾರಣ್ಯರಿಗೆ ಅಭಿಷೇಕ ಮಾಡಿಸಿದರು. ಅಲ್ಲಿಂದ ಪಂಪಾ ಸರೋವರವನ್ನು ನೋಡಲು ತೀರ್ಮಾನಿಸಿದರು. ಚನ್ನಯ್ಯ ಬಾರದೆ ಇದ್ದಾಗ ಹಂಪೆಯ ಹಾಳುಗಳ ಪುಸ್ತಕವೊಂದನ್ನು ಕೈಯಲ್ಲಿ ಹಿಡಿದುಕೊಂಡು ಹೊರಟ ವಿಷಯವನ್ನು ಪುಟ ೨೨ ರಲ್ಲಿ ತಿಳಿಸಿದ್ದಾರೆ. "ಈ ಹಾಳು ಪುಸ್ತಕ ಜೀರ್ಣ ವಿಜಯನಗರಾದರ್ಶಂ" ಇರಬಹುದು ಎಂದು ಲಕ್ಷ್ಮಣ ತೆಲಗಾವಿಯವರು ಅಭಿಪ್ರಾಯಪಟ್ಟಿದ್ದಾರೆ. ಜೊತೆಗೆ ಎ. ಎಮ್. ಲಾಂಗಹರ್ಸ್ಟ್‌ರವರ ಹಂಪಿ ರೊಯಿನ್ಸ್ ಆಂಗ್ಲಭಾಷಾ ಕೈಪಿಡಿ ಇದು ೧೯೧೭ ರಲ್ಲಿ ಕಲ್ಕತ್ತಾದಿಂದ ಪ್ರಕಟಗೊಂಡ ಕೃತಿ ಇದನ್ನು ಅವಲಂಬಿಸಿರಬಹುದು. ವಿರೂಪಾಕ್ಷ ದೇವಾಲಯದ ತೇರು ಬೀದಿ ಬೃಹದಾಕಾರದಲ್ಲಿಯ ಬಸವನ ವಿಗ್ರಹ ಊಹಿಸಿಕೊಂಡು ಹಾಸ್ಯಾಸ್ಪದವಾಗಿ ಮಾತನಾಡಿದ ವಿವರಣೆ. ರಥಬೀದಿಯಿಂದ ಮುಂದುವರೆದು ಅಚ್ಯುತ ದೇವಾಲಯಕ್ಕೆ ಹೋದರು. ಅಲ್ಲಿಯೇ ನರಸಿಂಹ ದೇವಾಲಯ ಒಂದು ಇದೆ ಎಂದು ಹೇಳತ್ತಾರೆ. ಅಲ್ಲಿಂದ ಹೊರಟು ಮುಂದೆ ಸಾಗಿದರೆ, ಕೋದಂಡರಾಮಸ್ವಾಮಿ, ಲಕ್ಷ್ಮೀನಾರಾಯಣ ಸ್ವಾಮಿಯ ದೇವಸ್ಥಾನದ ಬಗ್ಗೆ ಹೇಳುತ್ತಾ ಮುಂದೆ ಹೋಗುತ್ತ ತುಲಾಪುರುಷ, ಧಾನಸ್ತಂಭಗಳು ಇವೆಲ್ಲವುಗಳನ್ನು ಕುರಿತು ವಿವರಿಸಿದ್ದಾರೆ. ಮುಂದೆ ವಿಠ್ಠಲಸ್ವಾಮಿ ದೇವಾಲಯದ ಬಗ್ಗೆ ವಿವರಿಸುತ್ತಾ ವಿಠ್ಠಲಸ್ವಾಮಿ ದೇವಾಲಯಗಳ ಶಿಲ್ಪಕಲೆ, ಸಂಗೀತ ಕವಿಗಳು ಅವರೊಂದಿಗೆ ಇದ್ದ ರಾಜರ ಸಂಬಂಧಗಳ ಕುರಿತು ವಿವರಿಸಿದ್ದಾರೆ. ನಂತರ ಆನೆಗುಂದಿಯ ಸ್ಥಳಗಳನ್ನು ಕುರಿತು ವಿವರಿಸಿದ್ದಾರೆ. ಮುಂದುವರೆದು ರಾಮರಾಯನ ಕಾಲವನ್ನು ಮತ್ತು ವೈಭವವನ್ನು ಕುರಿತು ಕನಸು ಕಂಡದ್ದನ್ನು ಅರಿತು ವಿವರಿಸಿದ್ದಾರೆ.

ಇಲ್ಲಿ ಲೇಖಕರು ದೇವಾಲಯ ಮತ್ತು ಸ್ಥಳಗಳ ವಿವರಣೆಯನ್ನು ನೀಡುತ್ತಾ ಅದರ ಐತಿಹಾಸಿಕ ಮಹತ್ವವನ್ನು ವಿವರಿಸುತ್ತಾ ಹೋಗುತ್ತಾರೆ. ಮುಂದುವರೆದು ಅವುಗಳ ಸ್ಥಿತಿಗತಿಗಳ ಕುರಿತು ವಿವರಿಸಿದ್ದಾರೆ. ಪಂಪ ಯಾತ್ರೆಯನ್ನು ಕುರಿತು ಲಕ್ಷ್ಮಣ ತೆಲಗಾವಿಯವರು ಹಂಪೆಯ ಹಾಳುಗಳ ಪುಸ್ತಕವೊಂದನ್ನು ಕೈಲಿ ಹಿಡಿದುಕೊಂಡು ಹೊರಟ ಸೂಚನೆಯನ್ನು ವಿ. ಸೀ. ಯವರು ತಮ್ಮ ಪ್ರವಾಸ ಕಥನದಲ್ಲಿ ಕೊಡುತ್ತಾರೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ವಿ. ಸೀ. ಅವರ ಪಂಪಯಾತ್ರೆ ಕೃತಿಯು ಪ್ರವಾಸಿ ಕೈಪಿಡಿಯಂತಿರದೆ ಪ್ರವಾಸ ಕಥನ ಸ್ವರೂಪದಲ್ಲಿದೆ. ಹಾಗೂ ಪ್ರವಾಸ ಸಾಹಿತ್ಯ ಪ್ರಕಾರಕ್ಕೆ ಸಂಬಂಧಿಸಿದೆ. ಈ ಕೃತಿಯು ಮತ್ತು ಕರ್ನಾಟಕ ಯಾತ್ರೆಯ ದಿಕ್ಕಿನಲ್ಲಿ ಮೊದಲ ಕೃತಿ ಮಾತ್ರವಲ್ಲದೆ ಕರ್ನಾಟಕದಲ್ಲಿ ಪ್ರವಾಸ ಸಾಹಿತ್ಯ ಪ್ರಾರಂಭಗೊಂಡ ಕಾಲಕ್ಕೆ ಹೆಸರಿಸ ಬಹುದಾದ ಬಹುದೊಡ್ಡ ಕೃತಿಯೆಂದು ಪರಿಗಣಿಸಲ್ಪಟ್ಟಿದೆ. ಈ ಕೃತಿಯ ಶೀರ್ಷಿಕೆಯೇ ಸೂಚಿಸುವಂತೆ ಇದು ಕೇವಲ ಹಂಪೆಯ ಪರಿಸರ ಕುರಿತು ವರ್ಣನಾತ್ಮಕ ವಿವರಗಳು

ಳ್ಳದ್ದು. ಪಂಪಯಾತ್ರೆಯು ಪ್ರಕಟಗೊಂಡು ೮೦ ವರ್ಷಗಳು ಕಳೆದಿವೆ. ಇದು ಹಂಪಿಯಲ್ಲಿರುವ ಅವಶ್ಯಕಗಳ ಮತ್ತು ಪರಿಸರದ ವಿವರಣೆಯನ್ನು ಮಾತ್ರ ಒಳಗೊಂಡಿದೆ. ಇದು ಪ್ರವಾಸ ಸಾಹಿತ್ಯ ಪ್ರಕಾರಕ್ಕೆ ಸಂಬಂಧಿಸಿದೆ.

"ಅರುಣೋದಯ ಸಂಪಾದಕರಿಂದ 'ವಿಜಯನಗರ ಸಾಮ್ರಾಜ್ಯ ಸ್ಮಾರಕ ಮಹೋತ್ಸವ ಸಂಚಿಕೆಯು ೧೯೩೬ ರಲ್ಲಿ ಪ್ರಕಟಗೊಂಡಿದೆ. ಇದರಲ್ಲಿ ವಿಜಯನಗರ ಸಾಮ್ರಾಜ್ಯ ಕುರಿತು ಹಲವಾರು ವಿದ್ವಾಂಸರು ರಚಿಸಿದ ೮೦ ಲೇಖನಗಳ ಸಂಗ್ರಹವಿದೆ. ೨೬೪ ಪುಟಗಳನ್ನು ಒಳಗೊಂಡಿದೆ." ಇದರಲ್ಲಿ ಆಲೂರು ವೆಂಕಟರಾಯರು ಬರೆದ ವಿಜಯನಗರದ ಉತ್ಸವ ಆಧ್ಯಾತ್ಮಿಕ ಅರ್ಥ ಲೇಖನದಿಂದ ಪ್ರಾರಂಭಗೊಂಡು ಜಿ. ವರದರಾಜ ರಾವ್ ಬೆಂಗಳೂರು ಅವರ ವಿಜಯನಗರದ ವೈಭವ, ಶ್ರೀ ದಿವಾಕರ ರಂಗರಾಯರ ಕರ್ಮಯೋಗಿ ವಿದ್ಯಾರಣ್ಯರು, ಶ್ರೀ ರಂ. ಶ್ರೀ. ಮುಗಳಿಯವರ ವಿಜಯನಗರ ಸಾಮ್ರಾಜ್ಯ, ಶ್ರೀ ವಿಕ್ರಮ ಬೆಂಗಳೂರು ಇವರು ವಿಜಯನಗರದ ವೈಭವ, ಶ್ರೀ ಎಂ. ಎಸ. ಸರದಾರರ ವಿಜಯನಗರ ಸಾಮ್ರಾಜ್ಯದ ಘನತೆ, ಶ್ರೀ ಎ. ಎಮ್. ಪಾಟೀಲರ ವಿಜಯನಗರ ಸಾಮ್ರಾಜ್ಯದಲ್ಲಿ ಸ್ತ್ರೀಯರ ಸ್ಥಾನ, ಶ್ರೀ. ಆರ್. ವಿ. ಸಾಲೆತ್ತೊರ ಅವರ ವಿಜಯನಗರದ ದೇವಸ್ಥಾನಗಳ ಶಿಲ್ಪಕಲೆಯ ವೈಶಿಷ್ಟ್ಯ, ಶ್ರೀ ಕೆ. ಎನ್. ದೇಶಪಾಂಡೆ ಅವರು ಕೃಷ್ಣದೇವರಾಯನ ಕಾಲದ ವಿಜಯನಗರದ ಸುಧಾರಣೆಗಳು ಇತ್ಯಾದಿ ಲೇಖನಗಳೊಂದಿಗೆ ೮೦ ಲೇಖನಗಳು ಮುಕ್ತಾಯವಾಗಿವೆ.

ಈ ಮೇಲಿನ ಲೇಖನಗಳು ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಕಲೆಯ ಬಗೆಗೆ ಆಗಿನ ಕಾಲದ ಸ್ತ್ರೀಯರ ಸ್ಥಾನಮಾನದ ಬಗೆಗೆ ಕೃಷ್ಣದೇವರಾಯನ ಕಾಲದ ವಿಜಯನಗರದ ಸುಧಾರಣೆಗಳು ಕೊನೆಗೆ ಅವನತಿಯನ್ನು ಹೊಂದಿ ಹಾಳು ಹಂಪೆಯಾದ ವಿಷಯದ ಮೇಲೆ ಅನೇಕ ಲೇಖನಗಳನ್ನು ಪ್ರಕಟಿಸಿದ್ದಾರೆ. ಒಂದು ಕಾಲದಲ್ಲಿ ಅತಿ ಘನತೆಗೇರಿದ ಹಾಗೂ ತನ್ನ ಕೀರ್ತಿಯಿಂದ ಇಡೀ ವಿಶ್ವವನ್ನೇ ಬೆಳಗಿಸಿದ ವಿಜಯನಗರದ ಕುರಿತು ೬೦೦ ವರ್ಷದ ಸ್ಮರಣೆಗೋಸ್ಕರ ಬಿಡುಗಡೆಯಾದ ಸ್ಮರಣ ಸಂಚಿಕೆಯಲ್ಲಿ ಬೇರೆ ಬೇರೆ ಸಾಹಿತಿಗಳು ತಮ್ಮ ವಿದ್ವತ್ ಪೂರ್ಣವಾದ ಲೇಖನಗಳನ್ನು ಬರೆದಿರುವರು. ಇದು ವಿಜಯನಗರ ಇತಿಹಾಸ ಲೇಖನದಲ್ಲಿ ಸಿವೆಲನ ಕೃತಿಯ ನಂತರ ಇನ್ನೊಂದು ಮುಖ್ಯವಾದ ಮಜಲು. ಸುಪ್ರಸಿದ್ಧ ಇತಿಹಾಸ ತಜ್ಞರಾದ ಬಿ. ಎ. ಸಾಲೆತೊರೆ, ಎಸ್. ಕೃಷ್ಣಸ್ವಾಮಿ ಅಯ್ಯಂಗಾರ, ವೆಂಕಟರಮಣಯ್ಯ ಮೊದಲಾದವರು ವಿಜಯನಗರ ಸ್ಥಾಪನೆಯ ಉದ್ದೇಶ ಕುರಿತು ಹಲವು ಅಂಶಗಳನ್ನು ಚರ್ಚಿಸಿದರು. ವಿಜಯನಗರ ಸ್ಥಾಪಕರು ಕನ್ನಡಿಗರೋ ಅಥವಾ ತೆಲುಗರೋ, ಹಿಂದೂ ರಾಷ್ಟ್ರೀಯತೆಯ ಭಾಷಾ ಪ್ರತ್ಯೇಕತೆ ಇತ್ಯಾದಿ ಈ ಗ್ರಂಥಗಳಲ್ಲಿ ಸೇರಿದ ಹಲವು ಲೇಖನಗಳಲ್ಲಿ ವಿಮರ್ಶೆಗಿಂತ ಗತಕಾಲವನ್ನು ಕುರಿತ ವೈಭವೀಕರಣವು ಅನೇಕ ಲೇಖನಗಳಲ್ಲಿ ಮೂಡಿ ಬಂದಿದೆ. ಈ

ಬಾರಕೂರು......ಸೋಮೇಶ್ವರ ದೇವಾಲಯದ ವೀರ ಹರಿಹರನ ತಾಮ್ರ ಶಾಸನ ೪೧೭

ಮೇಲಿನ ಕೃತಿಗಳಲ್ಲದೆ ಈ ಅಧ್ಯಯನದ ಅವಧಿಯಲ್ಲಿ ಇನ್ನು ಹಲವಾರು ಕೃತಿಗಳು ಪ್ರಕಟಗೊಂಡಿವೆ.

ಗ್ರಂಥ ಋಣ

೧. ರಾಬರ್ಟ್ ಸಿವೆಲ್, 'ಎ ಫರಗಾಟನ್ ಎಂಪೈರ್', ಏಷಿಯನ್ ಎಜ್ಯುಕೇಶನಲ್ ಸರ್ವಿಸಸ್, ನವದೆಹಲಿ, ೧೯೦೦.

೨. ಆಲೂರು ವೆಂಕಟರಾಯರು, *ಕರ್ನಾಟಕ ಸಿಂಹಾಸನಚಾರ್ಯ ವಿದ್ಯಾರಣ್ಯರು*, ಧಾರವಾಡ, ೧೯೦೯

೩. ಪ್ರೊ. ಲಕ್ಷ್ಮಣ್ ತೆಲಗಾವಿ (ಸಂ). ಕೆ. ರಾಮಸ್ವಾಮಿಯ್ಯಂಗಾರವರ '*ಜೀರ್ಣ ವಿಜಯನಗರ ದರ್ಶನ*, ಹಂಪಿ, ೨೦೦೬.

೪. ಆಲೂರು ವೆಂಕಟರಾಯರು, '*ಕರ್ನಾಟಕ ಗತವೈಭವ*', ಧಾರವಾಡ, ೧೯೧೭.

೫. ವಿ. ಸೀತಾರಾಮಯ್ಯ, ''ಪಂಪಯಾತ್ರೆ'' ಕರ್ನಾಟಕ ಸರಕಾರ ಪ್ರಥಮ ವಿಶ್ವ ಸಮ್ಮೇಳನ ಸಾಹಿತ್ಯ ಮಾಲೆ, ಬೆಂಗಳೂರು ೧೯೨೬, ೫ ನೆಯ ಮುದ್ರಣ- ೧೯೮೩.

೩೯. ಚಂದ್ರಮೌಳೇಶ್ವರ ದೇವಾಲಯ ನಿರ್ಮಾಣ ಕಾಲ

ಡಾ.ಜಗದೀಶ

ಬಳ್ಳಾರಿ ಮತ್ತು ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಗಳ ಗಡಿಯಲ್ಲಿ ತುಂಗಭದ್ರಾ ನದಿಯು ಹರಿಯುತ್ತದೆ. ಈ ನದಿಯು ಅನೇಕ ಕಡೆ ಎರಡು ಕವಲಾಗಿ ಒಡೆದು ಮತ್ತೆ ಒಂದುಗೂಡುತ್ತದೆ. ಹೀಗೆ ಅನೇಕ ದ್ವೀಪಗಳು ಆಗಿವೆ. ವಿರುಪಾಕ್ಷ ದೇವಾಲಯದ ಹತ್ತಿರದಲ್ಲಿ ತುಂಗಭದ್ರಾ ನದಿಯು ಎರಡು ಕವಲಾಗಿ ಒಡೆದು ನಂತರ ಮುಂದೆ ಚಂದ್ರಮೌಳೇಶ್ವರ ದೇವಾಲಯದ ಬಳಿ ಒಂದುಗೂಡುತ್ತದೆ.ಈ ದ್ವೀಪವನ್ನು ವಿರುಪಾಪುರ ಗಡ್ಡೆ ಎಂದು ಕರೆಯುತ್ತಾರೆ.

ಚಂದ್ರಮೌಳೇಶ್ವರ ದೇವಾಲಯ ಕೊಪ್ಪಳ ಜಿಲ್ಲೆಯ ಆನೆಗೊಂದಿಯ ಭಾಗದಲ್ಲಿದೆ. ಈ ದೇವಾಲಯ ನಿರ್ಮಾಣ ಕಾಲವನ್ನು ನಿರ್ದೇಶಿಸುವ ಶಾಸನಗಳು ಇಲ್ಲ, ಅಲ್ಲದೆ ದೇವಾಲಯಕ್ಕೆ ನೀಡಲಾದ ಯಾವ ಶಾಸನಗಳೂ ಇದುವರೆಗೂ ದೊರೆತಿಲ್ಲ. ದೇವಾಲಯ ನಿರ್ಮಾಣದ ಕಾಲವನ್ನು ಮಿಚೆಲ್ 16ನೆಯ ಶತಮಾನದ ಆದಿಭಾಗವೆಂದು ಮಿಚೆಲ್ ಮತ್ತು ವ್ಯಾಗನೇರ್ 15ನೆಯ ಶತಮಾನದ ಮಧ್ಯ ಭಾಗವೆಂದು, ತುಳುವ ವಂಶದ ಪಾರಂಭಿಕ ಕಾಲವೆಂದು, ಅನಿಲಾ ವರ್ಗೀಸ್ ದೊರೆ ಮಲ್ಲಿಕಾರ್ಜುನನ ಕಾಲದಲ್ಲಿ (ಕ್ರಿ.ಶ. 1446-1465) ಆಗಿರಬಹುದೆಂದು ಊಹಿಸಿ ದ್ದಾರೆ. ಇದೇ ಕಾಲದಲ್ಲಿ ನಿರ್ಮಿಸಿರಬಹುದಾದ ಮತ್ತೊಂದು ದೇವಾಲಯವೆಂದರೆ ನಿಂಬಾಪುರದ ಸೌಮ್ಯ ಸೋಮೇಶ್ವರ ದೇವಾಲಯ ಎಂದು ಅಭಿಪ್ರಾಯ ಪಡುತ್ತಾರೆ.

ಚಂದ್ರಮೌಳೇಶ್ವರ ದೇವಾಲಯ ತಲುಪಲು ವಿಠಲಾಪುರ ಕಡೆಯಿಂದ ನದಿಯನ್ನು ದಾಟಲು ಕಲ್ಲಿನ ಸೇತುವೆಯನ್ನು ನಿರ್ಮಿಸಲಾಗಿದೆ. ಅದೇ ರೀತಿ ಹನುಮನಹಳ್ಳಿಯಿಂದ ನದಿಯ ಇನ್ನೊಂದು ಕವಲು ದಾಟಿ ಬರಲು ಇದೇ ಕಲ್ಲಿನ ಸೇತುವೆಯ ಮುಂದುವರಿದ ಭಾಗ ಇದೆ. ದೇವಕುಂಜರಿ ಅವರು ತಳವಾರಘಟ್ಟ ಮತ್ತು ಆನೆಗೊಂದಿಯ ನಡುವೆ ಇದ್ದ ಹರಗೋಲು ಕುರಿತಾದ ಶಾಸನ ಆಧರಿಸಿ ಕಲ್ಲಿನ ಸೇತುವೆಯು ಕಂಪ ಭೂಪನ (ಎರಡನೆಯ ಹರಿಹರನ ಸಹೋದರ ಕ್ರಿ.ಶ.1377-1404) ಅವಧಿಯಲ್ಲಿ ಆಗಿರ ಬೇಕೆಂದು ಊಹಿಸಿದ್ದಾರೆ. ಅನಿಲಾ ವರ್ಗಿಸ್ ಅವರು ವಿಠಲಾಪುರ ಕೋಟೆಯ ಗೋಡೆಯ ನಿರ್ಮಾಣ ಕಾಲದೊಂದಿಗೆ ಸಮೀಕರಿಸಿ ಕ್ರಿ.ಶ. 1535 ಮತ್ತು ಕ್ರಿ.ಶ. 1556 ಹರಗೋಲು ಶಾಸನ ಆಧರಿಸಿ ಸೇತುವೆಯ ಸುಮಾರು ಕ್ರಿ.ಶ. 1520ರಲ್ಲಿ

ಆಗಿರಬಹುದೆಂದು ಅಭಿಪ್ರಾಯಪಡುತ್ತಾರೆ. ಜಾನ್ ಫ್ರಿಟ್ಸ್ ದೇವಾಲಯವು 15ನೆಯ ಶತಮಾನಕ್ಕೆ ಮತ್ತು ಕಲ್ಲಿನ ಸೇತುವೆಯು 16ನೆಯ ಶತಮಾನಕ್ಕೆ ಸೇರಬಹುದೆಂದು ಅಭಿಪ್ರಾಯ ಪಡುತ್ತಾರೆ. ಇನ್ನು ಕೆಲವರು ಸೇತುವೆಯ ಕಾಲವನ್ನು ಕ್ರಿ.ಶ. 1400 ರಿಂದ 1650ರ ಅವಧಿಗೆ ಸೇರಿಸುತ್ತಾರೆ.

ಚಂದ್ರಮೌಳೇಶ್ವರ ದೇವಾಲಯವನ್ನು ಉಲ್ಲೇಖಿಸುವ ಎರಡು ಶಾಸನಗಳಿಂದ, ದೇವಾಲಯ ನಿರ್ಮಾಣ ಕಾಲವನ್ನು ನಿರ್ಣಯಿಸಲು ಸಹಕಾರಿ. ಈಗ ಅಂದಾಜು ಮಾಡಲಾಗಿರುವ ಕಾಲಕ್ಕಿಂತ ಹಿಂದಕ್ಕೆ ಹಾಕಲು ಸಹಾಯಕವಾಗಿದೆ. ಗೋವನಹಳ್ಳಿ ಮತ್ತು ಅದರ ಅಂಗವಾದ ಬೊಮ್ಮನಹಳ್ಳಿ ಗ್ರಾಮಗಳನ್ನು ದೇವರಾಯಪುರವೆಂದು ಮರು ನಾಮಕರಣ ಮಾಡಿ ಚಂದ್ರಮೌಳೇಶ್ವರ ಸನ್ನಿಧಿಯಲ್ಲಿ ಸರ್ವನಮಸ್ಯವಾಗಿ ದೇವರಾಯನ ಹೃದಯರೋಗವನ್ನು ವಾಸಿ ಮಾಡಿದ ನಾಗಭಟ್ಟನಿಗೆ (ನಾಗನಾಥಾರ್ಯ ಸೂರಿ) ದಾನ ನೀಡಲಾದ ತಾಮ್ರ ಶಾಸನ ಕ್ರಿ.ಶ. 1445 ಏಪ್ರಿಲ್ 18ಕ್ಕೆ ಸೇರಿದ್ದು, ಅದರಲ್ಲಿನ ವಿವರ ಹೀಗಿದೆ - ಚೈತ್ರಮಸಿ ನವಮ್ಯಾಂ ಚಂದ್ರಮೌಲೇಶ ಸಂನಿಧೌ...(ಪ್ರೌಢದೇವರಾಯನ ಶಾಸನಗಳು, ಡಾ. ಡಿ.ವಿ. ಪರಮಶಿವಮೂರ್ತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ 2007. ನಂ178 ಹಾಗೂ ಎ.ಕ. 9 (ಪ) ಬೇಲೂರು ತಾಲೂಕು ಹಾಸನ ಜಿಲ್ಲೆ). ಇನ್ನೊಂದು ತಾಮ್ರ ಶಾಸನ ಜೋಡಿಸಾದನಹಳ್ಳಿ ಗ್ರಾಮದಲ್ಲಿ ದೊರೆತಿದ್ದು ಕ್ರಿ.ಶ. 1425 ನವೆಂಬರ್ 26ರಂದು ಹೊರಡಿಸಲಾಗಿದ್ದು ಕೇಶವ ಪಂಡಿತನಿಗೆ ಮಾದಗೊಂಡನಹಳ್ಳಿ ಮತ್ತು ಸಾಧುವಳ್ಳಿ ಗ್ರಾಮಗಳನ್ನು ಸರ್ವನಮಸ್ಯವಾಗಿ ದಾನ ನೀಡಲಾದ ಶಾಸನದ ಸಾಲುಗಳು ಹೀಗಿವೆ-ಮೃಗಶಿರಸ್ಯರುಣ ವಾರೇ ಪ್ರಶಸ್ತೇ ಭಾಸ್ಕರ ಕ್ಷೇತ್ರೇ ತುಂಗಭದ್ರಾ ತಟಸ್ಯಶಿ | ಶ್ರೀ ಚಂದ್ರಮೌಳೇರ್ದೇವಸ್ಯ ಸಂನಿಧೌ ಸರ್ವಸಂನಿದೌ (ಪೂರ್ವೋಕ್ತ. ನಂ. 17, ಎ.ಕ. 9, ದೇವನಹಳ್ಳಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ)

ಈ ಎರಡು ಶಾಸನಗಳಿಂದ ಚಂದ್ರಮೌಳೇಶ್ವರ ದೇವಾಲಯ ಕ್ರಿ.ಶ. 1425ಕ್ಕಿಂತ ಮೊದಲು ಇತ್ತೆಂದು ನಿಸ್ಸಂಶಯವಾಗಿ ಹೇಳಬಹುದು. ಬಾಳೆಹೊನ್ನೂರು ಗುರುಗಳು ಚಂದ್ರಮೌಳೇಶ್ವರ ಲಿಂಗವನ್ನು ಶೃಂಗೇರಿ ಗುರುಗಳಿಗೆ ನೀಡಿದರೆಂದು ಪ್ರತೀತಿಯಿದೆ. ಶೃಂಗೇರಿ ಗುರುಗಳಿಗೆ ಚಂದ್ರಮೌಳೇಶ್ವರ ಲಿಂಗ ಪವಿತ್ರವಾಗಿರುವ ಕಾರಣ ವಿಜಯ ನಗರ ಸ್ಥಾಪನೆಗೆ ನೆರವಾದ ಶೃಂಗೇರಿ ಗುರುಗಳ ಪ್ರೇರಣೆಯಿಂದ ಆನೆಗೊಂದಿಯ ಕ್ಷೇತ್ರದಲ್ಲಿ ಚಂದ್ರಮೌಳೇಶ್ವರ ದೇವಾಲಯ ನಿರ್ಮಾಣವಾಗಿರಬಹುದು.

ವಿರುಪಾಪುರ ಗಡ್ಡೆ ಭಾಗದಲ್ಲಿ ಹನುಮನಹಳ್ಳಿ ಕಡೆಗೆ ಹುಟ್ಟು ಬಂಡೆಯ ಮೇಲೆ ಹೊಸ ಶಾಸನವೊಂದು ದೊರೆಕಿದ್ದು ಅದರಲ್ಲಿ ಚಕ್ರ, ನಾಮ ಮತ್ತು ಶಂಕ ಚಿನ್ಹೆ ಹಾಗೂ ಎರಡು ಸಾಲಿನ ಶಾಸನ ಇದೆ.


1. ವಿರುಪಾಪುರಃ

2. ಶ್ರೀ ತಿರುಮಲದೇವ


ಇನ್ನೊಂದು ಶಾಸನ ಈಗಿನ ಆನೆಗೊಂದಿಯಲ್ಲಿರುವ ರಾಜ ವಂಶಜ ಅಚ್ಯುತ ದೇವರಾಯ ಅವರ ಜಮೀನಿನ ಹತ್ತಿರ ತುಂಗಭದ್ರಾ ನದಿಯಲ್ಲಿ ಒಂದು ಸಾಲಿನ ಶಾಸನ ಮತ್ತು ಕಲ್ಲಿನಲ್ಲಿ ಲಿಂಗವನ್ನು ಕೊರೆದಿರುವ ಭಾಗ ಶೋಧಿತವಾಗಿದೆ. ಶಾಸನದ ಪಾಠ ಹೀಗಿದೆ.

1 ಶ್ರೀ ವಿರುಪಾಕ್ಷದೇವ ಕೊಟಿಕಲಲಿ|


(ಶಾಸನವನ್ನು ತೋರಿಸಿದ ಹನುಮನಹಳ್ಳಿಯ ಕೆ. ಹಲುಗಪ್ಪ ತಂದೆ ಕೆ. ಶಿವಪ್ಪ ಹಾಗೂ ಚಂದ್ರಶೇಖರ ರೆಡ್ಡಿ ತಂದೆ ಗಂಗಾರೆಡ್ಡಿ ಅವರಿಗೆ ಕೃತಜ್ಞತೆಗಳು)



ವಿರುಪಾಪುರ ಗಡ್ಡೆ ಶಾಸನ



ತುಂಗಭದ್ರಾ ನದಿಯಲ್ಲಿನ ಶಾಸನ ಮತ್ತು ಲಿಂಗು



೪೦. ಬೈಲಹೊಂಗಲ ಪ್ರದೇಶದ ವೀರ-ಮಹಾಸತಿ ಶಿಲ್ಪಗಳು

(ವಿಜಯನಗರ ಮತ್ತು ವಿಜಯನಗರೋತ್ತರ ಕಾಲ)

ಡಾ. ಆರ್.ಎಂ.ಷಡಕ್ಷರಯ್ಯ

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಪ್ರದೇಶದ ವಿವಿಧ ಸ್ಥಳಗಳಿಂದ ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ಅನೇಕ ವೀರಗಲ್ಲುಗಳನ್ನು, ವೀರ-ಮಾಸ್ತಿಕಲ್ಲುಗಳನ್ನು ಸಂಗ್ರಹಿಸಿ ಕರ್ನಾಟಕ ರಾಜ್ಯ ಪುರಾತತ್ವ ಇಲಾಖೆಯ ನಿರ್ದೇಶನಾಲಯವು ಕಿತ್ತೂರಿನ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶಿಸಿದೆ. ಈ ಸ್ಮಾರಕ ಶಿಲ್ಪಗಳ ಕಲಾ ಇತಿಹಾಸವು ವೈವಿಧ್ಯಮಯವಾಗಿದೆ.

ವೀರ-ಮಹಾಸತಿಯರ ಆರು ಶಿಲ್ಪಗಳನ್ನು ಇಲ್ಲಿ ಪ್ರದರ್ಶಿಸಲಾಗಿದೆ. ಅವುಗಳಲ್ಲಿ ವೀರ ಮತ್ತು ಸತಿಯರಿಬ್ಬರೂ ನಿಂತ ಭಂಗಿಯಲ್ಲಿರುವವರು. ಇವರನ್ನು ಸಾಮಾನ್ಯವಾಗಿ ಆಳೆತ್ತರವಾಗಿ ತೋರಿಸಲಾಗಿದೆ. ಒಂದರಲ್ಲಿ ಪ್ರತ್ಯೇಕ ಪಟ್ಟಿಕೆಗಳಿದ್ದು, ಅದರಲ್ಲಿ ವೀರ ಮಹಾಸತಿಯರನ್ನು ವಿವಿಧ ರೀತಿಯಲ್ಲಿ ನಿರೂಪಿಸಲಾಗಿದೆ.

ಕಾದ್ರೋಳಿಯ ವೀರ ಮಹಾಸತಿ ಶಿಲ್ಪದಲ್ಲಿ ಎರಡು ಫಲಕಗಳಿದ್ದು, ಕೆಳ ಫಲಕದಲ್ಲಿ ದಂಪತಿಗಳನ್ನು ಒಂದೇ ಎತ್ತರದಲ್ಲಿ ತೋರಿಸಲಾಗಿದೆ. ಈರ್ವರೂ ವಸ್ತ್ರಾಭರಣ ಧಾರಿಗಳು, ವೀರ ತ್ರಿಭಂಗಿಯಲ್ಲಿ ನಿಂತಿದ್ದು ಸೊಂಟಕ್ಕೆ ಕಠಾರಿಯನ್ನು ಕಟ್ಟಿದ್ದಾನೆ. ಬಲಗೈಯನ್ನು ಎಡಗೈ ಬಾಗಿಸಿ ಕಠೋರಿಯ ಒಂದು ತುದಿಯನ್ನು ಹಿಡಿದಿದ್ದಾನೆ. ವೀರಾವೇಷದಿಂದ ನಿಂತ ಈತನು ತನ್ನ ಎಡಗೈಯನ್ನು ಎಡಗಾಲಿನ ತೊಡೆಯ ಮೇಲೆ ಇಟ್ಟಿದ್ದಾನೆ. ತನ್ನ ತುರುಬನ್ನು ತಲೆಯ ಎಡಕ್ಕೆ ಕಟ್ಟಿದ್ದಾನೆ. ಸತಿಯು ತನ್ನ ಎರಡು ಕೈಗಳನ್ನು ಮೇಲಕ್ಕೆತ್ತಿ ಹಿಡಿದಿದ್ದಾಳೆ. ಬಲಗೈಯಲ್ಲಿ ನಿಂಬೆ ಹಣ್ಣಿದೆ. ಎಡಗೈಯಲ್ಲಿ ಹಿಡಿದ ಕನ್ನಡಿ ಅವಳ ಮುಖದ ಎದುರಿಗಿದೆ. ಸೀರೆಯನ್ನು ಲಂಗದಂತೆ ಉಟ್ಟಿದ್ದಾಳೆ. ಈಕೆ ತುರುಬಿನ ಸುತ್ತಲೂ ಕೇದಿಗೆಯಿಂದ ಅಲಂಕರಿಸಿಕೊಂಡಿದ್ದಾಳೆ. ಎರಡನೇ ಫಲಕದಲ್ಲಿ ಏಕಸಾಲಿನಲ್ಲಿ ಶಿವನ ಸಾನಿಧ್ಯದಲ್ಲಿ ವೀರನಿರುವುದನ್ನು ಹೀಗೆ ನಿರೂಪಿಸಲಾಗಿದೆ. ನಿಂತ ನಂದಿ, ಕುಳಿತ ದಂಪತಿಗಳು, ಛತ್ರಿಯ ಕೆಳಗಡೆ ಕುಳಿತ ನಂದಿ, ಶಿವಲಿಂಗವನ್ನು ಆರಾಧಿಸುತ್ತಾ ನಿಂತ ಯತಿ ಇದ್ದಾನೆ. ಇಲ್ಲಿ ಒಂದು ನಂದಿಯನ್ನು ನಿಂತಿರುವ ಭಂಗಿಯಲ್ಲಿ ತೋರಿಸಿರುವುದು ವಿಶೇಷವೆನಿಸಿದೆ. ಮೇಲ್ಗಡೆಯ ಸರಳ ಪಟ್ಟಿಕೆಯಲ್ಲಿ ಸೂರ್ಯ ಮತ್ತು ಚಂದ್ರರ ಚಿಹ್ನೆಗಳಿವೆ. ಕಾಲಮಾನ ಕ್ರಿ.ಶ.14ನೇ ಶತಮಾನ (ಚಿತ್ರ1)

ಕಾದ್ರೊಳ್ಳಿಯ ಮತ್ತೊಂದು ಶಿಲ್ಪದಲ್ಲಿ ತೋರಿಸಿದ ದಂಪತಿಗಳ ವಸ್ತ್ರಾಭರಣದ ಶೈಲಿ ಈ ಮೇಲಿನದಕ್ಕಿಂತ ಸ್ವಲ್ಪ ಭಿನ್ನವಾಗಿದೆ. ಇದರಲ್ಲಿ ವೀರಸಮಭಂಗಿಯಲ್ಲಿ ನಿಂತಿದ್ದಾನೆ. ಎಡಗೈಯನ್ನು ಸತಿಯ ತೋಳಿನ ಮೇಲೆ ಇಟ್ಟಿದ್ದಾನೆ ಇದು ಸತಿಪತಿಯರು ಕೈಕೈಗಳನ್ನು ಹಿಡಿದುಕೊಂಡಿದ್ದನ್ನು ಸೂಚಿಸುತ್ತದೆ. ಈ ರೀತಿಯ ಲಕ್ಷಣಗಳು ವೀರ ಮಹಾಸತಿ ಶಿಲ್ಪಗಳಲ್ಲಿ ವಿರಳವೆನಿಸಿದೆ. ಆದೇ ರೀತಿ ನಿಂತ ಸತಿಯು ತನ್ನ ಬಲಗೈಯನ್ನು ವೀರನ ಎಡತೋಳಿನ ಮೇಲ್ಭಾಗದವರೆಗೆ ಎತ್ತಿ ಹಿಡಿದಿದ್ದಾಳೆ. ಈಕೆಯು ತನ್ನ ತಲೆಯ ಮೇಲಿನ ಕೇಶವನ್ನು ಅರ್ಧವೃತ್ತ ಪಟ್ಟಿಕೆಯಲ್ಲಿ ಸಿಂಗರಿಸಿಕೊಂಡಿ ದ್ದಾಳೆ. ತನ್ನ ಬಲಕೈಯಲ್ಲಿ ನಿಂಬೆ ಹಣ್ಣನ್ನು ಹಿಡಿದಿರುವಳು. ಎಡಗೈಯಲ್ಲಿ ಕನ್ನಡಿಯನ್ನು ತನ್ನ ಮುಖಕ್ಕೆ ಎದುರಾಗಿ ಹಿಡಿದ್ದಾಳೆ. ಈ ದಂಪತಿಗಳ ಮಧ್ಯೆ ಒಬ್ಬ ಬಾಲಕ ಬೆತ್ತಲೆಯಾಗಿ ನಿಂತಿದ್ದಾನೆ. ಈ ಬಾಲಕನು ತನ್ನ ತಂದೆ-ತಾಯಿಯರನ್ನು ಕಳೆದುಕೊಂಡ ಬಳಿಕ ಆತನು ಅನಾಥನಾಗಿರಬೇಕು. ಹೀಗಾಗಿ ಈ ಬಾಲಕನಿಗೆ ಇಲ್ಲಿ ಸ್ಥಾನವನ್ನು ನೀಡಲಾಗಿದೆ. ಈ ಶಿಲ್ಪದ ಮೇಲ್ಭಾಗದಲ್ಲಿ ಕೈಮುಗಿದು ಕುಳಿತ ದಂಪತಿಗಳು, ಶಿವಲಿಂಗ ಮತ್ತು ಯತಿ ಹಾಗೂ ಕುಳಿತ ನಂದಿಗಳ ಚಿತ್ರಗಳಿವೆ. ಕಾಲಮಾನ ಸುಮಾರು ಕ್ರಿ.ಶ. 15ನೇ ಶತಮಾನ (ಚಿತ್ರ 2)

ಹೊನ್ನಿದಿಬ್ಬ ಊರಿನ ಶಿಲ್ಪದಲ್ಲಿ ವೀರನು ತನ್ನ ಕಾಲುಗಳನ್ನು ಅಡ್ಡವಾಗಿಟ್ಟು ಬಲಗೈಯನ್ನು ಸೊಂಟದ ಮೇಲಿಟ್ಟುಕೊಂಡು ನಿಂತಿದ್ದಾನೆ. ಬೆನ್ನಿಗೆ ಬಾಣಗಳನ್ನು ಕಟ್ಟಿಕೊಂಡಿದ್ದಾನೆ. ತುರುಬನ್ನು ತಲೆ ಎಡಕ್ಕೆ ಕಟ್ಟಿದ್ದಾನೆ. ಸತಿಯ ಕಡೆಗೆ ಮುಖಮಾಡಿ ದೊಡ್ಡ ಬಿಲ್ಲನ್ನು ಹಿಡಿದಿದ್ದಾನೆ. ವಸ್ತ್ರಾಭರಣಧಾರಿ ಸತಿಯು ಮೇಲೆತ್ತಿ ಹಿಡಿದ ಬಲಗೈಯಲ್ಲಿ ನಿಂಬೆ ಹಣ್ಣನ್ನು ಹಿಡಿದು, ಎಡಗೈನ್ನು ಕೆಳಗಡೆ ಇಳಿಬಿಟ್ಟಿದ್ದಾಳೆ. ಸೀರೆಯನ್ನು ಲಂಗದಂತೆ ಉಟ್ಟು, ತುರುಬನ್ನು ಕೇದಿಗೆಯಿಂದ ಅಲಂಕರಿಸಿದ್ದಾಳೆ. ಮೇಲ್ಭಾಗದ 2 ಪಟ್ಟಿಗೆಗಳು ಸವೆದಿವೆ. ಅಲ್ಲಿ ವಿಮಾನವನ್ನು ಚಿತ್ರಿಸಿದ್ದು ಅದರಲ್ಲಿ ದಂಪತಿಗಳು ಕುಳಿತಿದ್ದಾರ. ಬದಿಗಳಲ್ಲಿ ವಾದ್ಯ ಮತ್ತು ನೃತ್ಯಮೇಳದವರನ್ನು ಚಿತ್ರಿಸಲಾಗಿದೆ. ಮೇಲಿನ ಫಲಕದಲ್ಲಿ ಶಿವಲಿಂಗದ ಮುಂದೆ ದಂಪತಿಗಳು, ಎಡ ಭಾಗ ದಲ್ಲಿ ಯತಿ ಮತ್ತು ಕುಳಿತ ನಂದಿ ಇವೆ. ಕಾಲಮಾನ ಸು. ಕ್ರಿ.ಶ.14ನೇ ಶತಮಾನ(ಚಿತ್ರ6).

ಹೊನ್ನದಿಬ್ಬ ಊರಿನ ಮತ್ತೊಂದು ಶಿಲ್ಪದಲ್ಲಿ ಈ ಮೇಲಿನಂತೆ ದಂಪತಿಗಳನ್ನು ಚಿತ್ರಿಸಲಾಗಿದೆ. ಆದರೆ ವೀರನ ಬದಿಗಳಲ್ಲಿ ಮತ್ತು ಸತಿಯ ಕಾಲಿನ ಎಡಕ್ಕೆ ನಿಂತ ಆಕಳುಗಳನ್ನು ಚಿತ್ರಿಸಲಾಗಿದೆ. ಸತಿಯ ಎಡಕ್ಕೆ ಬಾಳೆಯ ಗಿಡವನ್ನು ತೋರಿಸಲಾಗಿದೆ. ಬಹುಶಃ ಇದು ಬಾಳೆ ತೋಟದಲ್ಲಿದ್ದ ದನಕರುಗಳನ್ನು ಪ್ರತಿನಿಧಿಸುತ್ತದೆ. ಹಾಗೂ ವೀರನು ಆಕಳು ಕರುಗಳನ್ನು ಕಳ್ಳರಿಂದ ಬಿಡಿಸಲು ಹೋಗಿ ಮಡಿದಂತೆ ಕಾಣುತ್ತದೆ. ಸತಿಯು ಸೀರೆಯನ್ನ ಲಂಗದಂತೆ ಉಟ್ಟಿದ್ದಾಳೆ. ಮುಖಭಾಗ ಮುಕ್ಕಾಗಿದೆ. ಮೇಲಿನ ಫಲಕದ ವಿಮಾನದಲ್ಲಿ ವೀರನಿದ್ದಾನೆ. ಅಪ್ಸರೆಯರು ಅವನನ್ನು ಒಯ್ಯಲು ನಿಂತಿದ್ದಾರೆ.

ಬದಿಗಳಲ್ಲ ವಾದ್ಯ ಮತ್ತು ನೃತ್ಯದವರಿದ್ದಾರೆ. ಮೇಲಿನ ಮತ್ತೊಂದು ಫಲಕದಲ್ಲಿ ಏಕಸಾಲಿನಲ್ಲಿ ಶಿವನ ಸಾನಿಧ್ಯವನ್ನು ಚಿತ್ರಿಸಲಾಗಿದೆ. ಅದರಲ್ಲಿ ನಿಂತ ನಂದಿ ಕುಳಿತ ದಂಪತಿಗಳು ವೀರನು ಶಿವಲಿಂಗವನ್ನು ಆರಾಧಿಸುತ್ತ ಕುಳಿತಿರುವುದು ಶಿವಲಿಂಗವನ್ನು ಯತಿಯು ಆರಾಧಿಸುತ್ತಿರುವುದು ಮತ್ತು ಕುಳಿತ ನಂದಿ ಇದೆ. ಮೇಲ್ಗಡೆ ಸೂರ್ಯಚಂದ್ರರಿದ್ದಾರೆ. ಕಾಲಮಾನ ಸುಮಾರು ಕ್ರಿ.ಶ. 14ನೇ ಶತಮಾನ (ಚಿತ್ರ 7).

ಕಾದ್ರೋಳಿಯ ಮತ್ತೊಂದು ಶಿಲ್ಪದಲ್ಲಿ ದಂಪತಿಗಳ ನಡುವೆ ಒಬ್ಬ ನಿಂತ ಹೆಂಗಸಿದ್ದಾಳೆ. ಈಕೆಯನ್ನು ಕಿರಿದಾಗಿ ಚಿತ್ರಿಸಲಾಗಿದೆ. ಈಕೆಯು ಕೈಮುಗಿದು ನಿಂತಿದ್ದಾಳೆ. ಈಕೆಯು ಸತಿ ಹೋದವಳ ಸವತಿ ಇರಬೇಕೆಂದು ಈಗಾಗಲೇ ಬೆಳಕಿಗೆ ಬಂದ ಕೆಲವು ಶಿಲ್ಪಗಳ ಅಧ್ಯಯನದ ಹಿನ್ನೆಲೆಯಲ್ಲಿ ಅಭಿಪ್ರಾಯವನ್ನು ಪಡಬಹುದಾಗಿದೆ. ವೀರನು ಬಿಲ್ಲು ಬತ್ತಳಿಕೆಗಳನ್ನು ಹೊಂದಿದ್ದಾನೆ. ಸತಿಯು ಬಲಗೈಯನ್ನು ಮೇಲೆತ್ತಿ ಹಿಡಿದ್ದಾಳೆ. ಇನ್ನೊಂದು ಕೈಯಿಂದ ಕನ್ನಡಿಯನ್ನು ಮುಖಕ್ಕೆ ಹಿಡಿದಿದ್ದಾಳೆ. ತುರುಬಿಗೆ ಕೇದಿಗೆಯನ್ನು ಹೆಣೆದಿದ್ದಾಳೆ. ಮೇಲ್ಭಾಗದಲ್ಲಿ ವೀರ ದಂಪತಿಗಳು ಶಿವಲಿಂಗವನ್ನು ಆರಾಧಿಸುತ್ತಿರುವುದು ಮತ್ತು ಯತಿ ಹಾಗೂ ನಂದಿಯರನ್ನು ತೋರಿಸಲಾಗಿದೆ. ಅದರ ಮೇಲ್ಭಾಗದಲ್ಲಿ ಸೂರ್ಯಚಂದ್ರರಿದ್ದಾರೆ. ಕಾಲಮಾನ ಸುಮಾರು ಕ್ರಿ.ಶ.15ನೇ ಶತಮಾನ (ಚಿತ್ರ8).

ಹೊನ್ನದಿಬ್ಬದ ಮತ್ತೊಂದು ಶಿಲ್ಪದಲ್ಲಿ ಈ ಮೇಲಿನಂತೆ ವೀರ-ಮಹಾಸತಿಯರನ್ನು ಚಿತ್ರಿಸಲಾಗಿದೆ. ಮೇಲ್ಭಾಗದಲ್ಲಿ ಶಿವಲಿಂಗ, ಯತಿ ಮತ್ತು ಕುಳಿತ ನಂದಿ ಇದ್ದರೆ ಅದರ ಮೇಲ್ಭಾಗದಲ್ಲಿ ಸೂರ್ಯಚಂದ್ರರಿದ್ದಾರೆ. ಕಾಲಮಾನ ಸುಮಾರು ಕ್ರಿ.ಶ. 15ನೇ ಶತಮಾನ (ಚಿತ್ರ 9). ಹೊನ್ನಿದಿಬ್ಬದ ಶಿಲ್ಪದಲ್ಲಿ ವೀರನು ಕತ್ತಿ-ಗುರಾಣಿ ಹಿಡಿದು ಮತ್ತೊಬ್ಬ ವೀರನ ಸಂಗಡ ಹೋಗುತ್ತಿರುವನು. ಇನ್ನೊಬ್ಬನ ಕೈಯಲ್ಲಿ ಬಿಲ್ಲಿದೆ. ಮೇಲ್ಭಾಗದಲ್ಲಿ ಸೂರ್ಯಚಂದ್ರ ರಚನೆಗಳಿವೆ. ಮೇಲಿನ ಭಾಗ ಒಡೆದಿದೆ. ಕಾಲಮಾನ ಕ್ರಿ.ಶ.15ನೇ ಶತಮಾನ (ಚಿತ್ರ 15). ಈ ರೀತಿಯ ವೀರ-ಮಹಾಸತಿಯರನ್ನು ಒಂದೇ ಘಟಕದಲ್ಲಿ ಆಳೆತ್ತರದಲ್ಲಿ ತೋರಿಸಿದ ಫಲಕವು ಬೀಡಿಯ ಕೆರೆದಂಡೆಯ ಮೇಲಿದೆ.

ವೀರ ಸತಿಯ ಶಿಲ್ಪವೊಂದು ತಲ್ಲೂರಿನಿಂದ ಸಂಗ್ರಹಿಸಲಾಗಿದೆ. ಇದರಲ್ಲಿ ನಾಲ್ಕು ಫಲಕಗಳಲ್ಲಿ ಚಿತ್ರಗಳನ್ನು ಬಿಡಿಸಲಾಗಿದೆ. ಮೊದಲ ಫಲಕದಲ್ಲಿ ವೀರನು ಕುದುರೆ ಸವಾರಿ ಮಾಡುತ್ತಾ ಯುದ್ಧಕ್ಕೆ ಹೋಗುತ್ತಿದ್ದು ಆತನ ಕುದುರೆಯನ್ನು ವೈರಿಯೊಬ್ಬ ತಡೆಹಿಡಿದು ನಿಂತಿದ್ದಾನೆ. ವೀರನ ಪತ್ನಿ ಆಭರಣ ಧರಿಸಿ ನಿಂತಿದ್ದಾಳೆ. ಆಕೆಯ ಎಡಕ್ಕೆ ಇಬ್ಬರು ಸೇವಕರು ನಿಂತಿದ್ದಾರೆ. ಎರಡನೇ ಫಲಕದಲ್ಲಿ ಕುದುರೆ ಸವಾರಿ ಮಾಡುವ ಮತ್ತೊಬ್ಬ ವೀರನನ್ನು ತೋರಿಸಲಾಗಿದೆ. ಆದರೆ ಮುಂದೆ ಬಹುಶಃ ಆತನು (ಯುದ್ಧದಲ್ಲಿ ಮಡಿದ)ಬಿಲ್ಲನ್ನು ಹಿಡಿದು ನಿಂತಿರುವನು. ಅವನ ಎಡಕ್ಕೆ ಅವನ ಪತ್ನಿಯು ವಸ್ತ್ರಾಭರಣ ಗಳನ್ನು ಧರಿಸಿ ತನ್ನ ಬಲಗೈಯನ್ನು ಎತ್ತಿ ಹಿಡಿದು ನಿಂಬೆಹಣ್ಣನ್ನು ಹಿಡಿದಿದ್ದಾಳೆ.

ಎಡಗೈಲ್ಲಿ ಕನ್ನಡಿಯನ್ನು ಮುಖಕ್ಕೆ ಹಿಡಿದಿದ್ದಾಳೆ. ಈಕೆಯು ತನ್ನ ತುರುಬನ್ನು ತಲೆಯ ಬಲಕ್ಕೆ ಕಟ್ಟಿದ್ದಾಳೆ. ಆದರೆ ಈಕೆಯು ನೃತ್ಯ ಭಂಗಿಯಲ್ಲಿ ನಿಂತಿದ್ದಾಳೆ. ಮೂರನೇ ಫಲಕದಲ್ಲಿ ಸಾಲಾಗಿ ಮೂವರು ಕೈಗಳಲ್ಲಿ ಬಿಲ್ಲುಗಳನ್ನು ಹಿಡಿದು ನಿಂತಿದ್ದಾರೆ. ಒಬ್ಬಳು ಕೊನೆಯಲ್ಲಿ ನಿಂತಿದ್ದಾಳೆ. ಇದನ್ನು ಅವಲೋಕಿಸಿದಾಗ ಇಲ್ಲಿ ಒಟ್ಟು ಮೂವರು ವೀರರು ಮಡಿದಿದ್ದು ಅದರಲ್ಲಿ ಒಬ್ಬನ ಹೆಂಡತಿ ಅಥವಾ ಅಪ್ಸರೆಯರನ್ನು ಮಾತ್ರ ತೋರಿಸ ಲಾಗಿದೆ. ಮೇಲಿನ ಪಟ್ಟಿಕೆಯ ಮಧ್ಯದಲ್ಲಿ ಒಂದು ವಿಮಾನ ಮಾದರಿಯಲ್ಲಿ ಶಿವಲಿಂಗವಿದ್ದು, ಒಂದು ಬದಿಯಲ್ಲಿ ಹಸು ಕರುವಿಗೆ ಹಾಲನ್ನು ಕುಡಿಸುತ್ತ ನಿಂತಿದೆ. ಮತ್ತೊಂದು ಕಡೆ ನಂದಿ ಕುಳಿತಿದೆ. ಕಾಲಮಾನ ಸು. ಕ್ರಿ.ಶ.14ನೇ ಶತಮಾನದ ಆದಿ ಭಾಗ (ಚಿತ್ರ3).

ವೀರಗಲ್ಲುಗಳು

ಕಿತ್ತೂರಿನ ವೀರಗಲ್ಲಿನಲ್ಲಿ ಕೇವಲ ವೀರನೊಬ್ಬ ಬಿಲ್ಲನ್ನು ಹಿಡಿದು ಬಾಣವನ್ನು ಪ್ರಯೋಗಿಸುತ್ತಾ ನಿಂತಿದ್ದಾನೆ. ಅವನ ಮೇಲ್ಗಡೆ ಬಿಟ್ಟ ಬಾಣಗಳನ್ನು ಚಿತ್ರಿಸಲಾಗಿದೆ. ಮೇಲಿನ ಫಲಕದಲ್ಲಿ ವೀರನು ವಿಮಾನದಲ್ಲಿ ಕುಳಿತಿದ್ದು, ಅವನನ್ನು ಅಪ್ಸರೆಯರಿಬ್ಬರು ಒಯ್ಯಲು ನಿಂತಿರುವರು. ಬದಿಗಳಲ್ಲಿ ವಾದ್ಯ ಮತ್ತು ನೃತ್ಯಗಾರ ರಿದ್ದಾರೆ. ಮೇಲ್ಭಾಗದಲ್ಲಿ ದಂಪತಿಗಳು ಶಿವಲಿಂಗ, ಯತಿ, ಕುಳಿ ನಂದಿ ಇವೆ. ಕಾಲಮಾನ ಸುಮಾರು ಕ್ರಿ.ಶ.17ನೇ ಶತಮಾನ. ಇಲ್ಲಿಯ ಒಂದು ವೀರಗಲ್ಲಿನಲ್ಲಿ ವೇಷ-ಭೂಷಣ ಧರಿಸಿ ಪೌರುಷದಿಂದ ಒಬ್ಬ ವೀರ ನಿಂತಿದ್ದಾನೆ. ಕಾಲಮಾನ ಕ್ರಿ.ಶ.19ನೇ ಶತಮಾನ (ಚಿತ್ರ 14).

ಕಾದ್ರೋಳಿಯ ಒಂದು ವೀರಗಲ್ಲಿನಲ್ಲಿ ವೀರರು ಕುದುರೆ ಸವಾರಿ ಮಾಡುತ್ತಿರುವು ದನ್ನು ಮಾತ್ರ ಚಿತ್ರಿಸಲಾಗಿದೆ. ಇವರು ಕೈಯಲ್ಲಿ ಕತ್ತಿಯನ್ನು ಹಿಡಿದಿದ್ದಾರೆ. ಬದಿಗೆ ಸೇವಕನಿದ್ದಾನೆ. ಕಾಲಮಾನ ಸುಮಾರು ಕ್ರಿ.ಶ.18ನೇ ಶತಮಾನ(ಚಿತ್ರ 10).

ಕಿತ್ತೂರಿನ ವೀರಗಲ್ಲಿನಲ್ಲಿ ಕೆಳಪಟ್ಟಿಕೆಯಲ್ಲಿ ವೀರನು ವೈರಿಗಗಳ ವಿರುದ್ಧ ನಿಂತು ಯುದ್ಧ ಮಾಡುತ್ತಿರುವನು. ಮೇಲಿನ ಫಲಕದಲ್ಲಿ ಕುದುರೆ ಸವಾರನಿದ್ದಾನೆ. ಕಾಲಮಾನ ಸುಮಾರು 18ನೇ ಶತಮಾನ(ಚಿತ್ರ11).

ಹೊನ್ನಿದಿಬ್ಬದ ವೀರಗಲ್ಲಿನಲ್ಲಿ ಮೂರು ಫಲಕಗಳಿದ್ದು ಕೆಳಭಾಗದಲ್ಲಿ ವೀರನು ಬಿಲ್ಲನ್ನು ವೈರಿಯ ವಿರುದ್ಧ ಹಿಡಿದು ಬಾಣ ಪ್ರಯೋಗಿಸುತ್ತಾ ನಿಂತಿದ್ದಾನೆ. ಈತನ ಬದಿಗಳಲ್ಲಿ ಸೈನಿಕರಿಬ್ಬರು ಬಿಲ್ಲನ್ನು ಆಕಾಶದ ಕಡೆಗೆ ಮೇಲಕ್ಕೆತ್ತಿ ಹಿಡಿದು ಬಾಣ ಪ್ರಯೋಗಿಸುತ್ತಾ ನಿಂತಿರುವುದು ವಿಶೇಷ ಗಮನವನ್ನು ಸೆಳೆಯುತ್ತದೆ. ಮೇಲಿನ ಫಲಕದಲ್ಲಿ ವೀರನನ್ನು ವಾದ್ಯ ಮೇಳದೊಂದಿಗೆ ಸೇವಕಿಯರು ಶಿವನ ಸಾನಿಧ್ಯಕ್ಕೆ ಒಯ್ಯುತ್ತಿರುವ ದೃಶ್ಯವಿದೆ. ಈ ದೃಶ್ಯದ ಮೇಲಿನ ಪಟ್ಟಿಕೆಯಲ್ಲಿ ವೀರನು ಶಿವಲಿಂಗದ

ಮುಂದೆ ಆಸೀನನಾಗಿದ್ದಾನೆ. ಬದಿಗಳಲ್ಲಿ ಯತಿ ಮತ್ತು ನಂದಿ ಇವೆ. ಕಾಲಮಾನ ಸುಮಾರು ಕ್ರಿ.ಶ.16ನೇ ಶತಮಾನ (ಚಿತ್ರ 12). ಇಲ್ಲಿನ ಮತ್ತೊಂದು ಶಿಲ್ಪದಲ್ಲಿ ಈ ಮೇಲಿನಂತೆ ಇಬ್ಬರು ಸೇವಕರು ಆಕಾಶ ಕಡೆಗೆ ಬಿಲ್ಲನ್ನು ಮುಖಮಾಡಿ ಬಾಣ ಪ್ರಯೋಗಿಸುತ್ತ ನಿಂತಿದ್ದು, ಅವರ ನಡುವೆ ವೀರನು ವೈರಿಯ ವಿರುದ್ಧ ಯುದ್ಧಮಾಡುತ್ತ ನಿಂತಿದ್ದಾರೆ. ಎರಡನೇ ಫಲಕದಲ್ಲಿ ವೀರನನ್ನು ವಿಮಾನದಲ್ಲಿ ಕೂಡಿಸಿದ್ದು, ಅದನ್ನು ಅಪ್ಸರೆಯರು ಹಿಡಿದು ಹಾರುತ್ತಿದ್ದಾರೆ. ಬದಿಗೆ ನೃತ್ಯಗಾರ್ತಿಯರು ವಾದ್ಯ ಮೇಳದವರಿದ್ದಾರೆ. ಮೇಲಿನ ಫಲಕದಲ್ಲಿ ವೀರನು ಶಿವಲಿಂಗದ ಮುಂದೆ ಕುಳಿತಿದ್ದಾನೆ. ಬದಿಗೆ ಕುಳಿತ ಯತಿ, ನಂದಿಯಿದೆ, ಕಾಲಮಾನ ಕ್ರಿ.ಶ.16ನೇ ಶತಮಾನ (ಚಿತ್ರ16).

ಮತ್ತೊಂದು ಅಲ್ಲಿನ ಶಿಲ್ಪ ತುಂಬಾ ಶಿಥಿಲಗೊಂಡಿದೆ. ಅದರಲ್ಲಿ ಕೇವಲ ವೀರನು ಕುಳಿತ ವಿಮಾನವಿದ್ದು, ಬದಿಗಳಲ್ಲಿ ಸತಿಯರು ತಮ್ಮ ಬಲಗೈಗಳನ್ನು ಮೇಲಕ್ಕೆತ್ತಿ ನಿಂತಿರುವರು. ಅವರು ವೀರನ ಕೈಗಳನ್ನು ಹಿಡಿದು ಅಥವಾ ವೀರನ ವಿಮಾನವನ್ನು ಹಿಡಿದು ನಿಂತಿರುತ್ತಾರೆ ಅಥವಾ ಕೈಗಳಲ್ಲಿ ಚೌರಿಗಳನ್ನು ಹಿಡಿದು ನಿಂತಿರುತ್ತಾರೆ. ಆದರೆ ಇಲ್ಲಿ ಹೆಂಗಸರು ತಮ್ಮ ಬಲಗೈಗಳನ್ನು ಮೇಲಕ್ಕೆತ್ತಿ ನಿಂತಿರುವುದರಿಂದ ಸತಿ ಹೋದವರೆಂದು ಗುರುತಿಸಬೇಕಾಗುತ್ತದೆ. ಇದರಿಂದ ಈ ಲಕ್ಷಣ ಇಲ್ಲಿ ವಿಶೇಷವೆನಿಸಿದೆ. ಕಾಲಮಾನ ಕ್ರಿ.ಶ.17ನೇ ಶತಮಾನ(ಚಿತ್ರ13).

ಮಹಾಸತಿಯ ಶಿಲ್ಪ


ಖೋದಾನಪುರದ ಶಿಲ್ಪದಲ್ಲಿನ ಮಹಾಸತಿಯ ವಿವರಣೆಯು ವಿಶೇಷ ಗಮನವನ್ನು ಸೆಳೆಯುತ್ತದೆ. ಕೆಳಗಿನ ಫಲಕವು ಗೂಡಿನಂತಿದೆ. ಅದರಲ್ಲಿ ಮೂವರು ಸ್ತ್ರೀಯರಿದ್ದಾರೆ. ಇಬ್ಬರನ್ನು ದೊಡ್ಡದಾಗಿ ಚಿತ್ರಿಸಲಾಗಿದೆ. ಮೊದಲನೆಯವಳು ಕೈ ಮುಗಿದುಕೊಂಡು ನಿಂತಿದ್ದಾಳೆ. ಇನ್ನೊಬ್ಬಳು ನೃತ್ಯ ಮಾಡುತ್ತಿರುವಳು. ಮೂರನೆಯವಳು ತನ್ನ ಬಲಗೈಯನ್ನು ಮೇಲಕ್ಕೆತ್ತಿ ಎಡಗೈಯನ್ನು ಕೆಳಗಡೆ ಇಳಿಬಿಟ್ಟು ನಿಂತಿದ್ದಾಳೆ. ಈ ಮೂವರು ವಸ್ತ್ರಾಭರಣಗಳನ್ನು ಧರಿಸಿದ್ದಾರೆ. ಮೊದಲನೆಯವಳು ಕೈ ಎತ್ತಿ ನಿಂತಿರುವುದ ರಿಂದ ಈಕೆಯು ಸತಿ ಹೋದವಳೆಂದು ಗುರುತಿಸದರೆ ಉಳಿದಿಬ್ಬರು ಯಾರು ಎಂಬುದನ್ನು ಗುರುತಿಸಬೇಕಾಗಿದೆ. ಕೈ ಮುಗಿದು ನಿಂತವಳು ಬಹುಶಃ ಸತಿ ಹೋಗುವ ತಯಾರಿಯಲ್ಲಿರ ಬಹುದು. ನೃತ್ಯ ಮಾಡುತ್ತ ನಿಂತಿರುವವಳು ಸತಿ ಹೋಗಲು ನೃತ್ಯ ಮಾಡುತ್ತಾ ಹೊರಟಿರ ಬಹುದು. ಮೊದಲು ಸತಿ ಹೋಗುವವಳು ಕೈಮುಗಿದು ನಿಂತು ನಂತರ ನೃತ್ಯ ಮಾಡುತ್ತ ಹೊರಟು ಆ ಮೇಲೆ ಆಕೆ ಸತಿ ಹೋಗಿರಬಹುದು. ಮೇಲಿನ ಫಲಕದಲ್ಲಿಯ, ಶಿವಲಿಂಗ ಪೂಜಿಸುತ್ತಾ ನಿಂತಿದ್ದು ತಿಳಿಯುತ್ತದೆ. ಒಬ್ಬ (ವೀರ) ಸತಿಯು ಕೈ ಎತ್ತಿ ನಿಂತಿರುವಳು. ಬದಿಗೆ ಕುಳಿತ ನಂದಿಯಿದೆ. ಅವರ ಪಕ್ಕದಲ್ಲಿ ದಂಪತಿಗಳು ಕುಳಿತಿದ್ದಾರೆ. ಇಲ್ಲಿ ವೀರನಿಗೆ ಒಬ್ಬ ಸತಿ ಮಾತ್ರ ಜೊತೆಯಲ್ಲಿರುವುದನ್ನು ತೋರಿಸಲಾಗಿದೆ (ಚಿತ್ರ4).

ಹುಲಿಬೇಟೆ


ಖಾನಾಪುರದ ಶಿಲ್ಪದಲ್ಲಿ ವೀರನು ಹುಲಿಯ ಜೊತೆ ಕಾದಾಡುತ್ತಾ ನಿಂತಿದ್ದಾನೆ. ಭರ್ಜಿಯಿಂದ ಹುಲಿಯ ಬಾಯಿಗೆ ತಿವಿದು ವೀರಾವೇಶದಿಂದ ನಿಂತಿರುವ ವೀರನನ್ನು ಹುಲಿಯು ತನ್ನೆರಡು ಕಾಲುಗಳನ್ನ ಅವನು ಮೈಮೇಲೆ ಎರಗಿ ನಿಂತಿದೆ. ಆತನ ಕಿರೀಟ ತ್ರಿಕೋನಾಕಾರದ ಟೊಪ್ಪಿಗೆಯಂತಿದೆ. ವಸ್ತ್ರಾಭರಣಗಳನ್ನು ಧರಿಸಿದ್ದಾನೆ. ಕಾಲಮಾನ ಸು. ಕ್ರಿ.ಶ.19ನೇ ಶತಮಾನ (ಚಿತ್ರ 5).

ಒಟ್ಟಾರೆ ಈ ಪ್ರದೇಶದ ಸ್ಮಾರಕ ಶಿಲ್ಪಗಳ ಕಲಾ ಇತಿಹಾಸದಲ್ಲಿ ವೀರ ಮಹಾಸತಿ ಶಿಲ್ಪಗಳಲ್ಲಿ ದಂಪತಿಗಳಿಬ್ಬರನ್ನು ಒಂದೇ ಆಳೆತ್ತರದಲ್ಲಿ ಚಿತ್ರಿಸಿದ್ದು ಯುದ್ಧ ದೃಶ್ಯದ ಬದಿಗಳಲ್ಲಿ ಸೈನಿಕರಿಬ್ಬರು ಆಕಾಶಕ್ಕೆ ಬಿಲ್ಲನ್ನು ಹಿಡಿದು ಬಾಣ ಪ್ರಯೋಗ ಮಾಡುತ್ತಾ ನಿಂತಿರುವುದನ್ನು ಅಬಲೆಯಾದ ಎರಡನೇ ಹೆಂಡತಿ ಅಂದರೆ ಸತಿ ಹೋದವಳ ಸವತಿ, ತಬ್ಬಲಿಯಾಗಿ ನಿಂತ ಬಾಲಕನನ್ನು ತೋರಿಸಿರುವುದು, ವೀರ-ಪತ್ನಿಯರಿಬ್ಬರು ಕೈ ಕೈ ಹಿಡಿದು ನಿಂತಿರುವುದನ್ನು (ಅವರಲ್ಲಿದ್ದ ಪ್ರೀತಿಯನ್ನು ಎತ್ತಿ ತೋರಿಸುತ್ತದೆ). ಇದಲ್ಲದೆ ಮಡಿದ ವೀರನನ್ನು ವಿಮಾನದಲ್ಲಿ ಒಯ್ಯುವ ದೃಶ್ಯದಲ್ಲಿ ಅಪ್ಸರೆಯರು ತಮ್ಮ ಒಂದು ಕೈಯನ್ನು ಸತಿಯರಂತೆ ಮೇಲಕ್ಕೆತ್ತಿ ನೃತ್ಯಭಂಗಿಯಲ್ಲಿ ತೋರಿಸಿರುವುದು ವಿಶೇಷವೆನಿಸಿದೆ. ಆದರೆ ಸತಿಯನ್ನು ಮಾತ್ರ ಆಳೆತ್ತರದಲ್ಲಿ ತೋರಿಸಿದ ಶಿಲ್ಪಗಳು ವಿರಳವೆನಿಸಿದೆ. ಎರಡು ಫಲಕಗಳಲ್ಲಿ ಕುದುರೆ ಸವಾರ, ವೀರ, ಸತಿಯನ್ನು ಒಂದರಲ್ಲಿ ಮಡಿದ ವೀರ ಅಥವಾ ವೀರನನ್ನು ಅಪ್ಸರೆಯರು ಒಯ್ಯುವ ದೃಶ್ಯಫಲಕದಲ್ಲಿ ಮೂವರು ವೀರರು ಬಿಲ್ಲುಗಳನ್ನು ಹಿಡಿದು ನಿಂತಿದ್ದು, ಬದಿಗೆ ಒಬ್ಬಳೇ ಅಪ್ಸರೆಯನ್ನು ತೋರಿಸಿರುವುದು ವಿಶೇಷವೆನಿಸಿದೆ.


ವೀರ-ಮಹಾಸತಿಯರ ಈ ಪ್ರದೇಶ ಅಧ್ಯಯನದಿಂದ ಈ ಪ್ರದೇಶದಲ್ಲಿ ಮಾತ್ರ ಕೆಳಗಿನ ದೊಡ್ಡ ಫಲಕದಲ್ಲಿ ವೀರ-ಮಹಾಸತಿಯರಿಗೆ ಮಹತ್ವ ಕೊಟ್ಟು ಅವರನ್ನು ದೊಡ್ಡದಾಗಿ ಚಿತ್ರಿಸಿದ್ದು ಕಾಣುತ್ತದೆ. ಇವುಗಳು ಬೈಲಹೊಂಗಲ ಮತ್ತು ಖಾನಾಪುರ ತಾಲೂಕು ಪ್ರದೇಶಗಳಲ್ಲಿ ಮಾತ್ರ ವಿಸ್ತರಿಸುವುದು ಈ ಸದ್ಯ ಕಂಡುಬರುತ್ತದೆ. ಇಂಥವು ಗಳು ಹಂಪಿಯಲ್ಲೂ ಇವೆ. ಇವುಗಳ ಕಲಾ ಲಕ್ಷಣಗಳಿಂದ ಈ ಶಿಲ್ಪಗಳು ವಿಜಯನಗರ ಕಾಲವೆಂದು ತರ್ಕಿಸಬಹುದು.




ಚಿತ್ರ 1



ಚಿತ್ರ 2




ಚಿತ್ರ 3



ಚಿತ್ರ 4



ಚಿತ್ರ 5



ಚಿತ್ರ 6



ಚಿತ್ರ 7




ಚಿತ್ರ 8




ಚಿತ್ರ 9




ಚಿತ್ರ 10



ಚಿತ್ರ 11




ಚಿತ್ರ 12




ಚಿತ್ರ 5



ಚಿತ್ರ 6



ಚಿತ್ರ 7



ಚಿತ್ರ 8

೪೧. ವಿದೇಶಿ ಬರವಣಿಗೆಯಲ್ಲಿ ಸತಿ ಆಚರಣೆ

(ವಿಜಯನಗರ ಮತ್ತು ವಿಜಯನಗರೋತ್ತರ ಕಾಲದಲ್ಲಿ)

ಡಾ. ಆರ್.ಎಂ. ಷಡಕ್ಷರಯ್ಯ

ನಿಕಲೊ ದೆ ಕೊಂತಿ, ದು ಅರ್ತೆ ಬಾರ್ಬೊಸಾ, ಎರಾಂವ ನ್ಯೂನಿಜ್, ಸೀಜರ್ ಫೆಡ್ರಿಕ್, ರಾಲ್ಫ್ ಪಿಚ್, ಮಾನುಯೆಲ್ ಬ್ರ್ಯಾಡಾಸ್ ಪಿಯತ್ರೋ ದೆಲ್ಲಾ ವೆಲ್ಲಿ ಅಬ್ಬ,ಜಿ.ಎ. ಡುಬಾಯ್ಸ ಈ ಎಲ್ಲಾ ವಿದೇಶಿ ಪ್ರವಾಸಿಗರು ಹೆಚ್ಚಾಗಿ ಕರ್ನಾಕಟದ ಅನೇಕ ಕಡೆಗಳಲ್ಲಿನ ಸತಿ ಆಚರಣೆಗಳನ್ನು ವೀಕ್ಷಿಸಿ ಅವುಗಳನ್ನು ದಾಖಲಿಸಿದ್ದಾರೆ. ಕೆಲವರು ವಿಜಯನಗರ ಕಾಲದಲ್ಲಿ ಆಚರಣೆಯಲ್ಲಿದ್ದ ಸತಿ ಪದ್ಧತಿಯನ್ನು ವಿವರಿಸಿದ್ದಾರೆ (ಪ್ರವಾಸಿ ಕಂಡ ಇಂಡಿಯಾ. ಸಂ 2). ಶೇಠೆ ಅವರು ವಿಜಯನಗರ ಕಾಲದಲ್ಲಿ ಒಟ್ಟು 91 ಸತಿ ಘಟನೆಗಳು ಜರುಗಿರುವುದನ್ನು ಶಾಸನದಲ್ಲಿ ಹೇಳಲಾಗಿದೆ ಎಂಬುದನ್ನು ತೋರಿಸಿದ್ದಾರೆ (ಕರ್ನಾಟಕ ದಲ್ಲಿ ಸತಿ ಪದ್ಧತಿ). ದೇಶೀಯ ಸಾಹಿತ್ಯದಲ್ಲೂ ಈ ಕಾಲದಲ್ಲಿದ್ದ ಸತಿ ಆಚರಣೆಯ. ಕುತೂಹಲ ವಿವರಣೆಗಳಿವೆ. ಇಲ್ಲಿ ವಿದೇಶಿ ಬರವಣಿಗೆಯಲ್ಲಿನ ಕೆಲವು ನಿದರ್ಶನಗಳನ್ನು ಮಾತ್ರ ಪ್ರಸ್ತಾಪಿಸಲಾಗಿದೆ.

ವಿಜಯನಗರ ಅರಸ ಎರಡನೇ ದೇವರಾಯನ ಆಳ್ವಿಕೆಯ ಕಾಲದಲ್ಲಿ ನಿಕೋಲೋ ದೆ ಕೊಂತಿ ವಿಜಯನಗರಕ್ಕೆ ಭೇಟಿ ನೀಡಿದಾಗ ಇಲ್ಲಿನ ಸತಿಪದ್ಧತಿ ಬಗ್ಗೆ ಹೀಗೆ ಹೇಳಿದ್ದಾನೆ. "ಬಿಜನೆಗಾಲಿಯಾ (ವಿಜಯನಗರ)ನಿವಾಸಿಗಳು ತಮ್ಮ ಇಚ್ಛೆ ಬಂದಷ್ಟು ಜನ ಹೆಂಡತಿಯರನ್ನು ಮದುವೆಯಾಗುತ್ತಾರೆ. ಗಂಡಸು ಸತ್ತರೆ ಹೆಂಡತಿಯರೆಲ್ಲ ಚಿತೆಯಲ್ಲಿ ಬಿದ್ದು ಸಾಯುತ್ತಾರೆ... ಇವರಲ್ಲಿ ಎರಡು ಮೂರು ಸಾವಿರ ಹೆಂಡತಿಯರು ರಾಜನು ಸತ್ತಾಗ ತಮ್ಮ ಆತ್ಮ ಸಂತೋಷದಿಂದ ಚಿತೆಯೊಳಗೆ ಬಿದು ಪ್ರಾಣತ್ಯಾಗ ಮಾಡುತ್ತೇನೆಂಬ ವಾಗ್ದಾನ ಮಾಡಿ ರಾಜನ ಕೈ ಹಿಡಿದಿರುತ್ತಾರೆ" (ಎಚ್.ಎಲ್. ನಾಗೇಗೌಡ (ಸಂ.) ಪ್ರವಾಸಿ ಕಂಡ ಇಂಡಿಯಾ, ಸಂ. 1,ಪು.126).

15ನೇ ಶತಮಾನದಲ್ಲಿ ವಿಜಯನಗರಕ್ಕೆ ಬಂದಿದ್ದ ದು ಆರ್ತೆ ಬಾರ್ಬೊಸಾ ಇಲ್ಲಿನ ಸತಿ ಆಚರಣೆಯ ವಿರವಣೆಯನ್ನು ಹೀಗೆ ನೀಡಿದ್ದಾನೆ. "ಬಡವಳಾದವಳು ಆತ್ಮ ಸಂತೋಷದಿಂದ ಗಂಡನ ಚಿತೆಯಲ್ಲಿ ಬಿದ್ದು ಸಾಯುತ್ತಾಳೆ. ಅನುಕೂಲಸ್ಥಳಾದವಳು ಚಿತೆಗೆ ಬೀಳುವ ಮುನ್ನ ನೆಂಟರಿಷ್ಟರನ್ನೆಲ್ಲಾ ಸೇರಿಸಿ ಊಟೋಪಚಾರ ಮಾಡಿ ಕುದುರೆಯ ಮೇಲೆ ಮೆರವಣಿಗೆ ಹೊರಡುತ್ತಾಳೆ. ಕುದುರೆ ಬೂದು ಬಣ್ಣದಿರಬೇಕು ಅಥವಾ ಬಿಳಿ

ಬಣ್ಣದಿರಬೇಕು. ಕುದುರೆಯ ಮೇಲೆ ಮೆರವಣಿಗೆ ಹೊರಟು ಗಂಡನ ಚಿತೆ ಇರುವ ಬಳಿಗೆ ಹೋಗುತ್ತಾಳೆ. ಚಿತೆಯ ಹತ್ತಿರ ನಿಂತು ತನ್ನ ಆಭರಣಗಳನ್ನು ನೆಂಟರಿಷ್ಟರಿಗೆ ಹಂಚುವಳು. ಆಕೆಯ ಕೈಗೆ ಎಣ್ಣೆಯ ಗಡಿಗೆಯನ್ನು ಕೊಡುತ್ತಾರೆ. ಆಕೆ ಅದನ್ನು ತಲೆಯ ಮೇಲಿಟ್ಟುಕೊಂಡು ದೇವರಿಗೆ ಪ್ರಾರ್ಥನೆ ಸಲ್ಲಿಸುತ್ತಾಳೆ. ಚಿತೆಯನ್ನು ಮೂರು ಸಲ ಪ್ರದಕ್ಷಿಣೆ ಮಾಡಿ ಪೂರ್ವಾಭಿಮುಖವಾಗಿ ನಿಂತು ವಂದನೆಗೈಯುತ್ತಾಳೆ. ಆಮೇಲೆ ಗಡಿಗೆಯ ಎಣ್ಣೆಯನ್ನು ಅದರೊಳಗೆ ಎಸೆದು ಚಿತೆಯೊಳಗೆ ಧುಮುಕುತ್ತಾಳೆ.... ಆ ಅಗಾಧ ಜಾತ್ರೆಯಲ್ಲಿ ಆಕೆ ಒಂದರಗಳಿಗೆಯಲ್ಲಿ ಸುಟ್ಟು ಭಸ್ಮವಾಗಿ ಬಿಡುತ್ತಾಳೆ" (ಅದೇ. ಸಂ.2, 296). ಎಣ್ಣೆಯ ಗಡಿಗೆಗಳನ್ನು ಹಿಡಿದಿರುವುದನ್ನು ಬೀದರ ಪ್ರದೇಶದ ಕೆಲವು ಶಿಲ್ಪಗಳಲ್ಲಿ ತೋರಿಸಲಾಗಿದೆ.

ಪೀಜರ ಫೆಡ್ರಿಕ್ ವಿಜಯನಗರದಲ್ಲಿದ್ದ ಸತಿ ಆಚರಣೆ ಬಗ್ಗೆ ಹೀಗೆ ಹೇಳಿದ್ದಾನೆ: ಬಾರ್ಬೋಸಾ ಹೇಳಿದ್ದನ್ನೂ ಈತನು ಹೇಳಿದ್ದಾನೆ. ಅವನು 'ಅಚ್ಯುತರಾಯ'ರಾಜನಿಗೆ 500 ಹೆಂಡತಿಯರಿದರು. ಬೇಕೆಂದರೆ ಇನ್ನಷ್ಟು ಜನರು ಅವನ ಭೋಗಕ್ಕೆ ಸಿದ್ಧರಾಗಿದ್ದರು. ಇವರೊಡನೆ ರಾಜನು ಕಾಲ ಕಳೆಯುತ್ತಾನೆ. ಸತ್ತಾಗ ಇವರೆಲ್ಲರೂ ಅವನೊಡನೆ ಚಿತೆಯಲ್ಲಿ ಬೀಳುತ್ತಾರೆ" (ಅದೇ 415).

ಸೀಜರ್ ಫ್ರೆಡ್ರಿಕ್ಸ್ ಹೀಗೆ ಹೇಳಿದ್ದಾನೆ "ಸತಿಯು ವಧುವಿನಂತೆ ಅಲಂಕಾರ ಮಾಡಿ ಕೊಂಡಿರುತ್ತಾಳೆ. ತಲೆಕೂದಲನ್ನು ಇಳಿಯಬಿಟ್ಟಿರುತ್ತಾಳೆ. ಆಕೆಯ ಯೋಗ್ಯತೆಗನುಸಾರ ವಾಗಿ ಒಡವೆ ವಸ್ತ್ರಗಳನ್ನು ಹಾಕಿಕೊಂಡಿರುತ್ತಾಳೆ. ವೆನೀಸ್‌ನಲ್ಲಿ ಮದುವೆಗೆ ಹೊರಟ ಹೆಣ್ಣಿನ ಮೆರವಣಿಗೆಯಂತೆ ಆಕೆ ಇದ್ದಳೆನ್ನಲಾಗಿದೆ" (ಪ್ರವಾಸಿ ಕಂಡ ಇಂಡಿಯಾ ಸಂ.2, ಪು.460-461).

ಇಕ್ಕೇರಿಗೆ ಭೇಟಿ ನೀಡಿದ ಪಿಯತ್ರೊದೆವಲ್ಲೆಯಾ ಗಿಯಕ್ಕಮಳ ಸತಿ ಘಟನೆ ಹೇಳುವಾಗ "ಆಕೆ ಅಂಗಳದಲ್ಲಿ ಕುಳಿತಿದ್ದಳು ವಾದ್ಯಗಳನ್ನು ಬಾರಿಸುತ್ತಿದ್ದಳು. ತಲೆಯ ತುಂಬಾ ಹೂಮುಡಿದಿದ್ದಳು. ನೋಡಲು ಅವು ಕಿರಣಗಳಂತೆ ಕಾಣುತ್ತಿದ್ದವು. ಒಟ್ಟಿನಲ್ಲಿ ಆಕೆ ಮದುವೆಯ ಹೆಣ್ಣಿನಂತೆ ಇದ್ದಳು. ಕೈಯಲ್ಲಿ ನಿಂಬೆಹಣ್ಣು ಹಿಡಿದಿದ್ದಳು. ಮದುವೆಯ ಹೆಣ್ಣು ಎಷ್ಟು ಸಂತಸದಲ್ಲಿರಬಹುದೋ ಅಷ್ಟು ಸಂತಸವಾಗಿದ್ದಳು. (ಅದೇ ಸಂ. 4. ಪು.264-247). ಇದಲ್ಲದೆ ಆಕೆ ಕುದುರೆಯ ಮೇಲೆ ಕುಳಿತಿದ್ದಳು. ಆಕೆ ಒಂದು ಕೈಯಲ್ಲಿ ನಿಂಬೆಹಣ್ಣು, ಇನ್ನೊಂದು ಕೈಯಲ್ಲಿ ಕನ್ನಡಿ ಹಿಡಿದಿದ್ದಳು. ಆಕೆ ಗೋಳೋ ಎಂದು ಕನ್ನಡಿ ನೋಡುತ್ತಿದ್ದಳು. ಹಾಡುತ್ತಾ ಮಾತು ಗೀತು ಸಾಗುತ್ತಿತ್ತು. ಆಕೆಯನ್ನು ಹಿಂಬಾಲಿಸಿ ಅನೇಕ ಜನ ಹೆಂಗಸರು, ಗಂಡಸರು ನಡೆದುಕೊಂಡು ಹೋಗುತ್ತಿದ್ದರು. ಬಹುಶಃ ಅವರು ಆಕೆಯ ಸಂಬಂಧಿಗಳಾಗಿರಬೇಕು. ಆಕೆಯ ಮೇಲೆ ದೊಡ್ಡದೊಂದು ಛತ್ರಿ ಹಿಡಿದಿದ್ದರು. ಆಕೆಯ ಮುಂದೆ ವಾದ್ಯಗಳನ್ನು ಬಾರಿಸುತ್ತಿದ್ದರು. ಇದಲ್ಲದೆ ಗಂಡ ಸತ್ತ ಮೇಲೆ ಹೆಂಡತಿ

ಒಂದು ಅಥವಾ ಮೂರು ತಿಂಗಳ ನಂತರ ಚಿತೆಯಲ್ಲಿ ಬೀಳುವುದಕ್ಕೆ ಸಿದ್ಧಳಾಗುತ್ತಾಳೆ. ನಿರ್ದಿಷ್ಟವಾದ ದಿನ ಬಂದಾಗ ಬಹಳ ಹೊತ್ತಿನ ಮುಂಚೆ ಎದ್ದು ಕುದರೆಯ ಮೇಲೋ, ಆನೆಯ ಮೇಲೋ ಅಥವಾ ಎಂಟು ಜನ ಹೊತ್ತ ಪಲ್ಲಕ್ಕಿಯ ಮೇಲೊ ಕುಳಿತು ಚಿತೆಯ ಸ್ಥಳಕ್ಕೆ ಹೊರಡುತ್ತಾಳೆ. ಆಕೆಯನ್ನು ವಧುವಿನಂತೆ ಅಲಂಕಾರ ಮಾಡಿಕೊಂಡಿರುತ್ತಾರೆ. ಆಕೆಯ ಎಡಗೈಯಲ್ಲಿ ಕನ್ನಡಿ, ಬಲಗೈಯಲ್ಲಿ ಒಂದು ಬಾಣ ಇರುತ್ತದೆ ಮೆರವಣಿಗೆಯಾಗುವಾಗ ಆಕೆ ಹಾಡುತ್ತಾ ಇರುತ್ತಾಳೆ. ತಾನು ತನ್ನ ನಲ್ಲನೊಡನೆ ಚಿರನಿದ್ರೆ ಮಾಡಲು ಹೋಗುತ್ತಿರುವಳೆಂದು ಆಕೆಯ ನೆಂಟರಿಷ್ಟರು ಮೆರವಣಿಗೆ ಯಲ್ಲಿ ಭಾವಹಿಸುತ್ತಾರೆ. ಮತ್ತೊಂದೆಡೆ ಆತ ಹೇಳುವಾಗ ಸತಿಯು ಚಿತೆಯ ಬಳಿ ನಿಂತು ಮಕ್ಕಳಿಗೂ ನೆಂಟರಿಗೂ ಬುದ್ದಿಮಾತು ಹೇಳುತ್ತಿದ್ದಳು"(ಅದೇ 2. ಪು.41).

ಪ್ರಾನ್ ಸ್ವಾಸ್ ಬೆರೆನ್ನೆಯು ಹೇಳುವ ಒಂದು ವಿಷಯ ಹೀಗಿದೆ. "ಒಬ್ಬ ಹೆಂಗಸಿಗೂ ನೆರಮನೆಯ ಮಹಡಿಯ ಯುವಕನಿಗೂ ಗೆಳೆತನ ಬೆಳೆಯಿತು. ಆ ಯುವಕ ವೃತ್ತಿಯಲ್ಲಿ ದರ್ಜಿ. ಆತನಿಗ ತಂಬೂರಿ ನುಡಿಸಲು ಬರುತ್ತಿತ್ತು. ಆತನ ಮೇಲಿನ ಪ್ರೀತಿಗಾಗಿ ಆಕೆ ಕೈಹಿಡಿದ ಗಂಡನನ್ನು ವಿಷ ಹಾಕಿ ಸಾಯಿಸಿದಳು. ಆ ಯುವಕ ತನ್ನನ್ನು ಮದುವೆಯಾಗುವನೆಂದು ಆಕೆ ಭಾವಿಸಿಕೊಂಡು ಆಕೆ ತಾನು ಮಾಡಿದ ಕೆಲಸವನ್ನು ತನ್ನ ಪ್ರಿಯತಮನಿಗೆ ತಿಳಿಸಿದಳು. ಕೂಡಲೇ ಇಬ್ಬರೂ ಓಡಿಹೋಗೋಣ ಎಂದು ಹೇಳಿದಳು. ನಿಧಾನ ಮಾಡಿದರೆ ತಾನು ಗಂಡನ ಶವದೊಡನೆ ಚಿತೆಯಲ್ಲಿ ಬೀಳಬೇಕಾಗುತ್ತದೆ ಎಂದು ತನ್ನ ಕಾತುರವನ್ನು ವ್ಯಕ್ತಪಡಿಸಿದಳು. ಇದನ್ನು ಕೇಳಿದ ದರ್ಜಿ ಓಡಿ ಹೋದರೆ ತುಂಬಾ ಅಪಾಯಕ್ಕೆ ಸಿಕ್ಕಿಬೀಳಬೇಕಾಗುತ್ತದೆ ಎಂದು ಹೆದರಿ ಅದಾಗುವುದಿಲ್ಲ ಎಂದು ಹೇಳಿಬಿಟ್ಟ. ಈ ತಿರಸ್ಕಾರದಿಂದ ನಿರಾಳವಾದ ಆಕೆ ತನ್ನ ಗಂಡ ಅಕಸ್ಮಾತ್ ಸತ್ತನೆಂಬ ಸುದ್ದಿಯನ್ನು ನೆಂಟರಿಷ್ಟರಿಗೆ ತಿಳಿಸಿ, ತಾನು ಚಿತೆಯಲ್ಲಿ ಬೀಳುವ ನಿರ್ಧಾರ ಕೈಗೊಂಡಳು.

ಗಂಡನ ಶವವನ್ನು ದಹನ ಮಾಡಲು ಕೊಂಡ ಸಿದ್ಧವಾಯಿತು. ಜನ ನೆರೆದಿದ್ದರು ಅವರಲ್ಲಿ ಆಕೆಯ ಪ್ರಿಯತಮನಾದ ಆ ದರ್ಜಿಯೂ ಇದ್ದ. ಆಕೆಯು ತನ್ನ ಪ್ರಿಯತಮನನ್ನು ಸಮೀಪಿಸಿ ಆತನಿಂದ ಬೀಳ್ಕೊಡುವ ರೀತಿಯಲ್ಲಿ ನೋಟವನ್ನು ಬೀರಿ ನೋಡುತ್ತ ಇದ್ದಕ್ಕಿದ್ದಂತೆ ಆತನ ಅಂಗಿಯನ್ನು ಹಿಡಿದುಕೊಂಡು ಗುಂಡಿಯ ಬಳಿಗೆ ಕರೆದುಕೊಂಡು ಬಂದು, ಅವನ ಸಮೇತ ಧಗಧಗ ಉರಿಯುತ್ತಿದ್ದ ಬೆಂಕಿಯಲ್ಲಿ ಬಿದ್ದುಬಿಟ್ಟಳು" (ಪ್ರವಾಸಿ ಕಂಡ ಇಂಡಿಯಾ, ಸಂ. 5, ಪು.221-222).

ಎಡ್ವರ್ಡ್ ಟೆರ್ರಿ (ಮೊಗಲ್ ಸಾಮ್ರಾಜ್ಯಕ್ಕೆ ಭೇಟಿ ನೀಡಿದ್ದ)ಯು "ಚಿಕ್ಕ ವಯಸ್ಸಿನಲ್ಲಿ ವಿಧವೆಯಾದವಳು ಮತ್ತೊಮ್ಮೆ ಮದುವೆಯಾಗುವಂತಿಲ್ಲ. ಆಕೆ ತಲೆ ಬೋಳಿಸಿಕೊಂಡು ಯಾರಿಗೂ ಬೇಡವಾದ ಪ್ರಾಣಿಯಂತೆ ಜೀವಿಸಬೇಕು. ಇಂಥ ಬಾಳಿಗಿಂತ ಸಾವೇ ಮೇಲೆಂದು ಅನೇಕ ಜನ ಸತ್ತ ಗಂಡನ ಜೊತೆ ಆತ್ಮಸಂತೋಷದಿಂದ ಅಗ್ನಿಯಲ್ಲಿ ಸಹಗಮನ ಮಾಡುತ್ತಾರೆ"(ಪ್ರವಾಸಿ ಕಂಡ ಇಂಡಿಯಾ, ಸಂ.3, ಪು.316).

ಬಪತೀಸ್ಟ್ ಟಾವರ್ನ್ಸೇಯು (ಔರಂಗಜೇಬನ ಕಾಲ) ಇಂಡಿಯಾದ ವಿಗ್ರಹಾರಾಧಕರಲ್ಲಿ ಗಂಡ ಸತ್ತರೆ ಹೆಂಡತಿ ಮತ್ತೆ ಮದುವೆಯಾಗುವಂತಿಲ್ಲ. ಆ ಕಾರಣ ಗಂಡ ಸತ್ತ ಕೆಲವು ದಿನಗಳ ತರುವಾಯ ಆತನ ಹೆಂಡತಿ ತಲೆ ಬೋಳಿಸಿಕೊಂಡು ಒಡವೆ ವಸ್ತ್ರಗಳನ್ನೆಲ್ಲ ತೆಗೆದುಹಾಕಿ ಎಲ್ಲಾ ಸುಖ ಸಂತೋಷಗಳಿಂದ ದೂರವಾಗಿ ಇದ್ದುಬಿಡುತ್ತಾಳೆ. ಮನೆಯಲ್ಲಿ ಜೀತದ ಆಳಿಗಿಂತ ಕಡಿಮೆಯಾಗಿ ದುಡಿದುಕೊಂಡು ಕಾಲ ಹಾಕುತ್ತಾಳೆ. ಇಂಥ ಬಾಳಿಗಿಂತ ಸತ್ತ ಗಂಡನ ಚಿತೆಯೇರುವುದೇ ಮೇಲೆಂದು ಭಾವಿಸುತ್ತಾಳೆ.(ಅದೇ ಪು.471-472).

ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ವಿಜಯನಗರ ಮತ್ತು ವಿಜಯನಗರೋತ್ತರ ಕಾಲದಲ್ಲಿ ಸತಿ ಪದ್ಧತಿಯನ್ನು ಅವಲೋಕಿಸಿ, ವಿವರಿಸಿದ ಈ ವಿದೇಶಿ ಬರಹಗಾರರ ವಿವರಗಳನ್ನೂ ಸಮಕಾಲೀನ ವೀರಗಲ್ಲುಗಳ ಕಲಾ ಚಿತ್ರಗಳನ್ನು ಪರಾಮರ್ಶಿಸಿ ಅಧ್ಯಯನ ಮಾಡಲು ಸಹಕಾರಿಯಾಗಿದೆ.

42. SIGNIFICANCE OF AN INSIGNIFICANT ANTIQUITY RETRIEVED FROM HAMPI EXCAVATIONS

T. M. Keshava, C. S. Sheshadri, M. V. Visveswara

Archaeological discoveries, especially sometimes chance discoveries, have had a great bearing on the findings, throwing an altogether new light in a cultural assemblage and its impact on the history of that particular region is too well known. To quote a few examples, the discovery of Harappa and Mohenjadaro while laying a railway line between Lahore and Multan, rediscovering the famous frescos of Ajanta in the year 1819 during the hunting expedition by John Smith, finding of the great Pompei, a Roman city by a few children playing a game of ball could be cited.

The archaelogical findings of a site are usually documented, classified under the category to which they belong, recording the details of findings are the usual technical procedures involved. Usually, if the findings are of key importance reflecting or adding new light on the chronology of the place, or its extra-ordinary workmanship, novelty deserves a detailed study and as such in most of the cases, only the important antiquities usually get such keen observation and inference by the concerned. However, if some of the antiquities are often found in large quantities the significance of its occurr-ence and quantity will be reflected upon and written about. Amongst them, if such class of antiquities repeatedly occur, they are usually just described with bare minimum details and recorded without giving a second look. Only they get mentioned to the numerological occurrence calculating the percentage ot them as data added under the documentation of antiquities in the report. This practice sometimes may lead to missing an important piece of information or most significant data that would help in reconstructing the chronology or a very significant aspect of the site.

Slate pencils : The above was almost the case in the documentation of state pencils of various sizes that were found from

the excavations at the world heritage site, Hampi while conductiong excavations in the citadel area to be precise - east of Ranga Mahal or the famed Mint area. The major concentration during the excavation in the year 1983-84 was towards understanding the nature of layout to the south west corner of Hazar Rama temple wherein a massive northern guarded gate to the Mint area and the eastern gate of the Mint area opening into the NS running street between Hazara Rama temple and Royal Enclosure is located. The antiquity for its first appearance appears to be a very ordinary slate pencil often found in large quantities from the site. A closer observation of the antiquity came out with a startling information regarding the slate pencil belonging to one Shri Tirumala Raya. The circumstantial evidences pointing it to be none other than Tirumala Raya, the prince and son of Shri Krishnadeva Raya (1509-1528 A. D). The finding of an inscribed soapstone pencil made the archaeologists to restudy all such retrieved soapstone pencils to ensure that no such vital data is missed. Interestingly, the finding and the exercise led to an important aspect that it is only the slate pencil of the prince was inscribed to mark it as that it belonged to none other than the prince and to provide a clear mark of identification. It can also be observed as the psychological reflection of the prince to reflect upon the authenticity of the object as belonging to only himself and no other pupil, emphasizing, possessiveness so characteristic of the human psychology.

The find spot of the antiquity reflects upon the elite students of the palace who are tutored very close to their residences speaking upon the extreme care and security given to the nobility and also to provide an easy access to the schooling of the ward of a king. The finding of the object in the area of a small austere terraced structure to the east of Ranga Mahal- next door in front of the royal residence could well be assumed as the place where the prince was taught.

The significance of this insignificant slate pencil lies in the fact that an object which was used definitely by an individual during his life time has been rertieved for the first time in the Hampi excavations and has a direct bearing or relationship with him. It also buttresses the existence of a prince by the name Sri Tirumala Raya, son of Sri

---

* Dy. S. A., A. S. I, Bangalore Circle; ** A. S. A, Archaeological Museum, Kamalapur (Hampi) and *** A. S. A. Archaeological Museum, Bijapur

Krishnadeva Raya who was poisoned to death at a tender age. It also forms the first original handwritten script of a Vijayanagara Subject retrieved from the excavations and provides a sample of the first free-hand writing of Kannada script in 16th century. Even though it is a short label inscription of seven letters, it reflects the poss-essivencess of the engraver- the prince himself in the case- bringing out the child psychology of identifying his object with a mark of his own.

The pencil


The pencil measuring in its extant availability to nearly 8 cms. in length with a dia of 2 mm. is fashioned in light honey- grey soapstone with a sharpened blunt point of writing at one end. The prncil is cylindrical in shape rolled by hand into a circular section and has the frequent marks of sharpening as reflected in many incise marks found on the pencil especially towards the writing end.

Inscription

The pencil perhaps was slightly larger than the present measurement since only the concluding letter ya appears to be defaced slightly due to frequent sharpening at that the writing end. Otherwise, the incised label is very clearer wherein the characters Sri, Ti, Ru are spaced equally whereas he letter Ma is almost written like ya due to slipping of the pencil while inscribing. In the letter ra, the long vowel indicative sign is slightly worn out and letter ya, is worn out from where the pencil sharpens into a blunt point.

Significance of the find

The area of mint has been identified as the palace complex of Sri Krishnadeva Raya and his queens based on circumstantial evidences. This pencil was found barely 50m. away from the above complex with the above label inscription which indirectly identifies the structures inside the mint as the residence of Krishnadeva Raya and the find spot being the area where the prince had his schooling further corroborating the above finding. Thus we find sometimes and insignificant antiquity when analyzed in its proper perspective will prove to be the most significant find of a given place.



Inscribed soapstone pencil, Arcaelogical excavations Hampi

ಕನ್ನಡಿಗರಿಗೂ ವಿಜಯನಗರ ಸಾಮ್ರಾಜ್ಯಕ್ಕೂ ಇರುವ ಸಾಂಸ್ಕೃತಿಕ ಸಂಬಂಧ ಶಾಶ್ವತವಾಗಿ ಉಳಿಯುವಂತಹುದು. ಅದೊಂದು ಕೇವಲ ಸಾಮ್ರಾಜ್ಯವಾಗಿರದೆ, ಕನ್ನಡಿಗರ ಆಶೋತ್ತರಗಳ ಪ್ರತೀಕವಾಗಿತ್ತು. ಇಡೀ ದಕ್ಷಿಣ ಭಾರತ ಒಂದು ಸಾಮ್ರಾಜ್ಯದ ನೇತೃತ್ವದಲ್ಲಿ ಒಂದುಗೂಡಿದ್ದು ಮತ್ತೊಂದು ಹೆಚ್ಚಳ. ಇಂತಹ ಶ್ರೇಷ್ಠ ಸಾಮ್ರಾಜ್ಯದ ಸಾಂಸ್ಕೃತಿಕ ಸಾಧನೆಗಳನ್ನು ವಿದ್ವಾಂಸರು ಇಲ್ಲಿ ಪ್ರಸ್ತುತ ಪಡಿಸಿದ್ದಾರೆ.

"ವಿಜಯನಗರ ಅಧ್ಯಯನ" ಮಾಲಿಕೆಯಲ್ಲಿ ಪ್ರಸ್ತುತ ಸಂಪುಟ ಹದಿನಾಲ್ಕನೆಯದು. ಹಿಂದಿನ ಸಂಪುಟಗಳಂತೆ ಇಲ್ಲಿಯೂ ಹೊಸ ಶಾಸನಗಳು, ವಾಸ್ತುಶಿಲ್ಪ ಕೃತಿಗಳು, ರಾಜಕೀಯ ಇತಿಹಾಸದ ಕೆಲವು ಮಜಲುಗಳು ಮುಂತಾದವು ನಮ್ಮ ಕಣ್ಮುಂದೆ ತೆರೆದುಕೊಳ್ಳುತ್ತವೆ. ಆದುದರಿಂದ ಈ ಸಂಪುಟ ಸ್ವಾಗತಾರ್ಹ.



ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ
ದಸರಾ ವಸ್ತುಪ್ರದರ್ಶನ ಆವರಣ, ಮೈಸೂರು-೧೦